ಕರ್ನಾಟಕ ಸರ್ಕಾರ

ಸಮಾಜ ವಿಜ್ಞಾನ

10

ಹತ್ತನೆಯ ತರಗತಿ

2015

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು–560 085.

ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010 ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1 ರಿಂದ 4 ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು 5 ರಿಂದ 10 ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

2005 ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥ ಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

5ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಒಂದು ಹೊಸತನವನ್ನು ತರಲಾಗಿದೆ. ಕರ್ನಾಟಕದ ನಾಲ್ಕು ವಿಭಾಗಗಳಿಗೆ ಬೇರೆ ಬೇರೆ ಪುಸ್ತಕಗಳನ್ನು ತಯಾರಿಸಲಾಗಿದೆ. ಅವುಗಳಲ್ಲಿನ ಮೊದಲ ಅಧ್ಯಾಯ ಆಯಾ ವಿಭಾಗದ ಇತಿಹಾಸ, ಭೌಗೋಳಿಕ ಲಕ್ಷಣಗಳು, ಜನಜೀವನ, ಸಂಸ್ಕೃತಿ, ಸಂಪ್ರದಾಯಗಳು ಹಾಗೂ ಆ ವಿಭಾಗದ ಜನಜೀವನವನ್ನು ಶ್ರೀಮಂತಗೊಳಿಸಿದ ವಿವಿಧ ಕ್ಷೇತ್ರಗಳಲ್ಲಿನ ಹಿರಿಯನಾಯಕರ ವಿಚಾರ ಮಾಹಿತಿ ಇತ್ಯಾದಿಗಳನ್ನು ಕೊಡಲಾಗಿದೆ. ಎನ್‌ಸಿಎಫ್ 2005 ರ ಮಾರ್ಗಸೂಚಿಯಂತೆ ಇತಿಹಾಸ, ಭೂಗೋಳ, ಪೌರನೀತಿ, ಅರ್ಥಶಾಸ್ತ್ರ ಹಾಗೂ ವಾಣಿಜ್ಯಶಾಸ್ತ್ರಗಳ ಅಂಶಗಳನ್ನು 8 ನೇ ತರಗತಿಯಲ್ಲಿ ಸೇರಿಸಲಾಗಿದೆ. ಅನೇಕ ಅವಶ್ಯಕ ವಿಚಾರಗಳನ್ನು ಆವರಣಗಳಲ್ಲಿ ಕೊಡಲಾಗಿದೆ. ಮಕ್ಕಳು ಸ್ವಂತವಾಗಿ ಕಲಿಯುವುದಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಅನೇಕ ಪ್ರಾಜೆಕ್ಟ್‌ಗಳನ್ನು ಸೂಚಿಸಲಾಗಿದೆ. ಆದರೆ, ಕಂಠಪಾಠ ಮಾಡುವ ಅಂಶಗಳಾದ ಇಸವಿಗಳು, ಅನಾವಶ್ಯಕ ವಿಷಯಗಳನ್ನು ಕಡಿಮೆ ಮಾಡುವುದರ ಮೂಲಕ ಕಲಿಕಾ ಹೊರೆಯನ್ನು ಕಡಿಮೆ ಮಾಡಲಾಗಿದೆ. ಹತ್ತನೇ ತರಗತಿಯ ಪಠ್ಯಪುಸ್ತಕಗಳು ಒಂದು ದೃಷ್ಟಿಯಲ್ಲಿ ವೈಶಿಷ್ಟ್ಯಪೂರ್ಣವಾಗಿವೆ. ಇತರ ಪಠ್ಯಪುಸ್ತಕಗಳಂತೆಯೇ ಈ ಪಠ್ಯಪುಸ್ತಕಗಳು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಾಮರ್ಥ್ಯ ಹಾಗೂ ಕೌಶಲ್ಯಗಳನ್ನು ಬೆಳಸಿಕೊಳ್ಳಲು ಸಹಾಯ ಮಾಡುತ್ತವೆ. ಇದರೊಂದಿಗೆ 10ನೇ ತರಗತಿ ಶಿಕ್ಷಣದ ಒಂದು ಹಂತದ ಅಂತ್ಯದಾಣವಾಗಿರುವುದರಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಬ್ಲಿಕ್ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಡಾ. ಜಿ. ಎಸ್. ಮುಡಂಬಡಿತ್ತಾಯ
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು

ನಾಗೇಂದ್ರ ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ
ಬೆಂಗಳೂರು

ಅಧ್ಯಕ್ಷರ ನಿವೇದನೆ

ಎಳೆಯರ ಶಿಕ್ಷಣದ ಒಂದು ನಿರ್ದಿಷ್ಟ ಹಾಗೂ ಪ್ರಮುಖ ಹಂತ ಹತ್ತನೆಯ ತರಗತಿಯಾಗಿದೆ. ಅದೇ ರೀತಿ ಕಡ್ಡಾಯ ಹಾಗೂ ಉಚಿತ ಸಾರ್ವತ್ರಿಕ ಶಿಕ್ಷಣದ ಸಾಂವಿಧಾನಿಕ ಹಕ್ಕಿನ ಸೌಲಭ್ಯದ ಪರಿಪೂರ್ಣತೆ ಒದಗಿ ಬರುವುದೂ ಈ ಮಹತ್ತರ ಘಟ್ಟದಲ್ಲಿ. ನಮ್ಮ ನಾಡಿನ ಮಕ್ಕಳು ಮನೆಯಂಗಳದಿಂದ ಹೊರಟು ಪಾಠಶಾಲೆಗೆ ಅಡಿಯಿಡುತ್ತಾ ಹತ್ತು ಸಂವತ್ಸರಗಳನ್ನು ಕಳೆಯುವಲ್ಲಿ ಸಮಾಜದ ಒಳಹೊರಗುಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮ ಹತ್ತನೆಯ ತರಗತಿಯ ಸಮಾಜ ವಿಜ್ಞಾನ ಪುಸ್ತಕವನ್ನು ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 2005ರ ಹಿನ್ನೆಲೆಯಲ್ಲಿ ವಿಸ್ತೃತ ಹಾಗೂ ಸರಳವಾಗಿ ರಚಿಸಲು ಯತ್ನಿಸಿದ್ದೇವೆ. ಈ ಪ್ರೌಢಶಾಲಾ ಮಟ್ಟದ ವಿದ್ಯಾರ್ಥಿಗಳು ಕೃಷಿ, ಸ್ವ ಉದ್ಯೋಗ, ವ್ಯಾಪಾರ ಮುಂತಾದ ಹತ್ತು ಹಲವು ಔದ್ಯೋಗಿಕ ಕವಲುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಅದೇ ರೀತಿ ವಿಜ್ಞಾನ, ತಾಂತ್ರಿಕ ಶಿಕ್ಷಣ, ವೈದ್ಯಕೀಯ ಇಂತಹ ಕ್ಷೇತ್ರಗಳಲ್ಲಿ ಪರಿಣತಿಗಾಗಿಯೂ ತೆರಳಲು ಸಾಕಷ್ಟು ವಿದ್ಯಾರ್ಥಿಗಳು ಮುಂದಾಗುತ್ತಾರೆ. ಇವರೆಲ್ಲರಿಗೂ ಸಮಾಜ ವಿಜ್ಞಾನದ ಪರಿಚಯವನ್ನು ಸಾಕಷ್ಟು ಪರಿಣಾಮಕಾರಿಯಾಗಿ ನೀಡುವ ಪ್ರಾಮಾಣಿಕ ಪ್ರಯತ್ನವನ್ನು ಈ ಪಠ್ಯಪುಸ್ತಕದಲ್ಲಿ ಮಾಡಲಾಗಿದೆ. ಅದೇ ರೀತಿ ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಭೂಗೋಳ, ಸಮಾಜಶಾಸ್ತ್ರ, ಹಾಗೂ ವ್ಯವಹಾರ ಅಧ್ಯಯನದ ಬಗೆಗೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಹತ್ವದ ಅಂಶಗಳನ್ನು ಸಮಕಾಲೀನ ವಿಚಾರಧಾರೆಯೊಂದಿಗೆ ಸಂಗ್ರಾಹ್ಯವಾಗಿ ವಿದ್ಯಾರ್ಥಿಗಳಿಗೆ ನೀಡಲು ಯತ್ನಿಸಿದ್ದೇವೆ. ಸರಳ ನಿರೂಪಣೆ, ಅಚ್ಚುಕಟ್ಟಾದ ಒಕ್ಕಣೆ, ವಿಶೇಷ ಮಾಹಿತಿಗಳ ಜೋಡಣೆ, ಅವಶ್ಯಕ ಭೂಪಟ, ಸೂಕ್ತ ಕೋಷ್ಟಕ ಮತ್ತು ಚಿತ್ರಗಳೊಂದಿಗೆ ಪಠ್ಯವನ್ನು ನೀಡುವ ಪ್ರಯತ್ನ ಮಾಡಲಾಗಿದೆ.

ಈ ಪಠ್ಯಪುಸ್ತಕವನ್ನು ಕ್ರಮಬದ್ಧವಾಗಿ ಹೊರತರಲು ಸಹಕರಿಸಿದ ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯರಿಗೆ, ಪರಿಶೀಲನಾ ಸಮಿತಿ, ಸಂಪಾದಕ ಮಂಡಳಿ, ಅನುವಾದಕರಿಗೆ ಹಾಗೂ ಸಲಹೆಗಾರರಿಗೆ ನಮ್ಮ ಕೃತಜ್ಞತೆಗಳು.

ಅದೇ ರೀತಿ ಈ ಪಠ್ಯಪುಸ್ತಕ ರಚನೆಗೆ ಆರಂಭದಿಂದಲೂ ಮಾರ್ಗದರ್ಶನವಿತ್ತ ಮುಖ್ಯಸಂಯೋಜಕರಾದ ಡಾ.ಜಿ.ಎಸ್. ಮುಡಂಬಡಿತ್ತಾಯರಿಗೆ ಹಾಗೂ ಎಲ್ಲಾ ರೀತಿಯ ಸಹಕಾರ ನೀಡಿದ ಪಠ್ಯಪುಸ್ತಕ ಸಂಘದ ಅಧಿಕಾರಿಗಳಿಗೆ ನಮ್ಮ ಕೃತಜ್ಞತೆಗಳು.

ಡಾ. ಎಂ. ಶಶಿಧರ್
ಡಾ. ಪಿ. ಅನಂತಕೃಷ್ಣ ಭಟ್
ಅಧ್ಯಕ್ಷರು, ಪಠ್ಯಪುಸ್ತಕ ರಚನಾ ಸಮಿತಿ.

ರಚನಾ ಸಮಿತಿ

ಅಧ್ಯಕ್ಷರು

ಡಾ. ಎಂ. ಶಶಿಧರ್, ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಡಾ. ಪಿ. ಅನಂತಕೃಷ್ಣ ಭಟ್, ನಿವೃತ್ತ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಕೆನರಾ ಕಾಲೇಜು, ಮಂಗಳೂರು.

ಸದಸ್ಯರು

ಶ್ರೀ ರಾಮ್‌ಪ್ರಸಾದ್, ನಿವೃತ್ತ ಪ್ರಾಂಶುಪಾಲರು, ಶ್ರೀ ಎ.ಆರ್.ಎಸ್. ಪ.ಪೂರ್ವ ಕಾಲೇಜು, ಹರಿಹರಪುರ, ಚಿಕ್ಕಮಗಳೂರು ಜಿಲ್ಲೆ

ಶ್ರೀ ಎನ್. ಸತ್ಯಪ್ರಕಾಶ್, ನಿ॥ ಮುಖ್ಯಶಿಕ್ಷಕರು, ವಿದ್ಯಾವರ್ಧಕ ಸಂಘ ಪ್ರೌಢಶಾಲೆ, ರಾಜಾಜಿನಗರ, 1ನೇ ಬ್ಲಾಕ್ ಬೆಂಗಳೂರು.

ಶ್ರೀಮತಿ ಸರಸ್ವತಿ ಹೆಗಡೆ, ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಪೀಣ್ಯ, ಬೆಂಗಳೂರು.

ಶ್ರೀ ಬಿ.ಎಚ್. ಹನುಮಂತಯ್ಯ, ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉದಯಪುರ, ಚನ್ನರಾಯಪಟ್ಟಣ ತಾ॥ ಹಾಸನ ಜಿಲ್ಲೆ.

ಡಾ. ಮಲ್ಲಿಕಾರ್ಜುನ.ಎಸ್.ಬಾಗೇವಾಡಿ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಭೂಗೋಳಶಾಸ್ತ್ರ ವಿಭಾಗ, ಎ.ಜಿ.ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಮುನವಳ್ಳಿ, ಸವದತ್ತಿ ತಾ॥ ಬೆಳಗಾವಿ ಜಿಲ್ಲೆ.

ಶ್ರೀ ಜಿ.ಎನ್. ಕೆಂಪಯ್ಯ, ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಮಸ್ಕಲ್ ತುಮಕೂರು ತಾಲ್ಲೂಕು.

ಶ್ರೀ ಎ.ಎಸ್. ದೀಕ್ಷಿತ್, ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಕೇಂದ್ರ, ಬಸವೇಶ್ವರನಗರ, ಬೆಂಗಳೂರು.

ಪ್ರೊ. ದೊರೈರಾಜ್ ಎಸ್.ಎನ್, ಪ್ರಾಂಶುಪಾಲರು, ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಬೆಂಗಳೂರು.

ಶ್ರೀ ಪಿ. ಪ್ರಸಾದ್, ಚಿತ್ರಕಲಾ ಶಿಕ್ಷಕರು, ಶ್ರೀ ಭೈರವೇಶ್ವರ ಪ್ರೌಢಶಾಲೆ, ತುಮಕೂರು.

ಪರಿಶೀಲಕರು

ಡಾ. ವಿಜಯ್ ಪೂಣಚ್ಚ ತಂಬಂಡ, ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ.

ಡಾ. ಟಿ.ಡಿ. ದೇವೇಗೌಡ, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಡೀನ್ (ಅಧ್ಯಯನ ಕೇಂದ್ರಗಳು), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

ಶ್ರೀ ಚ.ನ. ಶಂಕರ್‌ರಾವ್, ನಿವೃತ್ತ ಉಪನ್ಯಾಸಕರು, ಕೆನರಾ ಪದವಿ ಪೂರ್ವ ಕಾಲೇಜು, ಮಂಗಳೂರು.

ಡಾ. ರಂಗನಾಥ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸ್ನಾತಕೋತ್ತರ ಭೂಗೋಳಶಾಸ್ತ್ರ ವಿಭಾಗ, ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು.

ಡಾ. ಎಸ್.ಆರ್. ಕೇಶವ, ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಡಾ. ನೂರ್ ಅಫ್ಜ್, ಪ್ರಾಧ್ಯಾಪಕರು, ವಾಣಿಜ್ಯ ಮತ್ತು ವ್ಯವಹಾರ ಅಧ್ಯಯನ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಸಂಪಾದಕ ಮಂಡಳಿ

ಡಾ. ಎಂ.ವಿ. ಶ್ರೀನಿವಾಸ್, ನಿವೃತ್ತ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಡಾ. ಆರ್.ಎಲ್.ಎಂ. ಪಾಟೀಲ್, ನಿವೃತ್ತ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಡಾ. ಈಶ್ವರಪ್ಪ, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಮುಖ್ಯ ಸಂಯೋಜಕರು

ಡಾ. ಜಿ. ಎಸ್. ಮುಡಂಬಡಿತ್ತಾಯ, ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಮುಖ್ಯಸಲಹೆಗಾರರು

ಶ್ರೀ ನಾಗೇಂದ್ರ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಶ್ರೀ ಪಾಂಡುರಂಗ, ಉಪನಿರ್ದೇಶಕರು (ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಕಾರ್ಯಕ್ರಮ ಸಂಯೋಜಕರು :

ಶ್ರೀ ಎ.ಟಿ. ರಂಗದಾಸಪ್ಪ, ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಪರಿವಿಡಿ

ಇತಿಹಾಸ

ಅಧ್ಯಾಯ –1

ಭಾರತಕ್ಕೆ ಯುರೋಪಿಯನ್ನರ ಆಗಮನ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- ಭಾರತವು ಯುರೋಪಿಯನ್ನರೊಂದಿಗೆ ಹೊಂದಿದ್ದ ವ್ಯಾಪಾರ.
- ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರು.
- ಮೊದಲನೆಯ, ಎರಡನೆಯ, ಮೂರನೆಯ ಕರ್ನಾಟಿಕ್ ಯುದ್ಧಗಳು.
- ಪ್ಲಾಸಿಕದನ, ದ್ವಿ-ಸರ್ಕಾರ ಪದ್ಧತಿ.
- ಬ್ರಿಟಿಷರ ಆಕ್ರಮಣ ನೀತಿ.

ಪ್ರಾಚೀನ ಕಾಲದಿಂದಲೂ ಭಾರತ ಹಾಗೂ ಯುರೋಪಿನ ಮಧ್ಯ ವಾಣಿಜ್ಯ ಸಂಬಂಧಗಳು ಬೆಸೆದು ಕೊಂಡಿದ್ದವು. ಪ್ರಮುಖವಾಗಿ ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಇತ್ಯಾದಿ ವಸ್ತುಗಳಿಗೆ ಯುರೋಪಿನ ಜನರಿಂದ ಯಥೇಚ್ಛ ಬೇಡಿಕೆಯಿತ್ತು. ಈ ವಸ್ತುಗಳನ್ನು ಯುರೋಪಿನ ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳಿಗೆ ರಫ್ತು ಮಾಡಲಾಗುತ್ತಿತ್ತು. ಮಧ್ಯಕಾಲದಲ್ಲಿ ಯುರೋಪ್ ಮತ್ತು ಏಷ್ಯಾದ ನಡುವಿನ ವ್ಯಾಪಾರಗಳು ಪರ್ಶಿಯನ್ ಕೊಲ್ಲಿ, ಕೆಂಪುಸಮುದ್ರ ಮತ್ತು ಭಾರತದ ವಾಯುವ್ಯ ಪ್ರದೇಶಗಳ ಮೂಲಕ ನಡೆಯುತ್ತಿದ್ದವು. ಅರಬ್ಬರು ಏಷ್ಯಾದ ವ್ಯಾಪಾರವನ್ನು ನಡೆಸುತ್ತಿದ್ದರು. ಮೆಡಿಟರೇನಿಯನ್ ಹಾಗೂ ಯುರೋಪಿನ ವ್ಯಾಪಾರವು ಇಟಲಿಯ ಏಕಸ್ವಾಮ್ಯತೆಗೆ ಒಳಪಟ್ಟಿತ್ತು. 1400ರ ಹೊತ್ತಿಗೆ ಈ ವ್ಯಾಪಾರವು ಅತ್ಯಂತ ಲಾಭದಾಯಕವಾಗಿತ್ತು. ಇಟಲಿಯು ತನ್ನ ಸಂಪದ್ಭರಿತ ನಗರಗಳಾದ ವೆನಿಸ್, ಜಿನೋವಾ, ಮಿಲಾನ್, ಫ್ಲಾರೆನ್ಸ್ ಮೂಲಕ ಭಾರತದ ಸಾಂಬಾರ ಪದಾರ್ಥಗಳ ವಿತರಣೆ ಮಾಡುವ ಕೇಂದ್ರವಾಯಿತು. ಇಟಲಿಯ ಏಕಸ್ವಾಮ್ಯವನ್ನು ಮುರಿಯಲು ಪಶ್ಚಿಮ ಯುರೋಪಿನ ದೇಶಗಳು ಅಟ್ಲಾಂಟಿಕ್ ಸಾಗರದ ಮೂಲಕ ಒಂದು ಪರ್ಯಾಯ ವ್ಯಾಪಾರ ಮಾರ್ಗವನ್ನು ಹುಡುಕುವ ಪ್ರಯತ್ನದಲ್ಲಿದ್ದವು. ಸ್ಪೇನ್ ಮತ್ತು ಪೋರ್ಚುಗಲ್ ಮೊದಲುಗೊಂಡು ಯುರೋಪಿನ ಇತರ ದೇಶಗಳು ಹೊಸ ಭೂ ಪ್ರದೇಶಗಳನ್ನು ಹುಡುಕುವ ನಾವಿಕರ ಸಾಹಸಕ್ಕೆ ಪ್ರೋತ್ಸಾಹ ನೀಡಿದವು.

ಸಮುದ್ರಯಾನಕ್ಕೆ ಹೊಸ ವೈಜ್ಞಾನಿಕ ಸಲಕರಣೆಗಳಾದ ದಿಕ್ಸೂಚಿ, ಸಿಡಿಮದ್ದು, ನೌಕಾ ಉಪಕರಣಗಳು, ಭೂಪಟ, ಇತ್ಯಾದಿಗಳು ನಾವಿಕರಿಗೆ ಸಹಾಯಕವಾದವು. ಇದರ ಜೊತೆಗೆ ಪೂರ್ವದೇಶಗಳ ಸಂಪತ್ತಿನ ಬಗ್ಗೆ ಹೇಳಲಾಗುತ್ತಿದ್ದ ಕಥೆಗಳು, ಧರ್ಮಪ್ರಚಾರಕ್ಕಾಗಿ ಉತ್ಸುಕರಾಗಿದ್ದ ಮಿಷನರಿಗಳು ಸಹ ಭಾರತಕ್ಕೆ ಪರ್ಯಾಯ ಮಾರ್ಗವನ್ನು ಹುಡುಕಲು ಪ್ರೇರಣೆಯನ್ನು ನೀಡಿದವು.

ಭಾರತದಲ್ಲಿ ಮೊಘಲ್ ರಾಜಮನೆತನವು ಸ್ಥಾಪನೆಯಾಗುವ ಮೊದಲೇ ಯುರೋಪಿಯನ್ನರು ಪೂರ್ವದ ಕಡೆಗೆ ಸಮುದ್ರಯಾನಮಾಡಲು ಆರಂಭಿಸಿದರು. ಭಾರತದ ಸಂಪತ್ತಿನ ಬಗ್ಗೆ ಇದ್ದ ರೋಚಕ ವಿಷಯಗಳಿಂದ ಅವರು ಆಕರ್ಷಿತರಾಗಿದ್ದರು. ಪೋರ್ಚುಗೀಸ್ ನಾವಿಕ ವಾಸ್ಕೊಡಗಾಮನು 1498ರಲ್ಲಿ

ಭಾರತದ ಪಶ್ಚಿಮ ತೀರದ ಕಲ್ಲಿಕೋಟೆಗೆ ಮೊಟ್ಟಮೊದಲ ಬಾರಿ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದನು. ಈ ಮೂಲಕ ಭಾರತದೊಂದಿಗೆ ಮರು ವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ ಯುರೋಪಿಯನ್ನರಲ್ಲಿ ಮೊದಲಿಗನಾದನು.

ನಿಮಗಿದು ತಿಳಿದಿರಲಿ :

ಬಹುಕಾಲದಿಂದಲೂ ಯುರೋಪಿಯನ್ನರು ಮತ್ತು ಅರಬ್ಬರು ಏಷ್ಯಾ ಭೂ ಮಾರ್ಗದ ಮೂಲಕ ಭಾರತದೊಂದಿಗೆ ವ್ಯಾಪಾರವನ್ನು ಹೊಂದಿದ್ದರು. ಕಾನ್‌ಸ್ಟ್ಯಾಂಟಿನೋಪಲ್‌ನಿಂದ ಏಷ್ಯಾದ ಮೂಲಕವಾಗಿ ಪ್ರಯಾಣಮಾಡಿ ಅವರು ಭಾರತಕ್ಕೆ ಬರುತ್ತಿದ್ದರು. ಆಗ, ಭಾರತಕ್ಕೆ ಇದ್ದ ಮಾರ್ಗ ಇದೊಂದೇ ಆಗಿತ್ತು. ಆದರೆ, 1453ರಲ್ಲಿ ಆಟೋಮನ್ ಟರ್ಕರು ಕಾನ್‌ಸ್ಟ್ಯಾಂಟಿನೋಪಲನ್ನು ವಶಪಡಿಸಿಕೊಂಡ ನಂತರ ಈ ವ್ಯಾಪಾರ ವಹಿವಾಟಿಗೆ ಧಕ್ಕೆಯುಂಟಾಯಿತು. ಇದು ಯುರೋಪಿಯನ್ನರು ಭಾರತಕ್ಕೆ ಪರ್ಯಾಯ ಮಾರ್ಗವನ್ನು ಹುಡುಕಲು ಬಹಳ ಮುಖ್ಯವಾದ ಪ್ರೇರಣೆಯಾಯಿತು.

ಅರೇಬಿಯನ್ ಸಮುದ್ರದ ಮೇಲೆ ಪೋರ್ಚುಗೀಸರು ವ್ಯಾಪಾರಿ ಏಕಸ್ವಾಮ್ಯತೆಯನ್ನು 17ನೆಯ ಶತಮಾನದವರೆಗೂ ಹೊಂದಿದ್ದರು. ಭಾರತದೊಳಗೆ ಡಚ್ ಮತ್ತು ಇಂಗ್ಲಿಷರ ಪ್ರವೇಶದೊಂದಿಗೆ ಪೋರ್ಚುಗೀಸರ ಏಕಸ್ವಾಮ್ಯತೆಯು ಶಿಥಿಲಗೊಂಡಿತು.


ನಿಮಗಿದು ತಿಳಿದಿರಲಿ :

ಏಕಸ್ವಾಮ್ಯ: *ವ್ಯಾಪಾರದಲ್ಲಿ ಕೊಳ್ಳುವ ಮತ್ತು ಮಾರಾಟಮಾಡುವ ಹಕ್ಕನ್ನು ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ ಹೊಂದಿರುವುದನ್ನು ಏಕಸ್ವಾಮ್ಯತೆ ಎನ್ನಬಹುದಾಗಿದೆ.*

ಸ್ಥಳೀಯ ದೊರೆಗಳು ಹಾಗೂ ಮೊಘಲ್ ಚಕ್ರವರ್ತಿಯಿಂದ ಬ್ರಿಟಿಷರು ವ್ಯಾಪಾರ ಅನುಮತಿಯನ್ನು ಕೇಳಿ ಪಡೆದರು. ಮೊದಮೊದಲು ವ್ಯಾಪಾರವು ಯುರೋಪಿಯನ್ನರು ಮತ್ತು ಭಾರತೀಯರ ಪರಸ್ಪರ ಅನುಕೂಲಕ್ಕಾಗಿತ್ತು. ಈ ಪ್ರಾರಂಭದ ದಿನಗಳಲ್ಲಿ ಬ್ರಿಟಿಷರು ಇತರೆ ಯುರೋಪಿಯನ್ನರೊಂದಿಗೆ ವ್ಯಾಪಾರದ ಏಕಸ್ವಾಮ್ಯತೆಗಾಗಿ ಹೊಡೆದಾಡಿದರು. 17ನೆಯ ಶತಮಾನದ ಪೂರ್ವಾರ್ಧದಲ್ಲಿ ಬ್ರಿಟಿಷರು ಈ ಬಗೆಯ ಹೋರಾಟದಲ್ಲಿ ಪೋರ್ಚುಗೀಸರನ್ನು ಸೋಲಿಸಿದರು. 18ನೆಯ ಶತಮಾನದ ಕೊನೆಯಲ್ಲಿ ಡಚ್ಚರ ವಿರುದ್ಧವೂ ಸಹ ಇವರು ಜಯಗಳಿಸಿದರು.

ಮೊಘಲ್ ಚಕ್ರವರ್ತಿಯಾದ ಫರೂಕ್ ಸಿಯಾರನು 17ನೆಯ ಶತಮಾನದ ಆರಂಭದಲ್ಲಿ ಕಲ್ಕತ್ತಾ ಸಮೀಪದ ಕೆಲವು ಹಳ್ಳಿಗಳನ್ನು ಬ್ರಿಟಿಷರಿಗೆ ದತ್ತಿಯಾಗಿ ನೀಡಿದನು. ಕ್ರಮೇಣವಾಗಿ ಮದ್ರಾಸ್ ಮತ್ತು ಮುಂಬೈಯಲ್ಲಿಯೂ ಬ್ರಿಟಿಷರು ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡರು. ಮದ್ರಾಸ್, ಕಲ್ಕತ್ತಾ ಮತ್ತು ಮುಂಬೈಯಲ್ಲಿನ ಮೂಲ ಮೀನುಗಾರರ ಹಳ್ಳಿಗಳೇ, ನಂತರದಲ್ಲಿ ಬ್ರಿಟಿಷರ ಆಡಳಿತ ಕೇಂದ್ರಗಳು ಅಥವಾ ಪ್ರೆಸಿಡೆನ್ಸಿಗಳಾದವು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಮೂಲಕ ತಮ್ಮ ವ್ಯಾಪಾರ, ವಾಣಿಜ್ಯ ಮತ್ತು ರಾಜಕಾರಣವನ್ನು ವಿಸ್ತರಿಸಿಕೊಂಡರು. ಪ್ರಾರಂಭದಲ್ಲಿ ಈ ಸ್ಥಳಗಳು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ವ್ಯಾಪಾರ ಕೇಂದ್ರ (ಕೋಠಿ)ಗಳಾಗಿದ್ದವು. ಅವುಗಳ ಸುತ್ತ ಇವರು ಕೋಟೆಗಳನ್ನು ಕಟ್ಟಿ ಭದ್ರಪಡಿಸಿಕೊಂಡರು. ಅವು ಇವರ ಸರಕು ಸಂಗ್ರಹಣ ಕೇಂದ್ರಗಳೂ ಆಗಿದ್ದವು. ಈ ಪ್ರದೇಶಗಳು ತಮ್ಮದೇ ನಾಗರಿಕ ಮತ್ತು ಅಪರಾಧ ನಿಯಮಗಳಿಗೆ ಒಳಪಟ್ಟಿದ್ದವು.

ಮೊಘಲ್ ಸಾಮ್ರಾಜ್ಯದ ಪಾಲಿಗೆ 18ನೆಯ ಶತಮಾನದ ಮೊದಲಾರ್ಧವು ಮಹಾಪತನದ ಕಾಲವಾಗಿತ್ತು. ಅನೇಕ ದೇಶೀಯ ಸಂಸ್ಥಾನಗಳು ಹಾಗೂ ಪಾಳೇಯಪಟ್ಟುಗಳ ಉದಯದಿಂದಾಗಿ



ಮೊಘಲ್ ಸಂಸ್ಥಾನವು ನಿಧಾನವಾಗಿ ನಶಿಸಿತು. ಅವುಗಳಲ್ಲಿ ಬಹುಮುಖ್ಯವಾದವು ಬಂಗಾಳ, ಔದ್, ಹೈದರಾಬಾದ್ ಮತ್ತು ಮರಾಠ ಸಂಸ್ಥಾನಗಳು. ಈ ರಾಜ್ಯಗಳು ನೆಪಮಾತ್ರಕ್ಕೆ ಮೊಘಲ್ ಚಕ್ರವರ್ತಿಯ ಪರಮಾಧಿಕಾರವನ್ನು ಒಪ್ಪಿದ್ದವು.

ಈ ಸಮಯದಲ್ಲಿ ಬ್ರಿಟಿಷ್ ಕಂಪನಿಯು ತನ್ನ ವ್ಯಾಪಾರವನ್ನು ಸಂರಕ್ಷಿಸಲು ತನ್ನದೇ ಆದ ಸೈನ್ಯವನ್ನು ಕಟ್ಟಿಕೊಂಡಿತ್ತು. ದೆಹಲಿಯಿಂದ ಪ್ರತ್ಯೇಕವಾಗುತ್ತ ತಮ್ಮ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದ ಭಾರತದ ಚಿಕ್ಕಪುಟ್ಟ ಅರಸರು ಈ ವಿದೇಶಿ ಸೈನ್ಯದ ಬೆಂಬಲವನ್ನು ಪಡೆಯಲು ಮುಂದಾದರು. ಮುಂದಿನ ದಿನಗಳಲ್ಲಿ ಬ್ರಿಟಿಷರು ಮತ್ತು ಫ್ರೆಂಚರು ಭಾರತದ ಮೇಲೆ ಅಧಿಪತ್ಯ ಸ್ಥಾಪಿಸಲು ದೇಶೀಯ ಸಂಸ್ಥಾನಗಳ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದರು.

ಬ್ರಿಟಿಷ್ ವ್ಯಾಪಾರಿಗಳು ಸಾಮ್ರಾಜ್ಯದೊಡೆಯರಾದದ್ದು ಕೇವಲ ಸೈನ್ಯ ಬಲದಿಂದಲ್ಲ. ಬದಲಿಗೆ ರಾಜಕೀಯ ಮುತ್ಸದ್ಧಿತನ ಮತ್ತು ಕುಟಿಲತೆಯನ್ನು ಉಪಯೋಗಿಸಿದರು. ಇಂತಹ ಸಂದರ್ಭದಲ್ಲಿ ದೇಶೀಯ ರಾಜಪ್ರಭುತ್ವಗಳು ಅವನತಿ ದಿನಗಳಲ್ಲಿಯೂ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಯನ್ನು ವಿರೋಧಿಸಿದ ಸಂದರ್ಭಗಳು ಕಡಿಮೆಯೇನಿರಲಿಲ್ಲ. ಬಂಗಾಳದ ನವಾಬ ಸಿರಾಜುದ್ದೌಲನಿಂದ ಮೊದಲಾಗಿ, ಮೈಸೂರಿನ ಹೈದರ್, ಟಿಪ್ಪು ಸಹಿತ ಅನೇಕರು ಬ್ರಿಟಿಷರ ವಿರುದ್ಧ ಹೋರಾಡಿದರು.

ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಸೆಣಸಾಟದಲ್ಲಿ ಕರ್ನಾಟಿಕ್ ಪ್ರದೇಶದ ನವಾಬ ಅನ್ವರುದ್ದೀನನನ್ನು ಬ್ರಿಟಿಷರು ದಾಳವಾಗಿ ಬಳಸಿಕೊಂಡರು. ಫ್ರೆಂಚರು ಮದ್ರಾಸನ್ನು ವಶಪಡಿಸಿಕೊಂಡರು. ನಂತರ ಆದ ಒಪ್ಪಂದದ ಮೂಲಕ ಫ್ರೆಂಚರು ಮದ್ರಾಸನ್ನು ಬ್ರಿಟಿಷರಿಗೆ ಹಿಂತಿರುಗಿಸಿದರು. ಇದನ್ನು ಮೊದಲನೆ ಕರ್ನಾಟಿಕ್ ಕದನವೆಂದು ಕರೆಯಲಾಗಿದೆ.

ದಖನ್‌ನಲ್ಲಿ ಹೈದರಾಬಾದಿನ ನಿಜಾಮ ಪದವಿಗೆ ಹಾಗೂ ಕರ್ನಾಟಿಕ್‌ದ ನವಾಬ ಪದವಿಗಾಗಿ ಪೈಪೋಟಿ ಏರ್ಪಟ್ಟಿತ್ತು. ಉತ್ತರಾಧಿಕಾರದ ಈ ಪೈಪೋಟಿಯಲ್ಲಿ ಇಂಗ್ಲಿಷರು ಹಾಗೂ ಫ್ರೆಂಚರು ತಮ್ಮ ತಮ್ಮ ಅಭ್ಯರ್ಥಿಗಳಿಗೆ ಬೆಂಬಲವನ್ನಿತ್ತರು. ಬ್ರಿಟಿಷರು ರಾಬರ್ಟಕ್ಲೈವ್‌ನ ನೇತೃತ್ವದಲ್ಲಿ ಅನ್ವರುದ್ದೀನನಿಗೆ ಬೆಂಬಲವನ್ನು ನೀಡಿದರು. ಹಾಗೆಯೇ ಫ್ರೆಂಚರು ಡೂಪ್ಲೆ ನೇತೃತ್ವದಲ್ಲಿ ಚಂದಾಸಾಹೇಬನಿಗೆ ಬೆಂಬಲ

ನಿಮಗಿದು ತಿಳಿದಿರಲಿ :

ರಾಬರ್ಟ್‌ಕ್ಲೈವ್ : *ಬ್ರಿಟಿಷ್‌ಭಾರತದ ಸೃಷ್ಟಿಗೆ ಕಾರಣವಾದಂತಹ ಪ್ರಥಮ ಅಧಿಕಾರಿ ರಾಬರ್ಟ್‌ಕ್ಲೈವ್. ಈತನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕಾರುಕೂನನಾಗಿ ಸೇವೆಗೆ ಸೇರಿದ್ದನು. ಕರ್ನಾಟಿಕ್ ಯುದ್ಧದಲ್ಲಿ ಅದರಲ್ಲೂ ಆರ್ಕಾಟ್‌ನ ಮುತ್ತಿಗೆಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿ, ಬ್ರಿಟಿಷರ ವಿಜಯಕ್ಕೆ ಕಾರಣನಾದನು. ದಕ್ಷಿಣದಲ್ಲಿ ಬ್ರಿಟಿಷರ ಅಸ್ತಿತ್ವ ರೂಪಿಸುವಲ್ಲಿ ಸಫಲನಾದ ಈತ ಬಂಗಾಳದ ವಿಜಯಕ್ಕೂ ಕಾರಣನಾದನು. 1757ರ ಪ್ಲಾಸಿಕದನದ ವಿಜಯದಿಂದಾಗಿ ಬಂಗಾಳದ ನವಾಬನ ಮೇಲೆ ಹಿಡಿತವನ್ನು ಸಾಧಿಸಿದನು. ಇದರಿಂದ ಅಪಾರ ಸಂಪತ್ತನ್ನು ಕ್ಲೈವನು ಸಂಪಾದಿಸಿದ್ದಲ್ಲದೆ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೂ ಲಾಭವನ್ನು ತಂದುಕೊಟ್ಟನು. ಅಪಾರ ಸಂಪತ್ತಿನಿಂದ ಇಂಗ್ಲೆಂಡಿಗೆ ಹಿಂದಿರುಗಿದ ಕ್ಲೈವನು ಸಂಸತ್ತಿನ ಸದಸ್ಯನಾಗಿ ಸಹ ನೇಮಕಗೊಂಡಿದ್ದನು. ರಾಬರ್ಟ್ ಕ್ಲೈವನು ಇಂಗ್ಲೆಂಡಿಗೆ ಹಿಂದಿರುಗಿದ ನಂತರ ಈಸ್ಟ್ ಇಂಡಿಯಾ ಕಂಪನಿಯು ನಷ್ಟವನ್ನು ಅನುಭವಿಸತೊಡಗಿತು. ಅವನ ಮೇಲೆ ಆಪಾದನೆಗಳು ಇದ್ದಾಗ್ಯೂ ಸಹ ಅನಿವಾರ್ಯತೆಯಲ್ಲಿ ಸರ್ಕಾರವು ಮತ್ತೆ ಕ್ಲೈವ್‌ನನ್ನು ಬ್ರಿಟಿಷರ ಘನತೆಯನ್ನು ಉಳಿಸುವ ಸಲುವಾಗಿ ಭಾರತಕ್ಕೆ ಸೇನಾಪತಿಯಾಗಿ ಕಳುಹಿಸಿಕೊಟ್ಟಿತು. ಬಕ್ಸಾರ್ ಕದನದಲ್ಲಿ ಮತ್ತೆ ವಿಜಯಿಯಾಗಿ ಬ್ರಿಟಿಷರಿಗೆ ಘನತೆಯನ್ನು ತಂದುಕೊಟ್ಟ ಕ್ಲೈವನು ಬಂಗಾಳ, ಬಿಹಾರ, ಒರಿಸ್ಸಾದ ದಿವಾನಿ ಹಕ್ಕನ್ನು ಸಹ ತಂದುಕೊಟ್ಟನು. ಇದರಿಂದ ಮತ್ತೆ ಸಂಪತ್ತನ್ನು ತನಗೂ ಮತ್ತು ಈಸ್ಟ್ ಇಂಡಿಯಾ ಕಂಪನಿಗೆ ದೊರಕಿಸಿಕೊಟ್ಟು 1767ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದನು.*

ಡೂಪ್ಲೆ : *ಡೂಪ್ಲೆ ಭಾರತದಲ್ಲಿನ ಫ್ರೆಂಚ್ ಅಧಿಪತ್ಯಗಳ ಮೇಲಿನ ಗೌರ್ನರ್ ಜನರಲ್ ಆಗಿ 1742ರಲ್ಲಿ ನೇಮಕಗೊಂಡನು. ಭಾರತದ ಮೇಲೆ ಅಧಿಪತ್ಯ ಸ್ಥಾಪನೆಯ ಕನಸನ್ನು ಕಾಣುತ್ತಿದ್ದ ಡೂಪ್ಲೆ ಇಲ್ಲಿನ ದೇಶೀಯರಾಜರುಗಳ ಜೊತೆ ಒಪ್ಪಂದಗಳನ್ನು ಮಾಡಿಕೊಂಡಿದ್ದನು. ಡೂಪ್ಲೆ ಕಟ್ಟಿದ ದೇಶೀ ಸೇನೆಯಿಂದಲೇ ಹೈದರಾಲಿಯು ಸಹ ತರಬೇತಿ ಪಡೆದಿದ್ದನು. ಡೂಪ್ಲೆಯು ಬ್ರಿಟಿಷರ ಅಧಿಪತ್ಯ ಸ್ಥಾಪನೆಗೆ ಸವಾಲಾಗಿ ಕಂಡಿದ್ದನು. ಕರ್ನಾಟಿಕ್ ಮತ್ತು ದಖನ್ ಮೇಲಿನ ಅಧಿಪತ್ಯ ಸ್ಥಾಪನೆಗಾಗಿ ಬ್ರಿಟಿಷರು ಮತ್ತು ಫ್ರೆಂಚರ ನಡುವಿನ ಸಂಘರ್ಷವನ್ನು ಕಾಣುತ್ತೇವೆ. ಡೂಪ್ಲೆಯು 1746ರ ಮದ್ರಾಸ್ ಕದನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿ ಯಶಸ್ವಿಯಾಗಿದ್ದನು. ಫ್ರೆಂಚರು ಮತ್ತು ಬ್ರಿಟಿಷರ ನಡುವಿನ ಸಂಘರ್ಷವು 1754ರವರೆಗೆ ನಡೆಯಿತು. ತದನಂತರದಲ್ಲಿ ಫ್ರಾನ್ಸಿನ ಸರ್ಕಾರವೇ ಶಾಂತಿಯನ್ನು ಬಯಸಿ ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡಿತು.*

ನೀಡಿದರು. ಮುಂದೆ ಜರುಗಿದ ಯುದ್ಧಗಳಲ್ಲಿ ರಾಬರ್ಟ್‌ಕ್ಲೈವನು ಆರ್ಕಾಟಿನ ಮೇಲೆ ದಾಳಿ ನಡೆಸಿ ತಿರುಚಿನಾಪಳ್ಳಿಯನ್ನು ಸುತ್ತುವರೆದನು. ಫ್ರೆಂಚರ ಬೆಂಬಲಿಗನಾಗಿದ್ದ ಚಂದಾಸಾಹೇಬನು ಯುದ್ಧದಲ್ಲಿ ಹತನಾದನು. ಇದರಿಂದ ಕರ್ನಾಟಿಕ್ ಪ್ರದೇಶವು ಪರೋಕ್ಷವಾಗಿ ಬ್ರಿಟಿಷರ ವಶವಾಯಿತು. ಹೈದರಾಬಾದಿನಲ್ಲಿ ಬ್ರಿಟಿಷರ ಬೆಂಬಲಿಗನಾಗಿದ್ದ ನಾಸಿರ್‌ಜಂಗನನ್ನು ಫ್ರೆಂಚರು ಯುದ್ಧದಲ್ಲಿ ಸೋಲಿಸಿದರು. ಇದರ ಪರಿಣಾಮವಾಗಿ ಹೈದರಾಬಾದ್ ಫ್ರೆಂಚರ ಕೈವಶವಾಯಿತು. ಇದನ್ನು ಎರಡನೇ ಕರ್ನಾಟಿಕ್ ಯುದ್ಧವೆಂದು ಕರೆಯುತ್ತಾರೆ. ಆದರೆ ದಖನ್ ಮೇಲಿನ ಫ್ರೆಂಚರ ಪ್ರಭಾವವು ಕಡಿಮೆಯಾಯಿತು.

ಮುಂದೆ ಫ್ರೆಂಚರು ಮದ್ರಾಸಿನ ಸೇಂಟ್ ಜಾರ್ಜ್ ಕೋಟೆಯನ್ನು ವಶಪಡಿಸಿಕೊಂಡು ಮದ್ರಾಸಿನ ಮೇಲೆ ದಾಳಿಮಾಡಲು ಹವಣಿಸಿ ವಿಫಲರಾದರು. ಬ್ರಿಟಿಷರ ಸೇನಾ ಮುಖಂಡನಾಗಿದ್ದ ಸರ್‌ಐರ್‌ಕೂಟನು ಫ್ರೆಂಚರನ್ನು ವಾಂಡಿವಾಷ್ ಕದನದಲ್ಲಿ ಪರಾಜಯಗೊಳಿಸಿದನು. ಇದರಿಂದಾಗಿ ಫ್ರೆಂಚರು ಭಾರತದಲ್ಲಿ ಬಹುತೇಕವಾಗಿ ತಮ್ಮ ಎಲ್ಲ ಅಧಿಕಾರವನ್ನು ಕಳೆದುಕೊಂಡರು. ಮುಂದೆ ಆದ ಒಪ್ಪಂದದಲ್ಲಿ ಫ್ರೆಂಚರಿಗೆ ಬ್ರಿಟಿಷರು ತಮ್ಮೆಲ್ಲ ಬಳುವಳಿಗಳನ್ನು ಹಿಂದಿರುಗಿಸಿದರು. ಆದಾಗ್ಯೂ ಇನ್ನು ಮುಂದೆ ಫ್ರೆಂಚರು ಕೋಟೆಗಳನ್ನು ಕಟ್ಟಿ ರಕ್ಷಿಸಿಕೊಳ್ಳುವಂತಿರಲಿಲ್ಲ. ಅವು ಕೇವಲ ವ್ಯಾಪಾರಿ ಕೇಂದ್ರವಾಗಿಯಷ್ಟೆ ಕಾರ್ಯನಿರ್ವಹಿಸಬೇಕಿತ್ತು. ಇದು ಮೂರನೆ ಕರ್ನಾಟಿಕ್ ಕದನದ ಮುಖ್ಯವಾದ ಪರಿಣಾಮವಾಗಿದೆ.

> ***ನಿಮಗಿದು ತಿಳಿದಿರಲಿ :***
>
> ***ಕಪ್ಪು ಕೋಣೆ ದುರಂತ (Black hole tragedy)***
>
> *ಬಂಗಾಳದ ನವಾಬನಾದ ಸಿರಾಜುದ್ದೌಲನು 1756ರಲ್ಲಿ ಇಂಗ್ಲೆಂಡಿನ ವ್ಯಾಪಾರಿ ಕೇಂದ್ರವಾಗಿದ್ದ ಕಾಸಿಂಬಜಾರ್‌ನ ಮೇಲೆ ದಾಳಿಮಾಡಿ ಕಲ್ಕತ್ತಾದ ಸಂತ ಡೇವಿಡ್ ಕೋಟೆಯನ್ನು ವಶಪಡಿಸಿಕೊಂಡಿದ್ದನು. ಈ ದಾಳಿಯ ಸಮಯದಲ್ಲಿ ಸೆರೆಹಿಡಿದ ಬ್ರಿಟಿಷ್ ಸೈನಿಕರನ್ನು ಕಲ್ಕತ್ತಾದ ಒಂದು ಕಿರಿದಾದ ಕೋಣೆಯಲ್ಲಿ ಶಿಕ್ಷೆಗಾಗಿ ಕೂಡಿಟ್ಟನು. ಉರಿ ಬೇಸಿಗೆಯ ಬಿಸಿಲಿನಿಂದ ಅದರಲ್ಲಿ ಸೆರೆಯಾಗಿದ್ದ 146 ಸೈನಿಕ ಕೈದಿಗಳಲ್ಲಿ 123 ಜನರು ಮರಣ ಹೊಂದಿದರು. ಇದು ಕಪ್ಪು ಕೋಣೆಯ ದುರಂತ ಎಂದು ಕರೆಯಲ್ಪಟ್ಟಿದೆ.*

ಭಾರತದ ಮೇಲೆ ಅಧಿಕಾರ ಸ್ಥಾಪಿಸಲು ಹೊರಟ ಎಲ್ಲಾ ಯುರೋಪಿಯನ್ನರನ್ನು ಸೋಲಿಸಿದ ಬ್ರಿಟಿಷರು ಭಾರತವನ್ನು ಆಕ್ರಮಿಸಲು ತೊಡಗಿದರು. ಈ ಆಕ್ರಮಣಕ್ಕೆ ಮೊದಲು ವಶವಾದದ್ದೇ ಬಂಗಾಳ. ನವಾಬ ಸಿರಾಜುದ್ದೌಲನು ಬಂಗಾಳದ ಮೇಲಿನ ಅಧಿಪತ್ಯವನ್ನು ಉಳಿಸಿಕೊಳ್ಳಲು ಬ್ರಿಟಿಷರೊಂದಿಗೆ ಕಾದಾಡಿದ ಯುದ್ಧವನ್ನು ಪ್ಲಾಸಿ ಕದನವೆಂದು ಕರೆಯುತ್ತಾರೆ. ಈ ಯುದ್ಧದಲ್ಲಿ ರಾಬರ್ಟ್‌ಕ್ಲೈವ್ ನೇತೃತ್ವದ ಕಂಪನಿ ಸೈನ್ಯವು ನವಾಬ ಸಿರಾಜುದ್ದೌಲನನ್ನು 1757ರಲ್ಲಿ ನಡೆದ ನಿರ್ಣಾಯಕ ಪ್ಲಾಸಿ ಕದನದಲ್ಲಿ ಸೋಲಿಸಿದನು. ಬ್ರಿಟಿಷರೊಂದಿಗೆ ಸಹಕರಿಸಿದ ಮೀರ್‌ಜಾಫರನನ್ನು ಬಂಗಾಳದ ನವಾಬನನ್ನಾಗಿ ನೇಮಿಸಿ ಪ್ರತಿಯಾಗಿ ಅವನಿಂದ ಬ್ರಿಟಿಷರು 24 ಪರಗಣದ ಮೇಲಿನ ಜಮೀನ್ದಾರಿ ಹಕ್ಕನ್ನು ಪಡೆದುಕೊಂಡು ಅತ್ಯಂತ ಪ್ರಬಲರಾದರು.

> ***ನಿಮಗಿದು ತಿಳಿದಿರಲಿ :***
>
> *ದಿವಾನಿ ಹಕ್ಕು ಎಂದರೆ ಭೂಕಂದಾಯ ವಸೂಲಿಮಾಡುವ ಹಕ್ಕು.*

ಮೀರ್‌ಜಾಫರನು ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳಲು ಮುಂದಾದಾಗ ಬ್ರಿಟಿಷರು ಅವನನ್ನು ಅಧಿಕಾರದಿಂದ ಕೆಳಗಿಳಿಸಿ ಮೀರ್‌ಕಾಸಿಮನನ್ನು ನವಾಬನನ್ನಾಗಿ ಮಾಡಿದರು. ಇದಕ್ಕೆ ಪ್ರತಿಯಾಗಿ

ಅವನು ಬರ್ದವಾನ, ಮಿಡ್ನಾಪುರ ಮತ್ತು ಚಿತ್ತಗಾಂಗ್ ಪ್ರದೇಶಗಳನ್ನು ಬ್ರಿಟಿಷರಿಗೆ ಬಳುವಳಿಯಾಗಿ ನೀಡಿದನು. ಇಂಗ್ಲಿಷರ ಹಿಡಿತದಿಂದ ಹೊರಬರಲು ಮೀರ್‌ಖಾಸಿಮನು ಪ್ರಯತ್ನಿಸಿದಾಗ ಅವನನ್ನು ಪದಚ್ಯುತಗೊಳಿಸಿದರು. ನಂತರ ಷರತ್ತುಗಳೊಂದಿಗೆ ಇಂಗ್ಲಿಷರು ಮೀರ್‌ಜಾಫರನನ್ನು ಮತ್ತೆ ನವಾಬನನ್ನಾಗಿ ಮಾಡಿದರು.

ಇದರ ನಡುವೆ ಮೊಘಲ್ ಚಕ್ರವರ್ತಿ ಷಾ ಅಲಂ, ಔದ್‌ನ ನವಾಬ ಷೂಜ ಉದ್ದೌಲ ಮತ್ತು ಮೀರ್‌ಖಾಸಿಮರ ತ್ರಿಮೈತ್ರಿ ಕೂಟದ ಸೈನ್ಯವು ಇಂಗ್ಲಿಷರ ವಿರುದ್ಧ ಹೋರಾಡಿ ಸೋತಿತು. ಇದನ್ನು 1764ರ ಬಕ್ಸಾರ್ ಕದನ ಎಂದು ಕರೆಯುತ್ತಾರೆ ಈ ಕದನದ ಪರಿಣಾಮವಾಗಿ ಬಿಹಾರ, ಒರಿಸ್ಸಾ ಮತ್ತು ಬಂಗಾಳ ಪ್ರಾಂತ್ಯಗಳು ಇಂಗ್ಲಿಷರ ವಶವಾದವು. ಮೊಘಲ್ ಚಕ್ರವರ್ತಿ ಷಾ ಅಲಂ ದಿವಾನಿ ಹಕ್ಕನ್ನು ಇಂಗ್ಲಿಷರಿಗೆ ನೀಡಿದನು. ಪರಿಣಾಮವಾಗಿ 1765ರಲ್ಲಿ ಕಂಪನಿ ಗವರ್ನರ್ ಆಗಿ ನೇಮಕಗೊಂಡಿದ್ದ ರಾಬರ್ಟ್‌ಕ್ಲೈವನು ಬಂಗಾಳದಲ್ಲಿ ದ್ವಿ–ಸರ್ಕಾರವನ್ನು ಜಾರಿಗೆ ತಂದನು. ಅಂದರೆ ಇಂಗ್ಲಿಷರು ದಿವಾನಿ ಹಕ್ಕಿನಿಂದಾಗಿ ಭೂಕಂದಾಯವನ್ನು ವಸೂಲಿ ಮಾಡುತ್ತಿದ್ದರು. ಆಡಳಿತ, ನ್ಯಾಯ ಪ್ರತಿಪಾದನೆ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನವಾಬನು ನಿರ್ವಹಿಸುತ್ತಿದ್ದನು. ಇದನ್ನೇ ದ್ವಿ–ಸರ್ಕಾರವೆಂದು ಕರೆಯಲಾಗಿದೆ.

ಹೀಗೆ ಬ್ರಿಟಿಷರು ತಮ್ಮ ವಾಣಿಜ್ಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ತಮ್ಮ ರಾಜಕೀಯ ಕುಟಿಲತೆಯಿಂದ ದೇಶೀಯ ಪ್ರದೇಶಗಳ ಮೇಲೆ ಭದ್ರಹಿಡಿತವನ್ನು ಸಾಧಿಸಿದರು. ಕ್ರಮೇಣ ಭಾರತದ ಪ್ರಧಾನ ಭೂಮಿಕೆಯಲ್ಲಿ ಕಾಣಿಸಿಕೊಂಡರು. ಈ ಮೂಲಕ ಭಾರತದ ಮೇಲೆ ಬ್ರಿಟಿಷರು ತಮ್ಮ ಅಧಿಪತ್ಯವನ್ನು ಸ್ಥಾಪಿಸಲು ಆರಂಭಿಸಿದರು.

ನಿಮಗಿದು ತಿಳಿದಿರಲಿ :

1600ರಲ್ಲಿ	*ಈಸ್ಟ್ ಇಂಡಿಯಾ ಕಂಪನಿಯನ್ನು ಇಂಗ್ಲೆಂಡಿನಲ್ಲಿ ಸ್ಥಾಪಿಸಲಾಯಿತು.*
1602ರಲ್ಲಿ	*ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿಯನ್ನು ನೆದರ್‌ಲ್ಯಾಂಡ್‌ನಲ್ಲಿ ಸ್ಥಾಪಿಸಲಾಯಿತು.*
1619ರಲ್ಲಿ	*ಮೊಘಲ್ ಚಕ್ರವರ್ತಿ ಜಹಂಗೀರನು ಈಸ್ಟ್ ಇಂಡಿಯಾ ಕಂಪನಿಗೆ ಪಶ್ಚಿಮ ಕರಾವಳಿಯ ಸೂರತ್ತಿನಲ್ಲಿ ಹಾಗೂ ಪೂರ್ವ ಕರಾವಳಿಯ ಹೂಗ್ಲಿಯಲ್ಲಿ ವ್ಯಾಪಾರ ಮಾಡಲು ಅನುಮತಿಯನ್ನು ನೀಡಿದನು.*
1639ರಲ್ಲಿ	*ಇಂಗ್ಲಿಷರು ತಮ್ಮ ಮೊದಲ ಸರಕು ಕೋಠಿಯನ್ನು ಮದ್ರಾಸಿನಲ್ಲಿ ಸ್ಥಾಪಿಸಿದರು.*
1664ರಲ್ಲಿ	*ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಫ್ರಾನ್ಸ್‌ನಲ್ಲಿ ಸ್ಥಾಪನೆಗೊಂಡಿತು.*

ಅಭ್ಯಾಸಗಳು

I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ.

1. 17ನೆಯ ಶತಮಾನದ ಭಾರತದಲ್ಲಿ ಯುರೋಪಿನ ವ್ಯಾಪಾರವು __________ ಏಕಸ್ವಾಮ್ಯತೆಗೆ ಒಳಪಟ್ಟಿತ್ತು.
2. ಮೊದಲನೆಯ ಕರ್ನಾಟಿಕ್ ಯುದ್ಧವು ಇಂಗ್ಲಿಷರು ಮತ್ತು __________ ರ ನಡುವೆ ನಡೆಯಿತು.

3. ಫ್ರೆಂಚರನ್ನು ವಾಂಡಿವಾಷ್ ಕದನದಲ್ಲಿ ಸೋಲಿಸಿದ ಇಂಗ್ಲಿಷ್ ಸೇನಾಧಿಕಾರಿ ________ .
4. ಪ್ಲಾಸಿಕದನದಲ್ಲಿ ಇಂಗ್ಲಿಷ್ ಸೇನೆಯ ನೇತೃತ್ವ ವಹಿಸಿದ್ದವನು ____________ .
5. ಬಂಗಾಳದಲ್ಲಿ ದ್ವಿ–ಸರ್ಕಾರವನ್ನು ಜಾರಿಗೆ ತಂದವನು ____________ .

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :

1. ಪ್ರಾರಂಭದಲ್ಲಿ ಭಾರತದೊಂದಿಗೆ ಯುರೋಪಿಯನ್ನರ ವ್ಯಾಪಾರ ಹೇಗೆ ನಡೆಯುತ್ತಿತ್ತು ?
2. "ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ." ಈ ಹೇಳಿಕೆಯನ್ನು ಸಮರ್ಥಿಸಿ.
3. ಕರ್ನಾಟಿಕ್ ಯುದ್ಧಗಳು ಇಂಗ್ಲಿಷರು ಭಾರತದಲ್ಲಿ ನೆಲೆಯೂರಲು ಹೇಗೆ ಸಹಾಯಕವಾದವು ಎಂಬುದನ್ನು ವಿವರಿಸಿ.
4. ಪ್ಲಾಸಿಕದನದ ಫಲಿತಾಂಶಗಳೇನು ?
5. ದ್ವಿ–ಸರ್ಕಾರ ಪದ್ಧತಿಯನ್ನು ವಿವರಿಸಿ.

III. ಯೋಜನೆ

1. ವೈಜ್ಞಾನಿಕ ಬೆಳವಣಿಗೆಯು ಪ್ರಪಂಚದಲ್ಲಿ ಅನೇಕ ಬದಲಾವಣೆಗಳನ್ನು ತಂದಿದ್ದು, ಇವುಗಳ ಬಗ್ಗೆ ಮಿತ್ರರೊಂದಿಗೆ ಚರ್ಚಿಸಿ ವರದಿ ಸಿದ್ಧಪಡಿಸಿ.
2. ಶಿಕ್ಷಕರ ನೆರವಿನಿಂದ ಅಂತರ್ಜಾಲದಲ್ಲಿ ಸಮುದ್ರ ಮಾರ್ಗಗಳ ಬಗ್ಗೆ ಮಾಹಿತಿ ತಿಳಿಯಿರಿ.

ಅಧ್ಯಾಯ – 2

ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳ ಹಂಚಿಕೆ.*
- *ವಸಾಹತು ಆಳ್ವಿಕೆಯ ವಿರುದ್ಧ ಮೈಸೂರು ಪ್ರಾಂತ್ಯದ ಪ್ರತಿಭಟನೆ.*
- *ವಸಾಹತು ವಿರೋಧಿಸಿ ಹೈದರಾಬಾದ್–ಕರ್ನಾಟಕ ಭಾಗದ ಪ್ರತಿಭಟನೆ.*
- *ಮದ್ರಾಸ್ – ಕರ್ನಾಟಕ ಭಾಗದ ಪ್ರತಿಭಟನೆ.*
- *ಮುಂಬೈ – ಕರ್ನಾಟಕ ಭಾಗದ ಪ್ರತಿಭಟನೆ.*
- *ಕೊಡಗು ಭಾಗದ ಪ್ರತಿಭಟನೆ.*

ಮೊಘಲ್ ಸಾಮ್ರಾಜ್ಯದ ಪತನದ ನಂತರ 18ನೆಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಸಣ್ಣ ಸಣ್ಣ ಪ್ರಾದೇಶಿಕ ಶಕ್ತಿಗಳಲ್ಲಿ ಮೈಸೂರು, ಮರಾಠರು, ಹೈದರಾಬಾದ್‌ನ ನಿಜಾಮರು ಮತ್ತು ಕರ್ನಾಟಿಕ್‌ನ ನವಾಬರು ದಕ್ಷಿಣದಲ್ಲಿ ಪ್ರಮುಖರು. ಇದೇ ಸಂದರ್ಭದಲ್ಲಿ ಭಾರತವನ್ನು ಪ್ರವೇಶಿಸಿದ ಯುರೋಪಿಯನ್ ವಸಾಹತುಶಾಹಿ ಶಕ್ತಿಗಳು ಈ ದೇಶೀಯ ಶಕ್ತಿಗಳ ವಿರುದ್ಧ ಪ್ರಾಬಲ್ಯಕ್ಕಾಗಿ ಕಾದಾಡಬೇಕಾಯಿತು. ಇದರ ನಡುವೆ ದೇಶೀಯ ಶಕ್ತಿಗಳು ಪರಮಾಧಿಕಾರಕ್ಕಾಗಿ ತಮ್ಮ ತಮ್ಮ ನಡುವೆಯೂ ಸಹ ಹೋರಾಟ ನಡೆಸಿದ ಕಾಲವದು. ಈ ಸಂದರ್ಭದಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು ಬೇರೆ ಬೇರೆ ಪ್ರಾದೇಶಿಕ ಶಕ್ತಿಗಳ ಹಿಡಿತಕ್ಕೆ ಒಳಗಾದವು. ಕೆಲವು ಪ್ರದೇಶಗಳು ಮರಾಠರ ಆಳ್ವಿಕೆಗೆ ಒಳಗಾದರೆ ಇನ್ನು ಕೆಲವು ಹೈದರಾಬಾದಿನ ನಿಜಾಮ ಮತ್ತು ಕರ್ನಾಟಿಕ್‌ನ ನವಾಬನ ಆಳ್ವಿಕೆಗೆ ಒಳಗಾದವು. ಕಾಲಾನುಕ್ರಮೇಣ ಇಂಗ್ಲಿಷರು ಈ ದೇಶೀಯ ಸಂಸ್ಥಾನಗಳ ಮೇಲೆ ಹಿಡಿತವನ್ನು ಸಾಧಿಸಿದರು. ಕನ್ನಡ ಮಾತನಾಡುವ ಕೆಲವು ಪ್ರದೇಶಗಳು ಇಂಗ್ಲಿಷರ ಮುಂಬೈ ಪ್ರೆಸಿಡೆನ್ಸಿಗೆ ಒಳಪಟ್ಟರೆ, ಇನ್ನು ಕೆಲವು ಮದ್ರಾಸ್ ಪ್ರೆಸಿಡೆನ್ಸಿ ಹಾಗೂ ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಒಳಪಟ್ಟವು. ಸ್ವತಂತ್ರ ಸಂಸ್ಥಾನವಾಗಿದ್ದ ಕೊಡಗು ರಾಜ್ಯವು ಇದೇ ಹೊತ್ತಿಗೆ ಹಾಲೇರಿ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಹೀಗೆ ಕನ್ನಡ ಮಾತನಾಡುವ ಅನೇಕ ಪ್ರದೇಶಗಳು ದೇಶೀಯ ಸಂಸ್ಥಾನಗಳ ಹಿಡಿತದಿಂದ ಜಾರಿ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟವು.

ಮೈಸೂರು

18ನೆಯ ಶತಮಾನದ ಉತ್ತರಾರ್ಧದಲ್ಲಿ ಮೈಸೂರು ರಾಜ್ಯದ ಸೈನ್ಯಾಧಿಕಾರಿ ಹೈದರಾಲಿಯು ಪ್ರವರ್ಧಮಾನಕ್ಕೆ ಬಂದದ್ದು ಮರಾಠರಿಗೆ, ಕರ್ನಾಟಿಕ್ ನವಾಬನಿಗೆ ಹಾಗೂ ಹೈದರಾಬಾದಿನ ನಿಜಾಮನಿಗೆ ಸವಾಲಾಗಿ ಪರಿಣಮಿಸಿತು. ಮರಾಠರು ಹಾಗೂ ನಿಜಾಮನು ಬ್ರಿಟಿಷರೊಂದಿಗೆ ಸೇರಿ, ಮೈಸೂರಿನ ವಿರುದ್ಧ ಹೋರಾಟ ನಡೆಸಿದರು. ನಂತರದ ಬೆಳವಣಿಗೆಯಲ್ಲಿ ನಿಜಾಮನು ಬ್ರಿಟಿಷರೊಂದಿಗೆ ಸೇರಿ ಮರಾಠರನ್ನು ವಿರೋಧಿಸಿದನು. ಹೀಗೆ ಸ್ಥಳೀಯ ರಾಜರುಗಳ ನಡುವೆ ಇದ್ದ ಹಗೆತನವನ್ನು ಬಳಸಿಕೊಂಡು ಬ್ರಿಟಿಷರು ಇವರುಗಳ ವಿರುದ್ಧ ಹಂತಹಂತವಾಗಿ ಜಯಗಳಿಸಿದರು.

1767ರಲ್ಲಿ ಮರಾಠರು ಹಾಗೂ ಹೈದರಾಬಾದಿನ ನಿಜಾಮನೊಂದಿಗೆ ಬ್ರಿಟಿಷರು ಸೇರಿ ಮೈಸೂರಿನ ಹೈದರಾಲಿಯ ಮೇಲೆ ಆಕ್ರಮಣ ನಡೆಸಿದರು. ಆದರೆ ಹೈದರಾಲಿಯು ಚಾಣಾಕ್ಷತನದಿಂದ ಮರಾಠರನ್ನು ಹಾಗೂ ಹೈದರಾಬಾದಿನ ನಿಜಾಮನನ್ನು ತನ್ನ ಕಡೆಗೆ ಒಲಿಸಿಕೊಳ್ಳುವಲ್ಲಿ ಸಫಲನಾದನು. ನಂತರ

ಹೈದರಾಲಿಯು ಬ್ರಿಟಿಷರನ್ನು ಎದುರಿಸಿ ಮುಂದೆ ಮದ್ರಾಸಿನವರೆಗೂ ತಲುಪಿದನು. ಇದರಿಂದ ಬ್ರಿಟಿಷರು 'ಮದ್ರಾಸ್ ಶಾಂತಿ ಒಪ್ಪಂದ'ಕ್ಕೆ ಸಹಿ ಹಾಕುವುದು ಅನಿವಾರ್ಯವಾಯಿತು. ಈ ಒಪ್ಪಂದದೊಂದಿಗೆ ಮೊದಲನೆ ಆಂಗ್ಲೋ–ಮೈಸೂರು ಯುದ್ಧವು ಕೊನೆಗೊಂಡಿತು. ಈ ಒಪ್ಪಂದವು ಮೂರನೆ ಶಕ್ತಿಯಿಂದ ಆಕ್ರಮಣವಾದಾಗ ಪರಸ್ಪರ ಸಹಾಯ ಮಾಡುವ ಬದ್ಧತೆಗೆ ಒಳಪಟ್ಟಿತ್ತು. ಆದರೆ ಮರಾಠರು ಮೈಸೂರಿನ ಮೇಲೆ ದಾಳಿ ಮಾಡಿದಾಗ ಇಂಗ್ಲಿಷರು ತಾವು ಮಾಡಿಕೊಂಡಿದ್ದ ಒಪ್ಪಂದದಂತೆ ಹೈದರಾಲಿಯ ಸಹಾಯಕ್ಕೆ ಬರಲಿಲ್ಲ. ಇದರಿಂದ ಬ್ರಿಟಿಷರು ನಂಬಿಕೆಗೆ ಅರ್ಹರಲ್ಲವೆಂಬ ತೀರ್ಮಾನಕ್ಕೆ ಹೈದರಾಲಿಯು ಬರಬೇಕಾಯಿತು.

ನಿಮಗಿದು ತಿಳಿದಿರಲಿ

ಹೈದರಾಲಿ :

ವಿಜಯನಗರ ರಾಜ್ಯದ ಅಸ್ತಂಗತದ ನಂತರದಿಂದಲೂ ಮೈಸೂರು ಸಂಸ್ಥಾನವು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಬಂದಿತ್ತು. ನೆಪಮಾತ್ರಕಷ್ಟೆ ಅದು ಮೊಘಲ್ ಸಾಮ್ರಾಜ್ಯದ ಅಧೀನದಲ್ಲಿತ್ತು. ನಂಜರಾಜ (ಸರ್ವಾಧಿಕಾರಿ) ಮತ್ತು ದೇವರಾಜ (ದಳವಾಯಿ) ಎಂಬ ಇಬ್ಬರು ಮಂತ್ರಿಗಳು ಅಧಿಕಾರವನ್ನೆಲ್ಲ ಕಸಿದುಕೊಂಡು ಚಿಕ್ಕಕೃಷ್ಣರಾಜರನ್ನು ನಗಣ್ಯರನ್ನಾಗಿಸಿದ್ದರು. ಹೈದಾರಾಲಿಯು ಇಂತಹ ಸಂದರ್ಭದಲ್ಲಿ ಒಬ್ಬ ಸಾಧಾರಣ ಅಧಿಕಾರಿಯಾಗಿ ಮೈಸೂರಿನ ಸೇನೆಯಲ್ಲಿ ತನ್ನ ಬದುಕನ್ನು ಪ್ರಾರಂಭಿಸಿದನು. ಹನ್ನೆರಡು ವರ್ಷಕ್ಕೂ ಹೆಚ್ಚು ಕಾಲ ಮೈಸೂರು , ಯುದ್ಧಗಳಲ್ಲಿ ಮುಳುಗಿ ಹೋಗಿದ್ದಾಗ ಆ ಅಪರೂಪದ ಅವಕಾಶವನ್ನು ಹೈದರನು ಪಡೆದುಕೊಂಡನು. ಈ ಸದಾವಕಾಶವನ್ನು ಉಪಯೋಗಿಸಿಕೊಂಡು ಕ್ರಮೇಣವಾಗಿ ಸೈನ್ಯದಲ್ಲಿ ಮೇಲುದರ್ಜೆಗೆ ಏರಿದನು. ನಂಜರಾಜನನ್ನು ಪದಚ್ಯುತಗೊಳಿಸಿ 1761ರಲ್ಲಿ ತಾನೇ ಮೈಸೂರಿನ ಮೇಲೆ ಹಿಡಿತ ಸಾಧಿಸಿಕೊಂಡನು. ದಂಗೆಯೆದ್ದ ಪಾಳೆಗಾರರನ್ನು ಹದ್ದುಬಸ್ತಿನಲ್ಲಿಟ್ಟು ಸುತ್ತಲಿನ ಪ್ರದೇಶಗಳಾದ ಬಿದನೂರು, ಸುಂಡ, ಸೆರಾ, ಕೆನರಾ ಮತ್ತು ಮಲಬಾರನ್ನು ವಶಪಡಿಸಿಕೊಂಡನು. ಈತ ಅನಕ್ಷರಸ್ತನಾಗಿದ್ದರೂ ಉತ್ತಮ ಆಡಳಿತಗಾರನಾಗಿದ್ದನು. ಈತನು ಮೈಸೂರಿನಲ್ಲಿ ಮೊಘಲರ ಕಂದಾಯ ಮತ್ತು ಆಡಳಿತವ್ಯವಸ್ಥೆಯನ್ನು ಜಾರಿಗೆ ತಂದನು. ಭಾರತದಲ್ಲಿಯೇ ಮೈಸೂರನ್ನು ಒಂದು ಪ್ರಬಲರಾಜ್ಯವಾನ್ನಾಗಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಈತನು ಧರ್ಮ ಸಹಿಷ್ಣತೆಯನ್ನು ಅನುಸರಿಸುತ್ತಿದ್ದನಲ್ಲದೆ ಮೊದಲ ದಿವಾನರಾದ ಪೂರ್ಣಯ್ಯ ಮತ್ತು ಇನ್ನಿತರ ಅಧಿಕಾರಿಗಳು ಹಿಂದೂಗಳಾಗಿದದ್ದು ವಿಶೇಷ.

ಮೈಸೂರಿನಲ್ಲಿ ಅಧಿಕಾರ ಪಡೆದ ಈತ ಪ್ರಾರಂಭದಿಂದಲೂ ಮರಾಠರು, ನಿಜಾಮರು ಮತ್ತು ಬ್ರಿಟಿಷರೊಂದಿಗೆ ನಿರಂತರ ಕದನದಲ್ಲಿದ್ದನು. ಬ್ರಿಟಿಷರ ಶಕ್ತಿಯನ್ನು ಅಡಗಿಸಿ 1769ರಲ್ಲಿ ಮದ್ರಾಸಿನವರೆಗೂ ತಲುಪಿದನು. ಎರಡನೆಯ ಆಂಗ್ಲೋ ಮೈಸೂರು ಯುದ್ಧದ ಸಂದರ್ಭದಲ್ಲಿ ಈತನು ಮರಣವನ್ನಪ್ಪಿದನು. ಇವನ ನಂತರ ಈತನ ಮಗನಾದ ಟಿಪ್ಪು ಮೈಸೂರಿನ ಸುಲ್ತಾನನಾಗಿ ಹೈದರನಂತೆಯೇ ಬ್ರಿಟಿಷರೊಂದಿಗೆ ಕಾದಾಡುತ್ತ 1799ರಲ್ಲಿ ಟಿಪ್ಪುವು ಕೊನೆಯುಸಿರುಳೆದನು.

ಮಾಹೆಯು ಫ್ರೆಂಚರ ವಸಾಹತಾಗಿದ್ದು, ಹೈದರಾಲಿಯ ನಿಯಂತ್ರಣಕ್ಕೊಳಪಟ್ಟಿತ್ತು. ಇಂಗ್ಲಿಷರು ಮಾಹೆಯನ್ನು ವಶಪಡಿಸಿಕೊಂಡದ್ದು ಎರಡನೆಯ ಮೈಸೂರು ಯುದ್ಧಕ್ಕೆ ಕಾರಣವಾಯಿತು. ಈ ಸಂದರ್ಭದಲ್ಲಿ ಮರಾಠರು ಹಾಗೂ ನಿಜಾಮನು ಇಂಗ್ಲಿಷರೊಂದಿಗೆ ಕೈಜೋಡಿಸಿದರು. 1781ರಲ್ಲಿ ಐರ್‌ಕೂಟನ ನೇತೃತ್ವದ ಇಂಗ್ಲಿಷ್ ಸೈನ್ಯವು ಹೈದರಾಲಿಯನ್ನು ಯುದ್ಧದಲ್ಲಿ ಸೋಲಿಸಿತು. ಹೈದರಾಲಿಯು ಮರಣ ಹೊಂದಿದ ಮೇಲೆ ಯುದ್ಧವನ್ನು ಅವನ ಮಗನಾದ ಟಿಪ್ಪುಸುಲ್ತಾನನು ಮುಂದುವರೆಸಿದನು. ಈ ಯುದ್ಧವು 'ಮಂಗಳೂರಿನ ಶಾಂತಿ ಒಪ್ಪಂದ'ದೊಂದಿಗೆ 1784ರಲ್ಲಿ ಕೊನೆಗೊಂಡಿತು.


ಇಂಗ್ಲಿಷರು ಟಿಪ್ಪುವನ್ನು ದಕ್ಷಿಣಭಾರತದ ಪ್ರಬಲ ವೈರಿ ಎಂದು ಪರಿಗಣಿಸಿದ್ದರು. ಟಿಪ್ಪು ಇಂಗ್ಲಿಷರ ಸ್ನೇಹಿತನಾದ ತಿರುವಾಂಕೂರಿ ರಾಜನ ಮೇಲೆ ದಾಳಿ ನಡೆಸಿದಾಗ ಇಂಗ್ಲಿಷರೊಂದಿಗಿನ ಸಂಘರ್ಷವು ಮತ್ತೆ ಆರಂಭವಾಯಿತು. ಇದೇ ಮೂರನೆ ಮೈಸೂರು ಯುದ್ಧ. 1790ರಲ್ಲಿ ಆರಂಭವಾದ ಈ ಯುದ್ಧವು



ಟಿಪ್ಪುಸುಲ್ತಾನ್

ಎರಡು ವರ್ಷಗಳ ನಂತರ 1792ರಲ್ಲಿ 'ಶ್ರೀರಂಗಪಟ್ಟಣ ಒಪ್ಪಂದ'ದೊಂದಿಗೆ ಕೊನೆಗೊಂಡಿತು. ಈ ಯುದ್ಧದಲ್ಲಿ ಟಿಪ್ಪು ತೀವ್ರವಾದ ಸೋಲನ್ನು ಅನುಭವಿಸಿದನು. ಪರಿಣಾಮವಾಗಿ ಅವನು ತನ್ನ ಅರ್ಧ ರಾಜ್ಯವನ್ನು ಬ್ರಿಟಿಷರಿಗೆ ಕೊಡುವುದರ ಜೊತೆಗೆ 330 ಲಕ್ಷ ರೂಪಾಯಿಗಳನ್ನು ಯುದ್ಧ ಪರಿಹಾರ ಧನವಾಗಿ ಬ್ರಿಟಿಷರಿಗೆ ನೀಡಬೇಕಾಯಿತು. ಅದನ್ನು ನೀಡುವವರೆಗೂ ಟಿಪ್ಪುವಿನ ಇಬ್ಬರು ಮಕ್ಕಳನ್ನು ಇಂಗ್ಲಿಷರು ಒತ್ತೆಯಾಳುಗಳಾಗಿ ಇಟ್ಟುಕೊಂಡರು. ಮೈಸೂರಿನ ಅಧೀನದಲ್ಲಿದ್ದ ತಮಿಳುನಾಡಿನ ಕೆಲವು ಪ್ರದೇಶಗಳು ಮತ್ತು ಮಲಬಾರ್ ಬ್ರಿಟಿಷರ ವಶವಾಯಿತು. ತುಂಗಭದ್ರಾವರೆಗಿನ ಪ್ರದೇಶವು ಮರಾಠರಿಗೆ ದೊರೆಯಿತು. ಬಳ್ಳಾರಿ, ಕಡಪ, ತುಂಗಭದ್ರಾ ದೋ–ಅಬ್ ಪ್ರದೇಶವು ನಿಜಾಮನಿಗೆ ದೊರೆಯಿತು.

ಟಿಪ್ಪು ನಂತರದ ಮೈಸೂರು



1798ರಲ್ಲಿ ಭಾರತಕ್ಕೆ ಗರ್ವನರ್ ಜನರಲ್ ಆಗಿ ಆಗಮಿಸಿದ ಲಾರ್ಡ್ ವೆಲ್ಲೆಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಟಿಪ್ಪುವಿನ ಮೇಲೆ ಹೇರಲು ಯತ್ನಿಸಿದನು. ಬ್ರಿಟಿಷರ ಬದ್ಧ ವೈರಿಯಾಗಿದ್ದ ಟಿಪ್ಪು ಸಹಾಯಕ ಸೈನ್ಯಪದ್ಧತಿಯನ್ನು ತಿರಸ್ಕರಿಸಿ ಯುದ್ಧ ತಯಾರಿಯನ್ನು ನಡೆಸಿದನು. ಟಿಪ್ಪುವು ಬ್ರಿಟಿಷರನ್ನು ಎದುರಿಸಲು ಮತ್ತು ತನ್ನ ರಾಜಧಾನಿಯ ರಕ್ಷಣೆಗಾಗಿ ಕ್ರಮಕೈಗೊಂಡನು. ಫ್ರೆಂಚರಿಂದ ತನ್ನ ಸೈನ್ಯಕ್ಕೆ ತರಬೇತಿ ಕೊಡಿಸಿದನು. ಟಿಪ್ಪುವು ಫ್ರಾನ್ಸ್, ಟರ್ಕಿ ಮುಂತಾದ ದೇಶಗಳನ್ನು ಸಂಪರ್ಕಿಸಿ ಸಹಾಯವನ್ನು ಪಡೆಯಲು ಯತ್ನಿಸಿದನು. ಈ ಸಮಯದಲ್ಲಿ ಬ್ರಿಟಿಷರ ಗರ್ವನರ್ ಜನರಲ್ ಲಾರ್ಡ್ ವೆಲ್ಲೆಸ್ಲಿಯು ಟಿಪ್ಪುವಿನ ವಿರುದ್ಧ ಯುದ್ಧ ಸಾರಿದನು. ಟಿಪ್ಪುವು ಏಕಾಂಗಿಯಾಗಿ ಬ್ರಿಟಿಷರನ್ನು ಎದುರಿಸಲು ನಿರ್ಧರಿಸಿದನು. 1799ರಲ್ಲಿ ಬ್ರಿಟಿಷರು ಟಿಪ್ಪುವಿನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣವನ್ನು ನಾಲ್ಕೂ ಕಡೆಯಿಂದಲೂ ಮುತ್ತಿಗೆ ಹಾಕಿದರು. ಟಿಪ್ಪುವು ವೀರಾವೇಶದಿಂದ ಹೋರಾಡಿ ರಣರಂಗದಲ್ಲಿಯೇ ಸಾವನ್ನಪ್ಪಿದನು.

ಇದನ್ನು ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧ ಎಂದು ಕರೆಯಲಾಗಿದೆ. ಇದರ ಪರಿಣಾಮವಾಗಿ ಮೈಸೂರು ರಾಜ್ಯದ ಪ್ರದೇಶವನ್ನು ಬ್ರಿಟಿಷರು ಮತ್ತು ನಿಜಾಮನು ಹಂಚಿಕೊಂಡು ಹಳೇ ಮೈಸೂರಿನ ಭಾಗವನ್ನು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಒಪ್ಪಿಸಲಾಯಿತು. ಟಿಪ್ಪುವಿನ ಹಿಡಿತದಲ್ಲಿದ್ದ ಕೊಡಗಿನ ಅನೇಕ ಪ್ರದೇಶಗಳನ್ನು ಕೊಡಗಿನ ರಾಜರಿಗೆ ನೀಡಲಾಯಿತು.

> ***ಚಟುವಟಿಕೆ :***
>
> *ಪ್ರವಾಸ ಕೈಗೊಂಡ ಸಮಯದಲ್ಲಿ ಮೈಸೂರು ಸಂಸ್ಥಾನದಲ್ಲಿನ ಐತಿಹಾಸಿಕ ಸ್ಮಾರಕಗಳನ್ನು ವೀಕ್ಷಿಸಿ ವರದಿ ಸಿದ್ಧಪಡಿಸಿ.*

ಮೈಸೂರಿನಲ್ಲಿ ಒಡೆಯರ ಆಳ್ವಿಕೆ ಕರ್ನಾಟಕ ಇತಿಹಾಸದ ಒಂದು ಮುಖ್ಯ ಅಧ್ಯಾಯ. ಯದುರಾಯ ಮತ್ತು ಕೃಷ್ಣರಾಯರಿಂದ ಪ್ರಾರಂಭವಾದ ಇವರ ಆಳ್ವಿಕೆ 1947ರವರೆಗೂ ನಡೆಯಿತು. 17ನೆಯ ಶತಮಾನದ ಆರಂಭದಲ್ಲಿ ಆಳಿದ ರಾಜ ಒಡೆಯರು ವಿಜಯನಗರದ ಪ್ರತಿನಿಧಿ ಶ್ರೀರಂಗರಾಯನನ್ನು ಸೋಲಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳತೊಡಗಿದರು. ಆನಂತರದಲ್ಲಿ ಒಡೆಯರು ಬಲಿಷ್ಠರಾದರು. ಆರಂಭಿಕ ಒಡೆಯರಲ್ಲಿ ಕಂಠೀರವ ನರಸರಾಜ ಮತ್ತು ಚಿಕ್ಕದೇವರಾಜ ಒಡೆಯರು ಪ್ರಮುಖರು. ಇವರ ಆಳ್ವಿಕೆಯಲ್ಲಿ ರಾಜ್ಯವು ವಿಸ್ತಾರಗೊಂಡು ಸರ್ವಾಂಗೀಣ ಅಭಿವೃದ್ಧಿಯನ್ನು ಕಂಡಿತು. ಮುಂದೆ ಮುಮ್ಮಡಿ ಕೃಷ್ಣರಾಜ ಒಡೆಯರು ಆಳಿದರು. ನಂತರದ ಒಡೆಯರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ರಾಜ್ಯವು ರಾಮರಾಜ್ಯ ಎಂಬ ಕೀರ್ತಿಗೆ ಪಾತ್ರವಾಯಿತು. ಒಡೆಯರ ಆಳ್ವಿಕೆಯಲ್ಲಿ ಮೈಸೂರು ರಾಜ್ಯವು ಭಾರತದ ರಾಜಸಂಸ್ಥಾನಗಳಲ್ಲಿ ಅತ್ಯಂತ ಮುಂದುವರಿದ ರಾಜ್ಯವೆಂಬ ಹೆಸರು ಪಡೆಯಿತು. ಜಯಚಾಮರಾಜ ಒಡೆಯರು ಈ ರಾಜ್ಯದ ಕೊನೆಯ ಅರಸರು.

ಹೈದರಾಬಾದ್ ಕರ್ನಾಟಕ

ಹೈದರಾಬಾದಿನ ನಿಜಾಮನ ನೇರ ಆಳ್ವಿಕೆಗೆ ಒಳಪಟ್ಟಿದ್ದ ಇಂದಿನ ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ, ಬಳ್ಳಾರಿ ಮತ್ತು ರಾಯಚೂರು ಭಾಗಗಳನ್ನು ಹೈದರಾಬಾದ್ ಕರ್ನಾಟಕ ಪ್ರದೇಶಗಳೆಂದು ಗುರುತಿಸಲಾಗಿದೆ.

ಈ ಹಿಂದೆ ಬೀದರ್ ಮೊಘಲ್ ಸಾಮ್ರಾಟ ಔರಂಗಜೇಬನ ದಖನ್ ಪ್ರಾಂತ್ಯದ ಭಾಗವಾಗಿತ್ತು. ಔರಂಗಜೇಬನ ಮರಣದ ನಂತರ ಇಡೀ ದಖನ್ ಪ್ರಾಂತ್ಯವು ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಒಳಪಟ್ಟಿತು. ಹಿಂದೆ ಹೈದರಾಬಾದಿನ ನಿಜಾಮನು ಮೊಘಲ್ ಚಕ್ರವರ್ತಿಯ ಪ್ರಾಂತೀಯ ಅಧಿಕಾರಿಯಾಗಿದ್ದನು. ಔರಂಗಜೇಬನ ನಂತರ ಬಂದ ಮೊಘಲ್ ಸಾಮ್ರಾಟರು ದುರ್ಬಲರಾದಾಗ

> ***ನಿಮಗಿದು ತಿಳಿದಿರಲಿ :***
>
> ***ಹೈದರಾಬಾದ್ ಕರ್ನಾಟಕ ಭಾಗಕ್ಕೆ ವಿಶೇಷ ಸ್ಥಾನಮಾನ.***
>
> *ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದಂತೆ ಸಂವಿಧಾನದ 371 ಜೆ ವಿಧಿಯಡಿಯಲ್ಲಿ ಇತ್ತೀಚೆಗೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ. ಇದರ ಅನ್ವಯ ಕರ್ನಾಟಕ ಸರ್ಕಾರವು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ರಚಿಸಿದೆ. ಇದರಡಿಯಲ್ಲಿ ಈ ಭಾಗಕ್ಕೆ ವಿಶೇಷವಾದ ಸೌಲಭ್ಯಗಳನ್ನು ನೀಡಲು ಸರ್ಕಾರವು ಕ್ರಮಕೈಗೊಂಡಿರುತ್ತದೆ. ಈ ಭಾಗದ ವಿದ್ಯಾರ್ಥಿಗಳಿಗೆ ರಾಜ್ಯದ ಎಲ್ಲ ಶಿಕ್ಷಣಸಂಸ್ಥೆಗಳಲ್ಲಿ ವಿದ್ಯಾಭ್ಯಾಸಕ್ಕಾಗಿ ನಿಗದಿತ ಪ್ರಮಾಣದ ಸೀಟುಗಳನ್ನು ಮೀಸಲಿಡಲಾಗಿದೆ. ರಾಜ್ಯಸರ್ಕಾರದ ನೇಮಕಾತಿಗಳಲ್ಲಿ ಈ ಪ್ರದೇಶದ ಜನರಿಗೆ ನಿಗದಿತಪ್ರಮಾಣದ ಮೀಸಲಾತಿಯನ್ನು ಕೂಡ ನಿಗದಿಪಡಿಸಲಾಗಿರುತ್ತದೆ. ಈ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗುತ್ತಿದೆ.*

> ***ಚಟುವಟಿಕೆ :***
>
> *ಹೈದರಾಬಾದ್ ಕರ್ನಾಟಕ ಭಾಗಕ್ಕೆ ಸರ್ಕಾರವು ನೀಡುತ್ತಿರುವ ವಿಶೇಷ ಸ್ಥಾನಮಾನ, ಸೌಲಭ್ಯಗಳ ಬಗ್ಗೆ ಪತ್ರಿಕೆಗಳಲ್ಲಿ ಬರುವ ಮಾಹಿತಿಗಳನ್ನು ಸಂಗ್ರಹಿಸಿ.*

ಹೈದರಾಬಾದಿನ ನಿಜಾಮನು ಸ್ವತಂತ್ರನಾದನು. ಆಗ ದಖನ್ ಪ್ರಾಂತ್ಯವೆಲ್ಲ ಅವನ ಕೈವಶವಾಯಿತು. ಇದರ ಪರಿಣಾಮವಾಗಿ ಕನ್ನಡ ಭಾಷಾ ಪ್ರದೇಶಗಳಾಗಿದ್ದ ಬೀದರ್, ಕಲಬುರಗಿ ಮತ್ತು ರಾಯಚೂರಿನ ಪ್ರದೇಶಗಳು ನಿಜಾಮನ ಆಳ್ವಿಕೆಗೆ ಒಳಪಟ್ಟವು.

ಬ್ರಿಟಿಷರು ಜಾರಿಗೊಳಿಸಿದ 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನಿಯಮವನ್ನು ದೇಶೀಯ ಸಂಸ್ಥಾನಗಳು ತೀವ್ರವಾಗಿ ಪ್ರತಿರೋಧಿಸಿದವು. ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿರಾಯಣ್ಣ ಮತ್ತಿತರರು ಈ ಪ್ರತಿಭಟನೆಯ ನಾಯಕತ್ವವನ್ನು ವಹಿಸಿಕೊಂಡಿದ್ದರು. ಇದರ ಜೊತೆಜೊತೆಗೆ ಸೂಪ, ಸುರಪುರ, ನರಗುಂದ ಮತ್ತು ದಾಂಡೇಲಿಗಳಲ್ಲಿ ಇಂಗ್ಲಿಷರ ವಿರುದ್ಧ ಪ್ರತಿಭಟನೆಗಳು ನಡೆದವು. ಈ ಪ್ರತಿಭಟನೆಗಳ ನಾಯಕತ್ವವನ್ನು ಮುಂಡರಗಿ ಭೀಮರಾವ್, ಭಾಸ್ಕರ್‌ರಾವ್ ಭಾವೆ, ಹಲಗಲಿಯ ಬೇಡರು, ರಾಜ ವೆಂಕಟಪ್ಪ ನಾಯಕ ಮತ್ತಿತರರು ವಹಿಸಿಕೊಂಡಿದ್ದರು.

> ***ನಿಮಗಿದು ತಿಳಿದಿರಲಿ :*** ***ಹಲಗಲಿ ಬೇಡರು***
>
> *ಬಾಗಲಕೋಟೆ ಜಿಲ್ಲೆ ಮುದೋಳ ತಾಲ್ಲೂಕಿನಲ್ಲಿ ಹಲಗಲಿ ಎಂಬುದು ಒಂದು ಪುಟ್ಟಗ್ರಾಮ. ಹಿಂದೆ ಇದು ಮುದೋಳ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿತು. 1857ರ ಬಂಡಾಯದ ಸಂದರ್ಭದಲ್ಲಿ ಇಂಗ್ಲಿಷರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಶಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನೊಂದನ್ನು ಜಾರಿಗೆ ತಂದರು. ಇದನ್ನು ಹಲಗಲಿಗೂ ಸಹ ಅನ್ವಯಿಸಲಾಯಿತು. ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶಕ್ಕೆ ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಇಂಗ್ಲಿಷರಿಗೆ ಒಪ್ಪಿಸಲು ಸಿದ್ಧರಿರಲಿಲ್ಲ. ಬೇಡರು ತಮ್ಮ ಪರಂಪರಾನುಗತವಾದ ಹಕ್ಕನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಇಂಗ್ಲಿಷರ ವಿರುದ್ಧ ಸಿಡಿದೆದ್ದರು. ಈ ಹೋರಾಟದಲ್ಲಿ ಹಲಗಲಿಯ ಸುತ್ತಮುತ್ತಲಿನ ಪ್ರದೇಶಗಳಾದ ಮಂಟೂರು, ಬೋದಾನಿ, ಆಲಗುಂಡಿಯ ಬೇಡರು, ಹಲಗಲಿಯ ಬೇಡರೊಂದಿಗೆ ಸೇರಿಕೊಂಡರು. ಇವರ ಬಂಡಾಯವನ್ನು ಹತ್ತಿಕ್ಕಲು ನವೆಂಬರ್‌ನಲ್ಲಿ ಇಂಗ್ಲಿಷರ ಸೇನೆ ಹಲಗಲಿ ಗ್ರಾಮವನ್ನು ತಲುಪಿತು. ಬಂಡಾಯವೆದ್ದ ಬೇಡರನ್ನು ನಿಷ್ಕಾರುಣ್ಯವಾಗಿ, ಅತ್ಯಂತ ದಮನಕಾರಿಯಾಗಿ ಇಂಗ್ಲಿಷರು ಹತ್ತಿಕ್ಕಿದರು. ಬಂಡಾಯಗಾರರನ್ನು ಗಲ್ಲಿಗೇರಿಸುವುದರ ಮೂಲಕ ಈ ಬಂಡಾಯವು ಕೊನೆಗೊಂಡಿತು.*

ಮದ್ರಾಸ್ – ಕರ್ನಾಟಕ

ಕನ್ನಡ ಮಾತನಾಡುವ ಬಳ್ಳಾರಿ, ದಕ್ಷಿಣಕನ್ನಡ ಪ್ರದೇಶಗಳು 19ನೆಯ ಶತಮಾನದಲ್ಲಿ ಮದ್ರಾಸ್ ಪ್ರಾಂತ್ಯದ ಆಳ್ವಿಕೆಗೆ ಒಳಪಟ್ಟಿದ್ದವು.

ಇಕ್ಕೇರಿಯ ವೆಂಕಟಪ್ಪ ನಾಯಕನು 17ನೆಯ ಶತಮಾನದ ಪ್ರಾರಂಭದಲ್ಲಿ ದಕ್ಷಿಣ ಕನ್ನಡವನ್ನು ವಶಪಡಿಸಿಕೊಂಡನು. ತದನಂತರದಲ್ಲಿ ಈತನು ತನ್ನ ರಾಜಧಾನಿಯನ್ನು ಬಿದನೂರಿಗೆ ವರ್ಗಾಯಿಸಿದನು. 18ನೆಯ ಶತಮಾನದ ಮಧ್ಯಭಾಗದವರೆಗೂ ಈ ನಾಯಕನ ಅಧೀನದಲ್ಲಿದ್ದ ಕೆಳದಿ ದೊರೆಗಳ ಆಳ್ವಿಕೆ ಮುಂದುವರೆಯಿತು. ದಕ್ಷಿಣಕನ್ನಡದೊಂದಿಗೆ ಇಂಗ್ಲಿಷರ ಸಂಬಂಧವು 1737ರಲ್ಲಿ ಪ್ರಾರಂಭವಾಯಿತು. ಇವರು ಬಿದನೂರಿನ ರಾಜನಿಂದ ವ್ಯಾಪಾರಿ ಅನುಕೂಲವನ್ನು ಪಡೆದುದಲ್ಲದೆ, ಮೆಣಸು ಮತ್ತು ಏಲಕ್ಕಿಯ ವ್ಯಾಪಾರದಲ್ಲಿಯೂ ಏಕಸ್ವಾಮ್ಯತೆಯನ್ನು ಕೆಲವು ಪ್ರದೇಶಗಳಲ್ಲಿ ಪಡೆದುಕೊಂಡರು.

1763ರಲ್ಲಿ ಬಿದನೂರನ್ನು ವಶಪಡಿಸಿಕೊಂಡ ಹೈದರಾಲಿಯು ನಂತರ ಮಂಗಳೂರನ್ನು ವಶಪಡಿಸಿಕೊಂಡನು. ಈ ಪ್ರದೇಶವನ್ನು ಹೈದರಾಲಿಯು ನೌಕಾನೆಲೆಯಾಗಿಸಿಕೊಂಡನು. 1780ರಲ್ಲಿ ಇಂಗ್ಲಿಷರು ಹೈದರನೊಂದಿಗೆ ಯುದ್ಧ ಪ್ರಾರಂಭಿಸಿದಾಗ ಮುಂಬೈಯಿಯ ಸೇನಾಧಿಪತಿಯು ಕುಂದಾಪುರವನ್ನು ವಶಪಡಿಸಿಕೊಂಡನು. ಬಿದನೂರು ಬ್ರಿಟಿಷರ ಕೈವಶವಾದಾಗ ಟಿಪ್ಪುವಿನ ಸೈನ್ಯದ ಪ್ರವೇಶವಾಯಿತು. ಇದರ ಪರಿಣಾಮವಾಗಿ ಇಂಗ್ಲಿಷರು ಹಿಂದೆ ಸರಿಯಬೇಕಾಯಿತು. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡದ ಅನೇಕ ಪ್ರದೇಶಗಳು ಕೊಡಗಿನ ದಂಗೆಯಿಂದಾಗಿ ತತ್ತರಿಸಿದವು. ಅದೇ ವರ್ಷ ಜರುಗಿದ ವಿಭಜನೆ ಒಪ್ಪಂದದ ಅನ್ವಯ ಮಂಗಳೂರು ಇಂಗ್ಲಿಷರ ಕೈವಶವಾಯಿತು. 1862ರಲ್ಲಿ ಕುಂದಾಪುರದ ಉತ್ತರಕ್ಕಿರುವ ಪ್ರದೇಶಗಳನ್ನು ಮುಂಬೈ ಪ್ರಾಂತ್ಯಕ್ಕೆ ವರ್ಗಾಯಿಸಲಾಯಿತು ಮತ್ತು ಉಳಿದ ಭಾಗಗಳಾದ ಬಳ್ಳಾರಿ, ದಕ್ಷಿಣ ಕನ್ನಡ ಮದ್ರಾಸಿನ ಆಳ್ವಿಕೆಗೆ ಒಳಪಟ್ಟಿತು.

ಮುಂಬೈ ಕರ್ನಾಟಕ

ಬೆಳಗಾವಿ, ವಿಜಯಾಪುರ (ಬಿಜಾಪುರ), ಧಾರವಾಡ ಹಾಗೂ ಉತ್ತರಕನ್ನಡದ ಭಾಗಗಳು ಮುಂಬೈ ಪ್ರಾಂತ್ಯದ ಆಳ್ವಿಕೆಗೆ ಒಳಪಟ್ಟಿದ್ದವು.

ವಿಜಯನಗರ ರಾಜ್ಯದ ಪತನದ ನಂತರ ಕೆನರಾದ ಸ್ಥಳೀಯ ನಾಯಕರುಗಳು ಸ್ವತಂತ್ರರಾದರು. ತದನಂತರದಲ್ಲಿ ಬಿಜಾಪುರದ ಸುಲ್ತಾನರು ಸಹಜವಾಗಿ ಕೆನರಾ ಪ್ರದೇಶಗಳ ಮೇಲೆ ಅಧಿಕಾರವನ್ನು ಹೊಂದಿದರು. 1686ರಲ್ಲಿ ಬಿಜಾಪುರದ ಪತನದ ನಂತರ ಕೆನರಾ ಪ್ರದೇಶವು ಮೊಘಲರ ಅಧೀನಕ್ಕೆ ಒಳಪಟ್ಟಿತು. ನಂತರದಲ್ಲಿ ಅದು ಮರಾಠರ ಕೈವಶವಾಯಿತು. ಪರಿಣಾಮವಾಗಿ ಸೋಂದಾ ಮತ್ತು ಬಿದನೂರಿನ ನಾಯಕರು ಮೊಘಲರ ಅಧೀನರಾಗಿ ಕಪ್ಪಕಾಣಿಕೆಗಳನ್ನು ಅರ್ಪಿಸಿದರು. ಸುಮಾರು 1700ರ ನಂತರ ಮರಾಠರು ಕೆನರಾ ಪ್ರದೇಶವನ್ನು ವಶಪಡಿಸಿಕೊಂಡರು. 1763ರಲ್ಲಿ ಹೈದರಾಲಿಯು ಬಿದನೂರನ್ನು ವಶಪಡಿಸಿಕೊಂಡು ಅಪಾರ ಸಂಪತ್ತನ್ನು ಪಡೆದ ಸಂದರ್ಭದಲ್ಲಿ ಸೋಂದಾ ಮತ್ತು ಕರಾವಳಿಯನ್ನು ಸಹ ಅಧೀನಪಡಿಸಿಕೊಂಡನು. ಇದರಿಂದಾಗಿ ಮರಾಠರೊಂದಿಗೆ ವೈರತ್ವ ಕಟ್ಟಿಕೊಂಡನು. ಟಿಪ್ಪು ಇಂಗ್ಲಿಷರ ವಿರುದ್ಧ ಯುದ್ಧ ಮಾಡುತ್ತಿದ್ದ ಸಂದರ್ಭದಲ್ಲಿ ಹೊನ್ನಾವರವನ್ನು ಕಳೆದುಕೊಂಡನು. ಟಿಪ್ಪುವಿನ ಮರಣದ ನಂತರ ಸೋಂದಾವನ್ನು ಇಂಗ್ಲಿಷರು ಸ್ವಾಧೀನಪಡಿಸಿಕೊಂಡರು. ಮುಂಬೈ ಪ್ರದೇಶದೊಂದಿಗಿನ ಸಾಮಿಪ್ಯದಿಂದಾಗಿ ಸೋಂದಾವನ್ನು ಒಳಗೊಂಡಂತೆ ಕೆನರಾದ ಉತ್ತರ ಭಾಗವನ್ನು ಮುಂಬೈ ಪ್ರಾಂತ್ಯಕ್ಕೆ 1861ರಲ್ಲಿ ವರ್ಗಾಯಿಸಲಾಯಿತು. ಹೀಗಾಗಿ ಕೆನರಾದ ಭೂಭಾಗವು ಉತ್ತರಕನ್ನಡ ಮತ್ತು ದಕ್ಷಿಣಕನ್ನಡ ಪ್ರದೇಶಗಳಾಗಿ ವಿಭಜನೆಗೊಂಡವು.

ತಾಳಿಕೋಟೆ ಕದನದ ಮೊದಲೇ ಧಾರವಾಡದ ಭಾಗಗಳನ್ನು ಬಿಜಾಪುರದ ಸುಲ್ತಾನರು ವಶಪಡಿಸಿಕೊಂಡಿದ್ದರು. ಒಂದು ಕಾಲದಲ್ಲಿ ಧಾರವಾಡವು ಸಹ ಮೊಘಲರ ಅಧೀನಕ್ಕೆ ಒಳಪಟ್ಟಿತ್ತು. ನಂತರದ ಕಾಲಘಟ್ಟದಲ್ಲಿ ಹುಬ್ಬಳ್ಳಿ–ಧಾರವಾಡಗಳೆರಡು ಮರಾಠರ ಆಕ್ರಮಣಕ್ಕೆ ಒಳಗಾದವು. ಈ ಮುಂದಿನ ಬೆಳವಣಿಗೆಯಲ್ಲಿ ಹುಬ್ಬಳ್ಳಿ–ಧಾರವಾಡಗಳು ಹೈದರ್ ಮತ್ತು ಟಿಪ್ಪುವಿನ ವಶವಾದವು. ಆದರೆ ಮುಂದೆ ಮರಾಠರು ಈ ಪ್ರದೇಶಗಳನ್ನು ವಶಪಡಿಸಿಕೊಂಡು 1817ರವರೆಗೆ ತಮ್ಮ ಹಿಡಿತದಲ್ಲಿ ಇಟ್ಟುಕೊಂಡರು. ಅದೇ ವರ್ಷ ಈ ಪ್ರದೇಶಗಳು ಮರಾಠರ ಪತನದೊಂದಿಗೆ ಇಂಗ್ಲಿಷರ ವಶವಾದವು. 1836ರಲ್ಲಿ ಧಾರವಾಡದಿಂದ ಬೆಳಗಾವಿಯನ್ನು ಬೇರ್ಪಡಿಸಲಾಯಿತು. ನಂತರದ ಗಮನಾರ್ಹ ಘಟನೆಯೆಂದರೆ 1857–58ರಲ್ಲಿ ನರಗುಂದ ನಾಯಕರ ನೇತೃತ್ವದಲ್ಲಿ ಇಂಗ್ಲಿಷರ ವಿರುದ್ಧ ಪ್ರತಿಭಟನೆಯಾಯಿತು. ಇದನ್ನು ನರಗುಂದದ ಬಂಡಾಯ ಎಂದು ಕರೆಯುತ್ತಾರೆ. ಬಂಡಾಯದ ನಂತರ ನರಗುಂದವನ್ನು ಸಹ ಇಂಗ್ಲಿಷರು ಸ್ವಾಧೀನಪಡಿಸಿಕೊಂಡರು.

ಕೊಡಗು

ಸುಮಾರು ಎಂಟು ಶತಮಾನಗಳ ಕಾಲ ಕೊಡಗನ್ನು ಆಳಿದ ಚೆಂಗಾಳ್ವರು 17ನೆಯ ಶತಮಾನದ ವೇಳೆಗೆ ತಮ್ಮ ಅಧಿಕಾರವನ್ನು ಕಳೆದುಕೊಂಡರು. ನಂತರದಲ್ಲಿ ಪ್ರವರ್ಧಮಾನಕ್ಕೆ ಬಂದವರು ಹಾಲೇರಿ ಅರಸರು. ಇವರು ಅನೇಕ ನಾಯಕರನ್ನು, ಪಾಳೇಗಾರರನ್ನು ಸೋಲಿಸಿ 18ನೆಯ ಶತಮಾನದ ವೇಳೆಗೆ ತಮ್ಮ ಅಧಿಪತ್ಯವನ್ನು ಸಾರಿದರು. ಈ ಶತಮಾನದ ಕೊನೆಯ ಭಾಗದಲ್ಲಿ ಕೊಡಗು ಹೈದರ್–ಟಿಪ್ಪುವಿನ ಆಳ್ವಿಕೆಗೆ ಒಳಪಟ್ಟಿತ್ತು. ರಾಜ್ಯ ಕಳೆದುಕೊಂಡ ಹಾಲೇರಿ ಅರಸರು ಬ್ರಿಟಿಷರನ್ನು ಆಶ್ರಯಿಸಿದ್ದರು. ಟಿಪ್ಪುವಿನ ಮರಣದ ನಂತರ ಹಾಲೇರಿ ಅರಸ ವೀರರಾಜನು ಕೊಡಗಿನ ಅರಸನಾದನು. ಇವನ ಮರಣದ ನಂತರ ವಾರಸುದಾರಳಾಗಿ ಈತನ ರಾಣಿ ರಾಜ್ಯವಾಳಿದಳು. ನಂತರದಲ್ಲಿ ಲಿಂಗರಾಜನು ರಾಜ್ಯವನ್ನು ಆಳಿದನು. ಲಿಂಗರಾಜನ ನಂತರ ಚಿಕ್ಕ ವೀರರಾಜ ಅಧಿಕಾರ ಸ್ವೀಕರಿಸಿದನು. ಈತನು ಪ್ರಾರಂಭದಲ್ಲಿ ಬ್ರಿಟಿಷರ ಸಹಾಯ ಪಡೆದನು. ಈತನು ಕ್ರೂರಿಯೂ, ಪ್ರಜಾಪೀಡಕನೂ ಆಗಿದ್ದರಿಂದ ಬ್ರಿಟಿಷರು ಇವನನ್ನು ಪದಚ್ಯುತಗೊಳಿಸಿ ಗಡೀಪಾರು ಮಾಡಲಾಯಿತು. ನಂತರದಲ್ಲಿ ಈತನು ತನ್ನ ಕುಟುಂಬದವರು ಬ್ರಿಟಿಷರ ಬಳಿ ಇಟ್ಟಿದ್ದ ಠೇವಣಿಯನ್ನು ಬಿಡಿಸಿಕೊಳ್ಳಲು ಇಂಗ್ಲೆಂಡಿಗೆ ತೆರಳಿ ಅಲ್ಲಿಯೇ ಅಸುನೀಗಿದನು. ಭಾರತದ ಹೊರಗೆ ಕಾಲಿಟ್ಟ ಪ್ರಥಮ ದೇಶೀ ದೊರೆ ಈತ ಎನ್ನುವುದು ಗಮನಾರ್ಹ ಅಂಶ.

ಯಾವುದೇ ರಕ್ತಪಾತವಿಲ್ಲದೆ ಕೊಡಗು ಬ್ರಿಟಿಷರ ಕೈಸೇರಿತು. ಕೊಡಗನ್ನು ವಿಂಗಡಿಸಿ ಕೆಳಕೊಡಗು ಪ್ರದೇಶವನ್ನು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿಸಲಾಯಿತು. ಇದರಿಂದಾಗಿ ಆ ಭಾಗದ ರೈತರು ಹೆಚ್ಚಿನ ಕಂದಾಯದ ಶೋಷಣೆಗೆ ಸಿಲುಕಿದರು. ಲೇವಾದೇವಿಗಾರರಿಂದ ಸಾಲ ಪಡೆದು ಕಂದಾಯ ಪಾವತಿಸ ಬೇಕಾದ ಸ್ಥಿತಿಗೆ ತಲುಪಿದರು. ಕಂದಾಯ ಪಾವತಿ ಮಾಡದಿದ್ದರೆ ಸರ್ಕಾರವು ಹೂಡುತ್ತಿದ್ದ ನ್ಯಾಯಾಲಯದ ಖಟ್ಲೆಗಳಿಂದ, ವಕೀಲರಿಂದ ಶೋಷಣೆಗೆ ಒಳಗಾಗುತ್ತಿದ್ದರು. ಈ ಸಮಯದಲ್ಲಿ ಹಾಲೇರಿ ಅರಸರ ಹಿತಚಿಂತಕ ಸ್ವಾಮಿ ಅಪರಾಂಪರ ಎನ್ನುವ ಸಂನ್ಯಾಸಿಯು ಬ್ರಿಟಿಷರ ವಿರುದ್ಧ ರೈತರನ್ನು ಸಂಘಟಿಸಲು ಪ್ರಯತ್ನಿಸಿ ಬಂಧಿಸಲ್ಪಟ್ಟನು. ಇವನ ಅನುಯಾಯಿಯಾದ ಕಲ್ಯಾಣ ಸ್ವಾಮಿಯು ರೈತರನ್ನು ಸಂಘಟಿಸುವ ಕಾರ್ಯ ಮುಂದುವರಿಸಿ ಬ್ರಿಟಿಷರಿಗೆ ಸೆರೆಸಿಕ್ಕಿ ಗಲ್ಲಿಗೇರಿಸಲ್ಪಡುತ್ತಾನೆ. ಇದು ಸುದ್ದಿಯಾಗಲಿಲ್ಲ. ಆಗ ಪುಟ್ಟ ಬಸಪ್ಪ ಎಂಬ ನಾಯಕನನ್ನು ಕಲ್ಯಾಣ ಸ್ವಾಮಿ ಎಂದು ಬಿಂಬಿಸಿ ಹೋರಾಟಗಾರರು ಹೋರಾಟ ಮುಂದುವರಿಸಿದರು. ಅಮರಸುಳ್ಯದ ಪ್ರಭಾವಿ ರೈತ ನಾಯಕನಾದ ಕೆದಂಬಾಡಿ ರಾಮಗೌಡನು ಕಲ್ಯಾಣ ಸ್ವಾಮಿಗೆ ಆಶ್ರಯದಾತನಾಗಿ ಬ್ರಿಟಿಷರ ವಿರುದ್ಧ ಹೋರಾಟವನ್ನು ರೂಪಿಸಿದನು. 1837ರಲ್ಲಿ ಸುಳ್ಯದಿಂದ ರೈತರ ಸೈನ್ಯವು ಮಂಗಳೂರನ್ನು ಪ್ರವೇಶಿಸಿ ಅಲ್ಲಿ ವಿಜಯಧ್ವಜ ಹಾರಿಸಿತು. ಕಾಸರಗೋಡಿನಿಂದ ಮುಲ್ಕಿಯವರೆಗೆ, ಸುಳ್ಯದಿಂದ ಮಂಗಳೂರಿನವರೆಗಿನ ಪ್ರದೇಶದಲ್ಲಿ 13 ದಿನಗಳ ಕಾಲ ತಮ್ಮದೇ ಸರ್ಕಾರದ ಮೂಲಕ ರೈತ ಹೋರಾಟಗಾರರು ಆಳ್ವಿಕೆ ನಡೆಸಿದರು.

ಕೊಡಗಿನ ಒಳಗೂ ಕೂಡಾ ಗುಡ್ಡೆಮನೆ ಅಪ್ಪಯ್ಯಗೌಡನ ನೇತೃತ್ವದಲ್ಲಿ ಹೋರಾಟ ನಡೆಯಿತು. ಈ ಹೋರಾಟವನ್ನು ಬ್ರಿಟಿಷರು ತಮ್ಮ ಕೊಡಗು ದಿವಾನರ ಮೂಲಕ ಹತ್ತಿಕ್ಕಿದರು. ಮದ್ರಾಸಿನಿಂದ ಬಂದ ಸೈನ್ಯವು ಮಂಗಳೂರಿನಿಂದ ಹೋರಾಟಗಾರರನ್ನು ಹಿಮ್ಮೆಟ್ಟಿಸಿತು. ಇದನ್ನು ಬ್ರಿಟಿಷರು ದಂಗೆ ಎಂದು ಬಿಂಬಿಸಿದರು. ಹೋರಾಟದ ಪ್ರಮುಖರಲ್ಲಿ ಕೆಲವರನ್ನು ನೇಣುಹಾಕಲಾಯಿತು, ಮತ್ತೆ ಕೆಲವರನ್ನು ಬಂಧಿಸಿ ಗಡೀಪಾರು ಮಾಡಲಾಯಿತು. ಕೆಳಕೊಡಗು ಮತ್ತು ಕರಾವಳಿಯಲ್ಲಿನ ಈ ಹೋರಾಟವು 1857ರ ಸ್ವಾತಂತ್ರ್ಯ ಹೋರಾಟಕ್ಕಿಂತ ಮೊದಲೇ ಜರುಗಿತು ಎನ್ನುವುದು ಗಮನಾರ್ಹವಾದದು. ಬ್ರಿಟಿಷರು ಮತ್ತಷ್ಟು ಪ್ರಬಲರಾಗಿ ಕೊಡಗನ್ನು ಸ್ವಾತಂತ್ರ್ಯ ನೀಡುವವರೆಗೂ ಆಳಿದರು.

ಪಂದ್ಯಂಡ ಬೆಳ್ಳಿಯಪ್ಪ, ಚೆಪ್ಪುಡಿರ, ಪೂಣಚ್ಚ ಮೊದಲಾದವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮಹಾತ್ಮ ಗಾಂಧೀಜಿಯವರಿಂದ ಪ್ರಭಾವಿತರಾಗಿ ಬ್ರಿಟಿಷರ ವಿರುದ್ಧ ಸತ್ಯಾಗ್ರಹ ಕೈಗೊಳ್ಳುತ್ತಾರೆ. ಇವರನ್ನು ಬ್ರಿಟಿಷರು ಬಂಧಿಸಿದರೂ ಎದೆಗುಂದುವುದಿಲ್ಲ. ಸ್ವಾತಂತ್ರ್ಯ ಹೋರಾಟಕ್ಕಾಗಿ ರೈತರನ್ನು ಜನಸಾಮಾನ್ಯರನ್ನು ಒಗ್ಗೂಡಿಸಿ ನಡೆದ ಈ ಸತ್ಯಾಗ್ರಹ ಹೋರಾಟವು ಅವಿಸ್ಮರಣೀಯವಾಗಿದೆ.

ಅಭ್ಯಾಸಗಳು

I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

1. ಮೊದಲನೆ ಆಂಗ್ಲೋ–ಮೈಸೂರು ಯುದ್ಧ __________ ಒಪ್ಪಂದೊಂದಿಗೆ ಮುಕ್ತಾಯವಾಯಿತು.
2. ಫ್ರೆಂಚರ ವಸಾಹತು __________ .
3. ಹೈದರಾಲಿಯ ಮಗ __________ .
4. ಎಂಟು ಶತಮಾನಗಳ ಕಾಲ ಕೊಡಗನ್ನು ಆಳಿದವರು __________ .
5. 17ನೆಯ ಶತಮಾನದ ಪ್ರಾರಂಭದಲ್ಲಿ ದಕ್ಷಿಣ ಕನ್ನಡವನ್ನು __________ ನು ವಶಪಡಿಸಿಕೊಂಡನು.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ :

1. ಹೈದರಾಲಿಯು ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದನು ?
2. ಎರಡನೇ ಮೈಸೂರು ಯುದ್ಧಕ್ಕೆ ಕಾರಣವೇನು ?
3. ಶ್ರೀರಂಗಪಟ್ಟಣ ಒಪ್ಪಂದವು ಟಿಪ್ಪುವಿಗೆ ಅನಿವಾರ್ಯವಾಗಿತ್ತು. ವಿಮರ್ಶಿಸಿ.
4. ಹೈದರಾಬಾದ್ ಕರ್ನಾಟಕದ ಪ್ರದೇಶಗಳಾವುವು ?
5. ಬ್ರಿಟಿಷರು ಮತ್ತು ಇಕ್ಕೇರಿಯ ವೆಂಕಟಪ್ಪ ನಾಯಕರ ಬಾಂಧವ್ಯವನ್ನು ವಿವರಿಸಿ.
6. ಕೊಡಗಿನ ದಂಗೆಯಲ್ಲಿ ಗುಡ್ಡೇಮನೆ ಅಪ್ಪಯ್ಯಗೌಡರ ಪಾತ್ರವನ್ನು ವಿವರಿಸಿ.
7. ಮುಂಬೈ–ಕರ್ನಾಟಕವು ಹೇಗೆ ಬ್ರಿಟಿಷರ ವಶವಾಯಿತು? ವಿಶ್ಲೇಷಿಸಿ.

III. ಚಟುವಟಿಕೆಗಳು

1. ಮೈಸೂರು ಪ್ರಾಂತ್ಯದಲ್ಲಿ ಟಿಪ್ಪು ಸುಲ್ತಾನನು ಕಟ್ಟಿಸಿರುವ ದೇವಾಲಯಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

IV. ಯೋಜನೆ

1. ಹೈದರಾಬಾದ್ – ಕರ್ನಾಟಕ ಭಾಗಕ್ಕೆ ಇತ್ತೀಚೆಗೆ ನೀಡಿರುವ ವಿಶೇಷ ಸ್ಥಾನಮಾನದ ಬಗ್ಗೆ ಮಾಹಿತಿ ಸಂಗ್ರಹಿಸಿ ವರದಿ ಸಿದ್ಧಪಡಿಸಿ.

ಅಧ್ಯಾಯ – 3

ಜನಪದ ಚರಿತ್ರೆ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಚರಿತ್ರೆಯ ಮೂಲ.*
- *ಜನಸಾಮಾನ್ಯರ ಚರಿತ್ರೆ.*
- *ಮೌಖಿಕ ಚರಿತ್ರೆಯ ಅರ್ಥ.*
- *ಮೌಖಿಕ ಚರಿತ್ರೆಯ ರಚನೆ.*
- *ಮೌಖಿಕ ಚರಿತ್ರೆಯ ಮಹತ್ವ.*

ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಚರಿತ್ರೆ ಬರವಣಿಗೆಯ ಮೇಲೆ ಸಹಜವಾಗಿಯೇ ಪ್ರಭಾವ ಉಂಟಾಯಿತು. ಯಾವುದೇ ಘಟನೆಗಳನ್ನು ನಿರೂಪಿಸುವಾಗ ಚರಿತ್ರೆಕಾರ ಅದಕ್ಕೊಂದು ತಾತ್ವಿಕ ರೂಪ ಕೊಡಲು ಆರಂಭಿಸಿದ. ಅದನ್ನು ಚರಿತ್ರೆ ಎಂದು ಅರ್ಥೈಸಲಾಯಿತು. ಒಂದೊಂದು ಘಟನೆಗಳನ್ನು ತಮಗೆ ಕಂಡಂತೆ ತಮ್ಮ ಅನುಕೂಲಕ್ಕೆ ಒಗ್ಗುವಂತೆ ನಿರೂಪಿಸಲಾಯಿತು. ಉದಾಹರಣೆಗೆ ಬ್ರಿಟಿಷ್ ಬರಹಗಳು ಭಾರತೀಯರ ಸ್ವಾತಂತ್ರ್ಯ ಹೋರಾಟವನ್ನು ದಂಗೆಗಳು ಎಂದು ಬಿಂಬಿಸಿದವು. ಭಾರತೀಯರ ಬರಹಗಳು ಇದನ್ನು ಅಲ್ಲಗಳೆದು ಅವೆಲ್ಲ ಸ್ವಾತಂತ್ರ್ಯ ಹೋರಾಟ ಎಂದು ದಾಖಲಿಸಿದವು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಭಾರತೀಯರು ರೂಪಿಸಿದ ಘಟನೆಗಳು, ವಿವರಗಳು, ಸಿದ್ಧಾಂತಗಳು ಹೊಸ ಚರಿತ್ರೆ ಬರವಣಿಗೆಗೆ ನಾಂದಿಯಾದವು. ಇಷ್ಟೆಲ್ಲದರ ನಡುವೆಯೂ ಜಗತ್ತಿನಾದ್ಯಂತ ಇತಿಹಾಸಕಾರರು ಭಾವಿಸಿದಂತೆ ಚರಿತ್ರೆ ಬರವಣಿಗೆಗೆ ಪೂರಕ ಆಕರ ಮುಖ್ಯ ಎಂದು ನಂಬಿದರು. ಭಾರತೀಯ ಚರಿತ್ರೆಕಾರರು ಕೂಡ ಚರಿತ್ರೆಗೆ ಸಮರ್ಥನೀಯ ದಾಖಲೆಗಳು ಮುಖ್ಯ ಎಂದು ತಿಳಿದರು. ದಾಖಲೆಗಳಿಲ್ಲದ, ಆಕರಗಳಿಲ್ಲದ ಚರಿತ್ರೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂಬ ನಂಬುಗೆ ಈಗಲೂ ಪ್ರಭಾವಿಯಾಗಿದೆ.

ಜನಪದ ಚರಿತ್ರೆಯ ಪ್ರಾಮುಖ್ಯತೆ

ಇತ್ತೀಚಿನ ದಶಕಗಳಲ್ಲಿ ಚರಿತ್ರೆಕಾರರು ಯಾವುದೇ ದಾಖಲೆಗಳನ್ನು ಹೊಂದಿರದ ರೈತಾಪಿ ಜನರ, ಸಾಮಾನ್ಯ ಜನರ ಚರಿತ್ರೆಯನ್ನು ನಿರೂಪಿಸುವುದು ಹೇಗೆ ಎಂಬ ಜಿಜ್ಞಾಸೆಯಲ್ಲಿ ತೊಡಗಿದರು. ಸಿದ್ಧ ಚರಿತ್ರೆಯಲ್ಲಿ ಕೇವಲ ರಾಜ–ರಾಣಿಯರ ಜೀವನ, ಅವರ ರಾಜ್ಯಗಳ ನಡುವಿನ ಹೋರಾಟ ಅಥವಾ ಕೆಲವು ಮಹಾಪುರುಷರ ಜೀವನಗಾಥೆ ಬಿಟ್ಟರೆ ಉಳಿದ ಘಟನೆಗಳನ್ನು ಚರಿತ್ರೆಯಡಿಯಲ್ಲಿ ಅರ್ಥ ಮಾಡಿಕೊಳ್ಳಲು ಇರುವ ಸಮಸ್ಯೆಯನ್ನು ಮುಂದಿಟ್ಟರು. ದೇಶದ ಶೇ 70ಕ್ಕೂ ಹೆಚ್ಚಿನವರಿಗೆ ಅಕ್ಷರ ಜ್ಞಾನವಿಲ್ಲದಿದ್ದರಿಂದ ಅವರಿಗೆ ಅಕ್ಷರ ಸಂಸ್ಕೃತಿಯು ರೂಪಿಸಿದ ಇತಿಹಾಸ ಆಕರಗಳಿರಲಿಲ್ಲ. ಆದರೆ ಅವರ ಚರಿತ್ರೆಯೂ ಮುಖ್ಯವಾಗಿದ್ದರಿಂದ ಅಕ್ಷರ ಬಾರದ, ಮುಖ್ಯವಾಹಿನಿಯ ಜ್ಞಾನ ಕೇಂದ್ರಗಳಿಂದ ದೂರವಿರುವ ಅವರ ಚರಿತ್ರೆಯನ್ನು ರಚಿಸುವುದು ಚರಿತ್ರೆಕಾರರಿಗೆ ಸವಾಲಾಗಿ ಕಂಡಿತು. ಹೀಗಾಗಿ ಇತ್ತೀಚಿನ ದಶಕಗಳಲ್ಲಿ ಜನಸಾಮಾನ್ಯರ ಚರಿತ್ರೆಯನ್ನು ಗಂಭೀರವಾಗಿ ಅಧ್ಯಯನ ಮಾಡುವ ಪ್ರವೃತ್ತಿ ಹೆಚ್ಚಾಯಿತು.

> ***ಚಟುವಟಿಕೆ :***
> *ನಿಮ್ಮ ಹಿರಿಯರಿಂದ ನಿಮ್ಮೂರಿನ ಇತಿಹಾಸದ ಬಗ್ಗೆ ಮಾಹಿತಿಯನ್ನು ಮೌಖಿಕವಾಗಿ ತಿಳಿದು, ನಂತರ ನೀವು ಅದನ್ನು ಪ್ರಬಂಧವಾಗಿ ಬರೆಯಿರಿ.*

ಜನಸಾಮಾನ್ಯರ ಅದರಲ್ಲಿಯೂ ರೈತಾಪಿ ವರ್ಗಗಳ, ಕೃಷಿಕೂಲಿಕಾರರ ಚರಿತ್ರೆಯನ್ನು ಭಿನ್ನ ಬಗೆಯ ಸೈದ್ಧಾಂತಿಕತೆಯ ಹಿನ್ನೆಲೆಯಲ್ಲಿ ಅಭ್ಯಾಸ ಮಾಡುವುದು ಚರಿತ್ರೆಕಾರರಿಗೆ ಸವಾಲಾಯಿತು. ಐತಿಹಾಸಿಕ ದಾಖಲೆಗಳಿಲ್ಲದ ಜನಸಾಮಾನ್ಯರಲ್ಲಿ ಹುದುಗಿದ್ದ ನೆನಪುಗಳನ್ನು ದಾಖಲಿಸುವ ಪ್ರಯತ್ನ ಆರಂಭವಾಯಿತು. ಅವುಗಳು ಭೂತ ಹಾಗೂ ವರ್ತಮಾನಗಳಿಗೆ ಸಂಬಂಧಪಟ್ಟವಾಗಿರುತ್ತಿದ್ದವು. ಅವುಗಳಿಗೆ ಅನೇಕ ಬಾರಿ ಧಾರ್ಮಿಕ ಮನ್ನಣೆಯೂ ಇರುತ್ತಿತ್ತು. ಹೀಗಾಗಿ ಬಳ್ಳಾರಿ ಪ್ರದೇಶದ ಜನಸಾಮಾನ್ಯರಲ್ಲಿ ಕೃಷ್ಣದೇವರಾಯನಿಗಿಂತ ಮಿಗಿಲಾಗಿ ಜನರ ಮನದಲ್ಲಿ

ಶತಮಾನಗಳಿಂದಲೂ ಬೇರುಬಿಟ್ಟ ಕುಮಾರರಾಮ ಜನಜನಿತ. ಲಕ್ಷಾಂತರ ಜನರ ಮನದಲ್ಲಿ ಕುಮಾರರಾಮ ಉಳಿದುಕೊಂಡರೂ, ಅವರ ಆರಾಧ್ಯ ದೈವವಾದರೂ, ಒಪ್ಪಿತ ಚರಿತ್ರೆಯಲ್ಲಿ ಅವನ ಬಗ್ಗೆ ಚರ್ಚೆ ವಿರಳ. ಏಕೆಂದರೆ ಪಾಶ್ಚಿಮಾತ್ಯರು ರೂಪಿಸಿದ ಚರ್ಚೆಯಲ್ಲಿ ಈ ತರ್ಕವನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಹೀಗಾಗಿಯೇ ಚರಿತ್ರೆಕಾರರು ಮೌಖಿಕ ಆಕರಗಳನ್ನು ಜನಸಾಮಾನ್ಯರ ಚರಿತ್ರೆಯನ್ನು ರೂಪಿಸಲು ಆಶ್ರಯಿಸುತ್ತಾರೆ. ಇಂತಹ ಆಕರಗಳಿಂದ ರೂಪುಗೊಂಡ ಚರಿತ್ರೆಯನ್ನು ಜನಪದ ಚರಿತ್ರೆ ಎಂದು ಕರೆಯುತ್ತಾರೆ.

ಜನಪದ ಚರಿತ್ರೆಯ ಸ್ವರೂಪ ಮತ್ತು ಲಕ್ಷಣಗಳು

ಐತಿಹ್ಯ, ಲಾವಣಿ, ಜನಪದಗೀತೆ, ಕಾವ್ಯಗಳನ್ನು ಅಧ್ಯಯನ ಮಾಡುವ ಮೂಲಕ ಸಮಾಜದ ಸಂಪ್ರದಾಯ, ನಡಾವಳಿ ಇತ್ಯಾದಿಗಳನ್ನು ಅಭ್ಯಸಿಸುವ ಮೂಲಕ ಮೌಖಿಕ ಚರಿತ್ರೆಯನ್ನು ಚರಿತ್ರೆಕಾರರು ರಚಿಸುತ್ತಿದ್ದಾರೆ. ಭಾವನಾತ್ಮಕವಾದ, ಅತಿಮಾನುಷವಾದ, ಸೃಜನಶೀಲತೆಯಿಂದ ಕೂಡಿರುವ ಬಹುತೇಕ ಜನಪದ ಆಕರಗಳು ಇಂದು ಚರಿತ್ರೆಕಾರರಿಗೆ ವರಪ್ರಸಾದವಾಗಿವೆ . ಆ ಮೂಲಕ ಗ್ರಾಮ ಗ್ರಾಮಗಳ ಚರಿತ್ರೆಯನ್ನು, ಪ್ರಾದೇಶಿಕ ಚರಿತ್ರೆಯನ್ನು, ರೈತಾಪಿ ಜನರ ಚರಿತ್ರೆಯನ್ನು ದಾಖಲಿಸಲಾಗುತ್ತದೆ. ಇದರಿಂದ ಸ್ಥಳೀಯ ಚರಿತ್ರೆಯ ವಿವಿಧ ಮಜಲುಗಳನ್ನು ಅರ್ಥಮಾಡಿಕೊಳ್ಳಲು ಸುಲಭವಾಗುತ್ತದೆ. ಕೆಲವೊಮ್ಮೆ ಈ ಬಗೆಯ ಚರಿತ್ರೆಯು ಪ್ರಚಲಿತದಲ್ಲಿರುವ ಚರಿತ್ರೆಗೆ ಸಂವಾದಿಯಾಗಿದ್ದರೆ, ಅನೇಕ ಬಾರಿ ಅವುಗಳನ್ನು ಪ್ರಶ್ನೆ ಮಾಡುವ ಸ್ವರೂಪದಲ್ಲಿರುತ್ತದೆ. ಇಲ್ಲಿ ದಾಖಲೆಗಳಿಗಿಂತ ಸಂವೇದನೆಯೇ ಮುಖ್ಯ ಪಾತ್ರವನ್ನು ವಹಿಸುತ್ತದೆ. ಅಕ್ಷರ ಬಾರದ ಬಹುತೇಕ ಸಮುದಾಯಗಳ ಚರಿತ್ರೆ ರೂಪಿಸಲು ಸಂವೇದನೆ ನೆರವಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಯುರೋಪಿನ್ನರ ಹಿಡಿತದಿಂದ ಪಾರಾದ ಆಫ್ರಿಕನ್ ಸಮುದಾಯಗಳಿಗೆ ಸಿದ್ಧ ಮಾದರಿಯ ಚರಿತ್ರೆ ಇರಲಿಲ್ಲ. ಆದರೆ ಮೌಖಿಕ ಪರಂಪರೆಯ ಮೂಲಕ, ಸಮುದಾಯಗಳು ವ್ಯಕ್ತಪಡಿಸುವ ಸಂವೇದನೆಗಳ ಸಹಾಯದಿಂದ ಆಫ್ರಿಕನ್ ಚರಿತ್ರೆಯನ್ನು ಆಫ್ರಿಕನ್ನರ ದೃಷ್ಟಿಕೋನದಲ್ಲಿ ಬರೆಯುವ ಪ್ರಯತ್ನ ಸಫಲವಾದದ್ದನ್ನು ಇಲ್ಲಿ ಗಮನಿಸಬಹುದಾಗಿದೆ.

ಪಾಶ್ಚಿಮಾತ್ಯರಿಂದ ತೀವ್ರವಾಗಿ ಪ್ರಭಾವಕ್ಕೆ ಒಳಗಾದ ಚರಿತ್ರೆ ಬರವಣಿಗೆಯು ಸರಳ ರೇಖಾತ್ಮಕ ಕಾಲದ ಮಾದರಿಯನ್ನು ಹೊಂದಿದೆ. ಹೀಗಾಗಿ ಆ ಮಾದರಿಯ ಚರಿತ್ರೆಯಲ್ಲಿ ಒಂದನೇ ಇಸವಿ ಆದ ಮೇಲೆ ಎರಡನೆಯ ಇಸವಿ ಬರಬೇಕು. 17ನೆಯ ಶತಮಾನದ ಘಟನೆಯ ನಂತರವೇ 18ನೆಯ ಶತಮಾನದ ಘಟನೆಯ ಬಗ್ಗೆ ಬರೆಯಬೇಕು. ಭಾರತೀಯ ಪರಂಪರೆಯಲ್ಲಿ ಇದಕ್ಕೆ ಹೊರತಾದ ನೋಟವಿದೆ. ಅದು ಚರಿತ್ರೆಯನ್ನು ಚಕ್ರದೋಪಾದಿಯಾಗಿ ನೋಡುತ್ತದೆ. ಅದನ್ನು ಕಾಲಚಕ್ರವೆಂದೂ ಕರೆಯುವುದುಂಟು. ಆ ಕಾಲಚಕ್ರಕ್ಕೆ ಕೊನೆ ಎಂಬುದೇ ಇರುವುದಿಲ್ಲ. ಒಂದು ಕಾಲಚಕ್ರದ ಆವರ್ತನ ಮುಗಿದ ಮೇಲೆ ಇನ್ನೊಂದು ಕಾಲಚಕ್ರದ ಆವರ್ತನ ಆರಂಭವಾಗುತ್ತದೆ. ಇದನ್ನು ಯುಗ ಎಂದು ಅರ್ಥೈಸುವುದುಂಟು. ಹೀಗಾಗಿ ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗಗಳ ಮೂಲಕ ಚರಿತ್ರೆಯನ್ನು ಅಭ್ಯಸಿಸುವುದುಂಟು.

ಭಾರತೀಯ ಪರಂಪರೆಯಲ್ಲಿ ಮತ್ತು ಜನಪದರಲ್ಲೂ ಚಕ್ರದೋಪಾದಿಯಾದ ನೋಟಗಳಿವೆ. ಈ ನೋಟಗಳನ್ನು ವ್ಯಾಖ್ಯಾನ ಮಾಡಿ ಅವುಗಳನ್ನು ಚರಿತ್ರೆಯ ಬರವಣಿಗೆಯಲ್ಲಿ ಬಳಸಿಕೊಳ್ಳುವ ಬಗೆ, ಕ್ರಮ ವೈಜ್ಞಾನಿಕವಾಗಿರಬೇಕು. ಮಾನವನ ಸಮಾಜವನ್ನು ಪ್ರಗತಿಯತ್ತ ಕರೆದೊಯ್ಯಬೇಕು. ಸರಳ ರೇಖಾತ್ಮಕ ಮಾದರಿ ವೈಜ್ಞಾನಿಕವಾದರೂ ಅದು ಬಂಡವಾಳಶಾಹಿ ಯುರೋಪ್ಯ ಸಮಾಜದಲ್ಲಿ ಬಂದಿರುವಂತಹದ್ದು. ಈ ಮಾದರಿಯ ಚರಿತ್ರೆಯ ದೃಷ್ಟಿಕೋನ ಭಾರತೀಯರಿಗೆ ಕಾಲಗಣನೆ ಮತ್ತು ಚಾರಿತ್ರಿಕ ಪ್ರಜ್ಞೆಯಿರಲಿಲ್ಲವೆಂದು ತೀರ್ಮಾನಿಸುತ್ತದೆ. ಆರಂಭದಲ್ಲಿ ಭಾರತದ ಚರಿತ್ರೆಯನ್ನು ರಚಿಸಿದ ಪೌರಾತ್ಯ ಪಂಥ, ತದ ನಂತರದ ವಸಾಹತುಶಾಹಿ ಪಂಥದ ಇತಿಹಾಸಕಾರರು, ಈ ದೃಷ್ಟಿಕೋನದಲ್ಲೆ ಭಾರತೀಯರಿಗೆ, ತಮ್ಮನ್ನು ಚರಿತ್ರೆಯಲ್ಲಿ ದಾಖಲಿಸಿಕೊಳ್ಳುವ ಸಾಮರ್ಥ್ಯವಿಲ್ಲವೆಂದು ಅಭಿಪ್ರಾಯಪಟ್ಟರು. ಹೀಗೆ ಕಾಲಗಣನೆ ಮತ್ತು ಚಾರಿತ್ರಿಕ

ಪ್ರಶ್ನೆಯಿಲ್ಲದ ಭಾರತೀಯ ಸಮಾಜಕ್ಕೆ ಬ್ರಿಟಿಷ್ ಆಳ್ವಿಕೆ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು. ಬ್ರಿಟಿಷ್ ಆಳ್ವಿಕೆಯನ್ನು ಸಮರ್ಥಿಸಿದ ಸರಳ ರೇಖಾತ್ಮಕ ಮಾದರಿ ದೃಷ್ಟಿಕೋನವನ್ನು ಮಾರ್ಕ್ಸವಾದಿ ವಿಚಾರಗಳಿಂದ ಪ್ರಭಾವಿತರಾದ ಎಡಪಂಥೀಯ ಇತಿಹಾಸಕಾರರು, ಮುಖ್ಯವಾಗಿ ರೋಮಿಲಾ ಥಾಫರ್‌ರವರು ಭಾರತೀಯರಲ್ಲಿ ಚರಿತ್ರೆಯನ್ನು ಚಕ್ರದೋಪಾದಿಯಾಗಿ ನೋಡುವ ಕ್ರಮವಿತ್ತೆಂದು ಸಾದರಪೂರ್ವಕವಾಗಿಯೇ ಪುರಾಣಗಳನ್ನು ಉಲ್ಲೇಖಿಸಿ ನಿರೂಪಿಸಿದ್ದಾರೆ.

ಜನಪದರಲ್ಲೂ ಕೂಡ ಜನಪದಗೀತೆ, ಕಾವ್ಯ, ಲಾವಣಿ ಇನ್ನಿತರ ಜನಪದ ಆಕರಗಳಲ್ಲಿ ಯುಗಗಳ ಕಲ್ಪನೆಯ ಮೂಲಕ ಚಕ್ರದೋಪಾದಿಯಾದ ಚಾರಿತ್ರಿಕ ನೋಟ ಅಸ್ತಿತ್ವದಲ್ಲಿದೆ.

ಇಂತಹ ಸಂದರ್ಭಗಳಲ್ಲಿ ಅನೇಕ ಹೊಸ ಘಟನೆಗಳು, ಹೊಸ ಅವತಾರಗಳು ಇಲ್ಲಿ ಸೇರಿಹೋಗುವುದುಂಟು. ಅವು ಕಾಲದಿಂದ ಕಾಲಕ್ಕೆ ಪರಿಷ್ಕಾರ ಆಗುತ್ತಿರುತ್ತವೆ. ಇಲ್ಲಿ ಮೌಖಿಕ ಆಕರಗಳು ಅನೇಕ ಬಾರಿ ಸಂದರ್ಭಾನುಸಾರ ಹಿಗ್ಗುತ್ತವೆ, ಮಾರ್ಪಾಡಾಗುತ್ತವೆ ಮತ್ತು ಅನೇಕ ಬಾರಿ ಕೆಲವು ವ್ಯಕ್ತಿಗಳು ಕಾಲವನ್ನು ಮೀರಿರುವುದುಂಟು. ಒಪ್ಪಿತ ಚರಿತ್ರೆಯಲ್ಲಿ ಅವರ ಅಂತ್ಯ ಯಾವತ್ತೋ ಆಗಿದ್ದರೂ ಮೌಖಿಕ ಪರಂಪರೆಯಲ್ಲಿ ಅವರಿಗೆ ಅಂತ್ಯವಿರುವುದಿಲ್ಲ. ಈ ಸೂಕ್ಷ್ಮಗಳನ್ನು ಅರಿತುಕೊಂಡು ಆಧುನಿಕ ಚರಿತ್ರೆಕಾರ ಇತಿಹಾಸ ಲೇಖನವನ್ನು ಹರಿತಗೊಳಿಸುತ್ತಾನೆ. ಈ ಎಲ್ಲ ಸಂದರ್ಭದಲ್ಲಿ ಮೌಖಿಕ ಆಕರಗಳು ಚರಿತ್ರೆಯನ್ನು ರೂಪಿಸಲು ಸಹಾಯವಾಗುತ್ತದೆ.

ಅಭ್ಯಾಸಗಳು

I. ಖಾಲಿ ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ.

1. ಬಳ್ಳಾರಿ ಪ್ರದೇಶದ ಜನಸಾಮಾನ್ಯರಲ್ಲಿ ಕೃಷ್ಣದೇವರಾಯನಿಗಿಂತ ಹೆಚ್ಚು ಜನಜನಿತವಾಗಿರುವ ರಾಜ __________ .
2. ಜನಪದ ಆಕರಗಳು __________ ರಿಗೆ ವರಪ್ರಸಾದವಾಗಿವೆ.
3. ಚರಿತ್ರೆಯನ್ನು ಚಕ್ರದೋಪಾದಿಯಲ್ಲಿ ನೋಡುವುದನ್ನು __________ ಎಂದು ಕರೆಯುತ್ತೇವೆ

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ :

1. ಬ್ರಿಟಿಷರ ಆಗಮನದಿಂದ ಚರಿತ್ರೆಯ ಬರವಣಿಗೆಯ ಮೇಲಾದ ಪ್ರಭಾವಗಳೇನು ?
2. ಚರಿತ್ರೆಯನ್ನು ಸೈದ್ಧಾಂತಿಕತೆಯ ಹಿನ್ನೆಲೆಯಲ್ಲಿ ಅಭ್ಯಸಿಸುವುದು ಸವಾಲು ವಿಶ್ಲೇಷಿಸಿ.
3. ಚರಿತ್ರೆ ಬರವಣಿಗೆಯ ರೇಖಾತ್ಮಕ ಮಾದರಿಯನ್ನು ವಿವರಿಸಿ.
4. ಮೌಖಿಕ ಆಕರಗಳಿಂದ ಚರಿತ್ರೆ ಬರವಣಿಗೆಯನ್ನು ಹೇಗೆ ನಿರೂಪಿಸಬಹುದು ?

III. ಯೋಜನೆ

1. ಹಿರಿಯರೊಂದಿಗೆ ಕಾಲಚಕ್ರದಲ್ಲಾದ ಅನುಭವಗಳನ್ನು ಕೇಳಿ ನಿಮ್ಮ ಸುತ್ತಲಿನ ಸನ್ನಿವೇಶಗಳ ಬಗ್ಗೆ ನಿಮ್ಮದೇ ರೀತಿಯಲ್ಲಿ ಚರಿತ್ರೆ ಬರೆಯಿರಿ.
2. ಶಾಲೆಗೆ ಇತಿಹಾಸಕಾರರನ್ನು ಆಹ್ವಾನಿಸಿ ಚರಿತ್ರೆಯನ್ನು ನಿರೂಪಿಸುವ ಕ್ರಮದ ಬಗ್ಗೆ ಸಂವಾದ ನಡೆಸಿ.
3. ಅಂತರ್ಜಾಲದ ನೆರವಿನಿಂದ ಇತಿಹಾಸ ಬೆಳೆದು ಬಂದ ದಾರಿಯನ್ನು ತಿಳಿಯಿರಿ.

ಅಧ್ಯಾಯ – 4

ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಸಹಾಯಕ ಸೈನ್ಯ ಪದ್ಧತಿ.*
- *ಆಂಗ್ಲೋ–ಮರಾಠ ಯುದ್ಧಗಳು.*
- *ಆಂಗ್ಲೋ–ಸಿಖ್ ಯುದ್ಧಗಳು.*
- *ಇಂಗ್ಲಿಷರು ಜಾರಿಗೆ ತಂದ ಕೆಲವು ಶಾಸನಗಳು.*
- *ಸಂವಿಧಾನದ ಬೆಳವಣಿಗೆಯ ಪೂರಕ ಅಂಶಗಳು.*

ಹತ್ತೊಂಬತ್ತನೆಯ ಶತಮಾನದ ಪ್ರಾರಂಭದ ಅವಧಿಯಲ್ಲಿ ಇಂಗ್ಲಿಷರು ತಮ್ಮ ಅಧಿಪತ್ಯವನ್ನು ಭಾರತದಲ್ಲಿ ಸ್ಥಾಪಿಸುವುದು ನಿಶ್ಚಿತವಾಗಿತ್ತು. ಅವರು ದೇಶೀಯ ಶಕ್ತಿಗಳ ವಿರುದ್ಧ ತಮ್ಮ ಆಕ್ರಮಣಕಾರಿ ಹೋರಾಟವನ್ನು ಮುಂದುವರಿಸಿದ್ದರು. ಆಗ ಗರ್ವನರ್ ಜನರಲ್ ಆಗಿ ಬಂದಂತಹ ಲಾರ್ಡ್‌ವೆಲ್ಲೆಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದನು. ಈ ನೀತಿಯು ಇಂಗ್ಲಿಷರು ದೇಶೀಯ ರಾಜರುಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿತು.

ಮೈಸೂರು ಪ್ರಾಂತ್ಯವನ್ನು ಸಹಾಯಕ ಸೈನ್ಯ ಪದ್ಧತಿಗೆ ತರುವ ಪ್ರಯತ್ನ ನಡೆಯಿತು. ಬ್ರಿಟಿಷರ ಆಕ್ರಮಣ ನೀತಿಯನ್ನು ವಿರೋಧಿಸಿದ ಟಿಪ್ಪುವಿಗೂ ಬ್ರಿಟಿಷರಿಗೂ ಘರ್ಷಣೆಗಳು ಅನಿವಾರ್ಯವಾದವು. ಟಿಪ್ಪುವಿನ ಮರಣದ ನಂತರ ಒಡೆಯರ ರಾಜ್ಯವನ್ನು ಅವರಿಗೆ ಹಿಂದಿರಿಗಿಸಿ ಉಳಿದ ಭಾಗವನ್ನು ಬ್ರಿಟಿಷರು, ಮರಾಠರು ಮತ್ತು ನಿಜಾಮರು ತಮ್ಮಲ್ಲೇ ಹಂಚಿಕೊಂಡರು.

> ***ನಿಮಗಿದು ತಿಳಿದಿರಲಿ :***
>
> ***ಸಹಾಯಕ ಸೈನ್ಯ ಪದ್ಧತಿ :***
>
> *ಸಹಾಯಕ ಸೈನ್ಯ ಪದ್ಧತಿಯಂತೆ ಬೇರೆ ರಾಜ್ಯಗಳೊಡನೆ ಯುದ್ಧ ಅಥವಾ ಒಪ್ಪಂದ ಮಾಡಿಕೊಳ್ಳುವಂತಿರಲಿಲ್ಲ. ಇಂಗ್ಲೀಷ್ ಸೈನ್ಯದ ತುಕಡಿಯನ್ನು ಇಟ್ಟುಕೊಂಡು ಅದನ್ನು ಸಂಪೂರ್ಣವಾಗಿ ಸಾಕಬೇಕಿತ್ತು. ರೆಸಿಡೆಂಟನನ್ನು ನೇಮಿಸಿ ಆಂತರಿಕ ವ್ಯವಹಾರಗಳನ್ನು ಕಂಪನಿಯು ನಿಯಂತ್ರಿಸುತ್ತಿತ್ತು. ಈ ನೀತಿಯ ಮೊದಲ ಅನುಪಾಲಕ ಹೈದರಾಬಾದಿನ ನಿಜಾಮ. ಇಂಗ್ಲಿಷರ ದೊಡ್ಡ ಸೈನ್ಯವನ್ನು ದೇಶೀಯ ಅರಸರ ವೆಚ್ಚದಲ್ಲಿ ನಿರ್ವಹಿಸುವ ಉದ್ದೇಶವನ್ನು ಈ ಪದ್ಧತಿಯು ಹೊಂದಿತ್ತು.*

ಪೇಶ್ವೆ ನಾರಾಯಣರಾವ್‌ನ ನಂತರದ ಉತ್ತರಾಧಿಕಾರತ್ವಕ್ಕಾಗಿ ಮರಾಠರಲ್ಲಿ ಒಳಜಗಳ ಪ್ರಾರಂಭವಾಯಿತು. ರಘುನಾಥರಾವ್‌ನನ್ನು ಪಟ್ಟಕ್ಕೇರಿಸದೆ ನಾನಾಪಡ್ನವೀಸನು ಬಾಲಕನಾಗಿದ್ದ ಎರಡನೇ ಪೇಶ್ವ ಮಾಧವರಾವ್‌ನನ್ನು ಬೆಂಬಲಿಸಿದನು. ರಘುನಾಥ ರಾವ್ ಬ್ರಿಟಿಷರ ಬೆಂಬಲ ಕೋರಿದಾಗ ಇದನ್ನು ಬ್ರಿಟಿಷರು ತಮ್ಮ ಅನುಕೂಲಕ್ಕೆ ಉಪಯೋಗಿಸಿಕೊಂಡು ಯುದ್ಧ ನಡೆಸಿ, ಪ್ರಾರಂಭದಲ್ಲಿ ಸೋತರೂ ಕೂಡಾ ಅಹಮದಾಬಾದನ್ನು ವಶಪಡಿಸಿಕೊಂಡರು. ನಂತರ ಸಾಲ್‌ಬಾಯಿ ಒಪ್ಪಂದ ಏರ್ಪಟ್ಟು ಮಾಧವರಾವನನ್ನು ಪೇಶ್ವೆಯಾಗಿ ನೇಮಿಸಲಾಯಿತು. ಇದು ಮೊದಲನೆಯ ಆಂಗ್ಲೋ – ಮರಾಠ ಯುದ್ಧವಾಗಿದೆ.

ಮರಾಠ ನಾಯಕರ ಆಂತರಿಕ ಯುದ್ಧಗಳು ಎರಡನೇ ಆಂಗ್ಲೋ–ಮರಾಠ ಯುದ್ಧಕ್ಕೆ ನಾಂದಿಯಾದವು. ಹೋಳ್ಕರ್ ವಿರುದ್ಧ ಸಿಂಧಿಯಾ ಮತ್ತು ಎರಡನೇ ಪೇಶ್ವೆ ಬಾಜಿರಾವ್ ಒಂದಾಗಿ ಯುದ್ಧ ನಡೆಸಿದಾಗ ಹೋಳ್ಕರ್ ಅವರನ್ನು ಸೋಲಿಸಿದನು. ಆಗ ಪೇಶ್ವೆ ಬ್ರಿಟಿಷರ ಸಹಾಯ ಯಾಚಿಸಿದಾಗ ಎರಡನೇ ಆಂಗ್ಲೋ–ಮರಾಠ ಯುದ್ದವು ನಡೆಯಿತು. ಪೇಶ್ವೆ ಎರಡನೇ ಬಾಜಿರಾವ್‌ನು ಬಸ್ಸಿನ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ದತಿಯನ್ನು ಒಪ್ಪಿದನು.

ಮರಾಠರು ಸ್ವಾತಂತ್ರ್ಯ ಪಡೆಯಲು ಸಾಹಸ ನಡೆಸಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿದರು. ಮಾಧವ ರಾವ್ ಹೋಳ್ಕರ್ ಯುದ್ಧ ಸಿದ್ಧತೆ ನಡೆಸಿದನು. ಇದು ಮೂರನೇ ಆಂಗ್ಲೋ–ಮರಾಠ ಯುದ್ಧಕ್ಕೆ ನಾಂದಿಯಾಯಿತು. ಬ್ರಿಟಿಷರು ಮರಾಠರ ಸೈನ್ಯಗಳನ್ನು ಸೋಲಿಸಿದರು. ಪೇಶ್ವೆಯನ್ನು ಸಿಂಹಾಸನದಿಂದ ಇಳಿಸಿ ನಿವೃತ್ತಿ ವೇತನ ನೀಡಲಾಯಿತು. ಹೋಳ್ಕರ್ ಹಾಗೂ ಬೋಂಸ್ಲೆ ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟರು. ಈ ರೀತಿ ಬ್ರಿಟಿಷರು ತಮ್ಮ ಅಧಿಪತ್ಯ ಸ್ಥಾಪಿಸಿದರು.

ಬ್ರಿಟಿಷರು ದಕ್ಷಿಣಭಾರತದಲ್ಲಿ ಮರಾಠ ಪ್ರಾಂತ್ಯ, ಮೈಸೂರು ಪ್ರಾಂತ್ಯಗಳಲ್ಲಿ ತಮ್ಮ ಅಧಿಪತ್ಯ ಸ್ಥಾಪಿಸಿದಂತೆಯೇ ಪಂಜಾಬ್ ಪ್ರಾಂತ್ಯದಲ್ಲಿಯೂ ಅಧಿಪತ್ಯ ಸ್ಥಾಪಿಸಬಹುದಾದ ಅವಕಾಶಗಳು ಬಂದವು. ಸಿಖ್‌ರಲ್ಲಿ ಪ್ರಸಿದ್ಧ ದೊರೆ ಮತ್ತು 'ಪಂಜಾಬಿನ ಸಿಂಹ'ನೆಂದೇ ಪ್ರಸಿದ್ಧನಾಗಿದ್ದವನು ರಣಜಿತ್ ಸಿಂಗ್. ಈತನ ಕಾಲದಲ್ಲಿ ಸಿಖ್ಖರು ಅಮೃತಸರ, ಲೂಧಿಯಾನಗಳ ಮೇಲೆ ಹಿಡಿತ ಸಾಧಿಸಿದ್ದರು. ಈತನ ನಂತರ ಮಗನಾದ ದುಲೀಪ್‌ಸಿಂಗ್‌ನು ಅಧಿಕಾರಕ್ಕೆ ಬಂದನು. ಅವನ ಪ್ರಧಾನಿಯಾಗಿದ್ದ ಲಾಲ್‌ಸಿಂಗನು ಸಿಖ್ಖರ ಖಾಲ್ಸಾ ಸೈನ್ಯದೊಂದಿಗೆ ಬ್ರಿಟಿಷರ ಮೇಲೆ ಯುದ್ಧಕ್ಕಿಳಿದು ಸೋತನು. ಇದರ ಪರಿಣಾಮವಾಗಿ ದುಲೀಪ್‌ಸಿಂಗನು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಬೇಕಾಯಿತು. ಇದರಿಂದ ಅಸಮಾಧಾನಗೊಂಡ ಖಾಲ್ಸಾ ಸೈನಿಕರು ಬ್ರಿಟಿಷರ ವಿರುದ್ಧ ದಂಗೆಯೆದ್ದರು. ಮುಂದೆ ನಡೆದ ಯುದ್ಧಗಳಿಂದಾಗಿ ಪಂಜಾಬ್ ಪ್ರದೇಶವು ಬ್ರಿಟಿಷರ ವಶವಾಯಿತು.

ಬ್ರಿಟಿಷರು ತಮ್ಮ ಅಧಿಪತ್ಯವನ್ನು ವಿಸ್ತರಿಸುವ ಜೊತೆಯಲ್ಲಿಯೇ ಆಡಳಿತಾತ್ಮಕ ಬದಲಾವಣೆಗಳನ್ನು ತರುವ ಪ್ರಯತ್ನ ನಡೆಸಿದರು. ಇದರ ಪರಿಣಾಮವಾಗಿ ವ್ಯಾಪಾರಿ ಬಂಡವಾಳ ಹಾಗೂ ಕೈಗಾರಿಕಾ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸಿದರು.

ವ್ಯಾಪಾರಿ ಬಂಡವಾಳಶಾಹಿತ್ವ

ಯುರೋಪಿನಲ್ಲಿ ಹೊಸ ತಂತ್ರಜ್ಞಾನ ಮತ್ತು ಅನ್ವೇಷಣೆಗಳು, ವಿಶೇಷವಾಗಿ ಕೃಷಿ ಮತ್ತು ಕೈಗಾರಿಕೆಯಲ್ಲಿ ಉಂಟಾಗಿ ಬಂಡವಾಳಶಾಹಿತ್ವಕ್ಕೆ ಕಾರಣವಾಯಿತು. ಇದು ಹೊಸ ಭೂಪ್ರದೇಶಗಳ ಶೋಧನೆಗೆ ಪ್ರೇರಣೆಯನ್ನು ನೀಡಿತು.

ಆಧುನಿಕಯುಗದ ಬಂಡವಾಳಶಾಹಿತ್ವವು, ವ್ಯಾಪಾರಿ ಬಂಡವಾಳಶಾಹಿತ್ವದ ಜೊತೆಯಲ್ಲಿಯೇ 16ನೆಯ ಶತಮಾನದಿಂದ 18ನೆಯ ಶತಮಾನದ ನಡುವೆ ಬೆಳೆಯಿತು. ಈ ಕಾಲಾವಧಿಯಲ್ಲಿ ಸಾಗರೋತ್ತರ ವ್ಯಾಪಾರವು ಭೂ ಅನ್ವೇಷಣೆಗಳಿಗೆ ಕಾರಣವಾಯಿತು. ಇಂಗ್ಲೆಂಡ್, ಸ್ಪೇನ್, ಪೋರ್ಚುಗಲ್ ದೇಶಗಳು ಈ ಸಾಹಸದಲ್ಲಿ ಮೇಲುಗೈ ಸಾಧಿಸಿದ್ದವು. ಇದರೊಂದಿಗೆ ಪ್ರಾರಂಭವಾದದ್ದೆ ಸರಕು ಮಾರಾಟ ಮತ್ತು ವ್ಯಾಪಾರ.

ಲಾಭಕ್ಕಾಗಿ ಸರಕು ಮಾರಾಟ ಮಾಡುವುದೊಂದು ವ್ಯವಸ್ಥೆ. ಸರಕು ವ್ಯಾಪಾರಿ ವ್ಯವಸ್ಥೆಯಲ್ಲಿ ಯುರೋಪಿನ ವ್ಯಾಪಾರಿಗಳು, ವ್ಯಾಪಾರಿ ಏಕಸ್ವಾಮ್ಯತೆಯ ಮೂಲಕ ಸರಕುಗಳನ್ನು ಕೊಂಡು ಮತ್ತು ಮಾರಿ ಲಾಭ ಮಾಡಿಕೊಳ್ಳುತ್ತಿದ್ದರು. ಈ ಏಕಸ್ವಾಮ್ಯತೆಯನ್ನು ಪ್ರೋತ್ಸಾಹಿಸಲು ರಾಜ್ಯಗಳು ಬೆಲೆ ನಿಯಂತ್ರಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದವು. ರಾಜ್ಯಗಳು ದೇಶೀ ಬೆಳೆಗಾರರು ಮತ್ತು ವ್ಯಾಪಾರಿಗಳ ಹಿತಾಸಕ್ತಿಯನ್ನು ರಕ್ಷಿಸಲು ಮುಂದಾದವು.

ಸರಕು ಮಾರಾಟ ವ್ಯವಸ್ಥೆಯು ಲೋಹಗಳ ಶೇಖರಣೆಗೆ ಹೆಚ್ಚು ಮಹತ್ವವನ್ನು ನೀಡಿತ್ತು. ಸರಕುಗಳ ಆಮದು ಮತ್ತು ರಫ್ತಿನಿಂದಾದ ವ್ಯತ್ಯಾಸವನ್ನು ಅಮೂಲ್ಯವಾದ ಲೋಹಗಳ ರೂಪದಲ್ಲಿ ನೀಡಬೇಕಿತ್ತು. ಹೀಗಾಗಿ ರಾಜ್ಯಗಳು ಹೆಚ್ಚು ಹೆಚ್ಚಿನದಾಗಿ ರಫ್ತನ್ನು ಮಾಡಲು ಮುಂದಾದವು. ಸರಕು ವ್ಯಾಪಾರೀಕರಣವು

ರಾಜ್ಯದ ಶಕ್ತಿಗೆ ಹೆಚ್ಚಿನ ಒತ್ತನ್ನು ನೀಡಿತು. ಇದು ಸಾಗರೋತ್ತರ ಆಕ್ರಮಣ ಮತ್ತು ವಸಾಹತು ಸ್ಥಾಪನೆಗೆ ಕಾರಣವಾಯಿತು. ಕಚ್ಚಾ ವಸ್ತುಗಳನ್ನು ರಾಜ್ಯಗಳು ಪೂರೈಸಲು ಸಾಧ್ಯವಿಲ್ಲದಿದ್ದರೆ ಅವುಗಳನ್ನು ವಸಾಹತುಗಳಿಂದ ಹೀರಿಕೊಳ್ಳಬೇಕು ಎನ್ನುವುದು ಇವರ ಉದ್ದೇಶವಾಯಿತು. ವಸಾಹತುಗಳು ಕೇವಲ ಕಚ್ಚಾವಸ್ತುಗಳನ್ನು ಸರಬರಾಜು ಮಾಡುವ ಕೇಂದ್ರವಾಗಿಯಷ್ಟೆಯಿರದೆ ಸಿದ್ಧ ವಸ್ತುಗಳಿಗೆ ಮಾರುಕಟ್ಟೆಯೂ ಆಗಿದ್ದವು. ವಿದೇಶಿ ಶಕ್ತಿಗಳೊಡನೆ ವಸಾಹತುಗಳು ಪೈಪೋಟಿಮಾಡದಂತೆ ದೇಶೀ ವಸ್ತುಗಳ ತಯಾರಿಕೆ ಹಾಗೂ ವ್ಯಾಪಾರದ ಮೇಲೆ ಕಡಿವಾಣವನ್ನು ಹೇರಲಾಯಿತು.

ಚಟುವಟಿಕೆ :
ನಿಮ್ಮ ಜಿಲ್ಲೆಯಲ್ಲಿರುವ ಪ್ರಮುಖ ಕೈಗಾರಿಕೆಗಳನ್ನು ಹೆಸರಿಸಿ. ಅದರಲ್ಲಿ ವಿದೇಶಿ ಮತ್ತು ಸ್ವದೇಶಿ ಕಂಪನಿಗಳಾವುವು? ಗುರುತಿಸಿ.

ಈ ಹಿನ್ನೆಲೆಯಲ್ಲಿಯೆ ವ್ಯಾಪಾರಿ ಬಂಡವಾಳ ಹೂಡಿಕೆದಾರರ ಪ್ರವೇಶವನ್ನು ಭಾರತದಲ್ಲಿಯೂ ಸಹ ನೋಡಲು ಸಾಧ್ಯವಾಯಿತು. ಹೀಗೆ ವ್ಯಾಪಾರಿ ಏಕಸ್ವಾಮ್ಯತೆ ಮತ್ತು ಸರ್ಕಾರಗಳ ಅನುಮತಿ ಮತ್ತು ಹಕ್ಕು ಪತ್ರದೊಂದಿಗೆ (charter) ಷೇರು ಬಂಡವಾಳದೊಂದಿಗೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ, ಡಚ್ ಈಸ್ಟ್ ಇಂಡಿಯಾ ಕಂಪನಿ, ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಪೋರ್ಚುಗೀಸ್ ಈಸ್ಟ್ ಇಂಡಿಯಾ ಕಂಪನಿಗಳು ಸ್ಥಾಪನೆಗೊಂಡವು.

ಕೈಗಾರಿಕಾ ಬಂಡವಾಳ

ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿ ಭೌಗೋಳಿಕ ಅಧಿಕಾರವನ್ನು ಪಡೆದಂತೆಯೇ, ಕಂಪನಿಯು ಬ್ರಿಟನ್ನಿನ ಸರಕು ಮಾರಾಟ ಮತ್ತು ಕೈಗಾರಿಕಾ ಹಿತಾಸಕ್ತಿಗಳ ಒತ್ತಡಕ್ಕೆ ಮಣಿಯಬೇಕಾಯಿತು. 1813ರ ಹೊತ್ತಿಗೆ ಕಂಪನಿಗಿದ್ದ ಆರ್ಥಿಕ ಹಾಗೂ ರಾಜಕೀಯ ಅಧಿಕಾರವು ಕೇವಲ ಮರೀಚಿಕೆಯಾಗಿತ್ತು. ಆಗ ಬ್ರಿಟಿಷ್ ಸರ್ಕಾರ, ಬ್ರಿಟಿಷ್ ಬಂಡವಾಳ ವರ್ಗದ ಹಿತಾಸಕ್ತಿಯ ಪರವಾಗಿ ಅಧಿಕಾರ ಚಲಾಯಿಸುತ್ತಿತ್ತು. ಇದುವರೆಗೆ ಕೇವಲ ವ್ಯಾಪಾರಿ ಸಂಸ್ಥೆಯಾಗಿದ್ದ ಈಸ್ಟ್ ಇಂಡಿಯಾ ಕಂಪನಿಯು ಈಗ ಕೈಗಾರಿಕಾ ಬಂಡವಾಳಶಾಹಿಗಳ ಹಿತಾಸಕ್ತಿಗೆ ಮನ್ನಣೆ ನೀಡಬೇಕಾಯಿತು. ಈಸ್ಟ್ ಇಂಡಿಯಾ ಕಂಪನಿಯ ವ್ಯಾಪಾರಿ ಏಕಸ್ವಾಮ್ಯತೆಯಿಂದ ಬ್ರಿಟಿಷ್ ಉದ್ಯಮಿಗಳಿಗೆ ಹೆಚ್ಚು ಲಾಭವೇನೂ ದಕ್ಕಲಿಲ್ಲ. ಕೈಗಾರಿಕಾ ಕ್ರಾಂತಿಯಿಂದ ಉಂಟಾದ ಸಿದ್ಧ ವಸ್ತುಗಳಿಗೆ ಈಗ ಮಾರುಕಟ್ಟೆಗಳ ಅವಶ್ಯಕತೆ ಇತ್ತು. ಬ್ರಿಟಿಷ್ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳು ಹಾಗೂ ಕಾರ್ಮಿಕರಿಗೆ ಆಹಾರ ಸಾಮಗ್ರಿಗಳ ಅವಶ್ಯಕತೆ ಇತ್ತು. ತತ್ಪರಿಣಾಮವಾಗಿ ಭಾರತದಿಂದ ಪರಂಪರಾನುಗತವಾಗಿ ರಫ್ತಾಗುತ್ತಿದ್ದ ಕರಕುಶಲ ಸರಕುಗಳು ಕಂಪನಿಯ ನೀತಿಯಿಂದ ಸಂಪೂರ್ಣವಾಗಿ ಸ್ಥಗಿತಗೊಂಡವು. ಇದರಿಂದಾಗಿ ಭಾರತದ ವಿದೇಶೀ ವ್ಯಾಪಾರದಲ್ಲಿನ ದಿಕ್ಕು ಬದಲಾವಣೆಯನ್ನು ಕಂಡಿತು. ಬಹಳ ಹಿಂದಿನಿಂದಲೂ ಜವಳಿ ಮತ್ತು ಕರಕುಶಲ ವಸ್ತ್ರಗಳನ್ನು ರಫ್ತು ಮಾಡುತ್ತಿದ್ದ ಭಾರತವು 19ನೆಯ ಶತಮಾನದಲ್ಲಿ ಸಿದ್ಧ ವಸ್ತುಗಳನ್ನು ಆಮದು ಮಾಡಿಕೊಂಡು ಹತ್ತಿ ಹಾಗೂ ಇನ್ನಿತರ ಕಚ್ಚಾ ವಸ್ತುಗಳನ್ನು ರಫ್ತು ಮಾಡುತ್ತಿತ್ತು. ಇದರಿಂದಾಗಿ ಭಾರತವು ಆಮದಾದ ಪದಾರ್ಥಗಳಿಗೆ ಬೆಲೆ ತೆರಬೇಕಾಯಿತು. ಬಹಳಷ್ಟು ಸಂಪತ್ತನ್ನು ಕಂಪನಿಯು ಷೇರುದಾರರಿಗೆ ಹಂಚಬೇಕಾಗಿತ್ತು. ಅದಕ್ಕಾಗಿ ಭಾರತದ ಸಂಪತ್ತನ್ನು ಇಂಗ್ಲೆಂಡಿಗೆ ಸಾಗಿಸಲಾಗುತ್ತಿತ್ತು. ಬ್ರಿಟನ್ ನಾಗರಿಕ ಹಾಗೂ ಮಿಲಿಟರಿ ಅಧಿಕಾರಿಗಳ ಪಿಂಚಣಿಯನ್ನು ಕೂಡಾ ಭಾರತವು ಭರಿಸಬೇಕಾಯಿತು. ಬ್ರಿಟಿಷ್ ವ್ಯಾಪಾರಿಗಳು ಮತ್ತು ತೋಟಗಾರರು ಗಳಿಸಿದಂತಹ ಲಾಭವನ್ನು ಸಹ ಭಾರತದಿಂದ ಹೊರಗೆ ಕೊಂಡೊಯ್ಯಲಾಯಿತು. ದೇಶದಲ್ಲಿ ಬ್ರಿಟಿಷ್ ಬಂಡವಾಳದಿಂದ ಹೂಡಲಾದ ಹಣಕ್ಕೆ ಅದು ಬಡ್ಡಿ ಮತ್ತು ಲಾಭವನ್ನು ನೀಡಬೇಕಾಯಿತು. ಹೀಗೆ ಭಾರತದಲ್ಲಿನ ಕೈಗಾರಿಕಾ ಬಂಡವಾಳದಿಂದಾಗಿ ಇಲ್ಲಿನ ಸಂಪತ್ತಿನ ಸೋರಿಕೆಗೆ ಕಾರಣವಾಯಿತು.

ಬ್ರಿಟನ್ ತನ್ನ ವಸಾಹತು ಭಾರತವನ್ನು ಬಂಡವಾಳ ಮತ್ತು ಆರ್ಥಿಕ ಅವಶ್ಯಕತೆಗಳಿಗೆ ಬಳಸಿಕೊಳ್ಳಲು ತಕ್ಷಣ ಸಾಧ್ಯವಾಗುತ್ತಿರಲಿಲ್ಲ. ಭಾರತದಲ್ಲಿನ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯು ಇವರ ಸಾಧ್ಯತೆಗಳಿಗೆ ಅಡ್ಡಿಯಾಗಿದ್ದವು. ಹೀಗಾಗಿಯೇ ಅವರು ಭಾರತದಲ್ಲಿ ಬ್ರಿಟಿಷ್ ಪೂರ್ವದಲ್ಲಿದ್ದ ಹಳೆಯ ಭಾರತೀಯ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಬದಲಿಸಿ ಹೊಸ ವ್ಯವಸ್ಥೆಗಳ ನಿರ್ಮಾಣದಲ್ಲಿ ತೊಡಗಬೇಕಾಯಿತು.

ಬ್ರಿಟಿಷ್ ಪೂರ್ವ ಭಾರತದ ಊಳಿಗಮಾನ್ಯ ವ್ಯವಸ್ಥೆಯನ್ನು ಬಂಡವಾಳ ವ್ಯವಸ್ಥೆಯೆಡೆಗೆ ಪರಿವರ್ತಿಸುವ ಹಾದಿಯಲ್ಲಿ ಸಮಾಜವೂ ಕೂಡಾ ವಿಭಿನ್ನ ಬಗೆಯಾಗಿ ಪರಿವರ್ತಿತವಾಗಿತ್ತು. ಹಳೆಯ ಭೂಸಂಬಂಧಗಳು ಮತ್ತು ಕುಶಲ ಕರ್ಮಿಗಳು ಹಾಗೂ ಕರಕುಶಲ ಕೈಗಾರಿಕೆಗಳು ಅವನತಿಯನ್ನು ಕಂಡವು. ಅದರ ಬದಲಿಗೆ ಹೊಸ ಭೂ ಸಂಬಂಧಗಳು ಮತ್ತು ಆಧುನಿಕ ಕೈಗಾರಿಕೆಗಳು ವ್ಯಾಪಿಸತೊಡಗಿದವು. ಹೊಸ ಭೂ ಸಂಬಂಧಗಳು ಹಾಗೂ ಆಧುನಿಕ ಕೈಗಾರಿಕೆಗಳೊಂದಿಗೆ ಹೊಸ ವರ್ಗಗಳು ಉದಯವಾದವು. ಹಳ್ಳಿಗಳ ಸಾಮೂಹಿಕ ಕೃಷಿಯ ಬದಲು ಆಧುನಿಕ ಕೃಷಿಕ ಮತ್ತು ಭೂಮಾಲಿಕರನ್ನು ನಾವು ಕಾಣುತ್ತೇವೆ. ಕುಶಲ ಕರ್ಮಿಗಳ ವರ್ಗ ಮತ್ತು ಕರಕುಶಲ ಕರ್ಮಿಗಳು ಸಂಪೂರ್ಣವಾಗಿ ಕಾಣದಾದರು. ಭಾರತದಲ್ಲಿ ಆಧುನಿಕ ಕೈಗಾರಿಕೆಗಳು ಮತ್ತು ಸಾರಿಗೆ ಸಂಪರ್ಕದಿಂದಾಗಿ ಹೊಸದಾಗಿ ಉದಯವಾದ ವರ್ಗಗಳಲ್ಲಿ ಬಂಡವಾಳ ಶಾಹಿಗಳು, ಕಾರ್ಮಿಕ ವರ್ಗ, ಸಾರಿಗೆ ಕಾರ್ಮಿಕರು, ಕೃಷಿ ಕಾರ್ಮಿಕರು, ಗೇಣಿದಾರರು, ಭೂಹಿಡುವಳಿದಾರರು, ವರ್ತಕರು ಹುಟ್ಟಿಕೊಂಡರು. ಹೀಗೆ ಭಾರತದ ಮೇಲೆ ಬ್ರಿಟಿಷರ ಪ್ರಭಾವದಿಂದಾಗಿ ಆರ್ಥಿಕ ವಲಯವಷ್ಟೆ ಪರಿವರ್ತನೆಯಾಗದೆ ಸಾಮಾಜಿಕ ಸಂರಚನೆಯೂ ಸಹ ಬದಲಾವಣೆಯನ್ನು ಕಂಡಿತು.

ಸಂವಿಧಾನಾತ್ಮಕ ಬೆಳವಣಿಗೆ

ಭಾರತದಲ್ಲಿ ಬ್ರಿಟಿಷ್ ಆಡಳಿತ ಬೆಳೆದಂತೆ ಸಮಸ್ಯೆಗಳೂ ಕೂಡಾ ಬೆಳೆದವು. ಸಮಸ್ಯೆಗಳ ನಿಗ್ರಹಕ್ಕಾಗಿ ಆಡಳಿತ ಕ್ಷೇತ್ರದಲ್ಲಿ ಸುಧಾರಣೆ ತರುವ ಅಗತ್ಯತೆಯು ಕಂಡು ಬಂದಿತು. ಈ ಸುಧಾರಣೆಗಳು ಭಾರತೀಯರ ಬೇಡಿಕೆಗಳಿಗೆ ಸ್ಪಂದಿಸುವಂತಿರಬೇಕಿತ್ತು. ಆಗ ಬ್ರಿಟಿಷರು ಕಾಲಕಾಲಕ್ಕೆ ವಿವಿಧ ನಿಯಮಗಳನ್ನು ಕಾಯ್ದೆಯ ರೂಪದಲ್ಲಿ ಜಾರಿಗೆ ತರುವ ಪ್ರಯತ್ನ ನಡೆಸಿದರು. ಈ ರೀತಿಯ ಕಾಯ್ದೆಗಳು ಭಾರತದ ಸಾಂವಿಧಾನಿಕ ಬೆಳವಣಿಗೆಗೆ ಸಹಕಾರಿಯಾದವು.

1773ರ ರೆಗ್ಯುಲೇಟಿಂಗ್ ಶಾಸನ :

ರಾಬರ್ಟ್ ಕ್ಲೈವನು ಜಾರಿಗೆ ತಂದಿದ್ದ ದ್ವಿಮುಖ ಸರ್ಕಾರ ರದ್ದಾಯಿತು. ಬಂಗಾಳದ ಗವರ್ನರ್ ಹುದ್ದೆಯನ್ನು ಬಂಗಾಳದ ಗವರ್ನರ್ ಜನರಲ್ ಎಂದು ಕರೆಯಲಾಯಿತು. ವಾರನ್ ಹೇಸ್ಟಿಂಗ್ಸ್ ಭಾರತದ ಮೊದಲನೆಯ ಗರ್ವನರ್ ಜನರಲ್ ಆದನು. ಆಡಳಿತದಲ್ಲಿ ಸಲಹೆ ನೀಡಲು ಸಲಹಾ ಸಮಿತಿಯನ್ನು ನೇಮಿಸಲಾಯಿತು. ಕಂಪನಿಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಕಳುಹಿಸಬೇಕಾಯಿತು. ಭಾರತದಲ್ಲಿ ಒಂದು ಸರ್ವೋಚ್ಚ ನ್ಯಾಯಾಲಯವನ್ನು ಕಲ್ಕತ್ತಾದಲ್ಲಿ ಸ್ಥಾಪಿಸಲಾಯಿತು.

1784ರ ಪಿಟ್ಸ್ ಇಂಡಿಯಾ ಶಾಸನ

ಬ್ರಿಟಿಷರ ಪ್ರದೇಶಗಳ ಉತ್ತಮ ಆಡಳಿತಕ್ಕಾಗಿ ನಿಯಂತ್ರಣ ಮಂಡಳಿ (Board of control)ಯನ್ನು ನೇಮಿಸಲು ಅವಕಾಶ ನೀಡಿತು. ಸಲಹಾ ಸಮಿತಿಯಲ್ಲಿ ಪ್ರೈವಿ ಕೌನ್ಸಿಲ್ ಒಂದನ್ನು ಸ್ಥಾಪಿಸಲು ಅವಕಾಶ ನೀಡಿತು. ಈಸ್ಟ್ ಇಂಡಿಯಾ ಕಂಪನಿ ಬ್ರಿಟಿಷ್ ಸರ್ಕಾರದ ನಿಯಮಗಳಿಗೆ ಒಳಪಡುವಂತಾಯಿತು.

1861ರ ಇಂಡಿಯನ್ ಕೌನ್ಸಿಲ್ ಕಾಯ್ದೆ

ಭಾರತದ ಸಂವಿಧಾನದ ಬೆಳವಣಿಗೆಯಲ್ಲಿ 1861ರ ಕಾಯ್ದೆಯು ಪ್ರಮುಖವಾಗಿದೆ. ಇದರ ಪ್ರಕಾರ ಕಾರ್ಯಕಾರಿ ಸಮಿತಿಯಲ್ಲಿ ಭಾರತೀಯರನ್ನು ನಾಮಕರಣ ಮಾಡಿಕೊಳ್ಳುವ ಅವಕಾಶ ಕಲ್ಪಿಸಲಾಯಿತು. ಇದರ ಪ್ರಕಾರ ಭಾರತೀಯರು ಪ್ರಥಮ ಬಾರಿಗೆ ಶಾಸನೀಯ ಹಾಗೂ ಆಡಳಿತ ಕಾರ್ಯದಲ್ಲಿ ಪಾಲ್ಗೊಳ್ಳುವಂತಾಯಿತು.

1909ರ ಮಿಂಟೋ–ಮಾರ್ಲೆ ಸುಧಾರಣೆಗಳು

ಈ ಶಾಸನವನ್ನು 1909ರಲ್ಲಿ ಭಾರತದ ವೈಸರಾಯ್ ಮಿಂಟೊ ಮತ್ತು ಕಾರ್ಯದರ್ಶಿ ಮಾರ್ಲೆರವರು ರೂಪಿಸಿದರು. ಇದರಲ್ಲಿನ ಮುಖ್ಯಾಂಶಗಳೆಂದರೆ: ಕೇಂದ್ರ ಶಾಸಕಾಂಗದ ವಿಸ್ತರಣೆ, ಪ್ರಾಂತ್ಯಗಳ ಶಾಸನ ಸಭೆಯ ವಿಸ್ತರಣೆ, ಪ್ರಾಂತೀಯ ಶಾಸನ ಸಭೆಗಳಲ್ಲಿ ಚುನಾಯಿತರಿಗೂ ಅವಕಾಶ ನೀಡುವಿಕೆ, ಮತೀಯ ಆಧಾರದಲ್ಲಿ ಪ್ರತ್ಯೇಕ ಚುನಾವಣಾ ಕ್ಷೇತ್ರಗಳ ಆರಂಭ.

1919ರ ಭಾರತ ಸರ್ಕಾರದ ಶಾಸನ (ಮಾಂಟೆಗ್ಯೂ – ಚೆಮ್ಸ್‌ಫರ್ಡ್ ಸುಧಾರಣೆ)

ಭಾರತಕ್ಕೆ ಹೈಕಮಿಷನರ್ ನೇಮಕ ಮಾಡಲಾಯಿತು. ಕೇಂದ್ರದಲ್ಲಿ ಎರಡು ಸದನಗಳ ಶಾಸನಸಭೆ ರಚನೆಯಾಗಿ ಅವುಗಳನ್ನು ಕೌನ್ಸಿಲ್ ಆಫ್ ಸ್ಟೇಟ್ಸ್ (ಮೇಲ್ಮನೆ) ಲೆಜಿಸ್ಲೆಟಿವ್ ಅಸೆಂಬ್ಲಿ (ಕೆಳಮನೆ) ಎಂದು ಕರೆಯಲಾಯಿತು. ಪ್ರಾಂತ್ಯಗಳಲ್ಲಿ ದ್ವಿ–ದಳ ಸರ್ಕಾರಪದ್ಧತಿಯನ್ನು ಜಾರಿಗೊಳಿಸಲಾಯಿತು. ಆಡಳಿತ ಇಲಾಖೆಯಲ್ಲಿ ವಿಷಯಗಳನ್ನು ಕೇಂದ್ರಪಟ್ಟಿ ಮತ್ತು ರಾಜ್ಯಪಟ್ಟಿ ಎಂದು ವಿಂಗಡಿಸಲಾಯಿತು. ಭಾರತಕ್ಕೆ ಕ್ರಮೇಣ ಜವಾಬ್ದಾರಿ ಸರ್ಕಾರ ನೀಡುವುದಾಗಿ ತಿಳಿಸಲಾಯಿತು.

1935ರ ಭಾರತ ಸರ್ಕಾರದ ಕಾಯ್ದೆ

1935ರ ಭಾರತ ಸರ್ಕಾರದ ಕಾಯ್ದೆಯು ಒಂದು ಮುಖ್ಯ ದಾಖಲೆಯಾಗಿದೆ, ಅದು ಅಖಿಲ ಭಾರತೀಯ ಸಂಯುಕ್ತ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿತು. ಈ ಕಾಯ್ದೆಯ ಪ್ರಮುಖ ಲಕ್ಷಣವೆಂದರೆ ಆಡಳಿತದಲ್ಲಿ ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಿದ್ದು. ಈ ಶಾಸನವು ಸ್ವತಂತ್ರ ಭಾರತದಲ್ಲಿ ರಚನೆಯಾದ ಭಾರತ ಸಂವಿಧಾನಕ್ಕೆ ಆಧಾರವಾಗಿ ಪರಿಣಮಿಸಿತು.

ಅಭ್ಯಾಸಗಳು

I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತಪದಗಳಿಂದ ತುಂಬಿರಿ.

1) ಸಹಾಯಕ ಸೈನ್ಯ ಪದ್ಧತಿಯನ್ನು ________ನು ಜಾರಿಗೆ ತಂದನು.

2) ಎರಡನೇ ಆಂಗ್ಲೋ ಮರಾಠ ಯುದ್ಧವು ________ ಒಪ್ಪಂದದಿಂದ ಮುಕ್ತಾಯವಾಯಿತು.

3) ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆಗೆ ________ ಶಾಸನವು ಅವಕಾಶ ನೀಡಿತು.

4) ಮತೀಯ ಆಧಾರದ ಚುನಾವಣೆಗೆ ಶಿಫಾರಸ್ಸು ಮಾಡಿದ ಶಾಸನ ________ .

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1) ಸಹಾಯಕ ಸೈನ್ಯ ಪದ್ಧತಿಯನ್ನು ವಿವರಿಸಿ.

2) ಮೊದಲನೇ ಆಂಗ್ಲೋ-ಮರಾಠ ಯುದ್ಧ ನಡೆದ ರೀತಿಯನ್ನು ವಿವರಿಸಿ.

3) ಪಂಜಾಬ್ ಪ್ರಾಂತ್ಯದಲ್ಲಿ ಬ್ರಿಟಿಷರು ತಮ್ಮ ಅಧಿಪತ್ಯವನ್ನು ಹೇಗೆ ಸ್ಥಾಪಿಸಿದರು?

4) ರೇಗ್ಯುಲೇಟಿಂಗ್ ಶಾಸನದಲ್ಲಿನ ಪ್ರಮುಖಾಂಶಗಳು ಯಾವುವು?

5) 1909 ರ ಶಾಸನದ ಸುಧಾರಣೆಗಳಾವುವು?

III. ಚಟುವಟಿಕೆ.

1) ಶಿಕ್ಷಕರ ಮಾರ್ಗದರ್ಶನದಲ್ಲಿ '1935 ರ ಭಾರತ ಸರ್ಕಾರದ ಕಾಯಿದೆಯು ನಮ್ಮ ಪ್ರಸ್ತುತ ಸಂವಿಧಾನದ ರಚನೆಯ ಮೂಲ ಆಕರವಾಗಿದೆ'. ಈ ವಿಷಯವನ್ನು ಕುರಿತು ತರಗತಿಯಲ್ಲಿ ಭಾಷಣ ಸ್ಪರ್ಧೆ ಏರ್ಪಡಿಸುವುದು.

IV. ಯೋಜನೆ.

1) ಭಾರತದ ನಕ್ಷೆಯನ್ನು ಬರೆದು ಸಹಾಯಕ ಸೈನ್ಯ ಪದ್ಧತಿ ಎಂಬ ಕಾನೂನಿನ ಅಡಿಯಲ್ಲಿ ಬ್ರಿಟಿಷರು ವಶಪಡಿಸಿಕೊಂಡ ಭಾರತದ ಪ್ರದೇಶಗಳನ್ನು ಗುರುತಿಸಿರಿ.

ಅಧ್ಯಾಯ – 5

ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಬ್ರಹ್ಮ ಸಮಾಜದ ಸ್ಥಾಪನೆ ಮತ್ತು ಸುಧಾರಣೆಗಳು*
- *ಆರ್ಯ ಸಮಾಜದ ಸ್ಥಾಪನೆ ಮತ್ತು ಸುಧಾರಣೆಗಳು*
- *ಪ್ರಾರ್ಥನಾ ಸಮಾಜದ ಸುಧಾರಣೆಗಳು*
- *ಸತ್ಯಶೋಧಕ ಸಮಾಜದ ಪ್ರತಿಪಾದನೆಗಳು*
- *ಆಲಿಘರ್ ಚಳುವಳಿ*
- *ರಾಮಕೃಷ್ಣ ಮಿಷನ್‌ನ ಪ್ರತಿಪಾದನೆಗಳು*

ಭಾರತದ ಇತಿಹಾಸದಲ್ಲಿ 19ನೆಯ ಶತಮಾನವನ್ನು 'ಭಾರತೀಯ ನವೋದಯ' ಕಾಲವೆಂದು ಕರೆಯಲಾಗಿದೆ. ಈ ಕಾಲಾವಧಿಯಲ್ಲಿ ಪಾಶ್ಚಿಮಾತ್ಯ ನಾಗರಿಕತೆಯ ಸಂಪರ್ಕವು ಭಾರತೀಯರಿಗೆ ದೊರೆಯಿತು. ಈ ಅವಕಾಶದಿಂದ ಇಂಗ್ಲಿಷ್ ವಿದ್ಯಾಭ್ಯಾಸದ ಸೌಲಭ್ಯ ದೊರೆಯಿತು. ಭಾರತೀಯರಲ್ಲಿ ವೈಚಾರಿಕತೆಯ ಮನೋಭಾವ ಬೆಳೆಯಿತು. ಇದು ಮೂಢನಂಬಿಕೆಗಳನ್ನು ಪ್ರಶ್ನಿಸಲು ಪ್ರೇರೇಪಿಸಿತಲ್ಲದೆ ದ್ವಂದ್ವತೆ, ವಿರೋಧಾಭಾಸ ಹಾಗೂ ಸ್ವಹಿತಾಸಕ್ತಿಗಳ ಅರಿವು ಮೂಡಿಸಿತು ಎನ್ನುವ ಜನಜನಿತ ಅಭಿಪ್ರಾಯವಿದೆ. ಇಂಗ್ಲಿಷ್ ಪೂರ್ವಕಾಲದಲ್ಲಿಯೂ ಭಾರತೀಯರಿಗೆ ಇಂಗ್ಲಿಷ್ ಭಾಷೆಯ ಹೊರತಾಗಿಯೂ ವೈಜ್ಞಾನಿಕ ಮನೋಭಾವ, ವೈಚಾರಿಕತೆ ಇತ್ತು ಎಂದು ಇತ್ತೀಚಿನ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ನಿಮಗಿದು ತಿಳಿದಿರಲಿ :

ಪಾಶ್ಚಾತ್ಯ ವಿದ್ವಾಂಸರಿಂದ ಪ್ರಭಾವಕ್ಕೆ ಒಳಗಾದ ಇಂಗ್ಲಿಷ್ ಮತ್ತು ಭಾರತೀಯ ವಿದ್ವಾಂಸರು 19ನೆಯ ಶತಮಾನದ ಕಾಲವನ್ನು 'ನವೋದಯ' ಕಾಲವೆಂದು ಕರೆದರು. ಯುರೋಪಿಯನ್ ಚರಿತ್ರೆ ರಚನೆ ಸಂದರ್ಭದಲ್ಲಿ ಇದ್ದ ಮಾನದಂಡಗಳನ್ನು ಭಾರತೀಯರನ್ನು ಕುರಿತು ನಡೆಸಿದ ಅಧ್ಯಯನಗಳಲ್ಲಿಯೂ ಈ ವಿದ್ವಾಂಸರು ಅನುಸರಿಸಿದರು.

ಯುರೋಪಿಗೆ 'ನವೋದಯ' ಕಾಲ ಇದ್ದರೆ ಅಂತಹದೊಂದು ಕಾಲ ಭಾರತೀಯ ಚರಿತ್ರೆ ಬರೆಯುವಾಗಲೂ ಬೇಕು ಎನ್ನುವ ಮನೋಭಾವ ಆ ಕಾಲದ ಬರಹಗಾರರಲ್ಲಿ ಪ್ರಬಲವಾಗಿತ್ತು. ಇತ್ತೀಚಿನ ಸಂಶೋಧನೆಗಳು ಈ ಅಂಶವನ್ನು ಸ್ಪಷ್ಟಪಡಿಸಿವೆ. ಆದರೂ ಚರಿತ್ರೆ ಬರವಣಿಗೆಯಲ್ಲಿ ಬೇರೂರಿರುವ ಕೆಲವು ಸೈದ್ಧಾಂತಿಕತೆಗಳು ಇಂದಿಗೂ ಭಾರತೀಯ ಚರಿತ್ರೆ ರಚನೆಯನ್ನು ಪ್ರಭಾವಿಸಿವೆ.

ಭಾರತೀಯರಲ್ಲಿ ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ, ರಾಷ್ಟ್ರೀಯತೆಯಂತಹ ವಿಚಾರಗಳನ್ನು ಪಾಶ್ಚಾತ್ಯ ಪರಿಕಲ್ಪನೆಗಳು ಪರಿಚಯಿಸಿದವು. ಪಾಶ್ಚಿಮಾತ್ಯ ಶಿಕ್ಷಣದಿಂದ ಜಾಗೃತರಾದ ಅನೇಕರು ಸುಧಾರಣೆಗಾಗಿ ಪ್ರಯತ್ನಿಸಿದರು. ಈ ಹಿನ್ನೆಲೆಯಲ್ಲಿ ರಾಮ್ ಮೋಹನರಾಯ್, ದಯಾನಂದ ಸರಸ್ವತಿ, ಮಹದೇವ ಗೋವಿಂದ ರಾನಡೆ, ಜ್ಯೋತಿಬಾ ಫುಲೆ, ಸ್ವಾಮಿ ವಿವೇಕಾನಂದ, ಆನಿಬೆಸೆಂಟ್, ಸೈಯದ್ ಅಹಮದ್‌ಖಾನ್ ಮೊದಲಾದವರು ಸಾಮಾಜಿಕ ಸುಧಾರಣೆಗಾಗಿ ಶ್ರಮಿಸಿದರು.

ಬ್ರಹ್ಮ ಸಮಾಜ


ರಾಮ್ ಮೋಹನ್‌ರಾಯ್

ಬ್ರಹ್ಮ ಸಮಾಜದ ಸಂಸ್ಥಾಪಕರಲ್ಲಿ ರಾಮಮೋಹನ್ ರಾಯರು ಪ್ರಮುಖರು. ಇವರನ್ನು 'ಭಾರತೀಯ ನವೋದಯದ ಜನಕ' ಎಂದು ಕರೆಯಲಾಗಿದೆ. ಸಂಸ್ಕೃತ, ಅರೇಬಿಕ್, ಪರ್ಷಿಯನ್, ಇಂಗ್ಲಿಷ್, ಫ್ರೆಂಚ್, ಗ್ರೀಕ್, ಲ್ಯಾಟಿನ್ ಮುಂತಾದ ಭಾಷೆಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದರು. ಹಿಂದೂ, ಮುಸ್ಲಿಂ, ಸೂಫಿ, ಕ್ರೈಸ್ತ ಮತ್ತು ಬೌದ್ಧಮತಗಳ ಸಂಸ್ಕೃತಿ ಮತ್ತು ತತ್ವಗಳನ್ನು ಅಧ್ಯಯನ ಮಾಡಿದ್ದರು. ಮೂರ್ತಿ ಪೂಜೆಯನ್ನು ಪ್ರಶ್ನಿಸಿದ ರಾಯರು ಉಪನಿಷತ್ತುಗಳಲ್ಲಿ ಅರ್ಥವನ್ನು ಕಂಡುಕೊಂಡರು. ಆಧುನಿಕ ವಿಜ್ಞಾನ ಮತ್ತು ಇಂಗ್ಲಿಷ್ ಶಿಕ್ಷಣವು ಭಾರತದ ನವೀಕರಣಕ್ಕೆ ಅತ್ಯಾವಶ್ಯಕವೆಂದು ಪ್ರತಿಪಾದಿಸಿದರು. ಸ್ತ್ರೀ ಶೋಷಣೆಯನ್ನು ಅವರು ವಿರೋಧಿಸಿದರು. ಸತಿಪದ್ಧತಿ, ಬಾಲ್ಯವಿವಾಹಗಳ ವಿರುದ್ಧ ಸಂಘಟನಾತ್ಮಕವಾದ ಹೋರಾಟ ನಡೆಸಿದರು. ಇದರಿಂದಾಗಿ ಇವರನ್ನು ಸಂಪ್ರದಾಯವಾದಿ ಹಿಂದೂಗಳು ಖಂಡಿಸಿದರು. ಲಾರ್ಡ್ ವಿಲಿಯಂ ಬೆಂಟಿಂಕ್ ಜಾರಿಗೆ ತಂದಿದ್ದ ಸತಿಸಹಗಮನ ಪದ್ಧತಿ ವಿರುದ್ಧದ ಕಾಯ್ದೆಯನ್ನು ಬೆಂಬಲಿಸಿದರು. ಇವರು ಪತ್ರಿಕೋದ್ಯಮದ ಮೂಲಕ ಜನರಲ್ಲಿ ವೈಚಾರಿಕತೆಯನ್ನು ಬೆಳೆಸಲು ಪ್ರಯತ್ನಿಸಿದರು. ಬಂಗಾಳಿ ಭಾಷೆಯಲ್ಲಿ 'ಸಂವಾದ ಕೌಮುದಿ' ಎನ್ನುವ ಪತ್ರಿಕೆಯನ್ನು ಆರಂಭಿಸಿದರು.

> ***ಚಟುವಟಿಕೆ :***
> *ಬಾಲ್ಯವಿವಾಹದ ನಿರ್ಮೂಲನೆಗೆ ಸರ್ಕಾರದ ಕ್ರಮಗಳನ್ನು ಪಟ್ಟಿ ಮಾಡಿ*

ಬ್ರಹ್ಮ ಸಮಾಜವು 19ನೆಯ ಶತಮಾನದಲ್ಲಿ ಸಾಮಾಜಿಕ ಧಾರ್ಮಿಕ ಸುಧಾರಣೆಯ ಮಂಚೂಣಿಯಲ್ಲಿದ್ದ ಸಂಸ್ಥೆಯಾಗಿತ್ತು. ಬ್ರಹ್ಮಸಮಾಜವು ಹಿಂದೂ ಧರ್ಮದಲ್ಲಿದ್ದ ಆಚಾರ–ವಿಚಾರಗಳ ಸುಧಾರಣೆಗಾಗಿ ಪ್ರಯತ್ನಿಸಿತು. ವಿಗ್ರಹಾರಾಧನೆ ಮತ್ತು ಬಹುದೇವತಾ ಆರಾಧನೆಯನ್ನು ವಿರೋಧಿಸಿ ಏಕದೇವತಾ ಆರಾಧನೆಯನ್ನು ಪ್ರೋತ್ಸಾಹಿಸಿತು. ಅದು ಯಜ್ಞಯಾಗಾದಿಗಳನ್ನು ಖಂಡಿಸಿ ಪುರೋಹಿತಶಾಹಿಯನ್ನು ವಿರೋಧಿಸಿತು.

ಇಂಗ್ಲಿಷ್ ಶಿಕ್ಷಣದ ಮೂಲಕ ಭಾರತೀಯರು ಪಾಶ್ಚಿಮಾತ್ಯ ರಾಜಕೀಯ ಚಿಂತನೆಯನ್ನು ತಿಳಿಯಲು ಸಾಧ್ಯವಾಗಿ ಅದು ಭಾರತೀಯರಲ್ಲಿ ರಾಷ್ಟ್ರಪ್ರಜ್ಞೆಯನ್ನು ಮೂಡಿಸಲು ಸಹಾಯಮಾಡಿತು.

ಆರ್ಯಸಮಾಜ


ಸ್ವಾಮಿ ದಯಾನಂದ ಸರಸ್ವತಿ

ಆರ್ಯಸಮಾಜವನ್ನು ದಯಾನಂದ ಸರಸ್ವತಿಯವರು ಸ್ಥಾಪಿಸಿದರು. ಇವರು ದೇಶಾದ್ಯಂತ ಉಪನ್ಯಾಸ ನೀಡುತ್ತಾ ವೇದಗಳು ಸತ್ಯ ಮತ್ತು ಜ್ಞಾನದ ಮೂಲವೆಂದರು. ಈ ಹಿನ್ನೆಲೆಯಲ್ಲಿ 'ವೇದಗಳಿಗೆ ಹಿಂದಿರುಗಿ' ಎನ್ನುವ ಘೋಷಣೆ ಮಾಡಿದರು. ವಿಗ್ರಹಾರಾಧನೆ, ಜಾತಿಪದ್ಧತಿಯನ್ನು ಖಂಡಿಸಿದರು. ಜಾತಿಯು ಯೋಗ್ಯತೆಯಿಂದ ಹೊರತು, ಹುಟ್ಟಿನಿಂದಲ್ಲ ಎಂದು ಪ್ರತಿಪಾದಿಸಿದರು. ಅನೇಕ ಅರ್ಥಹೀನ ಪದ್ಧತಿಗಳನ್ನು ಹಾಗೂ ಪುರೋಹಿತಶಾಹಿಯ ಅಧಿಕಾರವನ್ನು ತಿರಸ್ಕರಿಸಿದರು. ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು. ಸ್ವದೇಶಿ ವಸ್ತುಗಳ ಬಳಕೆಗೆ ಕರೆನೀಡಿದರು. 'ಸತ್ಯಾರ್ಥ ಪ್ರಕಾಶ' ಎಂಬ ಕೃತಿಯಲ್ಲಿ ತಮ್ಮ ವಿಚಾರಗಳನ್ನು ಪ್ರತಿಪಾದಿಸಿದ್ದಾರೆ.

'ಶುದ್ಧಿಚಳುವಳಿ' ಆರ್ಯಸಮಾಜದ ಪ್ರಮುಖ ಚಟುವಟಿಕೆಯಾಗಿತ್ತು. ನಂತರದಲ್ಲಿ ಆರ್ಯಸಮಾಜವು ಅನೇಕ ಸ್ಥಳಗಳಲ್ಲಿ ಶಾಲಾ ಕಾಲೇಜುಗಳನ್ನು ಸ್ಥಾಪಿಸಿತು. ದಯಾನಂದ ಸರಸ್ವತಿಯವರ, ಸಮಾಜದ ಐಕ್ಯತೆಯಿಂದ ಸಂಘಟನೆಯು ಸಾಧ್ಯ ಎಂಬ ಇವರ ಬೋಧನೆಗಳು ಭಾರತೀಯರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ ನೀಡಿದವು. ಮಹಾನ್ ದೇಶಭಕ್ತರಾದ ದಯಾನಂದ ಸರಸ್ವತಿಯವರು ದೇಶ ಮತ್ತು ಭಾರತೀಯ ಸಂಸ್ಕೃತಿಯ ಅಭಿಮಾನಿಗಳಾಗಿದ್ದರು. ಸ್ವಾಭಿಮಾನ ಮತ್ತು ಸ್ವಾವಲಂಬನೆಯನ್ನು ಜನರಲ್ಲಿ ಮೂಡಿಸಲು ಪ್ರಯತ್ನಿಸಿದರು.

ನಿಮಗಿದು ತಿಳಿದಿರಲಿ :

ಶುದ್ಧಿ ಚಳುವಳಿ :

ಹಿಂದೂ ಧರ್ಮದಲ್ಲಿದ್ದ ಜಾತಿವ್ಯವಸ್ಥೆ ಮತ್ತು ಕಂದಾಚಾರಗಳು ಜನರನ್ನು ಅನ್ಯಧರ್ಮದೆಡೆಗೆ ನೂಕಿದ್ದವು. ಇಂತಹ ಸಂದಿಗ್ಧ ಸಂದರ್ಭದಲ್ಲಿ ಹಿಂದೂ ಸಮಾಜವನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ವೇದಗಳನ್ನು ಮರು ವ್ಯಾಖ್ಯಾನಿಸಿ, ಲಿಂಗ ಮತ್ತು ಜಾತಿ ಸಮಾನತೆಯನ್ನು ಪ್ರತಿಪಾದಿಸಿದರು. ಹಿಂದೂ ಧರ್ಮದಿಂದ ಹೊರಹೋಗುವ ಅವಕಾಶವಿತ್ತೇ ಹೊರತು ಒಳಗೆ ಬರುವ ಅವಕಾಶಗಳೇ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಮತಾಂತರಗೊಂಡಿದ್ದ ಜನರನ್ನು ಮತ್ತೆ ಹಿಂದೂ ಧರ್ಮದ ತೆಕ್ಕೆಗೆ ತಂದುಕೊಳ್ಳಲು ದಯಾನಂದ ಸರಸ್ವತಿಯವರು ಶುದ್ಧಿ ಚಳುವಳಿಯನ್ನು ಪ್ರಾರಂಭಿಸಿದರು. ಮತಾಂತರಗೊಂಡವರನ್ನು ಶುದ್ಧಿ ಮಾಡಿ ಮತ್ತೆ ಹಿಂದೂ ಧರ್ಮಕ್ಕೆ ತಂದುಕೊಳ್ಳುವುದರ ಮೂಲಕ ಹಿಂದೂ ಧರ್ಮವನ್ನು ಗಟ್ಟಿಗೊಳಿಸಿದರು.

ಪ್ರಾರ್ಥನಾ ಸಮಾಜ


ಪ್ರಾರ್ಥನಾ ಸಮಾಜವನ್ನು ಆತ್ಮಾರಾಂ ಪಾಂಡುರಂಗರವರು ಮುಂಬೈನಲ್ಲಿ ಸ್ಥಾಪಿಸಿದರು. ಮಾನವನ ಸೇವೆಯೇ ಪರಮಾತ್ಮನ ಸೇವೆ ಎಂಬುದು ಇದರ ನೆಲೆಗಟ್ಟಾಗಿತ್ತು. ಈ ಸಮಾಜವು ಶಿಕ್ಷಣ ಪ್ರಸಾರಕ್ಕೆ ಹೆಚ್ಚಿನ ಆದ್ಯತೆ ನೀಡಿತು. ಡೆಕ್ಕನ್ ಶಿಕ್ಷಣ ಸಂಸ್ಥೆಯ ಮೂಲಕ ಶಿಕ್ಷಣ ಕ್ಷೇತ್ರದ ಪ್ರಗತಿಗೆ ಪ್ರಯತ್ನಿಸಿತು. ವಿಧವಾ ವಿವಾಹ, ಸ್ತ್ರೀ ಶಿಕ್ಷಣ, ಅಂತರ್ಜಾತಿ ವಿವಾಹ, ಸಹಭೋಜನ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಿ ಬಾಲ್ಯವಿವಾಹ, ಜಾತಿಪದ್ಧತಿ, ವಿಗ್ರಹಾರಾಧನೆ ಪರ್ದಾಪದ್ಧತಿಯನ್ನು ವಿರೋಧಿಸಿತು. ಸರ್ವಧರ್ಮಗಳು ಸತ್ಯದ ಪ್ರತೀಕವಾಗಿದ್ದು ಅವುಗಳನ್ನು ಗೌರವಿಸಬೇಕೆಂದರು. ಭಾರತದ ಪುನರುಜ್ಜೀವನ ಚಳುವಳಿಯ ಕಾಲದಲ್ಲಿ ಅನಾಥಾಲಯಗಳು, ರಾಷ್ಟ್ರೀಯ ಶಾಲೆಗಳು ಮತ್ತು ವಿಧವಾಶ್ರಮಗಳನ್ನು ಸ್ಥಾಪಿಸಲಾಯಿತು.

ಎಂ.ಜಿ. ರಾನಡೆಯವರು ಪ್ರಾರ್ಥನಾ ಸಮಾಜವನ್ನು ಜನಪ್ರಿಯಗೊಳಿಸಿದರು. ಸಮಾಜವನ್ನು ಸುಧಾರಿಸದೆ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸುವುದು ಅಸಾಧ್ಯವೆಂದರು. ಹಿಂದೂ, ಮುಸ್ಲಿಂ ಏಕತೆಯ ಪ್ರತಿಪಾದಕರಾಗಿದ್ದರು. ರಾನಡೆಯವರು ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಸಕ್ರಿಯರಾಗಿದ್ದರು. ಇವರು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಪ್ರೌಢಶಾಲೆಯನ್ನು ತೆರೆದರು.

ಸತ್ಯಶೋಧಕ ಸಮಾಜ


ಸತ್ಯಶೋಧಕ ಸಮಾಜದ ಸ್ಥಾಪಕರು ಜ್ಯೋತಿಭಾ ಫುಲೆರವರು. ಸ್ವಾತಂತ್ರ್ಯ ಪ್ರತಿಯೊಬ್ಬ ಮನುಷ್ಯನ ಪ್ರಥಮ ಅವಶ್ಯಕತೆ. ಸ್ವಾತಂತ್ರ್ಯವಿಲ್ಲದಿದ್ದರೆ ವಿಚಾರಗಳನ್ನು ಅಭಿವ್ಯಕ್ತಗೊಳಿಸಲು ಸಾದ್ಯವಿಲ್ಲ ಎಂದು ಪ್ರತಿಪಾದಿಸಿದರು. ಸತ್ಯಶೋಧಕ ಸಮಾಜವು ಪಾನನಿಷೇಧವನ್ನು ಒತ್ತಾಯಿಸಿತು. ಸ್ತ್ರೀಪುರುಷರ ಅಸಮಾನತೆ, ಮಾನವ ಹಕ್ಕುಗಳ ನಿರಾಕರಣೆ, ಜನರನ್ನು ಶೋಷಿಸುವುದು, ಅಸ್ಪೃಶ್ಯತಾ ಆಚರಣೆಗಳನ್ನು ವ್ಯಾಪಕವಾಗಿ ವಿರೋಧಿಸಿತು. ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿಯನ್ನು ನಡೆಸಿತು. ವಿದ್ಯಾರ್ಥಿನಿಯರ ಶಿಕ್ಷಣಕ್ಕಾಗಿ

> **ಚಟುವಟಿಕೆ :**
> *ಸ್ತ್ರೀ ಶಿಕ್ಷಣಕ್ಕಾಗಿ ಕರ್ನಾಟಕ ಸರ್ಕಾರವು ರೂಪಿಸಿರುವ ಯೋಜನೆಗಳನ್ನು ಶಿಕ್ಷಕರಿಂದ ತಿಳಿಯಿರಿ.*


ಮಹಾತ್ಮ ಜ್ಯೋತಿಭಾ ಫುಲೆ

ಶಾಲೆ ತೆರೆದರು. ಶೂದ್ರರು ಮತ್ತು ಅತಿಶೂದ್ರರು ಅನುಭವಿಸುತ್ತಿದ್ದ ಗುಲಾಮಗಿರಿಯನ್ನು ಹಾಗೂ ಅದಕ್ಕೆ ಕಾರಣರಾದವರನ್ನು ಉಗ್ರವಾಗಿ ಖಂಡಿಸಿತು. ಸಮಾಜದ ವ್ಯವಸ್ಥೆಯ ಸುಧಾರಣೆಗಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪ್ರತಿಪಾದಿಸಿತು. ಸತ್ಯಶೋಧಕ ಸಮಾಜದಿಂದ ಪ್ರಭಾವಿತರಾದ ಶಾಹು ಮಹಾರಾಜರು ಹಲವಾರು ಶಾಖೆಗಳನ್ನು ತೆರೆದು ಕಾರ್ಯ ಚಟುವಟಿಕೆಗಳನ್ನು ನಡೆಸಿದರು. ಸಮಾಜವು ರೈತಪರವಾದ ಹೋರಾಟಗಳನ್ನು ನಡೆಸಿತು. ಫುಲೆಯವರು ಶೋಷಣೆಯ ಬಗ್ಗೆ 'ಗುಲಾಮಗಿರಿ' ಪುಸ್ತಕದಲ್ಲಿ ತಿಳಿಸಿಕೊಡುತ್ತಾರೆ. ಫುಲೆಯವರ ಪತ್ನಿಯಾದ ಸಾವಿತ್ರಿಬಾಯಿ ಫುಲೆಯವರೂ ಕೂಡಾ ಮಹಿಳಾ ಶಿಕ್ಷಣಕ್ಕಾಗಿ ಸತ್ಯಶೋಧಕ ಸಮಾಜದ ಮೂಲಕ ಪ್ರಯತ್ನ ನಡೆಸಿದರು. ನಂತರದ ಕಾಲಘಟ್ಟದಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರು ಫುಲೆಯವರ ತತ್ವಗಳಿಂದ ಪ್ರಭಾವಿತರಾದರು.

ಆಲಿಘರ್ ಚಳುವಳಿ


ಸರ್ ಸಯ್ಯದ್
ಅಹಮದ್ ಖಾನ್

ಮುಸಲ್ಮಾನರು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ತಾತ್ವಿಕ ವಿಚಾರಗಳನ್ನು ಬದಲಿಸಿಕೊಂಡು ಪೂರ್ವ ಪಶ್ಚಿಮಗಳ ವಿಚಾರಗಳ ಸಂಗಮಕ್ಕೆ ಬೆಂಬಲಿಸುವುದು ಆಲಿಘರ್ ಚಳುವಳಿಯ ಉದ್ದೇಶವಾಗಿತ್ತು. ಈ ಚಳುವಳಿಯ ನಾಯಕತ್ವವನ್ನು ಸರ್ ಸೈಯದ್ ಅಹಮದ್‌ಖಾನ್‌ರವರು ವಹಿಸಿದ್ದರು. ಮುಸ್ಲಿಂ ಸಮುದಾಯಕ್ಕೆ ಆಧುನಿಕ ಶಿಕ್ಷಣ ನೀಡುವ ಉದ್ದೇಶದಿಂದಾಗಿ 'ಆಂಗ್ಲೋ–ಒರಿಯಂಟಲ್' ಕಾಲೇಜನ್ನು ಪ್ರಾರಂಭಿಸಿದರು. ಇದು ಮುಂದೆ ಆಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯ ಎಂದು ಹೆಸರು ಪಡೆಯಿತು. ಪಾಶ್ಚಾತ್ಯ ಶಿಕ್ಷಣದೊಂದಿಗೆ ಧಾರ್ಮಿಕ ಶಿಕ್ಷಣವನ್ನು ಸಹ ನೀಡುವುದು ಇದರ ಉದ್ದೇಶವಾಗಿತ್ತು. ಪಾಶ್ಚಾತ್ಯ ಶಿಕ್ಷಣದಿಂದ ನವೀಕೃತ ಸಮಾಜದ ನಿರ್ಮಾಣವು ಸಾಧ್ಯ ಎಂದು ಅವರು ನಂಬಿದ್ದರು. ಸರ್ ಸೈಯದ್‌ರವರು ರಾಷ್ಟ್ರೀಯ ಕಾಂಗ್ರೆಸ್‌ನಿಂದ ದೂರವೇ ಉಳಿದು ಮುಸಲ್ಮಾನ ಸಮುದಾಯವನ್ನು ಒಗ್ಗೂಡಿಸಿದರು. ಸ್ತ್ರೀಯರ ಶಿಕ್ಷಣವನ್ನು ಬೆಂಬಲಿಸಿ ಬಹುಪತ್ನಿತ್ವವನ್ನು ಹಾಗೂ ವಿಧವಾ ವಿವಾಹದ ವಿರುದ್ಧದ ವಿಚಾರಗಳನ್ನು ಖಂಡಿಸಿದರು.

ರಾಮಕೃಷ್ಣ ಮಿಷನ್


ರಾಮಕೃಷ್ಣ ಪರಮಹಂಸ

ರಾಮಕೃಷ್ಣ ಪರಮಹಂಸರು ದಕ್ಷಿಣೇಶ್ವರದಲ್ಲಿನ ಕಾಳಿದೇವಾಲಯದ ಅರ್ಚಕರಾಗಿದ್ದರು. ಅವರ ಚಿಂತನೆಯು ಭಾರತೀಯ ಸಂಸ್ಕೃತಿಯ ಆಧಾರವಾಗಿತ್ತು. ಅವರ ಪ್ರಕಾರ ಎಲ್ಲಾ ಧರ್ಮಗಳು ಸಮಾನ. ಯಾವ ದೇವರು, ಧರ್ಮ ಮುಖ್ಯ ಅನ್ನುವುದಕ್ಕಿಂತಲೂ ಆಧ್ಯಾತ್ಮದ ಸಾಕ್ಷಾತ್ಕಾರವು ಮುಖ್ಯವಾದುದೆಂದು ಅವರು ನಂಬಿದ್ದರು. ಅವರು ವಿಗ್ರಹಾರಾಧನೆಯಲ್ಲಿ ನಂಬಿಕೆ ಹೊಂದಿದ್ದರು. ಅವರು ನಿಸ್ವಾರ್ಥ ದೈವಭಕ್ತಿಯನ್ನು ಹೊಂದಿದ್ದರು. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಪರಮಹಂಸರ ಆತ್ಮೀಯ ಶಿಷ್ಯರಾಗಿದ್ದರು.

ಸ್ವಾಮಿ ವಿವೇಕಾನಂದರು ತಮ್ಮ ಗುರುಗಳಾದ ರಾಮಕೃಷ್ಣ ಪರಮಹಂಸರ ಧ್ಯೇಯಾದರ್ಶಗಳನ್ನು ಪ್ರಚಾರ ಪಡಿಸಲು ರಾಮಕೃಷ್ಣ ಮಿಷನ್‌ನ್ನು ಸ್ಥಾಪಿಸಿದರು. ಸರ್ವಧರ್ಮ ಸಮನ್ವಯ ತತ್ವವನ್ನು ಪ್ರಚಾರ ಮಾಡುವುದು ಮತ್ತು ಅನುಷ್ಠಾನಗೊಳಿಸುವುದು ಇದರ ಉದ್ದೇಶವಾಗಿತ್ತು. ರಾಮಕೃಷ್ಣಾಶ್ರಮಗಳು ಜಗತ್ತಿನೆಲ್ಲೆಡೆ ಶಾಖೆಗಳನ್ನು ಹೊಂದಿವೆ. ಇವುಗಳಲ್ಲಿ ಪ್ರಾಚೀನ ಆಧುನಿಕ ಮತ್ತು ಪಾಶ್ಚಿಮಾತ್ಯ ತತ್ವಜ್ಞಾನಿಗಳ ಮಿಲನವನ್ನು ಗಮನಿಸಬಹುದು.


ಸ್ವಾಮಿ ವಿವೇಕಾನಂದರು

ಸ್ವಾಮಿ ವಿವೇಕಾನಂದರು ಜೀವನ ಪ್ರೀತಿಯಲ್ಲಿರುವ ಮಹತ್ವವನ್ನು ತೆರೆದಿಟ್ಟು ಭಾರತೀಯರನ್ನು ಎಚ್ಚರಗೊಳಿಸಿದ ಕ್ರಾಂತಿಕಾರಿ ಸನ್ಯಾಸಿ. ವ್ಯಕ್ತಿ ಮತ್ತು ವ್ಯಕ್ತಿಯ ಇರುವಿಕೆಗೆ ಮತ್ತು ಸಾಮರ್ಥ್ಯಕ್ಕೆ ಮಹತ್ವ ನೀಡಬಯಸಿದರು. ಮೋಕ್ಷಕ್ಕಾಗಿ ದುಡಿಯಲು ಪ್ರಾರ್ಥನೆ, ಯೋಗ ಸಾಧನೆಗಳಲ್ಲದೆ ಸಮಾಜ ಸೇವೆಯು ಮುಖ್ಯವೆಂದರು. ರಾಮಕೃಷ್ಣಾಶ್ರಮವು ಶಿಕ್ಷಣ ಮತ್ತು ಸಮಾಜಸೇವೆಯ ಮೂಲಕ ಸಂಸ್ಕೃತಿಯ ಬೆಳವಣಿಗೆಯನ್ನು ಮುಂದುವರಿಸುತ್ತಿದೆ. ವಿವೇಕಾನಂದರ ಚಿಂತನೆಗಳಿಂದ ಗಾಂಧೀಜಿಯವರು ಸೇರಿದಂತೆ ಅನೇಕ ರಾಷ್ಟ್ರನಾಯಕರು ಪ್ರೇರಣೆಗೊಂಡರು.

1893ರಲ್ಲಿ ಸ್ವಾಮಿ ವಿವೇಕಾನಂದರು ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಸರ್ವಧರ್ಮ ಸಹಿಷ್ಣತೆ, ಸಕಲಧರ್ಮಗಳು ಸತ್ಯ ಎಂದು ಪ್ರತಿಪಾದಿಸಿ ಭಾರತದ ಹಿರಿಮೆಯನ್ನು ಜಗತ್ತಿಗೇ ಸಾರಿದರು. ಭಾರತೀಯ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸಿದರು. ಇವರು ಯುವಕರಿಗೆ ಪ್ರೇರಕಶಕ್ತಿಯಾಗಿದ್ದರು.

ಥಿಯಾಸಾಫಿಕಲ್ ಸೊಸೈಟಿ

ಥಿಯಾಸಾಫಿಕಲ್ ಸೊಸೈಟಿಯ ಮೂಲ ಸ್ಥಾಪಕರೆಂದರೆ ಮ್ಯಾಡಮ್ ಬ್ಲಾವಟಿಸ್ಕಿ ಮತ್ತು ಕರ್ನಲ್ ಎಚ್.ಎಸ್. ಅಲ್ಕಾಟ್. ಈ ಸಮಾಜವು ಯಾವುದೇ ಬೇಧ–ಭಾವ ಇಲ್ಲದ ವಿಶ್ವಭ್ರಾತೃತ್ವದ ನಿರ್ಮಾಣ, ವೈಚಾರಿಕತೆಯ ತುಲನಾತ್ಮಕ ಅಧ್ಯಯನ ನಡೆಸುವುದು ಮತ್ತು ಪ್ರಕೃತಿ ನಿಯಮ ಹಾಗೂ ಮಾನವನ ಸುಪ್ತ ಶಕ್ತಿಗಳನ್ನು ಪತ್ತೆ ಹಚ್ಚುವ ಮುಖ್ಯ ಉದ್ದೇಶಗಳಿಂದ ಸ್ಥಾಪಿತವಾಯಿತು.


ಆನಿಬೆಸೆಂಟರು

ಐರ್ಲೆಂಡ್ ದೇಶದ ಮಹಿಳೆ ಆನಿಬೆಸೆಂಟ್‌ರವರು ಥಿಯಾಸಾಫಿಕಲ್ ಸೊಸೈಟಿಯ ಕಾರ್ಯ ಚಟುವಟಿಕೆಗಳನ್ನು ಭಾರತದಲ್ಲಿ ಆರಂಭಿಸಿ ಅದಕ್ಕೆ ನವ ಚೈತನ್ಯ ನೀಡಿದರು. ಉಪನ್ಯಾಸಗಳ ಮೂಲಕ ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ ಬಿತ್ತಿದರು. ಸಮಾಜದಲ್ಲಿ ಸಮಾನತೆ ಮತ್ತು ಸೋದರತೆಯನ್ನು ವೃದ್ಧಿಸುವುದು ಮತ್ತು ಸಾಮರಸ್ಯ ಸಾಧಿಸಲು ಪ್ರಯತ್ನಿಸಿದರು. ಆನಿಬೆಸೆಂಟರು ಸ್ವಾತಂತ್ರ್ಯ ಚಳುವಳಿಯನ್ನು ವ್ಯಾಪಕವಾಗಿ ಬೆಂಬಲಿಸಿದರು. 'ನ್ಯೂ ಇಂಡಿಯಾ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. 1916ರಲ್ಲಿ ಹೋಂರೂಲ್ ಚಳುವಳಿಯನ್ನು ಪ್ರಾರಂಭಿಸಿದರು. 1917ರ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷೆಯಾಗಿದ್ದರು. ಭಾರತೀಯ ತಾತ್ವಿಕತೆಗೆ ಮತ್ತು ಸ್ವಾತಂತ್ರ್ಯ ಚಳುವಳಿಗೆ ಇವರು ಅಪಾರ ಕೊಡುಗೆಯನ್ನು ನೀಡಿದರು.

ನಿಮಗಿದು ತಿಳಿದಿರಲಿ :

'ಹೋಂರೂಲ್' : *ಬ್ರಿಟನ್ನಿನ ಹಿಡಿತದಲ್ಲಿದ್ದ ಐರ್ಲೆಂಡ್ ಮತ್ತು ಅಲ್ಲಿನ ಜನ ತಮ್ಮ ಆಡಳಿತವನ್ನು ತಾವೇ ನಡೆಸಿಕೊಳ್ಳುವ ಹಕ್ಕನ್ನು ಸಾಧಿಸಲು ಹೋಂರೂಲ್ ಆಂದೋಲನವನ್ನು ನಡೆಸಿದ್ದರು. ಇದರಿಂದ ಪ್ರಭಾವಿತರಾದ ಅನಿಬೆಸೆಂಟ್ ಭಾರತದಲ್ಲಿಯೂ ಹೋಂರೂಲ್ ಚಳುವಳಿಯನ್ನು ಆರಂಭಿಸಿದರು. 1916ರಲ್ಲಿ ಎರಡು ಹೋಂರೂಲ್ ಲೀಗ್‌ಗಳು ಅಸ್ತಿತ್ವಕ್ಕೆ ಬಂದವು. ಒಂದು ತಿಲಕರ ನೇತೃತ್ವದಲ್ಲಿ ಪೂನಾ ಕೇಂದ್ರವನ್ನಾಗಿಸಿಕೊಂಡಿತು. ಅದು ಮಹಾರಾಷ್ಟ್ರ, ಉತ್ತರಕರ್ನಾಟಕ, ಕೇಂದ್ರೀಯ ಪ್ರಾಂತ್ಯಗಳು ಮತ್ತು ಬೇರರ್ ಪ್ರದೇಶಗಳಲ್ಲಿ ತನ್ನ ಶಾಖೆಗಳನ್ನು ಹೊಂದಿತ್ತು. ಮತ್ತೊಂದು ಹೋಂರೂಲ್‌ಲೀಗ್ ಆನಿಬೆಸೆಂಟರ ನೇತೃತ್ವದಲ್ಲಿ ಮದ್ರಾಸನ್ನು ಕೇಂದ್ರವನ್ನಾಗಿಸಿಕೊಂಡಿತು. ತಿಲಕರು 'ಮರಾಠ' ಮತ್ತು 'ಕೇಸರಿ' ಪತ್ರಿಕೆಗಳನ್ನು ನಡೆಸಿದರೆ, ಬೆಸೆಂಟರು 'ನ್ಯೂ ಇಂಡಿಯಾ', 'ಕಾಮನ್‌ವೆಲ್ತ್' ಮತ್ತು 'ಯಂಗ್ ಇಂಡಿಯಾ' ಪತ್ರಿಕೆಗಳ ಮೂಲಕ ಪ್ರಚಾರ ಮಾಡಿದರು.*

ಅಭ್ಯಾಸಗಳು

I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

1. 19ನೆಯ ಶತಮಾನವನ್ನು __________ ಕಾಲವೆಂದು ಕರೆಯಲಾಗಿದೆ.
2. ರಾಮ್ ಮೋಹನರಾಯರು __________ ಪತ್ರಿಕೆಯನ್ನು ಪ್ರಾರಂಭಿಸಿದರು.
3. ಪ್ರಾರ್ಥನಾ ಸಮಾಜದ ಸ್ಥಾಪಕರು__________ .
4. ಸ್ವಾತಂತ್ರ್ಯ ಪ್ರತಿಯೊಬ್ಬ ಮನುಷ್ಯನ ಪ್ರಥಮ ಅವಶ್ಯಕತೆ ಎಂದು ಪ್ರತಿಪಾದಿಸಿದವರು__________.
5. ಸ್ವಾಮಿ ವಿವೇಕಾನಂದರ ಗುರುಗಳಾಗಿದ್ದವರು __________ .

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.

1. ಬ್ರಹ್ಮ ಸಮಾಜದ ಬೋಧನೆಗಳಾವುವು ?
2. ದಯಾನಂದ ಸರಸ್ವತಿಯವರ 'ವೇದಗಳಿಗೆ ಹಿಂದಿರುಗಿ' ಎನ್ನುವ ಘೋಷಣೆಯನ್ನು ವಿಶ್ಲೇಷಿಸಿ.
3. ಸತ್ಯ ಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ.
4. ಆಲಿಘರ್ ಚಳುವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ.
5. ರಾಮಕೃಷ್ಣಮಿಷನ್ ದೃಷ್ಟಿಕೋನವನ್ನು ವಿವರಿಸಿ.
6. ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು. ಹೇಗೆ ಎಂಬುದನ್ನು ವಿವರಿಸಿ.
7. ಆನಿಬೆಸೆಂಟರ ಸುಧಾರಣಾ ಕ್ರಮಗಳಾವುವು ?

III. ಚಟುವಟಿಕೆಗಳು

1. ಹತ್ತಿರದಲ್ಲಿರುವ ರಾಮಕೃಷ್ಣಾಶ್ರಮಕ್ಕೆ ಭೇಟಿ ನೀಡಿ ವಿವೇಕಾನಂದರ ದೃಷ್ಟಿಕೋನದ ಬಗ್ಗೆ ಮಾಹಿತಿ ಸಂಗ್ರಹಿಸಿ.

IV. ಯೋಜನೆ

1. ಗ್ರಂಥಾಲಯಗಳಿಗೆ ಭೇಟಿ ನೀಡಿ ಸಮಾಜ ಸುಧಾರಣೆ ಪುಸ್ತಕಗಳನ್ನು ಓದಿರಿ. ಶಿಕ್ಷಕರ ನೆರವಿನಿಂದ ಅಂತರ್ಜಾಲದಿಂದ ಮಾಹಿತಿ ಸಂಗ್ರಹಿಸಿ.
2. ಸಮಾಜ ಸುಧಾರಣೆಗಾಗಿ ಇಂದು ಶ್ರಮಿಸುತ್ತಿರುವ ಸಂಸ್ಥೆಗಳ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿ.

ಪಾಠ – 6

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳು.*
- *ದಂಗೆಯ ತತ್‌ಕ್ಷಣದ ಕಾರಣ.*
- *ದಂಗೆಯ ವಿಸ್ತರಣೆ ಮತ್ತು ಸ್ವರೂಪ.*
- *ದಂಗೆಯ ವಿಫಲತೆ ಮತ್ತು ಪರಿಣಾಮಗಳು.*

ಭಾರತದಲ್ಲಿ ತಮ್ಮ ಅಧಿಕಾರ ವಿಸ್ತರಣೆ ಉದ್ದೇಶದಿಂದ ಇಂಗ್ಲಿಷರು ಸಹಾಯಕ ಸೈನ್ಯ ಪದ್ಧತಿ ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಗಳನ್ನು ಜಾರಿಗೆ ತಂದಿದ್ದರು. ಈ ನೀತಿಗಳಿಂದ ಹಲವು ಸಂಸ್ಥಾನಗಳು ಬ್ರಿಟಿಷರ ವಶವಾಗಿದ್ದವು. ಇದರಿಂದಾಗಿ ಭಾರತೀಯರು ಅಸಮಾಧಾನಗೊಂಡರು. ಇವರ ಆಡಳಿತದ ಬಗ್ಗೆಯೂ ಕೂಡಾ ಜನರಲ್ಲಿ ಅಸಮಾಧಾನವಿತ್ತು. ಈ ಅಸಮಾಧಾನವು 1857ರಲ್ಲಿ ಮಹಾಪ್ರತಿಭಟನೆಯ ರೂಪದಲ್ಲಿ ಸ್ಫೋಟಿಸಿತ್ತು. ಇದನ್ನು ಕೆಲವು ಭಾರತೀಯ ಇತಿಹಾಸಕಾರರು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಕರೆದರೆ, ಇಂಗ್ಲಿಷ್ ಇತಿಹಾಸಕಾರರು ಇದೊಂದು 'ಸಿಪಾಯಿ ದಂಗೆ' ಮಾತ್ರ ಎಂದಿದ್ದಾರೆ.

ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳು :

ರಾಜಕೀಯ ಕಾರಣಗಳು : ಬ್ರಿಟಿಷರು ಜಾರಿಗೆ ತಂದಿದ್ದ 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯಿಂದಾಗಿ ಹಲವು ದೇಶೀ ಸಂಸ್ಥಾನಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಯಿತು. ಈ ನೀತಿಯಿಂದಾಗಿ ಸತಾರ, ಜೈಪುರ, ಝಾನ್ಸಿ, ಉದಯಪುರ ಮೊದಲಾದ ಸಂಸ್ಥಾನಗಳು ಬ್ರಿಟಿಷರ ವಶವಾದವು. ಡಾಲ್‌ಹೌಸಿಯು ತಂಜಾವೂರು ಮತ್ತು ಕರ್ನಾಟಿಕ್ ನವಾಬರಿಗಿದ್ದ ರಾಜ ಪದವಿಗಳನ್ನು ರದ್ದುಪಡಿಸಿದನು. ಮೊಘಲ್ ಚಕ್ರವರ್ತಿ, ಔದ್‌ನ ನವಾಬ ಮೊದಲಾದ ರಾಜರುಗಳನ್ನು ಇಂಗ್ಲಿಷರು ಅಧಿಕಾರದಿಂದ ಪದಚ್ಯುತಗೊಳಿಸಿದರು. ಪರಿಣಾಮವಾಗಿ ಇವರನ್ನು ಅವಲಂಬಿಸಿದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು. ಇದು ಬ್ರಿಟಿಷರ ವಿರುದ್ಧದ 1857ರ ಪ್ರತಿಭಟನೆಗೆ ಪ್ರೇರಕವಾಯಿತು.

ನಿಮಗಿದು ತಿಳಿದಿರಲಿ:

ದತ್ತು ಮಕ್ಕಳಿಗೆ ಹಕ್ಕಿಲ್ಲ: *ಈ ನೀತಿಯನ್ನು ಇಂಗ್ಲಿಷರ ಕಾಲದಲ್ಲಿ ಲಾರ್ಡ್ ಡಾಲ್‌ಹೌಸಿಯು ಜಾರಿಗೆ ತಂದಿದ್ದನು. ಯಾವುದೇ ದೇಶೀಯ ಸಂಸ್ಥಾನದ ರಾಜನು ತನಗೆ ಮಕ್ಕಳಿಲ್ಲದಿದ್ದರೆ ರಾಜ್ಯವನ್ನು ದತ್ತು ಮಕ್ಕಳಿಗೆ ನೀಡುವಂತಿರಲಿಲ್ಲ. ಇದರಿಂದಾಗಿ ಆ ಸಂಸ್ಥಾನವು ಸಹಜವಾಗಿ ಇಂಗ್ಲಿಷರ ಆಳ್ವಿಕೆಗೆ ಒಳಪಡುತ್ತಿದ್ದವು.*

ಆರ್ಥಿಕ ಕಾರಣಗಳು : ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು. ಇಂಗ್ಲೆಂಡ್ ವ್ಯಾಪಾರಿ ರಾಷ್ಟ್ರವಾಗಿರದೆ ಕೈಗಾರಿಕೆಗಳ ಕಾರ್ಯಾಗಾರವಾಯಿತು. ಭಾರತದಲ್ಲಿದ್ದಂತಹ ಕರಕುಶಲಗಾರರು ನಿರುದ್ಯೋಗಿಗಳಾದರು. ವಿಶೇಷವಾಗಿ ಬಟ್ಟೆ ಮತ್ತು ಉಣ್ಣೆ ಕೈಗಾರಿಕೆಗಳು ಅವನತಿ ಹೊಂದಿ ನೇಕಾರಿಕೆ ವೃತ್ತಿಯವರು ಉದ್ಯೋಗ ಕಳೆದುಕೊಂಡರು. ಗೃಹಕೈಗಾರಿಕೆಗಳು ಇದೇ ಬಗೆಯ ತೀವ್ರ ಆರ್ಥಿಕನಷ್ಟ ಅನುಭವಿಸಿ ಶಿಥಿಲಗೊಂಡವು. ಭಾರತದ ವಸ್ತುಗಳನ್ನು ಇಂಗ್ಲೆಂಡಿನಲ್ಲಿ ಮಾರಲು ಇಂಗ್ಲಿಷರು ದುಬಾರಿ ಸುಂಕವನ್ನು ಹೇರಿದರು. ಜಮೀನ್ದಾರಿ ಪದ್ಧತಿಯಿಂದಾಗಿ ಸರ್ಕಾರ ಮತ್ತು ರೈತನ ಮಧ್ಯೆ ಇದ್ದ ಮಧ್ಯವರ್ತಿ ಜಮೀನ್ದಾರನು ಕೃಷಿಕರನ್ನು

ಶೋಷಿಸುತ್ತಿದ್ದನು. ಕಂದಾಯ ವಸೂಲಿ ಮಾಡಲು ತಾಲ್ಲೂಕುದಾರರಿಗೆ ನೀಡಿದ್ದ ಹಕ್ಕುಗಳನ್ನು ಹಿಂಪಡೆಯಲಾಯಿತು. ಇನಾಂ ಆಯೋಗ ನೇಮಿಸಿ ಇನಾಂ ಭೂಮಿಯನ್ನು ವಾಪಸ್ ಪಡೆಯಲಾಯಿತು. ಇದರಿಂದಾಗಿ ಕೃಷಿಕರು ತೀವ್ರವಾಗಿ ಅವಮಾನ ಮತ್ತು ಆರ್ಥಿಕಸಂಕಷ್ಟ ಅನುಭವಿಸಿದರು. ಇದೂ ಕೂಡ ರೈತರ ಮಹಾನ್ ಪ್ರತಿಭಟನೆಗೆ ಕಾರಣವಾಯಿತು.

ಆಡಳಿತಾತ್ಮಕ ಕಾರಣಗಳು : ಇಂಗ್ಲಿಷರು ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಜಾರಿಗೆ ತಂದರು. ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ದವು. ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಯಿತು. ಇಂಗ್ಲಿಷ್ ನ್ಯಾಯಾಧೀಶರು ಬಹುತೇಕವಾಗಿ ಇಂಗ್ಲಿಷರ ಪರವಾಗಿ ನ್ಯಾಯ ನೀಡುತ್ತಿದ್ದರು. ಹೊಸ ಕಾನೂನಿನ ಆಶಯಗಳು ಜನರಿಗೆ ಅರಿವಾಗಲಿಲ್ಲ.

ಸೈನಿಕ ಕಾರಣಗಳು : ಬ್ರಿಟಿಷರ ಸೈನ್ಯದಲ್ಲಿ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರವಾಗಿತ್ತು. ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ. ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.

ದಂಗೆಯ ಸ್ಫೋಟ & ಹರಡುವಿಕೆ

ಇಂಗ್ಲಿಷ್ ಸೇನೆಯಲ್ಲಿದ್ದ ಹೆಚ್ಚಿನ ಪ್ರಮಾಣದ ಭಾರತೀಯ ಸಿಪಾಯಿಗಳು ತಾವೆಲ್ಲರೂ ಒಂದಾಗಿ ಹೋರಾಡಿದರೆ ಇಂಗ್ಲಿಷರನ್ನು ಭಾರತದಿಂದ ಓಡಿಸಬಹುದು ಎಂಬ ಆತ್ಮವಿಶ್ವಾಸವನ್ನು ಹೊಂದಿದ್ದರು. ಈ ಸನ್ನಿವೇಶದಲ್ಲಿ ಸೈನಿಕರಿಗೆ **'ರಾಯಲ್ ಎನ್‌ಫೀಲ್ಡ್'** ಎಂಬ ನವೀನ ಬಂದೂಕುಗಳನ್ನು ನೀಡುತ್ತಿದ್ದರು. ಬಂದೂಕುಗಳಿಗೆ ಉಪಯೋಗಿಸುತ್ತಿದ್ದ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿತ್ತು. ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ಧವಾಗಿತ್ತು. ಇದರಿಂದಾಗಿ ಈ ಘಟನೆಯು ದಂಗೆಗೆ ತಕ್ಷಣದ ಕಾರಣವಾಯಿತು.

ಬ್ಯಾರಕ್‌ಪುರದಲ್ಲಿನ ಸೈನಿಕ ಪಡೆಯಲ್ಲಿ ಹಬ್ಬಿದ ಈ ವದಂತಿಯು ತೀವ್ರ ಅಸಮಾಧಾನಕ್ಕೆ ಕಾರಣವಾಯಿತು. ಸೈನಿಕರಿಗೆ ತುಪಾಕಿಯನ್ನು ಹಲ್ಲಿನಿಂದ ಕಚ್ಚಿ ತೆಗೆಯುವಂತೆ ಇಂಗ್ಲಿಷರು ಆದೇಶಿಸಿದಾಗ ಇದನ್ನು ತಿರಸ್ಕರಿಸಿ ಮೇಲಾಧಿಕಾರಿಗಳ ವಿರುದ್ಧ ಬ್ಯಾರಕ್‌ಪುರದ ಸೈನಿಕರು ಬಂಡಾಯವೆದ್ದರು. ಇದೇ ಸಂದರ್ಭದಲ್ಲಿ ಮಂಗಲ ಪಾಂಡೆ ಎಂಬ ಸೈನಿಕನು ಬ್ರಿಟಿಷ್ ಸೈನ್ಯದ ಅಧಿಕಾರಿಯೊಬ್ಬನನ್ನು ಕೊಂದನು. ಇದರ ಪರಿಣಾಮವಾಗಿ ಮಂಗಲ ಪಾಂಡೆಯನ್ನು ಬಂಧಿಸಿ ವಿಚಾರಣೆಗೊಳಪಡಿಸಿ ಗಲ್ಲಿಗೇರಿಸಲಾಯಿತು.

ದಂಗೆಯ ಹರಡುವಿಕೆ ಮೀರತ್ ಬ್ರಿಟಿಷರ ಪ್ರಬಲ ಸೇನಾ ನೆಲೆಯಾಗಿತ್ತು. ಇಲ್ಲಿಯೂ ಕೂಡಾ ಇಂಗ್ಲಿಷರು ಭಾರತೀಯ ಸೈನಿಕರಿಗೆ ತುಪಾಕಿಗಳನ್ನು ಬಳಸಲು ಆದೇಶಿಸಿದಾಗ ಭಾರತೀಯ ಸೈನಿಕರು ಅದನ್ನು ನಿರಾಕರಿಸಿದರು. ಆಗ ಸಿಪಾಯಿಗಳನ್ನು ಬಂಧಿಸಲಾಯಿತು. ಇದರಿಂದಾಗಿ ಮೀರತ್‌ನಲ್ಲಿ ದಂಗೆ ಉಂಟಾಯಿತು. ಪರಿಣಾಮವಾಗಿ ಸೈನಿಕರು ಸೆರಮನೆಗೆ ನುಗ್ಗಿ ಈಗಾಗಲೇ ಬಂಧಿತರಾಗಿದ್ದ ಭಾರತೀಯ ಸಿಪಾಯಿಗಳನ್ನು ಬಿಡುಗಡೆಗೊಳಿಸಿದರು. ಇದು ಸ್ವಾತಂತ್ರ್ಯ ಸಂಗ್ರಾಮದ ಬೀಜಾಂಕುರಕ್ಕೆ ನಾಂದಿಯಾಯಿತು. ನಂತರ ಸೈನಿಕರ ಗುಂಪು ಮೀರತ್‌ನಿಂದ ದೆಹಲಿಗೆ ತಲುಪಿತು. ಅವರು ಕೆಂಪುಕೋಟೆಗೆ ಮುತ್ತಿಗೆ ಹಾಕಿ ಮೊಘಲ್ ದೊರೆ ಎರಡನೇ ಬಹದ್ದೂರ ಷಾನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿದರು. ಹಲವಾರು ಭಾಗಗಳಿಂದ ಪ್ರತಿಭಟನಾ ನಿರತ ಸಿಪಾಯಿಗಳು ದೆಹಲಿಗೆ ತಲುಪಿದರು. ಇದರಿಂದಾಗಿ ಪ್ರತಿಭಟನೆಯು ತೀವ್ರ ಸ್ವರೂಪ ತಾಳಿತು. ಕಾಳ್ಗಿಚ್ಚಿನಂತೆ ಪ್ರತಿಭಟನೆಯು ದೆಹಲಿ, ಕಾನ್ಪುರ ಮತ್ತು ಝಾನ್ಸಿಗಳಲ್ಲಿ ಹರಡಿತು.

ಕಾನ್ಪುರದಲ್ಲಿ ನಾನಾ ಸಾಹೇಬನು ಸಿಡಿದೆದ್ದನು. ಈತನಿಗೆ ತಾತ್ಯಾ ಟೋಪೆಯು ಸಹಾಯಕನಾಗಿದ್ದನು. ಝಾನ್ಸಿಯಲ್ಲಿ ರಾಣಿ ಲಕ್ಷ್ಮಿಬಾಯಿಯ ನಾಯಕತ್ವದಲ್ಲಿ ದಂಗೆ ಉಂಟಾಯಿತು. ಕಾನ್ಪುರ ಬ್ರಿಟಿಷರ ವಶವಾದ ನಂತರ ತಾತ್ಯಾಟೋಪೆಯು ಝಾನ್ಸಿರಾಣಿಯ ಸಹಾಯಕ್ಕೆ ಬಂದನು.


ತಾತ್ಯಾಟೋಪೆ

ಪ್ರತಿಭಟನೆಯ ಕಾವು ಲಕ್ನೋವಿನಲ್ಲಿಯೂ ಉಂಟಾಯಿತು. ಆದರೆ ಅಂತಿಮವಾಗಿ ಲಕ್ನೋ ಇಂಗ್ಲಿಷರ ವಶವಾಯಿತು. ಇಲ್ಲಿಂದ ಸಂಗ್ರಾಮವು ಯಮುನಾ ನದಿಯ ದಕ್ಷಿಣಕ್ಕೆ ಹಬ್ಬಿತು. ಇದರಿಂದಾಗಿ ಝಾನ್ಸಿಯಲ್ಲಿನ ಸಿಪಾಯಿಗಳು ಪ್ರಭಾವಿತರಾದರು. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ಕೆರಳಿದ ಝಾನ್ಸಿರಾಣಿ ಲಕ್ಷ್ಮಿಭಾಯಿಯು ಇಂಗ್ಲಿಷರ ವಿರುದ್ಧ ಯುದ್ದ ಸಾರಿದಳು. ಯುದ್ದ ಮಾಡಿ ಗ್ವಾಲಿಯರ್‌ನ್ನು ವಶಕ್ಕೆ ಪಡೆದಳು. ಮತ್ತೊಮ್ಮೆ ಬ್ರಿಟಿಷರ ವಿರುದ್ಧ ನಡೆದ ಹೋರಾಟದಲ್ಲಿ ಶೌರ್ಯದಿಂದ ಹೋರಾಡಿ ರಾಣಿಯು ಅಸುನೀಗಿದಳು. ಇಂದಿಗೂ ರಾಣಿಯು ಸ್ವಾತಂತ್ರ್ಯ ಸಂಗ್ರಾಮ ಇತಿಹಾಸದಲ್ಲಿ ಹೆಮ್ಮೆಯ ಸ್ಥಾನವನ್ನು ಹೊಂದಿದ್ದಾಳೆ.


ಝಾನ್ಸಿರಾಣಿ ಲಕ್ಷ್ಮಿಭಾಯಿ

ದಂಗೆಯ ವಿಫಲತೆಗೆ ಕಾರಣಗಳು :

1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವಾರು ಕಾರಣಗಳಿಂದ ವಿಫಲವಾಯಿತು. ಇದು ಇಡೀ ಭಾರತವನ್ನು ವ್ಯಾಪಿಸಿದ ದಂಗೆಯಾಗಿರಲಿಲ್ಲ. ಇದು ದೇಶದ ಬಿಡುಗಡೆಗಾಗಿ ನಡೆದದ್ದಕ್ಕಿಂತ ಅವರ ಸ್ವಹಿತಾಸಕ್ತಿ ಹಾಗೂ ಹಕ್ಕುಗಳಿಗಾಗಿ ನಡೆದಿತ್ತು. ಇದು ಯೋಜಿತ ದಂಗೆಯಾಗಿರದೆ ಅನಿರೀಕ್ಷಿತ ಕಾರಣಗಳಿಂದ ಪ್ರೇರೇಪಿತವಾಗಿತ್ತು. ಬ್ರಿಟಿಷ್ ಸೈನಿಕರಲ್ಲಿನ ಒಗಟ್ಟು ಮತ್ತು ಭಾರತೀಯ ಸೈನಿಕರಲ್ಲಿದ್ದ ಭಿನ್ನತೆಯು ದಂಗೆಯ ವಿಫಲತೆಗೆ ಕಾರಣವಾಗಿದೆ. ದಂಗೆಗೆ ಸೂಕ್ತ ಮಾರ್ಗದರ್ಶನ ಮತ್ತು ವ್ಯವಸ್ಥಿತ ಸಂಘಟನೆಯ ಕೊರತೆ ಇತ್ತು. ಹಾಗೆಯೇ ಯುದ್ಧ ತಂತ್ರ, ಸೈನಿಕ ಪರಿಣತಿ, ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತಿನ ಕೊರತೆ ಇತ್ತು, ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ. ಹಲವಾರು ದೇಶೀಯ ಸಂಸ್ಥಾನಗಳ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆಯಿಂದಾಗಿ ಸಿಪಾಯಿಗಳಿಗೆ ಬೆಂಬಲ ನೀಡಲಿಲ್ಲ. ಸಿಪಾಯಿಗಳು ಮಾಡಿದಂತಹ ಲೂಟಿ, ದರೋಡೆ ಮೊದಲಾದ ಗಂಭೀರವಾದ ತಪ್ಪುಗಳಿಂದಾಗಿ ಜನರ ವಿಶ್ವಾಸ ಕಳೆದುಕೊಂಡರು.

ದಂಗೆಯ ಪರಿಣಾಮಗಳು :

ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡು ಬ್ರಿಟನ್ ಸಾಮ್ರಾಜ್ಞಿಗೆ ಆಡಳಿತವು ವರ್ಗಾವಣೆಗೊಂಡಿತು. ಭಾರತದ ವ್ಯವಹಾರವನ್ನು ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು. 1858ರಲ್ಲಿ ಬ್ರಿಟನ್ ರಾಣಿಯು ಘೋಷಣೆ ಹೊರಡಿಸಿದರು. ಅದರಲ್ಲಿ ಈ ಕೆಳಗಿನ ಅಂಶಗಳನ್ನು ಪ್ರಸ್ತಾಪಿಸಲಾಗಿತ್ತು.

- ಕಂಪನಿಯು ದೇಶೀ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
- ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
- ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.
- ಕಾನೂನಿನ ಮುಂದೆ ಸಮಾನತೆ.
- ಧಾರ್ಮಿಕ ಸಹಿಷ್ಣುತೆಯೊಂದಿಗೆ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.

ಭಾರತೀಯರ ಪ್ರೀತಿ, ಬೆಂಬಲ, ವಿಶ್ವಾಸವಿಲ್ಲದಿದ್ದರೆ ನಾವು ಶಾಂತಿಯಿಂದ ಆಳ್ವಿಕೆ ಮಾಡಲು ಸಾಧ್ಯವಿಲ್ಲವೆಂಬುದನ್ನು ಬ್ರಿಟಿಷರು ಅರಿತರು. ಇದು ಭಾರತೀಯರ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿಯನ್ನು ನೀಡಿತು. ಭಾರತೀಯರು ಇನ್ನು ಮುಂದೆ ಹೋರಾಟದ ಪರ್ಯಾಯ ಮಾರ್ಗವನ್ನು ಹುಡುಕಿಕೊಳ್ಳುವ ಅನಿವಾರ್ಯತೆಯನ್ನು ಕಂಡುಕೊಂಡರು.

ಅಭ್ಯಾಸಗಳು

I. ಬಿಟ್ಟಿರುವ ಸ್ಥಳವನ್ನು ಸೂಕ್ತ ಪದದಿಂದ ತುಂಬಿರಿ.

1. 1857ರ ದಂಗೆಯನ್ನು ಬ್ರಿಟಿಷ್ ಇತಿಹಾಸಕಾರರು ________ ಎಂದು ಕರೆದಿದ್ದಾರೆ.
2. ಡಾಲ್ ಹೌಸಿಯು ಜಾರಿಗೆ ತಂದ ನೀತಿ ________.
3. 1857ರ ದಂಗೆಯ ಸಮಯದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದವನು ________ .
4. ಝಾನ್ಸಿ ರಾಣಿಯು ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ ________ ನ್ನು ವಶಕ್ಕೆ ಪಡೆದಳು.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :

1. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳು ಯಾವುವು? ವಿಶ್ಲೇಷಿಸಿ.
2. 1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು? ವಿವರಿಸಿ.
3. 1857ರ ದಂಗೆಯಲ್ಲಿ ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳಾವುವು?
4. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತತ್‌ಕ್ಷಣದ ಕಾರಣಗಳಾವುವು?
5. ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿ.
6. 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು?

III. ಚಟುವಟಿಕೆಗಳು :

1. ಭಾರತದ ಭೂಪಟದಲ್ಲಿ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದ ಬ್ರಿಟಿಷರ ವಶವಾದ ಸಂಸ್ಥಾನಗಳನ್ನು ಗುರುತಿಸಿ.
2. 1857ರ ದಂಗೆಯು ಭಾರತೀಯರಿಗೆ 'ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' – ಈ ವಿಷಯದ ಬಗ್ಗೆ ತಜ್ಞರಿಂದ ಉಪನ್ಯಾಸ ಏರ್ಪಡಿಸಿ.

ಪಾಠ – 7

ಭಾರತದಲ್ಲಿ ಬ್ರಿಟಿಷ್ ಆಡಳಿತದ ಪರಿಣಾಮಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಏಕರೂಪದ ಆಡಳಿತ ವ್ಯವಸ್ಥೆ*
- *ಕೈಗಾರಿಕೆ*
- *ಸಾರಿಗೆ ಸಂಪರ್ಕ*
- *ಆರ್ಥಿಕ ಪ್ರಭಾವ*
- *ಭೂಕಂದಾಯ ವ್ಯವಸ್ಥೆ*

ಭಾರತದಲ್ಲಿ ಬ್ರಿಟಿಷರು, ವಸಾಹತು ಸ್ಥಾಪನೆ ಮತ್ತು ವಿಸ್ತರಣೆಯ ನಂತರ ಆಡಳಿತವನ್ನು ಪ್ರಾರಂಭಿಸಿದರು. ಬ್ರಿಟಿಷರ ಆಡಳಿತಾವಧಿಯಲ್ಲಿ ಭಾರತದ ವಿವಿಧ ಕ್ಷೇತ್ರಗಳ ಮೇಲೆ ತೀವ್ರತರವಾದ ಪರಿಣಾಮಗಳು ಉಂಟಾದವು.

ಏಕರೂಪದ ಆಡಳಿತ ವ್ಯವಸ್ಥೆ

ಬ್ರಿಟಿಷರು ತಮ್ಮ ಒಡೆದು ಆಳುವ ನೀತಿ, ದತ್ತು ಮಕ್ಕಳಿಗೆ ಹಕ್ಕಿಲ್ಲ, ಸಹಾಯಕ ಸೈನ್ಯ ಪದ್ಧತಿಯಂತಹ ಪ್ರಯೋಗಗಳಿಂದ ಭಾರತದ ಮೇಲೆ ನಿಯಂತ್ರಣವನ್ನು ಸಾಧಿಸುವಲ್ಲಿ ಯಶಸ್ವಿಯಾದರು. ಇದರಿಂದಾಗಿ ಇಡೀ ಭಾರತಕ್ಕೆ ಏಕರೂಪದ ಆಡಳಿತ ಜಾರಿಗೆ ಬಂದಿತು. ದೇಶದಲ್ಲಿ ಹಲವಾರು ಸಂಸ್ಥಾನಗಳು ಅಸ್ತಿತ್ವದಲ್ಲಿದ್ದರೂ ಅವುಗಳ ಮೇಲೆ ಸಹ ಬ್ರಿಟಿಷರು ನಿಯಂತ್ರಣ ಹೊಂದಿದ್ದರು. ಇದರಿಂದ ಆಡಳಿತ ವ್ಯವಸ್ಥೆಯಲ್ಲಿ ಏಕರೂಪತೆಯನ್ನು, ಕಾನೂನು ಸುವ್ಯವಸ್ಥೆಯನ್ನು ತರುವಲ್ಲಿ ಬ್ರಿಟಿಷರು ಸಫಲರಾದರು. ಇದರಿಂದ ದೇಶದಲ್ಲಿ ಸಮಾನತೆ ಮತ್ತು ಏಕರೂಪದ ಅಧಿಕಾರಶಾಹಿತ್ವ ಅಸ್ತಿತ್ವಕ್ಕೆ ಬಂದಿತು.

ಆರ್ಥಿಕ ಪ್ರಭಾವ

18ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯು ದೇಶೀ ಕೈಗಾರಿಕೆಗಳ ಮೇಲೆ ತೀವ್ರವಾಗಿ ಪರಿಣಾಮ ಬೀರಿತು. ಇದರಿಂದಾಗಿ ಐರೋಪ್ಯ ಮಾರುಕಟ್ಟೆಯಲ್ಲಿ ತೀವ್ರ ಅಂತರ ಉಂಟಾಗಿ ಅಸಮತೋಲನ ಬೆಳೆಯಿತು. ಒಂದು ಕಾಲದಲ್ಲಿ ಭಾರತದ ಸಿದ್ಧವಸ್ತುಗಳ ರಫ್ತು ಸದಾಕಾಲ ಆಮದಿಗಿಂತ ಹೆಚ್ಚಾಗಿರುತ್ತಿತ್ತು. ಕೈಗಾರಿಕಾ ಕ್ರಾಂತಿಯಿಂದಾಗಿ, ಉತ್ಪಾದನಾ ಕೇಂದ್ರವಾಗಿದ್ದ ಭಾರತ ಕೇವಲ ಕಚ್ಚಾ ವಸ್ತುಗಳನ್ನು ರಫ್ತು ಮಾಡುವ ಸ್ಥಿತಿ ತಲುಪಿತು. ಬ್ರಿಟಿಷರು ಸಿದ್ಧವಸ್ತುಗಳನ್ನು ಭಾರತಕ್ಕೆ ತಂದು ಕಡಿಮೆ ಬೆಲೆಗೆ ಮಾರಲು ಪ್ರಾರಂಭಿಸಿದರು. ಯಂತ್ರಗಳ ಮೂಲಕ ಅತಿ ಕಡಿಮೆ ವೆಚ್ಚದಲ್ಲಿ ಉತ್ಪಾದಿಸಲ್ಪಟ್ಟ ಇಂಗ್ಲೆಂಡಿನ ಸರಕುಗಳೊಂದಿಗೆ ಭಾರತದ ಸರಕುಗಳು ಸ್ಪರ್ಧಿಸಲಾರದೆ ಸೋತವು. ಇದರಿಂದಾಗಿ ಕೈಗಾರಿಕೆಗಳು ತೀವ್ರ ನಷ್ಟವನ್ನು ಅನುಭವಿಸಿ, ಕಾರ್ಮಿಕರು ನಿರುದ್ಯೋಗಿಗಳಾದರು. ಇದು ಭಾರತದ ಅರ್ಥ ವ್ಯವಸ್ಥೆಯ ಮೇಲೆ ಗಂಭೀರವಾದ ಪರಿಣಾಮವನ್ನು ಬೀರಿತು.

ಭೂಕಂದಾಯ ವ್ಯವಸ್ಥೆ

ಬ್ರಿಟಿಷರ ಮೂಲ ಉದ್ದೇಶವು ಲಾಭಗಳಿಸಿಕೊಳ್ಳುವುದ್ದಾದರಿಂದ ಆಡಳಿತವನ್ನು ಅವರ ಹಿತಾಸಕ್ತಿಗನುಗುಣವಾಗಿ ರೂಪಿಸಿಕೊಂಡರು. ಇದರಿಂದಾಗಿ ಭೂಕಂದಾಯ ವ್ಯವಸ್ಥೆಗೆ ಸಂಬಂಧಿಸಿದಂತೆ ಹಲವು ಹೊಸಪದ್ಧತಿಗಳನ್ನು ಇವರು ಜಾರಿಗೆ ತಂದರು.

ಜಮೀನ್ದಾರಿ ಪದ್ದತಿ : ರಾಜರುಗಳ ಆಳ್ವಿಕೆಯ ಕಾಲದಲ್ಲಿ ರಾಜರು ಕಂದಾಯ ವಸೂಲಾತಿಯ ಹಕ್ಕನ್ನು ಹೊಂದಿದ್ದರು. ಕಂದಾಯವನ್ನು ರೈತರು ಬೆಳೆದ ಬೆಳೆಯ ಪ್ರಮಾಣದ ಆಧಾರದಲ್ಲಿ ನಿಗಧಿಪಡಿಸಲಾಗುತ್ತಿತ್ತು. ಹರಾಜು ಮಾಡುವ ಪದ್ಧತಿ ಜಾರಿಗೆ ಬಂದ ನಂತರದಲ್ಲಿ ಹರಾಜಾದ ಮೊತ್ತವನ್ನು ಹಳ್ಳಿಯು ವಹಿಸಿಕೊಳ್ಳುತ್ತಿತ್ತು. ಭೂ ಒಡೆತನವು ಹಳ್ಳಿಯಲ್ಲಿಯೇ ಉಳಿದಿತ್ತು. ಆದರೆ ಬ್ರಿಟಿಷರ ಪ್ರವೇಶದೊಂದಿಗೆ ಹೊಸಕಂದಾಯ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿ ಹಳ್ಳಿಗಳ ಭೂ ಒಡೆತನದ ಒಟ್ಟಾರೆ ಹಕ್ಕನ್ನು ಕಸಿದುಕೊಳ್ಳಲಾಯಿತು. ಬೆಳೆಯ ಆಧಾರದ ಬದಲು ಜಮೀನಿನ ಪ್ರಮಾಣದಲ್ಲಿ ಕಂದಾಯದ ದರವನ್ನು ನಿಗಧಿಪಡಿಸಲಾಯಿತು. ಇಲ್ಲಿ ಕಂದಾಯ ವಸೂಲಿಗಾಗಿ ಜಮೀನ್ದಾರರನ್ನು ನೇಮಿಸಲಾಗಿತ್ತು. ಇದು ಲಾರ್ಡ್ ಕಾರ್ನ್‌ವಾಲೀಸನ ಜಮೀನ್ದಾರಿ ಪದ್ಧತಿಯಿಂದ ಉಂಟಾದ ಬದಲಾವಣೆಯಾಗಿತ್ತು.

> ***ಚಟುವಟಿಕೆ :***
>
> *ಗ್ರಾಮ ಲೆಕ್ಕಿಗರ ಬೇಟಿಯೊಂದಿಗೆ ಭೂಕಂದಾಯ-ಇಂದು ಯಾರು ವಸೂಲು ಮಾಡುತ್ತಾರೆ. ಮಾಡುವ ಕ್ರಮ ಹೇಗೆ? ಮಾಹಿತಿ ಸಂಗ್ರಹಿಸಿ.*

ಲಾರ್ಡ್ ಕಾರ್ನ್‌ವಾಲೀಸನು ಜಮೀನ್ದಾರಿ ಪದ್ಧತಿಯನ್ನು ಬಂಗಾಳ, ಬಿಹಾರ, ಓರಿಸ್ಸಾಗಳಲ್ಲಿ ಜಾರಿಗೆ ತಂದನು. ಇದರ ಪ್ರಕಾರ ಜಮೀನ್ದಾರರು ಉಳುವ ರೈತನಿಂದ ನಿಗದಿತ ಕಂದಾಯ ವಸೂಲಿಮಾಡಿ ಕಟ್ಟಬೇಕಿತ್ತು. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಆದಾಯ ದೊರೆಯಿತು. ಜಮೀನ್ದಾರರು ನಿಗಧಿತ ಕಂದಾಯಕ್ಕಿಂತಲೂ ಹೆಚ್ಚಿನ ಕಂದಾಯ ವಸೂಲಿ ಮಾಡಿ ನಿಗದಿತ ಮೊತ್ತವನ್ನು ಮಾತ್ರ ಸರ್ಕಾರಕ್ಕೆ ಕಟ್ಟುತ್ತಿದ್ದರು. ಇದರ ಪರಿಣಾಮವಾಗಿ ಜಮೀನ್ದಾರರು ಶ್ರೀಮಂತಿಕೆಯಿಂದ ವೈಭವದ ಜೀವನ ನಡೆಸುವಂತಾಯಿತು. ಈ ಪದ್ಧತಿಯಲ್ಲಿ ರೈತರು ಶೋಷಣೆಗೆ ಒಳಗಾದರು.

ರೈತವಾರಿ ಪದ್ಧತಿ : ಈ ಪದ್ಧತಿಯನ್ನು ಮದ್ರಾಸ್, ಮುಂಬೈ, ಸಿಂಧ್, ಬಿರಾರ್, ಅಸ್ಸಾಂ ಭಾಗಗಳಲ್ಲಿ ಜಾರಿಗೆ ತರಲಾಯಿತು. ಈ ಪದ್ಧತಿಯನ್ನು ಅಲೆಕ್ಸಾಂಡರ್ ರೀಡ್ ಪ್ರಯೋಗಿಸಿದರೆ ಥಾಮಸ್ ಮನ್ರೋ ಮುಂದುವರಿಸಿದನು. ಈ ಪದ್ಧತಿಯಲ್ಲಿ ಭೂಒಡೆತನದ ಹಕ್ಕನ್ನು ರೈತರು ಪಡೆದು ಕಂದಾಯವನ್ನು ಭೂಅಳತೆಯ ಆಧಾರದ ಮೇಲೆ ಪಾವತಿ ಮಾಡಬೇಕಿತ್ತು. ರೈತರು ಕಂದಾಯವನ್ನು ಕಟ್ಟಲು ವಿಫಲನಾದಾಗ ಭೂಮಿಯ ಹಕ್ಕನ್ನು ಕಳೆದುಕೊಳ್ಳುತ್ತಿದ್ದನು. ಆಗ ಭೂಮಿಯನ್ನು ಸರ್ಕಾರವು ಮಾರಾಟಮಾಡುವ ಅಧಿಕಾರವನ್ನು ಹೊಂದಿತ್ತು. ಈ ಪದ್ಧತಿಯ ಪ್ರಕಾರ ಜಮೀನುಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಗ್ರಾಮಪಂಚಾಯಿತಿಯ ಬದಲು ನ್ಯಾಯಾಲಯಗಳಲ್ಲಿ ನಡೆಸಬೇಕಿತ್ತು.

ಮಹಲ್ವಾರಿ ಪದ್ಧತಿ : ಈ ಪದ್ಧತಿಯನ್ನು ಗಂಗಾಕಣಿವೆ, ವಾಯುವ್ಯ ಪ್ರಾಂತ್ಯ ಮತ್ತು ಕೇಂದ್ರ ಪ್ರಾಂತ್ಯ ಹಾಗೂ ಪಂಜಾಬ್‌ಗಳಲ್ಲಿ ಜಾರಿಗೆ ತರಲಾಯಿತು. ಈ ಪದ್ಧತಿಯನ್ನು ಆರ್. ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್ ಪ್ರಯೋಗಿಸಿದರು. **'ಮಹಲ್'** ಎಂದರೆ ತಾಲ್ಲೂಕು ಎಂದರ್ಥ. ಇಲ್ಲಿ ಕಂದಾಯ ವಸೂಲಿಗಾಗಿ ಜಮೀನ್ದಾರರ ಬದಲು ಮಹಲ್ದಾರರನ್ನು ನೇಮಿಸಲಾಯಿತು. ಮಹಲ್ದಾರರು ನಿಗಧಿತ ಕಂದಾಯವನ್ನು ಭೂ ಅಳತೆಯ ಆಧಾರದ ಮೇಲೆ ರೈತರಿಂದ ವಸೂಲಿ ಮಾಡಿ ಸರ್ಕಾರಕ್ಕೆ ನೀಡಬೇಕಾಗಿತ್ತು. ಜಮೀನ್ದಾರರುಗಳಂತೆಯೇ ಮಧ್ಯವರ್ತಿಗಳಾಗಿ ಕೆಲಸ ಮಾಡಿದ ಇವರು ಅಪಾರ ಸಂಪತ್ತನ್ನು ಕ್ರೂಢೀಕರಿಸಿ ರೈತರ ಶೋಷಣೆಗೆ ಕಾರಣರಾದರು.

> ***ಚಟುವಟಿಕೆ :***
>
> *ಈಗ ತಾಲ್ಲೂಕು ಹಂತದಿಂದ ಗ್ರಾಮದ ಹಂತದವರೆಗೆ ಜಮೀನುಗಳ ಕಂದಾಯಕ್ಕೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಹಂತಗಳಲ್ಲಿನ ಅಧಿಕಾರಿಗಳನ್ನು ಪಟ್ಟಿಮಾಡಿ.*

ಜಮೀನ್ದಾರಿ ಪದ್ಧತಿ, ರೈತವಾರಿ ಪದ್ಧತಿ ಮತ್ತು ಮಹಲ್ವಾರಿ ಪದ್ಧತಿಗಳು ಬೇರೆ ಬೇರೆ ಎನಿಸಿದರೂ ವಾಸ್ತವದಲ್ಲಿ ಅವುಗಳ ಕಾರ್ಯತಂತ್ರ ಒಂದೇ ಆಗಿತ್ತು. ರೈತರ ಶೋಷಣೆ ಮತ್ತು ಲಾಭಗಳಿಸಿಕೊಳ್ಳುವುದು ಈ ಎಲ್ಲಾ ಪದ್ಧತಿಗಳ ಮೂಲ ಉದ್ದೇಶಗಳಾಗಿದ್ದವು. ಇವು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಬೇರೆ ಬೇರೆ ರೀತಿಯಿಂದ ಕರೆಯಲ್ಪಟ್ಟವು. ಇವು ರೈತರ ಬದುಕನ್ನು ದುಸ್ತರಗೊಳಿಸಿದವು.

ಕೈಗಾರಿಕೆ

ಕೈಗಾರಿಕೆಗಳಲ್ಲಿ ವಿದೇಶಿ ಬಂಡವಾಳ ಮತ್ತು ವಿದೇಶಿ ಮಾಲೀಕತ್ವ ಬಂದಿತು. ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿ ಮತ್ತು ತಾಂತ್ರಿಕತೆಯ ಬೆಳವಣಿಗೆಯ ಪರಿಣಾಮವಾಗಿ ಹತ್ತಿ ಬಟ್ಟೆ, ಸೆಣಬು ಮತ್ತು ಕಾಗದ ತಯಾರಿಕೆ, ಕಾಫಿ ತೋಟಗಳು, ಉದ್ಯಮಗಳು ನಿಧಾನವಾಗಿ ಬೆಳೆದವು. ದೇಶದ ಪ್ರಮುಖ ಪಟ್ಟಣಗಳಲ್ಲಿ ನವೀಕೃತ, ಯಾಂತ್ರಿಕತೆಯಿಂದ ಕೂಡಿರುವ ಕೈಗಾರಿಕೆಗಳು ಅಸ್ತಿತ್ವಕ್ಕೆ ಬಂದವು. ಭವಿಷ್ಯದಲ್ಲಿ ಇವುಗಳ ವ್ಯಾಪ್ತಿಯು ಹೆಚ್ಚಿತು.

ಶಿಕ್ಷಣ

ಪರಂಪರಾನುಗತವಾಗಿ ಪಾಠಶಾಲೆಗಳು ಮತ್ತು ಮದರಸಾಗಳು ನೀಡುವ ಧಾರ್ಮಿಕ ಶಿಕ್ಷಣವು ಕೆಲವರಿಗಷ್ಟೆ ಸೀಮಿತವಾಗಿತ್ತು. ಇಂಗ್ಲಿಷರು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು ಪಾಶ್ಚಾತ್ಯ ಶಿಕ್ಷಣ ನೀಡಬೇಕಿತ್ತು. ಇದರಿಂದಾಗಿ ಪಾಶ್ಚಿಮಾತ್ಯ ವಿಚಾರಗಳ ಪ್ರಯೋಗಗಳಿಂದ ಭಾರತೀಯರಲ್ಲಿ ಅರಿವುಂಟಾಯಿತು. ಕಂಪನಿಯು ಕ್ರಮಬದ್ಧವಾದ ಶಿಕ್ಷಣವನ್ನು ಜಾರಿಗೊಳಿಸಿತು. ಲಾರ್ಡ್‌ವಿಲಿಯಂ ಬೆಂಟಿಂಕನು ಮೆಕಾಲೆ ವರದಿಯಂತೆ ಇಂಗ್ಲಿಷ್ ಶಿಕ್ಷಣಕ್ಕೆ ಬುನಾದಿ ಹಾಕಿದನು. ಇದು ಆಂಗ್ಲ ಶಿಕ್ಷಣವನ್ನು ಬಲಪಡಿಸಿ ಪಾಶ್ಚಿಮಾತ್ಯ ಸಾಹಿತ್ಯದ ಮತ್ತು ವಿಚಾರಗಳ ಅಧ್ಯಯನವನ್ನು ಬೆಂಬಲಿಸಿತು.

ಈಸ್ಟ್ ಇಂಡಿಯಾ ಕಂಪನಿಯು ಬಂಗಾಳದ ಹಿಂದೂ ಕಾಲೇಜಿನಲ್ಲಿ ಪಾಶ್ಚಿಮಾತ್ಯ ಸಾಹಿತ್ಯ , ಮಾನವಶಾಸ್ತ್ರ ಮತ್ತು ವಿಜ್ಞಾನವನ್ನು ಬೋಧಿಸಲು ಪ್ರಾರಂಭಿಸಿತು. ಕಲ್ಕತ್ತಾ, ಮದ್ರಾಸ್ ಮತ್ತು ಮುಂಬೈಗಳಲ್ಲಿ ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದವು. ರೂರ್ಕಿಯಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಲಾಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ರಚಿಸಿ ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡಲು ಚಾರ್ಲ್ಸ್‌ವುಡ್ ಆಯೋಗವು ಸಲಹೆ ನೀಡಿತು. ಶಿಕ್ಷಣ ಕ್ಷೇತ್ರದಲ್ಲಿನ ಶಿಕ್ಷಣದ ಬೆಳವಣಿಗೆಯು ಸ್ವಾತಂತ್ರ್ಯ ಚಳುವಳಿಗೆ ಪ್ರೇರಣೆಯಾಯಿತು. ಪಾಶ್ಚಾತ್ಯ ವಿಚಾರಧಾರೆಗಳು ರಾಷ್ಟ್ರೀಯ ಜಾಗೃತಿಗೆ ಸಹಕಾರಿಯಾದವು. ನಾಯಕತ್ವದ ಬೆಳವಣಿಗೆಯಾಯಿತು. ಆಂಗ್ಲಭಾಷೆಯು ಸಂಪರ್ಕ ಭಾಷೆಯಾಗಿ ಬೆಳೆದು ಏಕತೆಗೆ ಸಹಕಾರಿಯಾಯಿತು. ಸಾಹಿತ್ಯದ ಬೆಳವಣಿಗೆಯು ಆಂಗ್ಲಭಾಷೆ, ಹಿಂದಿ, ಮರಾಠಿ, ತಮಿಳು, ಕನ್ನಡ ಮೊದಲಾದ ಪ್ರಾಂತೀಯ ಭಾಷೆಗಳಲ್ಲಿಯೂ ಸಹ ಕಂಡಿತು. ಲಾರ್ಡ್ ಕರ್ಜನ್ನನು ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಶ್ರಮಿಸಿದನು.

ಸಾರಿಗೆ – ಸಂಪರ್ಕ

ಬ್ರಿಟಿಷರು ತಾವು ಹೋದಲ್ಲೆಲ್ಲಾ ಸಾರಿಗೆ ಮತ್ತು ಸಂಪರ್ಕವನ್ನು ತಮ್ಮ ಸ್ವಹಿತಾಸಕ್ತಿಗಾಗಿ ನಿರ್ಮಿಸಿಕೊಂಡರು. ಭಾರತದ ಮೂಲೆ ಮೂಲೆಗಳನ್ನು ಶೀಘ್ರವಾಗಿ ತಲುಪಲು ರಸ್ತೆ ಮತ್ತು ರೈಲಿನ ವ್ಯವಸ್ಥೆಯನ್ನು ಕಲ್ಪಿಸಲಾಯಿತು. 1853ರಲ್ಲಿ ಮುಂಬೈ–ಥಾಣಗಳ ನಡುವೆ ಪ್ರಥಮ ರೈಲು ಸಂಚಾರ ಪ್ರಾರಂಭವಾಯಿತು. ಮೂಲದಲ್ಲಿ ಈ ವ್ಯವಸ್ಥೆಗಳನ್ನು ಕಚ್ಚಾವಸ್ತು ಹಾಗೂ ಸಿದ್ಧವಸ್ತುಗಳ ಸಾಗಾಣಿಕೆ ಮತ್ತು ಸೇನೆಯು ಸಂಚರಿಸಲು ನಿರ್ಮಿಸಲಾಯಿತು. ಪರೋಕ್ಷವಾಗಿ ಇವು ದೇಶೀಯರನ್ನು ಸಂಘಟಿಸಲು, ಸಂಚರಿಸಲು ಸಹಾಯವಾಗಿ ಪರಸ್ಪರ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳಲು, ಪ್ರಚಾರಮಾಡಲು ಸಾಧ್ಯವಾಯಿತು. ಇದು ದೇಶೀಯರನ್ನು ಒಂದುಗೂಡಿಸಿ ರಾಷ್ಟ್ರೀಯತೆಗೆ ಕಾರಣವಾಯಿತು.

ಪತ್ರಿಕೋದ್ಯಮ

ಭಾರತದಲ್ಲಿ ಪತ್ರಿಕೋದ್ಯಮದ ಉಗಮ ಹಾಗೂ ಅದರ ಪಾತ್ರವು ಬಹುತೇಕವಾಗಿ ಸ್ವಾತಂತ್ರ್ಯ ಹೋರಾಟದ ಚರಿತ್ರೆಯೊಂದಿಗೆ ಬೆಸೆದು ಕೊಂಡಿದೆ. ಭಾರತದಲ್ಲಿ ನವಜಾಗೃತಿಯ ಉದಯಕ್ಕೆ ಅವುಗಳು ನಿರ್ವಹಿಸಿದ ಪಾತ್ರ ಅಮೋಘವಾಗಿದೆ. ಭಾರತದಲ್ಲಿ ಭಾಷಾ ಪತ್ರಿಕೆಗಳ ಪ್ರಾರಂಭವನ್ನು 1818ರಿಂದ ಕಾಣಬಹುದು. 'ದಿಗ್ದರ್ಶನ' ಎಂಬ ಮಾಸ ಪತ್ರಿಕೆ, 'ಸಮಾಚಾರ ದರ್ಪಣ' ಎಂಬ ವಾರಪತ್ರಿಕೆ ಬಂಗಾಳಿ ಭಾಷೆಯಲ್ಲಿ ಹೊರಬಂದವು. ರಾಮ್ ಮೋಹನರಾಯರವರು 'ಸಂವಾದ ಕೌಮುಧಿ' ಎಂಬ ವಾರಪತ್ರಿಕೆಯನ್ನು ಆರಂಭಿಸಿದರು.

ನಿಮಗಿದು ತಿಳಿದಿರಲಿ :

ಭಾರತದ ಮೊದಲ ಪತ್ರಿಕೆ – 'ದಿ ಬೆಂಗಾಲ್ ಗೆಜೆಟ್'

ಈ ಪತ್ರಿಕೆಯನ್ನು 1780ರಲ್ಲಿ ಜೇಮ್ಸ್ ಆಗಸ್ಟ್ ಹಿಕಿ ಆರಂಭಿಸಿದರು. ಸರ್ಕಾರದ ಪೂರ್ವಾನುಮತಿ ಪಡೆದು ಆರಂಭಿಸಿದ ಮೊದಲ ಪತ್ರಿಕೆ ಇದಾಗಿದೆ. ಈ ಪತ್ರಿಕೆಯನ್ನು ಕಲ್ಕತ್ತಾ ಜನರಲ್ ಅಡ್ವರ್ಟೈಸರ್ ಎಂತಲೂ ಕರೆಯಲಾಗಿತ್ತು. ಯಾರಿಂದಲೂ ಪ್ರಭಾವಿತವಾಗದ ರಾಜಕೀಯ ಮತ್ತು ವಾಣಿಜ್ಯ ಪತ್ರಿಕೆಯು ಇದಾಗಿತ್ತು. ಗರ್ವನರ್ ಜನರಲ್, ಮಿಷನರಿಗಳು, ನ್ಯಾಯಾಧೀಶರು ಮತ್ತು ಪ್ರಮುಖ ಇಂಗ್ಲಿಷ್ ಅಧಿಕಾರಿಗಳಿಗೆ ಸವಾಲಾಗಿ ಕೆಂಗಣ್ಣಿಗೆ ಗುರಿಯಾಯಿತು. 1782ರಲ್ಲಿ ವಾರನ್‌ಹೇಸ್ಟಿಂಗ್ಸನು ಹಿಕಿಯ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿ ಅವನನ್ನು ಶಿಕ್ಷಿಸಿ ಸೆರೆಮನೆಗೆ ಹಾಕಿ ಪತ್ರಿಕೆಯನ್ನು ನಿಲ್ಲಿಸಿದನು.

ಪತ್ರಿಕೆಗಳು ಸರ್ಕಾರದ ಕಾರ್ಯವೈಖರಿಯನ್ನು ಪ್ರಶ್ನಿಸಿ ಸರ್ಕಾರದ ಕೋಪಕ್ಕೆ ಗುರಿಯಾಗಿದ್ದವು. 'ಕಲ್ಕತ್ತಾ ಜರ್ನಲ್' ಎಂಬ ಇಂಗ್ಲಿಷ್ ಪತ್ರಿಕೆಯು ಸರ್ಕಾರದ ಆಕ್ರೋಶಕ್ಕೆ ಗುರಿಯಾಯಿತು. ಆ ಪತ್ರಿಕೆಯ ಸಂಪಾದಕ ಬಕ್ಕಿಂಗ್ ಹ್ಯಾಮ್‌ನನ್ನು ಭಾರತದಿಂದ ಗಡೀಪಾರು ಮಾಡಲಾಯಿತು. ತತ್ ಪರಿಣಾಮವಾಗಿ ಪತ್ರಿಕೆಗಳ ವಿರುದ್ಧ ಶಾಸನವೊಂದು ಸಹ ರೂಪುಗೊಂಡಿತು. ಅದರ ಪ್ರಕಾರ ಗರ್ವನರ್ ಜನರಲ್‌ನ ಪೂರ್ವಾನುಮತಿ ಪಡೆದೇ ಪತ್ರಿಕೆಗಳನ್ನು ನಡೆಸಬೇಕಿತ್ತು. ಇಂತಹ ಅಡೆತಡೆಗಳನ್ನು ಎದುರಿಸುತ್ತಲೇ ಭಾರತದಲ್ಲಿ ಪತ್ರಿಕೋದ್ಯಮದ ಬೆಳವಣಿಗೆಯನ್ನು ನಾವು ಕಾಣುತ್ತೇವೆ. ಭಾರತೀಯರು ನಡೆಸುತ್ತಿದ್ದ ಪತ್ರಿಕೆಗಳು ಜನತೆಯ ಮನೋಭಾವನೆಯನ್ನು ಪ್ರತಿನಿಧಿಸುತ್ತಿದ್ದವು. ಹೀಗೆ ಆರಂಭವಾದ ಪತ್ರಿಕೆ 'ಹಿಂದೂ ಪೇಟ್ರಿಯಾಟ್'. ಇದು ಹಲವು ವರ್ಷಗಳ ಕಾಲ ಭಾರತೀಯರ ಪ್ರಾತಿನಿಧಿಕ ಧ್ವನಿಯಾಗಿತ್ತು. ಬಂಗಾಳದಲ್ಲಿ ನಡೆದ ನೀಲಿ ಕೃಷಿಕರ ಹೋರಾಟದಲ್ಲಿ ಇದು ಮಹತ್ತರ ಪಾತ್ರವನ್ನು ವಹಿಸಿತ್ತು.

ಚಟುವಟಿಕೆ

ಪ್ರಸ್ತುತ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಪ್ರಕಟವಾಗುತ್ತಿರುವ ದಿನಪತ್ರಿಕೆಗಳ ಹೆಸರುಗಳನ್ನು ಪಟ್ಟಿಮಾಡಿ. ಯಾವ ಪತ್ರಿಕೆಯಲ್ಲಿ ಯಾವ ಅಂಕಣ ನಿಮಗೆ ಹೆಚ್ಚು ಇಷ್ಟವಾಗುತ್ತದೆ ಎಂಬುದನ್ನು ಚಿಂತಿಸಿ. ಅದೇ ರೀತಿಯ ಲೇಖನ ಬರೆದು ಶಿಕ್ಷಕರೊಂದಿಗೆ ಸಮಾಲೋಚಿಸಿ.

ಈಶ್ವರ ಚಂದ್ರ ವಿದ್ಯಾಸಾಗರರವರು ನಡೆಸುತ್ತಿದ್ದ 'ಸೋಮ ಪ್ರಕಾಶ' ಎಂಬ ಬಂಗಾಳ ಪತ್ರಿಕೆಯು ರಾಷ್ಟ್ರೀಯವಾದಿ ಧೋರಣೆಯನ್ನು ಪ್ರತಿಪಾದಿಸುತ್ತಿತ್ತು. 1860ರ ನೀಲಿ ಬೆಳೆಗಾರರ ದಂಗೆಯ ಸಂದರ್ಭದಲ್ಲಿ ಅದು ಬಂಗಾಳಿ ಕೃಷಿಕರ ಹಿತಾಸಕ್ತಿಯನ್ನು ಬೆಂಬಲಿಸಿತು. ರಾಷ್ಟ್ರಿಯವಾದಿ ಧೋರಣೆಯಿಂದ ಪ್ರಕಟಗೊಂಡ ಇನ್ನೂ ಕೆಲವು ಪತ್ರಿಕೆಗಳೆಂದರೆ 'ಅಮೃತ್ ಬಜಾರ್ ಪತ್ರಿಕಾ', ಸುರೇಂದ್ರನಾಥ ಬ್ಯಾನರ್ಜಿಯವರು ನಡೆಸುತ್ತಿದ್ದ 'ದಿ ಬೆಂಗಾಲಿ', 'ದಿ ಟ್ರಿಬ್ಯುನ್'. ಸುರೇಂದ್ರನಾಥ ಬ್ಯಾನರ್ಜಿಯವರ 'ದಿ ಬೆಂಗಾಲಿ' ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನದ ಹಿನ್ನೆಲೆಯಲ್ಲಿ ಅವರನ್ನು ಎರಡು ತಿಂಗಳ ಕಾಲ ಕಾರಾಗೃಹವಾಸಕ್ಕೆ ಗುರಿಪಡಿಸಲಾಯಿತು. ಬಂಗಾಲಿ ಪತ್ರಿಕೆಯು ಮಂದಗಾಮಿ ಧೋರಣೆಯನ್ನು ಹೊಂದಿತ್ತು. ತೀವ್ರವಾದಿಗಳಲ್ಲಿ ಪ್ರಮುಖರಾಗಿದ್ದ ತಿಲಕರು

ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲಿಷ್ ಭಾಷೆಯಲ್ಲಿ 'ಮರಾಠ' ಎಂಬ ವಾರ ಪತ್ರಿಕೆಗಳನ್ನು ಪ್ರಾರಂಭಿಸಿದರು. 'ದಿ ಇಂಡಿಯನ್ ಸೋಷಿಯಲ್ ರೀಫಾರ್ಮರ್' ಇಂಗ್ಲಿಷ್ ವಾರಪತ್ರಿಕೆಯು ಸಮಾಜ ಸುಧಾರಣೆಯನ್ನು ಪ್ರಚಾರಪಡಿಸಿತು. 'ಮಂಗಳೂರು ಸಮಾಚಾರ' ಪತ್ರಿಕೆಯು ಕನ್ನಡದ ಮೊದಲ ಪತ್ರಿಕೆಯಾಗಿದ್ದು ಇದನ್ನು ಮೋಗ್ಲಿಂಗ್ ಮಿಷನರಿಯವರು ಪ್ರಾರಂಭಿಸಿದರು. 'ಮೈಸೂರು ರೆಕಾರ್ಡರ್' ಮತ್ತು 'ಕರ್ನಾಟಕ ಪ್ರಕಾಶಿತಾ' ಕರ್ನಾಟಕದ ಇತರ ಪತ್ರಿಕೆಗಳಾಗಿವೆ.

ನಿಮಗಿದು ತಿಳಿದಿರಲಿ :

	ಕೆಲವು ಇಂಗ್ಲಿಷ್ ದಿನಪತ್ರಿಕೆಗಳು		*ಪ್ರಕಟಗೊಂಡ ಸ್ಥಳ*		*ವರ್ಷ*
1.	ಟೈಮ್ಸ್ ಆಫ್ ಇಂಡಿಯಾ	–	ಮುಂಬೈ	–	*1861*
2.	ದಿ ಪಯೋನಿಯರ್	–	ಅಲಹಾಬಾದ್	–	*1865*
3.	ದಿ ಮದ್ರಾಸ್ ಮೈಲ್	–	ಮದ್ರಾಸ್	–	*1875*
4.	ದಿ ಸ್ಟೇಟ್ಸ್‌ಮನ್	–	ಕಲ್ಕತ್ತಾ	–	*1875*
5.	ದಿ ಸಿವಿಲ್ ಅಂಡ್ ಮಿಲಿಟರಿ ಗೆಜೆಟ್	–	ಲಾಹೋರ್	–	*1876*

ಅಭ್ಯಾಸಗಳು

I. ಕೆಳಗಿನ ವಾಕ್ಯಗಳಲ್ಲಿ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.

1. ಬ್ರಿಟಿಷ್ ಏಕರೂಪದ ಆಡಳಿತ ವ್ಯವಸ್ಥೆಯು ಭಾರತೀಯರಲ್ಲಿ ಹೇಗೆ ರಾಷ್ಟ್ರೀಯತೆಯನ್ನು ಬೆಳೆಸಿತು?
2. ಕೈಗಾರಿಕಾ ಕ್ರಾಂತಿಯಿಂದ ಭಾರತದಲ್ಲಾದ ಬದಲಾವಣೆಗಳೇನು?
3. ಮಹಲ್‌ವಾರಿ ಪದ್ಧತಿ ಎಂದರೇನು?
4. ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಸುಧಾರಣೆಗಳಾವುವು?
5. 'ಸಾರಿಗೆ– ಸಂಪರ್ಕವು ಸ್ವಾತಂತ್ರ್ಯ ಚಳುವಳಿಯ ಮೂಲ'. ವಿವರಿಸಿ.

II. ಚಟುವಟಿಕೆಗಳು

1. ಶಿಕ್ಷಕರ ನೆರವಿನಿಂದ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಇರುವ ಶೈಕ್ಷಣಿಕ ಆಡಳಿತ ವ್ಯವಸ್ಥೆ ಬಗ್ಗೆ ಮಾಹಿತಿ ಸಂಗ್ರಹಿಸಿ.

IV. ಯೋಜನೆ

1. ಸಾರಿಗೆ ಕ್ಷೇತ್ರದ ಅಭಿವೃದ್ಧಿಗೆ ಕರ್ನಾಟಕ ಇತ್ತೀಚೆಗೆ ಕೈಗೊಂಡಿರುವ ಯೋಜನೆಗಳ ಬಗ್ಗೆ ಅಂತರ್ಜಾಲದ ನೆರವಿನೊಂದಿಗೆ ಮಾಹಿತಿ ಸಂಗ್ರಹಿಸಿ, ವರದಿ ಸಿದ್ದಪಡಿಸಿ.

ಅಧ್ಯಾಯ – 8

ಸ್ವಾತಂತ್ರ್ಯ ಹೋರಾಟ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭಾರತೀಯ ರಾಷ್ಟ್ರೀಯ ಕಾಂಗ್ರೆಸ್*
- *ಮಂದಗಾಮಿಗಳು, ತೀವ್ರವಾದಿಗಳು ಮತ್ತು ಕ್ರಾಂತಿಕಾರಿಗಳು*
- *ಗಾಂಧಿಯುಗ–ಅಸಹಕಾರ ಚಳುವಳಿ, ಸವಿನಯ ಕಾನೂನು ಭಂಗ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿ,*
- *ರೈತರು ಮತ್ತು ಕಾರ್ಮಿಕರ ಪ್ರತಿಭಟನೆಗಳು.*
- *ಸುಭಾಷ್ ಚಂದ್ರಬೋಸ್, ಡಾ. ಬಿ.ಆರ್. ಅಂಬೇಡ್ಕರ್, ಪಂಡಿತ್ ಜವಾಹರಲಾಲ್ ನೆಹರು ಮತ್ತು ಮಹಮದ್ ಅಲಿ ಜಿನ್ನಾ.*
- *ಭಾರತದ ವಿಭಜನೆ.*

ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಯನ್ನು ವಿರೋಧಿಸಿದ ಸನ್ನಿವೇಶಗಳು ಹಲವು. ಅನೇಕ ರಾಜಪ್ರಭುತ್ವಗಳು ಬ್ರಿಟಿಷರ ವಿರುದ್ಧ ಹೋರಾಡಿದ್ದು ಅವರ ಸ್ವಹಿತಾಸಕ್ತಿಗಾಗಿತ್ತು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಹಲವಾರು ಬದಲಾವಣೆಗಳು ಹಾಗೂ ಪರಿಣಾಮಕಾರಿ ಸುಧಾರಣೆಗಳು ಕಂಡು ಬಂದವು. ಸಾರಿಗೆ ಮತ್ತು ಸಂಪರ್ಕ, ಪತ್ರಿಕೋದ್ಯಮ, ಸಂಘಗಳ ಸ್ಥಾಪನೆ, ಆಡಳಿತ ಸುಧಾರಣೆಗಳಲ್ಲಿ ಬದಲಾವಣೆಗಳು ಕಂಡುಬಂದವು. ಜನರು ಅಲ್ಲಲ್ಲಿ ಸಂಘಟಿತರಾಗಿ ತಮ್ಮ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಸಂಸ್ಥೆಗಳನ್ನು ಅನೇಕ ಪ್ರಾಂತ್ಯಗಳಲ್ಲಿ ಹುಟ್ಟುಹಾಕಿದರು. ಲಾರ್ಡ್ ಲಿಟ್ಟನ್ ಪತ್ರಿಕೋದ್ಯಮದಲ್ಲಿ ಜನರನ್ನು ನಿಯಂತ್ರಿಸಲು 1878ರಲ್ಲಿ 'ದೇಶೀಯ ಪತ್ರಿಕೆಗಳ ನಿಯಂತ್ರಣ ಕಾಯ್ದೆ' ಒಂದೆಡೆ ಜಾರಿಗೆ ತಂದರೆ, ಮತ್ತೊಂದೆಡೆ ಲಾರ್ಡ್ ರಿಪ್ಪನ್ ಇಲ್ಬರ್ಟ್ ಮಸೂದೆಯನ್ನು ಜಾರಿಗೆ ತಂದು, ಏಕರೂಪ ಕಾನೂನು ವ್ಯವಸ್ಥೆಗೆ ದಾರಿ ಮಾಡಿಕೊಟ್ಟನು. ಈ ಮಸೂದೆಯನ್ನು ವಿರೋಧಿಸಿ ಭಾರತದಲ್ಲಿನ ಬ್ರಿಟಿಷರು ಸಂಘಟಿತ ಪ್ರಯತ್ನ ನಡೆಸಿ ಜಯಶೀಲರಾದರು.

ದೇಶಾದಾದ್ಯಂತ ಹಲವಾರು ರೀತಿಯ ಹೋರಾಟಗಳ ಫಲವಾಗಿ ಸ್ವಾತಂತ್ರ್ಯ ಹೋರಾಟವು ಒಂದು ಸ್ವರೂಪವನ್ನು ಪಡೆಯಲು ಸಾಧ್ಯವಾಯಿತು. ಇನ್ನೂ ಮುಂದೆ ಸಶಸ್ತ್ರ ಹೋರಾಟಗಳು ಉದ್ಭವವಾಗಬಾರದೆಂದು ಬ್ರಿಟಿಷರು ಕಾರ್ಯತಂತ್ರವನ್ನು ರೂಪಿಸಿದರು. ಪರಿಣಾಮವಾಗಿ 1858ರ ರಾಣಿ ಮಹಾಸನ್ನದನ್ನು ಬ್ರಿಟಿಷ್ ಸರ್ಕಾರವು ಘೋಷಿಸಿ ಭಾರತೀಯರನ್ನು ಬ್ರಿಟನ್ನಿನ ಪ್ರಜೆಗಳೆಂದು ಪರಿಗಣಿಸಿತು. ಆ ಮೂಲಕ ಭಾರತೀಯರಿಗೆ ಅನೇಕ ಬಗೆಯ ಸವಲತ್ತುಗಳನ್ನು ನೀಡಲು ಬ್ರಿಟಿಷ್ ಸರ್ಕಾರ ಘೋಷಿಸಿತು. ನಂತರದ ಬೆಳವಣಿಗೆಯಲ್ಲಿ ಉನ್ನತ ವರ್ಗದ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಕಲಿತ ಹೊಸ ಪೀಳಿಗೆಯ ಭಾರತೀಯರು ಸಂವಿಧಾನಾತ್ಮಕವಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಲು ಆರಂಭಿಸಿದರು. ಇವರ ಒಟ್ಟಾರೆ ಪ್ರಯತ್ನಗಳ ಪ್ರತಿಫಲವೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ನಾಂದಿಯಾಯಿತು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್

ರಾಮ್ ಮೋಹನ್ ರಾಯರವರ ಕಾಲದಿಂದಲೂ ಮಧ್ಯಮ ವರ್ಗದ ಭಾರತೀಯರ ಮನಸ್ಸು ಹೊಸ ಹೊಸ ಸಂದರ್ಭಗಳಲ್ಲಿ ಹೊಸ ಸವಾಲುಗಳನ್ನು ಎದುರಿಸಲು ಸಜ್ಜಾಗುತ್ತಿತ್ತು. ಈ ನಿಟ್ಟಿನಲ್ಲಿ ದೇಶಾದ್ಯಂತ ಹಲವಾರು ಸಂಘ ಸಂಸ್ಥೆಗಳು ಹುಟ್ಟಿದವು. ಹೀಗೆ ಸ್ಥಾಪನೆಯಾದ ಸಂಘಟನೆಗಳಲ್ಲಿ 'ದಿ ಹಿಂದೂ ಮೇಳ', 'ದಿ ಈಸ್ಟ್ ಇಂಡಿಯಾ ಅಸೋಸಿಯೇಷನ್', 'ಪೂನಾ ಸಾರ್ವಜನಿಕ ಸಭಾ' ಮತ್ತು 'ದಿ ಇಂಡಿಯನ್ ಅಸೋಸಿಯೇಷನ್' ಪ್ರಮುಖವಾಗಿದ್ದವು. ಇವುಗಳು ಸೀಮಿತ ಎಲ್ಲೆ ಮತ್ತು ಹಿತಾಸಕ್ತಿಗಳನ್ನು ಒಳಗೊಂಡಿದ್ದವು. ಕಾಲಾಂತರದಲ್ಲಿ ರಾಷ್ಟ್ರಮಟ್ಟದಲ್ಲಿ ಒಗ್ಗೂಡಲು ಕಾತುರದಿಂದ ಕಾಯುತ್ತಿದ್ದವು. ಇಂತಹ ಒಂದು ಅಖಿಲ ಭಾರತೀಯ ಮಟ್ಟದ ಸಂಘಟನೆಯನ್ನು ಸ್ಥಾಪಿಸುವ ಸಂದರ್ಭವು ಬಂದಿತು. ಅದು 1885ರಲ್ಲಿ ಎ.ಓ. ಹ್ಯೂಮ್ ಎಂಬ ನಿವೃತ್ತ ಸಿವಿಲ್‌ಸರ್ವಿಸ್ ಅಧಿಕಾರಿಯ ಮೂಲಕ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯೊಂದಿಗೆ ಈಡೇರಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾರತೀಯರಲ್ಲಿ ರಾಜಕೀಯ ಪ್ರಜ್ಞೆ ಮತ್ತು ರಾಷ್ಟ್ರೀಯತೆಯ ಮನೋಭಾವನೆಯನ್ನು ವೃದ್ಧಿಸಲು ಶ್ರಮಿಸಿತು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾರತೀಯರಲ್ಲಿದ್ದ ಹಲವಾರು ವೈವಿಧ್ಯತೆಗಳ ನಡುವೆಯೂ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸಲು ಪ್ರಯತ್ನಿಸಿತು. ದೇಶೀ ಭಾಷೆಗಳಲ್ಲಿ ಪತ್ರಿಕೆಗಳನ್ನು ಪ್ರಕಟಿಸಿ ಆ ಮೂಲಕ ರಾಜಕೀಯ ಸಮಸ್ಯೆಗಳ ಚರ್ಚೆ ಆರಂಭಿಸಿತು. ಇದರಿಂದಾಗಿ ರಾಜಕೀಯ ಸಮಸ್ಯೆಗಳು ಮತ್ತು ವಿಚಾರಗಳು ಜನರ ಮನಮುಟ್ಟಿದವು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಲವರ್ಧನೆಯನ್ನು ಗಮನಿಸಿದ ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಯನ್ನು ಜಾರಿಗೆ ತಂದರು. ಹಿಂದೂ–ಮುಸ್ಲಿಮರನ್ನು ಬೇರ್ಪಡಿಸಿದರು. ಆದರೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ರಾಷ್ಟ್ರೀಯ ವಿಚಾರಗಳಿಗೆ ಸಂಬಂಧಪಟ್ಟಂತೆ ರಚಾನಾತ್ಮಕವಾದ ಕಾರ್ಯತಂತ್ರಗಳನ್ನು ರೂಪಿಸಿತು.

19ನೆಯ ಶತಮಾನದ ಕೊನೆಯ ಭಾಗದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಭಿನ್ನಮತ ಕಾಣಿಸಿಕೊಂಡಿತು. ಕಾರ್ಯತಂತ್ರ, ನಂಬಿಕೆಗಳು ಮತ್ತು ಹೋರಾಟದ ಮಾದರಿಯಿಂದಾಗಿ ಅವರುಗಳನ್ನು ಮಂದಗಾಮಿಗಳು ಮತ್ತು ತೀವ್ರವಾದಿಗಳೆಂದು ಗುರುತಿಸುತ್ತಾರೆ.

ಮಂದಗಾಮಿಗಳು

ಸಾಂಪ್ರದಾಯಿಕವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು 'ಮಂದಗಾಮಿಯುಗ' ಎನ್ನುತ್ತಾರೆ. ಮಂದಗಾಮಿಗಳಲ್ಲಿ ಎಂ.ಜಿ. ರಾನಡೆ, ಸುರೇಂದ್ರನಾಥ ಬ್ಯಾನರ್ಜಿ, ದಾದಾ ಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ಇವರುಗಳನ್ನು ಪ್ರಮುಖವಾಗಿ ಗುರುತಿಸಬಹುದು. ಮಂದಗಾಮಿಗಳು ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ ಇಟ್ಟಿದ್ದರು. ಸಾಂವಿಧಾನಿಕ



ದಾದಾಬಾಯಿ ನವರೋಜಿ



ಗೋಪಾಲಕೃಷ್ಣ ಗೋಖಲೆ

> ***ಚಟುವಟಿಕೆ :***
> *ಮಂದಗಾಮಿ ಹೋರಾಟಗಾರರ ಚಿತ್ರಗಳನ್ನು ಸಂಗ್ರಹಿಸಿ ಮತ್ತು ಅವರ ಜೀವನ ಚರಿತ್ರೆ ಪುಸ್ತಕಗಳನ್ನು ಓದಿ ಹೆಚ್ಚಿನ ಮಾಹಿತಿ ತಿಳಿಯಿರಿ.*

ಚೌಕಟ್ಟಿನೊಳಗೆ ಪ್ರಾರ್ಥನೆ ಮತ್ತು ಮನವಿಗಳ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದರು. ಮಂದಗಾಮಿಗಳು ಜನರಿಗೆ ರಾಜಕೀಯ ಶಿಕ್ಷಣವನ್ನು ನೀಡುವ ಪ್ರಯತ್ನ ಮಾಡಿದರು. ಇವರು ಸಮಸ್ಯೆಗಳ ಬಗ್ಗೆ ಸಭೆಗಳನ್ನು ನಡೆಸಿ, ಚರ್ಚಿಸಿ, ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದರು. ದೇಶದ ಕೈಗಾರಿಕೆಗಳ ಅಭಿವೃದ್ಧಿ, ಸೈನಿಕ ವೆಚ್ಚ ಕಡಿಮೆ ಮಾಡುವುದು, ಉತ್ತಮ ಶಿಕ್ಷಣ ಕೊಡುವುದು, ಬಡತನದ ಬಗ್ಗೆ ಅಧ್ಯಯನ ನಡೆಸಲು ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸುವುದು ಇವೇ ಮೊದಲಾದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟರು.

ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯಿಂದಾದ ದುಷ್ಪರಿಣಾಮಗಳನ್ನು ಮೊಟ್ಟಮೊದಲನೆಯ ಬಾರಿಗೆ ಮಂದಗಾಮಿಗಳು ಕೂಲಂಕಷವಾಗಿ ಅವಲೋಕಿಸುವ ಪ್ರಯತ್ನ ಮಾಡಿದರು. ಭಾರತದ ಸಂಪತ್ತು ಯಾವ ರೀತಿಯಲ್ಲಿ ಇಂಗ್ಲೆಂಡಿಗೆ ಸೋರಿ ಹೋಗುತ್ತಿದೆ ಎಂಬುದನ್ನು ಅಂಕಿ ಅಂಶಗಳೊಂದಿಗೆ ಅವರು ವಿವರಿಸಿದರು. ದಾದಾಬಾಯಿ ನವರೋಜಿಯವರು ಇಂಗ್ಲೆಂಡಿಗೆ ಸೋರಿಹೋಗುವ ಸಂಪತ್ತಿನ ಬಗ್ಗೆ ವಿಶ್ಲೇಷಿಸಿದರು. ಅವರು ಅದನ್ನು 'ಸಂಪತ್ತಿನ ಸೋರುವಿಕೆ ಸಿದ್ಧಾಂತ' (Drain Theory) ಎಂದು ಕರೆದರು. ಆಮದನ್ನು ಹೆಚ್ಚಿಸಿ ರಫ್ತನ್ನು ಕಡಿಮೆ ಮಾಡಿದ್ದರಿಂದ ಪ್ರತಿಕೂಲ ಸಂದಾಯ ಉಂಟಾಗಿ ದೇಶದ ಸಂಪತ್ತು ಇಂಗ್ಲೆಂಡಿಗೆ ಹರಿಯಲು ಕಾರಣವಾಯಿತೆಂದು ಅವರು ಪ್ರತಿಪಾದಿಸಿದರು. ಬ್ರಿಟಿಷ್ ಅಧಿಕಾರಿಗಳಿಗೆ ನೀಡುತ್ತಿದ್ದ ವೇತನ, ನಿವೃತ್ತಿ ವೇತನ ಮತ್ತು ಆಡಳಿತಾತ್ಮಕ ವೆಚ್ಚವನ್ನು ಭಾರತವೇ ಭರಿಸಬೇಕಾದ ಹಿನ್ನೆಲೆಯಲ್ಲಿ ಅಪಾರವಾದ ಸಂಪತ್ತು ಬ್ರಿಟನ್ನಿಗೆ ಹರಿದು ಹೋಗುತ್ತಿತ್ತು ಎಂಬುದನ್ನು ಅವರು ವಿವರವಾಗಿ ಜನರ ಮುಂದಿಟ್ಟರು. ಮಂದಗಾಮಿಗಳ ಕಾಲವನ್ನು ಉದಾರ ರಾಷ್ಟ್ರವಾದದ ಕಾಲವೆಂದು ಹೇಳಲಾಗಿದೆ.

ತೀವ್ರವಾದಿಗಳು

ಮಂದಗಾಮಿಗಳ ಮೃದು ದೋರಣೆಯಿಂದ ಕಾಂಗ್ರೆಸಿಗರಲ್ಲೇ ಅಸಂಥೋಷ್ಟರಾಗಿದ್ದ ಇನ್ನೊಂದು ಗುಂಪು ಇವರನ್ನು 'ರಾಜಕೀಯ ಭಿಕ್ಷುಕರು' ಎಂದು ಕರೆದರು. ಮಂದಗಾಮಿಗಳ ಮೃದುದೋರಣೆಯನ್ನು ಟೀಕೆ ಮಾಡುತ್ತಾ, ತೀವ್ರವಾದ ನಿಲುವುಗಳನ್ನು ಪ್ರತಿಪಾದಿಸುತ್ತಾ ಬಂದ ಬಣವನ್ನು ತೀವ್ರವಾದಿಗಳೆಂದು ಗುರುತಿಸಲಾಗಿದೆ. ಅರಬಿಂದೋ ಘೋಷ್, ಬಿಪಿನ್‌ಚಂದ್ರ ಪಾಲ್, ಲಾಲ ಲಜಪತ ರಾಯ್ ಮತ್ತು ಬಾಲಗಂಗಾಧರ್ ತಿಲಕ್ ಮುಂತಾದವರು ಈ ಬಣದ ಪ್ರಮುಖರಾಗಿದ್ದರು.


ಅರಬಿಂದೋ ಘೋಷ್


ಬಾಲಗಂಗಾಧರ ತಿಲಕ


ಲಾಲ ಲಜಪತ್ ರಾಯ್


ಬಿಪಿನ್ ಚಂದ್ರಪಾಲ್

ಬಂಗಾಳದ ವಿಭಜನೆ : ಬಂಗಾಳವು ಬ್ರಿಟಿಷ್ ವಿರೋಧಿ ಭಾವನೆ ಮತ್ತು ಚಟುವಟಿಕೆಗಳ ಕೇಂದ್ರವಾಗಿತ್ತು. ಇದನ್ನು ಹತ್ತಿಕ್ಕಲು ವೈಸ್‌ರಾಯ್ ಲಾರ್ಡ್ ಕರ್ಜನ್ನನು ಆಡಳಿತಾತ್ಮಕ ನೆಪವನ್ನು ಮುಂದಿಟ್ಟುಕೊಂಡು ಬಂಗಾಳ ವಿಭಜನೆಯ ಯೋಜನೆಯನ್ನು ರೂಪಿಸಿದನು. ಪೂರ್ವ ಮತ್ತು ಪಶ್ಚಿಮ ಬಂಗಾಳವನ್ನು ಹಿಂದೂ ಮತ್ತು ಮುಸ್ಲಿಂ ಬಹುಸಂಖ್ಯಾತ ಪ್ರದೇಶಗಳಾಗಿ ವಿಂಗಡಿಸಿದನು. ಹೀಗೆ ಸಮುದಾಯಗಳ ನಡುವೆ ಕಂದಕವನ್ನುಂಟುಮಾಡಿ ಸ್ವಾತಂತ್ರ್ಯ ಹೋರಾಟದ ತೀವ್ರತೆಯನ್ನು ಕುಗ್ಗಿಸುವ ಸಂಚನ್ನು ರೂಪಿಸಿದನು.

ಬ್ರಿಟಿಷರ ಒಡೆದು ಆಳುವ ನೀತಿಯ ಪ್ರತೀಕವಾಗಿದ್ದ 1905ರ ಬಂಗಾಳ ವಿಭಜನೆಯನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ವಿರೋಧಿಸಿತು. ಆದರೆ 1906ರಲ್ಲಿ ಸ್ಥಾಪನೆಯಾದ ಮುಸ್ಲಿಂ ಲೀಗ್ ಬಂಗಾಳ ವಿಭಜನೆಯನ್ನು ಬೆಂಬಲಿಸಿತು. ಬಂಗಾಳದ ವಿಭಜನೆಯ ವಿರುದ್ಧ ದೇಶದಾದ್ಯಂತ ಪ್ರತಿರೋಧಗಳು ವ್ಯಕ್ತವಾದವು. ಪ್ರತಿರೋಧದ ಒಂದು ಬಗೆಯಾಗಿ ಸ್ವದೇಶಿ ಚಳುವಳಿಯನ್ನು ಪ್ರಾರಂಭಿಸಲಾಯಿತು. ಇದನ್ನು ದೇಶದಾದ್ಯಂತ ಕೊಂಡೊಯ್ದವರು ತೀವ್ರವಾದಿಗಳು. ವಿದೇಶಿ ವಸ್ತುಗಳು ಮತ್ತು ಅದನ್ನು ಪ್ರೋತ್ಸಾಹಿಸುವ ಸಂಸ್ಥೆಗಳನ್ನು ಬಹಿಷ್ಕರಿಸಲು ಸ್ವದೇಶಿ ಆಂದೋಲನವು ಕರೆ ನೀಡಿತು. ಸ್ವದೇಶಿ ವಸ್ತುಗಳನ್ನು ಬಳಸುವಂತೆ ಅವರು ಭಾರತೀಯರನ್ನು ಪ್ರೇರೇಪಿಸಿದರು. ಭಾರತೀಯರ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಬಂಗಾಳದ ವಿಭಜನೆಯನ್ನು 1911ರಲ್ಲಿ ಬ್ರಿಟಿಷ್ ಸರ್ಕಾರವು ಹಿಂಪಡೆಯಿತು.

ತೀವ್ರವಾದಿಗಳು ಉತ್ತಮ ಆಳ್ವಿಕೆಯು ಎಂದೂ ಕೂಡ ಸ್ವಯಂ ಆಳ್ವಿಕೆಗೆ ಪರ್ಯಾಯವಾಗಲಾರದೆಂದು ಪ್ರತಿಪಾದಿಸಿದರು. ತಿಲಕರು 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂದು ಘೋಷಿಸಿದರು. ಪೂರ್ಣ ಸ್ವರಾಜ್ಯವನ್ನು ಪಡೆಯುವುದು ತೀವ್ರವಾದಿಗಳ ಗುರಿಯಾಗಿತ್ತು. ಇವರು ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸುವ ಪ್ರಯತ್ನ ಮಾಡಿದರು. ಈ ಹಿನ್ನೆಲೆಯಲ್ಲಿ ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಅವರನ್ನು ಸಜ್ಜುಗೊಳಿಸಿದರು. ತಿಲಕರು ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲಿಷ್ ಭಾಷೆಯಲ್ಲಿ 'ಮರಾಠ' ಪತ್ರಿಕೆಗಳನ್ನು ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಬಳಸಿಕೊಂಡರು. ಈ ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು. ಅವರ ಕ್ರಾಂತಿಕಾರಕ ಬರವಣಿಗೆಗಳು ಜನರ ಉದ್ರೇಕಕ್ಕೆ ಕಾರಣವಾಯಿತು ಎಂಬ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರವು ತಿಲಕರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿತು.

> ***ನಿಮಗಿದು ತಿಳಿದಿರಲಿ :***
>
> *ತಿಲಕರು ಗಣೇಶಹಬ್ಬ ಮತ್ತು ಶಿವಾಜಿ ಉತ್ಸವಗಳ ಮೂಲಕ ಜನರನ್ನು ರಾಷ್ಟ್ರೀಯತೆಗೆ ಪ್ರಚೋದಿಸಿದರು.*


ಕ್ರಾಂತಿಕಾರಿಗಳು

ಕ್ರಾಂತಿಕಾರಿಗಳು ಪೂರ್ಣ ಸ್ವಾತಂತ್ರ್ಯದ ಕನಸನ್ನು ಕಂಡಿದ್ದರು. ಭಾರತೀಯರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಮಾತ್ರ ಭಾರತದಿಂದ ಓಡಿಸಬಹುದೆಂದು ಅವರು ಬಲವಾಗಿ ನಂಬಿದ್ದರು. ಇವರುಗಳು ರಹಸ್ಯಸಂಘಗಳ ಮೂಲಕ ಭಾರತದಲ್ಲಿ ಮತ್ತು ವಿದೇಶಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿ ಹಣಕಾಸು, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಕಾರ್ಯದೊಂದಿಗೆ ಕ್ರಾಂತಿಕಾರಿಗಳಿಗೆ ತರಬೇತಿ ನೀಡುವಲ್ಲಿ ನಿರತರಾಗಿದ್ದರು. 'ಅನುಶೀಲನ ಸಮಿತಿ' ಮತ್ತು 'ಅಭಿನವ ಭಾರತ' ಇಂತಹ ರಹಸ್ಯ ಸಂಘಟನೆಗಳಲ್ಲಿ ಮುಖ್ಯವಾದವು. ಇವರು ತಮ್ಮ ಗುರಿ ಸಾಧನೆಗಾಗಿ ಬಾಂಬುಗಳು ಮತ್ತು

> ***ನಿಮಗಿದು ತಿಳಿದಿರಲಿ :***
> *"ರಾಷ್ಟ್ರಗಳ ವಿಕಾಸದಲ್ಲಿ ಕೆಟ್ಟ ಆಡಳಿತಗಾರರು ಉಪಯುಕ್ತವಾದ ಉದ್ದೇಶಗಳನ್ನು ಈಡೇರಿಸುತ್ತಾರೆ. ಉದಾಸೀನವಾಗಿ ಮಲಗಿರುವ ಸಿಂಹವನ್ನು ಬಡಿದೆಬ್ಬಿಸುತ್ತಾರೆ; ಜನಗಳಿಗೆ ಸ್ಫೂರ್ತಿ ನೀಡಿ ರಾಷ್ಟ್ರೀಯ ಐಕ್ಯತೆಯನ್ನು ರೂಪಿಸುವಲ್ಲಿ ಸಹಾಯಕರಾಗುತ್ತಾರೆ" – ಎಸ್. ಎನ್. ಬ್ಯಾನರ್ಜಿಯವರ ಈ ಮಾತುಗಳನ್ನು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕ್ರಾಂತಿಕಾರಿಗಳಿಗೆ ಅನ್ವಯಿಸಬಹುದಾಗಿದೆ.*

ಬಂದೂಕುಗಳ ಪ್ರಯೋಗ ಮಾಡಿದರು. ಸರ್ಕಾರವು ಇವರನ್ನು ಹತ್ತಿಕ್ಕುವ ಸರ್ವ ಪ್ರಯತ್ನವನ್ನು ಮಾಡಿತು. ಕ್ರಾಂತಿಕಾರಿಗಳನ್ನು ಕೊಲೆ ಸಂಚಿನ ಆರೋಪದ ಮೇಲೆ ಬಂಧಿಸಿ, ಅವರುಗಳನ್ನು ತಪ್ಪಿತಸ್ಥರನ್ನಾಗಿ ಗುರುತಿಸಿ ಜೀವಾವಧಿ ಶಿಕ್ಷೆಯನ್ನು ವಿಧಿಸಿತು. ಈ ಸಂಧರ್ಭದಲ್ಲಿ ಅನೇಕರನ್ನು ಗಲ್ಲಿಗೇರಿಸಲಾಯಿತು. ವಿ.ಡಿ. ಸಾವರ್ಕರ್, ಅರಬಿಂದೋ ಘೋಷ್, ಶ್ಯಾಮಾಜಿ ಕೃಷ್ಣವರ್ಮ, ರಾಸ್ ಬಿಹಾರಿ ಘೋಷ್, ಮ್ಯಡಮ್ ಕಾಮಾ, ಖುದಿರಾಮ್ ಬೋಸ್, ರಾಮ್‌ಪ್ರಸಾದ ಬಿಸ್ಮಿಲ್, ಭಗತ್ ಸಿಂಗ್, ಚಂದ್ರಶೇಖರ ಅಜಾದ್ –ಇವರುಗಳು ಕ್ರಾಂತಿಕಾರಿಗಳಲ್ಲಿ ಪ್ರಮುಖರಾಗಿದ್ದರು.


ಭಗತ್ ಸಿಂಗ್


ಚಂದ್ರಶೇಖರ್ ಆಜಾದ್


ವಿ.ಡಿ. ಸಾವರ್ಕರ್


ಕ್ರಾಂತಿಕಾರಿಗಳು ಕ್ರಾಂತಿಕಾರಿ ಮಾರ್ಗಗಳ ಮೂಲಕ ಸ್ವಾತಂತ್ರ್ಯವನ್ನು ತಂದು ಕೊಡುವ ಅವರ ಕನಸು ನನಸಾಗಲಿಲ್ಲ. ಆದಾಗ್ಯೂ ರಾಷ್ಟ್ರೀಯ ಆಂದೋಲನಕ್ಕೆ ಅವರು ಸ್ಫೂರ್ತಿಯ ಚಿಲುಮೆಯಾಗಿದ್ದರು. ತೀವ್ರವಾದಿಗಳಾಗಿದ್ದ ಹಲವು ನಾಯಕರು ಮುಂದಿನ ದಿನಗಳಲ್ಲಿ ಕ್ರಾಂತಿಕಾರಿಗಳಾಗಿ ತಮ್ಮ ಹೋರಾಟವನ್ನು ಮುಂದುವರಿಸಿದರು. ಅವರುಗಳಲ್ಲಿ ಅರವಿಂದ ಘೋಷರು ಪ್ರಮುಖರು.

> ***ನಿಮಗಿದು ತಿಳಿದಿರಲಿ :***
> *ಅರವಿಂದ ಘೋಷರು 'ವರ್ತಮಾನ ರಣನೀತಿ' ಎಂಬ ಪುಸ್ತಕವನ್ನು ಪ್ರಕಟಿಸಿ ಅದರಲ್ಲಿ ಸೇನಾ ತರಬೇತಿ ಮತ್ತು ಯುದ್ಧ ಕೌಶಲ್ಯವನ್ನು ಪ್ರಸ್ತಾಪಿಸಿದ್ದರು. ಬರೀಂದರ್ ಕುಮಾರ್ ಘೋಷ್‌ರವರು 'ಯುಗಾಂತರ' ಎಂಬ ನಿಯತಕಾಲಿಕೆಯನ್ನು ಇದೇ ಭಾವನೆಯೊಂದಿಗೆ ಪ್ರಕಟಿಸಿದ್ದರು.*

ಗಾಂಧಿಯುಗ (1920–1947)

ಮಹಾತ್ಮ ಗಾಂಧೀಜಿಯವರು ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರ್ ಪದವಿ ಪಡೆದು ವಕೀಲಿ ವೃತ್ತಿಯನ್ನು ದಕ್ಷಿಣ ಆಫ್ರಿಕಾದಲ್ಲಿ ಆರಂಭಿಸಿದರು. ದಕ್ಷಿಣ ಆಫ್ರಿಕಾವನ್ನು ಆಳುತ್ತಿದ್ದ ಬ್ರಿಟಿಷರು ವರ್ಣಭೇದ ನೀತಿಯನ್ನು ಅನುಸರಿಸುತ್ತ ಮುಖ್ಯವಾಗಿ ಭಾರತೀಯರನ್ನು ಮತ್ತು ಆಫ್ರಿಕನರನ್ನು ಬಹಳ ಕೀಳಾಗಿ ಕಾಣುತ್ತಿದ್ದರು. ಕೂಲಿ ಕೆಲಸಗಳನ್ನು ಮಾಡುತ್ತಿದ್ದ ಬಹಳಷ್ಟು ಇಂತಹ ಜನರು ಬಿಳಿಯರೊಂದಿಗೆ ರೈಲಿನಲ್ಲಿ ಪ್ರಯಾಣಿಸಬಾರದಾಗಿತ್ತು, ಸಹ ಭೋಜನ ಮಾಡಬಾರದಾಗಿತ್ತು. ಬಿಳಿಯರು ಕೂಲಿ ಜನರೊಂದಿಗೆ ಹಿಂಸಾತ್ಮಕವಾಗಿ ನಡೆದುಕೊಳ್ಳುತ್ತಿದ್ದರು. ಗಾಂಧೀಜಿಯವರು ಅಂತಹವರನ್ನು ಸಂಘಟಿಸಿ ಅವರ

ಸುಖದುಃಖಗಳಲ್ಲಿ ಪಾಲ್ಗೊಂಡು ಬ್ರಿಟಿಷರ ವಿರುದ್ಧ ಶಾಂತಿಯುತವಾದ ಚಳುವಳಿಗಳನ್ನು, ಪ್ರತಿಭಟನೆಗಳನ್ನು ಕೈಗೊಂಡರು. ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷರ ವಿರುದ್ಧ ಮಾಡಿದ ಚಳುವಳಿಯ ಸ್ಫೂರ್ತಿಯು ಮುಂದೆ ಭಾರತೀಯರನ್ನು ಬ್ರಿಟಿಷರಿಂದ ವಿಮೋಚನೆ ಮಾಡಲು ಸಹಕಾರಿಯಾಯಿತು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ 1920ರಿಂದ 1947ರ ಕಾಲವನ್ನು 'ಗಾಂಧಿಯುಗ' ವೆಂದು ಕರೆಯಲಾಗಿದೆ. ಭಾರತವು ಸ್ವಾತಂತ್ರ್ಯ ಪಡೆಯುವವರೆಗೂ ನಡೆದ ಘಟನಾವಳಿಗಳಲ್ಲಿ ಗಾಂಧೀಜಿಯವರು ಮುಖ್ಯ ಭೂಮಿಕೆಯಲ್ಲಿದ್ದರು.



ದಕ್ಷಿಣ ಆಫ್ರಿಕಾದಲ್ಲಿದ್ದಾಗ ಗಾಂಧೀಜಿ

ಮಹಾತ್ಮ ಗಾಂಧೀಜಿಯವರ ಪ್ರವೇಶದಿಂದಾಗಿ ಸ್ವಾತಂತ್ರ್ಯ ಚಳುವಳಿಯು ಹೊಸ ಆಯಾಮವನ್ನು ಪಡೆಯಿತು. ಗಾಂಧೀಜಿಯವರು ತಮ್ಮ ಹೋರಾಟದಲ್ಲಿ 'ಪರೋಕ್ಷ ಪ್ರತಿರೋಧ', 'ಅಹಿಂಸೆ' ಮತ್ತು 'ಸತ್ಯಾಗ್ರಹವನ್ನು' ಪ್ರಮುಖ ತಂತ್ರಗಳನ್ನಾಗಿ ಬಳಸಿಕೊಂಡರು. ತಮ್ಮ ಸಿದ್ಧಾಂತಗಳನ್ನು ಅವರು 'ಹಿಂದ್ ಸ್ವರಾಜ್' ಪತ್ರಿಕೆಯಲ್ಲಿ ವ್ಯಕ್ತಪಡಿಸುತ್ತಿದ್ದರು. ಸತ್ಯಾಗ್ರಹವು ಇವರ ಹೋರಾಟದ ಪ್ರಮುಖ ಅಸ್ತ್ರವಾಯಿತು.

ನಿಮಗಿದು ತಿಳಿದಿರಲಿ :

ಗಾಂಧೀಜಿಯ ಪ್ರವೇಶದೊಂದಿಗಿನ ಹೊಸ ಕಾಂಗ್ರೆಸ್ ತನ್ನ ಸದಸ್ಯತ್ವವನ್ನು ಎಲ್ಲರಿಗೂ ಮುಕ್ತಗೊಳಿಸಿ, ಜನಸಾಮಾನ್ಯರ ಸಂಘಟನೆಯನ್ನಾಗಿಸಿತು. ಸಂಘವು ತೆಗೆದುಕೊಳ್ಳುವ ತೀರ್ಮಾನಗಳನ್ನು ಒತ್ತಾಯಿಸಲು ಅಸಹಕಾರ ಮತ್ತು ಸವಿನಯ ಕಾನೂನು ಭಂಗ ಚಳುವಳಿಯ ಕಾರ್ಯತಂತ್ರ ರೂಪಿಸಿತು. ಅದು ಸಾಮಾಜಿಕ ಉನ್ನತಿಗಾಗಿ ರಚನಾತ್ಮಕ ಕಾರ್ಯಕ್ರಮಗಳನ್ನು ಸೂಚಿಸಿತು. ತಮ್ಮ ಕಾರ್ಯಚರಣೆಯನ್ನು ನೆರವೇರಿಸಲು ಒಂದು ಕೋಟಿ ರೂಪಾಯಿ ಬಂಡವಾಳದ 'ತಿಲಕ್ ಸ್ವರಾಜ್ಯ ಫಂಡ್'ನ್ನು ಪ್ರಾರಂಭಿಸಿತು. ಹೀಗೆ ಮಹಾತ್ಮ ಗಾಂಧೀಜಿಯ ಪ್ರವೇಶದೊಂದಿಗೆ ಕಾಂಗ್ರೆಸ್‌ನಲ್ಲಿ ಸಂಪೂರ್ಣ ಬದಲಾವಣೆಯನ್ನು ಕಾಣಬಹುದು. ಈ ಎಲ್ಲಾ ಕಾರಣಗಳಿಗಾಗಿ ಈ ಕಾಲವನ್ನು ಗಾಂಧೀಯುಗವೆಂದು ಗುರುತಿಸಲಾಗಿದೆ.

ಭಾರತದಲ್ಲಿ ತೀವ್ರಗೊಂಡ ಕ್ರಾಂತಿಕಾರಕ ಚಟುವಟಿಕೆಗಳ ಹಿನ್ನೆಲೆಯಲ್ಲಿ ಅದನ್ನು ಹತ್ತಿಕ್ಕುವ ಉದ್ದೇಶದಿಂದ ಅನೇಕ ಕಾಯ್ದೆಗಳನ್ನು ತರಲಾಯಿತು. ಅವುಗಳಲ್ಲಿ ಫೆಬ್ರವರಿ 1919ರಲ್ಲಿ ಜಾರಿಗೆ ತರಲಾದ ರೌಲತ್ ಕಾಯಿದೆಯು ಮುಖ್ಯವಾದುದು. ಕೇವಲ ಗುಮಾನಿಯ ಮೇಲೆ ಜನರನ್ನು ಬಂಧಿಸಿ ವಿಚಾರಣೆ ನಡೆಸುವ ಅಧಿಕಾರವನ್ನು ನ್ಯಾಯಾಧೀಶರಿಗೆ ಇದು ನೀಡಿತು. ಗಾಂಧೀಜಿಯವರು ಈ ಅಮಾನವೀಯ ಕಾಯ್ದೆಯ ವಿರುದ್ಧ ತಮ್ಮ ಹೋರಾಟದ ಸಾತ್ವಿಕ ಅಸ್ತ್ರವಾದ ಸತ್ಯಾಗ್ರಹವನ್ನು ಬಳಸಿದರು. ದೇಶದಾದ್ಯಂತ ಇದಕ್ಕೆ ವ್ಯಾಪಕ ಬೆಂಬಲ ದೊರೆಯಿತು. ಸಹಸ್ರಾರು ಭಾರತೀಯರು ಈ ಮೂಲಕ ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಭಾಗವಹಿಸಿದರು.

ನಿಮಗಿದು ತಿಳಿದಿರಲಿ :

ಸತ್ಯಾಗ್ರಹ : *ವರ್ಣಭೇದ ನೀತಿಯ ವಿರುದ್ಧ ಹೋರಾಟದಲ್ಲಿ ಗಾಂಧೀಜಿಯವರು ಇದನ್ನು ಆಫ್ರಿಕಾದಲ್ಲಿ ಬಳಸಿ ಯಶಸ್ವಿಯಾದರು. ಇದೇ ಅಸ್ತ್ರವನ್ನು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಬಳಸಿದರು. ಸತ್ಯಾಗ್ರಹ ಎನ್ನುವುದು ದೈಹಿಕ ಒತ್ತಡವಲ್ಲ. ಇದು ಆತ್ಮಾಭಿಮಾನದ ಹೋರಾಟ.*

ಜಲಿಯನ್‌ವಾಲಾಬಾಗ್ ಹತ್ಯಾಕಾಂಡ

ರೌಲತ್ ಕಾಯ್ದೆಯ ವಿರುದ್ಧ ಪಂಜಾಬಿನಲ್ಲಿ ಚಳುವಳಿಯು ವ್ಯಾಪಕವಾಗಿ ಹರಡಿತು. ಅಲ್ಲಲ್ಲಿ ಇದು ಹಿಂಸಾತ್ಮಕ ಸ್ವರೂಪಕ್ಕೆ ತಿರುಗಿದ ಹಿನ್ನೆಲೆಯಲ್ಲಿ ಸರ್ಕಾರವು ಅಮೃತಸರ ನಗರವನ್ನು ಜನರಲ್ ಡಯರ್ ಎಂಬ ಸೇನಾಧಿಕಾರಿಯ ಉಸ್ತುವಾರಿಗೆ ನೀಡಿತು. ಜನರಲ್ ಡಯರ್ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ನಗರವನ್ನು ಸೇನಾಳ್ವಿಕೆಗೆ ಒಳಪಡಿಸಿ ಸಭೆಗಳನ್ನು ನಿಷೇಧಿಸಿದನು. ಆದರೆ, ಜಲಿಯನ್‌ವಾಲಾಬಾಗ್‌ನಲ್ಲಿ ಸಭೆ ಸೇರಲು ಹೋರಾಟಗಾರರು ಮೊದಲೇ ನಿರ್ಧರಿಸಿದ್ದರು. ಅವರಿಗೆ ಈ ನಿಷೇಧದ ಬಗ್ಗೆ ಪೂರ್ಣ ತಿಳುವಳಿಕೆ ಇರಲಿಲ್ಲ. ಸುಮಾರು 20 ಸಾವಿರ ಜನ ರೌಲತ್ ಕಾಯ್ದೆಯ ವಿರುದ್ಧದ ಪ್ರತಿಭಟನಾ ಸಭೆಯಲ್ಲಿ ಸೇರಿದ್ದರು. ಸುತ್ತಲೂ ಎತ್ತರವಾದ ಗೋಡೆಗಳಿಂದ, ಕಿರಿದಾದ ಪ್ರವೇಶದಿಂದ ಕೂಡಿದ ಜಲಿಯನ್ ವಾಲಾಬಾಗ್‌ನಲ್ಲಿ ಸಭೆಯು ಶಾಂತಿಯಿಂದ ನಡೆಯುತ್ತಿತ್ತು. ತನ್ನ ಸೈನ್ಯದೊಂದಿಗೆ ಬಂದ ಜನರಲ್ ಡಯರ್‌ನು ಯಾವ ಮುನ್ಸೂಚನೆಯನ್ನು ನೀಡದೆ ಶಾಂತಿಯುತವಾಗಿ ಪ್ರತಿಭಟನಾ ಸಭೆ ಸೇರಿದ್ದ ಜನರ ಮೇಲೆ ಅಮಾನುಷವಾಗಿ ಗುಂಡಿನ ಮಳೆಗರೆದನು. ಈ ಹತ್ಯಾಕಾಂಡದಲ್ಲಿ 379 ಪ್ರತಿಭಟನಾಕಾರರು ಪ್ರಾಣ ಕಳೆದುಕೊಂಡರು. ಸಹಸ್ರಾರು ಜನರು ಗಾಯಗೊಂಡರು. ಈ ಘಟನೆಯನ್ನು ಜಲಿಯನ್ ವಾಲಾಬಾಗ್ ದುರಂತ ಎಂದು ಕರೆಯುತ್ತಾರೆ.

ನಿಮಗಿದು ತಿಳಿದಿರಲಿ :

ಜಲಿಯನ್ ವಾಲಾಬಾಗ್ ದುರಂತದ ಅಮಾನುಷ ಘಟನೆಯ ಹಿನ್ನೆಲೆಯಲ್ಲಿ ರವೀಂದ್ರನಾಥ ಠಾಗೂರ್ ವೈಸ್ ರಾಯಗೆ ಪತ್ರ ಬರೆದು ತಮಗೆ ನೀಡಲಾಗಿದ್ದ 'ನೈಟ್‌ಹುಡ್' ಗೌರವವನ್ನು ತ್ಯಜಿಸಿದರು. ಮುಗ್ಧ ಭಾರತೀಯ ಹೋರಾಟಗಾರರನ್ನು ಹತ್ಯೆಗೈದ ಜನರಲ್ ಡಯರ್‌ನನ್ನು ಭಾರತದ ಕ್ರಾಂತಿಕಾರಿ ಉದಮ್ ಸಿಂಗ್‌ನು ಹತ್ಯೆ ಮಾಡಿದನು.



ಜಲಿಯನ್‌ವಾಲಾಬಾಗ್ ಸ್ಮಾರಕ

ಸರ್ಕಾರವು ಜಲಿಯನ್‌ವಾಲಾಬಾಗ್ ದುರಂತದ ವಿಚಾರಣೆಗಾಗಿ ಹಂಟರ್ ಆಯೋಗವನ್ನು ನೇಮಿಸಿತು. ಇದರಿಂದ ಯಾವುದೇ ಪ್ರಯೋಜನವಾಗಲಿಲ್ಲ. ಭಾರತೀಯರ ಮೇಲಿನ ದೌರ್ಜನ್ಯ ಮತ್ತೂ ಕೂಡ ಮುಂದುವರಿಯಿತು.


ಖಿಲಾಫತ್ ಚಳುವಳಿ

ಟರ್ಕಿಯ ಸುಲ್ತಾನರು ಮುಸ್ಲಿಮರ ಧಾರ್ಮಿಕ ಮುಖಂಡರೂ ಆಗಿದ್ದು, ಖಲೀಫರೆಂದು ಕರೆಸಿಕೊಳ್ಳುತ್ತಿದ್ದರು. ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಖಲೀಫರ ಮೇಲೆ ನಡೆಯುತ್ತಿದ್ದ ಬ್ರಿಟೀಷರ ದೌರ್ಜನ್ಯವನ್ನು ಖಂಡಿಸಿ ಮುಂಸ್ಲಿಮರು ಜಗತ್ತಿನಾದ್ಯಂತ ಪ್ರತಿಭಟಿಸಿದರು. ಅಂತೆಯೇ ಮಹಮದ್ ಅಲಿ ಮತ್ತು ಶೌಕತ್ ಅಲಿ ಸಹೋದರರು ಭಾರತದಲ್ಲಿ ಟರ್ಕರ ಪರವಾದ ಖಿಲಾಫತ್ ಚಳುವಳಿ ಪ್ರಾರಂಭಿಸಿದರು. ಹಿಂದೂ ಮುಸ್ಲಿಮರು ಒಗ್ಗಟ್ಟಾಗಿ ಬ್ರಿಟಿಷರ ವಿರುದ್ಧ ಬಂಡೆದ್ದರೆ ಮಾತ್ರ ಬ್ರಿಟಿಷರು ಹಿಮ್ಮೆಟ್ಟುತ್ತಾರೆ ಎನ್ನುವುದು ಗಾಂಧೀಜಿಯವರ ನಂಬಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಮುಸ್ಲಿಮರ

ಸಹಭಾಗಿತ್ವ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಬಹಳ ಮುಖ್ಯ ಎಂದು ಗಾಂಧೀಜಿ ಭಾವಿಸಿದ್ದರು. ಪರಿಣಾಮವಾಗಿ ಗಾಂಧೀಜಿ ಖಿಲಾಫತ್ ಚಳುವಳಿಗೆ ತಮ್ಮ ಬೆಂಬಲವನ್ನು ನೀಡಿದರು. ಈ ಚಳುವಳಿಯು ಹಿಂದೂ ಮುಸ್ಲಿಮರು ಒಂದುಗೂಡಿ ನಡೆಸಿದ ರಾಷ್ಟ್ರವ್ಯಾಪೀ ಆಂದೋಲನವಾಗಿದೆ. ಅನೇಕ ರಾಷ್ಟ್ರೀಯ ನಾಯಕರು ಮತ್ತು ಕಾಂಗ್ರೆಸ್ ಸಂಘಟನೆಯು ಖಿಲಾಫತ್ ಚಳುವಳಿಯ ಬೆಂಬಲಕ್ಕೆ ನಿಂತಿತು.


ಅಸಹಕಾರ ಚಳುವಳಿ

ಗಾಂಧೀಜಿ ಬ್ರಿಟಿಷರ ವಿರುದ್ಧ 1920ರಲ್ಲಿ ಅಸಹಕಾರ ಚಳುವಳಿಗೆ ಕರೆಯಿತ್ತರು. ಅವರ ಕರೆಯನ್ನು ಬೆಂಬಲಿಸಿ ಶಾಲಾಕಾಲೇಜುಗಳನ್ನು ವಿದ್ಯಾರ್ಥಿಗಳು ಬಹಿಷ್ಕರಿಸಿದರು. ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು. ಭಾರತೀಯ ಗಣ್ಯರು, ಬ್ರಿಟಿಷರು ನೀಡಿದ್ದ ಪುರಸ್ಕಾರಗಳನ್ನು ಹಿಂದಿರುಗಿಸಿದರು. ಈ ಚಳುವಳಿಯನ್ನು ಬೆಂಬಲಿಸಿ ಮೋತಿಲಾಲ್ ನೆಹರು, ಸಿ.ಆರ್.ದಾಸ್ ತಮ್ಮ ವಕೀಲಿ ವೃತ್ತಿಯನ್ನು ತ್ಯಜಿಸಿದರು. ಈ ಅವಧಿಯಲ್ಲಿ ಬ್ರಿಟನ್ ರಾಜಕುಮಾರನ ಭಾರತದ ಭೇಟಿಯನ್ನು ವಿರೋಧಿಸಲಾಯಿತು. ರಾಜಕುಮಾರನ ಭೇಟಿಯ ವಿರುದ್ಧವಾಗಿ ದೇಶಾದ್ಯಂತ ಹರತಾಳಗಳು ನಡೆದವು.



ಮೋತಿಲಾಲ್‌ನೆಹರು

ಅಸಹಕಾರ ಚಳುವಳಿಯ ಸ್ವರೂಪವನ್ನು ಮನಗಂಡ ಬ್ರಿಟಿಷ್ ಸರ್ಕಾರದಲ್ಲಿ ಆತಂಕದ ವಾತಾವರಣ ಉಂಟಾಯಿತು. ಇಂತಹ ಸಂದರ್ಭದಲ್ಲಿ ಉತ್ತರ ಪ್ರದೇಶದ ಚೌರಿಚೌರ ಎಂಬಲ್ಲಿ ಸಾವಿರಾರು ಸ್ವಾತಂತ್ರ್ಯ ಯೋಧರು ಚಳುವಳಿಗೆ ಧುಮುಕಿದರು. 1922ರಲ್ಲಿ ಶಾಂತಿಯುತವಾಗಿ ಚಳುವಳಿ ನಡೆಸುತ್ತಿದ್ದ ಚಳುವಳಿಗಾರರ ಮೇಲೆ ಪೋಲಿಸರು ಹಲ್ಲೆ ಮಾಡಿದರು. ಇದರಿಂದ ರೊಚ್ಚಿಗೆದ್ದ ಜನರು ಠಾಣೆಗೆ ನುಗ್ಗಲೆತ್ನಿಸಿದಾಗ ಪೋಲಿಸರು ಗೋಲಿಬಾರ್ ನಡೆಸಿದರು. ಪೋಲಿಸರ ಬಳಿ ಇದ್ದ ಶಸ್ತ್ರಾಸ್ತ್ರಗಳು ಖಾಲಿಯಾದ ಕಾರಣದಿಂದ ಪೋಲಿಸರು ಠಾಣೆಯೊಳಗೆ ಓಡಿದರು. ಕುಪಿತರಾದ ಚಳುವಳಿಗಾರರು ಪೋಲಿಸ್ ಠಾಣೆಗೆ ಬೆಂಕಿ ಹಚ್ಚಿದರು. ಇದರಿಂದ 22 ಜನ ಪೋಲಿಸರು ಸಜೀವ ದಹನವಾದರು. ಈ ಘಟನೆಯನ್ನು ಇತಿಹಾಸದಲ್ಲಿ ಚೌರಿಚೌರ ಘಟನೆ ಎನ್ನುತ್ತಾರೆ. ಈ ಘಟನೆಯು ಗಾಂಧೀಜಿಯವರನ್ನು ಖಿನ್ನರನ್ನಾಗಿಸಿತು. ಹಾಗೆಂಯೇ ಚಳುವಳಿಗಾರರ ಹಿಂಸಾತ್ಮಕ ವರ್ತನೆಗಾಗಿ ಗಾಂಧೀಜಿಯವರು ವಿಷಾದ ವ್ಯಕ್ತಪಡಿಸಿ ಚಳುವಳಿಯನ್ನು ಹಿಂತೆಗೆದುಕೊಂಡರು. ಬ್ರಿಟಿಷ್ ಸರ್ಕಾರವು ಈ ಹಿಂಸಾತ್ಮಕ ಘಟನೆಗೆ ಗಾಂಧೀಜಿಯುವರನ್ನು ಹೊಣೆಗಾರರನ್ನಾಗಿಸಿತು. ಸರ್ಕಾರವು ಅವರಿಗೆ ಆರು ವರ್ಷಗಳ ಕಾಲ



ಅಸಹಕಾರ ಚಳುವಳಿ

ಸೆರಮನೆವಾಸ ವಿಧಿಸಿತು. ಆದರೆ 1924ರಲ್ಲಿ ಅನಾರೋಗ್ಯದಿಂದ ಗಾಂಧೀಜಿಯವರನ್ನು ಸರ್ಕಾರವು ಬಿಡುಗಡೆ ಗೊಳಿಸಿತು.

1919ರ ಕಾಯ್ದೆಯು ಚುನಾವಣೆಗಳಲ್ಲಿ ಭಾಗವಹಿಸುವ ಅವಕಾಶವನ್ನು ಭಾರತೀಯರಿಗೆ ನೀಡಿತು. ಆದರೆ ಈ ಕಾಯ್ದೆಯು ಸದುದ್ದೇಶವನ್ನು ಹೊಂದಿಲ್ಲವಾದ್ದರಿಂದ ಕೆಲವು ಕಾಂಗ್ರೆಸ್ಸಿಗರು ಅದನ್ನು ಬಹಿಷ್ಕರಿಸಿದರು. 1919ರ ಕಾಯ್ದೆಯಡಿಯಲ್ಲಿ ಮುಂದೆ ನಡೆಯಲಿರುವ ಚುನಾವಣೆಗಳಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ ಸಿ.ಆರ್.ದಾಸ್, ಮೋತಿಲಾಲ್ ನೆಹರು ಮತ್ತು ಇನ್ನಿತರ ಕೆಲವು ಕಾಂಗ್ರೆಸ್ಸಿಗರು 'ಸ್ವರಾಜ್ ಪಕ್ಷ'ವನ್ನು 1922ರಲ್ಲಿ ಸ್ಥಾಪಿಸಿದರು. ಹೀಗೆ ಸ್ಥಾಪನೆಗೊಂಡ ಸ್ವರಾಜ್ ಪಕ್ಷವು ಶಾಸನ ಸಭೆಯನ್ನು ಪ್ರವೇಶಿಸಿ ಒಳಗಿನಿಂದಲೇ ಸರ್ಕಾರದ ನೀತಿಯನ್ನು ವಿರೋಧಿಸಿ ಅದರ ಕೆಲಸಕ್ಕೆ ಅಡ್ಡಿಯನ್ನುಂಟು ಮಾಡುವ ಅಭಿಲಾಷೆಯನ್ನು ಹೊಂದಿತ್ತು. 1924ರಲ್ಲಿ ನಡೆದ ಬೆಳಗಾವಿ ಅಧಿವೇಶನದಲ್ಲಿ ಶಾಸನ ಸಭೆಯನ್ನು ಪ್ರವೇಶಿಸುವ ಸ್ವರಾಜ್ಯ ಪಕ್ಷದ ಕಾರ್ಯತಂತ್ರವನ್ನು ಗಾಂಧೀಜಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಕಾರ್ಯಕ್ರಮವಾಗಿ ಒಪ್ಪಿಕೊಂಡರು. ಹೀಗೆ ಸ್ವರಾಜ್ಯ ಪಕ್ಷವು ಕಾಂಗ್ರೆಸ್‌ನಲ್ಲಿ ಸೇರಿತು.

> **ನಿಮಗಿದು ತಿಳಿದಿರಲಿ :**
> *1924 ರಲ್ಲಿ ಕಲ್ಕತ್ತಾದಲ್ಲಿ ನಡೆದ ಕಾರ್ಪೋರೇಷನ್ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷವು ಬಹುಮತವನ್ನು ಪಡೆಯಿತು. ಸಿ.ಆರ್.ದಾಸ್‌ರವರು ಮೇಯರ್ ಆಗಿ ಸಹ ಆಯ್ಕೆಯಾದರು. ಇವರನ್ನು ದೇಶಬಂಧು ಎಂದು ಕರೆದಿದ್ದಾರೆ.*

1919ರ ಭಾರತ ಸರ್ಕಾರ ಕಾಯ್ದೆಯ ಪ್ರಕಾರ ಹತ್ತು ವರ್ಷದ ಕೊನೆಯಲ್ಲಿ ಒಂದು ಆಯೋಗವನ್ನು ನೇಮಿಸುವ ಪ್ರಸ್ತಾಪದ ಮುನ್ಸೂಚನೆಯನ್ನು ವ್ಯಕ್ತಪಡಿಸಲಾಗಿತ್ತು. 1919ರ ಕಾಯ್ದೆಯ ಕಾರ್ಯವೈಖರಿಯನ್ನು ತಿಳಿದು ಅವಶ್ಯಕತೆಗನುಸಾರವಾಗಿ ಸೂಕ್ತ ಬದಲಾವಣೆಯ ವರದಿಯನ್ನು ಅದು ಸರ್ಕಾರಕ್ಕೆ ಸಲ್ಲಿಸಬೇಕಿತ್ತು. ಅದರಂತೆ 1927ರಲ್ಲಿ ಜಾನ್ ಸೈಮನ್ ನೇತೃತ್ವದಲ್ಲಿ ಒಂದು ಆಯೋಗವನ್ನು ನೇಮಿಸಲಾಯಿತು. ಇದು ಬ್ರಿಟಿಷ್ ಸರ್ಕಾರದ ಸಂಸದೀಯ ಆಯೋಗ ಎಂಬ ನೆಪದಲ್ಲಿ ಒಬ್ಬ ಭಾರತೀಯನನ್ನೂ ಒಳಗೊಂಡಿರಲಿಲ್ಲ. ಇದರಿಂದ ಇದು ಭಾರತೀಯರಿಗೆ ಮಾಡಿದ ಅವಮಾನವೆಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾವಿಸಿ ಸೈಮನ್ ಆಯೋಗವನ್ನು ಬಹಿಷ್ಕರಿಸಿತು. ಸೈಮನ್ ಭಾರತಕ್ಕೆ ಬಂದಾಗ ಪ್ರತಿಭಟನೆಗಳು, ಪ್ರದರ್ಶನಗಳು ನಡೆದವು. ಸೈಮನ್ 'ಹಿಂದಕ್ಕೆ ಹೋಗು' ಎಂದರು. ಸೈಮನ್ ಆಯೋಗ ಹೋದ ಕಡೆಯಲ್ಲೆಲ್ಲಾ ಪ್ರತಿಭಟನೆಗಳು, ಹರತಾಳಗಳು, ಪ್ರದರ್ಶನಗಳು ನಡೆದವು. ಈ ಸಮಯದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಲಾಲ ಲಜಪತ್ ರಾಯರು ಬ್ರಿಟಿಷ್ ಸಿಪಾಯಿಗಳ ಲಾಟಿ ಏಟಿನಿಂದ ಮರಣ ಹೊಂದಿದರು. ಇದರಿಂದಾಗಿ ಭಾರತೀಯರ ಹೋರಾಟ ಮತ್ತಷ್ಟು ತೀವ್ರವಾಯಿತು.

ಸರ್ಕಾರದ ವಿರುದ್ಧದ ಈ ಧ್ವನಿಯನ್ನು ತಿಳಿಗೊಳಿಸುವ ಉದ್ದೇಶದಿಂದ ಸೈಮನ್ ಆಯೋಗದ ಕಾರ್ಯವು ಕೊನೆಗೊಳ್ಳುತ್ತಿದ್ದ ಹಾಗೆ ಭಾರತೀಯ ಪ್ರತಿನಿಧಿಗಳ ಸಮಾವೇಶವೊಂದನ್ನು ಕರೆಯಲು ಸರ್ಕಾರವು ನಿಶ್ಚಯಿಸಿತು. ಈ ಸಮಾವೇಶದಲ್ಲಿ ಮುಂದಿನ ಸಾಂವಿಧಾನಿಕ ಬೆಳವಣಿಗೆಯ ಸ್ವರೂಪವನ್ನು ರೂಪಿಸಲು ಭಾರತೀಯರಿಗೆ ಅವಕಾಶವನ್ನು ಕಲ್ಪಿಸಲಾಗಿತ್ತು. ಇದರ ಫಲವೇ ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳು.

> **ನಿಮಗಿದು ತಿಳಿದಿರಲಿ :**
> *ಜನವರಿ ಒಂದು, 1930ರಂದು ಜವಾಹರಲಾಲ್ ನೆಹರುರವರು ರಾವಿ ನದಿಯ ದಡದ ಮೇಲೆ ಸ್ವಾತಂತ್ರ್ಯದ ತ್ರಿವರ್ಣ ಧ್ವಜವನ್ನು ಹಾರಿಸಿದರು.*

1929ರಲ್ಲಿ ಜವಾಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನ ಲಾಹೋರ್‌ನಲ್ಲಿ ನಡೆಯಿತು. ಈ ಅಧಿವೇಶನದಲ್ಲಿ 'ಸಂಪೂರ್ಣ ಸ್ವರಾಜ್ಯ' ನಮ್ಮ ಗುರಿ ಎಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಘೋಷಿಸಿತು. ಜನವರಿ 26, 1930ರಂದು ಇಡೀ ದೇಶ ಸ್ವಾತಂತ್ರ್ಯ ದಿನವನ್ನು ಆಚರಿಸಿ ಲಾಹೋರ್ ಘೋಷಣೆಗೆ ಬೆಂಬಲ ಸೂಚಿಸಿತು. ಸಂಪೂರ್ಣ ಸ್ವರಾಜ್ಯದ ಗುರಿಯ ಸಾಧನೆಗಾಗಿ ಈ ಅಧಿವೇಶನವು ಬ್ರಿಟಿಷರ ವಿರುದ್ಧ ಹಮ್ಮಿಕೊಳ್ಳಲಾಗುವ ಕಾನೂನು ಭಂಗ ಚಳುವಳಿಯ ಪೂರ್ಣ ಜವಾಬ್ದಾರಿಯನ್ನು ಗಾಂಧೀಜಿಯವರಿಗೆ ವಹಿಸಿತು.

ಸವಿನಯ ಕಾನೂನು ಭಂಗ ಚಳುವಳಿ :


ಉಪ್ಪಿನ ಸತ್ಯಾಗ್ರಹ

ಕಾನೂನು ಭಂಗ ಚಳುವಳಿಯ ನೇತೃತ್ವ ವಹಿಸಿಕೊಂಡ ಗಾಂಧೀಜಿಯವರು ವೈಸರಾಯ್ ಇರ್ವಿನ್‌ನನ ಮುಂದೆ ಉಪ್ಪಿನ ಮೇಲಿನ ತೆರಿಗೆ ರದ್ದತಿಯು ಸೇರಿದಂತೆ ಹನ್ನೊಂದು ಬೇಡಿಕೆಗಳನ್ನು ಸಲ್ಲಿಸಿದ್ದರು. ಈ ಬೇಡಿಕೆಗಳು ಈಡೇರದೇ ಹೋದಲ್ಲಿ ಕಾನೂನು ಭಂಗ ಚಳುವಳಿ ಆರಂಭಿಸುವುದಾಗಿ ಗಾಂಧೀಜಿಯವರು ಘೋಷಿಸಿದರು. ಆದರೆ ಇರ್ವಿನ್ ಅವರ ಬೇಡಿಕೆಗಳನ್ನು ಪರಿಗಣಿಸಲಿಲ್ಲ. ಇದರ ಪರಿಣಾಮವಾಗಿ ಗಾಂಧೀಜಿಯವರು 1930ರಲ್ಲಿ ಸಬರಮತಿ ಆಶ್ರಮದಿಂದ ಸೂರತ್ ಸಮೀಪದ ಸಮುದ್ರ ತೀರದ ದಂಡಿಯವರೆಗೆ ತಮ್ಮ ಅನುಯಾಯಿಗಳೊಂದಿಗೆ ಕಾಲ್ನಡಿಗೆಯಲ್ಲಿ ಹೊರಟು ದಂಡಿಯ ಕಡಲ ತೀರದಲ್ಲಿ ತಾವೇ ಉಪ್ಪು ತಯಾರಿಸಿ ಕಾನೂನು ಭಂಗ ಚಳುವಳಿಯನ್ನು ಪ್ರಾರಂಭಿಸಿದರು. ಈ ಘಟನೆಯನ್ನು ಇತಿಹಾಸದಲ್ಲಿ 'ದಂಡಿ ಸತ್ಯಾಗ್ರಹ' ಎಂದು ಕರೆಯುತ್ತಾರೆ.

> **ನಿಮಗಿದು ತಿಳಿದಿರಲಿ :**
> - *ಸಬರಮತಿಯಿಂದ ದಂಡಿಯವರೆಗೆ ನಡೆದ ತಂಡದಲ್ಲಿ ಕರ್ನಾಟಕದ 18 ವರ್ಷದ ತರುಣ ಮೈಲಾರ ಮಹಾದೇವಪ್ಪ ಸಹ ಇದ್ದದ್ದು ಇದರ ವಿಶೇಷ.*
> - *ಕರ್ನಾಟಕ ಕಾಂಗ್ರೆಸ್ ಕೂಡ ಆರ್. ಆರ್. ದಿವಾಕರ್, ಕೌಜಲಗಿ ಹನುಮಂತರಾಯರು, ಗಂಗಾಧರ ದೇಶಪಾಂಡೆ, ಹರ್ಡೀಕರ್ ಮಂಜಪ್ಪ ಮತ್ತು ಕಾರ್ನಾಡು ಸದಾಶಿವರಾಯರನ್ನೊಳಗೊಂಡ ಸತ್ಯಾಗ್ರಹ ಸಮಿತಿಯನ್ನು ರಚಿಸಿ ಕಾರವಾರ ಜಿಲ್ಲೆಯ ಅಂಕೋಲ ತಾಲ್ಲೂಕಿನಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಿತು.*

ಕಾನೂನು ಭಂಗ ಚಳುವಳಿಯಲ್ಲಿ ಗಾಂಧೀಜಿಯವರೊಂದಿಗೆ ಭಾಗವಹಿಸಿದ್ದ ವಿಜಯಲಕ್ಷ್ಮಿ ಪಂಡಿತ್, ಕಮಲಾನೆಹರು, ವಲ್ಲಭ ಬಾಯಿ ಪಟೇಲ್, ರಾಜಗೋಪಾಲಚಾರಿ, ಬಾಬು ರಾಜೇಂದ್ರ ಪ್ರಸಾದ್ ಮೊದಲುಗೊಂಡು ಸಾವಿರಾರು ಜನರನ್ನು ಬ್ರಿಟಿಷರು ಬಂಧಿಸಿದರು. ಈ ಚಳುವಳಿಯು ದೇಶದ ನಾನಾಭಾಗಗಳಲ್ಲಿ ವ್ಯಾಪಿಸಿತು.

ಇದರ ನಡುವೆ ಈ ಹಿಂದೆ ಪ್ರಸ್ತಾಪಿಸಿದಂತೆ ಲಂಡನ್ನಿನಲ್ಲಿ ಭಾರತೀಯ ಜನಪ್ರತಿನಿಧಿಯ ಸಮಾವೇಶವನ್ನು 1930ರಲ್ಲಿ ಕರೆಯಲಾಯಿತು. ಇದು ಮೊದಲನೆಯ ದುಂಡು ಮೇಜಿನ ಪರಿಷತ್ ಸಮಾವೇಶ. ಇದರಿಂದ ಭಾರತೀಯರನ್ನು ಹೊರತುಪಡಿಸಿ ಸರ್ಕಾರ ಏಕ ಮುಖವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂಬುದು ವ್ಯಕ್ತವಾಯಿತು. ಈ ಸಮಾವೇಶದಲ್ಲಿ ಮೊಟ್ಟಮೊದಲನೆಯ ಬಾರಿಗೆ ಅಸ್ಪೃಶ್ಯರನ್ನು ಪ್ರತ್ಯೇಕವಾಗಿ ಪ್ರತಿನಿಧಿಸುವ ಅವಕಾಶವನ್ನು ಕಲ್ಪಿಸಲಾಗಿತ್ತು. ಈ ಸಮಾವೇಶದಲ್ಲಿ ಭಾಗವಹಿಸಲು ಆ ಸಂದರ್ಭದಲ್ಲಿ ಬಂಧಿತರಾಗಿದ್ದ ಗಾಂಧೀಜಿ ಮತ್ತು ಹಲವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಾಯಕರನ್ನು ಬಿಡುಗಡೆಗೊಳಿಸಲಾಯಿತು. ಆದರೆ ಕಾಂಗ್ರೆಸ್ ಮತ್ತು ಗಾಂಧೀಜಿಯವರು ಈ ಸಮಾವೇಶದಲ್ಲಿ ಭಾಗವಹಿಸಲು ನಿರಾಕರಿಸಿದರು. ಈ ಸಮಾವೇಶದಲ್ಲಿ ದೇಶೀಯ ಸಂಸ್ಥಾನದ ಪ್ರತಿನಿಧಿಗಳು, ವಿವಿಧ ಸಮುದಾಯದ ಮುಖಂಡರುಗಳಾಗಿದ್ದ ಡಾ. ಬಿ.ಆರ್.ಅಂಬೇಡ್ಕರ್, ಎಂ.ಆರ್. ಜಯಕರ್, ತೇಜಬಹದ್ದೂರ್ ಸಪ್ರು, ಮಹಮದ್ ಅಲಿ ಜಿನ್ನಾ, ಶ್ರೀನಿವಾಸ ಶಾಸ್ತ್ರಿ ಮೊದಲಾದವರು ಭಾಗವಹಿಸಿದ್ದರು. ಡೊಮಿನಿಯನ್ ಸ್ಟೇಟಸ್. ಜವಾಬ್ದಾರಿಯುತ ಸರ್ಕಾರ ಮತ್ತು ಮತೀಯ ಪ್ರಾತಿನಿಧ್ಯಗಳನ್ನು ಕುರಿತಂತೆ ಈ ಸಮಾವೇಶದಲ್ಲಿ ಸಮ್ಮತಿಸಲಾಯಿತು. ಆದರೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮೊದಲನೆಯ ದುಂಡು ಮೇಜಿನ ಪರಿಷತ್ತಿನ ಸಮಾವೇಶದಲ್ಲಿ ಭಾಗವಹಿಸದ ಹಿನ್ನೆಲೆಯಲ್ಲಿ ಸಮಾವೇಶವು ಪೂರ್ಣಗೊಳ್ಳಲಿಲ್ಲ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮನವೊಲಿಸಿ ದುಂಡು ಮೇಜಿನ ಸಮಾವೇಶದ ಉದ್ದೇಶವನ್ನು ಯಶಸ್ವಿಗೊಳಿಸುವ ದೃಷ್ಟಿಯಿಂದ ಗಾಂಧಿ ಮತ್ತು ವೈಸರಾಯ್ ಇರ್ವಿನ್ ನಡುವೆ ಒಪ್ಪಂದವೊಂದು ಮಾರ್ಚ್ 1931ರಲ್ಲಿ ಜರುಗಿತು. ಇದನ್ನು ಗಾಂಧೀ–ಇರ್ವಿನ್ ಒಪ್ಪಂದ ಎಂದು ಕರೆಯುತ್ತಾರೆ. ಪರಿಣಾಮವಾಗಿ ಕಾಂಗ್ರೆಸ್ ಪಕ್ಷವು ಸವಿನಯ ಕಾನೂನು ಭಂಗ ಚಳುವಳಿಯನ್ನು ನಿಲ್ಲಿಸಿ ಎರಡನೆಯ ದುಂಡುಮೇಜಿನ ಪರಿಷತ್ತಿನ ಸಮಾವೇಶದಲ್ಲಿ ಭಾಗವಹಿಸಲು ನಿರ್ಧರಿಸಿತು. ಮಹಮದ್ ಅಲಿ ಜಿನ್ನ ಮತ್ತು ಡಾ.ಬಿ.ಆರ್. ಅಂಬೇಡ್ಕರ್‌ರವರು ಈ ಸಭೆಯಲ್ಲಿ ಭಾಗವಹಿಸಿದ್ದರು.

ಎರಡನೆಯ ದುಂಡು ಮೇಜಿನ ಸಮಾವೇಶದಲ್ಲಿ ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವ ಪ್ರಸ್ತಾಪ ಮುಂದಿಟ್ಟರು. ಈ ಪ್ರಸ್ತಾಪವನ್ನು ಗಾಂಧೀಜಿಯವರು ಒಪ್ಪಲಿಲ್ಲ. ಇದರಿಂದ ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ನಡುವೆ ತಾತ್ವಿಕ ಭಿನ್ನಾಭಿಪ್ರಾಯ ಉಂಟಾಯಿತು. ಹೀಗಾಗಿ ಎರಡನೆಯ ದುಂಡು ಮೇಜಿನ ಪರಿಷತ್ತು ಸಮಾವೇಶ ಕೂಡ ಯಾವುದೇ ತೀರ್ಮಾನವಿಲ್ಲದೆ ಮುಕ್ತಾಯಗೊಂಡಿತು. ಆದರೆ ಬ್ರಿಟಿಷ್ ಸರ್ಕಾರವು ಅಸ್ಪೃಶ್ಯರನ್ನು ಪ್ರತ್ಯೇಕ ಮತಕ್ಷೇತ್ರವಾಗಿ ಪರಿಗಣಿಸುವುದಾಗಿ ಘೋಷಿಸಿತು. ಇದನ್ನು ವಿರೋಧಿಸಿ ಮಹಾತ್ಮ ಗಾಂಧೀಜಿಯವರು ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಈ ಸಮಯದಲ್ಲಿ ಅಂಬೇಡ್ಕರ್ ಅವರ ಮನವೊಲಿಸುವ ಪ್ರಯತ್ನಗಳು ನಡೆದವು.

ಇದರ ಫಲವಾಗಿ ಪೂನಾ ಒಪ್ಪಂದವಾಯಿತು. ಇದರ ಪ್ರಕಾರ ಪ್ರತ್ಯೇಕ ಮತಕ್ಷೇತ್ರದ ಬದಲಾಗಿ ಸಾಮಾನ್ಯ ಮತಕ್ಷೇತ್ರಗಳಲ್ಲಿಯೇ ಕೆಲವು ಕ್ಷೇತ್ರಗಳನ್ನು ಅಸ್ಪೃಶ್ಯರಿಗೆ ಮೀಸಲಿಡಲಾಯಿತು. ಅಂತಹ ಕಡೆಗಳಲ್ಲಿ ಅಸ್ಪೃಶ್ಯ ಪ್ರತಿನಿಧಿ ಎಲ್ಲಾ ಜನರ ಪ್ರತಿನಿಧಿಯಾಗಿರುತ್ತಿದ್ದರು. ಪ್ರತ್ಯೇಕ ಮತಕ್ಷೇತ್ರಕ್ಕೆ ಬದಲಾಗಿ ಕೆಲವು ಕ್ಷೇತ್ರಗಳು ಅಸ್ಪೃಶ್ಯರಿಗಾಗಿ ಕಾದಿರಿಸಲ್ಪಟ್ಟವು.


ಬ್ರಿಟಿಷ್ ಸರ್ಕಾರವು ಕೇಂದ್ರದಲ್ಲಿ ಒಕ್ಕೂಟ ಸ್ವರೂಪದ ಸರ್ಕಾರ, ರಾಜ್ಯಗಳಲ್ಲಿ ಪ್ರಾಂತೀಯ ಸರ್ಕಾರವನ್ನು ರಚಿಸಲು ಸೂಚಿಸಿತು. ಈ ಹಿನ್ನೆಲೆಯಲ್ಲಿ ಮೂರನೆಯ ದುಂಡು ಮೇಜಿನ ಪರಿಷತ್ತಿನ ಸಮಾವೇಶವನ್ನು 1932ರಲ್ಲಿ ಕರೆಯಿತು. ಸರ್ಕಾರವು ಪ್ರಸ್ತಾಪಿಸಿದ ವ್ಯವಸ್ಥೆಯನ್ನು ಧಿಕ್ಕರಿಸಿ ಕಾಂಗ್ರೆಸ್ ಸಮಾವೇಶದಲ್ಲಿ ಭಾಗವಹಿಸಲಿಲ್ಲ. ದುಂಡು ಮೇಜಿನ ಪರಿಷತ್ತುಗಳ ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು 1935ರ ಭಾರತ ಸರ್ಕಾರ ಶಾಸನವನ್ನು ಜಾರಿಗೊಳಿಸಿತು. ಈ ಶಾಸನವು ಭಾರತ ಒಕ್ಕೂಟ ರಚನೆ ಮತ್ತು ಪ್ರಾಂತೀಯ ಸ್ವಾಯತ್ತತೆಯ ಅವಕಾಶಗಳನ್ನು ಕಲ್ಪಿಸಿತ್ತು. ಭಾರತೀಯರಿಗೆ ರಾಜಕೀಯ ಹಕ್ಕುಗಳು ದೊರೆತವು. ಇದರಿಂದಾಗಿ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಚುನಾವಣೆಯಲ್ಲಿ ಸ್ಪರ್ಧಿಸಿದವು. ಕಾಂಗ್ರೆಸ್ ಬಹುಮತ ಪಡೆದು ಒಕ್ಕೂಟ ಸರ್ಕಾರವನ್ನು ರಚಿಸಿತು. ಈ ವೇಳೆಗೆ ಎರಡನೆಯ ಮಹಾಯುದ್ಧ ಆರಂಭಗೊಂಡಾಗ ಯುರೋಪಿನ ರಾಜಕೀಯ ವಿದ್ಯಮಾನಗಳ ಭಾಗವಾಗಿ ಭಾರತದ ವೈಸ್‌ರಾಯ್ ಏಕಪಕ್ಷೀಯವಾಗಿ ಭಾರತದ ಪರವಾಗಿ ಜರ್ಮನಿಯ ವಿರುದ್ಧ ಯುದ್ಧ ಘೋಷಿಸಿದನು. ಇದನ್ನು ಕಾಂಗ್ರೆಸ್ ಪ್ರತಿಭಟಿಸಿ ಮಂತ್ರಿ ಮಂಡಲದಿಂದ ಹೊರಬಂದಿತು. ವೈಸ್‌ರಾಯನ ತೀರ್ಮಾನವನ್ನು ವಿರೋಧಿಸಿ ಗಾಂಧೀಜಿ ವೈಯಕ್ತಿಕ ಸತ್ಯಾಗ್ರಹ ಸಾರಿದರು. ಆಗ ಭಾರತೀಯರನ್ನು ತೃಪ್ತಿ ಪಡಿಸಲು ಸ್ಟಾಫರ್ಡ್ ಕ್ರಿಪ್ಸ್ ಅವರನ್ನು ಸಂಧಾನಕ್ಕಾಗಿ ಕಳುಹಿಸಲಾಯಿತು.

ಕ್ವಿಟ್ ಇಂಡಿಯಾ ಚಳುವಳಿ (1942)

ಬ್ರಿಟಿಷ್ ಸರ್ಕಾರವು ಭಾರತೀಯ ನಾಯಕರೊಂದಿಗೆ ಸಂಧಾನಕ್ಕಾಗಿ ಕಳುಹಿಸಿದ್ದ ಸ್ಟಾಫರ್ಡ್ ಕ್ರಿಪ್ಸ್ ಆಯೋಗವು 1942ರಲ್ಲಿ ಕೆಲವು ಸಲಹೆಗಳನ್ನು ಭಾರತೀಯರ ಮುಂದಿಟ್ಟಿತು. ಈ ಆಯೋಗವು ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ನೀಡುವುದು, ಅದಕ್ಕಾಗಿ ಸಂವಿಧಾನ ರಚಿಸಲು ಸಭೆ ಕರೆಯುವುದು, ಹೊಸ ಸಂವಿಧಾನದಲ್ಲಿ ಭಾರತ ಒಕ್ಕೂಟವನ್ನು ಸೇರುವ ಅಥವಾ ಬಿಡುವ ಸ್ವಾತಂತ್ರ್ಯವನ್ನು ಸಂಬಂಧಿಸಿದ ರಾಜ್ಯಗಳಿಗೆ ಬಿಡುವಂತಹ ಸಲಹೆಗಳನ್ನು ನೀಡಿತು. ಈ ಸಲಹೆಗಳನ್ನು ಕಾಂಗ್ರೆಸ್ ಒಪ್ಪದೆ ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ನೀಡಿತು. 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎನ್ನುವುದು ಕ್ವಿಟ್ ಇಂಡಿಯಾ ಚಳುವಳಿಯ ಆಶಯವಾಗಿತ್ತು.


ಕ್ವಿಟ್ ಇಂಡಿಯಾ ಚಳುವಳಿ

ಗಾಂಧೀಜಿಯವರು ದೇಶಬಾಂಧವರಿಗೆ 'ಮಾಡು ಇಲ್ಲವೇ ಮಡಿ' ಎನ್ನುವ ಕರೆ ನೀಡಿದರು. ಈ ಕರೆ ನೀಡಿದ ಹಿನ್ನೆಲೆಯಲ್ಲಿ ಗಾಂಧೀಜಿ, ನೆಹರು, ರಾಜೇಂದ್ರಪ್ರಸಾದ್, ಅಬುಲ್ ಕಲಾಂ ಅಜಾದ್, ಸರ್ದಾರ್ ವಲ್ಲಭ ಭಾಯಿ ಪಟೇಲ್, ಆಚಾರ್ಯ ಕೃಪಲಾನಿ, ಕಸ್ತೂರಬಾ ಗಾಂಧಿ ಮೊದಲಾದ ನಾಯಕರನ್ನು ಬ್ರಿಟಿಷ್ ಸರ್ಕಾರವು ಬಂಧಿಸಿ ಜೈಲಿನಲ್ಲಿಟ್ಟಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಹುತೇಕ ನಾಯಕರು ಬಂಧನದಲ್ಲಿದ್ದ ಕಾರಣ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು. ಹೊಸನಾಯಕರುಗಳ ಉದಯಕ್ಕೆ ಈ ಹೋರಾಟವು ಎಡೆ ಮಾಡಿಕೊಟ್ಟಿತು. ಈ ಸಂದರ್ಭದಲ್ಲಿ ಚಳುವಳಿಯ ನೇತೃತ್ವವನ್ನು ಜಯಪ್ರಕಾಶ್ ನಾರಾಯಣರವರು ವಹಿಸಿಕೊಂಡರು. ಇವರು ಕಾಂಗ್ರೆಸ್‌ನ ಸಮಾಜವಾದಿ ಬಣದ ಪ್ರಮುಖ ನಾಯಕರಾಗಿದ್ದರು. ಇವರು ತಮ್ಮ ಬೆಂಬಲಿಗರೊಡನೆ ದೇಶದ ವಿವಿಧೆಡೆಯಲ್ಲಿ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ತೊಡಗಿದರು. ಸಮಾಜವಾದಿಗಳು 'ದಿ ಫ್ರೀಡಂ ಸ್ಟ್ರಗಲ್ ಫ್ರಾಂಟ್' ಎಂಬ ದಾಖಲೆ (Document) ಮೂಲಕ ತಮ್ಮ ಕಾರ್ಯತಂತ್ರವನ್ನು ಅನುಷ್ಠಾನಕ್ಕೆ ತಂದರು. ಈ ಮೂಲಕ ಅವರು ಕಾರ್ಮಿಕರಿಗೆ ತರಬೇತಿಯನ್ನು ನೀಡಿದರು. ಜನತೆಗೆ ಹೋರಾಟದಲ್ಲಿ ಭಾಗವಹಿಸಲು ಕರೆಯನ್ನಿತ್ತರು. ಹಣವನ್ನು ಕ್ರೋಢೀಕರಿಸಿದರು. ಈ ಮೂಲಕವಾಗಿ ದಿಕ್ಕೆಟ್ಟ ಹೋರಾಟಕ್ಕೆ ದಿಕ್ಕು ಕೊಟ್ಟವರು ಇವರೇ. ಕುತೂಹಲದ ಸಂಗತಿಯೆಂದರೆ ಇದೇ ಸಂದರ್ಭದಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವು ಭಾರತದ ಗಡಿಯ ಹೊರಗೂ ಪ್ರಾರಂಭವಾಯಿತು. ಈ ದಿಸೆಯಲ್ಲಿ ಸುಭಾಷ್ ಚಂದ್ರ ಬೋಸರವರ ಪ್ರಯತ್ನ ಅದ್ವಿತೀಯವಾದದ್ದು. 1937ರ ಚುನಾವಣೆಗಳ ನಂತರ ಸರ್ಕಾರದ ಪಾಲ್ಗೊಳ್ಳುವಿಕೆಯಲ್ಲಿ ಮುಸ್ಲಿಂ ಲೀಗನ್ನು ಸರ್ಕಾರ ರಚನೆಯಿಂದ ಕೈಬಿಡಲಾಗಿತ್ತು. 1939ರಲ್ಲಿ ಭಾರತ ಸರ್ಕಾರವು ಏಕಮುಖವಾಗಿ ಎರಡನೆಯ ಮಹಾಯುದ್ಧಕ್ಕೆ ಭಾರತವನ್ನು ಭಾಗಿ ಮಾಡಿದ ಸಂದರ್ಭದಲ್ಲಿ ಮಂತ್ರಿಮಂಡಲದಲ್ಲಿದ್ದ ಕಾಂಗ್ರೆಸಿಗರೆಲ್ಲರು ಹೊರಬಂದಾಗ ಮುಸ್ಲಿಂ ಲೀಗ್ 'ವಿಮುಕ್ತಿ ದಿವಸ'ವನ್ನು ಆಚರಿಸಿತು. ಹೀಗಾಗಿ ಮುಸ್ಲಿಂ ಲೀಗ್ ಭಾರತ ಬಿಟ್ಟು ತೊಲಗಿ ಆಂದೋಲನದಲ್ಲಿ ಭಾಗವಹಿಸಲಿಲ್ಲ. ಅದು ಭಾರತದ ವಿಭಜನೆಯ ಪ್ರಸ್ತಾಪವನ್ನು ಮುಂದಿಟ್ಟಿತು.



ವಲ್ಲಭ ಭಾಯಿ ಪಟೇಲ್



ಮೌಲಾನ ಅಬುಲ್ ಕಲಾಂ ಅಜಾದ್

> ***ಚರ್ಚಿಸಿ :***
>
> *ದೇಶದ ಜನರೇ ಹೆಚ್ಚಿನದಾಗಿ ಸ್ವಇಚ್ಛೆಯಿಂದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದರು.*

> ***ನಿಮಗಿದು ತಿಳಿದಿರಲಿ :***
>
> ***ಈಸೂರು ಘಟನೆ :*** *ಮೈಸೂರು ಸಂಸ್ಥಾನದ ಶಿಕಾರಿಪುರದ ಹತ್ತಿರದ ಒಂದು ಹಳ್ಳಿ ಈಸೂರು. ಸ್ವಾತಂತ್ರ್ಯ ಚಳುವಳಿಯಲ್ಲಿ ಸ್ಥಾನವನ್ನು ಪಡೆದಿರುವ ಈ ಹಳ್ಳಿಗೆ 'ಸ್ವತಂತ್ರ ಹಳ್ಳಿ' ಎಂಬ ಹೆಸರನ್ನೂ ಇಡಲಾಯಿತು. ಇಲ್ಲಿ ಎಲ್ಲರೂ ಗಾಂಧಿ ಟೋಪಿ ಧರಿಸುತ್ತಿದ್ದರು. ಅಧಿಕಾರಿಗಳಿಗೆ ಹಳ್ಳಿಯ ಪ್ರವೇಶಕ್ಕೆ ನಿಷೇಧ ಇತ್ತು. ಆದರೆ 1942ರಲ್ಲಿ ಭೇಟಿ ನೀಡಿದ ಅಧಿಕಾರಿಗಳಿಗೆ ಗಾಂಧಿ ಟೋಪಿ ಧರಿಸಲು ಹಳ್ಳಿಗರು ಒತ್ತಾಯಿಸಿದರು. ಇದನ್ನು ವಿರೋಧಿಸಿದ ಅಧಿಕಾರಿಗಳ ಜೊತೆಯಲ್ಲಿದ್ದ ಪೋಲೀಸನು ಜನರತ್ತ ಗುಂಡು ಹಾರಿಸಿದನು. ಇದರಿಂದ ರೊಚ್ಚಿಗೆದ್ದ ಜನರು ಅವರುಗಳನ್ನು ಹತ್ಯೆ ಮಾಡಿದರು. ಇದನ್ನು ಚರಿತ್ರೆಯಲ್ಲಿ ಈಸೂರು ಘಟನೆ ಎಂದು ಕರೆಯುತ್ತಾರೆ.*

ರೈತರು ಮತ್ತು ಕಾರ್ಮಿಕರ ಪ್ರತಿಭಟನೆ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತ ಕಾರ್ಮಿಕ ಸಂಘಟನೆಗಳ ಪ್ರತಿಭಟನೆಗಳು ಕೂಡಾ ಪ್ರಮುಖವಾಗಿವೆ. ಈ ಸಂಘಟನೆಗಳಲ್ಲಿ ಕೆಲವು ರಾಷ್ಟ್ರೀಯ ಕಾಂಗ್ರೆಸ್‌ನಿಂದ ಪ್ರಭಾವಿತವಾಗಿದ್ದರೆ, ಇನ್ನು ಕೆಲವು ಸಂಘಟನೆಗಳು ಮಾರ್ಕ್ಸ್‌ವಾದದಿಂದ ಪ್ರಭಾವಿತವಾಗಿದ್ದವು. ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಜಮೀನ್ದಾರರು ಮತ್ತು ಯುರೋಪಿಯನ್ ಪ್ಲಾಂಟರ್‌ಗಳ ವಿರುದ್ಧ ರೈತರು ಹಲವಾರು ಕಡೆ ದಂಗೆ ನಡೆಸಿದರು. ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು. ಭೂಕಂದಾಯದ ವಿರುದ್ಧ ಹರತಾಳ ನಡೆಸಿದರು. ಗಾಂಧೀಜಿಯವರು ಸತ್ಯಾಗ್ರಹದ ಮೂಲಕ ಬ್ರಿಟಿಷ್ ಅಧಿಕಾರಿಗಳ ಮನವೊಲಿಸಿ ತೆರಿಗೆ ರದ್ದುಗೊಳಿಸಿದರು.

ರಾಷ್ಟ್ರೀಯ ಹೋರಾಟದ ಭಾಗವಾಗಿ ರೈತರನ್ನು ಸಂಘಟಿಸುವ ಪ್ರಯತ್ನವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮಾಡಿತು. ಚಂಪಾರಣ್ಯ, ಖೇಡಾ, ಮೊದಲಾದ ಪ್ರದೇಶಗಳ ರೈತರ ಕಾರ್ಯ ಚಟುವಟಿಕೆಗಳಲ್ಲಿ ಗಾಂಧೀಜಿಯವರ ಪ್ರಭಾವವಿತ್ತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪ್ರಭಾವದಿಂದ ತೇಭಾಗ, ಮಲಬಾರ್ ಮೊದಲಾದೆಡೆ ಶೋಷಣೆಗೊಳಗಾಗಿದ್ದ ರೈತರು ತೀವ್ರವಾಗಿ ಜಮೀನ್ದಾರರು ಹಾಗೂ ಬ್ರಿಟಿಷರ ವಿರುದ್ಧ ಬಂಡೆದ್ದರು. ಅಸಹಕಾರ ಆಂದೋಲನ, ಕರ ನಿರಾಕರಣೆ, ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ರೈತರ ಸಮಸ್ಯೆಗಳು ಬೆರೆತವು. ಹಲವಾರು ಹೋರಾಟಗಳು ಎಡಪಂಥೀಯ ವಿಚಾರಧಾರೆಗಳಿಂದ ರಚನೆಗೊಂಡ ಕಿಸಾನ್ ಸಭಾದಡಿಯಲ್ಲಿ ಸಂಘಟಿತವಾದವು. ಹೋರಾಟಗಳು ಕೆಲವೊಮ್ಮೆ ಕಾಂಗ್ರೆಸ್‌ನೊಂದಿಗೆ ಮತ್ತು ಕೆಲವೊಮ್ಮೆ ಕಾಂಗ್ರೆಸ್ ವಿರುದ್ಧವಾದ ನಿಲುವನ್ನು ಹೊಂದುತ್ತಿದ್ದವು. ತೆಲಂಗಾಣದ ರೈತ ಹೋರಾಟವು ಜಮೀನ್ದಾರರು ಹಾಗೂ ನಿಜಾಮನ ರಜಾಕರ ವಿರುದ್ಧ ಪ್ರತಿಭಟಿಸಿತು. ಬಂಗಾಳದ ರೈತರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆ ಎದ್ದರು. ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳುವಳಿ ನಡೆಸಿದರು.

ಕಾರ್ಮಿಕ ಬಂಡಾಯ

ಕಾರ್ಮಿಕರ ಹೋರಾಟವು 1827ರಲ್ಲಿ ಕಲ್ಕತ್ತದಲ್ಲಿ ಆರಂಭವಾಯಿತು. ಸೆಣಬು, ಬಟ್ಟೆಗಿರಣಿ ಕಾರ್ಮಿಕರು, ರೈಲ್ವೆ ಕೂಲಿಗಳು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾಗತೊಡಗಿದರು. ರೈಲ್ವೆ ಕೂಲಿಗಳು ನಿಲ್ದಾಣದಲ್ಲಿ ಮುಷ್ಕರ ನಡೆಸಿ ಹೆಚ್ಚಿನ ಕೂಲಿಗಾಗಿ ಬ್ರಿಟಿಷ್ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು. ಕಲ್ಕತ್ತದಲ್ಲಿ ಪ್ರಿಂಟರ್ಸ್ ಯೂನಿಯನ್‌ನವರು ಮತ್ತು ಬಾಂಬೆ ಬಟ್ಟೆ ಗಿರಣಿಯ ಕಾರ್ಮಿಕರು ರಾಷ್ಟ್ರೀಯ ಜಾಗೃತಿ ಉಂಟು ಮಾಡಿದರು. ಮದ್ರಾಸ್‌ನಲ್ಲಿ ಲೇಬರ್ ಯೂನಿಯನ್ ಸ್ಥಾಪನೆಗೊಂಡಿತು. ನಂತರದಲ್ಲಿ ಕಾರ್ಮಿಕ ಸಂಘಟನೆಗಳು ಸ್ಥಾಪನೆಗೊಂಡವು. ಕಾಂಗ್ರೆಸ್, ಕಾರ್ಮಿಕ ಸಂಘಟನೆಗಳ ಇಂತಹ ಚಳುವಳಿಗೆ ಬೆಂಬಲ ನೀಡಿತು.

ಬುಡಕಟ್ಟು ಬಂಡಾಯಗಳು

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿ ಜಾರಿಗೆ ತಂದ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ದಂಗೆಗೆ ನೇರವಾಗಿ ಪ್ರೇರಣೆಯಾದವು. ಬುಡಕಟ್ಟು ಬಂಡಾಯಗಳಲ್ಲಿ ಸಂತಾಲರ ದಂಗೆ, ಮುಂಡ ಚಳುವಳಿ ಪ್ರಮುಖವಾಗಿವೆ. ಕರ್ನಾಟಕದಲ್ಲಿ ಹಲಗಲಿಯ ಬೇಡರ ಬಂಡಾಯವು ಈ ನಿಟ್ಟಿನಲ್ಲಿ ಗಮನಾರ್ಹವಾಗಿದೆ.

ಸಂತಾಲ ಬುಡಕಟ್ಟು ದಂಗೆಯನ್ನು ಭಾರತದ ಆದ್ಯ ಹೋರಾಟ ಎಂದು ಗುರುತಿಸಲಾಗಿದೆ. ಈ ಬುಡಕಟ್ಟು ಜನರನ್ನು ಬಂಗಾಳಿ ಮತ್ತು ಒರಿಸ್ಸಾದ ಗುಡ್ಡಗಾಡು ಪ್ರದೇಶಗಳಲ್ಲಿ ಗುರುತಿಸಬಹುದು. ಬ್ರಿಟಿಷರು ಜಾರಿಗೆ ತಂದ ಖಾಯಂ ಜಮೀನ್ದಾರಿ ಪದ್ಧತಿಯಿಂದ ಈ ಬುಡಕಟ್ಟು ಜನರು ನಿರ್ಗತಿಕರಾದರು. ಬುಡಕಟ್ಟು ಜನರ ಭೂಮಿಯು ಜಮೀನ್ದಾರರ ಕೈಸೇರಿತು. ಬಂಗಾಳಿ ಜಮೀನ್ದಾರರು, ಲೇವಾದೇವಿಗಾರರು ಮತ್ತು ಕಂಪನಿ ಸರ್ಕಾರವು ಸಂತಾಲರ ನೇರ ಶೋಷಣೆಗೆ ಕಾರಣರಾದರು. ಸಂತಾಲರ ಶಾಂತಿ ಪ್ರಿಯತೆ ಮತ್ತು ಸಭ್ಯತೆಯನ್ನು ಕಂಪನಿ ಸರ್ಕಾರವು ಶೋಷಣೆಗೆ ಉಪಯೋಗಿಸಿಕೊಂಡಿತು. ಇದರಿಂದ ಅಸಮಾಧಾನಗೊಂಡ ಸಂತಾಲರು ರಹಸ್ಯ ಸಭೆಗಳನ್ನು ನಡೆಸಿ ಜಮೀನ್ದಾರರು ಮತ್ತು ಮಹಾಜನರನ್ನು ಲೂಟಿ ಮಾಡಲು ನಿರ್ಧರಿಸಿದರು. ದಂಗೆಯು ಬಾರಹತ್, ಬಾಗತಪುರ್ ಮತ್ತು ರಾಜಮಹಲ್‌ಗಳಲ್ಲಿ ತೀವ್ರವಾಯಿತು. ಪರಿಣಾಮವಾಗಿ ಬುಡಕಟ್ಟು ಜನರು ಅವರ ಶತ್ರುಗಳನ್ನು ಹತ್ಯೆ ಮಾಡಿದರು. ಇದರಿಂದಾಗಿ ಜಮೀನ್ದಾರರು, ಲೇವಾದೇವಿದಾರರು ಪಲಾಯನ ಮಾಡಿದರು. ಸಂತಾಲರ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರು ಸೈನ್ಯವನ್ನು ಬಳಸಿಕೊಂಡರು. ಸಂತಾಲರ ದಂಗೆಯು ಕೊನೆಗೊಂಡರೂ ಅದರ ಸ್ಫೂರ್ತಿಯು ಮುಂದಿನ ಅನೇಕ ಹೋರಾಟಗಳಿಗೆ ಪ್ರೇರಣೆಯಾಯಿತು.

ಸುಭಾಷ್ ಚಂದ್ರ ಬೋಸ್



ಸುಭಾಷ್ ಚಂದ್ರ ಬೋಸ್

ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಪಾತ್ರವು ಒಂದು ದಿಟ್ಟ ಮೈಲಿಗಲ್ಲು. ಭಾರತೀಯ ನಾಗರಿಕ ಸೇವಾ ಪರೀಕ್ಷೆಯಲ್ಲಿ (ICS) ನಾಲ್ಕನೇ ರ್‍ಯಾಂಕ್ ಗಳಿಸಿದ್ದರೂ, ದೇಶಾಭಿಮಾನದಿಂದಾಗಿ ಬ್ರಿಟಿಷ್ ಸರ್ಕಾರದ ಪ್ರತಿಷ್ಠಿತ ಹುದ್ದೆಯನ್ನು ತ್ಯಜಿಸಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಇವರು 'ನೇತಾಜಿ' ಎಂದು ಜನಪ್ರಿಯರಾದರು.

ಗಾಂಧೀಜಿಯವರ ಸೌಮ್ಯ ಹೋರಾಟಕ್ಕೆ ಪರ್ಯಾಯವಾಗಿ 30ರ ದಶಕದ ಪ್ರಾರಂಭದಲ್ಲಿ ವಿದೇಶದಲ್ಲಿ ನೆಲೆಗೊಂಡ ಭಾರತೀಯರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಡುವ ಪ್ರಯತ್ನದಲ್ಲಿದ್ದರು. ಇವರು ವಿವಿಧ ದೇಶಗಳ ನಗರಗಳಾದ ವಿಯನ್ನಾ, ಬರ್ಲಿನ್, ರೋಮ್, ಇಸ್ತಾಂಬುಲ್ ಮುಂತಾದ ಕಡೆಗಳಲ್ಲಿ ಪ್ರವಾಸ ಬೆಳೆಸಿ ತಾಯ್ನಾಡಿಗೆ ತಮ್ಮ ಬೆಂಬಲವನ್ನು ನೀಡಲು ಪ್ರೇರೇಪಿಸಿದರು. ಯುರೋಪಿನಲ್ಲಿ ಉದಯಿಸಿದ ಕಮ್ಯೂನಿಸ್ಟ್ ಮತ್ತು ಸಮಾಜವಾದಿ ಅಲೆಯು ಭಾರತದಲ್ಲಿ ಕಾಂಗ್ರೆಸ್ ಸಂಘಟನೆಯನ್ನೂ ಕೂಡಾ ಬದಲಾವಣೆಗೆ ಒಳಪಡಿಸಿತು. ಕಾಂಗ್ರೆಸ್‌ನ ಒಳಗೂ ಸಹ ಸ್ಪಷ್ಟವಾಗಿ ಸಮಾಜವಾದಿ ಎಡಪಂಥೀಯತೆ ಗೋಚರಿಸತೊಡಗಿತು. ಈ ಹಿನ್ನೆಲೆಯಲ್ಲಿ ಭಾರತದಲ್ಲಿ 1934ರ ವೇಳೆಗೆ ಜವಾಹರಲಾಲ್ ನೆಹರು ಮತ್ತು ಸುಭಾಷ್‌ಚಂದ್ರಬೋಸರು ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು.

> **ನಿಮಗಿದು ತಿಳಿದಿರಲಿ :**
>
> *"ಜರ್ಮನ್ನರು ಬರುವ ಮೊದಲೇ ಭಾರತ ಬಿಡುಗಡೆಗೊಳ್ಳಬೇಕು.... ಯುರೋಪಿನಲ್ಲಿ ಇಂಗ್ಲೆಂಡ್ ಪಡೆದುಕೊಂಡ ಪ್ರತಿ ಹೊಡೆತದೊಂದಿಗೆ ಭಾರತದ ಮೇಲಿನ ಬ್ರಿಟಿಷ್ ಸಾಮ್ರಾಜ್ಯಶಾಹಿ ಹಿಡಿತವು ಖಂಡಿತವಾಗಿಯೂ ಕುಗ್ಗುತ್ತದೆ.*
>
> ***ಸುಭಾಷ್ ಚಂದ್ರ ಬೋಸ್***

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದಲ್ಲಿ ಗಾಂಧೀಜಿ ಬೆಂಬಲದೊಂದಿಗೆ ಬೋಸರು ಅಧ್ಯಕ್ಷರಾದರು. ಬ್ರಿಟಿಷರ ಯುದ್ಧ ನೀತಿ ತಯಾರಿಗೆ

ಸಂಬಂಧಿಸಿದಂತೆ ಮೃದು ದೋರಣೆಯನ್ನು ಹೊಂದಿದ್ದ ಗಾಂಧೀಜಿ ಮತ್ತು ಬ್ರಿಟಿಷರ ವಿರುದ್ಧ ಕಠಿಣ ದೋರಣೆ ಹೊಂದಿದ್ದ ಸುಭಾಷರ ನಡುವೆ ಬಾಂಧವ್ಯದಲ್ಲಿ ಬಿರುಕು ಮೂಡಿತು. ಗಾಂಧೀಜಿಯವರು ಅಂತರರಾಷ್ಟ್ರೀಯ ನೆರವನ್ನು ಈ ಸಂದರ್ಭದಲ್ಲಿ ಕೋರದೇ ಇದ್ದದ್ದನ್ನು ಆಕ್ಷೇಪಿಸಿದರು. 1938ರ ಕಾಂಗ್ರೆಸ್‌ನ ತ್ರಿಪುರ ಅಧಿವೇಶನದಲ್ಲಿ ಸುಭಾಷ್ ಚಂದ್ರಬೋಸರು ಗಾಂಧೀಜಿಯವರ ವಿರೋಧದ ನಡುವೆಯೂ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಆಯ್ಕೆಗೊಂಡರು. ನಂತರದ ದಿನಗಳಲ್ಲಿ ಗಾಂಧೀಜಿ ಮತ್ತು ಬೋಸರ ಭಿನ್ನಾಭಿಪ್ರಾಯಗಳು ತೀವ್ರಗೊಂಡವು. ಕಾಂಗ್ರೆಸ್‌ನ ಒಳಗಿದ್ದು ಬ್ರಿಟಿಷರನ್ನು ತೀವ್ರವಾಗಿ ಹಿಮ್ಮೆಟ್ಟಿಸ ಬೇಕೆನ್ನುವ ಸುಭಾಷ್ ಚಂದ್ರ ಬೋಸ್‌ರವರ ಕಾರ್ಯ ಚಟುವಟಿಕೆಗೆ ಹಿನ್ನಡೆಯುಂಟಾಯಿತು. ಸುಭಾಷ್ ಚಂದ್ರ ಬೋಸರು ಕಾಂಗ್ರೆಸ್‌ನ ಚಟುವಟಿಕೆಗಳು ಮತ್ತು ಗಾಂಧೀಜಿಯವರ ಕಾರ್ಯವಿಧಾನದಿಂದ ಬೇಸರಗೊಂಡು ಕಾಂಗ್ರೆಸ್‌ನಿಂದ ಹೊರಬಂದು 'ಫಾರ್ವರ್ಡ್ ಬ್ಲಾಕ್' ಎಂಬ ಹೊಸ ಪಕ್ಷವನ್ನು ಕಟ್ಟಿದರು. ಇದು ಕಾಂಗ್ರೆಸ್‌ನ ಒಳಗೆ ಇದ್ದು, ಪ್ರಗತಿಪರ ಮತ್ತು ತೀವ್ರತರ ಆಶಯಗಳನ್ನು ಹೊಂದಿತ್ತು. ಬ್ರಿಟಿಷರ ಯುದ್ಧ ತಯಾರಿಯನ್ನು ಹಾಗೂ ಜಾಗತಿಕ ಯುದ್ಧದಲ್ಲಿ ಭಾರತದ ಪಾಲ್ಗೊಳುವಿಕೆಯನ್ನು ಸುಭಾಷರು ವಿರೋಧಿಸಿದರು. ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು ಸುಭಾಷ್ ಚಂದ್ರಬೋಸರವರನ್ನು ಬಂಧಿಸಿತು.

ಬ್ರಿಟಿಷ್ ವಿರೋಧಿ ಶಕ್ತಿಗಳೊಡಗೂಡಿ ಬ್ರಿಟಿಷರ ವಿರುದ್ಧ ಹೋರಾಡಲು ಬಯಸಿ ಅವರು ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು. ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಇವರಿಗೆ ಎಲ್ಲಾ ಸಹಾಯವನ್ನು ನೀಡುವ ಭರವಸೆಯನ್ನು ವ್ಯಕ್ತಪಡಿಸಿದನು. ಬೋಸರು ಜರ್ಮನಿಯಲ್ಲಿ ಭಾರತೀಯ ಯುದ್ಧ ಕೈದಿಗಳನ್ನು ಸಂಘಟಿಸಿದರು. 'ಅಜಾದ್ ಹಿಂದ್ ರೇಡಿಯೋ' ಮೂಲಕ ತಮ್ಮ ಭಾಷಣಗಳನ್ನು ಭಾರತೀಯರಿಗೆ ಪ್ರಸರಣ ಮಾಡಿದರು. ಯುದ್ಧದಲ್ಲಿ ಜಪಾನಿನ ಯಶಸ್ಸನ್ನು ತಿಳಿದು ಅದರ ಸಹಾಯದಿಂದ ಭಾರತದ ಬಿಡುಗಡೆಯ ಸಾಧ್ಯತೆಗೆ ಸಂಬಂಧಿಸಿದಂತೆ ಭಾರತೀಯರನ್ನು ಸಂಘಟಿಸಿದ್ದ ರಾಸ್ ಬಿಹಾರಿ ಬೋಸರ ಜೊತೆಗೆ ಸುಭಾಷರು ಕೈಜೋಡಿಸಿದರು. ರಾಸ್ ಬಿಹಾರಿ ಬೋಸರವರು ಟೋಕಿಯೋದಲ್ಲಿ ಸ್ಥಾಪಿಸಿದ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್‌ನ ಸೇನಾವಿಭಾಗವನ್ನು ಭಾರತೀಯ ರಾಷ್ಟ್ರೀಯ ಸೇನೆ (INA) ಎಂದು ಕರೆಯುತ್ತಿದ್ದರು. ನಂತರದ ದಿನಗಳಲ್ಲಿ ಐ.ಎನ್.ಎ ಯ ಮುಖಂಡತ್ವವನ್ನು ಸುಭಾಷ್ ಚಂದ್ರ ಬೋಸರವರಿಗೆ ವಹಿಸಿದರು. ಸುಭಾಷ್ ಚಂದ್ರ ಬೋಸರು ಈ ಸಂದರ್ಭದಲ್ಲಿ 'ದೆಹಲಿ ಚಲೋ'ಗೆ ಕರೆಯನ್ನು ನೀಡಿದರು. 'ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ' ಎಂಬ ಕರೆಯನ್ನಿತ್ತರು. ಭಾರತೀಯ ರಾಷ್ಟ್ರೀಯ ಸೇನೆಯಲ್ಲಿ ಝಾನ್ಸಿ ರೆಜಿಮೆಂಟ್ ಎಂಬ ವಿಭಾಗವೂ ಇತ್ತು. ಕ್ಯಾಪ್ಟನ್ ಲಕ್ಷ್ಮಿ ಈ ರೆಜಿಮೆಂಟಿನ ನೇತೃತ್ವವನ್ನು ವಹಿಸಿದ್ದರು.

_ನಿಮಗಿದು ತಿಳಿದಿರಲಿ :_

"ಭಾರತ ಮತ್ತು 38 ಕೋಟಿ ನನ್ನ ದೇಶಿಯರನ್ನು ವಿಮುಕ್ತಗೊಳಿಸುತ್ತೇನೆ ಎಂದು ದೇವರ ಹೆಸರಿನಲ್ಲಿ ಪ್ರಮಾಣಿಸುತ್ತೇನೆ.... ಸ್ವಾತಂತ್ರ್ಯ ಗಳಿಸಿದ ನಂತರವೂ ಸ್ವತಂತ್ರ ಭಾರತದ ಉಳಿವಿಗಾಗಿ ನನ್ನ ಕಟ್ಟಕಡೆಯ ರಕ್ತದ ತೊಟ್ಟನ್ನು ಹರಿಸಲು ಸದಾ ಸಿದ್ಧನಿರುವೆನು."

_ಸುಭಾಷ್ ಚಂದ್ರ ಬೋಸ್_

_ಚಟುವಟಿಕೆ :_

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರಬೋಸರವರ ಅಭಿಪ್ರಾಯವನ್ನು ಪ್ರಬಂಧ ರೂಪದಲ್ಲಿ ಬರೆಯಿರಿ.

ಸುಭಾಷರು ರಂಗೂನಿನ ಮೂಲಕ ಬ್ರಿಟಿಷರ ಕೈಯಲ್ಲಿದ್ದ ದೆಹಲಿಯನ್ನು ವಶಪಡಿಸಿಕೊಳ್ಳಲು ಯುದ್ಧ ತಂತ್ರವನ್ನು ರೂಪಿಸಿದ್ದರು. ಆ ಹೊತ್ತಿಗೆ ಭಾರತದಿಂದ ಐ.ಎನ್.ಎ ಗೆ ಸೇರ್ಪಡೆಯಾದ ಸಾವಿರಾರು ಯೋಧರು ದೆಹಲಿಯನ್ನು ಆಕ್ರಮಿಸಲು ತಯಾರಿ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಸುಭಾಷರ ಆದೇಶದಂತೆ ಸಶಸ್ತ್ರ ಹೋರಾಟವನ್ನು ಅವರು ಬರ್ಮಾದ ಗಡಿಯಲ್ಲಿ ಆರಂಭಿಸಿದರು. ಬ್ರಿಟಿಷರು ಮತ್ತು ಐ.ಎನ್.ಎ ನಡುವೆ ತೀವ್ರವಾದಂತಹ ಯುದ್ಧ ನಡೆದ್ದಿದ್ದ ಸಂದರ್ಭದಲ್ಲಿ ಸುಭಾಷರು ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮಡಿದರು. ಬರ್ಮಾದ ರಾಜಾಧಾನಿ ರಂಗೂನ್ ಬ್ರಿಟಿಷರ ವಶವಾದ್ದರಿಂದ ಐ.ಎನ್.ಎ ಸೈನಿಕರನ್ನು ಬ್ರಿಟಿಷರು ಬಂಧಿಸಿದರು. ನಂತರದ ದಿನಗಳಲ್ಲಿ ಗಾಂಧೀಜಿಯವರು ಸೇರಿದಂತೆ ಕಾಂಗ್ರೆಸ್‌ನ ಬಹುತೇಕ ನಾಯಕರೆಲ್ಲರೂ ಐ.ಎನ್.ಎ ಸೈನಿಕರನ್ನು ಬಂಧಮುಕ್ತ ಮಾಡುವಲ್ಲಿ ಶ್ರಮಿಸಿದರು.


ಡಾ. ಬಿ.ಆರ್. ಅಂಬೇಡ್ಕರ್

ಡಾ. ಬಿ.ಆರ್. ಅಂಬೇಡ್ಕರ್ : ಸಾಮಾಜಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ಡಾ. ಬಿ.ಆರ್. ಅಂಬೇಡ್ಕರ್‌ರವರು ಬಲವಾಗಿ ನಂಬಿದ್ದರು. ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿರುವ ಕಟ್ಟಕಡೆಯ ಮನುಷ್ಯನಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದ್ದಿದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ; ಅದು ಕೇವಲ ಮರಿಚೀಕೆಯಾಗಿ ಉಳಿಯುತ್ತದೆ ಎಂದು ಅಂಬೇಡ್ಕರ್‌ರವರು ತಿಳಿದಿದ್ದರು. ಅವರು ಭಾರತವನ್ನು ಕೇವಲ ಒಂದು ರಾಜಕೀಯ ಪರಿಕಲ್ಪನೆಯಾಗಿ ಕಾಣದೆ ಅದರ ಭಾವನಾತ್ಮಕ ಮುಖವನ್ನು ಪರಿಚಯಿಸಿದರು. ಇವರು ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಅದರ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು. ಅಸ್ಪೃಶ್ಯರು ಕನಿಷ್ಟ ಮಟ್ಟದ ಅವಕಾಶಗಳಿಂದ ವಂಚಿತರಾಗಿರುವುದನ್ನು ನಿರೂಪಿಸಲು 'ಮಹದ್' ಮತ್ತು 'ಕಾಲಾರಾಂ' ದೇವಾಲಯ ಚಳುವಳಿಗಳನ್ನು ರೂಪಿಸಿದರು. ಇವರು ಮೂರೂ ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳಲ್ಲಿ ಭಾಗವಹಿಸಿ ಅಮೂಲ್ಯವಾದಂತಹ ಸಲಹೆ ಸೂಚನೆಗಳನ್ನು ನೀಡಿದರು. ಹರಿಜನೋದ್ಧಾರ ಮತ್ತು ಅಸ್ಪೃಶ್ಯರ ಮುಖಂಡತ್ವಕ್ಕೆ ಸಂಬಂಧಿಸಿದಂತೆ ಗಾಂಧೀಜಿ ಮತ್ತು ಅಂಬೇಡ್ಕರ್‌ರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದವು. ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು ಬಯಸಿದ್ದು ಗಾಂಧಿ ಮತ್ತು ಅಂಬೇಡ್ಕರರ ನಡುವೆ ವಿವಾದಕ್ಕೂ ಕಾರಣವಾಯಿತು. ಇವರು ಬರೋಡ ಮಹಾರಾಜರಡಿಯಲ್ಲಿ ದಿವಾನರಾಗಿದ್ದರು. ಮುಂಬೈ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ನಂತರದಲ್ಲಿ ವೈಸ್‌ರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್‌ನಲ್ಲೂ ಸಹ ಅತ್ಯಂತ ಮುತುವರ್ಜಿಯಿಂದ

ನಿಮಗಿದು ತಿಳಿದಿರಲಿ :

ಮಹಾರಾಷ್ಟ್ರದ 'ಮಹದ್' ಎನ್ನುವ ಊರಿನಲ್ಲಿದ್ದ ಕೆರೆಯ ನೀರನ್ನು ಅಸ್ಪೃಶ್ಯರು ಬಳಸುವಂತಿರಲಿಲ್ಲ. ನೀರಿನ ಬಳಕೆಯನ್ನು ಊರಿನ ಅಸ್ಪೃಶ್ಯರೂ ಉಪಯೋಗಿಸುವಂತೆ ರೂಪಿಸಿದ ಚಳುವಳಿಯನ್ನು ಮಹದ್ ಚಳುವಳಿಯೆಂದು ಕರೆಯುತ್ತಾರೆ. ಹಾಗೆಯೇ 'ಕಾಲರಾಂ' ಎನ್ನುವ ದೇವಾಲಯದಲ್ಲಿ ಉಳಿದೆಡೆಯಲ್ಲಿದ್ದಂತೆ ಅಸ್ಪೃಶ್ಯರಿಗೆ ಪ್ರವೇಶವಿರಲಿಲ್ಲ. ಅಲ್ಲಿ ಕೂಡ ಅಸ್ಪೃಶ್ಯರು ದೇವಾಲಯವನ್ನು ಪ್ರವೇಶಿಸುವ ಕ್ರಾಂತಿಕಾರಕ ಯೋಜನೆಯನ್ನು ಅಂಬೇಡ್ಕರ್ ಅವರು ರೂಪಿಸುತ್ತಾರೆ. ಆದರೆ ಇವುಗಳು ಜನರಲ್ಲಿ ಜಾಗೃತಿಯನ್ನುಂಟುಮಾಡಿದರೂ ಚಳುವಳಿಗಳು ಆ ಕಾಲಘಟ್ಟದಲ್ಲಿ ಯಶಸ್ವಿಯಾಗಲಿಲ್ಲ.


> **ನಿಮಗಿದು ತಿಳಿದಿರಲಿ :**
> "ಪತ್ರಿಕೆಗಳಿಲ್ಲದ ನಾಯಕ ರೆಕ್ಕೆಯಿಲ್ಲದ ಪಕ್ಷಿಯಂತೆ".
> **ಡಾ.ಬಿ.ಆರ್.ಅಂಬೇಡ್ಕರ್**

ಕಾರ್ಯಭಾರವನ್ನು ನಿಭಾಯಿಸಿದರು. ಅಂಬೇಡ್ಕರ್ ಕಾಂಗ್ರೆಸ್ ಪಕ್ಷವನ್ನು ಸೇರದೆ 'ಬಹಿಷ್ಕೃತ ಹಿತಕಾರಣಿ ಸಭಾ' ಎಂಬ ಸಂಘಟನೆಯನ್ನು ಹಾಗೂ 'ಸ್ವತಂತ್ರ ಕಾರ್ಮಿಕ ಪಕ್ಷ' ಎಂಬ ಸ್ವತಂತ್ರ ಪಕ್ಷವನ್ನು ಸ್ಥಾಪಿಸಿದರು. 'ಪ್ರಭುದ್ಧ ಭಾರತ', 'ಜನತಾ', 'ಮೂಕನಾಯಕ', 'ಬಹಿಷ್ಕೃತ ಭಾರತ' ಪತ್ರಿಕೆಗಳನ್ನು ಹೊರಡಿಸಿದರು. ಕಮ್ಯುನಿಸ್ಟ್ ಮತ್ತು ಸಮಾಜವಾದಿ ಧೋರಣೆಗಳಿಂದ ದೂರವೇ ಉಳಿದು ಕೃಷಿ ಕಾರ್ಮಿಕರ ಏಳಿಗೆಗಾಗಿಯೂ ಇವರು ದುಡಿದರು.

ಸ್ವತಂತ್ರ ಭಾರತದ ದಿಕ್ಸೂಚಿಯಾಗಿ ಭಾರತದ ಸಂವಿಧಾನವನ್ನು ರಚಿಸಬೇಕಾಯಿತು. ಸಂವಿಧಾನ ಸಭೆಯ ಅಧ್ಯಕ್ಷರಾಗಿ ಡಾ. ಬಾಬು ರಾಜೇಂದ್ರ ಪ್ರಸಾದ್‌ರವರನ್ನು ಆಯ್ಕೆ ಮಾಡಲಾಯಿತು. ಮುಂದುವರೆದು ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ಡಾ. ಬಿ.ಆರ್.ಅಂಬೇಡ್ಕರ್‌ರವರನ್ನು ಸಂವಿಧಾನ ರಚನಾ ಸಮಿತಿಯು ಸರ್ವಾನುಮತದಿಂದ ಆಯ್ಕೆ ಮಾಡಿತು. ಸಂವಿಧಾನದಲ್ಲಿ ಸಮಾನತೆಯನ್ನು ಪ್ರತಿಪಾದಿಸಿ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಕಾನೂನಿನ ರಕ್ಷಣೆಯನ್ನು ಒದಗಿಸಿದರು. ಅಸ್ಪೃಶ್ಯತಾ ಆಚರಣೆಯನ್ನು ಅಪರಾಧವೆಂದು ಭಾರತದ ಸಂವಿಧಾನವು ಪರಿಗಣಿಸಿದೆ. ಸ್ವತಂತ್ರ ಭಾರತದಲ್ಲಿ ಡಾ. ಬಿ.ಆರ್.ಅಂಬೇಡ್ಕರ್‌ರವರು ಕಾನೂನು ಮಂತ್ರಿಯಾದರು. ಆಧುನಿಕತೆ, ವೈಚಾರಿಕತೆ ಮತ್ತು ಪಾಶ್ಚಾತ್ಯ ವಿದ್ವಾಂಸರಿಂದ ಪ್ರೇರಣೆ ಪಡೆದರೂ ದೇಶೀಯ ಬೇರುಗಳ ಕಡೆಗೆ ಒಲವನ್ನು ತೋರಿದರು. ಜಾತಿ ವ್ಯವಸ್ಥೆಯಿಂದ ಬೇಸತ್ತ ಇವರು ಹಿಂದೂ ಧರ್ಮವನ್ನು ತೊರೆದು ಭಾರತೀಯ ಸಂಸ್ಕೃತಿಯ ಭಾಗವಾಗಿದ್ದ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಮಾರ್ಕ್ಸ್‌ವಾದವು ಯಾವ ಬದಲಾವಣೆಯನ್ನು ರಕ್ತ ಮತ್ತು ಹಿಂಸೆಯಿಂದ ತರಬಹುದೋ ಅದನ್ನು ಬೌದ್ಧ ಧರ್ಮವು ಶಾಂತಿ ಮತ್ತು ಅಹಿಂಸಾತ್ಮಕವಾಗಿ ತರಬಲ್ಲದು ಎಂದು ಅವರು ನಂಬಿದ್ದರು. ಅವರ ಜೀವಮಾನದ ಸಾಧನೆಗಾಗಿ ಭಾರತ ಸರ್ಕಾರವು ಇವರಿಗೆ ಮರಣೋತ್ತರವಾಗಿ 'ಭಾರತರತ್ನ'ವನ್ನು ನೀಡಿ ಗೌರವಿಸಿದೆ.

> ***ಚಟುವಟಿಕೆ :***
> *ಡಾ. ಬಿ.ಆರ್. ಅಂಬೇಡ್ಕರ್ ರವರ ಜೀವನ ಚರಿತ್ರೆಯನ್ನು ಓದಿ.*

ಜವಾಹರಲಾಲ್ ನೆಹರು



ಜವಾಹರಲಾಲ್ ನೆಹರು

ಪಂಡಿತ್ ಜವಾಹರಲಾಲ್ ನೆಹರುರವರು ಹೋಂರೂಲ್ ಚಳುವಳಿಯೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶಿಸಿದರು. 1920ರಲ್ಲಿ ನಡೆದ ಅಸಹಕಾರ ಚಳುವಳಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದ ನೆಹರುರವರು 1929ರಲ್ಲಿ ಲಾಹೋರ್ ಅಧಿವೇಶನದ ಅಧ್ಯಕ್ಷರಾಗಿದ್ದರು. ಈ ಅಧಿವೇಶನದಲ್ಲಿ ಸಂಪೂರ್ಣ ಸ್ವರಾಜ್ಯದ ಗುರಿಯನ್ನು ಘೋಷಿಸಲಾಯಿತು. ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಹಿಂದೆ ಪಡೆದದ್ದರಿಂದ ನೆಹರುರವರು ನಿರಾಶೆಯನ್ನು ವ್ಯಕ್ತಪಡಿಸಿದ್ದರು.

ನೆಹರುರವರ ಚಿಂತನೆಗಳು ರಾಜಕೀಯ ಚಟುವಟಿಕೆಗಳಿಗೆ ಹೊಸ ತಿರುವನ್ನು ನೀಡಿದವು. ಈ ಮಹಾನ್ ನಾಯಕರು ಕಮ್ಯೂನಿಸ್ಟರ ಸಿದ್ಧಾಂತಗಳಿಂದ ಪ್ರಭಾವ ಹೊಂದಿದ್ದರು. ಪರಿಣಾಮವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಎಡಪಂಥೀಯ ಆಶಯಗಳು ಪ್ರಬಲವಾದವು. ಇದರ ಫಲವಾಗಿ ನೆಹರು ಮತ್ತು ಸುಭಾಷ್ ಚಂದ್ರ ಬೋಸರು ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು.

ಚಟುವಟಿಕೆ :

ಪಂಡಿತ್ ಜವಾಹರಲಾಲ್ ನೆಹರುರವರು ಪ್ರಥಮ ಪ್ರಧಾನ ಮಂತ್ರಿಯಾಗಿ ರೂಪಿಸಿದ ವಿದೇಶಾಂಗ ನೀತಿಯ ಬಗ್ಗೆ ಹೆಚ್ಚಿನ ಮಾಹಿತಿ ಓದಿರಿ.

ನೆಹರು ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 49ನೆಯ ಅಧಿವೇಶನದ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದ ಸಾಮ್ರಾಜ್ಯಶಾಹಿ ಯುದ್ಧದಿಂದ ದೂರವೇ ಉಳಿಯಬೇಕು ಎಂದು ಸಾರಿದರು. 'ಚರಕ' ಮತ್ತು 'ಹರಿಜನ' ಚಳುವಳಿಗಳು ಅಷ್ಟೇನು ಪರಿಣಾಮಕಾರಿಯಲ್ಲವೆಂದು ಇವರು ವಾದಿಸಿದರು. ಈ ಅಧಿವೇಶನದಲ್ಲಿ ಗಾಂಧೀಜಿಯವರ ಚಿಂತನೆಗಳಿಂದ ದೂರ ಸರಿದಂತೆ ಇವರು ಕಂಡು ಬಂದರು.


50ನೆಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ನೆಹರುರವರು ತಮ್ಮ ಸಮಾಜವಾದಿ ಹಾಗೂ ಕಮ್ಯುನಿಸ್ಟ್ ವಿಚಾರಗಳ ಬಗ್ಗೆ ಮೃದು ದೋರಣೆಯನ್ನು ತಳೆದರು. 'ಕಾಂಗ್ರೆಸ್ ಇಂದು ಭಾರತದಲ್ಲಿ ಪೂರ್ಣ ಪ್ರಜಾಪ್ರಭುತ್ವಕ್ಕಾಗಿ ನಿಂತಿದೆ ಹಾಗೂ ಪ್ರಜಾಪ್ರಭುತ್ವಕ್ಕಾಗಿಯೇ ಹೋರಾಡುತ್ತದೆಯೇ ಹೊರತು ಸಮಾಜವಾದಕ್ಕಲ್ಲ' ಎಂದರು.

ಕೈಗಾರೀಕರಣ ಮತ್ತು ನವಭಾರತದ ಶಿಲ್ಪಿಯಾಗಿ ಭಾರತದ ಮೊದಲ ಪ್ರಧಾನ ಮಂತ್ರಿಯಾಗಿದ್ದ ನೆಹರುರವರನ್ನು ನಾವು ಕಾಣುತ್ತೇವೆ. 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದ ಭಾರತದ ಮೊದಲ ಗೃಹಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರ ನೇತೃತ್ವದಲ್ಲಿ ಭಾರತದ ಅನೇಕ ದೇಶೀ ಸಂಸ್ಥಾನಗಳ ವಿಲೀನಿಕರಣಕ್ಕೆ ನೆಹರು ಅವರು ಕಾರಣರಾದರು. ನಂತರ ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಭಾರತಕ್ಕೆ ಪ್ರಜಾಪ್ರಭುತ್ವೀಯ ತಳಹದಿಯನ್ನು ಹಾಕಿದರು. ಬಂಡವಾಳ ಹಾಗೂ ಸಮಾಜವಾದಿ ತತ್ವಗಳನ್ನೊಳಗೊಂಡ ಮಿಶ್ರ ಆರ್ಥಿಕ ನೀತಿಯು ನೆಹರು ಅವರ ಆಧುನಿಕ ಭಾರತದ ಮೈಲಿಗಲ್ಲಾಯಿತು. ಬೃಹತ್ ಕೈಗಾರೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು ಅವರು ಬಲವಾಗಿ ನಂಬಿದ್ದರು. ಸ್ವಾತಂತ್ರ್ಯ ನಂತರ ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಯ ಕನಸನ್ನು ಕಂಡರು. ಇವುಗಳ ರೂವಾರಿಯಾಗಿ ನಾವು ನೆಹರುರವರನ್ನು ಕಾಣಬಹುದು. ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಭಾರತವು ಬಣಗಳ ದೃವೀಕೃತ ವ್ಯವಸ್ಥೆಯಿಂದ ವಿಮುಕ್ತಗೊಂಡು ಅಲಿಪ್ತ ನೀತಿಯನ್ನು ಪ್ರತಿಪಾದಿಸಿತು. ಪಂಚಶೀಲ ತತ್ವಗಳ ಆಧಾರದ ಮೇಲೆ ಶಕ್ತಿ ರಾಜಕಾರಣದಿಂದ ದೂರವೇ ಉಳಿದು ಶಾಂತಿ ಸಹಬಾಳ್ವೆಯ ಸೂತ್ರಗಳನ್ನು ಅನುಷ್ಠಾನಕ್ಕೆ ತರಲು ಕಾರಣರಾದರು. 1964ರಲ್ಲಿ ಇವರು ನಿಧನ ಹೊಂದಿದರು.

ಮಹಮದ್ ಅಲಿ ಜಿನ್ನಾ

ಮಹಮದ್ ಅಲಿ ಜಿನ್ನಾರವರು 1906ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು ಹಾಗೂ ದಾದಾಬಾಯಿ ನವರೋಜಿಯವರ ಖಾಸಗಿ ಕಾರ್ಯದರ್ಶಿಯಾಗಿಯೂ ಕೆಲಸವನ್ನು ನಿರ್ವಹಿಸಿದ್ದರು. ತಿಲಕರ ವಿರುದ್ಧದ ಮೊಕದ್ದಮೆಗಳ ಸಂದರ್ಭದಲ್ಲಿ ಅವರ ಪರವಹಿಸಿದ್ದರಿಂದ, ಇದು ಜಿನ್ನಾರವರಿಗೆ ಅತೀವ ಪ್ರಶಂಸೆಯನ್ನು ತಂದುಕೊಟ್ಟಿತು. ಇವರು ಹೋಂ ರೂಲ್ ಲೀಗ್‌ನ್ನು ಸೇರಿದರು. 1916ರ ಅನೇಕ ಸಮಾವೇಶಗಳಲ್ಲಿ ಹಿಂದೂ ಮತ್ತು ಮಹಮದೀಯರ ನಡುವಿನ ಏಕತೆಯ ಅಗತ್ಯವನ್ನು ತಿಳಿಸಿದರು. ಮುಸ್ಲಿಂ ಪರ ರಾಜಕಾರಣಿ ಎಂದು ಬಿಂಬಿತವಾಗಿದ್ದರಿಂದ ಬ್ರಿಟಿಷರ ಬಳುವಳಿಯನ್ನು

ಜಿನ್ನಾ ಅವರು ವಿರೋಧಿಸಿದರು. ರೌಲತ್ ಕಾಯ್ದೆಯನ್ನು ವಿರೋಧಿಸಿ ಅವರು ತಮ್ಮ ಕೇಂದ್ರಿಯ ಶಾಸನ ಸಲಹಾ ಸಮಿತಿಗೆ ರಾಜೀನಾಮೆಯನ್ನಿತ್ತರು. ದುಂಡು ಮೇಜಿನ ಸಮಿತಿಗಳಲ್ಲಿ ಜಿನ್ನಾ ತಾನೊಬ್ಬ ರಾಷ್ಟ್ರೀಯುವಾದಿ ಮುಸಲ್ಮಾನನೆಂದು ಘೋಷಿಸಿಕೊಂಡರು. 1937ರ ಚುನಾವಣೆಯ ನಂತರ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಸಮ್ಮಿಶ್ರ ಸರ್ಕಾರವನ್ನು ರೂಪಿಸಲು ವಿಫಲವಾದಾಗ ಜಿನ್ನ ತನ್ನ ಕಾರ್ಯತಂತ್ರವನ್ನು ಬದಲಾಯಿಸಿಕೊಂಡರು. ಬ್ರಿಟಿಷರು ಸ್ವಾತಂತ್ರ್ಯ ನೀಡುವ ಸಂದರ್ಭ ಹತ್ತಿರವಾದಂತೆ ಜಿನ್ನಾರವರು ಪಾಕಿಸ್ತಾನದ ಬೇಡಿಕೆಯನ್ನು ವಿವಿಧ ರೀತಿಯಲ್ಲಿ ತೀವ್ರಗೊಳಿಸಿದರು. ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವ ಸಮಯದಲ್ಲಿ ದೇಶವನ್ನು ವಿಭಜಿಸಿ ಪಾಕಿಸ್ತಾನವನ್ನು ಪಡೆದರು.



ಜಿನ್ನಾ ಮತ್ತು ಗಾಂಧೀಜಿ

ಭಾರತದ ವಿಭಜನೆ

ಸ್ವಾತಂತ್ರ್ಯ ಚಳುವಳಿಯ ಉದ್ದಕ್ಕೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಖಂಡ ರಾಷ್ಟ್ರದ ಕಲ್ಪನೆಯನ್ನು ಹೊಂದಿತ್ತು. ಆದರೆ ಮಹಮದ್ ಅಲಿ ಜಿನ್ನಾ ಅವರು ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರದ ಬೇಡಿಕೆ ಮಂಡಿಸುತ್ತಲೇ ಇದ್ದರು. 1940ರಲ್ಲಿ ನಡೆದ ಮುಸ್ಲಿಂ ಲೀಗ್‌ನ ಲಾಹೋರ್ ಅಧಿವೇಶನದಲ್ಲಿ ಜಿನ್ನಾ ಹಿಂದೂ ಮತ್ತು ಮುಸ್ಲಿಮರು ಒಂದು ದೇಶವಾಗಲು ಸಾಧ್ಯವೇ ಇಲ್ಲ ಎಂದು ಘೋಷಿಸಿದರು. ಎರಡನೆಯ ಮಹಾಯುದ್ಧ ಮುಗಿದು ಬ್ರಿಟನ್‌ನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂದಿತು. ಇದು ಭಾರತದಲ್ಲಿನ ರಾಜಕೀಯ ಬಿಕ್ಕಟ್ಟನ್ನು ಶಮನಗೊಳಿಸಲು ಕ್ರಮ ಕೈಗೊಂಡಿತು. ಇದು ಕ್ಯಾಬಿನೆಟ್ ನಿಯೋಗವನ್ನು ಭಾರತಕ್ಕೆ ಸ್ವಯಂ ಅಧಿಕಾರವನ್ನು ನೀಡುವ ಕುರಿತು ಚರ್ಚಿಸಲು ಕಳುಹಿಸಿತು. ಈ ನಿಯೋಗವು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನೊಂದಿಗೆ ಚರ್ಚಿಸಿತು. ಭಾರತಕ್ಕೆ ಫೆಡರಲ್ ಮಾದರಿ ಸರ್ಕಾರವನ್ನು ಸೂಚಿಸಿತು. ಸಂವಿಧಾನ ರಚನಾ ಸಭೆ ಕರೆಯುವುದಾಗಿ ಮತ್ತು ಮಧ್ಯಂತರ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿತು. ಆದರೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಮಧ್ಯಂತರ ಸರ್ಕಾರ ರಚಿಸುವ ವಿಚಾರದಲ್ಲಿ ಭಿನ್ನತೆ ಉಂಟಾಯಿತು. ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ 1946ರ ಆಗಸ್ಟ್ 16 ರಂದು ನೇರ ಕಾರ್ಯಾಚರಣೆ ದಿನಕ್ಕೆ (Direct Action Day) ಕರೆ ನೀಡಿತು. ಇದರಿಂದ ದೇಶಾದ್ಯಂತ ಕೋಮುಗಲಭೆಗಳು ನಡೆದವು. ಡಾ. ಬಾಬು ರಾಜೇಂದ್ರ ಪ್ರಸಾದ್ ಅಧ್ಯಕ್ಷತೆಯಲ್ಲಿ ಸೇರಿದ ಸಂವಿಧಾನ ಸಭೆಯಲ್ಲಿ ಮುಸ್ಲಿಂ ಲೀಗ್ ಭಾಗವಹಿಸಲಿಲ್ಲ.

ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಸಂಬಂಧ ತೀರ ಹದಗೆಟ್ಟಿತ್ತು. ಈ ಸಮಯದಲ್ಲಿ ಬ್ರಿಟಿಷ್ ಸರ್ಕಾರ ಶೀಘ್ರವಾಗಿ ಅಧಿಕಾರವನ್ನು ಹಸ್ತಾಂತರಿಸುವುದಾಗಿ ತಿಳಿಸಿ, 1946ರ ಮಾರ್ಚ್‌ನಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಭಾರತಕ್ಕೆ ವೈಸ್‌ರಾಯ್ ಆಗಿ ಕಳುಹಿಸಿತು. ಬ್ಯಾಟನ್‌ರವರು ಗಾಂಧೀಜಿ, ಜಿನ್ನಾ ಮತ್ತಿತರ ನಾಯಕರೊಂದಿಗೆ ಮಾತುಕತೆ ನಡೆಸಿ ಭಾರತವನ್ನು ವಿಭಜಿಸುವ ಯೋಜನೆಯನ್ನು ರೂಪಿಸಿದರು. 1947ರ ಜುಲೈನಲ್ಲಿ ಭಾರತ ಸ್ವಾತಂತ್ರ್ಯ ಮಸೂದೆಯು ಕಾಯ್ದೆಯ ರೂಪವನ್ನು ಪಡೆಯಿತು. ಕಾಯ್ದೆಯನ್ವಯ 1947ರ ಆಗಸ್ಟ್ 15ರಂದು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಪ್ರತ್ಯೇಕ ರಾಷ್ಟ್ರಗಳು ಉದಯಿಸಿದವು. ರ್‍ಯಾಡ್ ಕ್ಲಿಫ್ ಆಯೋಗವು ಈ ದೇಶಗಳ ಗಡಿಗಳನ್ನು ಗುರುತಿಸಿತು. ಪಂಡಿತ್ ಜವಾಹರಲಾಲ್ ನೆಹರುರವರು ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ವನ್ನು ಸ್ವೀಕರಿಸಿದರು.

1948ರ ಜನವರಿ 30ರಂದು ಪ್ರಾರ್ಥನಾ ಸಭೆಗೆ ನಡೆದು ಹೋಗುತ್ತಿದ್ದ ಹಿಂದೂ ಮುಸ್ಲಿಂ ಭಾವೈಕ್ಯತೆಯ ಹರಿಕಾರ ಗಾಂಧೀಜಿಯವರನ್ನು ನಾಥೋರಾಮ್ ಗೂಡ್ಸೆ ಎಂಬುವವನು ಹತ್ಯೆ ಮಾಡಿದನು.

ಅಭ್ಯಾಸಗಳು

I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿಮಾಡಿ.

1) ಭಾರತೀಯ ರಾಷ್ಟ್ರೀಯ ಕಾಂಗ್ರೆಸನ್ನು ________ ರಲ್ಲಿ ಸ್ಥಾಪಿಸಲಾಯಿತು.

2) ಸಂಪತ್ತಿನ ಸೋರುವಿಕೆ ಸಿದ್ಧಾಂತವನ್ನು ತಿಳಿಸಿದವರು ________.

3) ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು ಎಂದು ________ ರವರು ಘೋಷಿಸಿದರು.

4) ಅಲಿ ಸಹೋದರರು ನಡೆಸಿದ ಚಳುವಳಿ ________ .

5) ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು ________ ರವರು ಮಂಡಿಸಿದರು.

6) 1929ರ ಲಾಹೋರ್‌ನಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದ ಅಧ್ಯಕ್ಷರಾಗಿದ್ದವರು ________ .

7) ಮಹದ್ ಮತ್ತು ಕಾಲರಾಂ ದೇವಾಲಯ ಚಳುವಳಿಯನ್ನು ರೂಪಿಸಿದವರು ________

8) ಭಾರತೀಯ ರಾಷ್ಟ್ರೀಯ ಸೇನೆಯ ಝಾನ್ಸಿ ರೆಜಿಮೆಂಟಿನ ನೇತೃತ್ವವನ್ನು ________ ರವರು ವಹಿಸಿದರು.

9) ಉಪ್ಪಿನ ಸತ್ಯಾಗ್ರಹವನ್ನು ಗಾಂಧೀಜಿ ________ ಎಂಬಲ್ಲಿ ನಡೆಸಿದರು.

10) ಕ್ವಿಟ್ ಇಂಡಿಯಾ ಚಳುವಳಿಯು ________ ರಲ್ಲಿ ನಡೆಯಿತು.

II ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳವನ್ನು ನೀಡಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಭರ್ತಿ ಮಾಡಿ.

1) ಭಾರತೀಯ ರಾಷ್ಟ್ರೀಯ ಕಾಂಗ್ರೆಸನ ಸ್ಥಾಪಕರು ______________ .

ಎ) ಮಹಾತ್ಮ ಗಾಂಧೀಜಿ ಬಿ) ಎ.ಓ.ಹ್ಯೂಮ್

ಸಿ) ಬಾಲಗಂಗಾಧರ ತಿಲಕ್ ಡಿ) ಗೋಪಾಲಕೃಷ್ಣ ಗೋಖಲೆ

2) 'ಮರಾಠ' ಪತ್ರಿಕೆಯನ್ನು ಪ್ರಕಟಿಸಿದವರು ______________ .

ಎ) ಜವಾಹರಲಾಲ್ ನೆಹರು ಬಿ) ರಾಸ್ ಬಿಹಾರಿ ಬೋಸ್

ಸಿ) ಬಾಲಗಂಗಾಧರ ತಿಲಕ್ ಡಿ) ವಿ. ಡಿ. ಸಾವರ್ಕರ್

3) ಸ್ವರಾಜ್ ಪಕ್ಷ ಸ್ಥಾಪಿಸಿದ ವರ್ಷ ____________ .

ಎ) 1924 ಬಿ) 1922

ಸಿ) 1929 ಡಿ) 1906

4) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದ ಅಧ್ಯಕ್ಷರಾಗಿದ್ದವರು ______________ .

ಎ) ಸರ್ದಾರ್ ವಲ್ಲಭ ಬಾಯಿ ಪಟೇಲ್ ಬಿ) ಡಾ. ಬಿ.ಆರ್.ಅಂಬೇಡ್ಕರ್

ಸಿ) ಲಾಲ ಲಜಪತ ರಾಯ್ ಡಿ) ಸುಭಾಷ್ ಚಂದ್ರಬೋಸ್

5) ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತರಾಗಿದ್ದವರು ______________ .

ಎ) ಭಗತ್ ಸಿಂಗ್ ಬಿ) ಚಂದ್ರಶೇಖರ್ ಅಜಾದ್

ಸಿ) ಅಬುಲ್ ಕಲಾಂ ಅಜಾದ್ ಡಿ) ಸರ್ದಾರ್ ವಲ್ಲಭ ಭಾಯಿ ಪಟೇಲ್

III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ. ಉತ್ತರಿಸಿ.

1) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಗೆ ಮೊದಲು ಇದ್ಧ ಸಂಘಟನೆಗಳು ಯಾವುವು?

2) ಬ್ರಿಟಿಷ್ ಸರ್ಕಾರದ ಮುಂದಿಟ್ಟ ಮಂದಗಾಮಿಗಳ ಬೇಡಿಕೆಗಳಾವುವು?

3) ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ವಿವರಿಸಿ.

4) ಭಾರತ ಸ್ವಾತಂತ್ರ್ಯ ಹೋರಾಟದಲ್ಲಿನ ಕ್ರಾಂತಿಕಾರಿಗಳನ್ನು ಹೆಸರಿಸಿ.

5) ಸ್ವಾತಂತ್ರ ಚಳುವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.

6) ಬಂಗಾಳ ವಿಭಜನೆಯನ್ನು ಹಿಂಪಡೆಯಲು ಕಾರಣಗಳೇನು?

7) ಚೌರಿ ಚೌರ ಘಟನೆಯನ್ನು ವಿವರಿಸಿ.

8) ಉಪ್ಪಿನ ಸತ್ಯಾಗ್ರಹವನ್ನು ವಿವರಿಸಿ.

9) ಕ್ವಿಟ್ ಇಂಡಿಯಾ ಚಳುವಳಿಯು ವಿಫಲವಾಗಲು ಕಾರಣಗಳೇನು?

10) ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖವಾಗಿ ಕಂಡುಬರುವ ತೀವ್ರಗಾಮಿಗಳ ಹೆಸರುಗಳನ್ನು ಬರೆಯಿರಿ.

11) ಎರಡನೆಯ ದುಂಡು ಮೇಜಿನ ಪರಿಷತ್ತಿ ಸಮಾವೇಶದ ಫಲಿತಾಂಶವೇನು?

12) ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಸಾಧನೆಗಳನ್ನು ವಿವರಿಸಿ.

13) ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟುವರ್ಗಗಳ ಬಂಡಾಯಗಳನ್ನು ವಿವರಿಸಿ.

14) ನೆಹರುರವರು ಪ್ರಧಾನಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ.

IV. ಚಟುವಟಿಕೆಗಳು

1) ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

2) ಅಂತಲರ್ಜಾಲದಲ್ಲಿ ಜಲಿಯನ್‌ವಾಲಾಬಾಗ್, ದಂಡಿ ಸತ್ಯಾಗ್ರಹಕ್ಕೆ ಸಂಬಂಧಿಸಿದ ಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿ.

3) ಗಾಂಧೀಜಿಯವರ ಸತ್ಯಾಗ್ರಹ ಮತ್ತು ಅಹಿಂಸೆ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸಿ.

V. ಯೋಜನೆ

1) ಶಾಲೆಯಲ್ಲಿ ದೇಶಪ್ರೇಮಕ್ಕೆ ಪೂರಕವಾದ ನಾಟಕಗಳನ್ನು ಆಯೋಜಿಸಿ.

ಅಧ್ಯಾಯ – 9

ಸ್ವಾತಂತ್ರ್ಯೋತ್ತರ ಭಾರತ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭಾರತ ವಿಭಜನೆಯ ಪರಿಣಾಮಗಳು.*
- *ನಿರಾಶ್ರಿತರ ಸಮಸ್ಯೆ.*
- *ಸರ್ಕಾರ ರಚನಾ ಸಮಸ್ಯೆ.*
- *ರಾಜ್ಯಗಳ ಪುನರ್ ವಿಂಗಡಣೆ.*
- *ಸಂಸ್ಥಾನಗಳ ವಿಲೀನೀಕರಣ*

ಮೌಂಟ್‌ಬ್ಯಾಟನ್ ವರದಿಯನ್ನು ಆಧರಿಸಿ 1947ರ ಜೂನ್ 3ರಂದು ಬ್ರಿಟಿಷ್ ಸರ್ಕಾರ ಮಾಡಿದ ಘೋಷಣೆಯು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ರಾಷ್ಟ್ರಗಳ ಅಸ್ತಿತ್ವಕ್ಕೆ ಕಾರಣವಾಯಿತು. ಪ್ರತ್ಯೇಕ ರಾಷ್ಟ್ರಗಳು ಭಾರತೀಯರ ಬಯಕೆಯಾಗಿಲ್ಲದಿದ್ದರೂ ಬ್ರಿಟಿಷರ ಒಡೆದು ಆಳುವ ನೀತಿಯಿಂದಾಗಿ ಇಂತಹ ಪರಿಸ್ಥಿತಿ ಒದಗಿತು. ಭಾರತದ ಸ್ವಾತಂತ್ರ್ಯದ ಜೊತೆಯಲ್ಲೇ ಹಲವಾರು ಜ್ವಲಂತ ಸಮಸ್ಯೆಗಳು ರೂಪ ಪಡೆದವು. ಲಕ್ಷಾಂತರ ನಿರಾಶ್ರಿತರ ಸಮಸ್ಯೆ, ಕೋಮುಗಲಭೆಗಳು, ಸರ್ಕಾರದ ರಚನೆ, ದೇಶೀಯ ಸಂಸ್ಥಾನಗಳ ವಿಲೀನೀಕರಣ, ಆಹಾರದ ಉತ್ಪಾದನೆ, ಕೃಷಿ ಬೆಳವಣಿಗೆ, ಕೈಗಾರಿಕೆಗಳ ಬೆಳವಣಿಗೆ ಮುಂತಾದ ಸಮಸ್ಯೆಗಳನ್ನು ನಿವಾರಿಸಬೇಕಾಗಿತ್ತು.

ನಿರಾಶ್ರಿತರ ಸಮಸ್ಯೆ

ಭಾರತದ ವಿಭಜನೆಯು ಸೃಷ್ಟಿಸಿದ ಘೋರ ಪರಿಣಾಮಗಳಲ್ಲಿ ನಿರಾಶ್ರಿತರ ಸಮಸ್ಯೆಯೂ ಒಂದು. ಭಾರತದಿಂದ ಪಾಕಿಸ್ತಾನಕ್ಕೆ ಮತ್ತು ಪಾಕಿಸ್ತಾನದಿಂದ ಭಾರತಕ್ಕೆ ಲಕ್ಷಾಂತರ ಜನ ತಮ್ಮ ತಮ್ಮ ಹುಟ್ಟಿದ ಊರುಗಳನ್ನು, ಬೆಳೆದ ಪರಿಸರವನ್ನು, ಆಸ್ತಿ–ಪಾಸ್ತಿಗಳನ್ನು ಕಳೆದುಕೊಂಡು ತಮ್ಮದಲ್ಲದ ಪ್ರದೇಶಗಳಿಗೆ ವಲಸೆ ಹೋಗಬೇಕಾಯಿತು. ಈ ರೀತಿಯಾಗಿ ನಿರಾಶ್ರಿತರಾದ ಜನರಿಗೆ ವಸತಿ, ಉದ್ಯೋಗ, ಭೂಮಿ, ಶಿಕ್ಷಣ, ಆರೋಗ್ಯ, ಸಾಮಾಜಿಕ ವಾತಾವರಣ ಎಲ್ಲವನ್ನೂ ನಿರ್ಮಿಸಿಕೊಡಬೇಕಾದ ಬೃಹತ್ ಜವಾಬ್ದಾರಿ ಸರ್ಕಾರದ ಮೇಲೆ ಬಿದ್ದಿತು. ಈ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳು ನಡೆದವು.

ಮತೀಯ ಗಲಭೆಗಳು

ಕಾಲಾಂತರದಲ್ಲಿ ಬ್ರಿಟಿಷರು ನೆಟ್ಟ ಮತೀಯ ದ್ವೇಷದ ಬೀಜ ದೇಶ ವಿಭಜನೆಯ ಕಾಲಕ್ಕೆ ಚೆನ್ನಾಗಿ ಬೆಳೆದಿತ್ತು. ವಿಭಿನ್ನ ಧರ್ಮಗಳ ಜನರ ನಡುವೆ ಇದ್ದ ಸೌಹಾರ್ದತೆಯ ಕೊಂಡಿ ಸಡಿಲವಾಗಿತ್ತು. ಒಟ್ಟಿಗೆ ಬಾಳಿದವರ ನಡುವೆ ಮತೀಯ ದ್ವೇಷ ಉಲ್ಬಣಿಸಿ ಸಾಮಾನ್ಯ ಜನರು ಅಪಾರವಾದ ಕಷ್ಟ–ನಷ್ಟಗಳನ್ನು ಅನುಭವಿಸಿದರು. ವಲಸೆಯ ಸಂದರ್ಭದಲ್ಲಿ ನಡೆದ ಮತೀಯ ಗಲಭೆಗಳನ್ನು ನಿಯಂತ್ರಣಕ್ಕೆ ತರುವುದು ಸರ್ಕಾರಕ್ಕೆ ಹರಸಾಹಸದ ಕೆಲಸವಾಗಿತ್ತು. ಜನರ

> ***ಚಟುವಟಿಕೆ :***
> *ಭಾರತವು ಇಂದಿಗೂ ದೇಶದ ಶಾಂತಿಗೆ ಸಂಬಂಧಿಸಿದಂತೆ ಎದುರಿಸುತ್ತಿರುವ ಸಮಸ್ಯೆಗಳನ್ನು ಶಿಕ್ಷಕರೊಂದಿಗೆ ಚರ್ಚಿಸಿ.*

ಮತ್ತು ದೇಶದ ಐಕ್ಯತೆಯನ್ನು ನಾಶ ಮಾಡುವ ಮತೀಯ ಗಲಭೆಗಳನ್ನು ನಿಯಂತ್ರಣಕ್ಕೆ ತರಬೇಕೆಂದು ಮಹಾತ್ಮ ಗಾಂಧಿಯವರು ಬಹಳಷ್ಟು ಶ್ರಮಿಸಿದರು. ಎರಡೂ ದೇಶಗಳ ಜನರಲ್ಲಿ ಭಾವೋದ್ರೇಕದಿಂದ ಉಂಟಾಗಿದ್ದ ಆಕ್ರೋಶವು ವಿಮೋಚನೆಗೊಳ್ಳಬೇಕೆಂದು ಗಾಂಧಿಯವರು ಕಲ್ಕತ್ತಾದಲ್ಲಿ ಗೀತೆಯನ್ನು ಪಠಿಸುತ್ತಾ ಉಪವಾಸವನ್ನು ಕೈಗೊಂಡರು.

ಸರ್ಕಾರದ ರಚನೆ

1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ತಾತ್ಕಾಲಿಕ ಸರ್ಕಾರ ರಚನೆಯಾಯಿತು. ಮೌಂಟ್ ಬ್ಯಾಟನ್‌ರವರ ಭಾರತದ ಗವರ್ನರ್ ಜನರಲ್ ಆದರು. ಜವಾಹರಲಾಲ್ ನೆಹರೂರವರು ಭಾರತದ ಪ್ರಧಾನ ಮಂತ್ರಿಯಾಗಿ ಸರ್ಕಾರವನ್ನು ರಚಿಸಿದರು. 1950ರ ಜನವರಿ 26ರಂದು ಭಾರತದ ಸಂವಿಧಾನ ಜಾರಿಯಾಯಿತು. ಸಂವಿಧಾನ ಜಾರಿಯಾದ ನಂತರ ಡಾ.ಬಾಬು ರಾಜೇಂದ್ರ ಪ್ರಸಾದರವರು ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರಾದರು. ಸಂವಿಧಾನವು ಭಾರತವನ್ನು ಸಾರ್ವಭೌಮ, ಪ್ರಜಾಸತ್ತಾತ್ಮಕ, ಗಣರಾಜ್ಯವೆಂದು ಘೋಷಿಸಿತು. ಮುಂದೆ ಸಂವಿಧಾನಕ್ಕೆ 42ನೇ ತಿದ್ದುಪಡಿ ತಂದು 'ಜಾತ್ಯತೀತ' ಮತ್ತು 'ಸಮಾಜವಾದಿ' ಎಂಬ ಎರಡು ಅಂಶಗಳನ್ನು ಸೇರಿಸಲಾಯಿತು. ಇದರ ಆಧಾರದ ಮೇಲೆ ಭಾರತ ಸರ್ಕಾರವು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಿತು. ಭಾರತ ಸಂಸದೀಯ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿತು.

ನಿಮಗಿದು ತಿಳಿದಿರಲಿ :

ಸಂಸದೀಯ ಪ್ರಜಾಪ್ರಭುತ್ವ : *ಜಗತ್ತಿನ ಹಲವು ಸಂವಿಧಾನಗಳನ್ನು ಮತ್ತು ಅನುಭವಗಳನ್ನು ಅಭ್ಯಾಸ ನಡೆಸಿದ ಸಂವಿಧಾನ ರಚನಾ ಸಮಿತಿಯು, ಜನರಿಂದ ಆಯ್ಕೆಯಾದ ಸಂಸದರಿಂದ ಕೂಡಿದ ಸಂಸತ್ತು ಶ್ರೇಷ್ಠ ಮತ್ತು ಅಂತಿಮವಾಗಿರಬೇಕೆಂದು ಅಭಿಪ್ರಾಯಪಟ್ಟು ಸಂಸದೀಯ ಪ್ರಜಾಪ್ರಭುತ್ವವನ್ನು ಜಾರಿಗೆ ತಂದಿತು. ಅಧ್ಯಕ್ಷೀಯ ಮಾದರಿಯನ್ನು ತಿರಸ್ಕರಿಸಿತು.*

ದೇಶೀಯ ಸಂಸ್ಥಾನಗಳ ವಿಲೀನೀಕರಣ


ವಲ್ಲಭ ಭಾಯ್ ಪಟೇಲ್

ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ದೇಶದಲ್ಲಿ 562 ಸಂಸ್ಥಾನಗಳಿದ್ದವು. ಬ್ರಿಟಿಷರು ದೇಶ ವಿಭಜನೆಯನ್ನು ಮಾಡಿದ್ದರ ಜೊತೆಯಲ್ಲೇ ಈ ಸಂಸ್ಥಾನಗಳ ಮುಂದೆ ಮೂರು ಅವಕಾಶಗಳನ್ನು ತೆರೆದಿಟ್ಟರು. ಒಂದು, ಭಾರತ ಒಕ್ಕೂಟಕ್ಕೆ ಸೇರಬಹುದು, ಎರಡನೆಯದು, ಪಾಕಿಸ್ತಾನಕ್ಕೆ ಸೇರಬಹುದು, ಮೂರನೆಯದು, ಯಾವುದೇ ದೇಶಕ್ಕೂ ಸೇರ್ಪಡೆಯಾಗದೆ ಸ್ವತಂತ್ರರಾಗಿರಬಹುದಾಗಿತ್ತು. ಈ ಹಿನ್ನೆಲೆಯಲ್ಲಿ 1947ರ ವಿಲೀನ ಕಾಯ್ದೆಯ ಪ್ರಕಾರ ಭಾರತ ಸರ್ಕಾರ ಎಲ್ಲಾ ದೇಶೀಯ ಸಂಸ್ಥಾನಗಳನ್ನು ಭಾರತ ಒಕ್ಕೂಟಕ್ಕೆ ಸೇರಿಸಿಕೊಳ್ಳಲು ಆಹ್ವಾನ ನೀಡಿತು. ಈ ರೀತಿ ವಿಲೀನಗೊಂಡವರಿಗೆ ಪ್ರತಿಯಾಗಿ ರಾಜ್ಯಾದಾಯವನ್ನು ಆಧರಿಸಿ ರಾಜಧನವನ್ನು ನಿಗದಿಪಡಿಸಿತು. ಜೊತೆಗೆ ಕೆಲವೊಂದು ಸವಲತ್ತು ಮತ್ತು ಸ್ಥಾನಮಾನಗಳನ್ನು ಸಹ ಇವರಿಗೆ ನೀಡಲಾಯಿತು. ಮುಂದೆ 1969ರಲ್ಲಿ ಈ ರಾಜಧನ ಮತ್ತು ಇತರ ಸ್ಥಾನಮಾನಗಳನ್ನು ಸರ್ಕಾರ ರದ್ದುಗೊಳಿಸಿತು. ಸಂಸ್ಥಾನಗಳು ವಿಲೀನಗೊಳ್ಳುವ ಪ್ರಕ್ರಿಯೆಯಲ್ಲಿ ಜುನಾಗಢ್, ಹೈದರಾಬಾದ್ ಮತ್ತು ಜಮ್ಮು ಕಾಶ್ಮೀರ,

ಈ ಮೂರು ಸಂಸ್ಥಾನಗಳು ತೀವ್ರ ಪ್ರತಿರೋಧವನ್ನು ತೋರಿದವು. 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದ ಭಾರತದ ಪ್ರಥಮ ಗೃಹಮಂತ್ರಿ ವಲ್ಲಭ ಭಾಯಿ ಪಟೇಲರ ನೇತೃತ್ವದಲ್ಲಿ ಭಾರತದ ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸುವ ಕಾರ್ಯಭಾರವನ್ನು ಯಶಸ್ವಿಯಾಗಿ ನಿರ್ವಹಿಸಲಾಯಿತು.

ಜುನಾಗಢ್

ಇದರ ನವಾಬನು ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿದ್ದನು. ಆಗ ಪ್ರಜೆಗಳು ಆತನ ವಿರುದ್ಧ ಬೀದಿಗಿಳಿದರು. ಇದನ್ನು ಎದುರಿಸಲಾಗದೆ ನವಾಬನು ರಾಜ್ಯ ಬಿಟ್ಟು ಪಲಾಯನ ಮಾಡಿದನು.ಅಲ್ಲಿನ ದಿವಾನ ಭಾರತ ಸರ್ಕಾರಕ್ಕೆ ಮಾಡಿದ ಮನವಿಯನ್ನು ಆಧರಿಸಿ ಸೈನ್ಯವನ್ನು ಕಳುಹಿಸಿ ಶಾಂತಿ ಸ್ಥಾಪನೆ ಮಾಡಲಾಯಿತು. 1949ರಲ್ಲಿ ಜುನಾಗಢ್ ಭಾರತ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

ಹೈದರಾಬಾದ್

ಈ ಸಂಸ್ಥಾನವು ನಿಜಾಮನ ಅಧೀನದಲ್ಲಿತ್ತು. ಈತನು ಸ್ವತಂತ್ರವಾಗುಳಿಯುವ ಉದ್ದೇಶದಿಂದ ಭಾರತಕ್ಕೆ ಸೇರಲು ನಿರಾಕರಿಸಿದನು. ಇದೇ ಸಂದರ್ಭದಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ತೆಲಂಗಾಣ ರೈತರ ಸಶಸ್ತ್ರ ಹೋರಾಟವು ನಿಜಾಮ ಮತ್ತು ಜಮೀನ್ದಾರರ ವಿರುದ್ಧ ನಡೆಯುತ್ತಿತ್ತು. ನಿಜಾಮನ ಕ್ರೂರ ಪಡೆಯಾದ ರಜಾಕರ ವಿರುದ್ಧ ಜನತೆಯಲ್ಲಿ ವ್ಯಾಪಕ ಪ್ರತಿರೋಧವಿತ್ತು. ಆಗ ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿ ಹೈದರಾಬಾದ್ ಸಂಸ್ಥಾನವನ್ನು 1948ರಲ್ಲಿ ಭಾರತದೊಂದಿಗೆ ವಿಲೀನಗೊಳಿಸಲಾಯಿತು.

ಜಮ್ಮು–ಕಾಶ್ಮೀರ

ಜಮ್ಮು ಕಾಶ್ಮೀರಿನ ರಾಜನಾಗಿದ್ದ ಹರಿಸಿಂಗ್‌ನು ಸ್ವತಂತ್ರವಾಗುಳಿಯಲು ನಿರ್ಧರಿಸಿದ್ದನು. ಜಮ್ಮು ಕಾಶ್ಮೀರವು ಭಾರತಕ್ಕೆ ಸೇರಿ ಬಿಡಬಹುದೆಂಬ ಆಂತಕದಿಂದ ಪಾಕಿಸ್ತಾನವು ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರನ್ನು ದಾಳಿ ಮಾಡುವಂತೆ ಪ್ರಚೋದಿಸಿತು. ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ದುಡಿದ ಷೇಕ್ ಅಬ್ದುಲ್ಲಾನ ನ್ಯಾಷನಲ್ ಕಾನ್ಫೆರೆನ್ಸ್ ಪಕ್ಷವು ಧಾರ್ಮಿಕ ಸಂವಿಧಾನವನ್ನು ಹೊಂದಿರುವ ಪಾಕಿಸ್ತಾನಕ್ಕಿಂತ ಪ್ರಜಾಪ್ರಭುತ್ವ ಗಣರಾಜ್ಯ ಸಂವಿಧಾನವನ್ನು ಹೊಂದಿರುವ ಭಾರತದೊಂದಿಗೆ ಗುರುತಿಸಿಕೊಳ್ಳುವುದೇ ಉತ್ತಮವೆಂದು ಹೋರಾಟ ನಡೆಸಿತು. ಇಂತಹದೊಂದು ಒತ್ತಡದಿಂದಾಗಿ ರಾಜಾ ಹರಿಸಿಂಗನು ಭಾರತ ಸರ್ಕಾರದ ಸಹಾಯವನ್ನು ಕೋರಿದನು. ಪಾಕಿಸ್ತಾನದ ಉದ್ದೇಶ ವಿಫಲವಾಗಿ ಕಾಶ್ಮೀರ ಕೆಲವು ಷರತ್ತುಗಳೊಂದಿಗೆ ಭಾರತದೊಂದಿಗೆ ವಿಲೀನವಾಯಿತು. ಆದರೆ, ಕಾಶ್ಮೀರದ ಒಂದು ಭಾಗ ಪಾಕಿಸ್ತಾನದ ವಶದಲ್ಲಿ ಉಳಿಯಿತು. ಇದರ ವಿರುದ್ಧ ಭಾರತವು ವಿಶ್ವಸಂಸ್ಥೆಗೆ ದೂರು ಸಲ್ಲಿಸಿತು. ವಿಶ್ವಸಂಸ್ಥೆ ಕದನ ವಿರಾಮದ ಆದೇಶವನ್ನು ಜನವರಿ 1, 1949 ರಂದು ನೀಡಿತು. ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ವಾಯುವ್ಯ ಪ್ರದೇಶವನ್ನು 'ಪಾಕ್ ಆಕ್ರಮಿತ ಪ್ರದೇಶ'ವೆಂದು ಈಗಲೂ ಕರೆಯಲಾಗುತ್ತದೆ. ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ.

ಪಾಂಡಿಚೇರಿ

ಸ್ವಾತಂತ್ರ್ಯದ ನಂತರದಲ್ಲಿ ಫ್ರೆಂಚ್ ವಸಾಹತುಶಾಹಿಗಳು ಪಾಂಡಿಚೇರಿ, ಕಾರೈಕಲ್, ಮಾಹೆ ಮತ್ತು ಚಂದ್ರನಗರಗಳ ಮೇಲಿನ ಹಿಡಿತವನ್ನು ಮುಂದುವರಿಸಿದ್ದರು. ಇವು ಭಾರತಕ್ಕೆ ಸೇರಬೇಕೆಂದು ಕಾಂಗ್ರೆಸ್,

ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ 1954ರಲ್ಲಿ ಈ ಪ್ರದೇಶಗಳು ಭಾರತಕ್ಕೆ ಸೇರ್ಪಡೆಗೊಂಡವು. 1963ರಲ್ಲಿ ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು.

ಗೋವಾ

ಪೋರ್ಚುಗೀಸರ ವಸಾಹತು ಆಡಳಿತದಲ್ಲಿ ಮುಂದುವರಿದ ಗೋವಾ, ಭಾರತಕ್ಕೆ ಸೇರಬೇಕೆಂದು ನಿರಂತರವಾದ ಚಳುವಳಿ ನಡೆಯಿತು. ಗೋವಾವನ್ನು ತೆರವುಗೊಳಿಸಬೇಕೆಂದು ಆದೇಶ ನೀಡಿದರೂ ಬಗ್ಗದ ಪೋರ್ಚುಗೀಸರು, ಆಫ್ರಿಕಾ ಮತ್ತು ಯುರೋಪಿನಿಂದ ಹೆಚ್ಚಿನ ಸೈನ್ಯವನ್ನು ತರಿಸಿಕೊಂಡು ಚಳುವಳಿಯನ್ನು ದಮನ ಮಾಡಿ ಅಧಿಕಾರವನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸಿದರು. 1955ರಲ್ಲಿ ಭಾರತದ ವಿವಿಧ ಭಾಗಗಳಿಂದ ಸತ್ಯಾಗ್ರಹಿಗಳು ಬಂದು ಗೋವಾದಿಂದ ವಸಾಹತುಶಾಹಿಗಳು ತೊಲಗಬೇಕೆಂದು ವಿಮೋಚನಾ ಹೋರಾಟ ಪ್ರಾರಂಭಿಸಿದರು. 1961ರಲ್ಲಿ ಭಾರತದ ಸೈನ್ಯ ಮಧ್ಯಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು. 1987ರವರೆಗೂ ಕೇಂದ್ರಾಡಳಿತ ಪ್ರದೇಶವಾಗಿದ್ದ ಗೋವಾ ನಂತರ ರಾಜ್ಯವಾಯಿತು.

ಭಾಷಾವಾರು ರಾಜ್ಯಗಳ ರಚನೆ

ಭಾರತ ಸ್ವತಂತ್ರಗೊಂಡ ನಂತರ ಕಂಡುಬಂದ ಪ್ರಮುಖವಾದ ಪ್ರಜಾಸತ್ತಾತ್ಮಕ ಚಳುವಳಿಯೆಂದರೆ ಭಾಷಾವಾರು ರಾಜ್ಯಗಳಿಗಾಗಿನ ಹೋರಾಟ. ಜನರಿಗೆ ಉತ್ತಮವಾದ ಆಡಳಿತವನ್ನು ನೀಡಲು ಜನರ ಭಾಷೆಯನ್ನು ಆಧರಿಸಿದ ಭೌಗೋಳಿಕ ಗಡಿಗಳನ್ನು ಗುರುತಿಸಬೇಕೆಂಬ ಒತ್ತಾಯ ತೀವ್ರವಾಗಿತ್ತು. ಬ್ರಿಟಿಷ್ ಮತ್ತು ದೇಶೀಯ ಸಂಸ್ಥಾನಗಳೆರಡರಲ್ಲೂ ಜನರಾಡುವ ಭಾಷೆಯಲ್ಲಿ ಆಡಳಿತ ನಡೆಸುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ದೇಶಾದ್ಯಂತ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು ತೀವ್ರವಾಗಿತ್ತು. ವಿಶಾಲಾಂಧ್ರ ರಾಜ್ಯ ರಚಿಸಬೇಕೆಂದು ಆಂಧ್ರಮಹಾಸಭಾದ ನೇತೃತ್ವದಲ್ಲಿ 1952ರಲ್ಲಿ ಪೊಟ್ಟಿ ಶ್ರೀರಾಮುಲು 58 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಅಸುನೀಗಿದ ನಂತರ ಈ ಬೇಡಿಕೆ ತೀವ್ರ ಸ್ವರೂಪವನ್ನು ಪಡೆಯಿತು. 1953ರಲ್ಲಿ ಸರ್ಕಾರವು ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ರಚಿಸಿತು. ಇದರಲ್ಲಿ ಫಜಲ್ ಅಲಿ ಅಧ್ಯಕ್ಷರಾಗಿ, ಕೆ.ಎಂ.ಫಣಿಕ್ಕರ್ ಮತ್ತು ಹೆಚ್.ಎನ್.ಕುಂಜ್ರು ಸದಸ್ಯರಾಗಿದ್ದರು. ಮೊದಲ ಭಾಷಾವಾರು ರಾಜ್ಯವಾಗಿ 1953ರಲ್ಲಿ ಆಂಧ್ರಪ್ರದೇಶ ರಚನೆಯಾಯಿತು. ಈ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದಿತು. ಈ ಕಾನೂನಿನ ಪ್ರಕಾರ ಅಂದು ದೇಶದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು.

> ***ಚಟುವಟಿಕೆ :***
> *1970ರ ನಂತರದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದ ರಾಜ್ಯಗಳ ಪಟ್ಟಿ ಸಿದ್ಧಪಡಿಸಿ.*

ಕನ್ನಡ ಮಾತನಾಡುವ ಪ್ರದೇಶಗಳು ಹಲವು ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿದ್ದವು. ಇವೆಲ್ಲವನ್ನೂ ಒಟ್ಟುಗೂಡಿಸುವ ಬೇಡಿಕೆಯಿಟ್ಟು 'ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು' ನೇತೃತ್ವದಲ್ಲಿ ಚಳುವಳಿ ನಡೆಯಿತು. ಅಂತಿಮವಾಗಿ 1956 ನವೆಂಬರ್ 1 ರಂದು 'ಮೈಸೂರು ರಾಜ್ಯ'ವು ಅಸ್ತಿತ್ವಕ್ಕೆ ಬಂದಿತು. ಮುಂದೆ 1973ರಲ್ಲಿ 'ಕರ್ನಾಟಕ' ಎಂದು ಮರುನಾಮಕರಣ ಮಾಡಲಾಯಿತು. ಇಂದು ಭಾರತದಲ್ಲಿ ಒಟ್ಟು 29 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ಹಾಗೂ ಒಂದು ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶವಾಗಿದೆ.

ಅಭ್ಯಾಸಗಳು

I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ.

1) ಕಂಪನಿಯ ಕೊನೆಯ ಗೌರ್ನರ್ ಜನರಲ್ ____________ ಆಗಿದ್ದನು.
2) ಭಾರತದ ಪ್ರಥಮ ಗೃಹ ಮಂತ್ರಿ ____________ ಆಗಿದ್ದರು.
3) ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ____________ .
4) ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಗಿ ____________ರಲ್ಲಿ ಸೇರಿತು.
5) ರಾಜ್ಯ ಪುನರ್ವಿಂಗಡಣಾ ಕಾನೂನು ____________ ರಲ್ಲಿ ಜಾರಿಗೆ ಬಂದಿತು.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.

1) ಭಾರತವು ಸ್ವಾತಂತ್ರಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು?
2) ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?
3) ಪಾಂಡಿಚೇರಿಯನ್ನು ಫ್ರೆಂಚರಿಂದ ವಿಮುಕ್ತಗೊಳಿಸಿದ ರೀತಿಯನ್ನು ವಿವರಿಸಿ.
4) ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು?
5) ಭಾಷಾವಾರು ಪ್ರಾಂತ್ಯಗಳ ವಿಂಗಡಣಾ ಕ್ರಮವನ್ನು ಕುರಿತು ಬರೆಯಿರಿ.

III. ಚಟುವಟಿಕೆ

1) ಭಾರತದ ಭೂಪಟವನ್ನು ಬಿಡಿಸಿ, ರಾಜ್ಯಗಳನ್ನು ಗುರುತಿಸಿ.

IV. ಯೋಜನೆ

1) ಭಾರತದಲ್ಲಿರುವ ಪ್ರತಿ ರಾಜ್ಯಗಳ ಮಾತೃಭಾಷೆ, ರಾಜಧಾನಿಗಳ ಪಟ್ಟಿ ಸಿದ್ದಪಡಿಸಿ.
2) ನಮ್ಮ ನೆರೆ ರಾಜ್ಯಗಳ ಸಾಂಸ್ಕೃತಿಕ ವಿಶೇಷತೆಯ ಬಗ್ಗೆ ಶಿಕ್ಷಕರ ನೆರವಿನಿಂದ ಮತ್ತು ಅಂತರ್ಜಾಲದ ನೆರವಿನಿಂದ ವರದಿ ಸಿದ್ದಪಡಿಸಿ.

ಅಧ್ಯಾಯ –10

20ನೆಯ ಶತಮಾನದ ರಾಜಕೀಯ ಆಯಾಮಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಪ್ರಥಮ ಮಹಾಯುದ್ಧ*
- *ರಷ್ಯಾ ಕ್ರಾಂತಿ*
- *ಸರ್ವಾಧಿಕಾರಿಗಳ ಉದಯ*
- *ಎರಡನೇ ಮಹಾಯುದ್ಧ*
- *ಚೀನಾದ ಕ್ರಾಂತಿ*
- *ಶೀತಲಸಮರ*
- *ಅಮೆರಿಕಾದ ಉದಯ*

ಪ್ರಥಮ ಮಹಾಯುದ್ಧ

1914ಕ್ಕೂ ಹಿಂದೆ ಯುರೋಪಿನ ಪ್ರಭಲ ರಾಷ್ಟ್ರಗಳಾದ ಬ್ರಿಟನ್, ಜರ್ಮನಿ, ಫ್ರಾನ್ಸ್, ಇಟಲಿ, ಆಸ್ಟ್ರೋ–ಹಂಗೇರಿಯನ್ ಸಾಮ್ರಾಜ್ಯ ಮತ್ತು ರಷ್ಯಾ ವಸಾಹತುಗಳ ಮೇಲೆ ಹಿಡಿತ ಸಾಧಿಸುವ ಕಾರಣಕ್ಕಾಗಿ ನಿರಂತರವಾದ ಸಂಘರ್ಷದಲ್ಲಿದ್ದವು. ಕೈಗಾರಿಕಾ ಕ್ರಾಂತಿ ಮತ್ತು ನೂತನ ಅವಿಷ್ಕಾರಗಳು ಯುರೋಪಿನ ದೇಶಗಳಲ್ಲಿ ತೀವ್ರವಾದ ಪೈಪೋಟಿಯನ್ನು ಸೃಷ್ಟಿಸಿದವು. ಭಾರತವನ್ನೂ ಒಳಗೊಂಡು ಜಗತ್ತಿನ ನೂರಾರು ದೇಶಗಳ ಮಾರುಕಟ್ಟೆಯನ್ನು ಮತ್ತು ಅಲ್ಲಿನ ಸಂಪನ್ಮೂಲವನ್ನು ಕಬಳಿಸಬೇಕೆಂಬ ದುರಾಲೋಚನೆಯಿಂದ ಈ ಯುರೋಪಿಯನ್ ದೇಶಗಳು ವಸಾಹತುವಿನ ಸಂಚನ್ನು ರೂಪಿಸಿದವು. ಈ ಪ್ರಕ್ರಿಯೆಯಲ್ಲಿ ಉಂಟಾದ ಸಂಕೀರ್ಣ ಒಪ್ಪಂದಗಳು ಭೌಗೋಳಿಕ ಗಡಿಗಳ ಸಮಸ್ಯೆಗಳನ್ನು ಜ್ವಲಂತಗೊಳಿಸಿದವು. ಇದು ಯುರೋಪಿನ ಬಲಾಢ್ಯ ದೇಶಗಳ ನಡುವಿನ ಶಕ್ತಿ ಸಮತೋಲನವನ್ನು ಏರುಪೇರು ಮಾಡುತ್ತಿತ್ತು.

ಇದರಿಂದಾಗಿ ಪ್ರತಿಯೊಂದು ಬಲಾಢ್ಯ ರಾಷ್ಟ್ರವೂ ಅತಿಯಾದ ಮಿಲಿಟರೀಕರಣವನ್ನು ಮಾಡಿತು. ಅನೇಕ ಮೈತ್ರಿಕೂಟಗಳು ಏರ್ಪಟ್ಟವು. ಅತಿಯಾದ ರಾಷ್ಟ್ರೀಯತೆಯು ಅಲ್ಲಲ್ಲಿ ಬೆಳೆಯಿತು. ಸಾಮ್ರಾಜ್ಯವಾದದ ನೀತಿಗಳು ಬಲಗೊಂಡವು. ಮೊದಲ ಮಹಾಯುದ್ಧವು ಈ ದೇಶಗಳನ್ನು ಎರಡು ವಿರುದ್ಧ ಬಣಗಳನ್ನಾಗಿ ವಿಭಜಿಸಿತು. ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ ಕದನ ಬಾಂಧವ್ಯತ್ರಯ (Triple Entente) ಮೈತ್ರಿಕೂಟ ಎನಿಸಿದರೆ ಜರ್ಮನಿ, ಆಸ್ಟ್ರಿಯಾ–ಹಂಗೇರಿ ಮತ್ತು ಇಟಲಿ ಕದನ ಸೌಹಾರ್ದತ್ರಯ (Triple Alliance) ಮೈತ್ರಿಕೂಟವನ್ನು ರಚಿಸಿಕೊಂಡವು. ಸ್ವಲ್ಪಕಾಲದಲ್ಲೇ ಇಟಲಿ ವಿರೋಧಿ ಬಣಕ್ಕೆ ಸೇರಿಕೊಂಡಿತು. ಯುದ್ಧ ಬೆಳೆದಂತೆಲ್ಲಾ ಗುಂಪುಗಳಲ್ಲಿ ಬದಲಾವಣೆಗಳಾದವು.

ಮೊದಲ ಮಹಾಯುದ್ಧ 1914 ರಿಂದ 1918ರವರೆಗೆ ನಡೆಯಿತು. ಯುದ್ಧ ಪ್ರಾರಂಭವಾಗುವುದಕ್ಕೆ ತಕ್ಷಣದ ಕಾರಣವೆಂದರೆ, ಜುಲೈ 28 ರಂದು ಆಸ್ಟ್ರಿಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆಯಾಯಿತು. ಈ ಘಟನೆಯು ಆಸ್ಟ್ರೀಯಾ ಮತ್ತು ಸರ್ಬಿಯಾ ದೇಶಗಳ ನಡುವೆ ತಕ್ಷಣವೇ ಬಿಕ್ಕಟ್ಟನ್ನು ಸೃಷ್ಟಿಸಿತು.

ಯುದ್ಧದ ಪ್ರಾರಂಭದಲ್ಲಿ ಅಮೆರಿಕ ತಟಸ್ಥವಾಗಿತ್ತು. ರಷ್ಯಾ ಜರ್ಮನಿಯ ವಿರುದ್ಧವಾಗಿತ್ತು. ಯುದ್ಧ ಕೊನೆ ಹಂತ ತಲುಪುವಾಗ ಪರಿಸ್ಥಿತಿ ಬದಲಾಯಿತು. ಅಮೆರಿಕವು ಬ್ರಿಟನ್ ಮತ್ತು ಫ್ರಾನ್ಸ್ ಜೊತೆ

ಸೇರಿತು. ನವಂಬರ್ 1917ರಲ್ಲಿ ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ ಸಂಭವಿಸಿ ಜರ್ಮನಿಯೊಂದಿಗೆ ಯುದ್ಧ ನಿಲುಗಡೆ ಒಪ್ಪಂದವನ್ನು ಮಾಡಿಕೊಂಡು ಯುದ್ಧದಿಂದ ಹಿಂದೆ ಸರಿಯಿತು. ಮೈತ್ರಿಬಣದ ದಾಳಿಗಳಿಂದ ಜರ್ಜರಿತವಾದ ಜರ್ಮನಿ ಯುದ್ಧವನ್ನು ಮುಂದುವರಿಸಲಾಗದೆ ಸೋಲೊಪ್ಪಿಕೊಂಡಿತು.

ಮೈತ್ರಿಕೂಟವು 1919ರಲ್ಲಿ ಅತ್ಯಂತ ಅವಮಾನಕಾರಿಯಾದ ವರ್ಸೈಲ್ಸ್ ಒಪ್ಪಂದಕ್ಕೆ ಸಹಿ ಹಾಕಿತು. ಆಸ್ಟ್ರೋ–ಹಂಗೇರಿ ಮತ್ತು ಆಟೋಮನ್ ಸಾಮ್ರಾಜ್ಯಗಳು ತಮ್ಮ ಅಸ್ತಿತ್ವ ಕಳೆದುಕೊಂಡವು. ಜರ್ಮನಿ ತನ್ನ ಹೆಚ್ಚಿನ ಪ್ರದೇಶಗಳನ್ನು ಕಳೆದುಕೊಂಡಿತು. ಯುರೋಪಿನ ಭೂಪಟವೇ ಬದಲಾಗಿ ಹೋಯಿತು. ಹಲವಾರು ಸಣ್ಣ ಸ್ವತಂತ್ರ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದವು. ಮುಂದಿನ ದಿನಗಳಲ್ಲಿ ಸಂಭವನೀಯ ಯುದ್ಧಗಳನ್ನು ತಡೆಯುವ ದೃಷ್ಟಿಯಿಂದ ರಾಷ್ಟ್ರಸಂಘ (ಲೀಗ್ ಆಫ್ ನೇಷನ್ಸ್) ರಚನೆಯಾಯಿತು. ಸೋತ ರಾಷ್ಟ್ರಗಳೊಳಗೆ ಬೆಳೆದ ಅವಮಾನಕರ ಭಾವನೆಗಳು ಉಗ್ರ ರಾಷ್ಟ್ರೀಯತೆಗೆ ಕಾರಣವಾಯಿತು. ಜರ್ಮನಿಯ ಮೇಲೆ ಹೇರಲಾದ ಯುದ್ಧನಷ್ಟ ಪರಿಹಾರ ಮತ್ತು ಇತರ ತೀರ್ಮಾನಗಳು ಅಲ್ಲಿನ ಜನರ ಮೇಲೆ ಪರಿಣಾಮ ಬೀರಿದವು. ನಿರುದ್ಯೋಗ, ಬಡತನ, ಬೆಳವಣಿಗೆ ಕುಸಿತದಿಂದ ಉಂಟಾದ ಅತೃಪ್ತಿಯನ್ನು ಜರ್ಮನ್ ಕೈಗಾರಿಕೋದ್ಯಮಿಗಳು ತಮ್ಮ ಲಾಭಕ್ಕಾಗಿ ಬಳಸಿಕೊಂಡರು. ಎರಡನೆಯ ಪ್ರಪಂಚ ಯುದ್ಧಕ್ಕೆ ಕಾರಣವಾದ ಹಿಟ್ಲರ್‌ನಂತಹ ಸರ್ವಾಧಿಕಾರಿಯ ಬೆಳವಣಿಗೆಗೆ ಇದು ಸಹಾಯ ಮಾಡಿತು. ಬ್ರಿಟನ್, ಫ್ರಾನ್ಸ್, ಜರ್ಮನಿ ಮತ್ತು ಅಮೆರಿಕದ ಶಸ್ತ್ರಾಸ್ತ್ರ ತಯಾರಿಸುವ ವ್ಯಾಪಾರಸ್ಥರು ಅಪಾರ ಪ್ರಮಾಣದಲ್ಲಿ ಲಾಭವನ್ನು ಮಾಡಿದರು.


ನಿಮಗಿದು ತಿಳಿದಿರಲಿ :

ಮೊದಲ ಮಹಾಯುದ್ಧದಲ್ಲಿ ಎರಡೂ ಬಣಗಳ ನಾಗರಿಕರು ಮತ್ತು ಸೈನಿಕರೂ ಸೇರಿದಂತೆ ಸುಮಾರು 1,00,00,000 ಜನ ಪ್ರಾಣ ಕಳೆದುಕೊಂಡರು. 2,00,00,000 ಜನ ಗಾಯಗೊಂಡರು ಮತ್ತು 35,00,000 ಜನ ಶಾಶ್ವತವಾಗಿ ಅಂಗವಿಕಲರಾದರು. ಯಾವುದೇ ಯುದ್ಧದ ರೀತಿಯಲ್ಲಿ ಮೊದಲ ಮಹಾಯುದ್ಧವೂ ಸಹ ಕೆಲವರ ಲಾಭಕ್ಕಾಗಿನ ಪೈಪೋಟಿಯಿಂದ ನಡೆಯಿತು. ಆದರೆ ಅಪಾರವಾದ ಸಾವು–ನೋವುಗಳು ಸಂಭವಿಸಿದವು.

ರಷ್ಯಾ ಕ್ರಾಂತಿ

ರಷ್ಯಾ ಜಗತ್ತಿನ ಉಳಿದ ಎಲ್ಲಾ ದೇಶಗಳಿಗಿಂತಲೂ ವಿಸ್ತೀರ್ಣದಲ್ಲಿ ದೊಡ್ಡದು. 19ನೆಯ ಶತಮಾನದಲ್ಲಿ ರಷ್ಯಾವನ್ನು ಝಾರ್ ದೊರೆಗಳು ಆಳುತ್ತಿದ್ದರು. ಅವರು ತಮ್ಮ ಕೆಳಗಿದ್ದ ಕುಲೀನರು, ಜಮೀನ್ದಾರರು ರೈತರನ್ನು ಮತ್ತು ಬಡವರನ್ನು ತೀವ್ರವಾಗಿ ಶೋಷಿಸುತ್ತಿದ್ದರು. ಸಣ್ಣದಾಗಿ ಬೆಳೆಯುತ್ತಿದ್ದ ಬಂಡವಾಳದಾರರು ಕಾರ್ಮಿಕರನ್ನು ಮತ್ತು ಇತರರನ್ನು ಶೋಷಿಸುತ್ತಿದ್ದರು. ಝಾರ್ ಚಕ್ರವರ್ತಿಗಳ ಆಳ್ವಿಕೆಯಿಂದ ಜನರು ತುಂಬಾ ಬೇಸತ್ತಿದ್ದರು. ಝಾರ್‌ಶಾಹಿಯನ್ನು ರಾಷ್ಟ್ರೀಯತೆಗಳ ಜೈಲು ಎಂದು ಕರೆಯಲಾಗುತ್ತಿತ್ತು. 1905ರಲ್ಲಿ ಜಪಾನ್‌ನಂತಹ ಪುಟ್ಟ ದೇಶ ರಷ್ಯಾವನ್ನು ಸೋಲಿಸಿದ್ದು ದೇಶದೊಳಗೆ ಝಾರ್ ದೊರೆಗಳ ವಿರುದ್ಧ ವ್ಯಾಪಕವಾದ ಪ್ರತಿರೋಧವನ್ನು ಎಬ್ಬಿಸಿತು. ಇದರಿಂದಾಗಿ ಅನೇಕ ದಂಗೆಗಳು ನಡೆದವು. ಕಾರ್ಮಿಕರು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದರು. ಕಾರ್ಖಾನೆಗಳ ಕಾರ್ಮಿಕರು ಮತ್ತು ಹಳ್ಳಿಗಳ ರೈತರು ಶಸ್ತ್ರಗಳನ್ನು ಹಿಡಿದು ಹೋರಾಡಿದರು. ಇದನ್ನು ಝಾರ್‌ನ ಸೈನ್ಯ ನಿರ್ದಯವಾಗಿ ಹತ್ತಿಕ್ಕಿತು.

ಇದರ ಅನುಭವದಲ್ಲಿ ಮುಂದೆ ವ್ಲಾಡಿಮಿರ್ ಇಲಿಚ್ ಲೆನಿನ್ ರೈತರು ಮತ್ತು ಕಾರ್ಮಿಕರಿಗೆ ಕ್ರಾಂತಿಕಾರಿ ಮಾರ್ಗದರ್ಶನವನ್ನು ನೀಡಿದರು. ಇದರಿಂದಾಗಿ ದುಡಿಯುವ ಜನ ಹೋರಾಟಗಳಲ್ಲಿ ಹೆಚ್ಚೆಚ್ಚು ತೊಡಗಿಸಿಕೊಂಡರು. ಇದೇ ಸಂದರ್ಭದಲ್ಲಿ ಲೆನಿನ್ ದೇಶ ಭ್ರಷ್ಟನಾಗಿದ್ದನು. ಮುಷ್ಕರಗಳ ತೀವ್ರತೆ ಹೆಚ್ಚಾಗಿ ರಷ್ಯಾದ ಕೊನೆಯ ದೊರೆ ಎರಡನೆಯ ನಿಕೋಲಸ್‌ನು ದೇಶ ತ್ಯಜಿಸಿ ಓಡಿಹೋದನು. ಇದನ್ನೇ 1917ರ 'ಫೆಬ್ರವರಿ ಕ್ರಾಂತಿ' ಎನ್ನುತ್ತಾರೆ. ಅಧಿಕಾರವನ್ನು ಉದಾರವಾದಿಗಳಾದ 'ಮೆನ್ಶವಿಕ್'ರು ಪಡೆದುಕೊಂಡರು. ಇವರು ರಷ್ಯಾವನ್ನು ಪ್ರಜಾಪ್ರಭುತ್ವ ಗಣರಾಜ್ಯವೆಂದು ಘೋಷಿಸಿದರು.


ಲೆನಿನ್

ಆ ಕಾಲಕ್ಕೆ ದೇಶಭ್ರಷ್ಟರಾಗಿದ್ದ ಲೆನಿನ್ ವಾಪಸ್ ರಷ್ಯಾಗೆ ಬಂದು ಜನರಿಗೆ ಸರಳವಾದ 'ಶಾಂತಿ, ಆಹಾರ, ಭೂಮಿ' ಎಂಬ ಜನಪರ ಘೋಷಣೆಗಳನ್ನು ನೀಡಿದರು. ಇದಕ್ಕೆ ಕಾರ್ಮಿಕರು ಮತ್ತು ಗ್ರಾಮೀಣ ಬಡವರು ವ್ಯಾಪಕವಾಗಿ ಸ್ಪಂದಿಸಿದರು. ದುಡಿಮೆಗಾರರ ಪಕ್ಷದವರಾದ 'ಬೋಲ್ಶವಿಕ್'ರ ನೇತೃತ್ವದಲ್ಲಿ 1917ರ ಅಕ್ಟೋಬರ್‌ನಲ್ಲಿ ಕ್ರಾಂತಿ ಸಂಭವಿಸಿತು. ಲೆನಿನ್ ಕ್ರಾಂತಿಯ ಪಡೆಯನ್ನು ಸೇರಿ ನವೆಂಬರ್ 7 ರಂದು ರಷ್ಯಾವನ್ನು ಸಮಾಜವಾದಿ ಗಣರಾಜ್ಯ ಎಂದು ಘೋಷಣೆ ಮಾಡಿದರು. ಇದನ್ನೆ ರಷ್ಯಾದ 'ಅಕ್ಟೋಬರ್ ಕ್ರಾಂತಿ' ಎನ್ನುತ್ತಾರೆ. ಲೆನಿನ್ ರಷ್ಯನ್ ಸರ್ಕಾರದ ಅಧ್ಯಕ್ಷರಾದರು.

ಲೆನಿನ್ ಅಧ್ಯಕ್ಷರಾದ ಕೂಡಲೇ ಎಲ್ಲಾ ಭೂಮಿ ರೈತರಿಗೆ ಸೇರಿದ್ದು ಎಂದು ಘೋಷಿಸಿದರು. ಎಲ್ಲಾ ರಷ್ಯನ್ನರಿಗೂ ಉಚಿತವಾದ ಶಿಕ್ಷಣ, ಕ್ರೀಡೆ, ಆರೋಗ್ಯ, ವಸತಿ ನೀಡುವಂತಹ ಆರ್ಥಿಕ ಮತ್ತು ರಾಜಕೀಯ ನೀತಿಗಳನ್ನು ಜಾರಿ ಮಾಡಿದರು. ಕಾರ್ಲ್ ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದದ ಚಿಂತನೆಯನ್ನು ಪ್ರಾಯೋಗಿಕವಾಗಿ ಮೊದಲ ಬಾರಿಗೆ ಜಾರಿ ಮಾಡಿದ್ದು ಲೆನಿನ್. ಇದು ಮಾನವಕುಲದ ಇತಿಹಾಸದಲ್ಲಿ ಕಂಡರಿಯದ ಸಾಮಾಜಿಕ ಪದ್ಧತಿಯಾಗಿತ್ತು. 1924ರಲ್ಲಿ ಲೆನಿನ್, ಇದನ್ನು ಬೆಳೆಸುವ ಹಂತದಲ್ಲಿ ನಿಧನರಾದರು.

ನಂತರ ರಷ್ಯಾದ ಅಧ್ಯಕ್ಷನಾದ ಜೋಸೆಫ್ ಸ್ಟಾಲಿನ್ ರಷ್ಯಾವನ್ನು ಅಮೆರಿಕಕ್ಕೆ ಸವಾಲಾಗುವಂತೆ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದನು. ಈತ ಜಾರಿಗೊಳಿಸಿದ ಪಂಚವಾರ್ಷಿಕ ಯೋಜನೆಗಳು ರಷ್ಯಾದ ಅಭಿವೃದ್ಧಿಯ ಪಥವನ್ನೇ ಬದಲಾಯಿಸಿತು. ರಷ್ಯಾ ಬಾಹ್ಯಾಕಾಶ ವಿಜ್ಞಾನದಲ್ಲಿ ವಿಶ್ವದ ಮೊದಲ ಮಾನವಸಹಿತ ಉಪಗ್ರಹವನ್ನು ಉಡಾವಣೆ ಮಾಡಿತು. ಯೂರಿಗಗಾರಿನ್ ಜಗತ್ತಿನ ಮೊದಲ ಗಗನಯಾತ್ರಿಯಾದ. ಭಾರತವು ಸ್ವಾತಂತ್ರ್ಯಾನಂತರ ಪಂಚವಾರ್ಷಿಕ ಯೋಜನೆಗಳ ಮಾದರಿಯನ್ನು ರಷ್ಯಾದಿಂದಲೇ ಪಡೆಯಿತು. ಎರಡನೆಯ ಮಹಾಯುದ್ಧದ ನಂತರ ರಷ್ಯಾ ಸಮಾಜವಾದಿ ದೇಶಗಳ ಬಣದ ನಾಯಕತ್ವ ವಹಿಸಿತು. ಏಷ್ಯಾ, ಆಫ್ರಿಕಾ ಮತ್ತು ದಕ್ಷಿಣ ಅಮೆರಿಕದ ದೇಶಗಳ ವಿಮೋಚನಾ ಹೋರಾಟಗಳಿಗೆ ಬೆಂಬಲವನ್ನು ನೀಡಿತು. ರಷ್ಯಾವನ್ನು ಬಲಿಷ್ಠ ದೇಶವನ್ನಾಗಿಸುವ ಪ್ರಕ್ರಿಯೆಯಲ್ಲಿ ಸ್ಟಾಲಿನ್ ಹಲವಾರು ತಪ್ಪುಗಳನ್ನು ಎಸಗಿದನು. ಸಮಾಜವಾದಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ಕೆಲಸ ಸಮರ್ಪಕವಾಗಿ ಆಗಲಿಲ್ಲ. ಪರಿಣಾಮವಾಗಿ ಕ್ರಾಂತಿಗೆ ವಿರುದ್ಧವಾದ ಶಕ್ತಿಗಳು ಪ್ರಬಲವಾಗುತ್ತಾ ಬಂದವು. 1985ರಲ್ಲಿ ಗ್ಲಾಸ್‌ನೋಸ್ತ್ (Glasnost- ಮುಕ್ತತೆ) ಮತ್ತು 1987ರಲ್ಲಿ ಪೆರೆಸ್ಟ್ರೊಯಿಕ

(Perestroika-ಪುನರ್‌ಸಂಘಟನೆ) ಎಂಬ ಹೆಸರಿನಲ್ಲಿ ಸುಧಾರಣೆಗಳನ್ನು ಅಂದಿನ ಸೋವಿಯತ್ ಒಕ್ಕೂಟದ ಅಧ್ಯಕ್ಷರಾದ ಗೋರ್ಬಚೆವ್ ಜಾರಿ ಮಾಡಿದ ನಂತರ ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಯಿತು.

ನಿಮಗಿದು ತಿಳಿದಿರಲಿ :

ಪೆರೆಸ್ಟ್ರೋಯಿಕಾ ಹಾಗೂ ಗ್ಲಾಸ್‌ನೋಸ್ಟ್ : *ಸೋವಿಯತ್ ಕಮ್ಯುನಿಸ್ಟ್ ಪಕ್ಷವು ಮಂಡಿಸಿದ ಸಮಗ್ರ ಸುಧಾರಣೆಗಳು, ದೇಶದ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವದ ಆಲೋಚನೆಯಂತಹ ಪ್ರಸ್ತಾವಗಳನ್ನು ಗೋರ್ಬಚೆವ್‌ರವರು ಜನತೆಯ ಬಳಿ ಕೊಂಡೊಯ್ಯಲು ಎರಡು ಪದಗಳನ್ನು ಬಳಸಿದರು. ಆ ಪದಗಳೇ ಪೆರೆಸ್ಟ್ರೋಯಿಕಾ ಮತ್ತು ಗ್ಲಾಸ್‌ನೋಸ್ತ.*

ಪೆರೆಸ್ಟ್ರೋಯಿಕಾ *ಎಂದರೆ – 'ಪುನರ್ ರಚನೆ' ಎಂದರ್ಥ*

ಗ್ಲಾಸ್‌ನೋಸ್ತ *ಎಂದರೆ – 'ಮುಕ್ತತೆ' ಎಂದರ್ಥ*

ಸರ್ವಾಧಿಕಾರಿಗಳು

ಹಿಟ್ಲರ್ : ಮೊದಲ ಮಹಾಯುದ್ಧದ ನಂತರ ಉಂಟಾದ ಪರಿಸ್ಥಿತಿಯು ಜರ್ಮನಿಯಲ್ಲಿ ಹಿಟ್ಲರ್ ಮತ್ತು ಇಟಲಿಯಲ್ಲಿ ಮುಸೊಲಿನಿಯ ಸರ್ವಾಧಿಕಾರಗಳನ್ನು ಅಸ್ತಿತ್ವಕ್ಕೆ ತಂದಿತು. ಹಿಟ್ಲರ್ ಜರ್ಮನಿಯ ಛಾನ್ಸಲರ್ ಆಗಿ, ನಂತರ ಅಧ್ಯಕ್ಷ ಹಿಂಡೆನ್‌ಬರ್ಗ್ ನಿಧನದ ನಂತರ ಸರ್ವಾಧಿಕಾರಿಯಾದನು. ಹಿಟ್ಲರ್ ಫ್ಯೂಹ್‌ರರ್ ಆದನು. ಹಿಟ್ಲರ್ ಪ್ರಾಬಲ್ಯ ಪಡೆಯುವುದರ ವೇಳೆಗೆ ಜರ್ಮನಿಯಲ್ಲಿ ಕಮ್ಯುನಿಸ್ಟರು ಮತ್ತು ಸೋಷಿಯಲಿಸ್ಟರು ಬಲಿಷ್ಟರಾಗಿದ್ದರು. ಈ ಹಿನ್ನೆಲೆಯಲ್ಲಿ ಜರ್ಮನ್ ಉದ್ಯಮಿಗಳ ಸಂಪೂರ್ಣ ಸಹಾಯವನ್ನು ಪಡೆದ ಹಿಟ್ಲರ್ ಇವರನ್ನು ದಮನಿಸಿದನು. ಕಾರ್ಮಿಕ ಸಂಘಗಳನ್ನು ರದ್ದುಗೊಳಿಸಿದನು. ರಾಜಕೀಯ ಪಕ್ಷಗಳನ್ನು ನಿಷೇಧಿಸಿದನು. ನಾಜಿ ಪಕ್ಷ ಏಕೈಕ ರಾಜಕೀಯ ಪಕ್ಷವೆಂದು ಘೋಷಿಸಿದನು.



ಹಿಟ್ಲರ್

ಯೆಹೂದಿಗಳು ಜಗತ್ತನ್ನು ನಿಯಂತ್ರಿಸುತ್ತಾರೆಂಬ ಭಯ ಮತ್ತು ಊಹಾತ್ಮಕವಾದ ವಿಚಾರಗಳನ್ನು ಬಿತ್ತಿ ಜನರನ್ನು ಭೀತಿಗೊಳಪಡಿಸಿದನು. ಜಗತ್ತಿನಲ್ಲಿ ಜರ್ಮನ್ ಆರ್ಯ ಜನಾಂಗವೇ ಶ್ರೇಷ್ಠವೆಂಬ ಜನಾಂಗ ವಾದವನ್ನು ಮುಂದಿಟ್ಟು ಪ್ರಬಲವಾಗಿ ಬೆಳೆದನು. ಇವೆಲ್ಲವನ್ನೂ ಮಾಡಲು ಹಿಟ್ಲರ್ ಅನುಸರಿಸಿದ್ದು ನಾಜಿವಾದ. ಇದರ ಸಾರಾಂಶವೇನೆಂದರೆ – ಜಗತ್ತಿನಲ್ಲಿ ಶ್ರೇಷ್ಠವಾದ ಜನಾಂಗವೆಂದರೆ ಆರ್ಯ ಜರ್ಮನ್ ಜನಾಂಗ. ಜಗತ್ತನ್ನು ಆಳ್ವಿಕೆ ಮಾಡಲು ಕೇವಲ ಜರ್ಮನ್ನರು ಮಾತ್ರ ಯೋಗ್ಯರು. ಉಳಿದ ಜನಾಂಗಗಳು ಕೇವಲ ಆಳಿಸಿಕೊಳ್ಳಲು ಮಾತ್ರ ಯೋಗ್ಯರು. ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೆ ಯೆಹೂದಿಗಳೇ ಕಾರಣ. ಇವರ ಜೊತೆಗೆ ಕಮ್ಯುನಿಸ್ಟರು, ಕ್ಯಾಥೋಲಿಕ್‌ರು, ಸೋಷಿಯಲಿಸ್ಟರು ಕೂಡಾ ಕಾರಣ. ಇವರು ಬದುಕಲು ಯೋಗ್ಯರಲ್ಲ – ಈ ರೀತಿಯಾಗಿ ರೂಪುಗೊಂಡ ಉಗ್ರ ರಾಷ್ಟ್ರೀಯವಾದವು ಅತ್ಯಂತ ಅಮಾನುಷವಾಗಿ ಜಾರಿಗೆ ಬಂದಿತು. ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು 'ಗೋಬೆಲ್ಸ್' ಎಂಬ ವಿಶೇಷವಾದ ಮಂತ್ರಿಯನ್ನು ನೇಮಕ ಮಾಡಿದ್ದನು. ಗಲಭೆಗಳನ್ನು ಮಾಡಿ ಜನರಲ್ಲಿ ಭೀತಿಯನ್ನು ಹುಟ್ಟಿಸಲು 'ಬೂದು ಅಂಗಿದಳ' (Brown Shirts) ಎಂಬ ಕ್ರೌರ್ಯಪಡೆಯೊಂದನ್ನು ರಚಿಸಿದ್ದನು.

ಈ ನಿಟ್ಟಿನಲ್ಲಿ ಹಿಟ್ಲರ್ ನಡೆಸಿದ ಸಾಮೂಹಿಕ ಕೊಲೆಗಳು ಮತ್ತು ನರಮೇಧಗಳು ಚರಿತ್ರೆಯಲ್ಲಿ ಅತ್ಯಂತ ಕುಖ್ಯಾತಿಯನ್ನು ಪಡೆದಿವೆ. ಒಂದು ಅಂದಾಜಿನ ಪ್ರಕಾರ 6 ಮಿಲಿಯನ್ ಯೆಹೂದಿಗಳನ್ನು, ಕೋಟಿಗೂ ಹೆಚ್ಚು ಇತರೆ ಜನರನ್ನು ಕೊಲ್ಲಿಸಿದನು. ಇವನ ಸಾಮೂಹಿಕ ಕಗ್ಗೊಲೆಗಳನ್ನು ಹೊಲೊಕಾಸ್ಟ್ (Holocaust) ಎಂದು ಕರೆಯಲಾಗಿದೆ. 1935ರಲ್ಲಿ ನ್ಯೂರೆಂಬರ್ಗ್ ಕಾನೂನುಗಳನ್ನು ಹಿಟ್ಲರ್ ಜಾರಿಗೊಳಿಸಿದನು. ಊಟ, ನೀರು ಯಾವುದನ್ನೂ ನೀಡದೆ ಗುಲಾಮರ ರೀತಿಯಲ್ಲಿ ದುಡಿಸಿಕೊಳ್ಳುವ 'ಕಾನ್ಸೆಂಟ್ರೇಷನ್ ಕ್ಯಾಂಪ್ಸ್' (Concentration Camps)ಗಳು, ಗಾಳಿ ಬೆಳಕಿಲ್ಲದ ಗ್ಯಾಸ್ ಛೇಂಬರ್‌ಗಳಲ್ಲಿ ಜನರನ್ನು ನೂಕಿ ವಿಷಗಾಳಿ ಬಿಟ್ಟು ಕೊಲ್ಲುತ್ತಿದ್ದನು. ಇದೇ ಅಲ್ಲದೆ ಸಾಮೂಹಿಕವಾಗಿ ಗುಂಡಿಟ್ಟು ಕೊಲ್ಲುವುದು, (Mass Shootings) ಹೀಗೆ ಹಲವು ರೀತಿಗಳಲ್ಲಿ ನರಮೇಧವನ್ನು ನಡೆಸಿದನು. ಈ ರೀತಿಯಾಗಿ ಮಕ್ಕಳೆನ್ನದೆ, ಮಹಿಳೆಯರೆನ್ನದೆ, ಮುದುಕರೆನ್ನದೆ ಎಲ್ಲರನ್ನೂ ಸಾಮೂಹಿಕವಾಗಿ ಕೊಲ್ಲಲು ವಿಶೇಷ ಪಡೆಗಳನ್ನು ರೂಪಿಸಿದನು. ಇಡೀ ಪ್ರಭುತ್ವ ಯಂತ್ರವನ್ನು ನರಮೇಧ ನಡೆಸಲು ಬಳಸಿದನು. ಜಗತ್ತನ್ನೇ ಗೆಲ್ಲಬೇಕೆಂಬ ಮತ್ತು ಜರ್ಮನ್ನರ ಆರ್ಯ ಜನಾಂಗೀಯ ಶ್ರೇಷ್ಠತೆಯನ್ನು ಜಾರಿಗೊಳಿಸಬೇಕೆಂಬ ಮಹತ್ವಾಕಾಂಕ್ಷೆಯೇ ಎರಡನೆಯ ಮಹಾಯುದ್ಧಕ್ಕೆ ಮುಖ್ಯ ಕಾರಣಗಳಲ್ಲೊಂದಾಯಿತು. ಹಿಟ್ಲರ್‌ನ ಜನಾಂಗೀಯ ದ್ವೇಷದ ಅಧ್ಯಾಯವು ಯುದ್ಧದಲ್ಲಿ ಅವನ ಸಾವಿನೊಂದಿಗೆ ಅಂತ್ಯವಾಯಿತು.

ಮುಸೋಲಿನಿ : 20ನೆಯ ಶತಮಾನದ ಆರಂಭದ ಯುರೋಪಿನಲ್ಲಿ ಮೂಡಿಬಂದ ಸಾಮಾಜಿಕ ಚಳುವಳಿಗಳು, ಮೊದಲ ಮಹಾಯುದ್ಧದ ದುಷ್ಪರಿಣಾಮಗಳು ಮತ್ತು ರಷ್ಯನ್ ಕ್ರಾಂತಿಯ ಹಿನ್ನೆಲೆಯಲ್ಲಿ ಪ್ರತಿಗಾಮಿ ರಾಜಕೀಯವಾಗಿ ಮುಸೋಲಿನಿಯ ಫ್ಯಾಸಿಸ್ಟ್‌ವಾದ ಬೆಳೆದು ಬಂದಿತು. ಉಗ್ರ ರಾಷ್ಟ್ರೀಯವಾದ, ಪರಕೀಯ ಶಕ್ತಿಗಳ ನಾಶ, ಹಿಂಸೆಯ ವೈಭವೀಕರಣ, ಜನಾಂಗೀಯ ಶ್ರೇಷ್ಠತೆ, ಸಾಮ್ರಾಜ್ಯವಾದದ ವಿಸ್ತರಣೆ, ನರಮೇಧಗಳಿಗೆ ಬೆಂಬಲ, ಇವು ಫ್ಯಾಸಿಸ್ಟ್‌ವಾದದ ಲಕ್ಷಣಗಳಾಗಿದ್ದವು.

1922 ರಿಂದ 1943ರವರೆಗೆ ಇಟಲಿಯ ಪ್ರಧಾನಿಯಾಗಿದ್ದ ಮುಸೋಲಿನಿ 'ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷ'ದ ಸ್ಥಾಪಕ. 1925ರಲ್ಲಿ ಇಟಲಿಯಲ್ಲಿ ಪ್ರಜಾಪ್ರಭುತ್ವವನ್ನು ವಿಸರ್ಜನೆ ಮಾಡಿ ಕಾನೂನುಬದ್ಧವಾಗಿಯೇ ಸರ್ವಾಧಿಕಾರವನ್ನು ಪಡೆದುಕೊಂಡನು. ತನ್ನ ಗುಪ್ತ ಪೋಲೀಸರ ಮುಖಾಂತರ ಎಲ್ಲಾ ರಾಜಕೀಯ ವಿರೋಧಿಗಳನ್ನು ನಾಶ ಮಾಡಿದನು. ಕಾರ್ಮಿಕರ ಮುಷ್ಕರಗಳನ್ನು ನಿಷೇಧಿಸಿದನು. ಏಕಪಕ್ಷದ ಸರ್ವಾಧಿಕಾರವನ್ನು ಸ್ಥಾಪಿಸಿದನು. ಹಿಟ್ಲರನ ಜೊತೆಗೂಡಿ ಎರಡನೇ ಯುದ್ಧದಲ್ಲಿ ಲಕ್ಷಾಂತರ ಜನರ ಸಾವಿಗೆ ಕಾರಣನಾದನು. 1945ರಲ್ಲಿ ಇವನನ್ನು ಹತ್ಯೆ ಮಾಡಲಾಯಿತು.

ಎರಡನೆಯ ಮಹಾಯುದ್ಧ

ಮೊದಲ ಮಹಾಯುದ್ಧದ ದುರಂತವನ್ನು, ಸಾವು-ನೋವುಗಳನ್ನು ಮರೆಯುವ ಮುನ್ನವೇ ಎರಡನೆಯ ಮಹಾಯುದ್ಧವು 1939ರ ಸೆಪ್ಟೆಂಬರ್ 1ರಂದು ನಾಜಿ ಜರ್ಮನಿಯು ಪೋಲೆಂಡಿನ ಮೇಲೆ ದಾಳಿ ಮಾಡುವುದರೊಂದಿಗೆ ಪ್ರಾರಂಭವಾಯಿತು. ಎರಡನೇ ಮಹಾಯುದ್ಧವು ಬಹುಶಃ ಮಾನವನ ಚರಿತ್ರೆಯಲ್ಲಿ ನಡೆದಿರಬಹುದಾದ ಯುದ್ಧಗಳಲ್ಲೇ ಅತ್ಯಂತ ಬೃಹತ್ತಾದುದು ಮತ್ತು ಬರ್ಬರವಾದುದು. 30ಕ್ಕೂ ಹೆಚ್ಚು ದೇಶಗಳು ಈ ಯುದ್ಧದಲ್ಲಿ ನೇರವಾಗಿ ಭಾಗವಹಿಸಿದ್ದವು. ಇದು 1939 ರಿಂದ 1945 ರವರೆಗೂ ನಡೆಯಿತು. ಶ್ರೀಮಂತ ದೇಶಗಳು ಮೊದಲನೆಯ ಮಹಾಯುದ್ಧದಲ್ಲಿ ಹಣ ವ್ಯಯಮಾಡಿದ ಪರಿಣಾಮವಾಗಿ

1930ರ ದಶಕದಲ್ಲಿ ಮಹಾನ್ ಆರ್ಥಿಕ ಕುಸಿತ (Great Depression) ಉಂಟಾಯಿತು. ಇದರಿಂದಾಗಿ ಯುರೋಪ್ ಮತ್ತು ಅಮೆರಿಕದಲ್ಲಿ ಸಂಕಷ್ಟದ ಪರಿಸ್ಥಿತಿಗಳು ನಿರ್ಮಾಣವಾದವು. ಜನರ ಜೀವನ ಮಟ್ಟ ತೀವ್ರವಾಗಿ ಕುಸಿಯಿತು; ಕೈಗಾರಿಕೆ ಮತ್ತು ಕೃಷಿ ಬೆಳವಣಿಗೆ ಸ್ಥಗಿತವಾಯಿತು, ನಿರುದ್ಯೋಗ ವಿಪರೀತವಾಯಿತು. ಮೊದಲ ಮಹಾಯುದ್ಧದ ಸೋಲು, ಅವಮಾನಕರ ಒಪ್ಪಂದಗಳು, ಅಪಾರವಾದ ನಷ್ಟಗಳ ಹಿನ್ನೆಲೆಯಲ್ಲಿ ಜರ್ಮನಿ ಮತ್ತು ಯುರೋಪಿನ ಹಲವು ದೇಶಗಳಲ್ಲಿ ರಾಷ್ಟ್ರೀಯವಾದದ ಉಗ್ರತೆ ತೀವ್ರಗೊಂಡಿತು. ಜರ್ಮನಿ ಮತ್ತು ಯುರೋಪಿನ ಇತರ ದೇಶಗಳಲ್ಲಿ ಬೃಹತ್ ಕೈಗಾರಿಕೋದ್ಯಮಿಗಳು ಉಗ್ರ ರಾಷ್ಟ್ರೀಯತೆಯನ್ನು ಬೆಳಸಲು ದೊಡ್ಡ ಪ್ರಮಾಣದಲ್ಲಿ ಹಣವನ್ನು ನೀಡಿದರು. ಇದನ್ನೇ ಬಳಸಿಕೊಂಡು ಸೇಡಿನ ಮತ್ತು ದುರಭಿಮಾನದ ಚಳುವಳಿಗಳು ಬೆಳೆದವು. ಜರ್ಮನಿಯಲ್ಲಿ ಹಿಟ್ಲರ್ ಮತ್ತು ಇಟಲಿಯಲ್ಲಿ ಮುಸೋಲಿನಿಯಂತಹ ಸರ್ವಾಧಿಕಾರಿಗಳು ಬೆಳೆದರು. ಪೂರ್ವ ಏಷ್ಯಾದಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಚೀನಾದ ಮೇಲೆ ಜಪಾನ್ ದಾಳಿಗಳನ್ನು ನಡೆಸುತ್ತಿತ್ತು.

ಎರಡನೆಯ ಮಹಾಯುದ್ಧದಲ್ಲಿ ಎರಡು ವಿರುದ್ಧವಾದ ಶತ್ರುಬಣ (Axis) ಮತ್ತು ಮಿತ್ರಬಣ (Allies) ರೂಪುಗೊಂಡವು. ಆಕ್ಸೀಸ್ ಬಣದಲ್ಲಿ ಜರ್ಮನಿ, ಇಟಲಿ ಮತ್ತು ಜಪಾನ್ ದೇಶಗಳು, ಆಲೀಸ್ ಬಣದಲ್ಲಿ ಬ್ರಿಟನ್, ಫ್ರಾನ್ಸ್, ರಷ್ಯಾ ಮುಂತಾದ ದೇಶಗಳು ಇದ್ದವು. ಪೋಲೆಂಡಿನ ಮೇಲೆ ಜರ್ಮನಿ ದಾಳಿ ಮಾಡುತ್ತಿದ್ದಂತೆ, ಬ್ರಿಟನ್ ಪೋಲೆಂಡಿನ ಮಿತ್ರ ರಾಷ್ಟ್ರವಾದ್ದರಿಂದ ಜರ್ಮನಿಯ ವಿರುದ್ಧ ಯುದ್ಧ ಸಾರಿತು. ಆದರೆ ವಾಸ್ತವದಲ್ಲಿ ಬ್ರಿಟನ್ ತಕ್ಷಣದಲ್ಲೇ ಪೋಲೆಂಡಿನ ಸಹಾಯಕ್ಕೆ ಧಾವಿಸಲಿಲ್ಲ. ಅದು ಜರ್ಮನಿಯ ವಶವಾಯಿತು. ಇದೇ ಸಂದರ್ಭದಲ್ಲಿ ರಷ್ಯಾದಲ್ಲಿ ಕಮ್ಯುನಿಸ್ಟ್ ವ್ಯವಸ್ಥೆ ಜಾರಿಯಲ್ಲಿ ಇದ್ದುದರಿಂದ ಬ್ರಿಟನ್, ಫ್ರಾನ್ಸ್, ಅಮೆರಿಕ ಮುಂತಾದ ದೇಶಗಳು ಹಿಟ್ಲರನು ರಷ್ಯಾದ ಮೇಲೆ ದಾಳಿ ಮಾಡುವುದನ್ನು ಬಯಸುತ್ತಿದ್ದವು. ಇದನ್ನು ಮನಗಂಡ ರಷ್ಯಾ 1939 ಆಗಸ್ಟ್ 24ರಂದು ಜರ್ಮನಿಯ ಜೊತೆ ಯುದ್ಧರಹಿತ ಒಪ್ಪಂದ ಮಾಡಿಕೊಂಡಿತ್ತು. ಹೀಗಾಗಿ ಹಿಟ್ಲರ್ ಮೊದಲು ಪೂರ್ವದ ಬದಲಿಗೆ ಪಶ್ಚಿಮಕ್ಕೆ ದಾಳಿ ಮಾಡಿದನು. ಇಟಲಿಯ ಜೊತೆ ಒಪ್ಪಂದವನ್ನು ಮಾಡಿಕೊಂಡ ಹಿಟ್ಲರ್‌ನು ಡೆನ್ಮಾರ್ಕ್, ನಾರ್ವೆ, ಹಾಲೆಂಡ್ ದೇಶಗಳನ್ನೊಳಗೊಂಡ ಬಹುತೇಕ ಪಶ್ಚಿಮ ಯುರೋಪನ್ನು ತನ್ನ ವಶಕ್ಕೆ ತೆಗೆದುಕೊಂಡನು. 1941ರಲ್ಲಿ ಸೋವಿಯತ್ ರಷ್ಯಾದ ಕಡೆ ಹಿಟ್ಲರ್ ದೃಷ್ಟಿ ಹರಿಸಿದನು. ಇದರಿಂದ ರಷ್ಯಾ ಯುದ್ಧದಲ್ಲಿ ಭಾಗವಹಿಸಲೇ ಬೇಕಾಯಿತು. ಇದೇ ಸಂದರ್ಭದಲ್ಲಿ ಜಪಾನ್ ಹಿಟ್ಲರ್‌ನ ಬಣವನ್ನು ಸೇರಿಕೊಂಡಿತು. ಪೆಸಿಫಿಕ್ ಸಮುದ್ರದ ಪಶ್ಚಿಮ ಭಾಗದಲ್ಲಿದ್ದ ಅಮೆರಿಕ ಮತ್ತು ಯುರೋಪಿಯನ್ ಪ್ರದೇಶಗಳ ಮೇಲೆ ದಾಳಿ ಮಾಡಿ ಸಾಕಷ್ಟು ಪ್ರದೇಶಗಳನ್ನು ಜಪಾನ್ ಆಕ್ರಮಿಸಿಕೊಂಡಿತು.

ಇಟಲಿ ಮತ್ತು ಜರ್ಮನಿ ಉತ್ತರ ಆಫ್ರಿಕಾದ ಬ್ರಿಟಿಷ್ ವಸಾಹತುಗಳನ್ನು ಮತ್ತು ಸೂಯೆಜ್ ಕಾಲುವೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿ ಸೋತವು. 1942ರಲ್ಲಿ ಸ್ಟಾಲಿನ್‌ಗ್ರಾಡ್ ಯುದ್ಧದಲ್ಲಿ ಜರ್ಮನ್ ಪಡೆಗಳನ್ನು ರಷ್ಯಾ ಸೋಲಿಸಿತು. ಜರ್ಮನಿ 1943ರಲ್ಲಿ ಪೂರ್ವ ಯುರೋಪ್‌ನಲ್ಲಿ ಸಾಲು ಸಾಲು ಸೋಲುಗಳನ್ನು ಕಂಡಿತು. ಇದರಲ್ಲಿ ರಷ್ಯಾ ಪ್ರಮುಖ ಪಾತ್ರ ವಹಿಸಿತು. ಮಿತ್ರ ಪಡೆಗಳು ಇಟಲಿಯನ್ನು ಆಕ್ರಮಿಸಿದವು. ಜಪಾನ್‌ನನ್ನು ಸೋಲಿಸುವ ಮೂಲಕ ಪಶ್ಚಿಮ ಪೆಸಿಫಿಕ್ ದ್ವೀಪಗಳನ್ನು ಅಮೆರಿಕ ವಾಪಸ್ ಪಡೆಯಿತು. ರಷ್ಯಾದ ಕೆಂಪು ಸೈನಿಕರ ಮಹಾನ್ ಮುನ್ನಡೆ ಮತ್ತು ಪಶ್ಚಿಮ ರಾಷ್ಟ್ರಗಳ ದಾಳಿಯಿಂದ ಜರ್ಮನಿ ಶರಣಾಯಿತು ಮತ್ತು ಬರ್ಲಿನ್ ಪತನವಾಯಿತು. 1945ರಲ್ಲಿ ಹಿಟ್ಲರ್

ಆತ್ಮಹತ್ಯೆ ಮಾಡಿಕೊಂಡನು. ಇದರೊಂದಿಗೆ ಯುರೋಪಿನಲ್ಲಿ ಯುದ್ಧ ಕೊನೆಗೊಂಡಿತು. 1945ರಲ್ಲಿ ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ಮೇಲೆ ಅಮೆರಿಕ ಜಗತ್ತಿನ ಮೊಟ್ಟಮೊದಲ ಅಣುಬಾಂಬನ್ನು ಹಾಕಿತು. ಇದರಿಂದ ಲಕ್ಷಾಂತರ ಜನ ಹತರಾದರು. ಇದರ ದುಷ್ಪರಿಣಾಮಗಳನ್ನು ಜಪಾನ್ ಇಂದಿಗೂ ಅನುಭವಿಸುತ್ತಿದೆ. 1945 ಆಗಸ್ಟ್ 15ರಂದು ಜಪಾನ್ ಪೂರ್ಣವಾಗಿ ಶರಣಾಯಿತು. ಇದರೊಂದಿಗೆ ಮಿತ್ರ ಬಣ ಯುದ್ಧದಲ್ಲಿ ಸಂಪೂರ್ಣವಾಗಿ ವಿಜಯಿಯಾಯಿತು.

ನಿಮಗಿದು ತಿಳಿದಿರಲಿ :


ದ್ವಿತೀಯ ಮಹಾಯುದ್ಧದಲ್ಲಿ ಸತ್ತವರೆಷ್ಟು?: *ದ್ವಿತೀಯ ಜಾಗತಿಕ ಯುದ್ಧದಲ್ಲಿ ನಾಗರಿಕರು ಮತ್ತು ಸೈನಿಕರು ಸೇರಿದಂತೆ ಒಟ್ಟಾರೆ ಸುಮಾರು 4,82,00,000 ಜನ ಪ್ರಾಣಗಳನ್ನು ಕಳೆದುಕೊಂಡರು. ಜರ್ಮನಿಯ ನೇತೃತ್ವದ (Axis)ದೇಶಗಳಲ್ಲಿ 82,00,000 ಜನ ಮೃತರಾದರೆ, ಮಿತ್ರಕೂಟದ ದೇಶಗಳಲ್ಲಿ (Allies) 4,00,00,000 ಕೋಟಿ ಜನ ಜೀವತೆತ್ತರು. ಅತಿ ಹೆಚ್ಚು ಪ್ರಾಣಗಳನ್ನು ಕಳೆದುಕೊಂಡ ದೇಶ ರಷ್ಯಾ – 2,00,00,000, ಎರಡನೆಯದಾಗಿ ಚೀನಾ – 1,00,00,000. ಇವರುಗಳ ಈ ಅಪಾರ ತ್ಯಾಗವಿರದಿದ್ದಿದ್ದರೆ ಹಿಟ್ಲರ್‌ನನ್ನು ಸೋಲಿಸಲು ಆಗುತ್ತಿರಲಿಲ್ಲ; ಮಾನವಕುಲವನ್ನು ನಾಜಿ ಜನಾಂಗೀಯ ಸರ್ವಾಧಿಕಾರದಿಂದ ರಕ್ಷಿಸಲಾಗುತ್ತಿರಲಿಲ್ಲ.*

ಮಾನವ ಚರಿತ್ರೆಯಲ್ಲೇ ಅತಿ ಹೆಚ್ಚಿನ ಸಾವು–ನೋವುಗಳನ್ನು ಕಂಡ ಎರಡನೆ ಜಾಗತಿಕ ಯುದ್ಧವು ಜಗತ್ತಿನ ರಾಜಕೀಯ ಮತ್ತು ಸಾಮಾಜಿಕ ಸಂರಚನೆಯನ್ನು ಬದಲಾವಣೆ ಮಾಡಿತು. ರಾಷ್ಟ್ರ ಸಂಘದ ಜಾಗದಲ್ಲಿ ವಿಶ್ವಸಂಸ್ಥೆ ರಚನೆಯಾಯಿತು. ಯುದ್ಧದ ವಿಜಯಿ ರಾಷ್ಟ್ರಗಳಾದ ಅಮೆರಿಕ ಸಂಯುಕ್ತ ಸಂಸ್ಥಾನ, ಸೋವಿಯತ್ ರಷ್ಯಾ, ಚೀನಾ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ವಿಶ್ವಸಂಸ್ಥೆಯ ರಕ್ಷಣಾ ಮಂಡಳಿಯ ಖಾಯಂ ಸದಸ್ಯರಾದರು. ಸೋವಿಯತ್ ರಷ್ಯಾ ಮತ್ತು ಅಮೆರಿಕ ಪರಸ್ಪರ ವಿರೋಧಿಯಾದ ಶಕ್ತಿಶಾಲಿ ದೇಶಗಳಾದವು. ಶೀತಲ ಸಮರಕ್ಕೆ ಇದು ನಾಂದಿಯಾಯಿತು. ಏಷ್ಯಾ ಮತ್ತು ಆಫ್ರಿಕಾದ ವಸಾಹತುಗಳು ಸ್ವಾತಂತ್ರ್ಯ ಪಡೆಯಲು ವಾತಾವರಣ ಪೂರಕವಾಯಿತು. ಬ್ರಿಟನ್, ಫ್ರಾನ್ಸ್ ಮುಂತಾದ ರಾಷ್ಟ್ರಗಳು ತಮ್ಮ ಹಿಡಿತದಲ್ಲಿದ್ದ ಬಹುತೇಕ ವಸಾಹತುಗಳನ್ನು ಕಳೆದುಕೊಂಡವು. ಭಾರತದ ಸ್ವಾತಂತ್ರ್ಯವನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಅಮೆರಿಕ ಅಣ್ವಸ್ತ್ರ ಪ್ರಯೋಗಿಸಿದ್ದರಿಂದ ಬೃಹತ್ ದೇಶಗಳ ನಡುವೆ ಅಣ್ವಸ್ತ್ರ ಪೈಪೋಟಿಗೆ ದಾರಿಯಾಯಿತು.

ಚೀನಾ ಕ್ರಾಂತಿ

ಜಗತ್ತಿನ ಪ್ರಾಚೀನ ನಾಗರಿಕತೆ ಹಾಗೂ ಸುದೀರ್ಘ ಇತಿಹಾಸ ಹೊಂದಿರುವ ದೇಶಗಳಲ್ಲಿ ಚೀನಾ ಕೂಡಾ ಒಂದು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಭಾರತದ ರೀತಿಯಲ್ಲಿ ಚೀನಾ ಪೂರ್ತಿಯಾಗಿ ವಸಾಹತು ದೇಶವಾಗಿರಲಿಲ್ಲ. ಅರೆ–ವಸಾಹತು ದೇಶವಾಗಿತ್ತು. ಅಂದರೆ ಸ್ವಲ್ಪ ಭಾಗ ಸ್ವತಂತ್ರವಾಗಿತ್ತು. ಜೊತೆಗೆ ಫ್ರೆಂಚರು, ಜಪಾನೀಯರು ಮುಂತಾದ ಸಾಮ್ರಾಜ್ಯಶಾಹಿಗಳ ಪ್ರಭಾವಕ್ಕೂ ಒಳಗಾಗಿತ್ತು. ಚೀನಾ ಪಾಳೇಗಾರೀ ದೇಶವೂ ಆಗಿತ್ತು. ಅಂದರೆ ದೇಶದೊಳಗೆ ಜಮೀನ್ದಾರರು ಮತ್ತು ಯುದ್ಧಕೋರರ ನಿಯಂತ್ರಣವಿತ್ತು. ಭಾರತದಷ್ಟೂ ಕೈಗಾರಿಕೆಗಳು ಬೆಳೆದಿರಲಿಲ್ಲ.

ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಐಕ್ಯತೆ, ಪ್ರಜಾಪ್ರಭುತ್ವ, ಜೀವನದ ಪ್ರಶ್ನೆಗಳು ಮುಂಚೂಣಿಗೆ ಬಂದವು. 1911ರಲ್ಲಿ ಕ್ಯೊಮಿಂಟಾಂಗ್ ಪಕ್ಷದ ನಾಯಕ ಸನ್–ಯಾತ್–ಸೆನ್ ನೇತೃತ್ವದಲ್ಲಿ ಸಾಮ್ರಾಜ್ಯಶಾಹಿ ವಿರೋಧಿಯಾದ ಪ್ರಜಾಪ್ರಭುತ್ವ ಕ್ರಾಂತಿ ನಡೆಯಿತು. ಆದರೆ ಇದು ಪೂರ್ಣವಾಗಿ ಬೆಳೆಯಲಿಲ್ಲ. ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷವು 1925ರಲ್ಲಿ ಪ್ರಾರಂಭವಾಯಿತು. ಹಳ್ಳಿಗಳಲ್ಲಿ ರೈತರ ಚಳುವಳಿ ಮತ್ತು ನಗರಗಳಲ್ಲಿ



ಕಾರ್ಮಿಕರ ಚಳುವಳಿಗಳನ್ನು ಇದು ಬೆಳೆಸಿತು. ಐಕ್ಯ ಚೀನಾ ಕಟ್ಟಬೇಕೆಂದು ಸನ್–ಯಾತ್–ಸೇನ್ ಮತ್ತು ಕಮ್ಯುನಿಸ್ಟ್ ಪಕ್ಷ ಒಟ್ಟಾಗಿ ಕೆಲಸ ಮಾಡಿದವು. ಸನ್–ಯಾತ್–ಸೇನ್ ಮರಣದ ನಂತರ ಕ್ಯೊಮಿಂಟಾಂಗ್ ಪಕ್ಷದ ನೇತೃತ್ವ ಷಿಯಾಂಗ್–ಕೈ–ಷೇಕ್ ಎಂಬ ದಮನಕಾರಿಯ ಕೈಗೆ ಹಸ್ತಾಂತರವಾಯಿತು. ಈತ ಸಾಮ್ರಾಜ್ಯಶಾಹಿಗಳ ಜೊತೆ ಸೇರಿ ಕಮ್ಯುನಿಸ್ಟರ ವಿರುದ್ಧ ಅವರ ನೆಲಗಳ ಮೇಲೆ ದಾಳಿ ಮಾಡಿದನು. ಇದರಲ್ಲಿ ಸುಮಾರು 70,000 ಕ್ರಾಂತಿಕಾರಿಗಳು ಕೊಲ್ಲಲ್ಪಟ್ಟರು. ತಮ್ಮನ್ನು ರಕ್ಷಿಸಿಕೊಳ್ಳುವ ಸಲುವಾಗಿ ಮಾವೋತ್ಸೆ ತುಂಗನ ನೇತೃತ್ವದಲ್ಲಿ ಚೀನಾದ ಉತ್ತರ ಭಾಗಕ್ಕೆ ಚಾರಿತ್ರಿಕವಾದ ಕಮ್ಯುನಿಸ್ಟರ ದೀರ್ಘ ಪಯಣ (Long March) ನಡೆಯಿತು. ಇದು ಜಗತ್ತಿನ ಮಿಲಿಟರಿ ಕಾರ್ಯವ್ಯೂಹದಲ್ಲೇ ಅತ್ಯಂತ ವಿಶಿಷ್ಟವಾದ ಪ್ರಯೋಗ. ಇದಕ್ಕೆ ಗ್ರಾಮಾಂತರದ ರೈತರಿಂದ ಅಭೂತಪೂರ್ವ ಬೆಂಬಲ ದೊರೆಯಿತು.

ನಿಮಗಿದು ತಿಳಿದಿರಲಿ :

ದೀರ್ಘ ಪಯಣ (Long March): *ಚೀನಾದ ಕಮ್ಯುನಿಸ್ಟ್ ಕ್ರಾಂತಿಕಾರಿಗಳ ಮೇಲೆ ಚಿಯಾಂಗ್ ಕೈ–ಷೇಕ್ ನಡೆಸಿದ ದಾಳಿಯಿಂದ ರಕ್ಷಿಸಿಕೊಳ್ಳಲು ಚೀನಾ ಕ್ರಾಂತಿಯ ನಾಯಕ ಮಾವೋ ಸಂಘಟಿಸಿದ ಚಾರಿತ್ರಿಕ ಪಯಣವಿದು. ಆಗ್ನೇಯ ಚೀನಾದ ಜಿಯಾಂಗ್‌ಜ್ಹಿ ಪ್ರದೇಶದಿಂದ ವಾಯುವ್ಯ ಚೀನಾದ ಯೆನಾನ್‌ನ ತುತ್ತತುದಿಗೆ ಸುಮಾರು 10,000 ಕಿ.ಮೀ. ದೂರದವರೆಗೆ ಸುಮಾರು 80,000 ಸಾವಿರ ಕ್ರಾಂತಿಕಾರಿ ಸೈನಿಕರನ್ನು ಸ್ಥಳಾಂತರಿಸಿದ ಘಟನೆಯಿದು. ಅಕ್ಟೋಬರ್ 1934ರ ಅಕ್ಟೋಬರ್‌ನಿಂದ 1935 ಅಕ್ಟೋಬರ್‌ವರೆಗೆ ನಡೆದ ಬೃಹತ್ ಚಾರಣದಲ್ಲಿ ಅಂತಿಮವಾಗಿ ಸುಮಾರು 10,000 ಜನ ಮಾತ್ರ ಉಳಿದಿದ್ದರು.ಮಾನವನ ಸಾಮಾಜಿಕ ಕ್ರಾಂತಿಯ ಚರಿತ್ರೆಯಲ್ಲಿ ಇಷ್ಟು ಸಂಖ್ಯೆಯ ಜನ ಇಷ್ಟೊಂದು ದೂರ ನಡೆದ ಮತ್ತೊಂದು ಘಟನೆಯಿಲ್ಲ. ಹೀಗಾಗಿಯೇ ಇದನ್ನು 'ದೀರ್ಘಪಯಣ' ಎಂದು ಕರೆಯಲಾಗಿದೆ.*

ಎರಡನೆಯ ಜಾಗತಿಕ ಯುದ್ಧದ ಸಂದರ್ಭದಲ್ಲಿ ಚೀನಾದ ಪ್ರದೇಶಗಳ ಮೇಲೆ ಜಪಾನ್ ದಾಳಿ ಮಾಡಿತು. ಇದರ ವಿರುದ್ಧ ಹೋರಾಟ ನಡೆಸಲು ಚೀನಾ ಕಮ್ಯುನಿಸ್ಟ್ ಪಕ್ಷ ಮುಂಚೂಣಿಗೆ ಬಂತು. 1945ರಲ್ಲಿ ಜಪಾನ್ ಯುದ್ಧದಲ್ಲಿ ಸೋತಿತು. ಜಪಾನ್ ಹಿಂದೆ ಸರಿದಂತೆಲ್ಲಾ ಆ ಪ್ರದೇಶಗಳನ್ನು ಕಮ್ಯುನಿಸ್ಟ್ ಪಕ್ಷದ ಜನತಾ ವಿಮೋಚನಾ ಸೈನ್ಯವಶಕ್ಕೆ ಪಡೆಯಿತು. ವಶಕ್ಕೆ ಪಡೆದ ಪ್ರದೇಶಗಳಲ್ಲಿ ಭೂಸುಧಾರಣೆ ಘೋಷಣೆ ಮಾಡಿತು. ಅಂದರೆ ಜನರಿಗೆ ಭೂಮಿಯನ್ನು ಹಂಚಿತು. ಇದರಿಂದ ಅಪಾರ ಜನಬೆಂಬಲ ದೊರಕಿತು. ಈ ರೀತಿಯಾಗಿ ಕೆಲವು ಪ್ರದೇಶಗಳು ಷಿಯಾಂಗ್–ಕೈ–ಷೇಕ್‌ನ ಹಿಡಿತದಲ್ಲಿದ್ದರೆ ಹೆಚ್ಚೆಚ್ಚು ಪ್ರದೇಶಗಳನ್ನು ಕಮ್ಯುನಿಸ್ಟ್ ಪಕ್ಷ ವಶಕ್ಕೆ ಪಡೆಯುತ್ತಾ ಹೋಯಿತು. 1949ರಲ್ಲಿ ಅನೇಕ ನಗರಗಳೂ ಇವರ ವಶಕ್ಕೆ ಬಂದವು. ಷಿಯಾಂಗ್–ಕೈ–ಷೇಕ್‌ನು ಸೋತು ತೈವಾನ್‌ಗೆ ಪಲಾಯನ ಮಾಡಿದನು. 1949ರ ಅಕ್ಟೋಬರ್ 1 ರಂದು ಜನತಾ ವಿಮೋಚನಾ ಸೈನ್ಯ ಪ್ರವೇಶಿಸಿತು.ಚೀನಾದಲ್ಲಿ ಪೀಕಿಂಗ್ (ಈಗಿನ ಬೀಜಿಂಗ್) ಜನತಾ ಗಣತಂತ್ರ ಸ್ಥಾಪನೆಯಾಯಿತು. ಮಾವೋತ್ಸೆ ತುಂಗ್ ಅದರ ಅಧ್ಯಕ್ಷನಾದನು.

ಕ್ರಾಂತಿಯ ನಂತರ ಚೀನಾದಲ್ಲಿ ಸಾಮೂಹಿಕ ಕೃಷಿ ಪದ್ಧತಿಯನ್ನು ಜಾರಿಗೊಳಿಸಿದರು.ಎಲ್ಲರಿಗೂ ಉಚಿತ ಶಿಕ್ಷಣ, ಆರೋಗ್ಯ, ಮೊದಲಾದ ಸೌಲಭ್ಯಗಳನ್ನು ನೀಡಿದರು. ಕೈಗಾರಿಕಾ ಬೆಳವಣಿಗೆ ಸಾಧಿಸಲು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ತುಂಬಾ ಮಹತ್ವ ನೀಡಿದರು. **'ಮುನ್ನಡೆಯ ಮಹಾಜಿಗಿತ'** (Leap Forward) ಯೋಜನೆಯನ್ನು ಜಾರಿಗೊಳಿಸಲಾಯಿತು. ಖಾಸಗಿ ಆಸ್ತಿಯನ್ನು ಸಮಾಜದ ಆಸ್ತಿಯಾಗಿ ಪರಿವರ್ತಿಸಿದರು. ಈ ರೀತಿ ಮಾಡುವಾಗ 1966ರಲ್ಲಿ ಜಾರಿಗೆ ತಂದ **'ಸಾಂಸ್ಕೃತಿಕ ಕ್ರಾಂತಿ'** (Cultural Revolution) ಹಲವಾರು ತಪ್ಪುಗಳನ್ನು ಮಾಡಿತು. ಇದನ್ನು ಸರಿಪಡಿಸಲು 1979ರಲ್ಲಿ ಅಧಿಕಾರಕ್ಕೆ ಬಂದ ಡೆಂಗ್ ಷಿಯೋಪಿಂಗ್ ಹಲವಾರು ಸುಧಾರಣೆಗಳಿಗೆ ಕಾರಣರಾದರು. ಈ ಹಿನ್ನೆಲೆಯಲ್ಲಿ ಬಂಡವಾಳವಾದವನ್ನು ಅರಗಿಸಿಕೊಂಡ ಚೀನಾ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಜಾಗತಿಕ ಶಕ್ತಿಯಾಗಿ ಮುನ್ನುಗ್ಗುತ್ತಿದೆ.

ಶೀತಲ ಸಮರ

ಎರಡನೆಯ ಮಹಾಯುದ್ಧದ ನಂತರ ಜಾಗತಿಕವಾಗಿ ಎರಡು ಬಣಗಳ ನಡುವೆ ರಾಜಕೀಯ, ಆರ್ಥಿಕ, ಮಿಲಿಟರಿ ಮುಂತಾದ ವಿಷಯಗಳಲ್ಲಿ ಉದ್ಭವಿಸಿದ ನಿರಂತರ ಭಯ, ದ್ವೇಷ, ಅಸೂಯೆ ಮತ್ತು ಆತಂಕದ ಪರಿಸ್ಥಿತಿಯೇ ಶೀತಲ ಸಮರ. ಅಮೆರಿಕ ಸಂಯುಕ್ತ ಸಂಸ್ಥಾನದ (USA) ಬಂಡವಾಳ ಶಾಹಿ ದೇಶಗಳ ಬಣ ಮತ್ತು ಸೋವಿಯತ್ ರಷ್ಯಾದ (USSR) ಸಮಾಜವಾದಿ ದೇಶಗಳ ಬಣಗಳ ನಡುವಿನ ಅಘೋಷಿತ ಸಮರವೇ ಶೀತಲ ಸಮರ. ಮಾನವ ಜನಾಂಗದ ಸಮಸ್ಯೆಗಳಿಗೆ ಪರಿಹಾರದ ಮಾರ್ಗ ಯಾವುದು – ಬಂಡವಾಳಶಾಹಿಯೋ ಅಥವಾ ಸಮಾಜವಾದವೋ? ಎಂಬುದರ ಆಧಾರದಲ್ಲಿ ತೀವ್ರವಾಗಿ ಬೆಳೆದ ವ್ಯತ್ಯಾಸಗಳು 1917ರಿಂದ ಅಸ್ತಿತ್ವದಲ್ಲಿದ್ದರೂ ತೀವ್ರವಾಗಿ ಪ್ರಕಟಗೊಂಡಿದ್ದು ಎರಡನೇ ಮಹಾಯುದ್ಧದ ನಂತರ ಸೋವಿಯತ್ ರಷ್ಯಾದ ಸಮಾಜವಾದಿ ವ್ಯವಸ್ಥೆ 1989ರಲ್ಲಿ ಕುಸಿಯುವವರೆಗೂ ಪ್ರಬಲವಾಗಿತ್ತು. ಇವೆರೆಡೂ ಬಣಗಳನ್ನು ಹೊರತುಪಡಿಸಿ ಭಾರತ, ಈಜಿಪ್ಟ್ ಮುಂತಾದ ದೇಶಗಳ ನೇತೃತ್ವದಲ್ಲಿ ಅಲಿಪ್ತ ಚಳುವಳಿ ಪ್ರಾರಂಭವಾಯಿತು.

ಶೀತಲ ಸಮರದಿಂದಾಗಿ ಎರಡು ಬಣಗಳ ನಡುವೆ ಶಸ್ತ್ರಾಸ್ತ್ರ ಪೈಪೋಟಿ ತೀವ್ರಗೊಂಡಿತು. ಇದರಲ್ಲಿ ಅಮೆರಿಕ ಮೇಲುಗೈ ಸಾಧಿಸಿತು. ಅಮೆರಿಕ ಜಗತ್ತಿನ ತುಂಬೆಲ್ಲಾ ಶಸ್ತ್ರಾಸ್ತ್ರಗಳ ಮಾರಾಟಕ್ಕೆ ವ್ಯಾಪಕವಾದ ಒಪ್ಪಂದಗಳಿಗೆ ಮುಂದಾಯಿತು. ಹೆಚ್ಚೆಚ್ಚು ರಾಷ್ಟ್ರಗಳನ್ನು ತಮ್ಮ ವ್ಯಾಪ್ತಿಯಲ್ಲಿಟ್ಟುಕೊಳ್ಳಲು ಮಿಲಿಟರಿ ಮೈತ್ರಿಕೂಟಗಳ ರಚನೆಯಾಯಿತು. ಅಮೆರಿಕದ ನೇತೃತ್ವದಲ್ಲಿ ನ್ಯಾಟೋ (North Atlantic Treaty Organisation), ಸಿಯಾಟೋ (South East Asian Treaty Organisation) ಮತ್ತು ಸೆಂಟೋ (Central East North Treaty Organisation) ಕೂಟಗಳು ರಚನೆಯಾದರೆ, ರಷ್ಯಾ ನೇತೃತ್ವದಲ್ಲಿ ವಾರ್ಸಾಕೂಟ ರಚನೆಯಾಯಿತು. ಅಮೆರಿಕದ ಪ್ರತಿಯೊಂದು ರಾಜ್ಯದಲ್ಲೂ ಬೃಹತ್ ಯುದ್ಧಾಸ್ತ್ರಗಳ ಕೈಗಾರಿಕೆಗಳು ಬೆಳೆದವು. ಅಣ್ವಸ್ತ್ರ ಪೈಪೋಟಿ ಹೆಚ್ಚಿತು. ಇದರ ಜೊತೆಗೆ ವಿವಿಧ ದೇಶಗಳಲ್ಲಿ ಸೈನಿಕ ನೆಲೆಗಳ ಸ್ಥಾಪನೆ, ಗೂಢಚರ್ಯೆ ಮತ್ತು ಪ್ರಚಾರ, ವ್ಯೋಮ ಸಮರದಂತಹ (Space War) ವಿಜ್ಞಾನ–ತಂತ್ರಜ್ಞಾನದ ಪೈಪೋಟಿ, ಇವೆಲ್ಲವೂ ಬೆಳೆದವು. ಇಡೀ ಜಗತ್ತೇ ವಿವಿಧ ರೂಪಗಳಲ್ಲಿ ಅಗೋಚರ ಯುದ್ಧದ ಆತಂಕಕ್ಕೆ ಒಳಗಾಯಿತು.

ಕೊರಿಯನ್ ಯುದ್ಧ, ವಿಯೆಟ್ನಾಂ ಯುದ್ಧ, 1956ರ ಸೂಯೆಜ್ ಕಾಲುವೆ ಬಿಕ್ಕಟ್ಟು, 1961ರ ಬರ್ಲಿನ್ ಬಿಕ್ಕಟ್ಟು, 1962ರ ಕ್ಯೂಬನ್ ಕ್ಷಿಪಣಿ ಬಿಕ್ಕಟ್ಟು, ಹೀಗೆ ಹಲವು ಆತಂಕದ ಪರಿಸ್ಥಿತಿಗಳನ್ನು ಶೀತಲ ಸಮರವು ಸೃಷ್ಟಿಸಿತು. ಸುಮಾರು 1985ರವರೆಗೂ ಪರಸ್ಪರ ಅತ್ಯಂತ ತೀವ್ರತೆಯನ್ನು ಕಂಡ ಶೀತಲ ಸಮರವು ನಂತರ ಅಮೆರಿಕದ ಕಡೆ ವಾಲಿತು. ಜಗತ್ತಿನ ಸಂಪನ್ಮೂಲಗಳನ್ನು ಹಿಡಿತಕ್ಕೆ ತೆಗೆದುಕೊಳ್ಳುವಲ್ಲಿ ಅಮೆರಿಕ ಯಶಸ್ವಿಯಾಗುತ್ತಾ ಬಂದಿತು. ರಷ್ಯಾವು ಆರ್ಥಿಕ ಬಿಕ್ಕಟ್ಟಿಗೆ ಮತ್ತು ಇತರ ಆಂತರಿಕ ಸಂಕಷ್ಟಗಳಿಗೆ ಒಳಗಾಯಿತು. ಶಸ್ತ್ರಾಸ್ತ್ರ ಪೈಪೋಟಿ ಏಕಮುಖವಾಗಿ ಅಮೆರಿಕ ಜಗತ್ತಿನ ಏಕಮಾತ್ರ ಶಕ್ತಿಯುತ ರಾಷ್ಟ್ರವಾಗಿ ತಲೆಯೆತ್ತಿತು.

ಅಮೆರಿಕಾದ ಉದಯ

ವಿಶ್ವದಾದ್ಯಂತ 1927ರಲ್ಲಿ ಉಂಟಾದ ಆರ್ಥಿಕ ಮಹಾಕುಸಿತದಿಂದಾಗಿ ಅಮೆರಿಕಾದಲ್ಲಿನ ರಾಜಕೀಯದಲ್ಲಿ ಸಾಕಷ್ಟು ಬದಲಾವಣೆಯನ್ನು ತಂದಿತ್ತು. ಮೊದಲನೆಯ ಮಹಾಯುದ್ಧದಲ್ಲಿ ಅಮೆರಿಕಾ ಮಿತ್ರರಾಷ್ಟ್ರಗಳಿಗೆ ಸಾಕಷ್ಟು ಆರ್ಥಿಕ ಮತ್ತು ಸೈನಿಕ ಸಹಾಯ ನೀಡಿ ಮಿತ್ರ ರಾಷ್ಟ್ರಗಳ ಗೆಲುವಿಗೆ ಕಾರಣವಾಗಿತ್ತು. 1929 ರಲ್ಲಿ ಅಮೆರಿಕಾದ ಆರ್ಥಿಕ ಬೆಳವಣಿಗೆಯು ಕುಂಠಿತಗೊಂಡಿತು. ಇದರ ಪರಿಣಾಮವಾಗಿ ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳಲ್ಲಿ ಉತ್ಪಾದನೆ ಕುಸಿಯಿತು. ಅಲ್ಲದೇ ಗಣಿಗಾರಿಕೆ, ಹಡಗು ಕಟ್ಟುವಿಕೆ, ಗ್ರಾಹಕರ ವಸ್ತುಗಳಾದ ಆಟೋಮೊಬೈಲ್ ಮತ್ತು ಗೃಹಬಳಕೆ ವಸ್ತುಗಳ ಉತ್ಪಾದನೆಗೆ ಹಿನ್ನೆಡೆ ಉಂಟಾಯಿತು. ಆರ್ಥಿಕ ಕುಸಿತ ರಾಜಕೀಯ ಬದಲಾವಣೆಗೆ ಸಾಕ್ಷಿಯಾಯಿತು.

ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಜಪಾನ್ ಅಮೆರಿಕಾದ ನೌಕಾನೆಲೆ ಪರ್ಲ್‌ಹಾರ್ಬರ್ ಮೇಲೆ ದಾಳಿ ನಡೆಸಿತು. ಇದರಿಂದಾಗಿ ಅಮೆರಿಕಾ ಮಿತ್ರರಾಷ್ಟ್ರಗಳ ಪರವಾಗಿ ಯುದ್ಧ ಪ್ರವೇಶಿಸುವಂತಾಯಿತು. ಜನತೆಯನ್ನು ಸೈನ್ಯವಾಗಿ ರೂಸ್‌ವೆಲ್ಟ್‌ನು ಯುದ್ಧಕ್ಕೆ ಸನ್ನದ್ಧಗೊಳಿಸಿದನು. ಮಹಿಳೆಯರಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯಲು ಪ್ರೋತ್ಸಾಹಿಸಿದನು. ಅಮೆರಿಕಾ ಯುದ್ಧದಲ್ಲಿ ಜಯಗಳಿಸಿತು. ದ್ವಿತೀಯ ಮಹಾಯುದ್ಧ ನಡೆಯುತ್ತಿರುವಾಗಲೇ ವಿಶ್ವಸಂಸ್ಥೆಯ ಸ್ಥಾಪನೆಗೆ ಸಹಕರಿಸಿ, ಅದರ ಸ್ಥಾಪನೆಗೂ ಕಾರಣವಾಯಿತು. 1945ರ ನಂತರ ಅಮೆರಿಕಾ ಜಗತ್ತಿನ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಿದೆ. ಶೀತಲ ಸಮರದ ನಂತರದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನವು ಏಕಮೇವ ಬಲಿಷ್ಠ ರಾಷ್ಟ್ರವಾಗಿ ಬೆಳೆದು ನಿಂತಿವೆ.

ಅಭ್ಯಾಸಗಳು

I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ಭರ್ತಿ ಮಾಡಿರಿ.

1. ರಷ್ಯಾದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ಸ್ಥಾಪಿಸಿದವರು ________
2. ಮೊದಲನೇ ಮಹಾಯುದ್ಧವು ________ ರಲ್ಲಿ ಅಂತ್ಯಗೊಂಡಿತು.
3. ವರ್ಸೈಲ್ಸ್ ಒಪ್ಪಂದವು ________ ರಲ್ಲಿ ಏರ್ಪಟ್ಟಿತು.
4. ಫ್ಯಾಸಿಸ್ಟ್ ಸರ್ವಾಧಿಕಾರಿಯಾಗಿದ್ದವನು ________ .
5. ಜರ್ಮನಿಯಲ್ಲಿ ನಾಜಿ ಪಕ್ಷದ ನಾಯಕನಾಗಿದ್ದವನು ________ .
6. ಎರಡನೆಯ ಮಹಾಯುದ್ಧವು ________ ರಲ್ಲಿ ಆರಂಭವಾಯಿತು.
7. ಅಮೆರಿಕಾದ ನೌಕಾ ಕೇಂದ್ರವಾಗಿದ್ದ ________ ಮೇಲೆ ಜಪಾನ್ ದಾಳಿ ಮಾಡಿತು.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ :

1. ರಷ್ಯಾದ ಕ್ರಾಂತಿಯಲ್ಲಿ ಲೆನಿನ್‌ನ ಪಾತ್ರವನ್ನು ವಿವರಿಸಿ.
2. ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣಾ ಕ್ರಮಗಳು ಯಾವುವು ?
3. ಪ್ರಥಮ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವನ್ನು ವಿವರಿಸಿ.
4. 'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು' ಹೇಗೆ ? ವಿವರಿಸಿ.
5. ಎರಡನೆಯ ಮಹಾಯುದ್ಧಕ್ಕೆ ಕಾರಣಗಳಾವುವು ?
6. ಶೀತಲ ಸಮರ ಎಂದರೇನು ?
7. ಚೀನಾ ಕ್ರಾಂತಿಯ ಪರಿಣಾಮಗಳಾವುವು ?
8. ಅಮೆರಿಕಾವು ಆರ್ಥಿಕ ಮಹಾಕುಸಿತದಿಂದ ಹೇಗೆ ಹೊರ ಬಂದಿತು ವಿವರಿಸಿ.

III. ಚಟುವಟಿಕೆ :

1. ವೃತ್ತ ಪತ್ರಿಕೆ ಮತ್ತು ಅಂತರ್ಜಾಲದ ನೆರವಿನಿಂದ ಪ್ರಪಂಚದ ದೇಶಗಳಲ್ಲಿ ಇತ್ತೀಚೆಗೆ ನಡೆದ ಸ್ವಾತಂತ್ರ್ಯ ಹೋರಾಟಗಳ ಬಗ್ಗೆ ಮಾಹಿತಿ ಸಂಗ್ರಹಿಸಿ.
2. ಅಂತರ್ಜಾಲ ಮತ್ತು ವೃತ್ತಪತ್ರಿಕೆಗಳ ನೆರವಿನಿಂದ ಜಾಗತಿಕ ಮಟ್ಟದಲ್ಲಿ ಶಾಂತಿ ಸ್ಥಾಪನೆಗಾಗಿ ಭಾರತವು ಅನ್ಯರಾಷ್ಟ್ರಗಳೊಂದಿಗೆ ನಡೆಸುತ್ತಿರುವ ಪ್ರಯತ್ನಗಳ ಬಗ್ಗೆ ಪ್ರಬಂಧ ಬರೆಯಿರಿ.

IV. ಯೋಜನೆ :

1. ಪ್ರಪಂಚದ ಭೂಪಟ ಬರೆದು ಮಿತ್ರಬಣ ಮತ್ತು ಶತ್ರುಬಣದ ದೇಶಗಳನ್ನು ಗುರುತಿಸಿ ಬಣ್ಣ ಹಚ್ಚಿರಿ.
2. ವಿಶ್ವದ ವಿವಿಧ ರಾಷ್ಟ್ರಗಳ ರಾಷ್ಟ್ರ ಧ್ವಜಗಳ ಚಿತ್ರವನ್ನು ಸಂಗ್ರಹಿಸಿರಿ.

ರಾಜ್ಯಶಾಸ್ತ್ರ

ಅಧ್ಯಾಯ – 1

ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಕೋಮುವಾದ*
- *ಮಹಿಳೆಯರ ಸ್ಥಾನಮಾನ*
- *ಜನಸಂಖ್ಯೆ ಹೆಚ್ಚಳ*
- *ಲಾಭ ಬಡುಕತನ*
- *ಭ್ರಷ್ಟಾಚಾರ*
- *ಅನಕ್ಷರತೆ*
- *ಆರ್ಥಿಕ ಅಸಮಾನತೆ*
- *ಬಡತನ*
- *ಪ್ರಾದೇಶಿಕವಾದ*
- *ಕಳ್ಳ ಸಾಗಾಣಿಕೆ*

ನಾವು 1947ರಿಂದ ಹಲವಾರು ಆಂತರಿಕ ಹಾಗೂ ಬಾಹ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಆ ಸಮಸ್ಯೆಗಳನ್ನು ಸರಿಯಾದ ಯೋಜನೆ ಹಾಗೂ ಉತ್ತಮ ಆಡಳಿತದ ಮೂಲಕ ಪರಿಹರಿಸಬೇಕಾಗಿದೆ. ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಮಟ್ಟದ ಸರಕಾರಗಳಿಗೆ, ಈ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಜನತೆಯ ಸಹಕಾರವೂ ಅತ್ಯಗತ್ಯ.

ಹಾಗಾಗಿ ನಮ್ಮ ದೇಶ ಎದುರಿಸುತ್ತಿರುವ ಸಮಸ್ಯೆಗಳು ಯಾವುವು ಎಂದು ತಿಳಿಯಬೇಕಾದುದು ನಮ್ಮ ಕರ್ತವ್ಯವಲ್ಲವೇ? ಹೌದು, ನಾವು ಈ ಎಲ್ಲಾ ರಾಷ್ಟ್ರೀಯ ವಿಷಯಗಳ ಬಗೆಗೆ ತಿಳಿಯಬೇಕು ಹಾಗೂ ಅವುಗಳಿಗೆ ಸರಿಯಾದ ಪರಿಹಾರಗಳನ್ನೂ ಕಂಡು ಹಿಡಿಯಬೇಕು. ಇವುಗಳಲ್ಲಿ ಬಹುತೇಕ ಮಾನವ ನಿರ್ಮಿತ ಸಮಸ್ಯೆಗಳು ಹಾಗೂ ರಾಷ್ಟ್ರೀಯ ದುರಂತಗಳು. ಹಾಗಾಗಿ ನಾವು ಅವುಗಳಿಗೆ ಸುಯೋಗ್ಯ ಎನಿಸುವ ಮಾನವೀಯ ಪರಿಹಾರಗಳನ್ನು ಕಂಡುಕೊಳ್ಳಬೇಕು. ಉತ್ತಮ ಶಾಸನಾತ್ಮಕ, ಸಾಮಾಜಿಕ ಸುಧಾರಣೆಗಳು, ದಕ್ಷ ಆಡಳಿತ, ತ್ವರಿತ ಹಾಗೂ ಪಕ್ಷಪಾತರಹಿತ ನ್ಯಾಯಾಂಗ ವ್ಯವಸ್ಥೆ ಹಾಗೂ ಜನತೆಯ ಸಹಕಾರಗಳಿಂದ ಸಮಸ್ಯೆಗಳನ್ನು ನಿಗ್ರಹಿಸುವ ಪ್ರಯತ್ನ ನಡೆಯಬೇಕಿದೆ. ಅಂತಹ ಸಮಸ್ಯೆಗಳ ಬಗ್ಗೆ ತಿಳಿಯೋಣ.

1. **ಕೋಮುವಾದ :** ಕೋಮುವಾದ ಅಥವಾ ಮತೀಯವಾದ ನಮ್ಮ ಭಾರತೀಯ ಸಮಾಜದ ಪ್ರಮುಖ ಸಮಸ್ಯೆಯಾಗಿದೆ. ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳಸಿಕೊಳ್ಳುವುದನ್ನು ಕೋಮುವಾದ ಅಥವಾ ಮತೀಯವಾದ ಎಂದು ಕರೆಯುತ್ತೇವೆ. ಇದು ಸಾಮಾಜಿಕವಾಗಿ ಭಿನ್ನತೆ, ಪರಸ್ಪರ ಅಪನಂಬಿಕೆ ಹಾಗೂ ಭಯದ ವಾತಾರವಣವನ್ನು ಸೃಷ್ಟಿಸುತ್ತದೆ. ಕೋಮುವಾದವು ಸಮಾಜದಲ್ಲಿ ಗುಂಪುಗಾರಿಕೆ, ಆರ್ಥಿಕ ವೈಷಮ್ಯ ಮತ್ತು ರಾಜಕೀಯ ಪೈಪೋಟಿಯಲ್ಲಿ ಪ್ರಕಟವಾಗುತ್ತದೆ. ಭಾರತದ ಮಟ್ಟಿಗೆ ಈ ಕೋಮುವಾದ ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಯನ್ನು ಭಂಗಪಡಿಸುವ, ಅಪಾಯ ತಂದೊಡ್ಡುವ ಶಕ್ತಿಯಾಗಿದೆ. ಅದು ಸಮಾಜದ ನೆಮ್ಮದಿಯನ್ನು ಕೆಡಿಸುವುದಲ್ಲದೆ ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶಕ್ಕೂ ಕಾರಣವಾಗುತ್ತದೆ. ಈ ಮತೀಯವಾದ ಗುಂಪುಗಳ ಮಧ್ಯೆ ಪರಸ್ಪರ ದೋಷಾರೋಪಣೆ, ದೈಹಿಕ ಹಲ್ಲೆ ಮುಂತಾದ ಅನಗತ್ಯ ತೊಂದರೆಗಳಿಗೂ ಕಾರಣವಾಗುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ಒಡೆದು ಆಳುವ ನೀತಿಯಿಂದಾಗಿ ಮತೀಯವಾದವು ಮತೀಯ ಗುಂಪುಗಳ ಹಿತಾಸಕ್ತಿಯನ್ನು ರಾಷ್ಟ್ರೀಯ ಹಿತಾಸಕ್ತಿಗಿಂತಲೂ ಹೆಚ್ಚಿನದು ಎಂದು ಪರಿಗಣಿಸುತ್ತದೆ. ದೇಶದಲ್ಲಿ ಮತೀಯತೆಗೆ ಪೂರಕವಾಗಿ ತಮ್ಮ ತಮ್ಮ ಹಿತಾಸಕ್ತಿಗಳನ್ನು ವೃದ್ಧಿಸುವ ಪ್ರಯತ್ನಗಳನ್ನು ಮತೀಯ ಶಕ್ತಿಗಳು ಮಾಡುತ್ತವೆ. ತಮ್ಮ ತಮ್ಮ ಧರ್ಮಗಳನ್ನು ಪ್ರಚಾರ ಪಡಿಸುವ, ಪರಧರ್ಮಗಳನ್ನು ಬೇರೆ ರೀತಿಯಿಂದ ನೋಡುವಂತಹ ಸಂದರ್ಭಗಳು ಉಂಟಾಗುತ್ತವೆ. ಇದರಿಂದಾಗಿ ದೇಶದಲ್ಲಿನ ಏಕತೆಗೆ ದಕ್ಕೆಯಾಗುವಂತಹ ಸಂದರ್ಭಗಳು ಬರುತ್ತವೆ. ದೇಶವು ಆಂತರಿಕವಾದ ಈ ಸಮಸ್ಯೆಯನ್ನು ನಿವಾರಿಸಲು ಹೆಚ್ಚಿನ ಶ್ರಮ ಹಾಕಬೇಕಾಗುತ್ತದೆ.

ಕೋಮುವಾದವನ್ನು ನಿಯಂತ್ರಿಸಲು ಸಾಕಷ್ಟು ಮುನ್ನೆಚ್ಚರಿಕೆ ಅಗತ್ಯ. ಏಕರೂಪ ನಾಗರಿಕ ಸಂಹಿತೆ, ಎಲ್ಲಾ ನಾಗರಿಕರನ್ನು ಸಮಾನ ದೃಷ್ಟಿಯಿಂದ ಕಾಣುವಿಕೆ, ಜಾತ್ಯತೀತ ಮನೋಭಾವಕ್ಕೆ ಸಾಮಾಜಿಕ ಜೀವನದ ಎಲ್ಲಾ ರಂಗಗಳಲ್ಲೂ ಪ್ರಾಶಸ್ತ್ಯ, ಸಂಕುಚಿತ ವಿಭಾಗೀಯ ಚಿಂತನೆಗಳಿಂದ ಮೇಲುಸ್ತರದ ರಾಷ್ಟ್ರೀಯ ಚಿಂತನೆಗೆ ಹೆಚ್ಚು ಒತ್ತು– ಇವೆಲ್ಲಾ ಕೋಮುವಾದವನ್ನು ಹಿಮ್ಮೆಟ್ಟಿಸುವ ಉಪಾಯಗಳು. 'ಮತ–ಬ್ಯಾಂಕ್' ಧೋರಣೆಗಳು, ಅತಿ ಓಲೈಕೆಯ ವಿಧಾನಗಳು ಇತ್ಯಾದಿ, ದೇಶದ ಏಕತೆ ಹಾಗೂ ಸಮಗ್ರತೆಗೆ ಅಪಾಯ ತಂದೊಡ್ಡಬಹುದು. ಸಮಾಜವನ್ನು ಧರ್ಮದ ತಳಹದಿಯಲ್ಲಿ ವಿಭಜಿಸುವ ಹಾಗೂ ಸಾಮಾಜಿಕ ಹಾಗೂ ಆರ್ಥಿಕ ತಾರತಮ್ಯ ಧೋರಣೆ ಮತೀಯ ಸಾಮರಸ್ಯದಲ್ಲಿ ಬಿರುಕು ಹೆಚ್ಚಿಸಬಹುದು. ಅದರ ಬದಲಿಗೆ ನಮ್ಮ ಭಾರತದ ಎಲ್ಲಾ ಮತ ಸಂಪ್ರದಾಯಗಳು ಜನರಲ್ಲಿ ಸಾಮಾನ್ಯ ಹಾಗೂ ಆರೋಗ್ಯಕರ ರಾಷ್ಟ್ರೀಯ ಚಿಂತನೆಗಳನ್ನು ಬೆಳೆಸಲು ಯತ್ನಿಸಬೇಕು. ಮತೀಯ ಮೂಲಭೂತವಾದ ರಾಷ್ಟ್ರೀಯ ಹಿತಾಸಕ್ತಿಗೆ ಮತ್ತು ರಾಷ್ಟ್ರಾಭಿಮಾನಕ್ಕೆ ಧಕ್ಕೆ ಆಗದಂತೆ ತಡೆಗಟ್ಟಬೇಕು. ಶಿಕ್ಷಣದಲ್ಲಿ ಜಾತ್ಯತೀತ ತತ್ವವನ್ನು ಅಳವಡಿಸಿ ಅರಿವು ಮೂಡಿಸಬೇಕಿದೆ. ಸಾರ್ವಜನಿಕ ಎಚ್ಚರ, ರಾಜಕೀಯ ಅಚಲ ನಿರ್ಧಾರ, ಆಡಳಿತಾತ್ಮಕ ಸಮತೋಲನ, ಕ್ರಮಬದ್ಧ ಕಾನೂನು ವ್ಯವಸ್ಥೆ, ಸದೃಢ ರಾಷ್ಟ್ರೀಯ ಮನೋಭಾವ, ಆರೋಗ್ಯಕರ ಪೂರಕ ಸುದ್ಧಿ ಮಾಧ್ಯಮ – ಇವೆಲ್ಲದರ ಸಮ್ಮಿಳಿತದೊಂದಿಗೆ ಕೋಮುವಾದವನ್ನು ನಿಯಂತ್ರಿಸಬಹುದು.

2. **ಪ್ರಾದೇಶಿಕವಾದ** : ಒಂದು ನಿರ್ದಿಷ್ಟ ಜನಸಮುದಾಯ ತಾವು ವಾಸಿಸುವ ಪ್ರದೇಶವನ್ನೇ ಅತ್ಯಂತ ಗಾಢವಾಗಿ ಪ್ರೀತಿಸಿ, ಕೇವಲ ಆ ಭಾಗದ ಬಗ್ಗೆಯೇ ಅತಿಯಾದ ಅಭಿಮಾನವನ್ನು ಬೆಳೆಸಿಕೊಂಡರೆ ಅದನ್ನು ಪ್ರಾದೇಶಿಕವಾದ ಎಂದು ಕರೆಯಬಹುದು. ಭಾರತದಂತಹ ವಿಶಾಲ ರಾಷ್ಟ್ರ ಸಹಜವಾಗಿ ಹಲವಾರು ಪ್ರಾದೇಶಿಕ ವಿಭಿನ್ನತೆಯನ್ನು ಹೊಂದಿದ ದೇಶ. ಒಂದು ನಿರ್ದಿಷ್ಟ ಹಂತದವರೆಗೆ ಈ ಪ್ರಾದೇಶಿಕವಾದ ಸಹನೆಗೆ ಯೋಗ್ಯ ಎನಿಸುತ್ತದೆ. ತಮ್ಮದೇ ಪ್ರದೇಶದ ಸರ್ವತೋಮುಖ ಬೆಳವಣಿಗೆಗೆ ಪ್ರಯತ್ನಿಸಲು ಈ ಭಾವನೆ ಪ್ರೇರಣೆ ನೀಡುತ್ತದೆ. ಆದರೆ ಈ ಪ್ರಾದೇಶಿಕ ಮನೋಭಾವ ತೀರಾ ಹೆಚ್ಚು ಎನಿಸಿದರೆ ಅದು ರಾಷ್ಟ್ರದ ಏಕತೆ ಹಾಗೂ ಹಿತಾಸಕ್ತಿಗಳಿಗೆ ಧಕ್ಕೆ ಒದಗಿಸುತ್ತದೆ. ಆದುದರಿಂದ ಆಯಾಯ ಪ್ರದೇಶದ ಜನಸಮುದಾಯ ತಮ್ಮದೇ ಪ್ರಾದೇಶಿಕ ಮನೋಭಾವ ಹೊಂದುವ ಜೊತೆಜೊತೆಗೇ ಸಮಗ್ರ ದೇಶದ ಪ್ರಗತಿಯ ಬಗೆಗೂ ಚಿಂತನೆ ಹರಿಸುವಿಕೆ ಅತ್ಯಗತ್ಯ.

ಆಯಾಯ ಪ್ರದೇಶಗಳ ಚಾರಿತ್ರಿಕ ಹಿನ್ನೆಲೆ, ಸಾಮಾಜಿಕ ಕಟ್ಟುಪಾಡುಗಳು, ಆರ್ಥಿಕ ವಿಚಾರಗಳು, ಸಾಂಸ್ಕೃತಿಕ ವಿಭಿನ್ನತೆಗಳು ಹಾಗೂ ಭೌಗೋಳಿಕ ಪರಿಸರ–ಅಲ್ಲಿನ ಜನ ಸಮುದಾಯದಲ್ಲಿ ಪ್ರಾದೇಶಿಕ ವಾದವನ್ನು ಸಹಜವಾಗಿ ಬೆಳೆಸುತ್ತದೆ. ಅತಿಯಾದ ಭಾಷಾಭಿಮಾನವೂ ರಾಷ್ಟ್ರೀಯವಾದದ ವಿರುದ್ಧ ಸಂಕುಚಿತ ಮನೋಭಾವವನ್ನು ಬೆಳೆಸುತ್ತದೆ. ಪ್ರಾದೇಶಿಕವಾದವನ್ನು ವೈಭವೀಕರಿಸುವುದರಿಂದ ದೇಶದ ಏಕತೆಗೆ ಧಕ್ಕೆ ಉಂಟಾಗುತ್ತದೆ. ಇತ್ತೀಚೆಗೆ ಆಂದ್ರಪ್ರದೇಶದಲ್ಲಿನ ತೆಲಂಗಾಣದ ಭಾಗದ ಪ್ರಾದೇಶಿಕವಾದ

ಹೋರಾಟವನ್ನು ಗಮನಿಸಬಹುದು. ದೇಶದ ಇನ್ನಿತರ ಭಾಗಗಳಲ್ಲಿ ನಡೆಯುತ್ತಿರುವ ಪ್ರಾದೇಶಿಕವಾದದ ಹೋರಾಟಗಳು ಕೂಡಾ ದೇಶದ ಅಭಿವೃದ್ಧಿ ತೊಡಕಾಗುವ ಸಾಧ್ಯತೆಗಳಿವೆ.

ಇಂತಹ ಸಂಕುಚಿತ ಪ್ರಾದೇಶಿಕವಾದವನ್ನು ದೂರೀಕರಿಸಲು ನಮ್ಮ ಭಾರತ ಸಂವಿಧಾನವೇ ಹಲವಾರು ಮಾರ್ಗಗಳನ್ನು ಸೂಚಿಸಿದೆ. ಏಕ ಪೌರತ್ವವನ್ನು ಭಾರತದಲ್ಲಿ ನೆಲೆಗೊಳಿಸುವ ಮೂಲಕ ನಮ್ಮ ಸಂವಿಧಾನ ರಾಷ್ಟ್ರದ ಸಮಗ್ರತೆ ಹಾಗೂ ಏಕತೆಯನ್ನು ಎತ್ತಿ ಹಿಡಿಯುತ್ತದೆ. ಆದರೆ ಅದರ ಜೊತೆಗೆ ಸಂಯುಕ್ತ ರಾಜ್ಯ ಪದ್ಧತಿಯ ಅಂಶಗಳನ್ನು ಅಳವಡಿಸಿ ಪ್ರಾದೇಶಿಕ ಬೆಳವಣಿಗೆಗೂ ಸಾಕಷ್ಟು ಅವಕಾಶ ಕಲ್ಪಿಸಿಕೊಟ್ಟಿದೆ. ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿಯೇ 'ಭಾರತದ ಪ್ರಜೆಗಳಾದ ನಾವು.....' ಎಂಬ ಸ್ಪಷ್ಟ ಒಕ್ಕಣೆಯು ದೇಶದ ರಾಷ್ಟ್ರೀಯತೆಯನ್ನು ನೇರವಾಗಿ ಬಿಂಬಿಸುತ್ತದೆ. 1956ರ ಭಾಷಾವಾರು ಪ್ರಾಂತ್ಯಗಳ ರಚನೆಯು ಈ ದೇಶದ ಎಲ್ಲಾ ರಾಜ್ಯಗಳ ಪ್ರಗತಿಗೆ ಪೂರಕವಾಗಬೇಕೆ ವಿನಹಾ ರಾಜ್ಯಗಳು ತಮ್ಮ ತಮ್ಮೊಳಗೆ ಪರಸ್ಪರ ಕಚ್ಚಾಡಲು ಆಸ್ಪದ ನೀಡಬಾರದು. ಆದರೆ ತೀವ್ರ ಪ್ರಾದೇಶಿಕವಾದಕ್ಕೆ ಪುಷ್ಠಿ ದೊರೆತರೆ ಆಗ, ಅಂತರರಾಜ್ಯ ಗಡಿ ಸಮಸ್ಯೆ, ಅಂತರರಾಜ್ಯ ನದೀ ನೀರಿನ ಸಮಸ್ಯೆ ಮುಂತಾದವುಗಳು ತಲೆದೋರಬಹುದು. ಇಂತಹ ಸಂಕುಚಿತ ಪರಿಧಿಯ ಪ್ರಾದೇಶಿಕವಾದ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಹಾನಿ ಉಂಟು ಮಾಡುತ್ತದೆ. ನಮ್ಮ ಸಂವಿಧಾನ ಕರ್ತೃಗಳು ವ್ಯವಸ್ಥೆಯನ್ನು ರೂಪಿಸಿದ್ದು, ಅರೆ ಸಂಯುಕ್ತ ರಾಜ್ಯಗಳಿಗೆ ಸ್ವಾಯತ್ತತೆ ನೀಡಿವೆ. ಆದರೂ ಕೇಂದ್ರ ಸರ್ಕಾರವು ರಾಜ್ಯಗಳ ಚಟುವಟಿಕೆಗಳನ್ನು ದೇಶದ ಸಮಗ್ರತೆಯ ದೃಷ್ಟಿಯಿಂದ ಸಮನ್ವಯಗೊಳಿಸುತ್ತದೆ. ಪ್ರಾದೇಶಿಕವಾದವು ರಾಜ್ಯಗಳಲ್ಲಿಯೂ ಇರುವುದನ್ನು ಗಮನಿಸಬಹುದಾಗಿದೆ. ನಮ್ಮ ರಾಜ್ಯದಲ್ಲಿಯೇ ಪ್ರಾಂತೀಯತೆಯಲ್ಲಿನ ಸಮತೋಲನ ನಿವಾರಣೆಗಾಗಿ ವಿಶೇಷ ಆದ್ಯತೆ ನೀಡಿದೆ. ಇದಕ್ಕಾಗಿ ಡಾ. ಡಿ.ಎಂ.ನಂಜುಂಡಪ್ಪ ಸಮಿತಿ, ಮಲೆನಾಡು ಅಭಿವೃದ್ಧಿ ಸಮಿತಿ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಮಿತಿಗಳನ್ನು ರಚಿಸುವ ಮೂಲಕ ಪ್ರಾದೇಶಿಕ ಅಸಮತೋಲನದ ನಿವಾರಣೆಗಾಗಿ ಪ್ರಯತ್ನಿಸಿದೆ.

ಭಾರತ ಸರ್ಕಾರವು ಕೂಡಾ ಈಶಾನ್ಯರಾಜ್ಯಗಳ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮವನ್ನು ರೂಪಿಸುವ ಮೂಲಕ ಪ್ರಾದೇಶಿಕವಾದನ್ನು ತಡೆಗಟ್ಟಲು ಪ್ರಯತ್ನಿಸುತ್ತಿದೆ.

3. **ಅನಕ್ಷರತೆ :** ಅನಕ್ಷರತೆಯು ಭಾರತದಲ್ಲಿ ಒಂದು ಮುಖ್ಯ ಸಮಸ್ಯೆಯಾಗಿದೆ. ದೇಶದಲ್ಲಿ ಇನ್ನೂ ಪೂರ್ಣಪ್ರಮಾಣದ ಸಾಕ್ಷರತೆಯನ್ನು ಸಾಧಿಸಬೇಕಾಗಿದೆ. ನಮ್ಮಲ್ಲಿನ ಅನಕ್ಷರತೆಗೆ ಬಡತನ, ವಲಸೆ ಹೋಗುವಿಕೆ, ಮಕ್ಕಳ ದುಡಿಮೆ, ಬಾಲ್ಯವಿವಾಹ, ಚಿಕ್ಕ ಮಕ್ಕಳ ಲಾಲನೆ–ಪಾಲನೆಗೆ ಹಿರಿಯ ಮಕ್ಕಳನ್ನು ಬಳಸಿಕೊಳ್ಳುವುದು, ಶಿಕ್ಷಣ ಕೊಡಿಸಬೇಕೆಂಬ ಆಸಕ್ತಿಯ ಕೊರತೆ ಮೊದಲಾದ ಕಾರಣಗಳನ್ನು ಗುರುತಿಸಬಹುದಾಗಿದೆ. ದೇಶದಲ್ಲಿನ ಅಭಿವೃದ್ಧಿಗೆ ಶಿಕ್ಷಣವು ಪ್ರಮುಖವಾದ ಅಂಶವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರವರ ಜವಾಬ್ದಾರಿ ಮತ್ತು ಪಾತ್ರವನ್ನು ಪ್ರತಿಯೊಬ್ಬರೂ ತಿಳಿಯಬೇಕಿದೆ. ಆದ್ದರಿಂದ ಅನಕ್ಷರತೆಯಂತಹ ಸಮಸ್ಯೆಯನ್ನು ಹೋಗಲಾಡಿಸಬೇಕಾಗಿದೆ.

> ***ನಿಮಗಿದು ತಿಳಿದಿರಲಿ :***
>
> *"ಪ್ರಜಾಪ್ರಭುತ್ವ ಮಾತ್ರ ಎಲ್ಲಾ ವ್ಯಕ್ತಿಗಳಲ್ಲಿರುವ ಅಸಮಾನ ಕೌಶಲ್ಯಗಳ ಸಮಾನ ಬೆಳವಣಿಗೆಗೆ ಅವಕಾಶ ನೀಡುತ್ತದೆ." ಡಾ.ಎಸ್.ರಾಧಾಕೃಷ್ಣನ್.*
>
> *[ವಿಶ್ವಸಂಸ್ಥೆಯ 2015ರ ಮಿಲೇನಿಯಮ್ ಘೋಷಣೆ– "ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಹಾಗೂ ಶಿಕ್ಷಣದಲ್ಲಿ ಲಿಂಗ ಸಮಾನತೆ".*

ಸ್ವಾತಂತ್ರ್ಯ ಪಡೆದ ಸಮಯದಲ್ಲಿ ಸುಶಿಕ್ಷಿತರ ಪ್ರಮಾಣ ಕೇವಲ ಶೇ 12 ರಷ್ಟು ಇತ್ತು. ಇದು 2001ರಲ್ಲಿ ಶೇ 66ಕ್ಕೆ ಏರಿತು. 2011ರಲ್ಲಿ ಸಾಕ್ಷರತೆಯ ಪ್ರಮಾಣವು ಶೇ 74 ಆಗಿರುತ್ತದೆ. ಆದರೂ ಇನ್ನೂ ಶೇ 26 ರಷ್ಟು ಜನರು ಅನಕ್ಷರಸ್ಥರಾಗಿರುತ್ತಾರೆ. ಆದ್ದರಿಂದಾಗಿ ಸರ್ಕಾರವು ಅನಕ್ಷರತೆಯ

ಸಮಸ್ಯೆಯನ್ನು ಹೋಗಲಾಡಿಸಲು ಹಲವಾರು ಯೋಜಿತ ಕ್ರಮಗಳನ್ನು ಕೈಗೊಂಡಿದೆ. 2001 ರಿಂದ ಇಡೀ ದೇಶಾದ್ಯಂತ 6 ರಿಂದ 14 ವರ್ಷದ ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆಗಾಗಿ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಇದರಲ್ಲಿ ವಿಕಲ ಚೇತನರ ಶಿಕ್ಷಣ ಮತ್ತು ಮಹಿಳಾ ಶಿಕ್ಷಣ ಹಾಗೂ ಮಹಿಳಾ ಜಾಗೃತಿಗೆ ಕೂಡ ಆದ್ಯತೆ ನೀಡಲಾಗಿದೆ. ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡಲು ಭಾರತ ಸರ್ಕಾರವು 1988 ರಲ್ಲಿ 'ರಾಷ್ಟ್ರೀಯ ಸಾಕ್ಷರತಾ ಮಿಷನ್' ಸ್ಥಾಪಿಸಿದೆ. 'ಸಾಕ್ಷರ ಭಾರತ' ಎಂಬ ಕಾರ್ಯಕ್ರಮದ ಮೂಲಕ ಅನಕ್ಷರತೆಯನ್ನು ಹೋಗಲಾಡಿಸಲು ಕ್ರಮಕೈಗೊಂಡಿದೆ.

> ***ಚಟುವಟಿಕೆ :***
>
> *ನೀವು ಗ್ರಾಮಪಂಚಾಯ್ತಿ ಅಧ್ಯಕ್ಷರೆಂದು ಭಾವಿಸಿಕೊಂಡು ಆ ಪಂಚಾಯ್ತಿ ವ್ಯಾಪ್ತಿಯಲ್ಲಿ ಅನಕ್ಷರತೆ ನಿರ್ಮೂಲನೆಗಾಗಿ ನಿಮ್ಮ ಯೋಜನೆಯನ್ನು ಸಿದ್ಧಪಡಿಸಿ ಮಿತ್ರರೊಂದಿಗೆ ಚರ್ಚಿಸಿ.*

ಇತ್ತೀಚೆಗೆ ಸಂವಿಧಾನದ 21ನೇ ವಿಧಿಯನ್ವಯ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಗಣಿಸಿದೆ. 2009ರಲ್ಲಿ ದೇಶದಾದ್ಯಂತ ಶಿಕ್ಷಣ ಹಕ್ಕು ಕಾಯ್ದೆಯನ್ನು (RTE - 2009) ಜಾರಿಗೊಳಿಸಿದೆ. ಇದರಿಂದ 6 ರಿಂದ 14 ವರ್ಷವಯೋಮಾನದವರೆಗೆ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗಿದೆ.

> ***ನಿಮಗಿದು ತಿಳಿದಿರಲಿ :***
>
> ***ಲೋಕಾಯುಕ್ತ ಸಂಸ್ಥೆ :***
>
> *1986ರಲ್ಲಿ ಕರ್ನಾಟಕ ಲೋಕಾಯುಕ್ತ ಅಧಿನಿಯಮವನ್ನು ಜಾರಿಗೊಳಿಸಿದೆ. ಅದರಂತೆ ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು ಮುಖ್ಯಸ್ಥರಾಗಿರುತ್ತಾರೆ. ಸರ್ಕಾರದ ಕೆಲಸದಲ್ಲಿ ಭ್ರಷ್ಟಾಚಾರ, ಸಾರ್ವಜನಿಕರಿಗೆ ಅನಗತ್ಯ ವಿಳಂಬ, ಕಿರುಕುಳ ನೀಡಿದರೆ ದೂರು ಸಲ್ಲಿಸಬಹುದಾಗಿದೆ.*

4. **ಭ್ರಷ್ಟಾಚಾರ** : ಭಾರತದ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ಒಂದು ಮುಖ್ಯ ಪಿಡುಗು ಎನಿಸಿದೆ. ವಾಸ್ತವಿಕವಾಗಿ ಇದು ಸಾರ್ವತ್ರಿಕವಾಗಿ ಹಾಗೂ ಸಮಾಜದ ಎಲ್ಲಾ ಸ್ತರಗಳಲ್ಲಿಯೂ ವ್ಯಾಪಕವಾಗಿ ಹಬ್ಬಿದೆ. ಭ್ರಷ್ಟಾಚಾರ ಎಂದರೆ ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರಕ್ರಮಕ್ಕೆ ಪ್ರಚೋದನೆ ನೀಡುವಿಕೆ ಎಂದು ಅರ್ಥ. ಅದು ಸರಿಯಾದ ಮತ್ತು ನ್ಯಾಯಬದ್ಧವಾದ ಕಾರ್ಯಾಚರಣೆಯಿಂದ ಸ್ಪಷ್ಟವಾಗಿ ದೂರ ಸರಿಯುವಿಕೆಯನ್ನು ಸೂಚಿಸುತ್ತದೆ. ಸಾರ್ವಜನಿಕ ಜೀವನದ ಅಧಿಕಾರ ಹಾಗೂ ವರ್ಚಸ್ಸನ್ನು ಸ್ವಾರ್ಥ ಹಾಗೂ ತಪ್ಪು ವಿಧಾನದ ದುರ್ಬಳಕೆ ಎಂದೂ ಇದನ್ನು ವ್ಯಾಖ್ಯಾನಿಸಬಹುದು. ಎಲ್ಲಾ ವಿಧಿವಿಧಾನಗಳನ್ನು ಬದಿಗೆ ಸರಿಸಿ ಸ್ವಾರ್ಥದ ದೃಷ್ಟಿಯಿಂದ ಸ್ವಂತ ಲಾಭಕ್ಕಾಗಿ ಅಧಿಕಾರ ದುರುಪಯೋಗವನ್ನೇ ಭ್ರಷ್ಟಾಚಾರ ಎಂದು ಕರೆಯಬಹುದು. ಇದು ಸಾಂಕ್ರಾಮಿಕ ರೋಗದಂತೆ ಸಾರ್ವಜನಿಕ ಜೀವನದಲ್ಲಿ ಸರ್ವವ್ಯಾಪಿಯಾಗಿ ಹಬ್ಬುತ್ತಿದೆ.

ಭ್ರಷ್ಟಾಚಾರ ಹಲವಾರು ನಕಾರಾತ್ಮಕ ಪರಿಣಾಮವನ್ನು ಸಾರ್ವಜನಿಕವಾಗಿ ಹಾಗೂ ವ್ಯಕ್ತಿಗತವಾಗಿ ಬೀರುವಂತಹದು. ಅದು ದೇಶದ ಮೇಲೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ದುಷ್ಪರಿಣಾಮಗಳನ್ನು ಬೀರುತ್ತದೆ. ಇನ್ನೊಂದು ವಿಧದಲ್ಲಿ ನಮೂದಿಸುವುದಾದರೆ ಭ್ರಷ್ಟಾಚಾರವು ಸಮಾಜವಿರೋಧಿ ಹಾಗೂ ಆರ್ಥಿಕ ಸುವ್ಯವಸ್ಥೆಯ ವಿರೋಧಿ ಕೂಡಾ ಮಾತ್ರವಲ್ಲ, ಅದು ರಾಜಕೀಯವಾಗಿ ಅಸಮರ್ಪಕ ಹಾಗೂ ನೈತಿಕವಾಗಿ ತಪ್ಪು ಎನಿಸುವಂತಹುದು. ಮೌಲ್ಯಗಳ ಬಗೆಗಿನ ವ್ಯಕ್ತಿಗತ ಚಿಂತನೆ ಸಮಾಜ ಒಪ್ಪುವ ಅಥವಾ ಪರಿಗ್ರಹಿಸುವ ಮೌಲ್ಯಗಳು ಹಾಗೂ ಆಡಳಿತ ವ್ಯವಸ್ಥೆಯಲ್ಲಿ ಲಂಚಗುಳಿತನ, ಸ್ವಜನ ಪಕ್ಷಪಾತ, ಜಾತೀಯತೆ, ನಿಧಾನದ್ರೋಹ–ಇವೆಲ್ಲವೂ ಈ ಭ್ರಷ್ಟಾಚಾರದ ಪರಿಧಿಯೊಳಗೆ ಬರುವಂತಹ ಸಂಗತಿಗಳು. ಚುನಾವಣಾ ಸಮಯದಲ್ಲಿಯೂ ಇಂತಹ ಅನಪೇಕ್ಷಣೀಯ ಸಂಗತಿಗಳು ಸಾರ್ವಜನಿಕ ಬದುಕಿನ ಒಳಗೆ ನುಸುಳಿಕೊಳ್ಳುತ್ತವೆ.

ರಾಜಕೀಯ ಭ್ರಷ್ಟಾಚಾರವು ವ್ಯವಸ್ಥಿತ ಅಪರಾಧಗಳಿಗೂ ಎಡೆಮಾಡಿಕೊಡುತ್ತದೆ. ಅದು ಸಾರ್ವಜನಿಕ ಸೇವೆಯ ಕ್ಷೇತ್ರಗಳಲ್ಲಿ ಅಧಿಕಾರಶಾಹಿಯಲ್ಲಿ ಒದಗುವ ಲೋಪದೋಷಗಳಿಗೂ, ವಂಚನೆಗಳಿಗೂ ಅನುವು ಮಾಡಿಕೊಡುತ್ತದೆ. ತೆರಿಗೆಕಳ್ಳತನ, ಅಕ್ರಮ ದಾಸ್ತಾನು, ಕಳ್ಳಸಾಗಾಣಿಕೆ, ಆರ್ಥಿಕ ವಂಚನೆ, ಮೋಸಗಾರಿಕೆ, ವಿದೇಶೀ ವಿನಿಮಯದ ಕಾನೂನು ಉಲ್ಲಂಘನೆ, ಔದ್ಯೋಗಿಕ ವಂಚನೆ ಈ ಎಲ್ಲವೂ ಭ್ರಷ್ಟಾಚಾರದ ಜಾಲದಲ್ಲಿ ಸೇರಿಕೊಂಡಿವೆ.

ಭ್ರಷ್ಟಾಚಾರವನ್ನು ಕೇವಲ ಟೀಕಿಸಿ ಅದರೊಂದಿಗೇ ರಾಜಿಮಾಡಿಕೊಂಡು ಬದುಕುವುದರಿಂದ ಅದರ ನಿರ್ಮೂಲನ ಅಸಾಧ್ಯ. ವೈಯಕ್ತಿಕ ಹಾಗೂ ಸಾಮಾಜಿಕ ಭದ್ರ ನೈತಿಕ ತಳಹದಿಯ ಮೂಲಕವಾಗಿ ಮಾತ್ರ ವ್ಯಾಪಕವಾಗಿ ಹಬ್ಬಿನಿಂತ ಭ್ರಷ್ಟಾಚಾರವನ್ನು ತೊಲಗಿಸಬಹುದು. ಅನೇಕ ಬಾರಿ, ಮಾನವ ಸಹಜವಾದ ಸ್ವಾರ್ಥ, ಆಪತ್ತುಗಳ ನಿವಾರಣೆಯ ಲೆಕ್ಕಾಚಾರ, ವೈಯಕ್ತಿಕ ಲಾಭ ಇವೆಲ್ಲಾ ಭ್ರಷ್ಟಾಚಾರಕ್ಕೆ ಮುಂದಾಗಲು ಪ್ರೇರೇಪಿಸುತ್ತವೆ. ಕಟ್ಟುನಿಟ್ಟಾದ ಮೇಲ್ವಿಚಾರಣೆ ಇಲ್ಲದಿರುವುದು ಹಾಗೂ ದುರ್ಬಲ ಕಾನೂನು ವ್ಯವಸ್ಥೆ ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡುತ್ತದೆ. ಭ್ರಷ್ಟಾಚಾರ ನಿಗ್ರಹಕ್ಕೆ ಪ್ರಬಲ ರಾಜಕೀಯ ಇಚ್ಛಾಶಕ್ತಿ ಹಾಗೂ ಸಾರ್ವಜನಿಕ ಸಹಕಾರ ತೀರಾ ಅತ್ಯಗತ್ಯ. ಇನ್ನೊಂದು ರೀತಿಯಲ್ಲಿ ವ್ಯಾಖ್ಯಾನಿಸುವುದಾದರೆ, ಒಳ್ಳೆಯ ರಾಜಕೀಯ ನಾಯಕತ್ವ, ಉತ್ತಮ ಅಧಿಕಾರಿ ವರ್ಗ ಹಾಗೂ ರಾಜಕೀಯ ಪರಿಜ್ಞಾನ ಹಾಗೂ ಪೌರತ್ವದ ಅರಿವು ಹೊಂದಿದ ಜನತೆ ಜಂಟಿಯಾಗಿ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಬಹುದಾಗಿದೆ. ಲೋಕಪಾಲ, ಲೋಕಾಯುಕ್ತರಂತಹ ಸಂಸ್ಥೆಗಳು, ಭ್ರಷ್ಟಾಚಾರ ನಿಯಂತ್ರಣದಲ್ಲಿ ಪೂರಕ ಶಕ್ತಿ ಒದಗಿಸಬಲ್ಲವು. ಶಿಕ್ಷಣ ಸಂಸ್ಥೆಗಳು ಹಾಗೂ ಸಾಮಾಜಿಕ ನಾಯಕರುಗಳು ಕೂಡಾ ಈ ದಿಸೆಯಲ್ಲಿ ಕಾರ್ಯನಿರ್ವಹಿಸಬಹುದು. ಅತ್ಯಂತ ಕಠಿಣ ಶಿಕ್ಷಾ ವಿಧಾನ ಭ್ರಷ್ಟಾಚಾರವನ್ನು ಹತ್ತಿಕ್ಕುವಲ್ಲಿ ಎಲ್ಲಾ ಸ್ತರಗಳಲ್ಲಿಯೂ ಅತ್ಯಗತ್ಯ ಎನಿಸುತ್ತದೆ.

> ***ಚಟುವಟಿಕೆ :***
>
> *ಭಾರತದ ಪ್ರಜೆಯಾಗಿ ಭ್ರಷ್ಟಾಚಾರದಂತಹ ಪಿಡುಗನ್ನು ನಿರ್ಮೂಲನ ಮಾಡಲು ನಿಮ್ಮ ಸಲಹೆಗಳನ್ನು ಶಿಕ್ಷಕರೊಂದಿಗೆ ಚರ್ಚಿಸಿ.*

5. **ಮಹಿಳೆಯರ ಸ್ಥಾನಮಾನ :** ಸ್ವಾತಂತ್ರ್ಯಪೂರ್ವದಲ್ಲಿಯೂ ಮಹಿಳೆಯ ಸಾಧನೆಗಳನ್ನು ಗುರುತಿಸಬಹುದಾಗಿದೆ. ಝಾನ್ಸಿರಾಣಿ ಲಕ್ಷ್ಮಿಬಾಯಿ, ಕಿತ್ತೂರುರಾಣಿ ಚನ್ನಮ್ಮ, ಅನಿಬೆಸೆಂಟ್, ಕಸ್ತೂರಬಾ ಗಾಂಧಿ ಮೊದಲಾದವರನ್ನು ಸ್ಮರಿಸಬಹುದಾಗಿದೆ. ಇಂದು ಮಹಿಳೆಯರು ವೈದ್ಯಕೀಯ, ಅಧ್ಯಾಪಕ, ಇಂಜಿನಿಯರ್, ಪೈಲಟ್, ಗಗನಯಾತ್ರಿ, ಪೋಲೀಸ್, ರಾಜಕೀಯ, ರಕ್ಷಣಾಪಡೆ ಈ ರೀತಿ ಎಲ್ಲಾ ಕ್ಷೇತ್ರಗಳಲ್ಲಿನ ಕಾರ್ಯಗಳಲ್ಲಿ ತೊಡಗಿದ್ದಾರೆ. ಆದರೂ ಮಹಿಳೆಯರ ಸ್ಥಾನಮಾನ ಇನ್ನೂ ಉತ್ತಮವಾಗಬೇಕಿದೆ. ಸಾಮಾಜಿಕ ಪದ್ಧತಿಗಳು, ಬಡತನ ಮತ್ತು ಅನಕ್ಷರತೆಯಂತಹ ಕಾರಣಗಳಿಂದ ಸ್ತ್ರೀಯರ ಸ್ಥಾನಮಾನವು ಪ್ರಗತಿಯ ಪಥದಲ್ಲಿ ಹಿಂದಿರುತ್ತದೆ. ಇದು ದೇಶದ ಅಭಿವೃದ್ಧಿಗೆ ಸಮಸ್ಯೆಯಾಗಿ ಕಾಡುತ್ತದೆ.

> ***ಚರ್ಚಿಸಿ :***
>
> *'ಮಹಿಳೆಯ ಸ್ಥಾನಮಾನವನ್ನು ಪರಿಶೀಲಿಸಿ ಆ ದೇಶದ ವ್ಯವಸ್ಥೆಯನ್ನೇ ತಿಳಿಯ ಬಹುದಾಗಿದೆ'– ಪಂಡಿತ್ ಜವಹರಲಾಲ ನೆಹರೂ.*

ಮಹಿಳೆಯರ ಶಿಕ್ಷಣ ಮತ್ತು ಅಭಿವೃದ್ಧಿಯನ್ನು ಉತ್ತಮ ಪಡಿಸಲು ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಪ್ರಾರಂಭಿಸಿದೆ. ಇದರ ಮೂಲಕ ಮಹಿಳೆಯರ ಆರೋಗ್ಯ ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿನ ಸ್ಥಾನಮಾನವನ್ನು ಉತ್ತಮ ಪಡಿಸಲಾಗುತ್ತಿದೆ. ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಶಿಕ್ಷಣ, ಬಾಲ್ಯವಿವಾಹ ನಿಷೇಧಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ, ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿದೆ. ಕರ್ನಾಟಕ ಸರ್ಕಾರವು

'ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮವನ್ನು ರೂಪಿಸಿ, ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಪ್ರಯತ್ನಿಸಿದೆ. ಮಹಿಳೆಯರ ಸ್ವ–ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಮತ್ತು ಸಬ್ಸಿಡಿ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮಹಿಳಾಮಂಡಲಗಳು, ಯುವತಿ ಮಂಡಲಗಳು, ಸ್ತ್ರೀ ಶಕ್ತಿ ಸಂಘಗಳು, ಸ್ವಸಹಾಯ ಸಂಘಗಳು ಮಹಿಳಾ ಸಹಕಾರಿ ಸಂಘಗಳು ಸ್ತ್ರೀಯರ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಹಿಳಾ ಆಯೋಗಗಳನ್ನು ರಚಿಸಿದ್ದು ಮಹಿಳೆಯರ ದೂರು–ದುಮ್ಮಾನಗಳನ್ನು ಇದು ಪರಿಶೀಲಿಸಿ ನ್ಯಾಯ ಒದಗಿಸಿಕೊಡುತ್ತಿದೆ. ಶಾಸಕಾಂಗ ಮತ್ತು ಸಂಸತ್ತಿನಲ್ಲಿ ರಾಜಕೀಯದಲ್ಲಿ ಮಹಿಳಾ ಮೀಸಲಾತಿ ನೀಡುವಂತಹ ಪ್ರಯತ್ನ ನಡೆಯುತ್ತಿದೆ. ಈಗಾಗಲೇ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯನ್ನು ನೀಡಲಾಗಿದೆ. ಸರ್ಕಾರಿ ಉದ್ಯೋಗಗಳಲ್ಲಿ ಕೂಡಾ ಮಹಿಳೆಯರಿಗೆ ನಿಗದಿತ ಪ್ರಮಾಣದ ಮೀಸಲಾತಿಯನ್ನು ನೀಡಲಾಗುತ್ತದೆ.


> ***ಚಟುವಟಿಕೆ :***
> *ನಿಮ್ಮ ಸ್ಥಳೀಯ ಸಂಸ್ಥೆಯ ಮಹಿಳಾ ಸದಸ್ಯರೊಂದಿಗೆ ಮಹಿಳೆಯರ ಸ್ಥಾನ ಮಾನದ ಬಗ್ಗೆ ಸಂದರ್ಶನ ನಡೆಸಿ.*



ಇಂದಿರಾಗಾಂಧಿ
ಪ್ರಥಮ ಮಹಿಳಾ ಪ್ರಧಾನಿ



ಪ್ರತಿಭಾ ಸಿಂಗ್ ಪಾಟೀಲ್
ಪ್ರಥಮ ಮಹಿಳಾ ರಾಷ್ಟ್ರಪತಿ



ಸರೋಜಿನಿ ನಾಯ್ಡು
ಪ್ರಥಮ ಮಹಿಳಾ ರಾಜ್ಯಪಾಲರು



ಸುಚೇತಾ ಕೃಪಲಾನಿ
ಪ್ರಥಮ ಮಹಿಳಾ ಮುಖ್ಯಮಂತ್ರಿ

ಭಾರತದಲ್ಲಿ ಇಂದಿರಾಗಾಂಧಿಯವರು ಪ್ರಧಾನಮಂತ್ರಿಯಾಗಿ, ಪ್ರತಿಭಾಸಿಂಗ್ ಪಾಟೀಲ್‌ರವರು ರಾಷ್ಟ್ರಪತಿಯಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಹಲವಾರು ಮಹಿಳೆಯರು, ರಾಜ್ಯಪಾಲರಾಗಿ, ಮುಖ್ಯ ಮಂತ್ರಿಗಳಾಗಿ, ವಿದೇಶೀ ರಾಯಭಾರಿಗಳಾಗಿ ಮತ್ತು ಇನ್ನಿತರ ಉನ್ನತ ಹುದ್ದೆಗಳನ್ನು ಅಲಂಕರಿಸಿ ಪರಿಣಾಮಕಾರಿಯಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಇಂದು ಉದ್ಯೋಗಗಳಲ್ಲಿ ಕೂಡಾ ಮಹಿಳೆಯರಿಗೆ ನಿಗದಿತ ಪ್ರಮಾಣದ ಮೀಸಲಾತಿಯನ್ನು ನೀಡಲಾಗುತ್ತಿದೆ.

6. ಆರ್ಥಿಕ ಅಸಮಾನತೆ : ತೀವ್ರಗತಿಯಲ್ಲಿ ಕಂಡುಬರುವ ಆರ್ಥಿಕ ಅಸಮಾನತೆ ಭಾರತದಲ್ಲಿನ ಇನ್ನೊಂದು ಗಮನಾರ್ಹ ಸಮಸ್ಯೆ ಎನ್ನಬಹುದು. ಇದನ್ನು ಸಮಾಜದ ಶ್ರೀಮಂತರ ಹಾಗೂ ಬಡವರ ಮಧ್ಯೆ ಇರುವ ಅಂತರದ ಹೆಚ್ಚಳ ಎಂಬುದಾಗಿ ಗುರುತಿಸಬೇಕಾಗಿದೆ. ಇಂತಹ ಅಂತರವನ್ನು ಪಟ್ಟಣ ಪ್ರದೇಶಗಳಲ್ಲಿ ಅಂತೆಯೇ ಗ್ರಾಮೀಣ ಭಾಗಗಳಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ರಾಷ್ಟ್ರದ ಆರ್ಥಿಕ ಪ್ರಗತಿಯ ಉಪಯೋಗವನ್ನು ನಗರವಾಸಿಗಳಾದ ಶ್ರೀಮಂತ ವರ್ಗವೇ ಬಹುವಾಗಿ ಆಕ್ರಮಿಸುತ್ತಿರುವುದನ್ನು ಗುರುತಿಸಬೇಕಾಗಿದೆ. ಬಡಜನತೆಗೆ ಇಂತಹ ರಾಷ್ಟ್ರೀಯ ಆರ್ಥಿಕ ಪ್ರಗತಿಯ ಫಲದೊರಕುವುದು ತೀರಾ ಅಸಾಧ್ಯ ಎನಿಸುತ್ತಿದೆ. ಖಾಸಗಿ ಕ್ಷೇತ್ರದ ಅತ್ಯಂತ ಹೆಚ್ಚಿನ ಮೊತ್ತದ ವೇತನ ಶ್ರೇಣಿ, ಬಹುರಾಷ್ಟ್ರೀಯ ಕಂಪನಿಗಳ ಕಾರ್ಯಕ್ಷೇತ್ರ, ಶ್ವೇತಧಾರಿ ಅರ್ಥಾತ್ ಮೇಲುಸ್ತರದ ನೌಕರಿಗಳು, ಲಾಭ ಬಡುಕತನ, ಭ್ರಷ್ಟಾಚಾರ– ಇವೆಲ್ಲದರ ಒಟ್ಟು ಫಲಶ್ರುತಿಯಾಗಿ ಶ್ರೀಮಂತರ ಮತ್ತು ಬಡವರ ಅಂತರ ಹೆಚ್ಚಾಗುತ್ತಿದೆ.

> **ಚಟುವಟಿಕೆ :**
> *ಭಾರತ ಸರ್ಕಾರ ರೂಪಿಸಿರುವ ಉದ್ಯೋಗ ಖಾತ್ರಿ, ಯೋಜನೆಯ ಬಗ್ಗೆ ಮಾಹಿತಿ ಸಂಗ್ರಹಿಸಿ. ಇದರಿಂದಾಗುತ್ತಿರುವ ಅನುಕೂಲಗಳನ್ನು ಪಟ್ಟಿಮಾಡಿ.*

ಬಡವ–ಬಲ್ಲಿದರ ಮಧ್ಯೆ ಇರತಕ್ಕ ಆರ್ಥಿಕ ಅಂತರವನ್ನು ಕಡಿಮೆಗೊಳಿಸುವುದು ಸರಕಾರದ ಕರ್ತವ್ಯವಾಗಿದೆ. ನಾಡಿನ ಯೋಜನೆಗಳು ಈ ಅಂತರವನ್ನು ಕಡಿಮೆಮಾಡಿ, ಸರ್ವತೋಮುಖ ಅಭಿವೃದ್ಧಿಯೆಡೆಗೆ ಸಾಗಲು ಸಹಕಾರಿ ಎನಿಸಬೇಕು. ಬಡವರು ಹಾಗೂ ಹಿಂದುಳಿದ ಜನತೆ ಅಭಿವೃದ್ಧಿಯ ಪಾಲುದಾರರು ಎನಿಸಬೇಕೆ ವಿನಹಾ ಅದರ ಕಾರಣದಿಂದಾಗಿ ಇನ್ನಷ್ಟು ನಿರ್ಗತಿಕರು ಹಾಗೂ ವಸತಿಹೀನರು ಆಗಬಾರದಷ್ಟೆ. ಕೆಲವು ಬಾರಿ ಬಡರೈತರು, ಕೂಲಿಗಾರರು, ಬೃಹತ್ ಕೈಗಾರಿಕೆ, ನೀರಾವರಿ ಅಣೆಕಟ್ಟು, ಮುಂತಾದವುಗಳಿಂದಾಗಿ ತಮ್ಮ ಮನೆ ಮಠಗಳನ್ನು ಕಳೆದುಕೊಳ್ಳುತ್ತಾರೆ. ಅಂತಹ ಸಂದರ್ಭದಲ್ಲಿ ಅವರಿಗೆ ಸಮರ್ಪಕ ಪುನರ್ವಸತಿ ಹಾಗೂ ಆದಾಯ ಮೂಲಗಳನ್ನು ಒದಗಿಸುವ ಪರಿಹಾರ ಕಾರ್ಯ ಸಮರ್ಪಕವಾಗಿ ನಡೆಯಬೇಕು.

ಉತ್ತಮ ಆರ್ಥಿಕ ಸುಧಾರಣೆಗಳು, ಯೋಜನಾ ಬದ್ಧ ಹಣಕಾಸಿನ ನಿರ್ವಹಣೆ, ಒಳ್ಳೆಯ ತೆರಿಗೆ ವಿಧಾನ ಆರ್ಥಿಕ ಸಮಾನತೆಗೆ ತೀರಾ ಅತ್ಯಗತ್ಯ. ಅದೇ ರೀತಿ ಸಣ್ಣ ಹಾಗೂ ಗ್ರಾಮೀಣ ಮಟ್ಟದ ಗುಡಿ ಕೈಗಾರಿಕೆಗಳ ಅಭಿವೃದ್ಧಿ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಪೂರಕ ಎನಿಸುತ್ತದೆ. ಬೃಹತ್ ಉದ್ಯಮ, ಏಕಸ್ವಾಮ್ಯ ವಲಯಗಳನ್ನು ಸರಿಯಾಗಿ ನಿಯಂತ್ರಿಸಬೇಕು. ತನ್ಮೂಲಕ, ರಾಷ್ಟ್ರೀಯ ಆದಾಯದ ಅಸಮಾನ ಹಂಚಿಕೆಯನ್ನು ತಡೆಗಟ್ಟಬಹುದು ಹಾಗೂ ಬಂಡವಾಳಶಾಹಿತ್ವವನ್ನು ಹೋಗಲಾಡಿಸಬಹುದು. ಭೂಸುಧಾರಣೆ, ಕಾರ್ಮಿಕಪರ ಧೋರಣೆಗಳು, ಸಾಮಾಜಿಕ ಭದ್ರತೆ ಮೊದಲಾದ ಕ್ರಮಗಳಿಂದ ಆರ್ಥಿಕ ಅಸಮಾನತೆಯ ವಿರುದ್ಧ ಕಾರ್ಯವೆಸಗಬಹುದು.

7. ಜನಸಂಖ್ಯಾ ಹೆಚ್ಚಳ : ಭಾರತ ಜನಸಂಖ್ಯೆಯ ಆಧಾರದಲ್ಲಿ ವಿಶ್ವದ ಎರಡನೇ ಅತೀ ದೊಡ್ಡ ದೇಶ. ಜಗತ್ತಿನ ಒಟ್ಟು ಶೇ. 2.4ನ್ನು ಭೂಭಾಗದಲ್ಲಿ ನಾವು ಹೊಂದಿದ್ದೇವೆ. 1991–2001ರ ದಶಕದಲ್ಲಿ ನಮ್ಮ ದೇಶದ ಜನಸಂಖ್ಯೆ 84 ದಶಲಕ್ಷ ಕೋಟಿಯಿಂದ 102.7 ದಶಲಕ್ಷ ಕೋಟಿ ಸಂಖ್ಯೆಗೆ ಜಿಗಿದಿದೆ. 2011ರ ಜನಗಣತಿಯ ಪ್ರಕಾರ ಈ ಸಂಖ್ಯೆ 121 ಕೋಟಿ ದಾಟಿದೆ ಹಾಗೂ ದಶಮಾನದ ಏರಿಕೆ ಸುಮಾರು 19 ಪ್ರತಿಶತ ಎನಿಸಿದೆ. ಜನನದ ಪ್ರಮಾಣದಲ್ಲಿ ಮಿತಿ ಮೀರಿದ ಹೆಚ್ಚಳ, ಮರಣದ ಪ್ರಮಾಣದಲ್ಲಿ ಇಳಿಕೆ, ಜೀವಿತಕಾಲಮಾನದಲ್ಲಿ ಗಣನೀಯ ಪ್ರಮಾಣದ ಏರಿಕೆ, ಶಿಶು ಮರಣದ ನಿಷ್ಪತ್ತಿಯಲ್ಲಿ ಕಡಿತ, ಇವುಗಳು ಜನಸಂಖ್ಯೆಯ ಏರುಗತಿಗೆ ಕಾರಣವಾಗಿವೆ.

> **ಚರ್ಚಿಸಿ :**
> *ದೇಶದ ಅಭಿವೃದ್ಧಿಗೆ ಜನಸಂಖ್ಯೆಯು ಪೂರಕವೂ ಹೌದು. ಮಾರಕವೂ ಹೌದು.*

ಕುಟುಂಬ ಯೋಜನೆ ಹಾಗೂ ತಾಯಿ ಮತ್ತು ಮಗುವಿನ ಆರೈಕೆ ಮುಂತಾದ ಕುಟುಂಬ ಕಲ್ಯಾಣ ಕಾರ್ಯಕ್ರಮಗಳು ಭಾರತದಾದ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರುತ್ತಿವೆ. ನಮ್ಮ ದೇಶದಲ್ಲಿ ಬಹುತೇಕ ಮಧ್ಯಮ ಹಾಗೂ ಆರ್ಥಿಕವಾಗಿ ಮೇಲು ವರ್ಗದ ಕುಟುಂಬಗಳು ಸಣ್ಣ ಕುಟುಂಬದ ಸೂತ್ರಗಳನ್ನು ಜಾರಿಗೆ ತರುತ್ತಿವೆ. ಜನಸಂಖ್ಯಾ ಸ್ಫೋಟದಿಂದಾಗಿ ನಿರುದ್ಯೋಗ, ಅನಕ್ಷರತೆ, ಬಡತನ, ವಸತಿ ಸೌಲಭ್ಯ ಹಾಗೂ ಆರೋಗ್ಯ ಸಮಸ್ಯೆ, ನೀರಿನ ಪೂರೈಕೆ ಮುಂತಾದ ಹತ್ತು ಹಲವು ಸಮಸ್ಯೆಗಳು ಎದುರಾಗುತ್ತವೆ. ಜನಸಂಖ್ಯೆಯೂ ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿ ಸಮಾನವಾಗಿ ಹಂಚಿಕೆಯಾಗದಿರುವುದನ್ನು ಕಾಣಬಹುದು.

ನಗರೀಕರಣವೂ ದೇಶದಲ್ಲಿ ಕ್ಷಿಪ್ರವಾಗಿ ನಡೆಯುತ್ತಲೇ ಇರುವುದನ್ನು ನಾವು ಗಮನಿಸಬಹುದು. ಸಮರ್ಪಕ ಹಾಗೂ ಪರಿಣಾಮಕಾರಿ ಜನಸಂಖ್ಯಾ ಧೋರಣೆಯನ್ನು ಕಾರ್ಯಗತಗೊಳಿಸುವ ಅವಶ್ಯಕತೆ ನಮ್ಮ ಪಾಲಿಗಿದೆ.

ಭಾರತ ಈ ಅಪಾರ ಜನಸ್ತೋಮವನ್ನು ರಾಷ್ಟ್ರೀಯ ಪ್ರಗತಿಗೆ ಅವಶ್ಯಕವಾದ ಮಾನವ ಸಂಪನ್ಮೂಲವನ್ನಾಗಿ ಪರಿವರ್ತಿಸುವ ಎಲ್ಲಾ ಸಾಧ್ಯತೆಗಳನ್ನೂ ಹೊಂದಿದೆ. ರಾಷ್ಟ್ರೀಯ ಮಟ್ಟದ ಯೋಜನೆಗಳು, ಪ್ರಕೃತಿ ಸಂಪತ್ತು ಹಾಗೂ ಮಾನವ ಸಂಪನ್ಮೂಲವನ್ನು ಸರಿಯಾದ ರೀತಿಯಲ್ಲಿ ಹೊಂದಾಣಿಕೆಯೊಂದಿಗೆ ಉಪಯೋಗಿಸಿಕೊಳ್ಳುವಂತಿರಬೇಕು. ಈಗ ಕೇಂದ್ರ ಸರಕಾರದ ಶಿಕ್ಷಣ ಇಲಾಖೆಯನ್ನು ಮಾನವ ಸಂಪನ್ಮೂಲ ಇಲಾಖೆ ಎಂಬುದಾಗಿ ಕರೆಯಲಾಗುತ್ತಿದೆ. ಅಕ್ಷರ ಪ್ರಸರಣ, ತಾಂತ್ರಿಕ ಶಿಕ್ಷಣ, ಕೃಷಿ ಅಭಿವೃದ್ಧಿ, ಕೈಗಾರಿಕಾ ಪ್ರಗತಿ, ರಫ್ತು ಹೆಚ್ಚಳ, ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶದಲ್ಲಿನ ಹೆಚ್ಚುವರಿ ಉದ್ಯೋಗವಕಾಶ ಇವೆಲ್ಲಾ ಜನಸಂಖ್ಯಾ ಸಮಸ್ಯೆಯನ್ನು ಪರಿಹರಿಸುವ ಮಾರ್ಗಗಳು. ಈ ದಿನಗಳಲ್ಲಿ ನಾವು ಗಮನಿಸಬಹುದಾದ ಇನ್ನೊಂದು ಹೊಸ ಬೆಳವಣಿಗೆಯೆಂದರೆ ಕೃಷಿ ಕ್ಷೇತ್ರಕ್ಕೆ ಅದೇ ರೀತಿ ವೃತ್ತಿ ಕೌಶಲ್ಯದ ಹಾಗೂ ಸಾಮಾನ್ಯ ಕೆಲಸಗಳಿಗೂ ಕಾರ್ಮಿಕ ವರ್ಗದವರ ಕೊರತೆ ಜನರು ವಲಸೆ ಹೋಗುತ್ತಿರುವುದಕ್ಕೆ ಇದು ಕಾರಣವಾಗಿದೆ. ದೇಶದ ಪ್ರಗತಿ ಎನ್ನುವುದು ಹೆಚ್ಚೆಚ್ಚು ಜನತೆಯ ಪಾಲ್ಗೊಳ್ಳುವಿಕೆಯ ಮುಖಾಂತರ ಆಗಬೇಕಾಗಿದೆ. ತನ್ಮೂಲಕ ಒಂದು ದಶಮಾನದೊಳಗೆ ಭಾರತದ ಜನಸಂಖ್ಯಾ ಸಮಸ್ಯೆಗೆ ಯೋಗ್ಯ ಪರಿಹಾರ ಕಂಡು ಹುಡುಕಲು ಸಾಧ್ಯ ಎನಿಸಬಹುದು. ಸರಿಯಾದ ರೀತಿಯ ಯೋಜನೆಯೊಂದಿಗೆ ನಮ್ಮ ಮಾನವ ಸಂಪನ್ಮೂಲವನ್ನು ಒಂದು ಹೊರೆ ಮಾಡದೆ, ಬದಲಿಗೆ ಉತ್ತಮ, ಪೂರಕ ಆಸ್ತಿಯಾಗಿ ಪರಿವರ್ತಿಸಬಹುದಾಗಿದೆ.

> ***ಚಟುವಟಿಕೆ :***
> *ಬಡತನ ನಿರ್ಮೂಲನ ಮಾಡಲು ಕರ್ನಾಟಕ ಸರ್ಕಾರವು ಕೈಗೊಂಡಿರುವ ಯೋಜನೆಗಳ ಪಟ್ಟಿಮಾಡಿ.*

8. ಬಡತನ : ಬಡತನ ಅಥವಾ ದಾರಿದ್ರ್ಯ ಭಾರತದ ಇನ್ನೊಂದು ಬೃಹತ್ ಸಮಸ್ಯೆ ಎನಿಸಿದೆ. ಇದು ಭಾರತದ ಅತ್ಯಂತ ವ್ಯಾಪಕ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಯಾಗಿ ಪರಿಣಮಿಸಿದೆ. ಜನರು ಸರಿಯಾದ ಆಹಾರ, ಬಟ್ಟೆ, ವಸತಿ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದದೆ ಪಡುವ ಕಷ್ಟವನ್ನು ಬಡತನ ಎಂದು ಕರೆಯುತ್ತೇವೆ. ದಾರಿದ್ರ್ಯವನ್ನು ಸಂಪೂರ್ಣ ಅಥವಾ ಪರಸ್ಪರ ಹೋಲಿಕೆಯ ಬಡತನ ಎಂಬುದಾಗಿ ಗುರುತಿಸಬಹುದಾಗಿದೆ. ಭಾರತದ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಬಡತನ ನೆಲೆಯೂರಿದೆ.

ಬಡತನವನ್ನು ಹೋಗಲಾಡಿಸಲು ಸ್ವಾತಂತ್ರ್ಯಾನಂತರ ಹಲವಾರು ಯೋಜನೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೆ ತಂದಿವೆ. ಬಡಕುಟುಂಬಗಳಿಗೆ ಬಿಪಿಎಲ್ (ಬಡತನ ರೇಖೆಯ ಕೆಳಗಡೆ) ಕಾರ್ಡುಗಳನ್ನು ವಿತರಿಸಲಾಗಿದೆ. ರಾಷ್ಟ್ರದಲ್ಲಿ ಪಂಚವಾರ್ಷಿಕ ಯೋಜನೆಗಳು ಬಡತನ ನಿರ್ಮೂಲನಕ್ಕಾಗಿ ಹಾಗೂ ತಲಾ ಆದಾಯದ ಹೆಚ್ಚುವರಿ ಒದಗಲು ರೂಪಿಸಿ ಕಾರ್ಯಗತಗೊಳಿಸಲಾಗುತ್ತಿದೆ. ಅದೇ ರೀತಿ ಜವಾಹರ ರೋಜ್‌ಗಾರ್ ಯೋಜನೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ ಮೊದಲಾದವುಗಳು ದಾರಿದ್ರ್ಯ ನಿರ್ಮೂಲನೆಗಾಗಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಾಗಿವೆ. ನಮ್ಮ ದೇಶ ಅಪಾರ ಜನಸಂಪತ್ತು ಹಾಗೂ ನೈಸರ್ಗಿಕ ಸಂಪತ್ತು ಹೊಂದಿದೆ. ಇವುಗಳ ಸದ್ಬಳಕೆ ಹಾಗೂ ಅವುಗಳ ಉತ್ಪಾದನೆಗೆ ತೊಡಗಿಸಿಕೊಳ್ಳುವಿಕೆಯ ಮೂಲಕ ದೇಶದ ಬಡತನದ ಮಟ್ಟವನ್ನು ಕಡಿಮೆ ಮಾಡಬಹುದು. ಉತ್ಪಾದನಾ ಹೆಚ್ಚಳ ಹಾಗೂ ಸಮರ್ಪಕ ವಿತರಣಾ ವ್ಯವಸ್ಥೆಯ ಮೂಲಕ ರಾಷ್ಟ್ರೀಯ ಸಂಪತ್ತಿನ ಸಮಾನ ವಿತರಣೆ ಸಾಧ್ಯ ಹಾಗೂ ಈ ಬಗೆಗೆ ಉತ್ತಮ ಆರ್ಥಿಕ ಸುಧಾರಣೆಯೂ ಅತ್ಯಗತ್ಯ.

> ***ಚರ್ಚಿಸಿ :***
>
> *ಕೆಲವು ಸಂದರ್ಭದಲ್ಲಿ ಈರುಳ್ಳಿ ಬೆಲೆಯು ಕೆ.ಜಿ.ಗೆ ರೂ. 80 ಇರುತ್ತದೆ. ಮತ್ತು ಕೆಲವು ಸಮಯದಲ್ಲಿ ರೂ. 20ಕ್ಕೆ ಲಭ್ಯವಿರುತ್ತದೆ. ಏಕೆ?*

9. ಲಾಭ ಬಡುಕತನ : ಜನಸಾಮಾನ್ಯರ ಅಥವಾ ಬಳಕೆದಾರರಿಂದ ಅತ್ಯಂತ ಹೆಚ್ಚಿನ ಲಾಭಗಳಿಸುವ ಧೋರಣೆಯನ್ನು ಲಾಭ ಬಡುಕುತನ ಅಥವಾ ಲಾಭಕೋರತನ ಎಂದು ಕರೆಯುತ್ತಾರೆ. ವ್ಯಾಪಾರ ವಹಿವಾಟಿನಲ್ಲಿ ಅತ್ಯಂತ ಸುಲಭ ರೀತಿಯಲ್ಲಿ ಹೆಚ್ಚು ಹಣ ದೋಚುವಿಕೆ ಒಂದು ಕೆಡುಕು ಎಂಬುದಾಗಿ ಭಾವಿಸಬೇಕಾಗುತ್ತದೆ. ಈ ರೀತಿಯಾಗಿ ಸುಲಭಗಳಿಕೆಯು ಸಮಾಜಕ್ಕೆ ಅಹಿತವನ್ನು ಉಂಟುಮಾಡುವ ಸಾಧ್ಯತೆಯೇ ಹೆಚ್ಚು. ಇದರಿಂದ ಆರ್ಥಿಕ ಅಸಮಾನತೆ ಹೆಚ್ಚಾಗುತ್ತದೆ. ಬಡತನ ಇನ್ನಷ್ಟು ಅಧಿಕ ಎನಿಸುತ್ತದೆ. ಇದರಿಂದ ಸಮಾಜದಲ್ಲಿ ಅಪರಾಧಗಳ ಏರಿಕೆಯಾಗುತ್ತದೆ. ಆರ್ಥಿಕ ರಂಗದಲ್ಲಿ ಲಾಭ ಬಡುಕತನ ಅನೈತಿಕ ವ್ಯಾಪಾರ ವಹಿವಾಟಿಗೆ ಪ್ರಚೋದನೆ ನೀಡುತ್ತದೆ. ಇದರಿಂದ ಬೆಲೆ ಏರಿಕೆ ಸತತವಾಗಿ ನಡೆದು ಹಣದುಬ್ಬರಕ್ಕೂ ಇದು ಎಡೆಮಾಡಿಕೊಡುತ್ತದೆ. ಜನಸಮುದಾಯದ ಆದಾಯದ ಬಹುಪಾಲು ಸೀಮಿತ ಶ್ರೀಮಂತ ವ್ಯಾಪಾರೀ ವರ್ಗದ ಕೈ ಸೇರುತ್ತದೆ. ಬೆಲೆಗಳ ಮೇಲೆ ಹತೋಟಿ ಇಲ್ಲದೆ ಇರುವುದು ಮಿತಿ ಮೀರಿದ ಲಾಭಕೋರತನಕ್ಕೆ ಮುಖ್ಯ ಕಾರಣ. ಉತ್ಪಾದಕರು, ಅದರಿಂದಲೂ ಹೆಚ್ಚಾಗಿ ವಿತರಕರು ಬಹುವಾಗಿ ಲಾಭದ ಪರಿಮಿತಿ ಹೊಂದುವುದರಿಂದ ಈ ಲಾಭ ಬಡುಕುತನ ಹೆಚ್ಚುವಂತಾಗಿದೆ. ಸರ್ಕಾರದ ಸಮರ್ಪಕವಾದ ಕ್ರಮದಿಂದ ಈ ಲಾಭಕೋರತನಕ್ಕೆ ನಿಯಂತ್ರಣ ಸಾಧಿಸಬೇಕಾಗಿದೆ. ಬೆಲೆಯನ್ನು ಹತೋಟಿಗೆ ತರಲು ಯತ್ನಿಸಬೇಕು. ಏಕಸ್ವಾಮ್ಯ ವ್ಯವಸ್ಥೆ, ಬಹುರಾಷ್ಟ್ರೀಯ ಕಂಪೆನಿಗಳ ವ್ಯಾಪಕತೆ, ಅನಾರೋಗ್ಯಕರ ಮಾರುಕಟ್ಟೆ ನಿಯಮಗಳು, ಅಕ್ರಮ ದಾಸ್ತಾನು, ಕಳ್ಳ ವ್ಯಾಪಾರ, ಬೆಲೆಯ ಬಗ್ಗೆ ಸರಿಯಾದ ನಿಯಂತ್ರಣ ಇಲ್ಲದಿರುವಿಕೆ ಮೊದಲಾದವು ಲಾಭಕೋರತನಕ್ಕೆ ಇರುವ ಮುಖ್ಯ ಕಾರಣಗಳು. ಕಟ್ಟುನಿಟ್ಟಿನ ಸರಕಾರೀ ನಿಯಂತ್ರಣ, ಬೆಲೆ ಸೂಚ್ಯಾಂಕಗಳ ಪರಿಶೀಲನೆ, ಸಹಕಾರೀ ಮಾರುಕಟ್ಟೆಗಳ ವಿಸ್ತರಣೆ, ಸರಿಯಾದ ತೆರಿಗೆ ಧೋರಣೆ ಇವೆಲ್ಲಾ ಲಾಭಕೋರತನವನ್ನು ನಿಯಂತ್ರಿಸುವ ವಿಧಾನಗಳು.

10. ಕಳ್ಳ ಸಾಗಾಣಿಕೆ : 'ಯಾವುದೇ ಆಮದು ಸುಂಕವನ್ನು ಸರ್ಕಾರಕ್ಕೆ ನೀಡದೆ ಗುಪ್ತವಾಗಿ ವಿದೇಶಗಳಿಂದ ವಸ್ತುಗಳನ್ನು ತರಿಸಿಕೊಳ್ಳುವುದನ್ನು ಕಳ್ಳಸಾಗಾಣಿಕೆ' ಎಂದು ಕರೆಯುತ್ತಾರೆ. ಕಳ್ಳ ಸಾಗಾಣಿಕೆ ರಾಷ್ಟ್ರೀಯ ಹಿತಾಸಕ್ತಿಗೆ ಮಾರಕ ಎನಿಸಿದ್ದು, ಅನಪೇಕ್ಷಿತ ಆರ್ಥಿಕ ಚಟುವಟಿಕೆಗಳಿಗೆ ಎಡೆಮಾಡಿಕೊಡುತ್ತದೆ. ಕಳ್ಳಸಾಗಾಟ ದೇಶದ ಆರ್ಥಿಕತೆಗೆ ಹಾನಿ ಒದಗಿಸುತ್ತದೆ. ದೇಶದ ಕೈಗಾರಿಕೆ ಹಾಗೂ ಮಾರುಕಟ್ಟೆಗೆ ಇಂತಹ ಕಳ್ಳಸಾಗಾಣಿಕೆಯ ದಂಧೆಯಿಂದಾಗಿ ತುಂಬಾ ಹಾನಿ ತಟ್ಟುತ್ತದೆ. ದೇಶದೊಳಗೆಯೇ ಪರ್ಯಾಯ ವಸ್ತುಗಳ ಪೂರೈಕೆಯಿಂದಾಗಿ ಈ ಕಳ್ಳಸಾಗಾಣಿಕೆಯನ್ನು ತಡೆಗಟ್ಟಬಹುದಾಗಿದೆ. ರಾಷ್ಟ್ರದ ಆಂತರಿಕ ಮಾರುಕಟ್ಟೆಯಲ್ಲಿ ಬೆಲೆಯನ್ನು ನಿಯಂತ್ರಿಸುವಿಕೆ, ಸುಯೋಗ್ಯ ಆಮದು–ರಫ್ತು ಧೋರಣೆ, ಕಟ್ಟುನಿಟ್ಟಿನ ಕರಾವಳಿ ಗಸ್ತು ಪಡೆಯ ಕಾರ್ಯಾಚರಣೆ, ಆರ್ಥಿಕ ಅಪರಾಧಕ್ಕೆ ಕಠಿಣ ಶಿಕ್ಷೆ, ಅಂತರರಾಷ್ಟ್ರೀಯ ಹಾಗೂ ಆಂತರಿಕ ರಾಜ್ಯಗಳ ಪರಸ್ಪರ ವ್ಯಾಪಾರ ಒಪ್ಪಂದಗಳು ಕಳ್ಳ ಸಾಗಾಣಿಕೆಯನ್ನು ನಿಯಂತ್ರಿಸುವ ಉತ್ತಮ ಉಪಾಯಗಳು. ಕಳ್ಳ ಸಾಗಾಣಿಕೆ ಒಂದು ರಾಷ್ಟ್ರ ವಿರೋಧಿ ಹಾಗೂ ಆರ್ಥಿಕ ಅಪರಾಧ ಎಂಬ ಮನೋಭಾವವನ್ನು ಜನರಲ್ಲಿ ಮೂಡಿಸಬೇಕು. ಕಳ್ಳ ಸಾಗಾಣಿಕೆಯ ವಸ್ತುಗಳನ್ನು ಸಾಮಾಜಿಕವಾಗಿ ಬಹಿಷ್ಕರಿಸುವುದರ ಮೂಲಕವೂ ಇದನ್ನು ಸಾಕಷ್ಟು ನಿಯಂತ್ರಿಸಬಹುದು.

ಭಾರತದ ಪ್ರಜೆಗಳು ಈ ಮೇಲಿನ ಸಮಸ್ಯೆಗಳ ನಿವಾರಣೆಯು ಸರ್ಕಾರದ್ದು ಎಂದು ಏಕಮುಖವಾಗಿ ಯೋಚಿಸದೆ, ತಮ್ಮ ತಮ್ಮ ಹಂತಗಳಲ್ಲಿ ಸಮಸ್ಯೆಗಳನ್ನು ನಿಯಂತ್ರಿಸುವ ಪ್ರಯತ್ನ ಮಾಡುವುದು ಉತ್ತಮ ಬೆಳವಣಿಗೆಯಾಗಲಿದೆ.

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ತಾವು ವಾಸಿಸುವ ಪ್ರದೇಶದ ಬಗ್ಗೆ ಅತ್ಯಂತ ಗಾಢವಾದ ಅಭಿಮಾನ ಬೆಳೆಸಿಕೊಂಡಿರುವುದನ್ನು ___________ ಎನ್ನುತ್ತೇವೆ.
2. ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳ ವಿಭಜನೆಯು _________ ಇಸವಿಯಲ್ಲಿ ಆಯಿತು.
3. ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಯಂತ್ರಿಸಲು _________ ಸಂಸ್ಥೆ ಅಸ್ತಿತ್ವದಲ್ಲಿದೆ.
4. 2011ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆಯು _________ ಕೋಟಿ ದಾಟಿದೆ.
5. ಬಳಕೆದಾರರಿಂದ ಹೆಚ್ಚಿನ ಲಾಭ ಗಳಿಸುವ ಧೋರಣೆಯನ್ನು _________ ಎಂದು ಕರೆಯುತ್ತಾರೆ.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ.

1. ಕೋಮುವಾದ ದೇಶದ ಐಕ್ಯತೆಗೆ ಮಾರಕ. ಹೇಗೆ?
2. ಪ್ರಾದೇಶಿಕವಾದವು ದೇಶದ ಅಭಿವೃದ್ಧಿಗೆ ಮಾರಕವಾಗುತ್ತದೆ. ಚರ್ಚಿಸಿ.
3. ಸಾರಕ್ಷತೆಯನ್ನು ವೃದ್ಧಿಸಲು ಕೈಗೊಂಡಿರುವ ಕ್ರಮಗಳಾವುವು?
4. ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ನಿಮ್ಮ ಸಲಹೆಗಳೇನು?
5. ದೇಶದ ಜನಸಂಖ್ಯೆಯನ್ನು ಮಾನವ ಸಂಪನ್ಮೂಲವೆಂದು ಪರಿಗಣಿಸಬಹುದಾಗಿದೆ. ಇದನ್ನು ಸಮರ್ಥಿಸಿ.
6. ಕರ್ನಾಟಕ ರಾಜ್ಯದಲ್ಲಿ ಬಡತನ ನಿವಾರಣೆಗಾಗಿ ರೂಪಿಸಿರುವ ಯೋಜನೆಗಳನ್ನು ವಿವರಿಸಿ.
7. ಕಳ್ಳ ಸಾಗಾಣಿಕೆ ಎಂದರೇನು? ನಿಯಂತ್ರಣಕ್ಕೆ ನಿಮ್ಮ ಸಲಹೆಗಳೇನು?
8. 'ಲಾಭ ಬಡುಕತನದಿಂದ ಉತ್ಪಾದಕ ಮತ್ತು ಗ್ರಾಹಕನಿಗೆ ನಷ್ಟವಾಗುತ್ತದೆ' ಈ ಹೇಳಿಕೆಯನ್ನು ಹೇಗೆ ಸಮರ್ಥಿಸುತ್ತೀರಿ.

III. ಚಟುವಟಿಕೆ.

1. ನಿಮ್ಮ ಹತ್ತಿರದಲ್ಲಿರುವ ವ್ಯಾಪಾರಗಾರರನ್ನು ಭೇಟಿಯಾಗಿ ಕೆಲವು ವಸ್ತುಗಳ ಬೆಲೆ ಕೆಲವೊಮ್ಮೆ ಜಾಸ್ತಿ ಆಗುತ್ತದೆ. ಕೆಲವೊಮ್ಮೆ ಕಡಿಮೆ ಆಗುತ್ತದೆ ಇದಕ್ಕೆ ಕಾರಣಗಳನ್ನು ತಿಳಿಯಿರಿ.
2. ಪ್ರಾದೇಶಿಕವಾದವು ದೇಶದಲ್ಲಿ ಭಿನ್ನತೆಯನ್ನು ಸೃಷ್ಟಿಸುವುದರ ಬಗ್ಗೆ ಚರ್ಚಾ ಸ್ಪರ್ಧೆ ಏರ್ಪಡಿಸಿ.

ಅಧ್ಯಾಯ-2

ಭಾರತದ ವಿದೇಶಾಂಗ ನೀತಿ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭಾರತದ ವಿದೇಶಾಂಗ ನೀತಿಯ ಸ್ವರೂಪ*
- *ಪಂಚಶೀಲ ತತ್ವ*
- *ಅಲಿಪ್ತನೀತಿ*
- *ವರ್ಣದ್ವೇಷ ನೀತಿಗೆ ವಿರೋಧಿ*
- *ನಿಶ್ಯಸ್ತ್ರೀಕರಣ*

ವಿಶ್ವದ ವಿವಿಧ ರಾಷ್ಟ್ರಗಳು ಅಂತರರಾಷ್ಟ್ರೀಯ ರಂಗದಲ್ಲಿ ಹೇಗೆ ವರ್ತಿಸುತ್ತವೆ, ಯಾವ ರೀತಿ ಸಂಬಂಧಗಳನ್ನು ಇಟ್ಟುಕೊಳ್ಳುತ್ತವೆ ಎಂಬುದನ್ನು ನಾವು ಅಧ್ಯಯನ ಮಾಡಬೇಕಾಗಿದೆ. ಹೇಗೆ ಓರ್ವ ವ್ಯಕ್ತಿ ಇತರರೊಡನೆ ಸಂಬಂಧವನ್ನಿರಿಸಿಕೊಳ್ಳದೆ ಸಮಾಜದಲ್ಲಿ ಏಕಾಂಗಿಯಾಗಿರುವುದು ಸಾಧ್ಯವಿಲ್ಲವೋ, ಹಾಗೆಯೇ ಪ್ರತಿಯೊಂದು ರಾಷ್ಟ್ರವು ಅನ್ಯರಾಷ್ಟ್ರಗಳೊಡನೆ ಸಂಬಂಧವನ್ನಿಟ್ಟುಕೊಳ್ಳದೆ ಇರುವುದು ಸಾಧ್ಯವಿಲ್ಲ. ಹಾಗಾಗಿ ಒಂದು ರಾಷ್ಟ್ರವು ಅನ್ಯರಾಷ್ಟ್ರಗಳೊಡನೆ ವ್ಯವಹರಿಸುವಾಗ ಅನುಸರಿಸುವ ನೀತಿಯೇ ವಿದೇಶಾಂಗ ನೀತಿ ಎಂದು ಕರೆಯಲಾಗಿದೆ. ಇಂದು ಪ್ರತಿಯೊಂದು ರಾಷ್ಟ್ರಕ್ಕೆ ತನ್ನದೇ ಆದ ವಿದೇಶಾಂಗ ನೀತಿ ತೀರಾ ಅವಶ್ಯಕ. ವಿಶ್ವದಲ್ಲಿ ಸುಮಾರು 200 ರಾಷ್ಟ್ರಗಳು ಇದ್ದು ಕೆಲವೇ ರಾಷ್ಟ್ರಗಳು ಬಲಿಷ್ಠವಾಗಿದ್ದರೆ ಕೆಲವು ರಾಷ್ಟ್ರಗಳು ದುರ್ಬಲವಾಗಿವೆ. ಆದರೂ ಒಂದಲ್ಲಾ ಒಂದು ರೀತಿಯ ವಿದೇಶಾಂಗ ನೀತಿಯನ್ನು ಅನುಸರಿಸುತ್ತವೆ. ಆದ್ದರಿಂದಲೇ ವಿದ್ವಾಂಸರು ಈ ರೀತಿ ಹೇಳಿದ್ದಾರೆ; ಸಾರ್ವಭೌಮಾಧಿಕಾರವುಳ್ಳ ರಾಷ್ಟ್ರಗಳಿರುವವರೆಗೂ ಒಂದಲ್ಲಾ ಒಂದು ಬಗೆಯ ವಿದೇಶಾಂಗ ನೀತಿ ಇದ್ದೇ ಇರುತ್ತದೆ. ಸಾರ್ವಭೌಮ ರಾಷ್ಟ್ರವೆಂದರೆ ಯಾವುದೇ ರಾಷ್ಟ್ರ ಆಂತರಿಕವಾಗಲೀ, ಬಾಹ್ಯವಾಗಿಯಾಗಲಿ ಇತರೆ ರಾಷ್ಟ್ರಗಳಿಗೆ ಅಧೀನವಾಗಿರದೆ ಸ್ವತಂತ್ರವಾಗಿರುವುದನ್ನು ಸಾರ್ವಭೌಮ ಅಥವಾ ಪರಮಾಧಿಕಾರವುಳ್ಳ ರಾಷ್ಟ್ರ ಎನ್ನಲಾಗಿದೆ.

ಭಾರತವು ಸಹ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯಾನಂತರ ತನ್ನದೇ ಆದ ವಿದೇಶಾಂಗ ನೀತಿಯನ್ನು ಹೊಂದಿದೆ ಎನ್ನುವುದು ಗಮನಾರ್ಹ ಅಂಶ. ಭಾರತವು ವಿಫುಲ ಜನಸಂಖ್ಯೆ, ಅಪಾರ ಪ್ರಾಕೃತಿಕ ಸಂಪತ್ತು, ಪರಿಣಿತ ಬೌದ್ಧಿಕ ಮತ್ತು ಔದ್ಯೋಗಿಕ ಸಾಮರ್ಥ್ಯ, ಬಲಾಢ್ಯಸೈನಿಕ ಬಲ ಮುಂತಾದವನ್ನು ಹೊಂದಿದ್ದು ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ. ಪ್ರಸ್ತುತ ಜಗತ್ತಿನ ಕೆಲವೇ ರಾಷ್ಟ್ರಗಳು ತಮ್ಮದೇ ಆದ ನಿರ್ದಿಷ್ಟ ಹಾಗೂ ಉತ್ತಮ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿದ್ದು ಅವುಗಳಲ್ಲಿ ಭಾರತವು ಒಂದಾಗಿದೆ.

ನಿಮಗಿದು ತಿಳಿದಿರಲಿ :

"ಯಾವುದೇ ನೀತಿಯನ್ನು ನಿರೂಪಿಸಿದರೂ ವಿದೇಶಾಂಗ ವ್ಯವಹಾರದ ಕಲೆಯ ಇರುವಿಕೆ ಆ ದೇಶಕ್ಕೆ ಯಾವುದು ಅತ್ಯಂತ ಪ್ರಯೋಜನಕಾರಿ ಎಂಬುದನ್ನು ಕಂಡು ಹಿಡಿಯುವುದರಲ್ಲೇ ಆಗಿದೆ. ನಾವು ಅಂತರರಾಷ್ಟ್ರೀಯ ಒಳಿತಿನ ಬಗ್ಗೆ ಮಾತನಾಡಬಹುದು ಹಾಗೂ ಆ ರೀತಿ ಯಥಾವತ್ತಾಗಿ ಯೋಚಿಸಲೂಬಹುದು. ನಾವು ಶಾಂತಿ ಹಾಗೂ ಸ್ವಾತಂತ್ರ್ಯದ ಬಗೆಗೂ ವ್ಯಾಖ್ಯಾನಿಸಬಹುದು ಹಾಗೂ ಪ್ರಾಮಾಣಿಕವಾಗಿ ಆ ಬಗೆಗೆ ಅರ್ಥ ಹೊಂದಿರಲೂಬಹುದು. ಆದರೆ ಕಟ್ಟಕಡೆಗೆ ಪ್ರತಿಯೊಂದು ಸರಕಾರವೂ ತಾನು ಆಳುವ ದೇಶದ ಒಳಿತಿಗಾಗಿಯೇ ಕಾರ್ಯ ನಿರ್ವಹಿಸುತ್ತದೆ. ಸರಕಾರವು ದೂರದೃಷ್ಟಿಯಲ್ಲಿ ಹಾಗೂ ಸನಿಹದ ಭವಿಷ್ಯದಲ್ಲೇ ರಾಷ್ಟ್ರದ ಹಿತಾಸಕ್ತಿಗೆ ತೊಂದರೆ ಉಂಟು ಮಾಡುವ ಯಾವುದೇ ಕಾರ್ಯ ಎಸಗಲು ಧೈರ್ಯ ಹೊಂದಲಾರದು" – ಜವಾಹರಲಾಲ ನೆಹರೂ.

> **ಚರ್ಚಿಸಿ :**
>
> 'ಈ ಜಗತ್ತು ಕ್ರೂರವಾಗಿದೆ. ನಾವು ಶಾಂತಿ ಪ್ರಸರಣದ ಧ್ವಜವನ್ನು ಎಲ್ಲೆಡೆಯೂ ಎತ್ತಿ ಹಿಡಿಯಲು ಬಯಸಿದೆವು; ಆದರೆ ಮುಗ್ಧರಾದ ನಾವು ವಂಚಿತರಾದೆವು'– ಚೈನಾ ದಾಳಿಯ ಬಳಿಕ ಲೋಕಸಭೆಯಲ್ಲಿ ಪ್ರಧಾನ ಮಂತ್ರಿ ನೆಹರೂರವರ ಉದ್ಗಾರ.

ಭಾರತವು 1947ರಲ್ಲಿ ಸ್ವಾತಂತ್ರ್ಯ ಪಡೆದ ಸಾರ್ವಭೌಮ ರಾಷ್ಟ್ರವಾಗಿದ್ದು, ತನ್ನದೇ ಆದ ವಿದೇಶಾಂಗ ನೀತಿಯನ್ನು ಹೊಂದಿ ತನ್ಮೂಲಕ ಜಗತ್ತಿನ ಎಲ್ಲಾ ರಾಷ್ಟ್ರಗಳ ಮೈತ್ರಿಯನ್ನು ಬಯಸುತ್ತದೆ. ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳೆಂದರೆ

- ರಾಷ್ಟ್ರದ ಭದ್ರತೆ.
- ರಾಷ್ಟ್ರದ ಆರ್ಥಿಕ ಸಂವರ್ಧನೆ.
- ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸುವುದು.
- ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ವಿರೋಧಿರಾಷ್ಟ್ರಗಳನ್ನು ನಿರ್ಬಂಧಿಸುವುದು ಅಥವಾ ಹತ್ತಿಕ್ಕುವುದು.
- ವಿಶ್ವಶಾಂತಿ ಹಾಗೂ ಸಹಬಾಳ್ವೆಯನ್ನು ಸಾಧಿಸುವುದು.

1946ರ ಸೆಪ್ಟೆಂಬರ್ 7 ರಂದು ಜವಾಹರಲಾಲ್ ನೆಹರು ಅವರು ನೀಡಿದ ರೇಡಿಯೋ ಭಾಷಣದಲ್ಲಿ ವಿದೇಶಾಂಗ ನೀತಿಯ ರೂಪುರೇಷೆಗಳ ಬಗ್ಗೆ ಅರಿವು ಮೂಡಿಸಿದರು. ಅವರ ಈ ಭಾಷಣವು ಅಮೆರಿಕಾ, ರಷ್ಯಾ, ಚೀನಾ ಮುಂತಾದ ರಾಷ್ಟ್ರಗಳೊಡನೆ ಭಾರತವು ರೂಪಿಸಿಕೊಳ್ಳುವ ಸಂಬಂಧಗಳ ಬಗ್ಗೆಯೂ ಸೂಚನೆಗಳನ್ನು ನೀಡಿತು. ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾದ ಜವಾಹರಲಾಲ್ ನೆಹರು ಪ್ರಧಾನ ಮಂತ್ರಿ ಹುದ್ದೆಯ ಜೊತೆಗೆ ವಿದೇಶಾಂಗ ಖಾತೆಯನ್ನೂ ಹೊಂದಿ ಸಮರ್ಥವಾಗಿ ನಿಭಾಯಿಸಿದರು. ಈ ಕಾರಣಗಳಿಂದಾಗಿ ಭಾರತದ ವಿದೇಶಾಂಗ ನೀತಿಯನ್ನು ನೆಹರೂರವರ ವಿದೇಶಾಂಗ ನೀತಿ ಎಂದು ಕೆಲವರು ವರ್ಣಿಸಿದ್ದಾರೆ. ಭಾರತೀಯ ವಿದೇಶಾಂಗ ನೀತಿ ಹಲವಾರು ಅಂಶಗಳ ಪ್ರಭಾವದಿಂದ ರೂಪಿತಗೊಂಡಂತಹುದು. ರಾಷ್ಟ್ರೀಯ ಹಿತಾಸಕ್ತಿಗಳು. ಭೌಗೋಳಿಕ ಅಂಶಗಳು, ರಾಜಕೀಯ ಪರಿಸ್ಥಿತಿ, ಆರ್ಥಿಕ ವ್ಯವಸ್ಥೆ, ರಕ್ಷಣಾ ಸಾಮರ್ಥ್ಯ, ಜನಾಭಿಪ್ರಾಯ, ಅಂತರರಾಷ್ಟ್ರೀಯ ಪರಿಸರ ಮುಂತಾದ ಹಲವಾರು ಅಂಶಗಳು ನಮ್ಮ ರಾಷ್ಟ್ರದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾದ ಸಂಗತಿಗಳಾಗಿವೆ.

ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳು

1. ಪಂಚಶೀಲ ತತ್ವಗಳು : ವಿಶ್ವದ ರಾಷ್ಟ್ರಗಳು ವಿಭಿನ್ನ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಗಳನ್ನು ಹೊಂದಿದ್ದರೂ ಸಹ ಪರಸ್ಪರ ಸಹಕಾರ ಸಹಬಾಳ್ವೆಯನ್ನು ಅಳವಡಿಸಿಕೊಂಡಿವೆ. ಇದೇ ಆಧಾರದ ಮೇಲೆ 1954 ಜೂನ್ ತಿಂಗಳಲ್ಲಿ ವಿಶ್ವಶಾಂತಿ ದೃಷ್ಟಿಯಿಂದ ಚೀನಾ ಮತ್ತು ಭಾರತ (ಅಂದಿನ ಚೀನಾದ ಪ್ರಧಾನಿ ಚೌ.ಎನ್. ಲಾಯ್ ಮತ್ತು ಭಾರತದ ಪ್ರಧಾನಿ ಜವಾಹರಲಾಲ್ ನೆಹರೂ) ಪರಸ್ಪರ ಅಂತರರಾಷ್ಟ್ರೀಯ ಸಂಬಂಧ ವೃದ್ಧಿಗಾಗಿ ಐದು ತತ್ವಗಳನ್ನು ಅಳವಡಿಸಿಕೊಂಡವು. ಅವುಗಳೇ ಪಂಚಶೀಲ ತತ್ವಗಳು, ಅವುಗಳೆಂದರೆ,

1. ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ.
2. ಪರಸ್ಪರ ಆಕ್ರಮಣ ಮಾಡದಿರುವುದು.
3. ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡದಿರುವುದು
4. ಪರಸ್ಪರ ಸಹಕಾರ ಮತ್ತು ಸಮಾನತೆ
5. ಶಾಂತಿಯುತ ಸಹಬಾಳ್ವೆ

ಇವು ನಮ್ಮ ದೇಶದ ವಿದೇಶಾಂಗ ನೀತಿಯ ತಳಹದಿ ಎನ್ನಬಹುದಾಗಿದೆ.

2. ಅಲಿಪ್ತ ನೀತಿ : ದ್ವಿತೀಯ ಮಹಾಯುದ್ಧದ ಬಳಿಕ ವಿಶ್ವವು ಎರಡು ಶಕ್ತಿ ಬಣಗಳಾಗಿ ವಿಭಾಗವಾಗಿತ್ತು. ಅಮೆರಿಕಾ ಸಂಯುಕ್ತ ಸಂಸ್ಥಾನ ನೇತೃತ್ವದ ಪ್ರಜಾಪ್ರಭುತ್ವ ರಾಷ್ಟ್ರಗಳು ಹಾಗೂ ಸೋವಿಯತ್ ರಷ್ಯಾ ಹಿರಿತನದ ಕಮ್ಯುನಿಸ್ಟ್ ರಾಜ್ಯಗಳು ಎಂಬುದಾಗಿ ಜಗತ್ತಿನ ಧ್ರುವೀಕರಣ ಕಂಡು ಬಂದಿತು. ಅಲ್ಲದೆ ಎರಡೂ ಬಣಗಳ ನಡುವೆ ಶೀತಲ ಸಮರವೂ ಪ್ರಾರಂಭವಾಯಿತು. ಆ ದಿನಗಳಲ್ಲಿ ಭಾರತವು ಈ ಎರಡರಲ್ಲಿ ಯಾವ ಶಕ್ತಿ ಬಣಕ್ಕೂ ಸೇರದೆ ಅಲಿಪ್ತನೀತಿ ಅನುಸರಿಸಿ ತಟಸ್ಥವಾಯಿತು. ಜೊತೆಗೆ ಈ ಎರಡು ಬಣಗಳ ವಿಶ್ವಾಸಗಳಿಸಿಕೊಳ್ಳುವುದರ ಮೂಲಕ ಅಮೆರಿಕಾದಿಂದ ಆರ್ಥಿಕ ನೆರವನ್ನು ಮತ್ತು ಸೋವಿಯತ್ ರಷ್ಯಾದಿಂದ ಭದ್ರಾತಾ ನೆರವನ್ನು ಪಡೆಯುವಲ್ಲಿ ಯಶಸ್ವಿಯಾಯಿತು. ಅಲ್ಲದೆ ವಿಶ್ವದ ಪ್ರತಿಯೊಂದು ವಿದ್ಯಮಾನವನ್ನು ಅದರ ಗುಣ–ದೋಷಗಳ ಆಧಾರದ ಮೇಲೆ ಸ್ವಾಗತಿಸುವ ಅಥವಾ ವಿರೋಧಿಸುವ ಸ್ವತಂತ್ರ ಕಾರ್ಯಶೈಲಿಯನ್ನು ಭಾರತ ರೂಪಿಸಿತು. ಇಂತಹ ಅಲಿಪ್ತ ನೀತಿಯನ್ನು ರೂಪಿಸಿ ವಿದೇಶಾಂಗ ನೀತಿಯಲ್ಲಿ ಅನುಸರಿಸಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. ನೆಹರೂ ನಂತರದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಇಂದಿರಾಗಾಂಧಿಯವರು ಸವಾಲಿಗೆ ಸವಾಲಿನ ವಿದೇಶಾಂಗ ನೀತಿಯನ್ನು ಅನುಸರಿಸಿದರು. 1965ರಲ್ಲಿ ಮತ್ತು 1971ರಲ್ಲಿ ನಡೆದ ಪಾಕಿಸ್ತಾನ ವಿರುದ್ಧದ ಯುದ್ಧಗಳು ಈ ನೀತಿಯನ್ನು ಅಳವಡಿಸಿಕೊಂಡಿದ್ದವು. ನಂತರದ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿಯವರು ನಮ್ಮ ದೇಶದ ವಿದೇಶಾಂಗ ನೀತಿಯನ್ನು ಸುಧಾರಿಸಿ, ಪಾಕಿಸ್ತಾನದ ಜೊತೆ ಮೈತ್ರಿ ಬಾಂಧವ್ಯಕ್ಕೆ ಪ್ರಯತ್ನ ಮಾಡಿದರು.

> ***ನಿಮಗಿದು ತಿಳಿದಿರಲಿ :***
>
> *SAARC - ಸಾರ್ಕ್ – South Asian Association for Regional Co-operation.*
>
> *ಸಾರ್ಕ್ ದಕ್ಷಿಣ ಏಷ್ಯಾ ರಾಷ್ಟ್ರಗಳ ಸಂಘಟನೆಯಾಗಿದೆ. ಡಿಸೆಂಬರ್ 8, 1985ರಲ್ಲಿ ಇದು ಅಸ್ತಿತ್ವಕ್ಕೆ ಬಂದಿದೆ. ಭಾರತ, ಶ್ರೀಲಂಕಾ, ಭೂತಾನ್, ಮಾಲ್ಡೀವ್ಸ್, ಬಾಂಗ್ಲಾದೇಶ, ನೇಪಾಳ, ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನ ರಾಷ್ಟ್ರಗಳು ಇದರ ಸದಸ್ಯ ರಾಷ್ಟ್ರಗಳಾಗಿವೆ. 1986ರಲ್ಲಿ ಸಾರ್ಕ್ ಸಮ್ಮೇಳನವು ನಮ್ಮ ರಾಜ್ಯದಲ್ಲಿ ನಡೆದಿದೆ.*

3. ವಸಾಹತುಶಾಹಿತ್ವಕ್ಕೆ ವಿರೋಧ : ಭಾರತದ ವಿದೇಶಾಂಗ ನೀತಿ ವಸಾಹತುಶಾಹಿತ್ವವನ್ನು ವಿರೋಧಿಸುತ್ತದೆ. ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಆ ದೇಶದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ವಸಾಹತು ಶಾಹಿತ್ವ ಎಂದು ಕರೆಯುತ್ತಾರೆ. ವಸಾಹತು ಶಾಹಿತ್ವವನ್ನು ವಿರೋಧಿಸಿ ಸ್ವತಂತ್ರಗಳಿಸಿಕೊಂಡ ಭಾರತ ಸ್ವಾಭಾವಿಕವಾಗಿ ಅದನ್ನು ವಿರೋಧಿಸಿ ಪ್ರಪಂಚದ ಯಾವುದೇ ಮೂಲೆಯಲ್ಲಿ ವಸಾಹತು ಶಾಹಿತ್ವ ಇರಕೂಡದು ಎಂದು ದೆಹಲಿ ಮತ್ತು ಬಾಂಡುಂಗ್‌ನಲ್ಲಿ ಜರುಗಿದ ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ (1949 ಮತ್ತು 1955) ತನ್ನ ನಿಲುವನ್ನು ಪ್ರತಿಪಾದಿಸಿತು.

4. ವರ್ಣಭೇದ ನೀತಿಗೆ ವಿರೋಧ : ಒಂದು ಜನಾಂಗದ ಅಥವಾ ವರ್ಣದ ಜನಸಮುದಾಯ ಇನ್ನೊಂದು ಜನಾಂಗ ಅಥವಾ ವರ್ಣದ ಜನಸಮುದಾಯವನ್ನು ತಮಗಿಂತ ಕೀಳು ಎಂದು ಭಾವಿಸಿ ಅವರನ್ನು ಕಡೆಗಣಿಸುವ ಅಥವಾ ವಿರೋಧಿಸುವ ನೀತಿಗೆ ವರ್ಣಭೇದ ನೀತಿ ಎಂದು ಕರೆಯಬಹುದು. ಈ ವರ್ಣಭೇದ ನೀತಿಯು ಅಮಾನವೀಯ ಮತ್ತು ಮಾನವ ಹಕ್ಕುಗಳನ್ನು ಉಲ್ಲಂಘಿಸಿ ವಿಶ್ವಶಾಂತಿ ಮತ್ತು ಸಹಬಾಳ್ವೆಗೆ ಮಾರಕವಾಗುತ್ತದೆ. ಇಂತಹ ವರ್ಣಭೇದ ನೀತಿ ಜಗತ್ತಿನಲ್ಲಿ ಎಲ್ಲಿಯೂ ಯಾವ ರಾಷ್ಟ್ರವೂ ಅನುಸರಿಸಬಾರದು ಎಂಬ ವಿದೇಶಾಂಗ ನೀತಿಯನ್ನು ಭಾರತ ಹೊಂದಿದೆ. ಇತ್ತೀಚಿನವರೆಗೂ ದಕ್ಷಿಣ ಆಫ್ರಿಕಾದಲ್ಲಿ ಅಲ್ಪಸಂಖ್ಯಾತ ಬಿಳಿಯರು ಬಹುಸಂಖ್ಯಾತ ಆಫ್ರಿಕನ್ ದೇಶಿಯರನ್ನು ತಮ್ಮ ಹಿಡಿತದಲ್ಲಿಟ್ಟಿದ್ದರು ಎಂಬುದು ವಿಶೇಷವಾಗಿದೆ. ಈ ವರ್ಣಭೇದ ನೀತಿಯನ್ನು ಆಫ್ರಿಕಾಗಾಂಧಿ ಎಂದೇ

ಪ್ರಸಿದ್ಧರಾದ ನೆಲ್ಸನ್ ಮಂಡೇಲ ಅವರ ನೇತೃತ್ವದಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಬಲವಾಗಿ ಖಂಡಿಸಿ ಹಮ್ಮಿಕೊಂಡಿದ್ದ ಚಳುವಳಿಯನ್ನು ಭಾರತವು ಬೆಂಬಲಿಸಿತು ಮತ್ತು ಗುರಿಸಾಧಿಸಿತು.

> ***ಚಟುವಟಿಕೆ :***
>
> *ಇತ್ತೀಚಿನ ದಿನಗಳಲ್ಲಿ ಭಾರತವು ವಿದೇಶಾಂಗ ನೀತಿ ರೂಪಿಸುವಲ್ಲಿ ಅಳವಡಿಕೆಯಲ್ಲಿ ನಡೆಸುತ್ತಿರುವ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಅಂತರ್ಜಾಲದ ನೆರವಿನಿಂದ ಮಾಹಿತಿ ಸಂಗ್ರಹಿಸಿ.*

5. ನಿಶ್ಯಸ್ತ್ರೀಕರಣ : ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದೇ ನಿಶ್ಯಸ್ತ್ರೀಕರಣ. ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಉತ್ಪಾದನೆ, ಮಾರಾಟ, ಸಂಗ್ರಹಣೆಯಲ್ಲಿ ಭಾರಿ ಪೈಪೋಟಿ ನಡೆದಿದೆ. ಈ ರೀತಿಯ ಶಸ್ತ್ರಾಸ್ತ್ರಗಳ ಪೈಪೋಟಿಯಿಂದ ಮೂರನೇ ಮಹಾಯುದ್ಧ ನಡೆಯಬಹುದೆಂಬ ಆತಂಕ ಹಲವು ರಾಷ್ಟ್ರಗಳಲ್ಲಿ ಉಂಟಾಗಿದೆ. ಶಸ್ತ್ರಾಸ್ತ್ರಗಳ ಪೈಪೋಟಿಗೆ ಒಳಗಾದ ರಾಷ್ಟ್ರಗಳು ಅಚಾತುರ್ಯದಿಂದಲೋ, ತಪ್ಪುಗ್ರಹಿಕೆಯಿಂದಲೋ ಬೇಕೆಂತಲೇ ಒಂದರ ಮೇಲೊಂದು ಯುದ್ಧ ಶಸ್ತ್ರಾಸ್ತ್ರಗಳನ್ನು ಅದರಲ್ಲೂ ಅಣ್ವಸ್ತ್ರಗಳನ್ನು ತಯಾರಿಸಿ ಉಪಯೋಗಿಸುವ ಸಂಭವವಿರುತ್ತದೆ. ಆದುದರಿಂದ ಭಾರತ ಶಾಂತಿಪ್ರಿಯ ರಾಷ್ಟ್ರವಾಗಿದ್ದು ಗುಣಾತ್ಮಕ ಹಾಗೂ ಗಾತ್ರದ ಪರಿಮಿತಿಯಲ್ಲಿನ ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ. ಶಾಂತಿ ಸೌಹಾರ್ದತೆಗೆ ಒತ್ತು ನೀಡಿದ ಭಾರತ ಪ್ರಧಾನಿ ನೆಹರೂರವರ ಕಾಲದಲ್ಲಿ ಸಹಜವಾಗಿಯೇ ನಿಶ್ಯಸ್ತ್ರೀಕರಣಕ್ಕೆ ಬೆಂಬಲವನ್ನು ಸೂಚಿಸಿತು. ಸಂಪೂರ್ಣ ನಿಶ್ಯಸ್ತ್ರೀಕರಣ ಸಾಧ್ಯವಾಗದ ವಿಚಾರವಾಗಿದೆ, ಏಕೆಂದರೆ ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ರಕ್ಷಣಾವ್ಯೂಹ ಅತ್ಯಗತ್ಯ. ಆದರೂ ಭಾರತ ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ ಪೂರಕವಾದ ವಿದೇಶಾಂಗ ನೀತಿಗೆ ವಿಶೇಷವಾಗಿ ಒತ್ತು ನೀಡಿದೆ.

ಭಾರತ ಸಂವಿಧಾನವು ತನ್ನ 51ನೇ ವಿಧಿಯ ಮೂಲಕ ಅಂತರರಾಷ್ಟ್ರೀಯ ಸಹಬಾಳ್ವೆ ಹಾಗೂ ಅಂತರರಾಷ್ಟ್ರೀಯ ಕಾನೂನಿಗೆ ಗೌರವ ತಂದು ಕೊಡುವಂತಹ ವಿದೇಶಾಂಗ ನೀತಿಯನ್ನು ಸೂಚಿಸುತ್ತದೆ. ಕೇಂದ್ರ ಸರ್ಕಾರದ ವಿದೇಶಾಂಗ ಖಾತೆ ನಮ್ಮ ದೇಶದ ವಿದೇಶಾಂಗ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇದು ನಮ್ಮ ದೇಶದ ವಿದೇಶಾಂಗ ನೀತಿಯನ್ನು ರೂಪಿಸುವಾಗ ರಾಷ್ಟ್ರೀಯ ಹಿತಾಸಕ್ತಿ ಹಾಗೂ ಸಾರ್ವಜನಿಕ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ವಿದೇಶಾಂಗ ನೀತಿ ವಿಶ್ವಸಂಸ್ಥೆಯನ್ನು ಬಲಪಡಿಸುವ ರೀತಿಯಲ್ಲಿ ರೂಪಿಸಲಾಗಿದೆ. ಭಾರತ ಕಾಮನ್‌ವೆಲ್ತ್ ಆಫ್ ನೇಶನ್ಸ್ ಹಾಗೂ ಸಾರ್ಕ್ (ಸೌತ್ ಏಷಿಯನ್ ಅಸೋಸಿಯೇಶನ್ ಫಾರ್ ರೀಜನಲ್ ಕೋ – ಆಪರೇಶನ್) ಈ ಎರಡೂ ಸಂಸ್ಥೆಗಳ ಮೂಲಕ ಹಲವಾರು ದೇಶಗಳೊಂದಿಗೆ ನಿಕಟ ಸಂಬಂಧ ಹೊಂದಲು ಬಯಸಿದೆ. ಮೇಲಾಗಿ, ವಿಶ್ವ ಸಂಸ್ಥೆಯ ಪ್ರಮುಖ ಸದಸ್ಯ ರಾಷ್ಟ್ರವಾಗಿ ಭಾರತವು ಮಹತ್ವದ ಪಾತ್ರವಹಿಸುತ್ತ ಬಂದಿದೆ.

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ಭಾರತದ ವಿದೇಶಾಂಗ ನೀತಿಯನ್ನು ವಿಶೇಷವಾಗಿ ನಿರೂಪಿಸಿದವರು ___________
2. ವಿಶ್ವದ ಯಾವುದೇ ಬಣಕ್ಕೂ ಸೇರದೆ ಇರುವ ನೀತಿಯನ್ನು __________ ಎನ್ನಬಹುದು.
3. ಭಾರತವು ಸ್ವಾತಂತ್ರ್ಯ ಪೂರ್ವದಲ್ಲಿ _________ ರ ವಸಾಹತು ಶಾಹಿಗೆ ಒಳಗಾಗಿತ್ತು.

II. ಕೆಳಗಿನ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1. ವಿದೇಶಾಂಗ ನೀತಿ ಎಂದರೇನು?
2. ವಿದೇಶಾಂಗ ನೀತಿಯು ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿ ಹೇಗೆ?
3. ಭಾರತದ ವಿದೇಶಾಂಗ ನೀತಿಯ ಗುರಿಗಳಾವುವು?
4. ವಸಾಹತುಶಾಹಿತ್ವವನ್ನು ಭಾರತವು ವಿರೋಧಿಸಲು ಕಾರಣಗಳೇನು?
5. ಪಂಚಶೀಲ ತತ್ವಗಳಾವುವು?
6. ಪ್ರಚಲಿತ ಜಗತ್ತಿಗೆ ನಿಶಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ? ವಿವರಿಸಿ

III. ಯೋಜನೆ

1. ವೃತ್ತ ಪತ್ರಿಕೆಗಳಲ್ಲಿ ಬರುವ ವಿದೇಶಾಂಗ ನೀತಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.
2. ಅಂತರರಾಷ್ಟ್ರೀಯ ಸಮಸ್ಯೆಗಳು ಉಂಟಾದ ಸಮಯದಲ್ಲಿ ಭಾರತವು ನಿರ್ವಹಿಸುವ ಪಾತ್ರದ ಬಗ್ಗೆ ಮಾಹಿತಿ ಸಂಗ್ರಹಿಸಿ ಉದಾ – ಸಿರಿಯಾ ಸಮಸ್ಯೆ, ಶ್ರೀಲಂಕಾ ಸಮಸ್ಯೆ ಇತ್ಯಾದಿ.

IV. ಚಟುವಟಿಕೆ

1. 'ಭಾರತವು ಅಲಿಪ್ತ ನೀತಿಯನ್ನು ಅಳವಡಿಸಿಕೊಂಡಿರುವುದು ದೇಶದ ಅಭಿವೃದ್ದಿಗೆ ಸಹಕಾರಿ' ಈ ವಿಷಯದ ಮೇಲೆ ಚರ್ಚಾಸ್ಪರ್ಧೆ ನಡೆಸಿ.

ಅಧ್ಯಾಯ–3

ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭಾರತ ಮತ್ತು ಪಾಕಿಸ್ತಾನದ ಸಂಬಂಧ.*
- *ಭಾರತ ಮತ್ತು ನೇಪಾಳದ ಸಂಬಂಧ.*
- *ಭಾರತ ಮತ್ತು ಶ್ರೀಲಂಕಾದ ಸಂಬಂಧ*
- *ಭಾರತ ಮತ್ತು ರಷ್ಯಾದ ಸಂಬಂಧ.*
- *ಭಾರತ ಮತ್ತು ಚೀನಾದ ಸಂಬಂಧ.*
- *ಭಾರತ ಮತ್ತು ಬಾಂಗ್ಲಾದೇಶದ ಸಂಬಂಧ.*
- *ಭಾರತ ಮತ್ತು ಅಮೆರಿಕಾದ ಸಂಬಂಧ.*

ಪ್ರಚಲಿತ ಪ್ರಪಂಚವನ್ನು ವಿಶ್ವ ಕುಟುಂಬ ಎಂದು ಕರೆಯುತ್ತೇವೆ. ವಿಶ್ವದ ಎಲ್ಲಾ ಖಂಡಗಳಲ್ಲಿ ಸುಮಾರು 198 ಸಾರ್ವಭೌಮ ರಾಷ್ಟ್ರಗಳಿವೆ. ಭಾರತ ಸ್ವತಂತ್ರ, ಸಾರ್ವಭೌಮ ರಾಷ್ಟ್ರ, ಅರ್ಥಾತ್ ಆಂತರಿಕ ಹಾಗೂ ಬಾಹ್ಯ ವಿಚಾರಗಳಲ್ಲಿ ಸ್ವಯಂ ನಿರ್ಧಾರದ ಹಕ್ಕು ಹೊಂದಿದ ದೇಶ. ನಾವೊಂದು ಸ್ವತಂತ್ರ ರಾಷ್ಟ್ರವಾಗಿ ಎಲ್ಲಾ ವಿದೇಶಗಳೊಂದಿಗೆ ಉತ್ತಮ ಸಂಬಂಧ ಹೊಂದಬೇಕಾಗಿದೆ. ಅದರಲ್ಲಿಯೂ ಮುಖ್ಯವಾಗಿ ಏಷ್ಯಾ ಖಂಡದ ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಒಳ್ಳೆಯ ಬಾಂಧವ್ಯ ಇರಿಸಿಕೊಳ್ಳಬೇಕಾಗಿದೆ. ಆದರೆ ಇದರೊಂದಿಗೆ ರಾಷ್ಟ್ರೀಯ ಹಿತಾಸಕ್ತಿಗಳೆನಿಸಿದ ಗಡಿ ಭದ್ರತೆ, ವಿದೇಶ ವ್ಯಾಪಾರ, ಆರ್ಥಿಕ ಲಾಭ, ರಾಷ್ಟ್ರದ ಗೌರವ ಮುಂತಾದುವುಗಳನ್ನು ಜೋಪಾನವಾಗಿ ಕಾಯ್ದುಕೊಳ್ಳಲಾಗಿದೆ. ಜಗತ್ತಿನ ಎಲ್ಲಾ ದೇಶಗಳೊಂದಿಗೆ ಶಾಶ್ವತ ರಾಯಭಾರ ಸಂಪರ್ಕ ಇರಿಸಿಕೊಳ್ಳಬೇಕಾಗಿದೆ. ಜಾಗತಿಕ ಕುಟುಂಬದ ಕೆಲವು ಸದಸ್ಯರೊಂದಿಗೆ ಭಾರತ ಇರಿಸಿದ ಸಂಬಂಧದ ಕಡೆಗೆ ಗಮನ ಹರಿಸೋಣ.

ಭಾರತ ಮತ್ತು ಪಾಕಿಸ್ತಾನ : 1947ರ ಭಾರತದ ವಿಭಜನೆ ಪಾಕಿಸ್ತಾನ ಎನ್ನುವ ರಾಷ್ಟ್ರದ ಉದಯಕ್ಕೆ ಕಾರಣವಾಯಿತು. ನಮ್ಮೆರಡು ರಾಷ್ಟ್ರಗಳ ಮಧ್ಯೆ ಭೌಗೋಳಿಕ ಸಾಮಿಪ್ಯ ಹಾಗೂ ಸಮಾನ ನಾಗರಿಕ ಪರಂಪರೆ ಇದೆ. ನಾವು ಹಲವಾರು ಶತಮಾನಗಳ ಸಮಾನ ಇತಿಹಾಸವನ್ನು ಹೊಂದಿದ್ದೇವೆ. ಪಾಕಿಸ್ತಾನದೊಂದಿಗೆ ಉತ್ತಮ ಬಾಂಧವ್ಯವನ್ನು ಭಾರತ ಬಯಸುತ್ತದೆ. ಆದರೆ ಪಾಕಿಸ್ತಾನದ ಮಿಲಿಟರಿ–ಶಾಹಿತ್ವ ಹಾಗೂ ರಾಜಕೀಯ ಅಸ್ಥಿರತೆಯಿಂದಾಗಿ ಆ ರಾಷ್ಟ್ರ ನಮ್ಮೊಂದಿಗೆ ಒಳ್ಳೆಯ ಸಂಬಂಧವನ್ನು ಇರಿಸಿಕೊಂಡಿಲ್ಲ. ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ 1947–48ರಲ್ಲಿ, 1965, 1971 ಹಾಗೂ ಪುನಃ 1999ರಲ್ಲಿ (ಕಾರ್ಗಿಲ್‌ಯುದ್ಧ) ಯುದ್ಧಗಳು ಸಂಭವಿಸಿದವು. ಈ ಎಲ್ಲಾ ಯುದ್ಧಗಳಲ್ಲಿ ಭಾರತ ವಿಜಯ ಗಳಿಸಿತು. ಕಾಶ್ಮೀರ ಸಮಸ್ಯೆ ಹಾಗೂ ಭಯೋತ್ಪಾದನೆ – ಈ ಎರಡು ಸಮಸ್ಯೆಗಳ ಪರಿಣಾಮಕಾರಿ ಪರಿಹಾರ ಭಾರತ–ಪಾಕಿಸ್ತಾನ ಸಂಬಂಧ ಸುಧಾರಣೆಗೆ ಅತ್ಯಗತ್ಯ. ಸುಮಾರು ಮೂರನೇ ಒಂದಂಶದಷ್ಟು ಕಾಶ್ಮೀರದ ಭೂಭಾಗ ಈಗಲೂ ಪಾಕಿಸ್ತಾನದ ಸ್ವಾಧೀನದಲ್ಲಿದೆ. ಪಾಕಿಸ್ತಾನ ಭಯೋತ್ಪಾದಕತೆಯನ್ನು ಪ್ರಚೋದಿಸಬಾರದು ಹಾಗೂ ನಮ್ಮ ರಾಷ್ಟ್ರೀಯ ಹಿತಾಸಕ್ತಿಗೆ ತೊಂದರೆಯಾಗದಂತೆ ವ್ಯವಹರಿಸಬೇಕೆಂದು ನಾವು ಒತ್ತಾಯಿಸುತ್ತಿದ್ದೇವೆ. ದೂರಗಾಮಿ ಭಾರತ – ಪಾಕಿಸ್ತಾನ ಶಾಂತಿಯುತ ಸಂಬಂಧ ಸೂಕ್ತವಾಗಿ ಇನ್ನೂ ಮೂಡಿಬಂದಿಲ್ಲ. ಭಾರತವನ್ನು ಶತ್ರುರಾಷ್ಟ್ರವಾಗಿ ಮಾತ್ರ ಕಾಣುವಾಗ, ಪಾಕಿಸ್ತಾನವು ಒಳ್ಳೆಯ ಸಂಬಂಧ ಬೆಳೆಸುವ ಲಕ್ಷಣಗಳು ಕಡಿಮೆಯಿವೆ.

> ***ಚಟುವಟಿಕೆ :***
>
> *ಭಾರತ–ಪಾಕಿಸ್ತಾನದ ಇತ್ತೀಚಿನ ಸಂಬಂಧಗಳಿಗೆ ಸಂಬಂಧಿಸಿದಂತೆ ದಿನ ಪತ್ರಿಕೆಗಳಲ್ಲಿ ಬರುವ ಮಾಹಿತಿ ಸಂಗ್ರಹಿಸಿ ಓದಿರಿ.*

2. **ಭಾರತ ಮತ್ತು ಚೀನಾ :** ಚೀನಾ ನಮ್ಮ ಉತ್ತರ ಭಾಗದಲ್ಲಿರುವ ಬೃಹತ್ ನೆರೆಯ ರಾಷ್ಟ್ರ. ಇತಿಹಾಸದ ಉದ್ದಕ್ಕೂ ಈ ರಾಷ್ಟ್ರಗಳು ಪರಸ್ಪರ ಸಂಬಂಧಗಳನ್ನು ಬೆಳೆಸಿಕೊಂಡಿವೆ. ಅಕ್ಟೋಬರ್

1949ರಲ್ಲಿ ಚೈನಾ ಕಮ್ಯುನಿಸ್ಟ್ ರಾಷ್ಟ್ರವೆಂದು ಉದಯಿಸಿದಾಗ ಅದನ್ನು ಮಾನ್ಯತೆ ಮಾಡಿದ ಪ್ರಪ್ರಥಮ ರಾಷ್ಟ್ರ ಭಾರತ. ಪಂಚಶೀಲ ಹಾಗೂ ಹಿಂದಿ–ಚೀನೀ ಭಾಯಿಭಾಯಿ ತತ್ವದ ಆಧಾರದಲ್ಲಿ ಪರಸ್ಪರ ಭಾರತ–ಚೀನಾ ಸಂಬಂಧವನ್ನು ಬೆಳೆಸಿಕೊಳ್ಳಲು ಯತ್ನಿಸಲಾಯಿತು. ಆದರೆ ಈ ರಚನಾತ್ಮಕ ಸಹಕಾರ, ನಿರೀಕ್ಷಿಸಿದ ಫಲವನ್ನು ನೀಡಿರುವುದಿಲ್ಲ.

ಭಾರತದ ಧೋರಣೆಯ ವಿರುದ್ಧ ಚೈನಾ ಟಿಬೇಟನ್ನು ವಶಪಡಿಸಿಕೊಂಡಿತು. 1962ರಲ್ಲಿ ಚೀನಾ ಭಾರತವನ್ನು ಆಕ್ರಮಿಸಿತು ಹಾಗೂ ಯುದ್ಧದಲ್ಲಿ ಭಾರತ ಸೋಲು ಅನುಭವಿಸಿತು. ನಮ್ಮ ರಾಜ್ಯಗಳಲ್ಲೊಂದಾದ ಅರುಣಾಚಲ ಪ್ರದೇಶವನ್ನು ಚೈನಾ ತನ್ನದೆಂದು ಪ್ರತಿಪಾದಿಸುತ್ತಿದ್ದು ಈ ವಿಷಯ ಭಾರತ–ಚೈನಾಗಳ ಪರಸ್ಪರ ಸಂಬಂಧದ ಮೇಲೆ ದುಷ್ಪರಿಣಾಮ ಬೀರುವಂತಹದು. ಮಾವೋವಾದಿಗಳು ಭಾರತದಲ್ಲಿ ನಕ್ಸಲವಾದವನ್ನು ಪಸರಿಸುವುದರಿಂದ ಈ ಎರಡು ರಾಷ್ಟ್ರಗಳ ಮಧ್ಯೆ ಮನಸ್ತಾಪವಿದೆ. ಭಾರತ ಚೈನಾದ ಮಧ್ಯೆ ಇರುವ ಗಡಿಯೂ ಅಂತಿಮವಾಗಿ ನಿರ್ಣಯವಾಗಿಲ್ಲ. ಹೀಗಾಗಿ ನಮ್ಮೆರಡು ರಾಷ್ಟ್ರಗಳ ಮಧ್ಯೆ ಗಡಿ ರೇಖೆ ನಿಖರವಾಗಿ ಇರುವುದಿಲ್ಲ. ಬದಲಾಗಿ ವಾಸ್ತವಿಕ ನಿಯಂತ್ರಣ ರೇಖೆ ಮಾತ್ರ ಈ ಎರಡು ರಾಷ್ಟ್ರಗಳ ಮಧ್ಯೆ ಇರುತ್ತದೆ. ಅಣ್ವಸ್ತ್ರಗಳ ತಯಾರಿ, ವಿದೇಶೀ ವ್ಯಾಪಾರದ ಸವಾಲುಗಳು, ಗಡಿಯಲ್ಲಿ ಮಿಲಿಟರಿ ಪಡೆಗಳ ಅತಿಕ್ರಮಣ ಇವೆಲ್ಲಾ ಚೈನಾದ ಬಗೆಗೆ ಭಾರತದ ನೀತಿಯ ಮೇಲೆ ಪರಿಣಾಮ ಬೀರುತ್ತವೆ.

3. **ಭಾರತ ಮತ್ತು ನೇಪಾಳ :** ಪರ್ವತಗಳಿಂದ ಆವೃತವಾದ ನೇಪಾಳ ನಮ್ಮ ಉತ್ತರ ಭಾಗದ ಪುಟ್ಟ ನೆರೆ ರಾಷ್ಟ್ರ. ನಮ್ಮ ವಿದೇಶಾಂಗ ನೀತಿ ನೆರೆಹೊರೆಯ ಏಷ್ಯಾ ರಾಷ್ಟ್ರಗಳ ಪರವಾಗಿದೆ. ಸಹಜವಾಗಿ ಭಾರತ ಭೌಗೋಳಿಕವಾಗಿ ಸಮೀಪದಲ್ಲಿರುವ ನೇಪಾಳಕ್ಕೆ ಸಹಾಯ ನೀಡುತ್ತಿದೆ. ನಮ್ಮೊಳಗೆ ಪರಸ್ಪರ ಸಾಂಸ್ಕೃತಿಕ ಸಂಬಂಧಗಳಿವೆ ಹಾಗೂ ಸಮಾನ ಸಾಮಾಜಿಕ ಅಂಶಗಳಿವೆ. 'ಸಾರ್ಕ್' (ಸೌತ್ ಏಷಿಯನ್ ಅಸೋಸಿಯೇಶನ್ ಫಾರ್ ರೀಜಿನಲ್ ಕೋ–ಅಪರೇಶನ್) ಸದಸ್ಯ ರಾಷ್ಟ್ರಗಳೆನಿಸಿದ ಭಾರತ–ನೇಪಾಳ ಪರಸ್ಪರ ಸಾಮಿಪ್ಯತೆ ಹೊಂದಿವೆ. ನೇಪಾಳದಲ್ಲಿ ರಾಜಪ್ರಭುತ್ವ ಕಣ್ಮರೆಯಾದ ಬಳಿಕ ಇದೀಗ ಚೈನಾದ ಕಮ್ಯುನಿಸ್ಟ್ ಪ್ರಭಾವ ವಿಶೇಷವಾಗಿ ಕಾಣಿಸುತ್ತಿದೆ. ನೇಪಾಳ ರಾಜಕೀಯ ಸ್ಥಿರತೆಗೆ ಪೂರಕವಾಗಿ ರಾಜ ತಾಂತ್ರಿಕ ನೆರವು ಹಾಗೂ ಆರ್ಥಿಕ ಸಹಕಾರವನ್ನು ಭಾರತ ನೀಡುತ್ತಿದೆ. ಭಾರತ ಹಲವಾರು ಬಗೆಗಿನ ವ್ಯಾಪಾರದ ರಿಯಾಯತಿಗಳನ್ನು ನೇಪಾಳಕ್ಕೆ ನೀಡಿದೆ. ಆದರೆ ನೇಪಾಳದ ಮೂಲಕ ಮಾದಕವಸ್ತುಗಳು ಹಾಗೂ ಶಸ್ತ್ರಾಸ್ತ್ರಗಳ ಕಳ್ಳ ಸಾಗಾಣಿಕೆಯನ್ನು ದೃಢವಾಗಿ ಭಾರತ ಹತ್ತಿಕ್ಕಬೇಕಾಗಿದೆ.

4. **ಭಾರತ ಮತ್ತು ಬಾಂಗ್ಲಾದೇಶ :** 1971ರಲ್ಲಿ ಬಾಂಗ್ಲಾದೇಶದ ನಿರ್ಮಾಣದಲ್ಲಿ ಭಾರತ ಪ್ರಧಾನ ಪಾತ್ರ ವಹಿಸಿತು. ಹಿಂದಿನ ಪೂರ್ವಪಾಕಿಸ್ತಾನ ಬಾಂಗ್ಲಾದೇಶ ಎಂಬ ಹೆಸರಿನಲ್ಲಿ ಸ್ವತಂತ್ರ ರಾಷ್ಟ್ರವಾಗಿ ಉದಯಿಸಲು 1971ರ ಭಾರತ–ಪಾಕಿಸ್ತಾನ ಯುದ್ಧದಲ್ಲಿ ಭಾರತ ಜಯಗೊಳಿಸಿದುದೇ ಮುಖ್ಯ ಕಾರಣ. ನಮ್ಮ ಪೂರ್ವ ಭಾಗದಲ್ಲಿರುವ ಬಾಂಗ್ಲಾದೇಶವನ್ನು ಭಾರತ ಭೌಗೋಳಿಕವಾಗಿ ಆವರಿಸಿದೆ. ಆ ರಾಷ್ಟ್ರ 1947ರವರೆಗೂ ಭಾರತದ ಭೂ ಭಾಗ ಎನಿಸಿದ್ದು, ಸಹಜವಾಗಿ ನಮ್ಮೊಂದಿಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಬಂಧ ಹೊಂದಿದೆ. ಅನೇಕ ರಾಜಕೀಯ ಏರುಪೇರುಗಳ ಹೊರತಾಗಿಯೂ ಭಾರತ ಬಾಂಗ್ಲಾದೇಶದೊಂದಿಗೆ ಉತ್ತಮ ಸಂಬಂಧವನ್ನು ಇರಿಸಿಕೊಂಡಿದೆ. ಬಾಂಗ್ಲಾದೇಶೀಯರ ಅಕ್ರಮ ಪ್ರವೇಶ, ಶಸ್ತ್ರಾಸ್ತ್ರಗಳ ಹಾಗೂ ಮಾದಕ ಪದಾರ್ಥಗಳ ಅಕ್ರಮ ಸಾಗಾಣಿಕೆ, ಭಯೋತ್ಪಾದಕತೆ ಮುಂತಾದ ಸಮಸ್ಯೆಗಳನ್ನು ನಿವಾರಿಸಬೇಕಾಗಿದೆ. ನದಿ ನೀರು, ಸಾರಿಗೆ, ಅಂತರರಾಷ್ಟ್ರೀಯ ವ್ಯಾಪಾರ, ಗಡಿ ವಿಷಯ

ಮುಂತಾದುವುಗಳಲ್ಲಿ ಭಾರತ ಬಾಂಗ್ಲಾದೇಶದ ಬಗ್ಗೆ ಹೆಚ್ಚಿನ ಸಹಾನುಭೂತಿ ಹೊಂದಿದೆ.

5. **ಭಾರತ ಹಾಗೂ ಶ್ರೀಲಂಕಾ :** ಶ್ರೀಲಂಕಾ ಭಾರತದ ದಕ್ಷಿಣದಲ್ಲಿರುವ ಸಣ್ಣ ರಾಷ್ಟ್ರವಾದರೂ ಅದರೊಂದಿಗೆ ಸಮಾನ ಸಾರ್ವಭೌಮ ಸಿದ್ಧಾಂತದ ಆಧಾರದಲ್ಲಿ ಉತ್ತಮ ಸಂಬಂಧ ಇರಿಸಿಕೊಳ್ಳಲಾಗಿದೆ. ಇತಿಹಾಸ ಪೂರ್ವದಿಂದಲೂ ಭಾರತ–ಶ್ರೀಲಂಕಾ ಮಧ್ಯೆ ಉತ್ತಮ ಸಂಬಂಧವಿತ್ತು. ಶ್ರೀಲಂಕಾ 'ಸಾರ್ಕ್' ರಾಷ್ಟ್ರ ಸಂಘದ ಸದಸ್ಯತ್ವ ಹೊಂದಿದೆ. ರಾಜಕೀಯ ಹಾಗೂ ಆರ್ಥಿಕ ರಂಗದಲ್ಲಿ ಭಾರತ ಶ್ರೀಲಂಕಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ. ಒಮ್ಮೆ ನಾವು ಶ್ರೀಲಂಕಾದ ಜಾಫ್ನಾ ಭಾಗದ 'ಎಲ್‌ಟಿಟಿಇ'ಎಂಬ ತಮಿಳು ಪ್ರತ್ಯೇಕತಾ ವಾದಿಗಳನ್ನು ಹಿಮ್ಮೆಟ್ಟಿಸಲು ಮಿಲಿಟರಿ ಸಹಾಯ ನೀಡಿದ್ದೆವು. ಭಾರತವು ತಮಿಳು ಆಂದೋಲನವನ್ನು ಸೂಕ್ತವಾಗಿ ಗಮನಿಸುತ್ತಿದೆ ಹಾಗೂ ಶ್ರೀಲಂಕಾದ ಸಿಂಹಳೀಯರ ಹಾಗೂ ತಮಿಳರ ಮಧ್ಯೆ ಉತ್ತಮ ಬಾಂಧವ್ಯವಿರಲಿ ಎಂದು ಹಾರೈಸುತ್ತದೆ. ಚರಿತ್ರೆಯ ಕಾಲಘಟ್ಟದಲ್ಲಿ ಬೌದ್ಧ ಧರ್ಮ ಭಾರತೀಯ ಭಿಕ್ಷುಗಳಿಂದ ಶ್ರೀಲಂಕಾದಲ್ಲಿ ಪಸರಿಸಲ್ಪಟ್ಟಿತು. ನಾವು ಆ ದೇಶದೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದ್ದೇವೆ.

6. **ಭಾರತ ಮತ್ತು ಅಮೆರಿಕ :** ಭಾರತ ಹಾಗೂ ಅಮೆರಿಕಾ ಸಂಯುಕ್ತ ಸಂಸ್ಥಾನ ಎರಡು ಬೃಹತ್ ರಾಷ್ಟ್ರಗಳು ಹಾಗೂ ಪ್ರಜಾತಂತ್ರ ವ್ಯವಸ್ಥೆ ಹೊಂದಿದವುಗಳು. ಪ್ರಚಲಿತ ಜಾಗತಿಕ ವಿದ್ಯಮಾನದಲ್ಲಿ ಈ ಎರಡು ರಾಷ್ಟ್ರಗಳ ಪರಸ್ಪರ ಮೈತ್ರಿ ತುಂಬಾ ಪ್ರಾಮುಖ್ಯ ಎನಿಸುವಂತಹುದು. 1947 ರ ಬಳಿಕ ಈ ಎರಡು ರಾಷ್ಟ್ರಗಳ ಸಂಬಂಧ ರಾಷ್ಟ್ರೀಯ ಹಿತಾಸಕ್ತಿಗಳನ್ನು ಆಧರಿಸಿ ಹಲವಾರು ಸ್ಥಿತ್ಯಂತರಗಳನ್ನು ಕಂಡಿದೆ. ಜಗತ್ತು ರಾಜಕೀಯ ಧ್ರುವೀಕರಣವನ್ನು ಕಂಡಾಗ, ಭಾರತ ಅಲಿಪ್ತ ನೀತಿ ಅನುಸರಿಸಿತು. ಹಾಗೂ ಅಮೆರಿಕಾ ನಾಯಕತ್ವದ ಪ್ರಜಾಪ್ರಭುತ್ವ ಗುಂಪಿನಿಂದ ಅಂತೆಯೇ ಸೋವಿಯತ್ ರಷ್ಯಾದ ಹಿರಿತನದ ಕಮ್ಯುನಿಸ್ಟ್ ಬಣದಿಂದ ಸಮಾನ ದೂರದಲ್ಲಿರುವ ನೀತಿ ಅನುಸರಿಸಿತು. ಭಾರತದ ಪಂಚವಾರ್ಷಿಕ ಯೋಜನೆಗೆ ಅಮೆರಿಕಾ ತುಂಬಾ ಸಹಾಯ ನೀಡಿತು. 1962ರ ಚೀನಾ ಆಕ್ರಮಣ ಸಂದರ್ಭದಲ್ಲಿಯೂ ಅಮೆರಿಕಾದ ಸಹಾಯ ನಮಗೆ ತುಂಬಾ ಶಕ್ತಿ ನೀಡಿತು. ಆದರೆ ಆ ಬಳಿಕ ಅಲ್ಲಿನ ರಾಜಕೀಯ ಮುಖಂಡರು ಭಾರತ–ಪಾಕಿಸ್ತಾನ ಯುದ್ಧಗಳ ವೇಳೆ ಪಾಕಿಸ್ತಾನಕ್ಕೆ ಸಹಾಯ ನೀಡಿದರು. ಅನೇಕ ಬಾರಿ ಅಮೆರಿಕಾದ ವಿದೇಶಾಂಗ ನೀತಿ ಭಾರತದ ವಿರುದ್ಧವಿದ್ದು ಪಾಕಿಸ್ತಾನದ ಪರವಾಗಿತ್ತು. ಭಯೋತ್ಪಾದನೆಯನ್ನು ಹತ್ತಿಕ್ಕುವಲ್ಲಿ ನಮ್ಮೆರಡು ರಾಷ್ಟ್ರಗಳ ಮಧ್ಯೆ ಸಮಾನ ಹಿತಾಸಕ್ತಿಯಿದೆ. ಭಾರತ ವಿದೇಶೀ ವ್ಯಾಪಾರ, ವಿಜ್ಞಾನ ಮತ್ತು ತಾಂತ್ರಿಕತೆ, ಬಾಹ್ಯಾಕಾಶ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಅಮೆರಿಕಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ. ವಿಶ್ವಸಂಸ್ಥೆಯನ್ನು ಬಲಪಡಿಸುವ ಹಾಗೂ ಜಾಗತಿಕ ಶಾಂತಿಯನ್ನು ಉಳಿಸುವ ನಿಟ್ಟಿನಲ್ಲಿ ಎರಡೂ ರಾಷ್ಟ್ರಗಳು ಸಮಾನ ಧೋರಣೆ ಹೊಂದಿವೆ. ಅಮೆರಿಕಾದ ರಿಪಬ್ಲಿಕನ್ ಹಾಗೂ ಡೆಮಾಕ್ರೆಟಿಕ್ ಪಕ್ಷಗಳಿಗೆ ಸೇರಿದ ರಾಷ್ಟ್ರಾಧ್ಯಕ್ಷರ ಧೋರಣೆಗಳನ್ನು ಭಾರತ ಸೂಕ್ಷ್ಮವಾಗಿ ಗಮನಿಸುತ್ತಿದ್ದು ಹಾಗೂ ಅದಕ್ಕನುಗುಣವಾಗಿ ಭಾರತವೂ ತನ್ನ ವಿದೇಶಾಂಗ ನೀತಿಯನ್ನು ಸಿದ್ಧಪಡಿಸುತ್ತದೆ.

7. **ಭಾರತ ಮತ್ತು ರಷ್ಯಾ :** ಭಾರತ ರಷ್ಯಾ ದೇಶದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ ಹಾಗೂ ಅದರ ಹಿಂದಿನ ಸೋವಿಯತ್ ರಷ್ಯಾ ಒಕ್ಕೂಟದೊಂದಿಗೂ ಅಂತಹದೇ ಒಳ್ಳೆಯ ಸಂಬಂಧ ಹೊಂದಿತ್ತು. ಭಾರತ ಅಲಿಪ್ತ ನೀತಿ ಹೊಂದಿದ್ದರೂ, ಭಾರತ–ಸೋವಿಯತ್ ಒಪ್ಪಂದವು ರಾಜಕೀಯ, ಆರ್ಥಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಉತ್ತಮ ಪ್ರಗತಿಯನ್ನು ಕಂಡಿತು. (1962ರಲ್ಲಿನ ಚೈನಾ ದಾಳಿಯನ್ನು

ಸೋವಿಯತ್ ರಷ್ಯಾ ಖಂಡಿಸಿತ್ತು. 1961 ರಲ್ಲಿ ಗೋವಾ ವಿಮೋಚನೆಯ ಸಂದರ್ಭದಲ್ಲಿ ಸೋವಿಯತ್ ರಷ್ಯಾ ಭಾರತಕ್ಕೆ ವಿಶ್ವ ಸಂಸ್ಥೆಯಲ್ಲಿ ಸಹಕಾರ ನೀಡಿತ್ತು.) 1966ರ ತಾಷ್ಕೆಂಟಿನಲ್ಲಿ ಭಾರತ–ಪಾಕಿಸ್ತಾನಗಳ ಮಧ್ಯೆ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು. 1971 ರಲ್ಲಿ ಭಾರತ ಮತ್ತು ರಷ್ಯಾ 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದವು. ಭಾರತದ ಭಿಲ್ಯಾ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸೋವಿಯತ್ ರಷ್ಯಾ ಸಹಕರಿಸಿತ್ತು. ನಮ್ಮ ರಾಷ್ಟ್ರದ ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರಗಳ ಬೆಳವಣಿಗೆಗೆ ರಷ್ಯಾದಿಂದ ಹೆಚ್ಚಿನ ನೆರವು ಪಡೆದಿದ್ದೇವೆ. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ರಷ್ಯಾ ಪ್ರತಿಪಾದಿಸುತ್ತಿದೆ.

ಭಾರತವು ತನ್ನ ಸಮೀಪದ ದೇಶಗಳಾದ ಭೂತಾನ್, ಅಫಘಾನಿಸ್ತಾನ, ಮಾಲ್ಡೀವ್ಸ್, ಇಂಡೋನೇಶಿಯಾ ಹಾಗೂ ವಿಶ್ವದ ವಿವಿಧ ಖಂಡಗಳ ರಾಷ್ಟ್ರಗಳೊಂದಿಗೆ ತನ್ನ ನಿಕಟ ಸಂಬಂಧ ಹೊಂದಿದೆ.

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ಭಾರತವು ____________ ಖಂಡದಲ್ಲಿದೆ.
2. ಬಾಂಗ್ಲಾದೇಶವು ನಮ್ಮ ___________ ಭಾಗದಲ್ಲಿದೆ.
3. ಚರಿತ್ರೆಯ ಕಾಲಘಟ್ಟದಲ್ಲಿ ಬೌದ್ಧ ಧರ್ಮ ಭಾರತೀಯ ಭಿಕ್ಷುಗಳಿಂದ ___________ ದಲ್ಲಿ ಪಸರಿಸಲ್ಪಟ್ಟಿತು.
4. ಭಾರತದ ಭಿಲ್ಯಾ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ___________ ದೇಶವು ಸಹಕರಿಸಿತ್ತು.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.

1. ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಅವಶ್ಯಕ ಏಕೆ?
2. ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು?
3. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧ್ಯವ್ಯ ಹದಗೆಡಲು ಕಾರಣಗಳಾವುವು?
4. ಭಾರತ– ಶ್ರೀಲಂಕಾದ ಬಾಂದವ್ಯವು ಐತಿಹಾಸಿಕವಾದದು. ಈ ಹೇಳಿಕೆಯ ಹಿನ್ನೆಲೆಯಲ್ಲಿ ಈ ರಾಷ್ಟ್ರಗಳ ಬಾಂದ್ಯವ್ಯವನ್ನು ವಿಮರ್ಶಿಸಿ.
5. ಭಾರತ ಮತ್ತು ಅಮೆರಿಕಾ ದೇಶಗಳು ಪ್ರಜಾತಂತ್ರ ದೇಶಗಳಾಗಿದ್ದು. ಇವುಗಳ ಪರಸ್ಪರ ಸೌಹಾರ್ದತೆಯು ಹೇಗಿದೆ ಎಂಬುದನ್ನು ವಿವರಿಸಿ.
6. ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.

III. ಚಟುವಟಿಕೆಗಳು

1. ಶ್ರೀಲಂಕಾದ ಜನಾಂಗೀಯ ಕಲಹದಲ್ಲಿ ಭಾರತದ ಪಾತ್ರದ ಬಗ್ಗೆ ಮಾಹಿತಿ ಸಂಗ್ರಹಿಸಿ ಬರೆಯಿರಿ.
2. ಭಾರತದ ಭೂಪಟ ಬಿಡಿಸಿ, ನೆರೆ ರಾಷ್ಟ್ರಗಳನ್ನು ಗುರುತಿಸಿ.

ಅಧ್ಯಾಯ-4

ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಮಾನವ ಹಕ್ಕುಗಳ ನಿರಾಕರಣೆ*
- *ಶಸ್ತ್ರಾಸ್ತ್ರಗಳ ಪೈಪೋಟಿ*
- *ಆರ್ಥಿಕ ಅಸಮಾನತೆ*
- *ವರ್ಣ ಭೇದ ನೀತಿ*
- *ಭಯೋತ್ಪಾದಕತೆ*

ದ್ವಿತೀಯ ಜಾಗತಿಕ ಯುದ್ಧದ ಬಳಿಕ ವಸಾಹತುಶಾಹಿತ್ವ ಹಾಗೂ ಸಾಮ್ರಾಜ್ಯಶಾಹಿತ್ವ ಪತನಗೊಂಡವು. ಹಳೆಯ ಜಗತ್ತಿನ ಬದಲಾವಣೆಯೊಂದಿಗೆ ನೂತನ ಜಗತ್ತು ಹುಟ್ಟಿಕೊಳ್ಳಲಾರಂಭಿಸಿತು. 1945ರಲ್ಲಿ ವಿಶ್ವಸಂಸ್ಥೆ ಅಥವಾ ಸಂಯುಕ್ತ ರಾಷ್ಟ್ರ ಸಂಘದ ಆರಂಭದೊಂದಿಗೆ ಹೊಸ ಶಕೆ ಆರಂಭಗೊಂಡಿತು. ಆದರೂ ಜಾಗತಿಕವಾಗಿ ಮಾನವ ಹಕ್ಕುಗಳು, ಶಸ್ತ್ರಾಸ್ತ್ರಗಳ ಪೈಪೋಟಿ, ಆರ್ಥಿಕ ಅಸಮಾನತೆ, ವರ್ಣಭೇಧ ನೀತಿ ಹಾಗೂ ಭಯೋತ್ಪಾದಕತೆಯಂತಹ ಹಲವಾರು ಸಮಸ್ಯೆಗಳು ಇನ್ನೂ ಹಾಗೆಯೇ ಉಳಿದುಕೊಂಡಿವೆ. ವಿಶ್ವಕುಟುಂಬದ ಓರ್ವ ಮುಂಚೂಣಿಯ ಸದಸ್ಯರಾಷ್ಟ್ರವಾಗಿ ಭಾರತ ಈ ಎಲ್ಲಾ ಜಾಗತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪೂರಕ ಪ್ರಯತ್ನ ನಡೆಸುತ್ತಿದೆ.

1. ಮಾನವ ಹಕ್ಕುಗಳ ನಿರಾಕರಣೆ : ಮಾನವತಾವಾದಿಗಳು ಪ್ರತಿಯೊಬ್ಬನ ಜನ್ಮತಃ ಅಥವಾ ಹುಟ್ಟಿನಿಂದಲೇ ಬರತಕ್ಕಂತಹ ಹಕ್ಕುಗಳ ಬಗೆಗೆ ಪ್ರತಿಪಾದಿಸಿದ್ದಾರೆ. ಆದರೆ ದುರದೃಷ್ಟವಶಾತ್ ಪ್ರಪಂಚದ ಬಹುತೇಕ ಮಂದಿ ಸುಧೀರ್ಘ ಕಾಲಾವಧಿಯಲ್ಲಿ ಈ ಮಾನವ ಹಕ್ಕುಗಳನ್ನು ಅನುಭವಿಸಿಲ್ಲ. ಧರ್ಮ, ಜನಾಂಗ, ಲಿಂಗ, ಜಾತಿ, ವರ್ಣ ಹಾಗೂ ರಾಷ್ಟ್ರೀಯತೆ ಈ ಎಲ್ಲವುಗಳನ್ನು ಕಾರಣವಾಗಿರಿಸಿ, ಮಾನವ ಹಕ್ಕುಗಳ ನಿರಾಕರಣೆ ಹಾಗೂ ಶೋಷಣೆಯನ್ನು ನಾವು ಕಾಣಬಹುದಾಗಿದೆ.

> ***ನಿಮಗಿದು ತಿಳಿದಿರಲಿ :***
>
> *ಭಾರತ ಸಂವಿಧಾನದಿಂದ ಖಾತರಿಪಡಿಸಲಾಗಿರುವ ಅಥವಾ ಅಂತರರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಸೇರಿಸಲಾಗಿರುವ ಮತ್ತು ಬದುಕುವ, ಸ್ವಾತಂತ್ರ್ಯದ, ಸಮಾನತೆ ಮತ್ತು ವ್ಯಕ್ತಿಯ ಘನತೆಯ ಹಕ್ಕುಗಳು ಮಾನವ ಹಕ್ಕುಗಳು".*

1776ರ ಅಮೆರಿಕಾದ ಸ್ವಾತಂತ್ರ್ಯ ಯುದ್ಧ, 1789ರ ಫ್ರಾನ್ಸಿನ ಮಹಾಕ್ರಾಂತಿ, 1917ರ ರಷ್ಯಾಕ್ರಾಂತಿ, 20ನೆಯ ಶತಮಾನದ ಪ್ರಥಮಾರ್ಧದ ಭಾರತ ಹಾಗೂ ಇನ್ನಿತರ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟ, ಇವೆಲ್ಲಾ ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ತಂದುಕೊಟ್ಟವು. ಮಾನವ ಹಕ್ಕುಗಳ ನಿರಾಕರಣೆಯ ವಿರುದ್ಧ, 1948ರ ಡಿಸಂಬರ 10ರ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಉದ್ಘೋಷಣೆ ಒಂದು ಪ್ರಮುಖ ಮೈಲುಗಲ್ಲು ಎಂಬುದಾಗಿ ಭಾವಿಸಬಹುದಾಗಿದೆ. ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತ ನಿರಂತರ ಪ್ರತಿಪಾದಿಸುತ್ತಾ ಬಂದಿದೆ. ಭಾರತ ತನ್ನ ಸಂವಿಧಾನದಲ್ಲಿಯೂ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ ಹಾಗೂ ಈ ವಿಚಾರದ ಬಗೆಗೆ ಬೆಳಕು ಚೆಲ್ಲಿದೆ. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿಯೂ ವಿಶ್ವದಾದ್ಯಂತ ಮಾನವ ಹಕ್ಕುಗಳು ಸುರಕ್ಷಿತವಾಗಿರಬೇಕೆಂಬುದನ್ನು ಭಾರತ ಸಮರ್ಥಿಸುತ್ತಾ ಬಂದಿದೆ. ಗುಲಾಮಗಿರಿ ಪದ್ಧತಿ, ಮಾನವರ

ಮಾರಾಟ, ಮಕ್ಕಳ ದುಡಿಮೆ, ಮಹಿಳಾ ಶೋಷಣೆ ಇತ್ಯಾದಿಗಳನ್ನು ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆ ನಿಷೇಧಿಸಿದೆ. ಬದುಕುವ ಹಾಗೂ ಸ್ವಾತಂತ್ರ್ಯದ ಹಕ್ಕು, ಸ್ವರಕ್ಷಣೆಯ ಹಕ್ಕು, ಧಾರ್ಮಿಕ ಸ್ವಾತಂತ್ರ್ಯ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕು ಇವೆಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೆಲ್ಲಾ ಸಾಂವಿಧಾನಿಕವಾಗಿ ಮಾನ್ಯತೆಗೊಂಡ ಹಕ್ಕುಗಳು ಎನಿಸಿವೆ. ಆದರೆ ನಿರಂಕುಶ ಪ್ರಭುತ್ವಗಳಲ್ಲಿ ಹಾಗೂ ಏಕ ಸಿದ್ಧಾಂತ ಶಾಹಿತ್ವಗಳಲ್ಲಿ ಮೂಲಭೂತ ಹಕ್ಕುಗಳ ನಿರಾಕರಣೆಯನ್ನು ನಾವೂ ಈಗಲೂ ಗಮನಿಸಬಹುದು. ಜನಾಂಗ ಹತ್ಯೆ, ಎಲ್ಲಾ ವಿಧದ ಶೋಷಣೆ ಹಾಗೂ ದಬ್ಬಾಳಿಕೆಗೆ ಭಾರತ ವಿರೋಧ ವ್ಯಕ್ತಪಡಿಸುತ್ತದೆ. ವಿಶ್ವ ಸಂಸ್ಥೆ ಹಾಗೂ ಇನ್ನಿತರ ಜಾಗತಿಕ ವೇದಿಕೆಗಳ ಮೂಲಕ ಭಾರತ ಮಾನವ ಹಕ್ಕುಗಳ ಸಂರಕ್ಷಣೆಗೆ ಯತ್ನಿಸುತ್ತಿದೆ.

2. **ಶಸ್ತ್ರಾಸ್ತ್ರಗಳ ಪೈಪೋಟಿ :** ಒಂದು ಪ್ರಸಿದ್ಧ ಮಾತಿದೆ – 'ಅಣ್ವಸ್ತ್ರಯುಗದಲ್ಲಿ ನಾವು ಯುದ್ಧವನ್ನು ಕೊನೆಗಾಣಿಸಬೇಕು; ಇಲ್ಲವಾದರೆ ಯುದ್ಧ ನಮ್ಮನ್ನು ಕೊನೆಗಾಣಿಸುತ್ತದೆ'. ಪ್ರಚಲಿತ ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿ ಒಂದು ಭಯಾನಕ ವಿದ್ಯಮಾನ ಎಂಬುದಾಗಿ ಕಾಣಿಸುತ್ತದೆ. ನಿಶ್ಶಸ್ತ್ರೀಕರಣ ವಿಶ್ವದ ಇಂದಿನ ಹಾಗೂ ಮುಂದಿನ ಉಳಿವಿಗೆ ಅತ್ಯಗತ್ಯ ಎನಿಸುತ್ತದೆ. ಶಸ್ತ್ರಾಸ್ತ್ರಗಳ ತೀವ್ರ ಪೈಪೋಟಿಯನ್ನು ನಿಲ್ಲಿಸಲು ನಿಶ್ಶಸ್ತ್ರೀಕರಣವೊಂದೇ ಪ್ರಮುಖ ಉಪಾಯ ಎಂದು ಭಾಸವಾಗುತ್ತಿದೆ.

ನಿಶ್ಶಸ್ತ್ರೀಕರಣ ಎಂದರೆ ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣ ಇಲ್ಲವಾಗಿಸುವ ನೇರ ಪ್ರಕ್ರಿಯೆ. ಶಸ್ತ್ರಾಸ್ತ್ರಗಳ ಸ್ಪರ್ಧೆಯಿಂದ ವಿಶ್ವದಾದ್ಯಂತ ಭಯ, ಅಸ್ಥಿರತೆ, ಚಡಪಡಿಕೆ ಹಾಗೂ ಯುದ್ಧದ ಸಂಭವ ತಲೆದೋರುತ್ತದೆ. ಈ ಎಲ್ಲಾ ಅನಿಷ್ಟಗಳನ್ನು ದೂರವಿರಿಸುವ ದೃಷ್ಟಿಯಿಂದ ನಿಶ್ಶಸ್ತ್ರೀಕರಣ ಪ್ರಚಲಿತ ಜಗತ್ತಿನ ಅವಶ್ಯಕತೆ ಎಂಬುದಾಗಿ ಭಾವಿಸಲ್ಪಡುತ್ತದೆ. ಅದೇ ರೀತಿ ಶಸ್ತ್ರಾಸ್ತ್ರಗಳು ಹಾಗೂ ಮದ್ದುಗುಂಡುಗಳು ಆರ್ಥಿಕವಾಗಿಯೂ ಒಂದು ಅನಗತ್ಯ ನಷ್ಟದಾಯಕ ಎಂದೂ ಭಾವಿಸಲಾಗುತ್ತದೆ. ಅಮೇರಿಕಾದ ಅಧ್ಯಕ್ಷ ಐಸನ್ ಹೋವರ್ ಒಮ್ಮೆ ಹೀಗೆ ಉದ್ಗರಿಸಿದ್ದರು. 'ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಲ್ಲ; ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ'.

ಅಣ್ವಸ್ತ್ರ ಅಥವಾ ನ್ಯೂಕ್ಲಿಯರ್ ಬಾಂಬುಗಳ ತಯಾರಿಯೊಂದಿಗೆ ನಿಶ್ಶಸ್ತ್ರೀಕರಣ ಅಥವಾ ಶಸ್ತ್ರ ನಿಯಂತ್ರಣದ ಪ್ರಶ್ನೆ ತೀರಾ ಗಂಭೀರ ಎಂದು ಪರಿಗಣಿಸಲಾಗಿದೆ. ಭಾರತ ಒಂದು ಶಾಂತಿಪ್ರಿಯ ರಾಷ್ಟ್ರವಾದುದರಿಂದ ಶಸ್ತ್ರಾಸ್ತ್ರಗಳ ನಿಯಂತ್ರಣವನ್ನು ಪ್ರತಿಪಾದಿಸುತ್ತದೆ. ಮುಂದಿನ ಜಾಗತಿಕ ಸುರಕ್ಷೆಯ ದೃಷ್ಟಿಯಿಂದ ಯುದ್ಧಗಳ ನಿವಾರಣೆ ತುಂಬಾ ಅವಶ್ಯಕವಾಗಿದೆ. 1963ರ ಬಳಿಕ ಅಮೇರಿಕಾ ಸಂಯುಕ್ತ ಸಂಸ್ಥಾನ ಹಾಗೂ ಸೋವಿಯತ್ ರಷ್ಯಾ ಹಲವಾರು ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಂಡವು. ನಿರ್ಣಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ (ಸಾಲ್ಟ್), ಪಾಕ್ಷಿಕ ಪ್ರಯೋಗ ನಿಷೇದ ಒಪ್ಪಂದ, ಸಮಗ್ರ ಪರೀಕ್ಷಣಾ ನಿಷೇದ ಒಪ್ಪಂದ (ಸಿಟಿಬಿಟಿ), ಫಲಿಕೆ ನಿಷೇಧ ಒಪ್ಪಂದ ಇವುಗಳು ಅಣುಶಸ್ತ್ರಗಳ ತಡೆಗಟ್ಟುವಲ್ಲಿ ಕೆಲವೊಂದು ಮಹತ್ವದ ವಿಶ್ವ ಮಟ್ಟದ ಸಂಧಿಗಳು ಎಂದು ಪರಿಗಣಿಸಬಹುದು. ಹೀಗೆ "ಪರಸ್ಪರ ನಿಶ್ಚಿತ ನಾಶ"ದ ವಿರುದ್ಧ ಭಾರತವು ಸೇರಿ ಎಲ್ಲಾ ರಾಷ್ಟ್ರಗಳೂ ಪ್ರಯತ್ನಿಸುವ ಅವಶ್ಯಕತೆಯಿದೆ.


3. **ಆರ್ಥಿಕ ಅಸಮಾನತೆ :** ವಿಶ್ವ ಕುಟುಂಬದ ಸದಸ್ಯರಲ್ಲಿ ಪರಸ್ಪರ ಆರ್ಥಿಕ ಅಸಮಾನತೆಯ ಒಂದು ಪ್ರಮುಖ ಸಮಸ್ಯೆಯಿದೆ. ಇದು ವಸಾಹತುಶಾಹಿತ್ವ ಹಾಗೂ ಸಾಮ್ರಾಜ್ಯಶಾಹಿತ್ವದ ಒಂದು ಐತಿಹಾಸಿಕ ನೆಲೆಯ ಬಳುವಳಿ ಎಂದೂ ಭಾವಿಸಬಹುದಾಗಿದೆ. ಐರೋಪ್ಯ ರಾಷ್ಟ್ರಗಳು ಆಫ್ರಿಕಾ, ಏಷ್ಯಾ ಹಾಗೂ ಲ್ಯಾಟಿನ್ ಅಮೇರಿಕನ್ ರಾಷ್ಟ್ರಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದವು. ಈ ಸಾಮ್ರಾಜ್ಯ ಶಾಹಿತ್ವದ

ಕೈಕೆಳಗೆ ಇದ್ದಂತಹ ರಾಷ್ಟ್ರಗಳು ಆರ್ಥಿಕವಾಗಿ ತೀರಾ ಹಿಂದುಳಿದವು. 20ನೇ ಶತಮಾನದ ಪೂರ್ವ ಭಾಗದವರೆಗೆ ಅವರ ಪ್ರಗತಿ ತೀರಾ ಕುಂಠಿತವಾಗಿತ್ತು. ಸ್ವಾತಂತ್ರ್ಯಾನಂತರ ಏಷ್ಯಾ ಹಾಗೂ ಆಫ್ರಿಕಾದ ರಾಷ್ಟ್ರಗಳು ಅಭಿವೃದ್ಧಿ ಸಾಧಿಸಲು ಪ್ರಯತ್ನಿಸಿದವು. ಆದರೆ ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಆರ್ಥಿಕ ಅಡಚಣೆ ತಲೆದೋರಿತ್ತು. ಹಾಗಾಗಿ ವಿದೇಶೀ ಆರ್ಥಿಕ ಸಹಕಾರ ಇವುಗಳಿಗೆ ತೀರಾ ಅವಶ್ಯಕ ಎಂದು ಕಂಡು ಬಂತು.

ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಿಗೆ 1945ರ ಬಳಿಕದ ರಾಜಕೀಯ ಧ್ರುವೀಕರಣ ಆಧರಿಸಿ ಅಮೆರಿಕಾ ಹಾಗೂ ಸೋವಿಯತ್ ರಷ್ಯಾದ ಗುಂಪುಗಳು ಸಹಾಯ ನೀಡಲು ಆರಂಭಿಸಿದವು. ಆದರೆ ಈ ರಾಷ್ಟ್ರಗಳ ಬಡತನ, ಮುಂದುವರಿದ ದೇಶಗಳ ರಾಜಕೀಯ ಸ್ವಾರ್ಥದ ಸಾಧನೆಗೆ ಪೂರಕವಾಗಿ ಪರಿಣಮಿಸಿತು.

ಮುಂದಿನ ಕಾಲಘಟ್ಟದಲ್ಲಿ ಭಾರತ ಅಲಿಪ್ತ ನೀತಿಯನ್ನು ಜಗತ್ತಿನಲ್ಲಿ ಮುಂದುವರಿಸಿತು. ಯಾವುದೇ ಷರತ್ತುಗಳಿಲ್ಲದೆ ಮುಂದುವರಿದ ದೇಶಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿಯನ್ನು ಭಾರತ ಪ್ರತಿಪಾದಿಸಿತು. ತನ್ಮೂಲಕ ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಭಾರತ ಎತ್ತಿ ಹಿಡಿಯಲು ಸಹಕರಿಸಿತು. ಅದರೊಂದಿಗೇ ಶ್ರೀಮಂತ ರಾಷ್ಟ್ರಗಳ ಬಂಡವಾಳವೂ ಕೂಡ ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿತು. 'ತೃತೀಯ ಜಗತ್ತು' ಎಂಬ ವಿಚಾರವೇ 'ಬಡ ರಾಷ್ಟ್ರಗಳು' ಎಂಬ ಅಂಶವನ್ನು ಎತ್ತಿ ತೋರುತ್ತಿದೆ. ಈ ದೇಶಗಳು ಆಹಾರ, ಬಂಡವಾಳ, ತಾಂತ್ರಿಕತೆ, ಆರೋಗ್ಯ ಸಲಕರಣೆ, ಉನ್ನತ ವ್ಯಾಸಂಗದ ಅವಕಾಶಗಳು ಮುಂತಾದ ಕೊರತೆಗಳಿಂದ ಹೊರಬರಲು ಪ್ರಯತ್ನಿಸುತ್ತಿವೆ. ಅದೇ ರೀತಿ ಅನ್ಯರಾಷ್ಟ್ರಗಳಲ್ಲಿನ ಅನಗತ್ಯ ವೆಚ್ಚ, ಮುಕ್ತ ವ್ಯಾಪಾರ, ಅಸಮರ್ಪಕ ಪೈಪೋಟಿ, ಜಾಗತೀಕರಣ ಮುಂತಾದ ವಿದ್ಯಮಾನಗಳು ಬಡರಾಷ್ಟ್ರಗಳ ಮೇಲೆ ಹಲವಾರು ಬಾರಿ ದುಷ್ಪರಿಣಾಮ ಬೀರುತ್ತದೆ. ಇವೆಲ್ಲವನ್ನೂ ನೀಗಿಸುವಲ್ಲಿ ವಿಶ್ವಸಂಸ್ಥೆ ಹಾಗೂ ಮುಂದುವರಿದ ರಾಷ್ಟ್ರಗಳು ಪೂರಕವಾಗಿ ಯತ್ನಿಸಬೇಕಾಗಿದೆ. ಭಾರತ ಒಂದು ಪ್ರಗತಿಪರ ರಾಷ್ಟ್ರವಾಗಿ ವಿಶ್ವ ಕುಟುಂಬದ ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯ ಹಾಗೂ ಸಮಾನತೆಯನ್ನು ಪ್ರತಿಪಾದಿಸುತ್ತಿದೆ.

ವರ್ಣ ಭೇದ ನೀತಿ : ವರ್ಣಭೇದ ಹಾಗೂ ಶ್ವೇತ ವರ್ಣೀಯರಲ್ಲದವರ ಬಗೆಗೆ ಅಮಾನವೀಯ ನಡವಳಿಕೆ ಜಾಗತಿಕ ನಾಗರಿಕತೆಗೇ ಒಂದು ಶಾಪ ಎನ್ನಬಹುದು. ಜ್ಞಾನಪುನರುಜ್ಜೀವನದ ಬಳಿಕ ಕಂಡುಕೊಂಡ ಸಮುದ್ರಯಾನದ ಹೊಸ ಹೊಸ ದಾರಿಗಳ ಮೂಲಕ ಯುರೋಪಿಯನ್ನರು ಸಂಚರಿಸಿ ತಮ್ಮ ವಸಾಹತುಗಳನ್ನು ಸ್ಥಾಪಿಸತೊಡಗಿದರು. ಆ ಬಳಿಕ ಜಗತ್ತಿನ ಪೂರ್ವ ಹಾಗೂ ಪಶ್ಚಿಮ ಭಾಗಗಳಲ್ಲಿ ತಮ್ಮ ವಿಶಾಲ ಸಾಮ್ರಾಜ್ಯ ಸ್ಥಾಪಿಸಲು ಪ್ರಾರಂಭಿಸಿದರು. ಅಂತೆಯೇ ಕಪ್ಪು, ಹಳದಿ ಹಾಗೂ ಕಂದು ಮೈ ಬಣ್ಣ ಹೊಂದಿದ ಆಫ್ರಿಕಾ, ಏಷ್ಯಾ ಹಾಗೂ ಅಮೆರಿಕಾ ಖಂಡಗಳ ಜನರನ್ನು ಬಿಳಿ ಜನರು ನಿಕೃಷ್ಟವಾಗಿ ಅಂದರೆ ಕೀಳು ದೃಷ್ಟಿಯಿಂದ ಕಾಣಲಾರಂಭಿಸಿದರು.


ನೆಲ್ಸನ್ ಮಂಡೇಲಾ

ಮಾತ್ರವಲ್ಲ, ಇಡೀ ವಿಶ್ವವನ್ನೇ ಸುಸಂಸ್ಕೃತರನ್ನಾಗಿಸುವುದು **'ಶ್ವೇತವರ್ಣೀಯರ ಹೊಣೆಗಾರಿಕೆ'** ಎಂಬ ವಿಚಾರವನ್ನು ಮುಂದಿಡಲು ಆರಂಭಿಸಿದರು. ಆದರೆ ಇಂತಹ ವರ್ಣಬೇಧ ನೀತಿ ನಿಜಕ್ಕೂ ಅಮಾನವೀಯ ಹಾಗೂ ಅನೈತಿಕ ಎನಿಸುವಂತಹದು. ಹಲವಾರು ಸುಧಾರಣೆಗಳ ಬಳಿಕವೂ ಈ ವರ್ಣದ್ವೇಷ ನೀತಿ

ಸುಧೀರ್ಘಕಾಲ ಮುಂದಿವರಿಯಲಾರಂಭಿಸಿದೆ. ಮಹಾತ್ಮಾಗಾಂಧಿ, ಅಬ್ರಹಾಂ ಲಿಂಕನ್, ಜಾನ್. ಎಫ್. ಕೆನೆಡಿ, ಮಾರ್ಟಿನ್ ಲೂಥರ್ ಹಾಗೂ ನೆಲ್ಸನ್ ಮಂಡೇಲಲರಂತಹ ಹಲವಾರು ಖ್ಯಾತರು ಇದರ ವಿರುದ್ಧ ಹೋರಾಡಿದರು.

1945ರಲ್ಲಿ ದ್ವಿತೀಯ ಮಹಾಯುದ್ಧವು ಕೊನೆಗೊಂಡ ಬಳಿಕ ಹಲವಾರು ಮಹತ್ತರ ಸಾಮಾಜಿಕ ಹಾಗೂ ರಾಜಕೀಯ ಬದಲಾವಣೆಗಳು ಜಾಗತಿಕ ನೆಲೆಯಲ್ಲಿ ಕಾಣಿಸಿ ಕೊಳ್ಳಲಾರಂಭಿಸಿದವು. ಹಲವಾರು ವಸಾಹತು ರಾಷ್ಟ್ರಗಳು ಸ್ವತಂತ್ರವಾದುವು. ಸಾಮ್ರಾಜ್ಯಶಾಹಿತ್ವ ಹಾಗೂ ವಸಾಹತುಶಾಹಿತ್ವ ಕೊನೆಗೊಳ್ಳುವುದರೊಂದಿಗೆ ವರ್ಣಬೇಧ ನೀತಿಯೂ ಮರೆಯಾಗಲಾರಂಭಿಸಿತು. ಆದರೂ ದಕ್ಷಿಣ ಆಫ್ರಿಕಾ ಸುಧೀರ್ಘ ಕಾಲ ಈ ನೀತಿಯನ್ನು ಸಡಿಲಿಸಲು ಮುಂದಾಗಲಿಲ್ಲ. ಅದಕ್ಕೆ ವಿರೋಧವಾಗಿ ಭಾರತ ಸರ್ಕಾರ ಆ ರಾಷ್ಟ್ರ ವರ್ಣಭೇದ ನೀತಿಯನ್ನು ತೊರೆಯುವ ತನಕ ಮಾನ್ಯತೆಯನ್ನು ನೀಡಲಿಲ್ಲ. ಮಾನವ ಹಕ್ಕು ಎಂಬುದು ವರ್ಣ ಭೇದ ರಹಿತ ಸಮಾನತೆಯನ್ನು ಒಳಗೊಂಡಿದೆ ಹಾಗೂ ಈ ತತ್ವವನ್ನು ಭಾರತ ಸಂವಿಧಾನವೂ ಎತ್ತಿ ಹಿಡಿಯುತ್ತಿದೆ.

> *ನೀವೇ ಚಿಂತಿಸಿ :*
> *"ವರ್ಣಬೇಧ ನೀತಿಯು ಜಾಗತಿಕ ಸಮಸ್ಯೆಯಾದರೆ ಜಾತಿ ಪದ್ಧತಿಯು ದೇಶೀಯ ಸಮಸ್ಯೆ" ಇದು ಸಾಮಾಜಿಕ ಪಿಡುಗು.*

ಭಯೋತ್ಪಾದಕತೆ : ಭಯೋತ್ಪಾದಕತೆಯನ್ನು ಭೀತಿವಾದ ಅಥವಾ ಉಗ್ರಗಾಮಿತ್ವ ಎಂದೂ ಕರೆಯಬಹುದು. ಇದು ಒಂದು ಬಲಪ್ರಯೋಗದ ಒತ್ತಡ ತಂತ್ರಗಾರಿಕೆ. ರಾಜಕೀಯ, ಧಾರ್ಮಿಕ, ಅಥವಾ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಗುರಿಹೊಂದಿದ ಭಯೋತ್ಪಾದಕತೆಯು ವ್ಯಕ್ತಿಗಳಿಗೆ ಮತ್ತು ಸೊತ್ತುಗಳಿಗೆ ಅಪಾರ ಹಾನಿ ಉಂಟುಮಾಡುತ್ತದೆ. ಅದರಿಂದಲೂ ಹೆಚ್ಚಾಗಿ ಉಗ್ರಗಾಮಿತ್ವ ಮಾನಸಿಕ ವೇದನೆಯನ್ನು ನೀಡುತ್ತದೆ. ಸಾಮಾಜಿಕ ಸಂಸ್ಕೃತಿಗೆ, ಅದೇ ರೀತಿ ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ. ಉಗ್ರಗಾಮಿ ಸಂಘಟನೆಗಳ ಉದ್ದೇಶ ಪೂರೈಕೆಗಾಗಿ ಹಾಗೂ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆ ಈ ಭಯೋತ್ಪಾದಕತೆ ಎನ್ನಬಹುದು. ಇಂತಹ ಸಂಘಟಿತ ಹಿಂಸೆಯ ಕೃತ್ಯಗಳು ಕಾನೂನು ಬಾಹಿರ ಹಾಗೂ ಸಮಾಜದ್ರೋಹಿ ಎನಿಸುವಂತಹವು. 2001ರಲ್ಲಿ ಅಮೇರಿಕಾದ ವಿಶ್ವ ವ್ಯಾಪಾರ ಕೇಂದ್ರದ ಧ್ವಂಸ, ಅಂತೆಯೇ ಬ್ರಿಟನ್, ಇರಾನ್, ಭಾರತ ಅಫಘಾನಿಸ್ತಾನ, ಪಾಕಿಸ್ತಾನ, ಇಂಡೋನೇಷಿಯಾ ಮುಂತಾದ ಹಲವಾರು ದೇಶಗಳಲ್ಲಿ ಸರಣಿ ಬಾಂಬು ಸ್ಫೋಟಗಳು ಜಾಗತಿಕ ಮಟ್ಟದಲ್ಲಿಯೂ ಅತ್ಯಂತ ಕಳವಳಕಾರಿ ಸಂಗತಿಗಳಾಗಿವೆ. ಈ ಉಗ್ರಗಾಮಿತ್ವವು ಧಾರ್ಮಿಕ ಮೂಲಭೂತ ಚಿಂತನೆಯಿಂದ, ಪ್ರತ್ಯೇಕವಾದದಿಂದ, ತೀವ್ರ ಎಡಪಂಥೀಯ ವಿಚಾರದಿಂದ, ನಾಡ ಬಿಡುಗಡೆಯ ಛಲದಿಂದ, ವರ್ಣದ್ವೇಷ ನೀತಿ ಮುಂತಾದ ವಿಚಾರಧಾರೆಗಳಿಂದ ಪ್ರೇರಿತವಾಗಿರುತ್ತದೆ. ಒಂದು ರಾಷ್ಟ್ರವೇ ಇನ್ನೊಂದು ದೇಶದೊಳಗಿನ ಭಯೋತ್ಪಾದಕತೆಗೆ ಆರ್ಥಿಕ ಹಾಗೂ ಇನ್ನಿತರ ಸಹಕಾರ ನೀಡುವುದೂ ಇದೆ. ಈ ಉಗ್ರಗಾಮಿತ್ವವು ಒಂದು ರಾಷ್ಟ್ರದ ನಾಗರಿಕರ ಮೇಲೆ, ಮಿಲಿಟರಿ ಪಡೆಗಳ ಮೇಲೆ, ಅಂತೆಯೇ ನಿರ್ದಿಷ್ಟ ಭಾಷಾವಾರು, ಧಾರ್ಮಿಕ, ಜನಾಂಗೀಯ, ಅಥವಾ ವರ್ಣದವರ ಮೇಲೆ ಎರಗಿ ಸಾವು ನೋವು ಉಂಟು ಮಾಡುವುದಾಗಿದೆ. ಉಗ್ರಗಾಮಿತ್ವವು ಭಯವನ್ನು ಹೆಚ್ಚಿಸುವ ಹಾಗೂ ಪ್ರಚಾರವನ್ನು

ಪಡೆಯುವ ಉದ್ದೇಶದಿಂದ ನಡೆಯುತ್ತದೆ, ಮಾತ್ರವಲ್ಲ ಅತ್ಯಧಿಕ ಸಾವುನೋವು ಉಂಟು ಮಾಡಲು ಸ್ಫೋಟಕ ವಸ್ತುಗಳನ್ನು, ವಿಷಾನಿಲವನ್ನು ಬಳಸಲು ದಾರಿ ಮಾಡಿಕೊಡುತ್ತದೆ. ಇಂತಹ ವಿನಾಶಕಾರೀ ಕೃತ್ಯಗಳು ಸಾಕಷ್ಟು ಪೂರ್ವಯೋಜಿತವಾಗಿಯೇ ರೂಪುಗೊಳ್ಳುತ್ತವೆ. ಉಗ್ರಗಾಮಿಗಳು ತಮ್ಮದೇ ಆದ ಗುಪ್ತಚರರನ್ನು ಹಾಗೂ ತರಬೇತು ಹೊಂದಿದವರ ಜಾಲವನ್ನು ಹೊಂದಿರುತ್ತಾರೆ ಹಾಗೂ ಅವರ ಸಹಾಯದಿಂದ ಹಣವನ್ನೂ ಸಂಗ್ರಹಿಸುತ್ತಾರೆ. ಅತ್ಯಾಧುನಿಕ ಸಾರಿಗೆ, ಸಂಪರ್ಕ ಸಾಧನಗಳನ್ನೂ ಇವರು ಬಳಸುತ್ತಾರೆ. ತಮ್ಮ ನಿರ್ದಿಷ್ಟ ಗುರಿ ಹಾಗೂ ಸಂಘಟನೆಗೆ ಸಾಕಷ್ಟು ಪ್ರಚಾರವನ್ನೂ ಇವರು ಪಡೆದುಕೊಳ್ಳುತ್ತಾರೆ. ರಸ್ತೆ ಸಾರಿಗೆ, ರೈಲ್ವೇ, ವಿಮಾನ, ಪ್ರಮುಖ ಸರ್ಕಾರಿ ಕಚೇರಿಗಳು, ಕಿಕ್ಕಿರಿದ ಜನ ಜಂಗುಳಿ, ಮಾರುಕಟ್ಟೆ ಪ್ರದೇಶ ಮುಂತಾದುವುಗಳು ಈ ಭಯೋತ್ಪಾದಕರ ಹೊಡೆತಕ್ಕೆ ಸಿಗುವ ಸಾಮಾನ್ಯ ತಾಣಗಳಾಗಿವೆ. ಪ್ರಚಾರ ಈ ಭಯೋತ್ಪಾದಕತೆಯ ಜತೆ ಜತೆಗೇ ಮುಂದಿವರಿಯುತ್ತದೆ. ಇದೊಂದು ಅಸಾಂಪ್ರದಾಯಿಕ ಯುದ್ಧ ಎಂದೇ ಹೇಳಬಹುದು. ಆತ್ಮಾಹುತಿ ದಾಳಿ, ವಿಮಾನಕಳ್ಳತನ, ಗುಂಡಿನಕಾಳಗ, ಬಾಂಬುದಾಳಿ, ನಿರ್ದಿಷ್ಟ ಅಥವಾ ಮುಗ್ಧ ಜನರನ್ನು ಒತ್ತೆ ಇರಿಸುವಿಕೆ ಇವೆಲ್ಲಾ ಉಗ್ರಗಾಮಿಗಳು ಮಾಡುವ ಹೀನ ಕೃತ್ಯಗಳಾಗಿವೆ.

ಭಾರತ ಇಂತಹ ಉಗ್ರಗಾಮಿತ್ವಕ್ಕೆ ಸಾಕಷ್ಟು ತುತ್ತಾದ ರಾಷ್ಟ್ರವಾಗಿದೆ. ಕಾಶ್ಮೀರ, ನಾಗಾಲ್ಯಾಂಡ್, ಮಿಜೋರಾಂ, ಅಸ್ಸಾಂ ಇಂತಹ ಹಲವಾರು ರಾಜ್ಯಗಳಲ್ಲಿ ಭಯೋತ್ಪಾದಕತೆ ತಲೆ ಎತ್ತುತ್ತಲೇ ಇದೆ. 2007 ನವಂಬರ್ 26 ಮುಂಬೈಯ ತಾಜಮಹಲ್ ಹೋಟೆಲ್ ಮತ್ತು ರೈಲು ನಿಲ್ದಾಣಗಳ ದಾಳಿ, ನವದೆಹಲಿಯ ಸಂಸತ್ತಿನ ಮೇಲೆ ಅಂತೆಯೇ ಹೈದರಾಬಾದ್, ಚೆನ್ನೈ, ಬೆಂಗಳೂರು, ಬುದ್ಧಗಯಾ ಮುಂತಾದ ಕಡೆಗಳಲ್ಲಿ ಇಂತಹ ವಿಧ್ವಂಸಕ ಕೃತ್ಯಗಳು ನಡೆದಿವೆ. ನಕ್ಸಲವಾದಿಗಳು ಭೀಕರವಾದ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ನಮ್ಮ ನೆರೆರಾಷ್ಟ್ರಗಳಾದ ಪಾಕಿಸ್ತಾನ ಹಾಗೂ ಚೈನಾ ನಮ್ಮಲ್ಲಿನ ಇಂತಹ ಭಯೋತ್ಪಾದಕತೆಗೆ ಕುಮ್ಮಕ್ಕು ನೀಡುವ ಬಗ್ಗೆ ಟೀಕಿಸಲ್ಪಡುತ್ತವೆ.

ಭಾರತ ತನ್ನಲ್ಲಿ, ಅದೇ ರೀತಿ ಅನ್ಯರ ನೆಲದಲ್ಲಿ ಭಯೋತ್ಪಾದಕತೆಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತದೆ. ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಭಯೋತ್ಪಾದಕತೆಯ ನಿಗ್ರಹಕ್ಕೆ ತೀವ್ರ ಪ್ರಯತ್ನ ನಡೆಸುತ್ತಿವೆ, ತನ್ಮೂಲಕ ಜನತೆಯ ಪ್ರಾಣ ಹಾಗೂ ಆಸ್ತಿಪಾಸ್ತಿಯನ್ನು ಉಳಿಸಲು ಯತ್ನಿಸುತ್ತಿವೆ. ಭೀತಿವಾದಿಗಳನ್ನು ನಿಗ್ರಹಿಸಲು ವಿಶೇಷ ಪರಿಣತಿ ಪಡೆದ ಪಡೆಗಳನ್ನು ರಚಿಸಲಾಗುತ್ತಿದೆ. ಕೆಲವೊಮ್ಮೆ ರಕ್ಷಣಾ ಪಡೆಗಳನ್ನು ಈ ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆಗೆ ಬಳಸಲಾಗುತ್ತದೆ. ಶಾಂತಿ ಪ್ರಿಯ ರಾಷ್ಟ್ರವೆನಿಸಿದ ನಾವು ಭಯೋತ್ಪಾದಕತೆಯನ್ನು ವಿರೋಧಿಸುತ್ತೇವೆ.

ಮನುಕುಲದ ಇತಿಹಾಸವನ್ನು ಪರಿಶೀಲಿಸಿದಾಗ ಒಂದು ಸತ್ಯಗೋಚರಿಸುತ್ತದೆ. ಹಿಂಸೆ, ಭಯೋತ್ಪಾದನೆಗಳಿಂದ ಸಾಧನೆ ಮಾಡಿದ್ದು ಕ್ಷುಲ್ಲಕ ಹಾಗೂ ಸತ್ಯ, ಅಹಿಂಸೆ ಪ್ರೇಮ ತ್ಯಾಗಗಳಿಂದ ಸಾಧಿಸಿದ್ದು ಅಪಾರ. ನಮಗೆ ತೀರ ಹತ್ತಿರವಾಗಿ ತಿಳಿಯುವುದೇನೆಂದರೆ ಮಹಾತ್ಮ ಗಾಂಧೀಜಿ, ಇಂದಿರಾಗಾಂಧಿ, ರಾಜೀವಗಾಂಧಿಯವರನ್ನು ಕೊಂದರೂ ಹೊಸ ಇತಿಹಾಸವೇನೂ ನಿರ್ಮಾಣವಾಗಲಿಲ್ಲ. ಆದರೆ ಬುದ್ಧ, ಮಹಾವೀರ, ಜೀಸಸ್, ಮಹಮದ್ ಪೈಗಂಬರ್, ಬಸವ, ಗಾಂಧಿ, ನೆಹರು, ಅಂಬೇಡ್ಕರ್, ಮಾರ್ಟಿನ್ ಲೂಥರ್, ನೆಲ್ಸನ್ ಮಂಡೇಲ ಇಂತಹವರಿಂದ ಮನುಕುಲಕ್ಕೆ ಚೈತನ್ಯ, ಹೊಸ ಬೆಳಕು, ನೆಮ್ಮದಿ ಪ್ರಾಪ್ತವಾಗಿದೆ. ಹಿಂಸೆ–ದ್ವೇಷಗಳಿಗಿಂತ ಶಾಂತಿ–ಪ್ರೇಮಗಳೇ ಮಿಗಿಲಾದವು.

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ಮಾನವ ಹಕ್ಕುಗಳ ದಿನವನ್ನು ____________ ರಂದು ಆಚರಿಸುತ್ತೇವೆ.
2. ಭಾರತವು ನಿರಂತರವಾಗಿ ____________ ಮಾನವ ಹಕ್ಕುಗಳನ್ನು ಪ್ರತಿ ಪಾದಿಸುತ್ತಾ ಬಂದಿದೆ.
3. ಆಫ್ರಿಕಾದಲ್ಲಿ ವರ್ಣಭೇಧ ನೀತಿಯ ವಿರುದ್ಧ ಹೋರಾಡಿದವರು ________________
4. ಮಾನವ ಹಕ್ಕು ಎಂಬುದು ____________ ಸಮಾನತೆಯನ್ನು ಒಳಗೊಂಡಿದೆ.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :

1. ದ್ವಿತೀಯ ಮಹಾಯುದ್ಧ ಬಳಿಕ ಎದುರಾದ ಮುಖ್ಯ ಸಮಸ್ಯೆಗಳು ಯಾವುವು?
2. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟವನ್ನು ವಿವರಿಸಿ
3. ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳಾವುವು?
4. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವುವು? ಈ ರೀತಿ ಹಿಂದುಳಿಯುವಿಕೆಯ ಕಾರಣಗಳಾವುವು?
5. ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡಿರುವ ಸುಧಾರಣಾ ಕ್ರಮಗಳಾವುವು?
6. ವರ್ಣಭೇದ ನೀತಿಯು ಮಾನವತ್ವವಾದಕ್ಕೆ ವಿರೋಧವಾದುದು ಇದನ್ನು ನಿಮ್ಮ ದೃಷ್ಟಿಕೋನದಲ್ಲಿ ಸಮರ್ಥಿಸಿ.
7. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳಾವುವು?
8. ಭಯೋತ್ಪಾದಕತೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವುವು?

III. ಚಟುವಟಿಕೆಗಳು

1. ಮಾನವ ಹಕ್ಕುಗಳನ್ನು ರಕ್ಷಿಸಲು ರಚಿಸಲಾಗಿರುವ ಆಯೋಗದ ಬಗ್ಗೆ ಮಾಹಿತಿ ಸಂಗ್ರಹಿಸಿ.
2. ಕರ್ನಾಟಕ ಸರ್ಕಾರವು ರಾಜ್ಯದ ಬಡ ಜನರಿಗಾಗಿ ಕೈಗೊಂಡಿರುವ ಕಲ್ಯಾಣ ಕಾರ್ಯಕ್ರಮಗಳ ಪಟ್ಟಿ ಮಾಡಿರಿ.

IV. ಯೋಜನೆ

1. ವರ್ಣಭೇದ ನೀತಿಯ ವಿರುದ್ಧ ಹೋರಾಡಿದ ಮಹನೀಯರುಗಳ ಜೀವನ ಚರಿತ್ರೆ ಓದಿರಿ.


ಅಧ್ಯಾಯ–5

ಜಾಗತಿಕ ಸಂಸ್ಥೆಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ವಿಶ್ವ ಸಂಸ್ಥೆಯ ಸ್ಥಾಪನೆ*
- *ವಿಶ್ವ ಸಂಸ್ಥೆಯ ಉದ್ದೇಶಗಳು*
- *ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು*
- *ವಿಶ್ವಸಂಸ್ಥೆಯ ಸಾಧನೆಗಳು*
- *ವಿಶ್ವಸಂಸ್ಥೆಯ ಆಶ್ರಯದ ವಿವಿಧ ಸಂಘ ಸಂಸ್ಥೆಗಳು.*

ವಿಶ್ವಸಂಸ್ಥೆ (ಯು.ಎನ್.ಓ)



20ನೇ ಶತಮಾನವು ಎರಡು ಮಹಾನ್ ಯುದ್ಧಗಳನ್ನು ಸಾಕ್ಷೀಕರಿಸಿತು. ಮೊದಲನೆಯ ವಿಶ್ವ ಸಮರದ ಬಳಿಕ ಜಾಗತಿಕ ಶಾಂತಿಗಾಗಿ 'ಲೀಗ್ ಆಫ್ ನೇಶನ್ಸ್' ಎಂಬ ಸಂಸ್ಥೆ ಪ್ರಾರಂಭವಾಯಿತು. ಆದರೆ 1939ರಲ್ಲಿ ದ್ವಿತೀಯ ಮಹಾಯುದ್ಧ ಪ್ರಾರಂಭಗೊಳ್ಳುತ್ತಿರುವಂತೆಯೇ ಈ ಸಂಸ್ಥೆ ಪತನಗೊಂಡಿತು. ಎರಡನೇ ಮಹಾಯುದ್ಧವು ಭೀಕರವಾಗಿ ನಡೆಯುತ್ತಿದ್ದಂತೆಯೇ, ಜಾಗತಿಕವಾಗಿ ಶಾಶ್ವತ ಶಾಂತಿ ಸ್ಥಾಪನೆಯ ಯತ್ನವೂ ನಡೆಯಲಾರಂಭಿಸಿತು. ವಿಶ್ವ ಮಟ್ಟದಲ್ಲಿ ಇಂಗ್ಲೆಂಡಿನ ವಿನ್‌ಸ್ಟನ್ ಚರ್ಚಿಲ್, ರಷ್ಯಾದ ಜೋಸೆಫ್ ಸ್ಟಾಲಿನ್ ಹಾಗೂ ಅಮೆರಿಕಾದ ಫ್ರಾಂಕ್ಲಿನ್ ಡಿ'ರೂಸ್‌ವೆಲ್ಟ್ ವಿಶ್ವಮಟ್ಟದ ಸಂಸ್ಥೆಯ ಸ್ಥಾಪನೆಗೆ ಮುಂದಾದರು. 'ವಿಶ್ವಸಂಸ್ಥೆ' (ಯುನೈಟೆಡ್ ನೇಶನ್ಸ್) ಎಂಬ ಶಬ್ದವನ್ನು ಅಮೆರಿಕಾದ ಅಧ್ಯಕ್ಷ ಫ್ರಾಂಕ್ಲಿನ್ ಡಿ'ರೂಸ್‌ವೆಲ್ಟ್ ಚಾಲ್ತಿಗೆ ತಂದರು ಹಾಗೂ 1942 ಜನವರಿ 1 ರಂದು 26 ರಾಷ್ಟ್ರಗಳು ಒಪ್ಪಂದವೊಂದಕ್ಕೆ ಸಹಿ ಹಾಕುತ್ತಿದ್ದಂತೆಯೇ ಪ್ರಥಮ ಬಾರಿಗೆ ಈ ಶಬ್ದವನ್ನು ಉಪಯೋಗಿಸಲಾಯಿತು. ಇದನ್ನು ಈಗ 'ವಿಶ್ವ ರಾಷ್ಟ್ರಗಳು' ಎಂದು ಕರೆಯಲಾಗುತ್ತಿದೆ. 1945 ಜೂನ್ 26 ರಂದು ಸ್ಯಾನ್ ಫ್ರಾನ್ಸಿಸ್ಕೋ ವಿಶ್ವಸಂಸ್ಥೆಯ ಕಚೇರಿ ಸಮ್ಮೇಳನದ ಶಾಂತಿ ಸನ್ನದಿಗೆ 51 ರಾಷ್ಟ್ರಗಳ ಪ್ರತಿನಿಧಿಗಳು ಹಸ್ತಾಕ್ಷರ ನೀಡಿದರು. ಹೀಗೆ ಮುಂದಕ್ಕೆ 1945 ಅಕ್ಟೋಬರ್ 24 ರಂದು ವಿಶ್ವಸಂಸ್ಥೆ ಉದಯವಾಯಿತು. ಇದೀಗ ಸುಮಾರು 193 ರಾಷ್ಟಗಳು ಈ ವಿಶ್ವಸಂಸ್ಥೆಯ ಸದಸ್ಯತ್ವ ಹೊಂದಿವೆ. ಇದರ ಮುಖ್ಯ ಕಛೇರಿ ಅಮೆರಿಕಾದ ನ್ಯೂಯಾರ್ಕ್ ನಗರದಲ್ಲಿದೆ. ಎಲ್ಲಾ ಶಾಂತಿಪ್ರಿಯ ರಾಷ್ಟ್ರಗಳಿಗೆ ಇದರ ಸದಸ್ಯತ್ವ ಹೊಂದಲು ಮುಕ್ತ ಅವಕಾಶವಿದೆ.

ವಿಶ್ವಸಂಸ್ಥೆಯ ಉದ್ದೇಶಗಳು

ವಿಶ್ವಸಂಸ್ಥೆಯ ಸನ್ನದು ಈ ಜಾಗತಿಕ ಸಂಸ್ಥೆಯ ಪ್ರಧಾನ ದಾಖಲೆ ಎನಿಸಿದ್ದು ಇದರಲ್ಲಿ 19 ಅಧ್ಯಾಯಗಳಿದ್ದು, 111 ವಿಧಿಗಳನ್ನು ಹೊಂದಿದೆ. "ವಿಶ್ವದ ಜನಸಮುದಾಯವೆನಿಸಿದ ನಾವು ...." ಎಂಬ ವಾಕ್ಯದೊಂದಿಗೆ ವಿಶ್ವಸಂಸ್ಥೆಯ ಪ್ರಸ್ತಾವನೆಯು ಪ್ರಾರಂಭಗೊಳ್ಳುತ್ತದೆ.

ವಿಶ್ವ ಸಂಸ್ಥೆಯ ಧ್ಯೇಯೋದ್ದೇಶಗಳು ಈ ಕೆಳಗಿನಂತಿವೆ. :

(1) ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು;

(2) ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು,

(3) ಮಾನವನ ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು,

(4) ಅಂತರರಾಷ್ಟ್ರೀಯ ಮಟ್ಟದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ಮಾನವೀಯ ನೆಲೆಯ ಸಮಸ್ಯೆಗಳಿಗೆ ಅಂತರರಾಷ್ಟ್ರೀಯ ಸಹಕಾರದೊಂದಿಗೆ ಪರಿಹಾರ ಕಂಡು ಕೊಳ್ಳುವುದು.


(5) ಅಂತರರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವುದು ಹಾಗೂ

(6) ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.

ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು

ವಿಶ್ವಸಂಸ್ಥೆಯ ಸನ್ನದು ಪ್ರಕಾರ ಒಟ್ಟು ಆರು ಪ್ರಧಾನ ಅಂಗ ಸಂಸ್ಥೆಗಳಿಗೆ ವ್ಯವಸ್ಥೆ ಮಾಡಲಾಗಿದೆ. ಅವುಗಳೆಂದರೆ

1) ಸಾಮಾನ್ಯ ಸಭೆ : ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡ ಅಂಗ ಸಂಸ್ಥೆ ಇದಾಗಿದೆ. ಪ್ರತಿಯೊಂದು ಸದಸ್ಯ ರಾಷ್ಟ್ರವು 5 ಸದಸ್ಯರನ್ನು ಇದಕ್ಕೆ ಕಳುಹಿಸಿಕೊಡುತ್ತದೆ. ಆದರೆ ಪ್ರತಿ ಸದಸ್ಯ ರಾಷ್ಟ್ರಕ್ಕೆ ಒಂದು ಮತದ ಹಕ್ಕು ಮಾತ್ರ ಇರುತ್ತದೆ. ಈ ಸಾಮಾನ್ಯ ಸಭೆ ತನ್ನ ಪ್ರಥಮ ಅಧಿವೇಶನದಲ್ಲಿಯೇ ಒಂದು ವರ್ಷದ ಅವಧಿಗೆ ಓರ್ವ ಅಧ್ಯಕ್ಷನನ್ನು ಆರಿಸುತ್ತದೆ. ಅದೇ ರೀತಿ 17 ಉಪಾಧ್ಯಕ್ಷರನ್ನು ಹಾಗೂ 7 ಸ್ಥಾಯಿ ಸಮಿತಿಗಳಿಗೆ ಏಳು ಮಂದಿ ಅಧ್ಯಕ್ಷರನ್ನೂ ಇಲ್ಲಿ ಆರಿಸಲಾಗುತ್ತದೆ. ಈ ಸಾಮಾನ್ಯ ಸಭೆಯ ಅಧಿವೇಶನ ಸಾಮಾನ್ಯವಾಗಿ ಸೆಪ್ಟಂಬರ್ ತಿಂಗಳಲ್ಲಿ ಆರಂಭಗೊಂಡು ಡಿಸಂಬರ್ ಮಧ್ಯಭಾಗದವರೆಗೆ ಜರಗುತ್ತದೆ. ಎಲ್ಲಾ ಹೆಚ್ಚಿನ ಪ್ರಮುಖ ನಿರ್ಧಾರಗಳಿಗೆ ಮೂರನೇ ಎರಡಂಶದಷ್ಟು ಹಾಜರಾದ ಸದಸ್ಯರ ಅನುಮೋದನೆ ಅವಶ್ಯಕ ಆಗಿರುತ್ತದೆ. ವಾರ್ಷಿಕ ಆಯವ್ಯಯ ಪಟ್ಟಿಗೆ ಈ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆಯಬೇಕಾಗುತ್ತದೆ. ಯಾವುದಾದರೂ ತುರ್ತು ವಿಷಯಗಳು ಚರ್ಚೆ ನಡೆಯಬೇಕಿದ್ದರೆ ವಿಶೇಷ ಅಧಿವೇಶನ ಕರೆಯಬಹುದಾಗಿದೆ. ಜಾಗತಿಕ ಸಂಸತ್ತಿನ ರೀತಿಯಲ್ಲಿ ವಿಶ್ವದ ಎಲ್ಲಾ ಪ್ರಮುಖ ವಿದ್ಯಮಾನಗಳ ಚರ್ಚೆಯಲ್ಲಿ ಇದು ಪ್ರಧಾನ ಪಾತ್ರ ವಹಿಸುತ್ತದೆ.



ವಿಶ್ವಸಂಸ್ಥೆಯ ಅಂಗಗಳು

2) **ಭದ್ರತಾ ಸಮಿತಿ :** ಇದು ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿದ್ದು ಅತ್ಯಂತ ಪ್ರಭಾವಿ ಅಂಗವೆನಿಸಿದೆ. ಇದರಲ್ಲಿ 15 ಮಂದಿ ಸದಸ್ಯರಿದ್ದು, ಅವರ ಪೈಕಿ ಅಮೇರಿಕಾ ಸಂಯುಕ್ತ ಸಂಸ್ಥಾನ, ರಷ್ಯಾ, ಬ್ರಿಟನ್, ಫ್ರಾನ್ಸ್ ಹಾಗೂ ಚೈನಾ ಖಾಯಂ ಸದಸ್ಯತ್ವ ಹೊಂದಿದ ರಾಷ್ಟ್ರಗಳೆನಿಸಿವೆ. ಉಳಿದ 10 ಮಂದಿ ಹಂಗಾಮಿ ಸದಸ್ಯರನ್ನು 2 ವರ್ಷಗಳ ಅವಧಿಗೆ ಸಾಮಾನ್ಯ ಸಭೆ ಆರಿಸುತ್ತದೆ. ಇವರು ಪ್ರಪಂಚದ ವಿವಿಧ ಭೌಗೋಳಿಕ ಪ್ರದೇಶಗಳನ್ನು ಪ್ರತಿನಿಧಿಸುತ್ತಾರೆ. ಪ್ರತಿಯೊಂದು ಸದಸ್ಯರಿಗೂ ಒಂದು ಮತ ಚಲಾಯಿಸುವ ಹಕ್ಕು ಇದೆ. ಆದರೆ ಎಲ್ಲಾ ಖಾಯಂ ಸದಸ್ಯರ ಸಮ್ಮತಿ ಪ್ರತಿಯೊಂದು ಪ್ರಮುಖ ನಿರ್ಧಾರಕ್ಕೂ ಅವಶ್ಯಕವಾಗಿದೆ. ಭಾರತ ಕೂಡಾ ಇದರ ಖಾಯಂ ಪ್ರಾತಿನಿಧಿತ್ವಕ್ಕೆ ಯತ್ನಿಸುತ್ತಿದೆ.

ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಕ್ಕಾಗಿ ಭದ್ರತಾ ಸಮಿತಿ ಯತ್ನಿಸುತ್ತದೆ. ಅವಶ್ಯಕವಿದ್ದರೆ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯನ್ನು ಅಂತರರಾಷ್ಟ್ರೀಯ ಶಾಂತಿ ಹಾಗೂ ಸುವ್ಯವಸ್ಥೆಗೆ ನಿಯೋಜಿಸುತ್ತದೆ. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ಇದು ನೇಮಕ ಮಾಡುತ್ತದೆ ಹಾಗೂ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹೆಸರು ಸೂಚಿಸುತ್ತದೆ.

3) **ಆರ್ಥಿಕ ಹಾಗೂ ಸಾಮಾಜಿಕ ಸಮಿತಿ :** ಈ ಸಮಿತಿಯಲ್ಲಿ 54 ಮಂದಿ ಸದಸ್ಯರಿದ್ದಾರೆ. ಇವರ ಪೈಕಿ 18 ಮಂದಿ ಸದಸ್ಯರು ಪ್ರತಿ 3 ವರ್ಷಕ್ಕೊಮ್ಮೆ ಆರಿಸಲ್ಪಡುತ್ತಾರೆ. ತಮ್ಮ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಲಾಗುತ್ತದೆ. ಈ ಸಮಿತಿಯ ಮುಖ್ಯ ಕಾರ್ಯಗಳು ಈ ಕೆಳಗಿನಂತಿವೆ :

i) ಅಂತರರಾಷ್ಟ್ರೀಯ ವಲಯದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಹಾಗೂ ಇನ್ನಿತರ ಸಂಬಂಧಿತ ವಿಷಯಗಳ ಅಧ್ಯಯನ ಹಾಗೂ ವರದಿ ಮಾಡುವಿಕೆ.

ii) ನಿರಾಶ್ರಿತರ ಬಗ್ಗೆ, ಮಹಿಳೆಯರ ಸ್ಥಾನಮಾನ, ವಸತಿ ಸಮಸ್ಯೆ ಮುಂತಾದ ಹಲವಾರು ವಿಚಾರಗಳು ಈ ಸಮಿತಿಯ ಕಾರ್ಯವ್ಯಾಪ್ತಿಯೊಳಗೆ ಬರುತ್ತದೆ.

iii) ಮಾನವ ಹಕ್ಕುಗಳ ಬಗ್ಗೆ ಹಾಗೂ ಮೂಲಭೂತ ಸ್ವಾತಂತ್ರ್ಯಗಳ ಬಗೆಗೂ ಈ ಸಮಿತಿಯು ಶಿಫಾರಸ್ಸು ಮಾಡುತ್ತದೆ.

iv) ಮಾನವ ಸಂಪನ್ಮೂಲ, ಸಂಸ್ಕೃತಿ, ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ಸಂಘಟಿಸುವುದು.

v) ವಿಶೇಷ ಪ್ರಾವಿಣ್ಯತೆಯ ಅಂಗ ಸಂಸ್ಥೆಗಳಾದ ಅಂತರರಾಷ್ಟ್ರೀಯ ಕಾರ್ಮಿಕ ಸಂಘ (ಐ.ಎಲ್.ಒ), ಆಹಾರ ಮತ್ತು ಕೃಷಿ ಸಂಸ್ಥೆ (ಎಫ್.ಎ.ಒ), ಜಾಗತಿಕ ಆರೋಗ್ಯ ಸಂಸ್ಥೆ (ಡಬ್ಲ್ಯೂ ಹೆಚ್.ಒ) ಮುಂತಾದವುಗಳ ಕಾರ್ಯಗಳನ್ನು ಸಮನ್ವಯ ಮಾಡುವುದು. ಇವೆಲ್ಲಾ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಪ್ರಮುಖ ಸಂಸ್ಥೆಗಳು.

4) **ದತ್ತಿ ಸಮಿತಿ (ಟ್ರಸ್ಟಿಶಿಪ್ ಕೌನ್ಸಿಲ್) :** ಈ ಸಂಸ್ಥೆ ವಾಸ್ತಾವಿಕವಾಗಿ ಸಾಮಾನ್ಯ ಸಭೆಯ ಉಪ ಸಂಸ್ಥೆ ಅಥವಾ ಸಹಾಯಕ ಸಂಸ್ಥೆ ಎನಿಸಿ ಕಾರ್ಯವೆಸಗುತ್ತದೆ. ಟ್ರಸ್ಟ್ ಆಶ್ರಯಿತ ಪ್ರದೇಶಗಳ ಸಂಖ್ಯೆ ಕಡಿಮೆಯಾದುದರಿಂದ ಈ ಸಮಿತಿಯ ಕಾರ್ಯಕ್ಷೇತ್ರವೂ ಕಡಿಮೆಯಾಗುತ್ತಾ ಸಾಗಿದೆ. ಸ್ವತಂತ್ರ ರಾಜ್ಯದ ಮಟ್ಟಕ್ಕೆ ಏರದ ಪ್ರದೇಶಗಳ ಉಸ್ತುವಾರಿಯನ್ನು ಈ ಸಮಿತಿ ಹೊಂದಿದೆ. ಈಗ ಇದು ಅಸ್ತಿತ್ವದಲ್ಲಿ ಇಲ್ಲ, ಏಕೆಂದರೆ ಯಾವುದೇ ದತ್ತಿ ಉಳಿದಿಲ್ಲ.

5) **ಅಂತರರಾಷ್ಟ್ರೀಯ ನ್ಯಾಯಾಲಯ :** ಇದು ವಿಶ್ವಸಂಸ್ಥೆಯ ಒಂದು ಪ್ರಧಾನ ಅಂಗ ಸಂಸ್ಥೆ ಹಾಗೂ ಎಲ್ಲಾ ಸದಸ್ಯರಾಷ್ಟ್ರಗಳು ಈ ನ್ಯಾಯಾಲಯದ ಸನ್ನದಿಗೆ ತಮ್ಮ ಸಹಮತವನ್ನು ನೀಡಲು

ಬದ್ಧರಾಗಿದ್ದಾರೆ. ಈ ನ್ಯಾಯಾಲಯದಲ್ಲಿ 15 ಮಂದಿ ನ್ಯಾಯಾಧೀಶರಿದ್ದು, ಇವರ ಅಧಿಕಾರದ ಅವಧಿ ಒಂಬತ್ತು ವರ್ಷಗಳು ಆಗಿದ್ದು ಇವರು ಮರು ಆಯ್ಕೆಗೆ ಅರ್ಹರಾಗಿರುತ್ತಾರೆ. ನೆದರ್‌ಲ್ಯಾಂಡಿನ ಹೇಗ್ ಎಂಬಲ್ಲಿ ಈ ನ್ಯಾಯಾಲಯ ಸ್ಥಾಪಿತಗೊಂಡಿದೆ. ಮೂರು ವರ್ಷಗಳ ಅವಧಿಗೆ ಓರ್ವ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಈ ನ್ಯಾಯಾಲಯದ ನ್ಯಾಯಾಧೀಶರೇ ಆರಿಸುತ್ತಾರೆ. ಬಹುಮತದ ಆಧಾರದಲ್ಲಿ ಇದರ ನಿರ್ಣಯಗಳು ಕೈಗೊಳ್ಳಲ್ಪಡುತ್ತವೆ. ನ್ಯಾಯ ತೀರ್ಪುಗಳು ಜತೆಗೇ ಕಾನೂನು ವಿಚಾರದಲ್ಲಿ ಇದು ಯೋಗ್ಯ ಸಲಹೆಗಳನ್ನು ನೀಡುತ್ತದೆ.

ನೈತಿಕ ಹಾಗೂ ವೈಚಾರಿಕ ನೆಲೆಗಟ್ಟಿನ ಮೇಲೆ ಈ ನ್ಯಾಯಾಲಯದ ನಿರ್ಣಯಗಳು ಮಹತ್ವ ಹೊಂದಿವೆ. ಆದರೆ ಈ ನ್ಯಾಯಾಲಯದ ತೀರ್ಪು ಕಡ್ಡಾಯವಾಗಿ ಯಾವ ದೇಶಕ್ಕೂ ಅನ್ವಯಿಸುವಂತಿಲ್ಲ. ಈ ಎಲ್ಲಾ ಇತಿಮಿತಿಗಳ ಮಧ್ಯೆಯೂ ಅಂತರರಾಷ್ಟ್ರೀಯ ಶಾಂತಿ ಹಾಗೂ ಸುಭದ್ರತೆಗೆ ಅಂತರರಾಷ್ಟ್ರೀಯ ನ್ಯಾಯಾಲಯ ತನ್ನದೇ ಆದ ಕೊಡುಗೆಯನ್ನು ನೀಡಿದೆ.

6) **ಸಚಿವಾಲಯ** : ಮಹಾಕಾರ್ಯದರ್ಶಿ ಹಾಗೂ ವಿಶ್ವಸಂಸ್ಥೆಯ ಸಿಬ್ಬಂದಿ ವರ್ಗ ಈ ಅಂಗ ಸಂಸ್ಥೆಗೆ ಸೇರಿದವರಾಗಿದ್ದಾರೆ. ಮಹಾಕಾರ್ಯದರ್ಶಿಯವರು ಈ ಕಾರ್ಯಾಂಗದ ಮುಖ್ಯಸ್ಥರು ಎನಿಸಿದ್ದಾರೆ. ಇವರನ್ನು ಭದ್ರತಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಸಾಮಾನ್ಯ ಸಭೆಯು 5 ವರ್ಷಗಳ ಅವಧಿಗೆ ಆರಿಸುತ್ತದೆ. ಇದರ ಪ್ರಧಾನ ಕಾರ್ಯಾಲಯವು ನ್ಯೂಯಾರ್ಕ್‌ನಲ್ಲಿದ್ದು, ಜಿನೇವಾ, ವಿಯೆನ್ನಾ ಹಾಗೂ ನೈರೋಬಿಗಳಲ್ಲಿ ಇದರ ಶಾಖೆಗಳಿವೆ. ದಿನನಿತ್ಯದ ಆಡಳಿತಾತ್ಮಕ ಕಾರ್ಯ ಯೋಜನೆ ಹಾಗೂ ಸಾಂಸ್ಥಿಕ ಕಾರ್ಯಗಳು ಈ ಸಚಿವಾಲಯದ ವ್ಯಾಪ್ತಿಯಲ್ಲಿ ಸೇರಿದೆ.

ನಿಮಗಿದು ತಿಳಿದಿರಲಿ :

ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿಗಳು :

1. ಟ್ರಿಗ್ವೆ ಲೀ	*(1946–1952)*	*ನಾರ್ವೆ*
2. ಡಾಗ್ ಹ್ಯಾಮರ್ ಶೀಲ್ಡ್	*(1953–1961)*	*ಸ್ವೀಡನ್.*
3. ಯು.ಥಾಂಟ್	*(1961–1971)*	*ಬರ್ಮಾ*
4. ಕರ್ಟ್ ವಾಲ್ಡ್ ಹೇಮ್	*(1972–1981)*	*ಆಸ್ಟ್ರಿಯಾ*
5. ಜೇವಿಯರ್ ಪೇರುಜ್ ಡೇ ಕುಯೆಲ್ಲಾರ್	*(1982–1991)*	*ಪೆರು*
6. ಭೌತ್ರೋಸ್ ಘಾಲಿ	*(1992–1996)*	*ಈಜಿಪ್ಟ್*
7. ಕೋಫೀ ಎ.ಅನ್ನಾನ್	*(1997–2006)*	*ಘಾನಾ*
8. ಬಾನ್–ಕಿ–ಮೂನ್	*(2007– ರಿಂದ)*	*ಕೊರಿಯಾ.*

ವಿಶ್ವಸಂಸ್ಥೆಯ ಸಾಧನೆಗಳು

1. **ಶಾಂತಿಸ್ಥಾಪನೆಯ ಕಾರ್ಯಗಳು :** ವಿಶ್ವಸಂಸ್ಥೆ ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ. ಆದರೆ ಭದ್ರತಾ ಸಮಿತಿಯ ಖಾಯಂ ಸದಸ್ಯರ ಒಮ್ಮತದ ಕೊರತೆ ಹಾಗೂ ಜಾಗತಿಕ ವಿದ್ಯಮಾನಗಳ ಸಂಕೀರ್ಣತೆಯಿಂದಾಗಿ, ವಿಶ್ವಸಂಸ್ಥೆಯ ಸಾಧನೆಯು ಮಿಶ್ರ ರೂಪದಿಂದ ಕೂಡಿದೆ ಎನ್ನಬಹುದು. ಇದರ ಕಾರ್ಯಾಚರಣೆ ಬಹುತೇಕ ಯುದ್ಧ ಸ್ಥಂಭನರೇಖೆಯ ವೀಕ್ಷಕರ ಅಥವಾ ಶಾಂತಿ ಪಡೆಗಳ

ಮೂಲಕ ನಡೆಯುವಂತಹುದು. ಭಾರತ ವಿಶ್ವಶಾಂತಿಯ ಹಾಗೂ ಮಾನವ ಹಕ್ಕುಗಳ ರಕ್ಷಣೆಯ ಬಗೆಗಿನ ವಿಶ್ವಸಂಸ್ಥೆಯ ಕಾರ್ಯಚಟುವಟಿಕೆಗಳಲ್ಲಿ ಪೂರ್ತಿ ಸಹಕರಿಸುತ್ತದೆ.

ಸುಯೆಜ್‌ಕಾಲುವೆ ಬಿಕ್ಕಟ್ಟು, ಇರಾನ್ ಸಂಘರ್ಷ, ಇಂಡೋನೇಷ್ಯಾ, ಕಾಶ್ಮೀರ, ಪ್ಯಾಲೆಸ್ಟೈನ್, ಕೊರಿಯಾ, ಹಂಗೇರಿ, ಕಾಂಗೋ, ಸೈಪ್ರೆಸ್, ಅರಬ್–ಇಸ್ರೇಲ್, ನಮೀಬಿಯಾ, ಅಫಘಾನಿಸ್ತಾನ ಇತ್ಯಾದಿ ವಿವಾದಗಳ ಪರಿಹಾರಕ್ಕಾಗಿ ವಿಶ್ವಸಂಸ್ಥೆ ಶ್ರಮಿಸಿದೆ. ಅಣ್ವಸ್ತ್ರ ಹಾಗೂ ಸಾಂಪ್ರದಾಯಿಕ ನಿಶ್ಶಸ್ತ್ರೀಕರಣದ ನಿಟ್ಟಿನಲ್ಲಿಯೂ ವಿಶ್ವಸಂಸ್ಥೆ ನಿರಂತರ ಪ್ರಯತ್ನ ಮಾಡುತ್ತಿದೆ. ಇದೀಗ ಶೀತಲ ಸಮರದ ಕಾಲಘಟ್ಟ ಮುಗಿದಿದ್ದು, ವಿಶ್ವ ಶಾಂತಿಯ ನೆಲೆಯಲ್ಲಿ ವಿಶ್ವ ಸಂಸ್ಥೆಯ ಪ್ರಭಾವೀ ಕಾರ್ಯಕ್ಕೆ ಉತ್ತಮ ವಲಯ ನಿರ್ಮಾಣಗೊಂಡಿದೆ.

2. **ಆರ್ಥಿಕ ಹಾಗೂ ಹಣಕಾಸಿನ ಸಾಧನೆ :** ವಿಶ್ವಸಂಸ್ಥೆಯ ಸನ್ನದಿನ ಪ್ರಸ್ತಾವನೆಯಲ್ಲಿ ಈ ಸಂಸ್ಥೆ **'ಸಾಮಾಜಿಕ ಪ್ರಗತಿ ಹಾಗೂ ಉತ್ತಮ ಜೀವನ ಮಟ್ಟಕ್ಕೆ ಯತ್ನಿಸಬೇಕು'** ಎಂದು ಘೋಷಿಸಲಾಗಿದೆ. ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಮೇಲ್ವಿಚಾರಣೆಯಲ್ಲಿ ಈ ಕಾರ್ಯ ಸಾಧಿಸಬೇಕಾಗಿದೆ. ಆರ್ಥಿಕ ಮತ್ತು ಹಣಕಾಸಿನ ಕ್ಷೇತ್ರದಲ್ಲಿ ('General Agriment on Taerifs and Trade') ಸುಂಕ ಮತ್ತು ವ್ಯಾಪಾರದ ಸಾಮಾನ್ಯ ಒಪ್ಪಂದ ಆಗಿರುತ್ತದೆ. ಉದಾಹರಣೆ : ವಿಶ್ವಸಂಸ್ಥೆಯ ಪ್ರಗತಿ ಯೋಜನೆ (ದಿ ಯುನೈಟೆಡ್ ನೇಷನ್ಸ್ ಡೆವೆಲಪ್‌ಮೆಂಟ್ ಪ್ರೋಗ್ರಾಮ್) ಕೂಡಾ ಈ ಕ್ಷೇತ್ರದ ಒಂದು ಉಲ್ಲೇಖನಾರ್ಹ ಸಾಧನೆ. ವಿಶ್ವಬ್ಯಾಂಕ್, ಐ.ಎಮ್.ಎಫ್ ನಂತಹ ವಿತ್ತೀಯ ಸಂಸ್ಥೆಗಳು ವಿಶ್ವಸಂಸ್ಥೆಯ ಸಹಯೋಗದೊಂದಿಗೆ ಉತ್ತಮ ಸಾಧನೆ ಮಾಡುತ್ತಿವೆ.

3. **ಸಾಮಾಜಿಕ ಸಾಧನೆಗಳು :** ವಿಶ್ವ ಆರೋಗ್ಯ ಸಂಸ್ಥೆ, ಯುನೆಸ್ಕೋ, ಯುನಿಸೆಫ್, ವಿಶ್ವ ನಿರಾಶ್ರಿತರ ಆಯೋಗ, ಮುಂತಾದುವುಗಳು ವಿಶ್ವಸಂಸ್ಥೆಯ ಸಾಮಾಜಿಕ ಕಳಕಳಿಯ ಸೇವಾ ಸಂಸ್ಥೆಗಳು. 1948ರ ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆ ಕೂಡಾ ಒಂದು ಉತ್ತಮ ಸಾಧನೆ ಎನಿಸಿದೆ. ವರ್ಣಭೇದ ನೀತಿಯನ್ನು ಅಳಿಸಿ ಹಾಕುವಲ್ಲಿ ಸಾಮ್ರಾಜ್ಯಶಾಹಿತ್ವ, ವಸಾಹತುಶಾಹಿತ್ವ ಇತ್ಯಾದಿಗಳನ್ನು ಇಲ್ಲವಾಗಿಸುವಲ್ಲಿಯೂ ವಿಶ್ವಸಂಸ್ಥೆಯ ಪಾತ್ರ ಗಮನಾರ್ಹ.

4. **ವಿಶ್ವಸಂಸ್ಥೆಯ ಆಶ್ರಯದ ವಿವಿಧ ಸಂಘ ಸಂಸ್ಥೆಗಳು**

> *ನಿಮಗಿದು ತಿಳಿದಿರಲಿ :*
> *ವಿಶ್ವಸಂಸ್ಥೆಯಲ್ಲಿ ಚೈನೀಸ್, ಇಂಗ್ಲೀಷ್, ಫ್ರೆಂಚ್, ರಷ್ಯನ್, ಸ್ಪಾನಿಶ್ ಹಾಗೂ ಅರೇಬಿಕ್ ಭಾಷೆಗಳು ಆಡಳಿತ ಭಾಷೆಯಾಗಿ ಮಾನ್ಯತೆ ಪಡೆದಿವೆ.*

ಎ) **ಆಹಾರ ಮತ್ತು ಕೃಷಿ ಸಂಸ್ಥೆ - FAO - (Food and Agricultural Organisation) :** ಜಗತ್ತಿನಾದ್ಯಂತ ಬಡತನ, ಹಸಿವು ಹಾಗೂ ಅಪೌಷ್ಟಿಕತೆಯ ವಿರುದ್ಧ ಹೋರಾಡಲು ಆಹಾರ ಮತ್ತು ಕೃಷಿ ಸಂಸ್ಥೆಯೊಂದು 1945ರಲ್ಲಿ ಉದಯವಾಯಿತು. ಇದರ ಪ್ರಧಾನ 3 ಒಳ ವಿಭಾಗಗಳೆಂದರೆ: i) ಸಮ್ಮೇಳನ, ii) ಸಮಿತಿ ಹಾಗೂ iii) ಮಹಾನಿರ್ದೇಶಕರು ಈ ಸಂಸ್ಥೆಯ ಪ್ರಮುಖ ಉದ್ದೇಶಗಳೆಂದರೆ : ಎ) ಕೃಷಿ ಕ್ಷೇತ್ರದ ಅಭಿವೃದ್ಧಿ (ಬಿ) ಪೌಷ್ಟಿಕ ಆಹಾರ ಒದಗಿಸುವಿಕೆ ; (ಸಿ) ಹಸಿವೆಯಿಂದ ಜಾಗತಿಕ ಜನಸಮುದಾಯದ ವಿಮುಕ್ತಿ ಹಾಗೂ (ಡಿ) ಗ್ರಾಮಾಂತರ ಪ್ರದೇಶಗಳ ಜನರ ಜೀವನ ಮಟ್ಟದ ಸುಧಾರಣೆ. ಈ ಸಂಸ್ಥೆಯ ಪ್ರಧಾನ ಕಛೇರಿ ರೋಮ್‌ನಲ್ಲಿದೆ.

> **ನೀವೇ ಮಾಡಿ :**
> *ಕರ್ನಾಟಕದಲ್ಲಿ ಯುನೇಸ್ಕೋದವರು ಗುರುತಿಸಿರುವ ಐತಿಹಾಸಿಕ ಸ್ಮಾರಕಗಳನ್ನು ಪಟ್ಟಿ ಮಾಡಿ.*

ಬಿ) **ವಿಶ್ವ ಆರೋಗ್ಯ ಸಂಸ್ಥೆ - WHO - (World Health Organisation) :** ಪ್ರಪಂಚದ ಮಾನವರ ಆರೋಗ್ಯ ಸುಧಾರಿಸಲು 1948ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪನೆಗೊಂಡಿತು. ಈ ವಿಶ್ವ ಆರೋಗ್ಯ ಸಂಸ್ಥೆಯು ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು ಮುಂತಾದ ರೋಗಗಳನ್ನು ಸಂಪೂರ್ಣವಾಗಿ ತೊಡೆದು ಹಾಕಲು ಯತ್ನಿಸುತ್ತಿದೆ. ಅದೇ ರೀತಿ ಏಡ್ಸ್, ಕ್ಯಾನ್ಸರ್‌ನಂತಹ ಭೀಕರ ರೋಗಗಳಿಂದ ಪ್ರಪಂಚವನ್ನು ಮುಕ್ತಿಗೊಳಿಸಲು ಪ್ರಯತ್ನಿಸುತ್ತದೆ. ಸಿಡುಬು ರೋಗವನ್ನು ಸಮಗ್ರವಾಗಿ ನಿವಾರಿಸುವಲ್ಲಿ ಈ ಸಂಸ್ಥೆ ಯಶಸ್ಸು ಕಂಡಿದೆ. ಜನಸಂಖ್ಯಾ ಸ್ಫೋಟ, ಪರಿಸರ ಸಂರಕ್ಷಣೆ, ಹಸಿವು, ಪೌಷ್ಟಿಕತೆಯ ಕೊರತೆ ಮುಂತಾದ ವಿಷಯಗಳು ಈ ಸಂಸ್ಥೆಯ ಕಾರ್ಯ ಸೂಚಿಯಲ್ಲಿವೆ. ಈ ಎಲ್ಲಾ ಕ್ಷೇತ್ರದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಸೇವೆ ಉಲ್ಲೇಖನಾರ್ಹ ಎನಿಸಿದೆ. ಇದರ ಮುಖ್ಯ ಕಚೇರಿ ಸ್ವಿಟ್ಜರ್‌ಲ್ಯಾಂಡಿನ ಜಿನೇವಾದಲ್ಲಿದೆ.

ಸಿ) **ಯುನೆಸ್ಕೋ (United Nations Educational Scientific and Cultural Organisation) :** ಇದು 1946ರಲ್ಲಿ ಸ್ಥಾಪಿತಗೊಂಡಿದ್ದು, ಇದರ ಮುಖ್ಯ ಕೇಂದ್ರ ಪ್ಯಾರಿಸ್‌ನಲ್ಲಿದೆ. ಇದು ವಿಶ್ವದಾದ್ಯಂತ ವಿಜ್ಞಾನ, ಶಿಕ್ಷಣ, ಸಂಸ್ಕೃತಿ ಮುಂತಾದುವುಗಳನ್ನು ಪ್ರೋತ್ಸಾಹಿಸಲು ಉದ್ದೇಶಿಸಿರುವ ಪ್ರಾವೀಣ್ಯತೆಯ ಸಂಸ್ಥೆ, ತಾಂತ್ರಿಕ ಶಿಕ್ಷಣ, ಮಾಧ್ಯಮ ತಂತ್ರಗಾರಿಕೆ, ರಚನಾತ್ಮಕ ಚಿಂತನೆ, ಸಾಂಸ್ಕೃತಿಕ ವಿಚಾರಗಳು ಹಾಗೂ ಪರಿಸರ ವಿಜ್ಞಾನದ ಬಗೆಗೆ ಇದು ಕಾರ್ಯೋನ್ಮುಖವಾಗುತ್ತದೆ. ಪ್ರಪಂಚದಾದ್ಯಂತ ಶಿಕ್ಷಣ ಹಾಗೂ ಜ್ಞಾನ ಪ್ರಸಾರದ ನಿಟ್ಟಿನಲ್ಲಿ ಇದು ಸರ್ಕಾರಗಳಿಗೆ ಹಾಗೂ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯ ನೀಡುತ್ತದೆ.

ಡಿ) **ಯುನಿಸೆಫ್ (United Nations International Emergency Fund) :** ಈ ಸಂಸ್ಥೆ ದ್ವಿತೀಯ ಮಹಾಯುದ್ಧದ ಬಳಿಕ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ 1946ರಲ್ಲಿ ಸ್ಥಾಪನೆಗೊಂಡಿತು. ಮುಂದೆ 1957 ರಲ್ಲಿ ಇದೊಂದು ಶಾಶ್ವತ ಸಂಸ್ಥೆ ಎನಿಸಿತು. ಈ ಸಂಸ್ಥೆಯಲ್ಲಿ 30 ಮಂದಿ ಸದಸ್ಯರಿದ್ದಾರೆ. ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿಗೆ ಪೂರಕವಾದ ಪರಿಸರವನ್ನು ಒದಗಿಸುವುದೇ ಈ ಸಂಸ್ಥೆಯ ಮೂಲ ಉದ್ದೇಶವಾಗಿದೆ. ಈ ಉದ್ದೇಶ ಪೂರೈಕೆಗಾಗಿ ಅವಶ್ಯಕತೆಯಿರುವ ಎಲ್ಲಾ ರಾಷ್ಟ್ರಗಳಿಗೆ ಇದು ಸಹಾಯ ನೀಡುತ್ತದೆ. 1965 ರಲ್ಲಿ ಯುನಿಸೆಫ್ ನೋಬೆಲ್ ಬಹುಮಾನಗಳಿಸಿದೆ. ಶುಭಾಶಯ ಪತ್ರಗಳ ಮಾರಾಟದ ಮೂಲಕ ಈ ಸಂಸ್ಥೆ ಗಳಿಸುವ ಹಣವನ್ನು ಮಕ್ಕಳ ಯೋಗಕ್ಷೇಮಕ್ಕಾಗಿ ವಿನಿಯೋಗಿಸುತ್ತಿದೆ. ಹೀಗೆ ಈ ಸಂಸ್ಥೆ ಮಾನವೀಯ ದೃಷ್ಟಿಕೋನ ಹೊಂದಿದ ಸಂಸ್ಥೆ ಎನಿಸಿದೆ.

ಇ) **ಐ.ಎಮ್.ಎಫ್ (International Monetary Fund) :** 1945ರಲ್ಲಿ ಆರಂಭಗೊಂಡ ಈ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ 1947ರ ಬಳಿಕ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಿಸಿತು. ಇದರ ಮುಖ್ಯ ಕಛೇರಿ ಅಮೆರಿಕಾದ ವಾಷಿಂಗ್‌ಟನ್‌ನಲ್ಲಿದೆ. ಇದು ಅಂತರರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುತ್ತದೆ. ವಿಶ್ವ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ, ಆರ್ಥಿಕ ಸ್ಥಿರತೆ ಹಾಗೂ ಉತ್ತಮ ವಿದೇಶೀ ಪಾವತಿ ಸಮತೋಲನವನ್ನು ಕಾಯ್ದುಕೊಳ್ಳಲು ಇದು ಸಹಕರಿಸುತ್ತದೆ. ಇದರಲ್ಲಿ ಆಡಳಿತ ಮಂಡಳಿ, ಕಾರ್ಯನಿರ್ವಹಣಾ ನಿರ್ದೇಶಕ ಮಂಡಳಿ ಹಾಗೂ ಆಡಳಿತ ನಿರ್ದೇಶಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಇದರ ಕಾರ್ಯ ನಿರ್ವಹಣೆಯ ಗುಣಮಟ್ಟ

ಹಾಗೂ ಪಾರದರ್ಶಕತೆ ಸಾಕಷ್ಟು ಮನ್ನಣೆಯನ್ನು ಪಡೆದಿದೆ. ವಿವಿಧ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಿಗೆ ಕೇಂದ್ರ ಬ್ಯಾಂಕು ಎಂಬುದಾಗಿ ಇದನ್ನು ಕರೆಯಬಹುದಾಗಿದೆ. ಆರ್ಥಿಕವಾಗಿ ಮುಂದುವರಿದ ಹಾಗೂ ಹಿಂದುಳಿದ ರಾಷ್ಟ್ರಗಳ ಪರಸ್ಪರ ಸಂಬಂಧವನ್ನು ಬೆಸೆಯುವಲ್ಲಿ ಇದು ಪೂರಕ ಪಾತ್ರ ವಹಿಸುತ್ತದೆ.

ಎಫ್) ಐ.ಬಿ.ಆರ್.ಡಿ (International Bank for Reconstruction and Development) : ವಿಶ್ವ ಬ್ಯಾಂಕ್ ಎಂದೂ ಕರೆಯಲ್ಪಡುತ್ತಿರುವ ಈ ಸಂಸ್ಥೆ 1947ರಲ್ಲಿ ಪ್ರಾರಂಭವಾಯಿತು. ಇದರ ಮುಖ್ಯ ಕಚೇರಿ ವಾಷಿಂಗ್‌ಟನ್‌ನಲ್ಲಿದೆ. ದ್ವಿತೀಯ ಮಹಾಯುದ್ಧದ ಬಳಿಕ ಆರ್ಥಿಕ ಪುನಶ್ಚೇತನಕ್ಕಾಗಿ ಈ ಬ್ಯಾಂಕ್ ಸ್ಥಾಪನೆಗೊಂಡಿತು. ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ ಅಭಿವೃದ್ಧಿಗಾಗಿ ಅವಶ್ಯಕವಿರುವ ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ಈ ಬ್ಯಾಂಕ್ ಅಗಾಧ ಮೊತ್ತದ ಸಾಲ ನೀಡುತ್ತದೆ. ಇದು ವಿಶ್ವ ವ್ಯಾಪಾರ ಹಾಗೂ ವಿದೇಶೀ ವಿನಿಮಯ ಪಾವತಿ ಸಮತೋಲನಕ್ಕೆ ಸಹಾಯ ಮಾಡುತ್ತದೆ. ಎಲ್ಲಾ ಪ್ರಗತಿಪರ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಹೆಚ್ಚಿನ ಸಹಾಯ ಈ ಬ್ಯಾಂಕ್ ನೀಡುತ್ತದೆ. ಇದರಲ್ಲಿ ಆಡಳಿತ ಮಂಡಳಿ, ಕಾರ್ಯಕಾರಿ ಮಂಡಳಿ ಹಾಗೂ ಅಧ್ಯಕ್ಷರು ಕಾರ್ಯನಿರ್ವಹಿಸುತ್ತಾರೆ. ಇದರ ಕೈಕೆಳಗೆ ಎರಡು ಸಹಕಾರೀ ಅಂಗಗಳಿವೆ. ಅವುಗಳೆಂದರೆ (ಎ) ಅಂತರರಾಷ್ಟ್ರೀಯ ಪ್ರಗತಿ ಕೂಟ ಮತ್ತು (ಬಿ) ಅಂತಾರಾಷ್ಟ್ರೀಯ ಹಣಕಾಸು ನಿಗಮ.

ಜಿ) ಅಂತರರಾಷ್ಟ್ರಿಯ ಕಾರ್ಮಿಕ ಸಂಘ (International Labour Organisation) : ಈ ಸಂಸ್ಥೆಯ ಹೆಸರೇ ಸೂಚಿಸುವಂತೆ ಇದು ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಆರಂಭಗೊಂಡ ಸಂಸ್ಥೆಯಾಗಿದೆ. ಇದರ ಮುಖ್ಯ ಕಾರ್ಯಾಲಯ ಸ್ವಿಟ್ಜರ್‌ಲ್ಯಾಂಡಿನ ಜಿನೇವಾದಲ್ಲಿದೆ. ಪ್ರತಿಯೊಂದು ಸದಸ್ಯರಾಷ್ಟ್ರವು ಇಬ್ಬರು ಪ್ರತಿನಿಧಿಗಳನ್ನು ಈ ಸಂಸ್ಥೆಗೆ ಕಳುಹಿಸುತ್ತಿದ್ದು, ಅದರಲ್ಲಿ ಒಬ್ಬರು ಕಾರ್ಮಿಕ ಪ್ರತಿನಿಧಿ ಹಾಗೂ ಇನ್ನೊಬ್ಬರು ಆಡಳಿತ ನಡೆಸುವವರ ಪ್ರತಿನಿಧಿ ಆಗಿರುತ್ತಾರೆ. ಕಾರ್ಮಿಕ ವರ್ಗದ ಸಾಮಾಜಿಕ ಭದ್ರತೆ, ಆರೋಗ್ಯ ಸಂರಕ್ಷಣೆ, ಉತ್ತಮ ಜೀವನ ಮಟ್ಟ ಇತ್ಯಾದಿ ವಿಚಾರಗಳು ಈ ಸಂಸ್ಥೆಯ ಕಾರ್ಯ ವ್ಯಾಪ್ತಿಗೆ ಸೇರುತ್ತದೆ. ಮಹಿಳಾ ಕಾರ್ಮಿಕರ ಹೆರಿಗೆ ಸೌಲಭ್ಯ, ಕನಿಷ್ಠ ವೇತನ ಜಾರಿ, ವಸತಿ ನಿರ್ಮಾಣ, ಇತ್ಯಾದಿ ವಿಚಾರಗಳು ಈ ಸಂಸ್ಥೆಯ ಕಾರ್ಯ ಪರಿಧಿಯೊಳಗೆ ಸೇರಿವೆ. ಈ ಸಂಸ್ಥೆಯ ನಿರ್ಣಯಗಳು ಕೇವಲ ಸಲಹೆಗಳ ರೂಪದಲ್ಲಿದ್ದರೂ, ಸದಸ್ಯ ರಾಷ್ಟ್ರಗಳು ಅವುಗಳಿಗೆ ಮನ್ನಣೆ ನೀಡುತ್ತವೆ. ಇದರ ಸಾಮಾನ್ಯ ಸಮ್ಮೇಳನ ಕಾರ್ಮಿಕ ವರ್ಗದ ಜಾಗತಿಕ ಸಂಸತ್ತಿನಂತೆಯೇ ಇದ್ದು ಅವರ ಹಿತಾಸಕ್ತಿಗಳನ್ನು ರಕ್ಷಿಸಲು ಯತ್ನಿಸುತ್ತದೆ.

ಎಚ್) ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ : ಈ ಸಂಸ್ಥೆ ಪ್ರಧಾನವಾಗಿ ಜಾಗತಿಕ ಮಟ್ಟದ ವ್ಯಾಪಾರ ಮತ್ತು ವಾಣಿಜ್ಯ ಸಂಗತಿಗಳ ಪ್ರಗತಿಗೆ ಯತ್ನಿಸುತ್ತದೆ. ಅಂತರರಾಷ್ಟ್ರೀಯ ವ್ಯಾಪಾರದ ಬೆಳವಣಿಗೆಗೆ ಬೇಕಾದ ತಾಂತ್ರಿಕ ಸಹಕಾರ ಈ ಸಂಸ್ಥೆ ನೀಡುತ್ತದೆ. ಜಾಗತಿಕ ಮಟ್ಟದಲ್ಲಿ ಯಾವುದೇ ತೆರನಾದ ಧೋರಣಾತ್ಮಕ ತೊಂದರೆಗಳನ್ನು ಇದು ನಿವಾರಿಸಿ, ತನ್ಮೂಲಕ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ವಾಣಿಜ್ಯದ ಬೆಳವಣಿಗೆಗೆ ಇದು ಸಹಕರಿಸುತ್ತದೆ. ಹೀಗೆ ವಿಶ್ವ ಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಇದು ಕಾರ್ಯ ನಡೆಸುತ್ತದೆ.

ಐ) **ವಿಶ್ವ ವ್ಯಾಪಾರ ಸಂಘ (World Trade Organisation) :** ಈ ಸಂಸ್ಥೆ 1995 ಜನವರಿ 1 ರಂದು ಹುಟ್ಟಿಕೊಂಡಿತು. ಇದರ ಎಲ್ಲಾ ಸದಸ್ಯ ರಾಷ್ಟ್ರಗಳು 'ಸಾಮಾನ್ಯ ವ್ಯಾಪಾರ ಹಾಗೂ ಸುಂಕ ಒಪ್ಪಂದ' (ಗ್ಯಾಟ್)ಕ್ಕೆ ಒಪ್ಪಿಗೆ ಸೂಚಿಸಿದವು. ಅಂತರರಾಷ್ಟ್ರೀಯ ಮಟ್ಟದ ವಾಣಿಜ್ಯ ಹಾಗೂ ವ್ಯಾಪಾರದ ತೊಡಕುಗಳ ನಿವಾರಣೆಗೆ ಇದು ಯತ್ನಿಸುತ್ತದೆ. ವಿಶ್ವ ಬ್ಯಾಂಕಿನೊಂದಿಗೆ ಇದು ಅಂತರರಾಷ್ಟ್ರೀಯ ವಾಣಿಜ್ಯ ವ್ಯವಹಾರಗಳ ಧೋರಣೆಗಳನ್ನು ರೂಪಿಸುವಲ್ಲಿ ಸಹಕರಿಸುತ್ತದೆ. ಮುಕ್ತ ವಾಣಿಜ್ಯ ಧೋರಣೆಯಿಂದ ಪ್ರವರ್ಧಮಾನದೆಡೆಗೆ ಸಾಗುವ ರಾಷ್ಟ್ರಗಳು ಕೆಲವೊಂದು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಐ.ಎಮ್.ಎಫ್ ಹಾಗೂ ಐ.ಬಿ.ಆರ್.ಡಿ. ಸಂಸ್ಥೆಗಳೊಂದಿಗೆ ಇದು ತೃತೀಯ ಆರ್ಥಿಕ ಆಧಾರ ಸ್ತಂಭ ಎಂದು ಕರೆಯಲ್ಪಡುತ್ತದೆ.

ಪ್ರಾದೇಶಿಕ ಸಹಕಾರ : ಪ್ರಚಲಿತ ಜಗತ್ತಿನಲ್ಲಿ ಹಲವಾರು ಪ್ರಾದೇಶಿಕ ಸಂಸ್ಥೆಗಳ ಇರುವಿಕೆಯನ್ನು ನಾವು ಗಮನಿಸಬಹುದಾಗಿದೆ. ಇವುಗಳು ಸದಸ್ಯ ರಾಷ್ಟ್ರಗಳ ಪರಸ್ಪರ ಸಹಕಾರ ಹಾಗೂ ತಿಳುವಳಿಕೆಯನ್ನು ಬಲಪಡಿಸುತ್ತವೆ. ಇಂತಹ ಪ್ರಾದೇಶಿಕ ಸಂಸ್ಥೆಗಳಲ್ಲಿ ಈ ಕೆಳಗಿನವುಗಳು ಪ್ರಾಮುಖ್ಯವಾಗಿದೆ.

1) **ಕಾಮನ್‌ವೆಲ್ತ್ ರಾಷ್ಟ್ರ ಸಂಘ (Commen wealth of Nations) :–** ಇದನ್ನು ಹಿಂದೆ "ಬ್ರಿಟಿಷ್ ಕಾಮನ್‌ವೆಲ್ತ್ ಆಫ್ ನೇಷನ್ಸ್" ಎಂದು ಕರೆಯುತ್ತಿದ್ದು, ಆ ಬಳಿಕ 'ಬ್ರಿಟಿಷ್'ಎಂಬ ಶಬ್ದವನ್ನು ತೆಗೆಯಲಾಯಿತು. ಈ ಸಂಸ್ಥೆ 1926ರಲ್ಲಿ ಸ್ಥಾಪನೆಗೊಂಡಿದ್ದು, ಮುಂದೆ ಭಾರತವೂ ಸೇರಿ ಸ್ವಾತಂತ್ರ್ಯಗಳಿಸಿದ ಹಲವಾರು ರಾಷ್ಟ್ರಗಳು ಇದರ ಸದಸ್ಯತ್ವವನ್ನು ಸ್ವಇಚ್ಛೆಯಿಂದ ಪಡೆದುಕೊಂಡವು. ಇದಕ್ಕೆ ಸಾಂಕೇತಿಕವಾಗಿ ಬ್ರಿಟನ್ನಿನ ದೊರೆಯ ಹಿರಿತನವಿದೆ. ಪ್ರಸಕ್ತ ಈ ಕಾಮನ್‌ವೆಲ್ತ್ ಸಂಸ್ಥೆಯಲ್ಲಿ 54 ಸದಸ್ಯ ರಾಷ್ಟ್ರಗಳಿವೆ. ಬ್ರಿಟನ್ನಿನ ಲಂಡನ್‌ನಲ್ಲಿ ಇದರ ಕೇಂದ್ರ ಕಚೇರಿಯಿದೆ. ಇದರ ಕಾರ್ಯಕಲಾಪಗಳಲ್ಲಿ ಸದಸ್ಯರಾಷ್ಟ್ರಗಳ ಪ್ರಧಾನ ಮಂತ್ರಿಗಳು, ಅರ್ಥ ಸಚಿವರು, ಹಾಗೂ ವಿದೇಶಾಂಗ ಮಂತ್ರಿಗಳು ಭಾಗವಹಿಸುತ್ತಾರೆ. ಪ್ರಜಾತಂತ್ರವನ್ನು ಎತ್ತಿ ಹಿಡಿಯುವುದು, ಸ್ವಾತಂತ್ರ್ಯದ ಸಂರಕ್ಷಣೆ, ಬಡತನ ನಿರ್ಮೂಲನ, ವಿಶ್ವಶಾಂತಿ ನೆಲೆಗೊಳಿಸುವಿಕೆ, ಕ್ರೀಡೆ, ವಿಜ್ಞಾನ, ಹಾಗೂ ಕಲೆಯ ಬೆಳವಣಿಗೆಗೆ ಹಾಗೂ ಆ ಬಗೆಗೆ ಸಂಬಂಧಗಳ ವೃದ್ಧಿ– ಇವು ಈ ಸಂಸ್ಥೆಯ ಪ್ರಮುಖ ಉದ್ದೇಶಗಳಾಗಿವೆ. ಪರಸ್ಪರ ಸದಸ್ಯರಾಷ್ಟ್ರಗಳ ಮೈತ್ರಿಯನ್ನು ಈ ಸಂಸ್ಥೆ ಬಲಪಡಿಸುತ್ತದೆ.

2) **'ಸಾರ್ಕ್' (South Asian Association for Regional co-operation) :** ಈ ಸಂಸ್ಥೆ 1985ರಲ್ಲಿ ಸ್ಥಾಪನೆಗೊಂಡಿದ್ದು, ಇದೀಗ ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ, ಮಾಲ್‌ಡೀವ್ಸ್, ಭೂತಾನ್ ಹಾಗೂ ಅಫಘಾನಿಸ್ತಾನ – ಈ 8 ರಾಷ್ಟ್ರಗಳು ಇದರ ಸದಸ್ಯತ್ವ ಹೊಂದಿವೆ. ಆರ್ಥಿಕ ಸಂಬಂಧಗಳ ವೃದ್ಧಿ, ಸಾಮಾಜಿಕ ಪ್ರಗತಿ ಹಾಗೂ ಸಾಂಸ್ಕೃತಿಕ ಬೆಳವಣಿಗೆಯನ್ನು ಪರಸ್ಪರ ಸಹಕಾರದೊಂದಿಗೆ ಸಾಧಿಸುವಿಕೆ ಈ ಸಂಸ್ಥೆಯ ಮೂಲ ಉದ್ದೇಶ. ಈ ಗುರಿ ಸಾಧನೆಗಾಗಿ ಹಲವಾರು ತಾಂತ್ರಿಕ ಸಮಿತಿಗಳು, ಕಾರ್ಯಾಚರಣೆ ಪಡೆಗಳು ಹಾಗೂ ಸ್ಥಾಯಿ ಸಮಿತಿಗಳು ರಚನೆಗೊಂಡಿವೆ. ಆದರೆ ಸದಸ್ಯ ರಾಷ್ಟ್ರಗಳ ಪರಸ್ಪರ ಅಪನಂಬಿಕೆ, ವಿವಾದಗಳು ಈ ಸಂಸ್ಥೆಯ ಪ್ರಗತಿಗೆ ತೊಡಕಾಗಿವೆ. 'ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲೇ ಇರಬೇಕು' ಎಂಬ ಸೂತ್ರವೂ ಈ ಸಂಸ್ಥೆಯ ಪ್ರಗತಿಗೆ ಒಂದು ತೊಡಕಾಗಿ ಪರಿಣಮಿಸಿದೆ.

ತಮ್ಮ ತಮ್ಮೊಳಗಿನ ವಿವಾದಗಳೇ ಈ ಸದಸ್ಯರಾಷ್ಟ್ರಗಳ ಮಧ್ಯೆ ಸಾಕಷ್ಟು ಇವೆ. ಆದರೂ ನಿಯತಕಾಲಿಕ ಸಮಾವೇಶಗಳು ಪರಸ್ಪರ ಶಾಂತಿಯುತ ಪರಿಹಾರಕ್ಕೆ ಅನುವು ಮಾಡಿಕೊಡುತ್ತದೆ. ವಿಜ್ಞಾನ, ತಾಂತ್ರಿಕತೆ, ಕೃಷಿ ಮುಂತಾದ ವಿಷಯಗಳ ಬಗ್ಗೆ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳ ಕಮ್ಮಟಗಳು, ತರಬೇತಿ ಕಾರ್ಯಗಾರಗಳು ಜಂಟಿಯಾಗಿ ನಡೆಯುತ್ತವೆ. 'ಸಾರ್ಕ್'ನ ಚಟುವಟಿಕೆಗಳಲ್ಲಿ ಭಾರತವು ಸಕ್ರೀಯ ಪಾತ್ರ ವಹಿಸುತ್ತಿದೆ. ಇದರ ಮುಖ್ಯ ಕಛೇರಿ ನೇಪಾಳದ ಕಠ್ಮಂಡುವಿನಲ್ಲಿದೆ.

3) **ಯುರೋಪಿಯನ್ ಯೂನಿಯನ್ :** ಈ ಸಂಸ್ಥೆ 27 ಯುರೋಪಿನ ಸದಸ್ಯ ರಾಷ್ಟ್ರಗಳನ್ನು ಒಳಗೊಂಡ ಸಂಸ್ಥೆಯಾಗಿದೆ. ಮ್ಯಾಸ್ಟ್ರಿಚ್ ಎಂಬಲ್ಲಿ ಯುರೋಪಿಯನ್ ಯೂನಿಯನ್ ಒಪ್ಪಂದದ ಅನುಗುಣವಾಗಿ 1992ರಲ್ಲಿ ಇದು ಉದಯವಾಯಿತು. ಇದು ಸದಸ್ಯ ರಾಷ್ಟ್ರಗಳ ಮಧ್ಯೆ ಸಮಾನ ಏಕ ಮಾರುಕಟ್ಟೆ, ಒಂದೇ ಚಲಾವಣೆಯ ಕರೆನ್ಸಿ, ಸಮಾನ ಕೃಷಿ ಹಾಗೂ ವ್ಯಾಪಾರ ಧೋರಣೆ ಇತ್ಯಾದಿಗಳಿಗೆ ಅವಕಾಶ ಮಾಡಿಕೊಡುತ್ತದೆ. ಇದರಲ್ಲಿನ ಮುಖ್ಯ ಅಂಗ ಸಂಸ್ಥೆಗಳೆಂದರೆ (1) ಸಮಿತಿ, (2) ಆಯೋಗ, (3) ಯುರೋಪಿನ ಸಂಸತ್ತು, ಹಾಗೂ (4) ಯುರೋಪಿನ ನ್ಯಾಯಾಲಯ. ಈ ಯುರೋಪಿಯನ್ ಯೂನಿಯನ್ ಒಂದು ಸಂಯುಕ್ತ ರಾಜ್ಯವನ್ನು ಹೋಲುವಂತಿದೆ. ಇದರ ಪ್ರತಿಪಾದಕರು ಹೇಳುವಂತೆ ಈ ಸಂಸ್ಥೆ ಶಾಂತಿ ಮತ್ತು ಪ್ರಜಾತಂತ್ರಕ್ಕಾಗಿ ಕಾರ್ಯ ನಿರ್ವಹಿಸುತ್ತದೆ. ಈ ಯುರೋಪಿಯನ್ ಯೂನಿಯನ್ ಈ ಹಿಂದಿನ ಯುರೋಪಿಯನ್ ಇಕಾನಾಮಿಕ್ ಕಮ್ಯುನಿಟೀ (ಇ.ಇ.ಸಿ)ಯ ವಾರಸುದಾರ ಸಂಸ್ಥೆಯಂತಿದೆ. ಇದರ ಸದಸ್ಯ ರಾಷ್ಟ್ರಗಳು ಸ್ವಯಂ ಇಚ್ಛೆಯಿಂದ ತಮ್ಮ ಸಾರ್ವಭೌಮ ಅಧಿಕಾರದ ಗಮನಾರ್ಹ ಅಂಶವನ್ನು ಈ ಸಂಸ್ಥೆಗೆ ನೀಡಿದ್ದಾರೆ.

4) **ಆಸಿಯನ್ (Association of South East Asain Nations) :** ಈ ಸಂಸ್ಥೆ 1967ರಲ್ಲಿ ಉದಯವಾಯಿತು. ಇದರ ಸ್ಥಾಪಕ ಸದಸ್ಯರಾಷ್ಟ್ರಗಳೆಂದರೆ, ಸಿಂಗಾಪುರ, ಮಲೇಷ್ಯಾ, ಇಂಡೋನೇಷ್ಯಾ, ಫಿಲಿಪ್ಪೈನ್ಸ್ ಹಾಗೂ ಥೈಲ್ಯಾಂಡ್. ಇದೀಗ ಇದರಲ್ಲಿ 10 ರಾಷ್ಟ್ರಗಳು ಸದಸ್ಯತ್ವ ಹೊಂದಿದೆ. ಇದರ ಮುಖ್ಯ ಉದ್ದೇಶಗಳೆಂದರೆ ಈ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ, ಸಾಮಾಜಿಕ ಬೆಳವಣಿಗೆಗೆ ಯತ್ನ ಹಾಗೂ ಸಾಂಸ್ಕೃತಿಕ ಪ್ರಗತಿ ಸಾಧಿಸುವಿಕೆ ಮತ್ತು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ತಾಂತ್ರಿಕ, ವೈಜ್ಞಾನಿಕ, ಆಡಳಿತಾತ್ಮಕ ಇತ್ಯಾದಿ ಕ್ಷೇತ್ರಗಳಲ್ಲಿ ಪರಸ್ಪರ ನೆರವು ಹಾಗೂ ಸಹಭಾಗಿತ್ವ ಹೊಂದುವಿಕೆ.

ಇದು ಒಂದು ಮಿಲಿಟರಿ ಒಕ್ಕೂಟವಲ್ಲ. ಭಾರತ ಈ ಸಂಸ್ಥೆಯ ಬಗ್ಗೆ ಉದಾರ ನೀತಿ ಹೊಂದಿಲ್ಲ, ಅದರ ಸದಸ್ಯತ್ವ ಹೊಂದಿಲ್ಲ. ವೀಕ್ಷಕರ ಸ್ಥಾನ ಹೊಂದಿದೆ. ಇದರಲ್ಲಿ ವಿಶ್ವದ ಒಟ್ಟು ಜನಸಂಖ್ಯೆಯ 9 ಪ್ರತಿಶತ ಜನರಿದ್ದಾರೆ.

5) **ದಿ ಆರ್ಗನೈಸೇಶನ್ ಆಪ್ ಆಫ್ರಿಕನ್ ಯುನಿಟಿ :** ಈ ಆಫ್ರಿಕನ್ ಒಕ್ಕೂಟ ಸಂಸ್ಥೆ 1963ರಲ್ಲಿ ಸ್ಥಾಪನೆಗೊಂಡಿತು. ಸ್ವಾತಂತ್ರ್ಯಗಳಿಸಿದ ಆಫ್ರಿಕನ್ ರಾಷ್ಟ್ರಗಳು ತಮ್ಮ ತಮ್ಮೊಳಗೆ ಹಲವಾರು ಪ್ರಾದೇಶಿಕ ಸಂಸ್ಥೆಗಳನ್ನು ರಚಿಸಿಕೊಂಡವು. ಮುಂದೆ ಅವೆಲ್ಲಾ ಒಟ್ಟಾಗಿ ಆರ್ಗನೈಸೇಶನ್ ಆಫ್ ಆಫ್ರಿಕನ್ ಯುನಿಟಿ ಎಂಬ ಹೊಸ ಸಂಸ್ಥೆಯನ್ನು ಸ್ಥಾಪಿಸಿದವು. ಎಲ್ಲಾ ಸ್ವತಂತ್ರ ಆಫ್ರಿಕನ್ ರಾಷ್ಟ್ರಗಳ ಸ್ವಯಂ

ನಿರ್ಧಾರದ ಹಕ್ಕನ್ನು ಈ ಸಂಸ್ಥೆ ಪ್ರತಿಪಾದಿಸುತ್ತದೆ. ಇದು ಸ್ವಾತಂತ್ರ್ಯ, ಸಮಾನತೆ, ನ್ಯಾಯ ಹಾಗೂ ಒಗ್ಗಟ್ಟನ್ನು ಆಫ್ರಿಕನ್ ರಾಷ್ಟ್ರಗಳಲ್ಲಿ ನೆಲೆಯಾಗಿಸಲು ಶ್ರಮಿಸುತ್ತದೆ. 'ನೂತನ ವಸಾಹತುಶಾಹಿತ್ವ'ದ ವಿರುದ್ಧ ಧ್ವನಿ ಎತ್ತಲು ಸಂಸ್ಥೆಯ ಸದಸ್ಯರು ಬದ್ಧರಾಗಿದ್ದಾರೆ, ಇದರ ಸನ್ನದಿಗೆ ಒಪ್ಪಿಗೆಯಿರುವ ಎಲ್ಲಾ ಆಫ್ರಿಕನ್ ರಾಷ್ಟ್ರಗಳು ಈ ಸಂಸ್ಥೆಯ ಸದಸ್ಯರಾಗಲು ಅರ್ಹರಾಗಿದ್ದಾರೆ.

ಈ ಸಂಸ್ಥೆಯಲ್ಲಿ (1) ಸದಸ್ಯರಾಷ್ಟ್ರಗಳ ಮುಖ್ಯಸ್ಥರ ಹಾಗೂ ಅಲ್ಲಿನ ಸರಕಾರದ ಮುಖ್ಯಸ್ಥರ ಸಭೆ, (2) ಸಚಿವ ಸಂಪುಟ ಹಾಗೂ (3) ಮಧ್ಯಸ್ಥಿಕೆ ಒಪ್ಪಂದ ಹಾಗು ರಾಜಿಪಂಚಾಯಿತಿಕೆ ಸಮಿತಿಯಿದೆ. ವಸಾಹತುಶಾಹಿತ್ವ, ವರ್ಣಭೇದ ನೀತಿ, ಸಾಮ್ರಾಜ್ಯಶಾಹಿತ್ವ ಮುಂತಾದವುಗಳ ವಿರುದ್ಧ ಈ ಸಂಸ್ಥೆ ಉತ್ತಮ ಪಾತ್ರ ವಹಿಸಿದೆ.

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ವಿಶ್ವಸಂಸ್ಥೆಯು ಪ್ರಾರಂಭವಾದ ವರ್ಷ __________
2. ವಿಶ್ವಸಂಸ್ಥೆಯ ಮುಖ್ಯ ಕಚೇರಿ __________ ನಗರದಲ್ಲಿದೆ.
3. ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ __________
4. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಅವಧಿ __________ ವರ್ಷಗಳು
5. ಅಂತರರಾಷ್ಟ್ರೀಯ ನ್ಯಾಯಾಲಯವು __________ ಎಂಬಲ್ಲಿ ಇದೆ.
6. ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿಯ ಹೆಸರು __________ .
7. ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪನೆಯಾದ ವರ್ಷ __________.
8. ಸಾರ್ಕ್ ಸ್ಥಾಪನೆಯಾದ ವರ್ಷ __________

II. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಗುಂಪುಗಳಲ್ಲಿ ಚರ್ಚಿಸಿ ಎರಡು-ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ವಿಶ್ವಸಂಸ್ಥೆಯ ಸ್ಥಾಪನೆಗೆ ಮುಂದಾದವರ ಹೆಸರುಗಳನ್ನು ತಿಳಿಸಿ
2. ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳಾವುವು?
3. ಭದ್ರತಾ ಸಮಿತಿಯಲ್ಲಿನ ಖಾಯಂ ಸದಸ್ಯ ರಾಷ್ಟ್ರಗಳು ಯಾವುವು?
4. ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯ ಸೂಚಿಯಲ್ಲಿರುವ ವಿಷಯಗಳಾವುವು?
5. ಅಂತರ ರಾಷ್ಟ್ರೀಯ ಕಾರ್ಮಿಕ ಸಂಘದ ಕಾರ್ಯಗಳನ್ನು ಪಟ್ಟಿ ಮಾಡಿ
6. SAARC ನ್ನು ವಿಸ್ತರಿಸಿ.

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ, ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1. ವಿಶ್ವಸಂಸ್ಥೆಯ ಉದ್ದೇಶಗಳನ್ನು ಪಟ್ಟಿಮಾಡಿರಿ.
2. ಸಾಮಾನ್ಯ ಸಭೆಯ ರಚನೆಯನ್ನು ವಿವರಿಸಿ.
3. ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯ ಕಾರ್ಯಗಳಾವುವು?
4. 'ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾಗಿದೆ' ಈ ಹೇಳಿಕೆಯನ್ನು ಸಮರ್ಥಿಸಿ.
5. ಯುನೆಸ್ಕೋದ ಕಾರ್ಯಗಳಾವುವು?
6. ಜಾಗತಿಕ ಮಟ್ಟದಲ್ಲಿನ ಆರ್ಥಿಕ ಸಮಸ್ಯೆಗಳ ಪರಿಹಾರದಲ್ಲಿ ಐ. ಎಮ್. ಎಫ್‌ನ ಪಾತ್ರವನ್ನು ವಿಶ್ಲೇಷಿಸಿ.
7. ಕಾಮನ್‌ವೆಲ್ತ್ ರಾಷ್ಟ್ರಸಂಘದ ಉದ್ದೇಶಗಳನ್ನು ಪಟ್ಟಿಮಾಡಿರಿ.
8. ಯುರೋಪಿಯನ್ ಯೂನಿಯನ್ ಸಂಸ್ಥೆಯನ್ನು ವಿವರಿಸಿ.

IV. ಚಟುವಟಿಕೆ :

1. ಕರ್ನಾಟಕದಲ್ಲಿ ಯುನೆಸ್ಕೊದವರು ಗುರುತಿಸಿರುವ ಐತಿಹಾಸಿಕ ಸ್ಮಾರಕಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

V. ಯೋಜಿತ ಕಾರ್ಯ :

1. ಜಾಗತಿಕ ಮಟ್ಟದಲ್ಲಿ ವಿಶ್ವಸಂಸ್ಥೆಯು ನಿರ್ವಹಿಸಿರುವ ಶಾಂತಿ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ವೃತ್ತ ಪತ್ರಿಕೆಗಳಲ್ಲಿ ಬಂದಿರುವ ಮಾಹಿತಿಗಳನ್ನು ಸಂಗ್ರಹಿಸಿ.

ಸಮಾಜಶಾಸ್ತ್ರ

ಅಧ್ಯಾಯ – 1

ಸಾಮಾಜಿಕ ಸ್ತರವಿನ್ಯಾಸ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಸಾಮಾಜಿಕ ಸ್ತರ ವಿನ್ಯಾಸ.*
- *ಜನರಲ್ಲಿನ ಭಿನ್ನತೆ.*
- *ಅಸ್ಪೃಶ್ಯತೆಯು ಒಂದು ಸಾಮಾಜಿಕ ಪಿಡುಗು.*
- *ಅಸ್ಪೃಶ್ಯತೆಯ ನಿವಾರಣಾ ಕ್ರಮಗಳು.*

ನಾವು ಬೇರೆ ಬೇರೆ ಪ್ರದೇಶಗಳಲ್ಲಿ ಜನಿಸಿ ಆ ಪ್ರಾದೇಶಿಕ ವಾತಾವರಣ, ವ್ಯವಸ್ಥೆ, ಸೌಲಭ್ಯ, ಅವಕಾಶಗಳಿಂದ ಭಿನ್ನರಾಗಿರುತ್ತೇವೆ. ಹೀಗೆ ವ್ಯತ್ಯಾಸಗಳಿಂದ ಸೃಷ್ಟಿಯಾದ ಮಾನವ ಸಮಾಜವು, ಭಿನ್ನತೆಗಳನ್ನು ಆಧಾರವಾಗಿಸಿ ಸ್ತರವಿನ್ಯಾಸಕ್ಕೆ ಎಡೆಮಾಡಿಕೊಟ್ಟಿತು. ಸಂಪತ್ತು ಹಾಗೂ ಸೌಕರ್ಯಗಳ ಕ್ರೂಡೀಕರಣಗಳ ಹಿನ್ನೆಲೆಯಲ್ಲಿ ಸಮಾಜದಲ್ಲಿ ತಾರತಮ್ಯವನ್ನು ಸೃಷ್ಟಿಸಿತು. ಹೀಗೆ ಆಳು–ಅರಸ, ಬಡವ–ಬಲ್ಲಿದ, ಮೇಲು–ಕೀಳು ಎಂಬ ವ್ಯತ್ಯಾಸಗಳು ಸಮಾಜದಲ್ಲಿ ಕಂಡುಬಂದವು. ಇದರಿಂದಾಗಿ ಸಮಾಜದಲ್ಲಿ ಶೋಷಣೆಯುಂಟಾಯಿತು. ಈ ವ್ಯತ್ಯಾಸಗಳು ಮತ್ತು ತಾರತಮ್ಯಗಳೇ ಸಮಾಜದ ಸ್ತರವಿನ್ಯಾಸಕ್ಕೆ ಕಾರಣವಾದವು.

ಸಾಮಾಜಿಕ ಸ್ತರವಿನ್ಯಾಸವೆಂದರೆ ಜನರನ್ನು ಆದಾಯ, ಶಿಕ್ಷಣ, ಜಾತಿ, ಬಣ್ಣ, ಲಿಂಗ, ಉದ್ಯೋಗ, ಬುದ್ಧಿಶಕ್ತಿ ಮೊದಲಾದವುಗಳ ಆಧಾರದ ಮೇಲೆ ಮೇಲು–ಕೀಳು ಎಂದು ವಿಂಗಡಿಸುವುದಾಗಿದೆ. ಸ್ತರವಿನ್ಯಾಸವು ಸಮಾಜದಿಂದ ನಿರ್ಮಿಸಲ್ಪಟ್ಟಿದೆ. ಉದಾಹರಣೆಗೆ, ಶ್ರೀಮಂತ ಕುಟುಂಬದಲ್ಲಿ ಜನಿಸಿದ ಮಕ್ಕಳಿಗೆ ಉತ್ತಮವಾದ ಪೌಷ್ಠಿಕ ಆಹಾರ, ಶಾಲೆ, ಉದ್ಯೋಗ ದೊರಕುವ ಅವಕಾಶಗಳು ಹೆಚ್ಚಾಗಿರುತ್ತವೆ. ಆದರೆ ಬಡವರ ಮಕ್ಕಳಿಗೆ ಮೇಲಿನ ಅವಕಾಶಗಳು ಕಡಿಮೆ. ಶ್ರೀಮಂತರು, ಬಡವರು ಎಂದು ಸಮಾಜವು ವರ್ಗೀಕರಣವಾಗಿರುವುದಕ್ಕೆ ಮಕ್ಕಳು ಕಾರಣವಲ್ಲ. ಆದರೆ ಸಮಾಜ ಮಾಡಿರುವ ಸ್ತರವಿನ್ಯಾಸದ ಕೆಟ್ಟ ಪರಿಣಾಮಗಳನ್ನು ಶೋಷಿತರು ಅನುಭವಿಸುತ್ತಾರೆ.

ಚಟುವಟಿಕೆ :
ಸಮಾಜದಲ್ಲಿನ ಭೇದ ಭಾವದ ನಿವಾರಣೆಗಾಗಿ ಸರ್ಕಾರವು ಕೈಗೊಳ್ಳುತ್ತಿರುವ ಯೋಜನೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ.

ಸಾಮಾಜಿಕ ಸ್ತರವಿನ್ಯಾಸವು ಕಾಲದಿಂದ ಕಾಲಕ್ಕೆ ಹಾಗೂ ದೇಶದಿಂದ ದೇಶಕ್ಕೆ ಭಿನ್ನತೆಯೊಂದಿಗೆ ಕಾಣಲ್ಪಡುತ್ತದೆ. ಉದಾಹರಣೆಗೆ – ಭಾರತದಲ್ಲಿ ಸಾವಿರಾರು ವರ್ಷಗಳಿಂದ ಜಾತಿಪದ್ಧತಿಯು ಅಸ್ತಿತ್ವದಲ್ಲಿದೆ. ಈ ಪದ್ಧತಿಯು ಮೇಲು ಕೀಳಿನ ವ್ಯವಸ್ಥೆಯಾಗಿದೆ. ಆದುದರಿಂದ ಕೆಲವು ಕೆಳಜಾತಿಯ ಜನರನ್ನು ಶೂದ್ರರು, ಅಸ್ಪೃಶ್ಯರೆಂದು ಪರಿಗಣಿಸಿ ಅವರ ಆಹಾರ, ಉದ್ಯೋಗ ಮತ್ತು ಬದುಕಿನ ಹಕ್ಕನ್ನು ಕಸಿದುಕೊಳ್ಳಲಾಗಿತ್ತು. ಈ ಅನ್ಯಾಯವನ್ನು ಸರಿಪಡಿಸಲು ಸರ್ಕಾರಗಳು ಸಂವಿಧಾನಾತ್ಮಕವಾಗಿ ಪ್ರಯತ್ನಿಸಿವೆ.

ಸಾಮಾಜಿಕ ಸ್ತರವಿನ್ಯಾಸವು ಎಲ್ಲಾ ಸಮಾಜಗಳಲ್ಲಿ ಕಂಡುಬರುತ್ತದೆ. ಅಮೆರಿಕಾದಲ್ಲಿ ಬಿಳಿಯ ಚರ್ಮದ ಜನರು ಕಪ್ಪು ಚರ್ಮದ ಜನರನ್ನು ಗುಲಾಮರಂತೆ ನಡೆಸಿಕೊಂಡು ಮಾರಾಟ ಮಾಡುತ್ತಿದ್ದರು. ಹಾಗೆಯೇ ಎಲ್ಲಾ ಕಡೆಯೂ ಬಡವರು ಮತ್ತು ಶ್ರೀಮಂತರು ಎಂಬ ಭೇದಭಾವವು ಕಂಡುಬರುತ್ತದೆ.

ಸಾಮಾಜಿಕ ಸ್ತರವಿನ್ಯಾಸದ ವ್ಯವಸ್ಥೆಯು ಅಸಮಾನತೆಯನ್ನು, ಭಿನ್ನತೆಯನ್ನು ಉಂಟುಮಾಡುತ್ತದೆ. ಕೀಳು ಎಂದು ವರ್ಗೀಕರಿಸಲ್ಪಟ್ಟಿರುವ ಜನರನ್ನು ಅವಮಾನಿಸುತ್ತದೆ. ಉದಾ: ಕಪ್ಪು ಜನರು ಬಿಳಿಯ ಜನರ ಶಾಲೆಗಳಿಗೆ ಹೋಗುವಂತಿರಲಿಲ್ಲ. ಭಾರತದಲ್ಲಿ ಅಸ್ಪೃಶ್ಯರಿಗೆ ಸಾರ್ವಜನಿಕ ಬಾವಿ, ಕೆರೆಯಲ್ಲಿನ ನೀರನ್ನು ಬಳಸಲು ಬಿಡುತ್ತಿರಲಿಲ್ಲ.

ತಾರತಮ್ಯದಿಂದ ಉಂಟಾದ ಪೂರ್ವಾಗ್ರಹ :

'ಮಾನವಕುಲ ತಾನೊಂದೇ ವಲಂ' ಎಂದು ಬಹಳ ಹಿಂದೆಯೇ ಆದಿಕವಿ ಪಂಪನು ವ್ಯಕ್ತಪಡಿಸಿರುವನು. ಇದು ಮಾನವರೆಲ್ಲರೂ ಕೂಡಾ ಒಂದೇ ಎಂಬುದನ್ನು ಸೂಚಿಸುತ್ತದೆ. ಆದಾಗ್ಯೂ ಕೂಡಾ ಸಮಾಜದಲ್ಲಿ ಮನುಷ್ಯರು ಸೃಷ್ಟಿಸಿಕೊಂಡಿರುವ ಅನೇಕ ನಿರ್ಮಿತಗಳಾದ ಜಾತಿ ತಾರತಮ್ಯ, ಲಿಂಗತಾರತಮ್ಯ, ಪಾದೇಶಿಕ ತಾರತಮ್ಯ, ಬಡವ-ಬಲ್ಲಿದ ಮೊದಲಾದ ರೀತಿಯ ತಾರತಮ್ಯಗಳು ಪೂರ್ವಾಗ್ರಹಕ್ಕೆ ಕಾರಣವಾಗಿವೆ. ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹದವರ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವನೆಯೇ ಪೂರ್ವಾಗ್ರಹ ಎನಿಸಿಕೊಳ್ಳುವುದು. ಈ ಪೂರ್ವಾಗ್ರಹವು ಧನಾತ್ಮಕವಾಗಿಯೂ ಇರಬಹುದು, ಇಲ್ಲವೇ ಋಣಾತ್ಮಕವಾಗಿಯೂ ಇರಬಹುದು. ಆದರೆ ತಾರತಮ್ಯದಿಂದ ಉಂಟಾದಂತಹ ಪೂರ್ವಾಗ್ರಹವು ಅಸಹನೆ, ತಿರಸ್ಕಾರ, ಅಗೌರವ, ದ್ವೇಷ ಮುಂತಾದ ಭಾವನೆಗಳನ್ನು ಬೆಳೆಸಿಕೊಳ್ಳಲು ಆಸ್ಪದ ಮಾಡಿ ಕೊಡುತ್ತದೆ. ಇದರಿಂದ ಸಾಮಾಜಿಕ ಅಂತರ ಹೆಚ್ಚಿ ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗುತ್ತದೆ.

> ***ನಿಮಗಿದು ತಿಳಿದಿರಲಿ :***
>
> ***ಧನಾತ್ಮಕ ಪೂರ್ವಾಗ್ರಹ :*** *'ನಮ್ಮವರು' ಎಂಬುವವರೆಲ್ಲ 'ಒಳ್ಳೆಯವರು' ಎಂದು ಭಾವಿಸುವ ಪ್ರವೃತ್ತಿಯಿದೆ. ಇದು ನಾವು ನಮ್ಮವರು, ನಾವು ಪರಸ್ಪರ ಒಂದು ಗೂಡಿದವರು ಎಂಬ ಸಾಮರಸ್ಯದ ಆರೋಗ್ಯಕರ ಭಾವನೆಯನ್ನು ಕೂಡ ಮೂಡಿಸುತ್ತದೆ. ಅತಿರೇಕಕ್ಕೆ ಹೋದರೆ ಇದರಿಂದಲೂ ಹಾನಿಯಿದೆ.*

ಅಸ್ಪೃಶ್ಯತೆ-ಸಾಮಾಜಿಕ ಪಿಡುಗು :

ಭಾರತದಲ್ಲಿ ಸ್ತರವಿನ್ಯಾಸ ವ್ಯವಸ್ಥೆಯನ್ನು ಜಾತಿ-ಪದ್ಧತಿಯಲ್ಲಿ ಗುರುತಿಸಬಹುದಾಗಿದೆ. ಭಾರತದಲ್ಲಿನ ಜನ ಸಾವಿರಾರು ಜಾತಿ ಸಮೂಹಗಳಲ್ಲಿ ಹಂಚಿ ಹೋಗಿದ್ದಾರೆ. ಈ ಜಾತಿಗಳಲ್ಲಿ ಕೆಲವು ಮೇಲುಜಾತಿಗಳು ಎನಿಸಿಕೊಂಡರೆ ಮತ್ತೆ ಕೆಲವು ಕೆಳಜಾತಿಗಳು ಎನಿಸಿಕೊಂಡಿವೆ. ಜಾತಿಯ ಸ್ತರವಿನ್ಯಾಸದಲ್ಲಿ ಅಸ್ಪೃಶ್ಯರನ್ನು ಸಮಾಜವು ಕಡೆಯ ಹಂತದವರೆಂದು ಪರಿಗಣಿಸಿತ್ತು.

ಅಸ್ಪೃಶ್ಯತೆ ನಮ್ಮ ಸಮಾಜದ ಅಮಾನುಷವಾದ ಆಚರಣೆ. ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದು ಹೇಳಿದ್ದಾರೆ. ಅಸ್ಪೃಶ್ಯತೆ ಆಚರಣೆಯ ಪರಿಣಾಮದಿಂದಾಗಿ

ಅದಕ್ಕೆ ಒಳಗಾದ ಕೆಳಜಾತಿಗಳು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ರಾಜಕೀಯ ಅನುಕೂಲ ಮತ್ತು ಅವಕಾಶಗಳನ್ನು ಪಡೆಯುವುದರಿಂದ ವಂಚಿತವಾದವು. ಈ ಸ್ಥಿತಿ ಕೆಲವು ಶತಮಾನಗಳವರೆಗೂ ಮುಂದುವರೆದಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಈಗ ಎಲ್ಲ ವರ್ಗದವರಿಗೂ ಎಲ್ಲಾ ರೀತಿಯ ಸೌಲಭ್ಯಗಳು ಸಂವಿಧಾನಾತ್ಮಕವಾಗಿ ದೊರಕುತ್ತಿವೆ. ಹಿಂದುಳಿದ ಜಾತಿ-ವರ್ಗದವರಿಗೆ ವಿಶೇಷ ಸೌಲಭ್ಯ ನೀಡಲಾಗುತ್ತಿದೆ. ಕ್ರಮೇಣವಾಗಿ ಹೆಚ್ಚುತ್ತಿರುವ ಸಾಕ್ಷರತೆಯಿಂದಾಗಿ ಸಾಮಾಜಿಕ ಜಾಗೃತಿ ಮೂಡತೊಡಗಿದ್ದು ಅಸ್ಪೃಶ್ಯತಾ ಆಚರಣೆ ಕಡಿಮೆಯಾಗುತ್ತಿದೆ. ಇದು ಸಮಾಜದ ಸ್ವಾಗತಾರ್ಹವಾದ ಬೆಳವಣಿಗೆಯಾಗಿದ್ದು ಸಾಮಾಜಿಕ ಸಾಮರಸ್ಯದ ಬೆಳವಣಿಗೆಗೆ ಸಹಾಯಕವಾಗಿದೆ.

ಅಸ್ಪೃಶ್ಯತಾ ನಿವಾರಣೆಗೆ ಕ್ರಮಗಳು :

ಅಸ್ಪೃಶ್ಯತೆಯ ಕಳಂಕವನ್ನು ತೊಡೆದು ಹಾಕಲು ಜ್ಯೋತಿಭಾ ಫುಲೆ, ಸ್ವಾಮಿ ವಿವೇಕಾನಂದ, ಡಾ.ಬಿ.ಆರ್. ಅಂಬೇಡ್ಕರ್ ಮೊದಲಾದವರು ತೀವ್ರ ಪ್ರಯತ್ನಪಟ್ಟರು. ಇಷ್ಟಾದರೂ ಇದನ್ನು ಪೂರ್ಣ ಪ್ರಮಾಣದಲ್ಲಿ ಹೋಗಲಾಡಿಸಲು ಇನ್ನೂ ಸಾಧ್ಯವಾಗಿಲ್ಲ. ಇದನ್ನು ತಡೆಯಲು ಕಾನೂನುಗಳನ್ನು ಜಾರಿ ಮಾಡಲಾಗಿದೆ.

ಸಂವಿಧಾನದ 17ನೆಯ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇದಿಸಿದೆ. ಭಾರತ ಸರ್ಕಾರ 'ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ'ಯನ್ನು 1955ರಲ್ಲಿ ಜಾರಿಗೊಳಿಸಿದೆ. ಇದರಲ್ಲಿ ಕಂಡುಬಂದ ಕೆಲವು ಲೋಪ ದೋಷಗಳನ್ನು ತಿದ್ದುಪಡಿಮಾಡಿ 'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ' ಎಂದು 1976ರಲ್ಲಿ ಮಾರ್ಪಾಡುಗೊಳಿಸಲಾಯಿತು. ಈ ಕಾಯ್ದೆಯ ಪ್ರಕಾರ ಅಸ್ಪೃಶ್ಯತೆಯು ಆಚರಣೆಯು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಅಲ್ಲದೆ ಸಂವಿಧಾನಾತ್ಮಕವಾಗಿ ಸಾರ್ವತ್ರಿಕ ಮತದಾನದ ಹಾಗೂ ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ನಾಗರಿಕರಿಗೂ ನೀಡಲಾಗಿದೆ. ವಿಶೇಷವಾಗಿ ಪರಿಶಿಷ್ಟರನ್ನೊಳಗೊಂಡಂತೆ ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ, ರಾಜಕೀಯ, ಆರ್ಥಿಕ ಮತ್ತು ಉದ್ಯೋಗವಕಾಶಗಳಲ್ಲಿ ಮೀಸಲಾತಿಗಳನ್ನು ಕಲ್ಪಿಸಲಾಗಿದೆ. 1989ರ ಶಾಸನವು ಅಸ್ಪೃಶ್ಯತೆಯ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿಗಳನ್ನು ರಾಜ್ಯ ಸರ್ಕಾರಗಳಿಗೆ ವಹಿಸಿದೆ. ಹೀಗೆ, ಸ್ವತಂತ್ರ ಭಾರತವು ಅಸ್ಪೃಶ್ಯತೆಯ ನಿವಾರಣೆಗಾಗಿ ವಿಶೇಷ ಆಸಕ್ತಿ ವಹಿಸಿ ಎಲ್ಲಾ ನಾಗರಿಕರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಲು ಶ್ರಮಿಸುತ್ತಾ ಬಂದಿದೆ.

ನಿಮಗಿದು ತಿಳಿದಿರಲಿ :

* *ಸಂವಿಧಾನದ 15, 16, 17, 38 ಮತ್ತು 46ನೇ ವಿಧಿಗಳು ಭಾರತೀಯ ಪ್ರಜೆಗಳ ನಡುವೆ ಯಾವುದೇ ಬಗೆಯ ತಾರತಮ್ಯ ಮಾಡಬಾರದು ಎಂದು ತಿಳಿಸುತ್ತವೆ.*
* *16(4) 320(4) ನೇ ವಿಧಿಗಳು ಉದ್ಯೋಗ ವಲಯದಲ್ಲಿ ಪರಿಶಿಷ್ಟ ಜಾತಿ-ಪಂಗಡಗಳಿಗೆ ಮೀಸಲಾತಿ ಘೋಷಿಸಿವೆ.*
* *330, 332, 334 ನೇ ವಿಧಿಗಳು ರಾಜಕೀಯ ಕ್ಷೇತ್ರದಲ್ಲಿ ಪರಿಶಿಷ್ಟರಿಗೆ ಮೀಸಲಾತಿ ಘೋಷಿಸಿವೆ.*
* *29 ನೇ ವಿಧಿ ಶೈಕ್ಷಣಿಕ ಸೌಲಭ್ಯ ಘೋಷಿಸಿದೆ.*
* *25 ನೇ ವಿಧಿ ಜನರೆಲ್ಲರಿಗೂ ಸಾರ್ವಜನಿಕ ಧಾರ್ಮಿಕ ಕೇಂದ್ರಗಳಿಗೆ ಪ್ರವೇಶಿಸುವ ಮುಕ್ತ ಅವಕಾಶ ಘೋಷಿಸಿದೆ.*

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ಮಾನವಕುಲ ತಾನೊಂದೇ ವಲಂ ಎಂದು ಹೇಳಿದವರು ___________
2. ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದವರು ________
3. ಅಸ್ಪೃಶ್ಯತಾ ಆಚರಣೆ ಶಿಕ್ಷಾರ್ಹ ಅಪರಾಧ ಎಂದು ಸಂವಿಧಾನದ ___________ ವಿಧಿಯು ಘೋಷಿಸಿದೆ.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :

1. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?
2. ಸಾಮಾಜಿಕ ಸ್ತರ ವಿನ್ಯಾಸವು ಹೇಗೆ ಉಂಟಾಗಿದೆ?
3. ಪೂರ್ವಾಗ್ರಹ ಎಂದರೇನು?
4. ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು? ವಿವರಿಸಿ.
5. ಅಸ್ಪೃಶ್ಯತಾ ಆಚರಣೆಯಂತಹ ಸಾಮಾಜಿಕ ಪಿಡುಗನ್ನು ನಿವಾರಿಸಲು ನಿಮ್ಮ ಸಲಹೆಗಳೇನು?

III. ಚಟುವಟಿಕೆ :

1. ಅಸ್ಪೃಶ್ಯತಾ ನಿವಾರಣೆಗಾಗಿ ಪ್ರಯತ್ನಿಸಿದ ಸಮಾಜ ಸುಧಾರಕರ ಜೀವನ ಚರಿತ್ರೆ ಓದಿಸಿ.

IV. ಯೋಜನೆ :

1. ಅಸ್ಪೃಶ್ಯತೆಯ ನಿವಾರಣೆಗಾಗಿ ನಿಮ್ಮ ಯೋಜನೆಗಳನ್ನು ಬರೆದು ಶಿಕ್ಷಕರೊಂದಿಗೆ ಚರ್ಚಿಸಿ.

ಅಧ್ಯಾಯ – 2

ದುಡಿಮೆ ಮತ್ತು ಆರ್ಥಿಕ ಜೀವನ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.


- *ಶ್ರಮ ವಿಭಜನೆ ಮತ್ತು ವರ್ಗಗಳು.*
- *ದುಡಿಮೆಯಲ್ಲಿನ ತಾರತಮ್ಯತೆಗಳು.*
- *ನಿರುದ್ಯೋಗ– ಪ್ರಕಾರಗಳು, ಕಾರಣಗಳು, ಪರಿಣಾಮಗಳು ಮತ್ತು ಪರಿಹಾರೋಪಾಯಗಳು.*
- *ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರು.*

ದುಡಿಮೆ ಎಂಬುದು ಉದ್ದೇಶವೊಂದರ ಸಾಧನೆಗಾಗಿ ನಡೆಸಲಾಗುವ ಕಾರ್ಯ. ವ್ಯಕ್ತಿಯೋರ್ವನ ಶಕ್ತಿಯ ವ್ಯಯದಿಂದ ಅಥವಾ ಪರಿಶ್ರಮದಿಂದ ಆತನಿಗೆ ಆರ್ಥಿಕ ಅಥವಾ ವಸ್ತು ರೂಪದ ಪ್ರತಿಫಲ ಸಿಗುವುದಿದ್ದರೆ ಅದನ್ನು 'ದುಡಿಮೆ' ಎನ್ನಬಹುದು.

ದುಡಿಮೆಯು ನಮ್ಮ ಜೀವನದ ಮುಖ್ಯ ಅಂಗವಾಗಿದೆ. ಜೀವನ ನಿಭಾಯಿಸಲು ದುಡಿಮೆ ಅಗತ್ಯ. ಇದರಿಂದ ಜೀವನದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಹುದು. ಆರ್ಥಿಕ ಜೀವನಕ್ಕೆ ಸಂಬಂಧಿಸಿದಂತೆ ದುಡಿಮೆಯ ರೂಪ, ಸ್ವರೂಪಗಳು ಸಮಾಜದಿಂದ ಸಮಾಜಕ್ಕೆ ಬೇರೆ ಬೇರೆಯಾಗಿರುತ್ತವೆ. ಇವು ಕಾಲದಿಂದ ಕಾಲಕ್ಕೆ ಬದಲಾಗುತ್ತಿರುತ್ತವೆ.

ಶ್ರಮವಿಭಜನೆ ಮತ್ತು ವರ್ಗಗಳು

ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು, ವಿಶೇಷ ಪರಿಣತಿ, ಕೌಶಲ್ಯ ಹಾಗೂ ಲಿಂಗ ಭೇದಗಳ ಆಧಾರದ ಮೇಲೆ ಹಂಚಿಕೊಂಡು ಮಾಡುವುದನ್ನು 'ಶ್ರಮ ವಿಭಜನೆ' ಎನ್ನಲಾಗಿದೆ.



ಉದಾಹರಣೆಗೆ – ನಾವು ತೊಡುವ ಬಟ್ಟೆಗಳನ್ನು ಸಿದ್ಧಪಡಿಸಲು ಕೃಷಿಕರು, ನೇಕಾರರು, ಬಣ್ಣಹಾಕುವವರು, ವರ್ತಕರು, ದರ್ಜಿಗಳು ಎಲ್ಲರೂ ಬೇರೆ ಬೇರೆ ನೆಲೆಗಳಲ್ಲಿ ದುಡಿಯುವರು.

ಶ್ರಮ ವಿಭಜನೆಯು 'ವಿಶೇಷ ಪರಿಣತಿಗೆ' ಕಾರಣವಾಗುವುದು. 'ವಿಶೇಷ ಪರಿಣತಿ' ಎಂದರೆ, ಯಾವುದಾದರೂ ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣತಿ, ತರಬೇತಿ ಅಥವಾ ಕೌಶಲ್ಯ ಪಡೆಯುವುದು ಎಂದರ್ಥ. ಶ್ರಮವಿಭಜನೆಯು ಇಂದು ಜನರು ವಿವಿಧ ಕ್ಷೇತ್ರಗಳಲ್ಲಿ ಪರಿಶ್ರಮಿಸಿ ಆರ್ಥಿಕ ಲಾಭ ಪಡೆಯಲು ಸಹಾಯಕವಾಗಿದೆ. ಆರ್ಥಿಕ ಹಿತಾಸಕ್ತಿ ಮತ್ತು ಶ್ರಮವಿಭಜನೆಯಿಂದ ವರ್ಗವ್ಯವಸ್ಥೆಯು ಸೃಷ್ಟಿಗೊಂಡಿತು. ಆಧುನಿಕ ಕಾಲದಲ್ಲಿ ವರ್ಗವ್ಯವಸ್ಥೆಯು ಕೈಗಾರೀಕರಣದಿಂದ ಉಂಟಾಗಿದೆ.

ಇಂದಿನ ಔದ್ಯೋಗಿಕ ಸಮಾಜದಲ್ಲಿ ವಿಶೇಷ ಪರಿಣತಿಗೆ ಆದ್ಯತೆಯಿದೆ. ಇದು ವಿಶಾಲ ಸ್ವರೂಪವನ್ನು ತಳೆದಿದ್ದುದರಿಂದ ಕೈಗಾರಿಕೋದ್ಯಮಗಳು ಹೆಚ್ಚು ಹೆಚ್ಚು ಬೆಳೆದು ಬಂದವು. ವ್ಯಾಪಾರ ವಾಣಿಜ್ಯೋದ್ಯಮಗಳು ವಿಸ್ತಾರಗೊಂಡವು. ಇದರ ಪರಿಣಾಮವಾಗಿ ಕೆಲವು ವ್ಯಕ್ತಿಗಳು ಬಂಡವಾಳವನ್ನು ತೊಡಗಿಸಿ ಹೆಚ್ಚು ಲಾಭ ಪಡೆದು ಶ್ರೀಮಂತರಾದರು.

ಕೂಲಿ ಸಹಿತ ಮತ್ತು ಕೂಲಿ ರಹಿತ ದುಡಿಮೆ

ಕೂಲಿ, ಸಂಬಳ ಅಥವಾ ಇನ್ನಾವುದೇ ಭೌತಿಕ ರೂಪದ ಪ್ರತಿಫಲ ನೀಡುವ ದುಡಿಮೆಯ ಚಟುವಟಿಕೆ ಕೂಲಿಸಹಿತ ದುಡಿಮೆ ಎನ್ನಿಸಿಕೊಳ್ಳುವುದು. ಆರ್ಥಿಕ ಪ್ರತಿಫಲಕ್ಕಾಗಿ ಹೊಲದಲ್ಲಿ ಉಳುವುದು, ಕಾರ್ಖಾನೆಯಲ್ಲಿ ದುಡಿಯುವುದು, ಶಾಲೆಯಲ್ಲಿ ಉಪನ್ಯಾಸ ಮಾಡುವುದು, ಕಟ್ಟಡ ಕಟ್ಟುವುದು, ವಾಹನಗಳ ರಿಪೇರಿ ಮಾಡುವುದು ಮುಂತಾದ ವಿವಿಧ ಬಗೆಯ ದುಡಿಮೆಯ ಚಟುವಟಿಕೆಗಳಲ್ಲಿ ತೊಡಗುವುದು ಇವೆಲ್ಲವೂ ಇಂದಿನ ಸಂಕೀರ್ಣ ಸಮಾಜದಲ್ಲಿ ಬದುಕಿಗೆ ಅನಿವಾರ್ಯವಾಗಿವೆ.

ಮಾನವನ ಎಲ್ಲ ಕ್ರಿಯೆಗಳು ಕೂಲಿಸಹಿತ ದುಡಿಮೆ ಎನಿಸಿಕೊಳ್ಳುವುದಿಲ್ಲ. ದುಡಿಮೆಯು ಕೆಲವೊಮ್ಮೆ ಆರ್ಥಿಕ ಲಾಭ ಅಥವಾ ಪ್ರತಿಫಲವಿಲ್ಲದ ಕ್ರಿಯೆಯಾಗಿರುತ್ತದೆ. ಮನಃಸಂತೋಷದ ದೃಷ್ಟಿಯಿಂದ ಮಾನವನು ತೊಡಗುವ ಕ್ರಿಯೆಗಳೇ ಕೂಲಿ ರಹಿತ ದುಡಿಮೆ ಎನಿಸಿದೆ. ಉದಾಹರಣೆಗೆ – ಕಲಾಕಾರನೊಬ್ಬನು ಆತ್ಮ ಸಂತೋಷಕ್ಕಾಗಿ ಚಿತ್ರವೊಂದನ್ನು ಬಿಡಿಸುವ ಕಾರ್ಯದಲ್ಲಿ ತೊಡಗಿರುವುದು ಇತ್ಯಾದಿ. ಆದರೆ ಜಾತಿ ಮತ್ತು ವರ್ಣಭೇದದ ಸಮಾಜದಲ್ಲಿ ಕೆಳಜಾತಿ ಮತ್ತು ಕಪ್ಪು ಜನರಿಂದ ಒತ್ತಾಯ ಪೂರ್ವಕವಾಗಿ ಕೂಲಿ ರಹಿತ ದುಡಿಮೆ ಮಾಡಿಸಿಕೊಳ್ಳಲಾಗುತ್ತಿತ್ತು.

ದುಡಿಮೆಯಲ್ಲಿ ಭೇದ–ಭಾವ

ದುಡಿಮೆ ಮತ್ತು ಕೂಲಿ ಹಂಚಿಕೆಯಲ್ಲಿ ಕಾಣಬರುವ ಈ ಅಸಮಾನತೆಯನ್ನು ದುಡಿಮೆಯ ತಾರತಮ್ಯ ಅಥವಾ ದುಡಿಮೆಯಲ್ಲಿ ಭೇದ–ಭಾವ ಎನ್ನಬಹುದು. ಸ್ತ್ರೀ–ಪುರುಷರೀರ್ವರೂ ದುಡಿಮೆಯಲ್ಲಿ ತೊಡಗಿರಬಹುದಾದರೂ ಅವರ ಉದ್ಯೋಗಗಳು ಒಂದೇ ಸಮನಾಗಿಲ್ಲ. ಭಾರತವನ್ನೊಳಗೊಂಡಂತೆ ಜಗತ್ತಿನ ದೇಶಗಳಲ್ಲಿ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗಗಳನ್ನು ನೀಡಲಾಗುತ್ತಿದೆ. ಹಾಗೆಯೇ ಹೆಚ್ಚಿನ ಹೊಣೆಗಾರಿಕೆ ಮತ್ತು ಸಂಬಳವನ್ನು ನೀಡಲಾಗುತ್ತಿದೆ. ಆದರೆ ಸ್ತ್ರೀಯರಿಗೆ ಕಡಿಮೆ ಮಟ್ಟದ ಉದ್ಯೋಗ, ಹೊಣೆಗಾರಿಕೆ ಮತ್ತು ಸಂಬಳವನ್ನು ನೀಡಲಾಗುತ್ತಿದೆ. ಸರ್ಕಾರಿ ವಲಯದಲ್ಲಿ ಭೇದಭಾವವು ಅತಿ ವಿರಳ. ಅಸಂಘಟಿತ ಕ್ಷೇತ್ರಗಳಲ್ಲಿ ಇವು ಕಾಣಬರುತ್ತವೆ.

ಸ್ತ್ರೀ–ಪುರುಷರ ದುಡಿಮೆಗೆ ಸಂಬಂಧಿಸಿದಂತೆ ಇನ್ನೊಂದು ಬಗೆಯ ತಾರತಮ್ಯವಿದೆ. ಉದ್ಯೋಗಾವಕಾಶಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ಸ್ತ್ರೀಯರು ಬಹು ದೊಡ್ಡ ಸಂಖ್ಯೆಯಲ್ಲಿ ಉದ್ಯೋಗಗಳಿಗೆ ಸೇರಿಕೊಳ್ಳುತ್ತಿದ್ದಾರೆ. ಆದರೆ ಅವರಿಗೆ ನೀಡಲಾಗುವ ಸಂಬಳದಲ್ಲಿ ಮಾತ್ರ ತಾರತಮ್ಯ ಮಾಡಲಾಗುತ್ತಿದೆ. ಪುರುಷರಿಗೆ ಸರಿಸಮಾನವಾಗಿ ಅವರು ದುಡಿಯುವ ಸಂದರ್ಭದಲ್ಲೂ ಅವರಿಗೆ ಕಡಿಮೆ ವೇತನ ನೀಡುವುದು ಒಂದು ಬಗೆಯ ಶೋಷಣೆಯೇ ಸರಿ. ಇದನ್ನು ತೊಡೆದು ಹಾಕಲು ಕೇಂದ್ರ ಸರ್ಕಾರವು 'ಸಮಾನ ವೇತನ ಕಾಯ್ದೆ'ಯನ್ನು (1976) ಜಾರಿಗೆ ತಂದಿದೆ. ಆದ್ದರಿಂದ ನಗರದ ಸಂಘಟಿತ ವಲಯದಲ್ಲಿ ವೇತನ ಸಂಬಂಧಿಸಿದ ಇಂತಹ ತಾರತಮ್ಯಗಳು ಕಡಿಮೆಯಾಗಿವೆ.

ಕೃಷಿಕ ಸಮಾಜವೂ ಕೂಡ ಲಿಂಗ, ವಯಸ್ಸು, ಸಾಮರ್ಥ್ಯಗಳ ಆಧಾರದ ಮೇಲೆ ಕೆಲಸಕಾರ್ಯಗಳನ್ನು ಅಸಮಾನ ರೀತಿಯಲ್ಲಿ ಹಂಚಿಕೆ ಮಾಡುತ್ತದೆ ಹಾಗೂ ಕೂಲಿ ನೀಡುವುದರಲ್ಲಿ ಇಲ್ಲಿಯೂ ಭೇದಭಾವವಿದೆ. ಶಿಕ್ಷಣದ ಪ್ರಸಾರ ಹೆಚ್ಚುತ್ತಿದ್ದಂತೆ ಇಂತಹ ಭೇದಭಾವವು ಕಡಿಮೆಯಾಗುತ್ತಾ ಬರುತ್ತಿದೆ.

ನಿರುದ್ಯೋಗ

ಭಾರತದ ಆರ್ಥಿಕ, ಸಾಮಾಜಿಕ ವ್ಯವಸ್ಥೆಯನ್ನು ಕಾಡುತ್ತಿರುವ ಸಮಸ್ಯೆಗಳಲ್ಲಿ ನಿರುದ್ಯೋಗ ಸಮಸ್ಯೆಯೂ ಒಂದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಈ ಸಮಸ್ಯೆಯು ಗಂಭೀರವಾಗಿದೆ. ನಿರುದ್ಯೋಗ ಎಂದರೆ, ದುಡಿಯುವ ವಯಸ್ಸು, ಸಾಮರ್ಥ್ಯ, ಆಸಕ್ತಿ, ಅರ್ಹತೆ ಇದ್ದರೂ ಉದ್ಯೋಗ ಸಿಗದ ಪರಿಸ್ಥಿತಿ ಎಂದರ್ಥ. ಕೆಲಸ ಮಾಡಲು ಇಷ್ಟವಿದ್ದು, ದುಡಿಯುವ ವಯಸ್ಸಿನಲ್ಲಿರುವ ಪುರುಷ ಹಾಗೂ ಸ್ತ್ರೀಯರು ಉದ್ಯೋಗ ಪಡೆಯುವಲ್ಲಿ ವಂಚಿತರಾದರೆ ಅವರನ್ನು ನಿರುದ್ಯೋಗಿಗಳು ಎನ್ನುತ್ತಾರೆ.

ನಿರುದ್ಯೋಗದಲ್ಲಿ ಹಲವಾರು ಪ್ರಕಾರಗಳನ್ನು ಕಾಣಬಹುದು. ಅವುಗಳೆಂದರೆ, ಅರೆನಿರುದ್ಯೋಗ, ಮರೆಮಾಚಿದ ನಿರುದ್ಯೋಗ, ತಾಂತ್ರಿಕ ನಿರುದ್ಯೋಗ, ಚಕ್ರೀಯ ನಿರುದ್ಯೋಗ, ಸ್ವಇಚ್ಛೆಯ ನಿರುದ್ಯೋಗ, ಮುಂತಾದವುಗಳು.

ನಿರುದ್ಯೋಗಕ್ಕೆ ಹಲವಾರು ಕಾರಣಗಳು ಇವೆ. ಅವುಗಳಲ್ಲಿ ಅತಿಯಾದ ಜನಸಂಖ್ಯೆ, ಯಾಂತ್ರೀಕರಣ, ಅತಿಯಾದ ಶ್ರಮವಿಭಜನೆ, ಸಾಮಾಜಿಕ ಅಸಮಾನತೆ, ಬಂಡವಾಳದ ಕೊರತೆ, ಅನಕ್ಷರತೆ ಮೊದಲಾದವುಗಳನ್ನು ಗುರುತಿಸಬಹುದಾಗಿದೆ.

ನಿರುದ್ಯೋಗವು ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ನಿರುದ್ಯೋಗ ಸಮಸ್ಯೆಯು ಬಡತನ, ಅನಾರೋಗ್ಯ, ಭ್ರಷ್ಟಾಚಾರ, ಕೌಟುಂಬಿಕ ವಿಘಟನೆ, ಮೋಸ, ವಂಚನೆ, ಕಳ್ಳತನ, ವ್ಯಭಿಚಾರ ಮುಂತಾದ ಪರಿಣಾಮಗಳಿಗೆ ಕಾರಣವಾಗುವುದು. ಇದು ಅತ್ಯಂತ ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ.

ಗಮನಿಸಿ : *'ಉದ್ಯೋಗಂ ಪುರುಷ ಲಕ್ಷಣಂ' ಎಂಬ ಉಕ್ತಿಯನ್ನು 'ಉದ್ಯೋಗಂ ಮಾನವ ಲಕ್ಷಣಂ' ಎಂದು ಈಗ ತಿದ್ದಿಕೊಳ್ಳಬೇಕಾಗುವುದು. ಈಗಿನ ಬದಲಾದ ಪರಿಸ್ಥಿತಿಯಲ್ಲಿ ಶಿಕ್ಷಣದ ವ್ಯಾಪಕತೆಯಿಂದ ಸ್ತ್ರೀಯರಿಗೂ ಸಮಾನ ಉದ್ಯೋಗಾವಕಾಶಗಳು, ವೇತನ ಹಾಗೂ ಇತರ ಸೌಲಭ್ಯಗಳು ದೊರೆಯುತ್ತಿವೆ. ಅಲ್ಲದೆ ಇಂದು ಉದ್ಯೋಗ ಕ್ಷೇತ್ರದಲ್ಲಿ ಸ್ತ್ರೀ ಪುರುಷರ ನಡುವೆ ಪೈಪೋಟಿ ನಡೆಯುತ್ತಿರುವುದನ್ನು ಕಾಣಬಹುದು. ಇಂದು ಸರ್ಕಾರವು ಕೂಡ ಸ್ತ್ರೀಯರನ್ನು ಸಬಲರನ್ನಾಗಿ ಮಾಡಲು ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ.*

ನಿರುದ್ಯೋಗ ಸಮಸ್ಯೆಗೆ ಪರಿಹಾರೋಪಾಯಗಳು

ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಹಲವಾರು ಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳೆಂದರೆ, ಜನಸಂಖ್ಯಾ ನಿಯಂತ್ರಣ ಕ್ರಮಗಳು, ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ, ಕೃಷಿ ಕ್ಷೇತ್ರದ ಅಭಿವೃದ್ಧಿ, ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ, ಶೈಕ್ಷಣಿಕ ಸುಧಾರಣಾ ಯೋಜನೆಗಳು, ಪಂಚವಾರ್ಷಿಕ ಯೋಜನೆಗಳು, ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ, ಗ್ರಾಮೀಣಾಭಿವೃದ್ಧಿ ಯೋಜನೆಗಳು, ಉದ್ಯೋಗ ಖಾತರಿ ಯೋಜನೆ, ಇತ್ಯಾದಿ. ಇತ್ತೀಚಿನ ವರ್ಷಗಳಲ್ಲಿ ಭಾರತದ **'ಮಾಹಿತಿ ಮತ್ತು ತಂತ್ರಜ್ಞಾನ'** ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿ ಕಂಡು ಬಂದಿದ್ದು, ಉದ್ಯೋಗ ನೀಡಿಕೆಯಲ್ಲಿ ಇಂತಹ ಸೇವಾ ವಲಯದ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

ಚರ್ಚಿಸಿ:

ನಿರುದ್ಯೋಗ ಸಮಸ್ಯೆ ಅಲ್ಲ, ಉದ್ಯೋಗ ಮಾಡಲು ಅವಕಾಶವಿದ್ದರೂ ಉದ್ಯೋಗ ಮಾಡದೆ ನಿರುದ್ಯೋಗ ಸೃಷ್ಟಿಸುತ್ತೇವೆ.

ಗಮನಿಸಿ : *ಇಂದು ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಸಮಸ್ಯೆಗಿಂತ ಉದ್ಯೋಗಿಗಳ ಕೊರತೆ ಕಂಡು ಬರುತ್ತಿದೆ. ಕಾರಣ ಗ್ರಾಮೀಣ ಯುವಕ-ಯುವತಿಯರು ಉದ್ಯೋಗಗಳನ್ನರಸಿ ನಗರಗಳತ್ತ ಧಾವಿಸುತ್ತಿರುವುದರಿಂದ ಗ್ರಾಮೀಣ ಕೃಷಿ ಕ್ಷೇತ್ರದಲ್ಲಿ ದುಡಿಯಲು ಕೆಲಸಗಾರರಿಲ್ಲದೆ ಕೃಷಿ ಚಟುವಟಿಕೆಗಳು ಕಡಿಮೆಯಾಗುತ್ತಿರುವುದನ್ನು ಕಾಣಬಹುದು. ಅದೇ ರೀತಿ ನಗರ ಪ್ರದೇಶಗಳಲ್ಲಿಯೂ ನಿರ್ದಿಷ್ಟ ವಿಶೇಷ ಪರಿಣತಿಯ ಕಾರ್ಮಿಕರ ಕೊರತೆಯನ್ನು ಕಾಣಬಹುದು.*


ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರು

ಸಂಘಟಿತ ಕೆಲಸಗಾರರು : ಕಾನೂನು, ಕಾಯ್ದೆಗಳಿಗೆ ಬದ್ಧವಾದಂತಹ ನಿಗದಿತ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುವವರನ್ನು ಸಂಘಟಿತ ಕೆಲಸಗಾರರು ಎಂದು ಕರೆಯುತ್ತಾರೆ. ಸಂಘಟಿತ ವಲಯದಲ್ಲಿ ಪ್ರತಿಯೊಬ್ಬ ಕೆಲಸಗಾರನ ಕಾರ್ಯದ ಬಗ್ಗೆ ನಿಶ್ಚಿತ ನಿಯಮಗಳಿರುತ್ತವೆ.

ಸಂಘಟಿತ ಕಾರ್ಯಕ್ಷೇತ್ರದಲ್ಲಿ ಅಧಿಕಾರ ಏಣಿ ಶ್ರೇಣಿ ವ್ಯವಸ್ಥೆಯಿರುತ್ತದೆ. ಸಂಘಟಿತ ಕೆಲಸಗಾರರಿಗೆ ವಿಶೇಷ ಪರಿಣತಿ, ತರಬೇತಿ, ಪ್ರತಿಭೆ, ಅನುಭವ ಮತ್ತು ಶೈಕ್ಷಣಿಕ ಅರ್ಹತೆಗಳಿಗೆ ಅವಕಾಶಗಳಿರುತ್ತವೆ. ಇವರ ಕೆಲಸದ ಎಲ್ಲ ವ್ಯವಹಾರಗಳು ಬರಹ ರೂಪದಲ್ಲಿರುತ್ತವೆ. ಇವರಿಗೆ ನಿಗದಿತ ವೇತನ, ಭತ್ಯೆ, ವಿರಾಮ ವೇತನ, ನಿವೃತ್ತಿವೇತನ ಸೌಲಭ್ಯಗಳನ್ನು ನೀಡಲಾಗುತ್ತದೆ. ಅಲ್ಲದೆ ವೈದ್ಯಕೀಯ ಸೌಲಭ್ಯವನ್ನು ಕೂಡ ಒದಗಿಸಲಾಗುತ್ತದೆ. ಇವರು ದಿನವೊಂದರಲ್ಲಿ ನಿಗದಿತ ಸಮಯದಲ್ಲಿ ಮಾತ್ರ ಕಾರ್ಯ ನಿರ್ವಹಿಸುವವರಾಗಿರುತ್ತಾರೆ.

ಖಾಸಗಿ ಕಂಪನಿಗಳು, ಕಾರ್ಖಾನೆ, ಕೈಗಾರಿಕೆಗಳು, ಸರ್ಕಾರಿ ಇಲಾಖೆಗಳು, ಶಾಲಾ-ಕಾಲೇಜುಗಳು, ವಾಣಿಜ್ಯ ಬ್ಯಾಂಕುಗಳು, ವಿಮಾ ಕಂಪನಿಗಳು, ಸೈನ್ಯ, ಇಂತಹ ಕೆಲವು ಕ್ಷೇತ್ರಗಳಲ್ಲಿನ ಕೆಲಸಗಾರರನ್ನು ಸಂಘಟಿತ ಕೆಲಸಗಾರರೆಂದು ಗುರುತಿಸಬಹುದು.









ಅಸಂಘಟಿತ ಕೆಲಸಗಾರರು : ಯಾವುದೇ ನಿರ್ದಿಷ್ಟ ಕಾಯ್ದೆ–ಕಾನೂನು ಅಥವಾ ಸಂಘಟನೆಯ ನಿಯಂತ್ರಣಕ್ಕೆ ಒಳಪಡದೆ ಜೀವನ ನಿರ್ವಹಣೆಗಾಗಿ ತಮ್ಮಪಾಡಿಗೆ ವಿವಿಧ ಕಸುಬುಗಳಲ್ಲಿ ತೊಡಗಿಸಿಕೊಂಡು ದಿನಗೂಲಿ ಅಥವಾ ಇನ್ನಿತರ ರೂಪದ ಆರ್ಥಿಕ ಪ್ರತಿಫಲ ಪಡೆಯುವ ಶ್ರಮಿಕರನ್ನು ಅಸಂಘಟಿತ ಕೆಲಸಗಾರರು ಎಂದು ಕರೆಯಬಹುದು. ಅಸಂಘಟಿತ ಕೆಲಸಗಾರರ ಕಾರ್ಯಕ್ಷೇತ್ರವು ವಿಶಾಲವಾಗಿದೆ. ಈ ಕ್ಷೇತ್ರವು ಸರ್ಕಾರದ ನಿಯಂತ್ರಣಕ್ಕೊಳಪಡುವುದಿಲ್ಲ.

ಮನೆಕೆಲಸಗಾರರು, ಗೃಹ ನಿರ್ಮಾಣದ ಕೂಲಿಕಾರರು, ಕೃಷಿ ಕಾರ್ಮಿಕರು, ಅಲ್ಲದೆ ತಾವೇ ಸ್ವತಃ ಬೀದಿಯಲ್ಲಿ ತರಕಾರಿ ಮಾರಾಟ, ವಸ್ತುಗಳ ಮಾರಾಟ, ವಾಹನಗಳ ರಿಪೇರಿ ಮಾಡುವವರು, ತಳ್ಳುವ ಗಾಡಿಗಳ ಮೇಲೆ, ತಲೆಯ ಮೇಲೆ ತರಕಾರಿ ಮತ್ತು ಇತರ ವಸ್ತುಗಳನ್ನು ಹೊತ್ತು ಮಾರಾಟ ಮಾಡುವವರ ಕ್ಷೇತ್ರಗಳಲ್ಲಿ ಅಸಂಘಟಿತ ಕೆಲಸಗಾರರನ್ನು ಗುರುತಿಸಬಹುದು.









ಅಸಂಘಟಿತ ಕೆಲಸಗಾರರ ಸಮಸ್ಯೆಗಳು : ಅಸಂಘಟಿತ ಕೆಲಸಗಾರರು ಮಾಡುವ ದುಡಿಮೆಗೆ ಯಾವುದೇ ನಿಗದಿತ ನಿಯಮ, ಕಾಯ್ದೆಗಳಿರುವುದಿಲ್ಲ. ಇವರ ದುಡಿಮೆಗೆ ಕಡಿಮೆ ಕೂಲಿ ನೀಡಲಾಗುತ್ತದೆಯಲ್ಲದೆ ಇವರಿಗೆ ಯಾವುದೇ ಉಚಿತ ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ. ಇವರ ಕೆಲಸಕ್ಕೆ ಭದ್ರತೆ ಮತ್ತು ನಿಗದಿತ ವೇತನ, ವಿರಾಮ ವೇತನ, ನಿವೃತ್ತಿ ವೇತನ ಹಾಗೂ ಭತ್ಯೆಗಳ ಸೌಲಭ್ಯಗಳಿರುವುದಿಲ್ಲ. ಅಂತೆಯೇ ಇವರು ಉದ್ಯೋಗಪತಿಗಳಿಂದ ಹಲವಾರು ರೀತಿಗಳಲ್ಲಿ ಶೋಷಣೆಗೆ ಒಳಗಾಗುವ ಸಾಧ್ಯತೆಗಳಿರುತ್ತವೆ.

ಅಭ್ಯಾಸಗಳು

I ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ಶ್ರಮ ವಿಭಜನೆಯು ________ ಗೆ ಕಾರಣವಾಗುವುದು.
2. ವಿಶೇಷ ತರಬೇತಿ ಹೊಂದಿರದ ಕಾರ್ಮಿಕರನ್ನು ________ ಕೆಲಸಗಾರರು ಎಂದು ಕರೆಯುತ್ತಾರೆ.
3. ವಿಶೇಷ ತರಬೇತಿ, ಪರಿಣತಿ ಹೊಂದಿದ ಕಾರ್ಮಿಕರನ್ನು ________ ಕೆಲಸಗಾರರು ಎಂದು ಕರೆಯುತ್ತಾರೆ.

II ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಶ್ರಮ ವಿಭಜನೆ ಎಂದರೇನು?
2. ಕೂಲಿ ಸಹಿತ ದುಡಿಮೆ ಎಂದರೇನು?
3. ನಿರುದ್ಯೋಗ ಎಂದರೇನು?
4. ನಿರುದ್ಯೋಗಕ್ಕೆ ಕಾರಣಗಳಾವುವು?
5. ನಿರುದ್ಯೋಗ ಪರಿಣಾಮಗಳಾವುವು?

III ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :

1. ನಿರುದ್ಯೋಗದ ಪ್ರಕಾರಗಳಾವುವು? ತಿಳಿಸಿ.
2. ದುಡಿಮೆಯಲ್ಲಿನ ತಾರತಮ್ಯತೆಯ ಸ್ವರೂಪವನ್ನು ವಿವರಿಸಿ.
3. ನಿರುದ್ಯೋಗ ಸಮಸ್ಯೆಗೆ ಪರಿಹಾರ ಕ್ರಮಗಳಾವುವು? ವಿವರಿಸಿ.
4. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು?

IV ಚಟುವಟಿಕೆ :

1. ನೀವು ವಾಸವಿರುವ ಪರಿಸರದಲ್ಲಿನ ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ಹೆಸರುಗಳನ್ನು ಪಟ್ಟಿಮಾಡಿ.

V ಯೋಜನೆ :

1. ನಿಮ್ಮ ಪ್ರದೇಶದಲ್ಲಿರುವ ಅಸಂಘಟಿತ ಕಾರ್ಮಿಕರನ್ನು ಸಂದರ್ಶನ ಮಾಡಿ, ಅವರ ಸಮಸ್ಯೆಗಳ ಬಗ್ಗೆ ವರದಿ ಸಿದ್ದಪಡಿಸಿ.

ಅಧ್ಯಾಯ – 3

ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಜನಮಂದೆ – ಅರ್ಥ, ಸ್ವರೂಪ, ಪ್ರಭಾವ.*
- *ದೊಂಬಿ – ಅರ್ಥ, ಸ್ವರೂಪ, ಪ್ರಭಾವ.*
- *ಸಮೂಹ ವರ್ತನೆಯ ವಿವಿಧ ರೂಪಗಳು.*
- *ಮಹಿಳೆಯರ ಸ್ವ–ಸಹಾಯ ಸಮೂಹಗಳು.*

ಸಂಘಜೀವಿಯಾದ ಮಾನವನು ಯಾವಾಗಲೂ ಸಮೂಹಗಳಲ್ಲಿ, ಸಮುದಾಯಗಳಲ್ಲಿ, ಸಮಾಜಗಳಲ್ಲಿ ವಾಸಿಸುತ್ತಾನೆ. ಸಮೂಹಗಳ ಸದಸ್ಯನಾಗಿರುವ ಆತ ಜನ ಸಮೂಹದ ಮಧ್ಯದಲ್ಲಿರುವಾಗ ತಾನು ಒಬ್ಬಂಟಿಗನಾಗಿದ್ದಾಗ ವರ್ತಿಸುವ ರೀತಿಗಿಂತಲೂ ಭಿನ್ನ ರೀತಿಯಲ್ಲಿ ವರ್ತಿಸುತ್ತಾನೆ. ಸಮೂಹದಲ್ಲಿ ಇರುವಾಗ ಮಾಡುವ ಆತನ ವರ್ತನೆಯನ್ನು 'ಸಾಮೂಹಿಕ ವರ್ತನೆ' ಎನ್ನಲಾಗುವುದು. ಸಾಮೂಹಿಕ ವರ್ತನೆ ನಮ್ಮ ಸಾಂಘಿಕ ಜೀವನದ ಅವಿಭಾಜ್ಯ ಅಂಗವಾಗಿದೆ.

ಸಾಕಷ್ಟು ದೊಡ್ಡ ಸಂಖ್ಯೆಯ ಜನರ ಆಕಸ್ಮಿಕವಾದ ಹಾಗೂ ಯೋಜನಾಬದ್ಧವಲ್ಲದ ರೀತಿಯ ಆಲೋಚನೆ, ಭಾವನೆ ಹಾಗೂ ವರ್ತನೆಗೆ ಸಮೂಹ ವರ್ತನೆ ಎನ್ನಬಹುದು. ಸಮೂಹ ವರ್ತನೆಯಲ್ಲಿ ಜನಮಂದೆ, ದೊಂಬಿ ಪೊಳ್ಳುಸುದ್ದಿಗಳ ಪ್ರಚಾರ, ಸಾರ್ವಜನಿಕ ಅಭಿಪ್ರಾಯ, ಕ್ರಾಂತಿ ಹಾಗೂ ಸಾಮಾಜಿಕ ಆಂದೋಲನವನ್ನು ಗುರುತಿಸಬಹುದಾಗಿದೆ. ಇವುಗಳಲ್ಲಿ ಕೆಲವನ್ನು ತಿಳಿಯೋಣ.

ಜನಮಂದೆ : ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ. ಜನಮಂದೆಯು ಒಂದು ಆಸಕ್ತಿಯ ಪ್ರಚೋದನೆಗೆ ಒಟ್ಟಾಗಿ ಪ್ರತಿಕ್ರಿಯಿಸುತ್ತಿರುವ ಜನರ ತಾತ್ಕಾಲಿಕ ಜನಸಂದಣಿ. ಉದಾಹರಣೆಗೆ : ಚಲನ ಚಿತ್ರ ಮಂದಿರದ ಹತ್ತಿರ ಟಿಕೆಟ್ ಪಡೆಯಲು ಮುತ್ತಿಗೆ ಹಾಕಿದಂತೆ ಸೇರಿರುವ ಜನಸ್ತೋಮ, ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನ ಸಮೂಹ, ಇತ್ಯಾದಿ.

ಜನಮಂದೆಯು ತಾತ್ಕಾಲಿಕ ಸ್ವರೂಪದ ಸಮೂಹವಾಗಿರುತ್ತದೆ. ಇದರಲ್ಲಿ ಜನರು ಯಾವುದೋ ಒಂದು ನಿರ್ದಿಷ್ಟ ಸ್ಥಳದಲ್ಲಿ ಭೌತಿಕವಾಗಿ ಒಟ್ಟಾಗಿ ಸೇರಿರುತ್ತಾರೆ. ಜನಮಂದೆಯ ಸದಸ್ಯರು ಪರಸ್ಪರ ಅಭಿಪ್ರಾಯ, ಭಾವನೆಗಳು ಮತ್ತು ಕ್ರಿಯೆಗಳ ಪ್ರಭಾವಕ್ಕೆ ಬಹುಬೇಗ ಒಳಗಾಗುತ್ತಾರೆ. ಕೆಲವೊಮ್ಮೆ ಇದರ ಮೂಲಕ ವ್ಯಕ್ತಿಯ ಅಂತರಾಳದಲ್ಲಿ ಹುದುಗಿರುವ ಭಾವನೆಗಳು ಪ್ರಕಟವಾಗುವುದುಂಟು. ಒಮ್ಮೊಮ್ಮೆ ಸ್ಫೋಟಗೊಳ್ಳುವುದೂ ಉಂಟು.

ಜನಮಂದೆಯ ಪ್ರಭಾವ :

ಜನಮಂದೆಯಲ್ಲಿರುವ ಜನರ ಅನಿಯಂತ್ರಿತ ನಡವಳಿಕೆಯು ಎಷ್ಟೋ ಬಾರಿ ಸಮಾಜದ ಲೋಪದೋಷಗಳನ್ನು ಸೂಚಿಸುವುದುಂಟು. ಇದು ಕೆಲವೊಮ್ಮೆ ಸಾಮಾಜಿಕ ಸಂಸ್ಥೆಗಳ ಕಾರ್ಯವಿಧಾನದ ಬಗೆಗಿರುವ ಜನರ ಅಸಂತೃಪ್ತಿಯನ್ನು ಪ್ರಕಟಿಸುವುದು. ಅಲ್ಲದೆ, ಇದು ಕೆಲವೊಮ್ಮೆ ಸರ್ಕಾರದ ಯೋಜನೆಗಳು, ಧೋರಣೆಗಳು ಮತ್ತು ನಿರ್ದಿಷ್ಟ ಕಾರ್ಯಕ್ರಮಗಳ ಬಗೆಗಿನ ಜನರ ಅಸಮಾಧಾನವನ್ನು ಪ್ರತಿನಿಧಿಸುವುದುಂಟು.

ಜನಮಂದೆಯ ವರ್ತನೆ ಅತಿರೇಕಕ್ಕೆ ಹೋದಾಗ ಅದನ್ನು ನಿಯಂತ್ರಿಸಲು ಕಾಯ್ದೆ–ಕಾನೂನು ಪೋಲೀಸ್ ಪಡೆ, ರಕ್ಷಣಾ ಪಡೆಯಂತಹ ಕ್ರಮಗಳನ್ನು ಬಳಸಬೇಕಾಗುವುದು.

ದೊಂಬಿ : ದೊಂಬಿ ಎಂಬುದು ಜನಮಂದೆ ವರ್ತನೆಯ ಮತ್ತೊಂದು ಮಾದರಿ. ತೀರಾ ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯನ್ನು ದೊಂಬಿ ಎನ್ನುತ್ತಾರೆ. ಅನಿಯಂತ್ರಿತ ದೊಂಬಿಗಳು ಉಗ್ರ ಸ್ವರೂಪದವುಗಳಾಗಿದ್ದಲ್ಲಿ ಅವು ವಿನಾಶಕ್ಕೆ ಕಾರಣವಾಗಲೂಬಹುದು.

ದೊಂಬಿಯ ಸ್ವರೂಪ : ಜನಮಂದೆಯಲ್ಲಿ ಕಾಣುವಷ್ಟು ಕನಿಷ್ಠ ಮಟ್ಟದ ಉದ್ದೇಶ, ಏಕತೆ ಕೂಡ ದೊಂಬಿಯಲ್ಲಿರುವುದಿಲ್ಲ. ದೊಂಬಿಯಲ್ಲಿ ಭಾಗವಹಿಸುವವರು ಎದುರಿಗೆ ಸಿಕ್ಕದ್ದೆಲ್ಲವನ್ನು ಹಾಳುಮಾಡುತ್ತಾ ಸಾಗುವರು. ಗೊಂದಲವನ್ನು ಸೃಷ್ಟಿ ಮಾಡುವುದೇ ದೊಂಬಿಯ ಉದ್ದೇಶವಾಗಿರುತ್ತದೆ. ಕೆಲಮೊಮ್ಮೆ ಈ ದೊಂಬಿಗಳು ಅಪಾರವಾದ ಹಾನಿಯನ್ನುಂಟು ಮಾಡುತ್ತವೆ. ದೊಂಬಿಗಳಲ್ಲಿ ಮಾಡಬಹುದಾದ ಆಕ್ರಮಣಕ್ಕೆ ನಿಶ್ಚಿತವಾದ ಗುರಿ ಇರುವುದಿಲ್ಲ. ದೊಂಬಿಗಳು ಕಾನೂನು ಮತ್ತು ಸುವ್ಯವಸ್ಥೆಗೆ ಗಂಭೀರ ಸವಾಲುಗಳಾಗಿವೆ.

ಕೋಮುಗಲಭೆ, ಜನಾಂಗೀಯ ಕಲಹ, ಗುಂಪು ಘರ್ಷಣೆ ಇತ್ಯಾದಿಗಳು, ದೊಂಬಿಗೆ ಉದಾಹರಣೆಗಳಾಗಿವೆ. ದೊಂಬಿಗಳು ಸಾಮಾನ್ಯವಾಗಿ ನಗರ, ಪಟ್ಟಣಗಳಲ್ಲಿ ಹೆಚ್ಚು ನಡೆಯುತ್ತವೆ. ಪ್ರಚೋದಕ ಸನ್ನಿವೇಶ, ವ್ಯಕ್ತಿಗಳ ಅನಿಯಂತ್ರಿತ ವರ್ತನೆ, ಅನಾಗರಿಕ ನಡವಳಿಕೆ, ಕಲಹ ನಡೆಸುವವರಲ್ಲಿರಬಹುದಾದ ಅಪರಾಧಿ ಗುಣ, ದೊಂಬಿಪರ ಮನೋಭಾವ ಮುಂತಾದವುಗಳೇ ದೊಂಬಿಗೆ ಕಾರಣಗಳಾಗಿವೆ.

ದೊಂಬಿಗಳು ದೀರ್ಘಕಾಲ ನಡೆಯಲಾರವು. ಒಂದು ಹಂತಕ್ಕೆ ಅವು ಕೊನೆಗೊಳ್ಳಲೇಬೇಕು. ಅಧಿಕಾರಿಗಳ ಸಮಯಪ್ರಜ್ಞೆ, ಪೋಲೀಸ್, ರಕ್ಷಣಾ ಪಡೆ ಮತ್ತು ಕಾನೂನು ಮುಂತಾದ ಸಾಧನಗಳ ಮೂಲಕ ದೊಂಬಿಗಳನ್ನು ನಿಯಂತ್ರಿಸಬಹುದು.

ಸಮೂಹ ವರ್ತನೆ ಮತ್ತು ಚಳುವಳಿಗಳು :

ಸಮೂಹವರ್ತನೆಯು ಯೋಜನಾಬದ್ಧವಾಗಿ ಒಂದು ನಿರ್ದಿಷ್ಟ ಗುರಿಯನ್ನು ಹೊಂದಿದ್ದು ಸಾಮಾಜಿಕ ಬದಲಾವಣೆಗೆ ಪ್ರಯತ್ನಿಸಿದರೆ ಅದನ್ನು ಚಳುವಳಿ ಎನ್ನಬಹುದು. ಇಂತಹ ಅನೇಕ ಚಳುವಳಿಗಳು ಭಾರತದಲ್ಲಿ ನಡೆದಿವೆ. ಅದಕ್ಕೆ ಉದಾಹರಣೆಯಾಗಿ ಪರಿಸರ ಚಳುವಳಿಗಳನ್ನು ಗಮನಿಸಬಹುದು.

ಭೂಮಿ, ಗಾಳಿ, ನೀರು ಮತ್ತು ಜೀವಮಂಡಲವನ್ನೊಳಗೊಂಡ ನಮ್ಮ ಸುತ್ತ ಮುತ್ತಲಿನ ಪರಿಸರವು ವಿಷಕಾರಕ ಹಾಗೂ ರಾಸಾಯನಿಕ ಅಂಶಗಳಿಂದ ಕಲುಷಿತವಾಗುವುದನ್ನು 'ಪರಿಸರ ಮಾಲಿನ್ಯ' ಎನ್ನಬಹುದು.

ಇಂದು ಜನಸಂಖ್ಯೆ ಹೆಚ್ಚಿದ ಪರಿಣಾಮವಾಗಿ ಅವರ ಬದುಕಿನ ಅಗತ್ಯತೆಗಳು ಅತಿರೇಕಕ್ಕೆ ಹೋಗಿವೆ. ಇದರ ಪರಿಣಾಮವಾಗಿ ಮಾನವ ವಾಸಿಸುವ ಪರಿಸರದ ಮೇಲೆ ಒತ್ತಡ ಹಾಗೂ ಆಕ್ರಮಣ ಹೆಚ್ಚುತ್ತಲಿದೆ. ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಪಥದಲ್ಲಿರುವ ದೇಶಗಳಲ್ಲಿ ಸಂಪನ್ಮೂಲಗಳನ್ನು ಹೆಚ್ಚು ಹೆಚ್ಚು ಬಳಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ತಮ್ಮ ಸುಖಭೋಗದ ಜೀವನಕ್ಕಾಗಿ ಪರಿಸರವನ್ನು ದುರ್ಬಳಕೆ ಮಾಡುತ್ತಿದ್ದಾರೆ. ಜಗತ್ತಿನ ಹಲವಾರು ದೇಶಗಳು ಹೆಚ್ಚುತ್ತಿರುವ ಜನಸಂಖ್ಯೆಯಿಂದುಂಟಾಗಿರುವ ಸಮಸ್ಯೆಗಳನ್ನು ಎದುರಿಸಲು ಪರಿಸರದ ಮೇಲೆ ಒತ್ತಡ ತರುತ್ತಿವೆ. ಅಲ್ಲದೆ ಅನಿಯಂತ್ರಿತವಾಗಿ ಸಾಗುತ್ತಿರುವ ನಗರಗಳ ಬೆಳವಣಿಗೆ, ಕೈಗಾರಿಕಾ ಅಭಿವೃದ್ಧಿ, ತಾಂತ್ರಿಕ ಪ್ರಗತಿ, ಸಾರಿಗೆ ವ್ಯವಸ್ಥೆಯ ಬೆಳವಣಿಗೆ ಮುಂತಾದವುಗಳಿಂದ

ಅರಣ್ಯಗಳ ನಾಶ ಮತ್ತು ಪರಿಸರ ಮಾಲಿನ್ಯವುಂಟಾಗುತ್ತಿದೆ. ಹೀಗಾಗಿ ಇದೊಂದು ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ.

ಪರಿಸರ ಸಮಸ್ಯೆಯ ನಿವಾರಣೆಯ ಬಗ್ಗೆ ಬುದ್ಧಿಜೀವಿಗಳು, ಪರಿಸರ ತಜ್ಞರು ಮುಂತಾದವರು ವಿಶೇಷವಾಗಿ ಆತಂಕಗೊಂಡಿದ್ದಾರೆ. ಅಲ್ಲದೆ, ಎಚ್ಚೆತ್ತ ಜನರೂ ಕೂಡ ಪರಿಸರ ಸಂರಕ್ಷಣೆಗಾಗಿ ಸಾಮೂಹಿಕ ಪ್ರತಿಭಟನೆಗಳನ್ನು ನಡೆಸತೊಡಗಿದ್ದಾರೆ. ಅಂತಹ ಕೆಲವು ಪ್ರಮುಖ ಪ್ರತಿಭಟನೆಗಳ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಳ್ಳೋಣ.

1. ಚಿಪ್ಕೋ ಚಳುವಳಿ :



ಉತ್ತರ ಪ್ರದೇಶದ ತೆಹ್ರಿ–ಘರ್ವಾಲ್ ಜಿಲ್ಲೆಯಲ್ಲಿ ಸರ್ಕಾರವು ಮರಗಳನ್ನು ಕಡಿಯಲು ಅನುಮತಿ ನೀಡಿತ್ತು. ಇದರಿಂದ ಅರಣ್ಯನಾಶವಾಗುತ್ತದೆ ಮತ್ತು ಪರಿಸರ ಹಾಳಾಗುತ್ತದೆ ಎಂದು ತಿಳಿದು ಜನರು ಮರಗಳನ್ನು ಅಪ್ಪಿ ಹಿಡಿದು ಕಡಿಯದಂತೆ ತಡೆದರು. ಈ ಚಳುವಳಿಯು 1973 ರಲ್ಲಿ ಶ್ರೀ ಸುಂದರ್ ಲಾಲ್ ಬಹುಗುಣ ಹಾಗೂ ಶ್ರೀ ಚಂಡಿ ಪ್ರಸಾದ್ ಭಟ್ಟರವರ ನೇತೃತ್ವದಲ್ಲಿ ನಡೆಯಿತು. ಪರಿಣಾಮವಾಗಿ ಮರಗಳನ್ನು ಕಡಿಯಲು ಸರ್ಕಾರ ನೀಡಿದ ಅನುಮತಿ ರದ್ದಾಯಿತು.

2. ಅಪ್ಪಿಕೋ ಚಳುವಳಿ :

ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಲ್ಕಾನಿ ಗ್ರಾಮದ ರೈತರು 1983ರಲ್ಲಿ ಅಪ್ಪಿಕೋ ಚಳುವಳಿಯನ್ನು ನಡೆಸಿದರು. ಅಲ್ಲಿನ ಕಲಸೆ ಅರಣ್ಯದಲ್ಲಿ ಗುತ್ತಿಗೆದಾರರು ಮರ ಕಡಿಯಲು ಬಂದಾಗ ಅದನ್ನು ತಡೆಯಲು ರೈತರು ಮರಗಳನ್ನು ಅಪ್ಪಿಕೊಳ್ಳುವುದರ ಮೂಲಕ ಪ್ರತಿಭಟಿಸಿದರು. ಮರಗಳ ಕಳ್ಳ ಸಾಗಾಣಿಕೆ ತಪ್ಪಿಸುವುದು, ಗಿಡಮರಗಳನ್ನು ಬೆಳೆಸುವುದು ಹಾಗೂ ಪರಿಸರ ಮಹತ್ವದ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸುವುದು ರೈತರ ಉದ್ದೇಶವಾಗಿತ್ತು.

3. ನರ್ಮದಾ ಆಂದೋಲನ :

ಗುಜರಾತ್ ರಾಜ್ಯದ ಸರ್ದಾರ್ ಸರೋವರ ಯೋಜನೆಯಡಿಯಲ್ಲಿ ನರ್ಮದಾ ನದಿಗೆ ಕಟ್ಟಲಾದ ಅಣೆಕಟ್ಟು ನಿರ್ಮಾಣದಿಂದ ಅರಣ್ಯ ನಾಶ, ಪರಿಸರ ನಾಶ, ಜೀವ ಸಂಕುಲಗಳಿಗೆ ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ಪರಿಸರ ಪ್ರೇಮಿ ಮೇಧಾ ಪಾಟ್ಕರ್ ಮತ್ತು ಬಾಬಾ ಆಮ್ಟೆರವರ ನೇತೃತ್ವದಲ್ಲಿ ಅಣೆಕಟ್ಟು ನಿರ್ಮಾಣದ ವಿರುದ್ಧ ಚಳುವಳಿ ನಡೆಸಲಾಯಿತು. ಇದೇ 'ನರ್ಮದಾ ಬಚಾವೋ ಆಂದೋಲನ'.

4. ಮೌನ ಕಣಿವೆ ಆಂದೋಲನ

ಕೇರಳದ ಪಾಲ್‌ಘಾಟ್ ತಾಲೂಕಿನ ಮೌನ ಕಣಿವೆಯಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಅಣೆಕಟ್ಟಿನ ನಿರ್ಮಾಣದಿಂದ ಪರಿಸರ ನಾಶದ ಜೊತೆಗೆ ಅನೇಕ ಜೀವ ಪ್ರಭೇದಗಳು ಜೀವಿಸಲು ತೊಂದರೆಯಾಗುತ್ತದೆ. ಆದ್ದರಿಂದ ಕೇರಳ ಸಾಹಿತ್ಯ ಪರಿಷತ್ತು ಮತ್ತು ವನ್ಯ ಮೃಗ ಆಸಕ್ತರು ಅಣೆಕಟ್ಟಿನ ನಿರ್ಮಾಣದ ವಿರುದ್ಧ ಚಳುವಳಿಯನ್ನು ನಡೆಸಿದರು. ಈ ಚಳುವಳಿ ಅನೇಕ ಜೀವ ಸಂಕುಲಗಳನ್ನು ಸಂರಕ್ಷಿಸುವಲ್ಲಿ ಯಶಸ್ವಿಯಾಯಿತು.

5. ಕರ್ನಾಟಕ ಕರಾವಳಿ ತೀರದ ವಿವಿಧ ಸ್ಥಾವರಗಳ ವಿರೋಧಿ ಚಳುವಳಿ

ಕರ್ನಾಟಕದ ಕರಾವಳಿಯ ಮಂಗಳೂರಿನಲ್ಲಿ ಸ್ಥಾಪಿಸಲಾಗುತ್ತಿದ್ದ ತೈಲ ಕಾರ್ಯಾಗಾರದಿಂದ ಹೊರಬರುವ ರಾಸಾಯನಿಕ ಅಂಶಗಳಿಂದ ಪರಿಸರ ನಾಶವಾಗುತ್ತದೆ ಎಂದು ತಿಳಿದ ಪರಿಸರವಾದಿಗಳು "ಮಂಗಳೂರು ರಿಫೈನ್‌ರೀಸ್ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್" (MRPL) ವಿರುದ್ಧ ಚಳುವಳಿಯನ್ನು ನಡೆಸಿದರು.

6. ಕೈಗಾ ವಿರೋಧಿ ಚಳುವಳಿ

ಕರ್ನಾಟಕದ ಕಾರವಾರ ಜಿಲ್ಲೆಯ ಕೈಗಾದಲ್ಲಿ ಅಣು ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸುವ ವಿರುದ್ಧ ಚಳುವಳಿಯನ್ನು ಡಾ.ಶಿವರಾಮ ಕಾರಂತರು ಮತ್ತು ಇತರ ಬುದ್ಧಿಜೀವಿಗಳು ನಡೆಸಿದರು. ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆಯಿಂದ ಅರಣ್ಯನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯ ಮುಂತಾದ ದುಷ್ಪರಿಣಾಮಗಳಿಂದ ಜೀವ ಪ್ರಭೇದಗಳ ಮೇಲೆ ಹಾನಿಕಾರಕ ಪರಿಣಾಮಗಳುಂಟಾಗುತ್ತವೆ ಎಂಬ ಉದ್ದೇಶಗಳಿಂದ ಕೈಗಾ ವಿರೋಧಿ ಚಳುವಳಿಯನ್ನು ನಡೆಸಲಾಯಿತು.


ಪರಿಸರ ಮಾಲಿನ್ಯದಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕ ಜಾಗೃತಿ ಅನಿವಾರ್ಯ. ನಾವು ಬದುಕುತ್ತಿರುವ ಪರಿಸರವನ್ನು ಸಂರಕ್ಷಿಸುವುದು, ಪೋಷಣೆ ಮಾಡುವುದು ನಮ್ಮ ಆದ್ಯ ಕರ್ತವ್ಯ ಎಂಬ ಅರಿವು ಅನಿವಾರ್ಯ. ಆಗ ಪ್ರತಿಯೊಬ್ಬ ನಾಗರಿಕನು ನಿಸ್ವಾರ್ಥದಿಂದ ಕ್ರಿಯಾತ್ಮಕವಾಗಿ ಪರಿಸರ ಸಂರಕ್ಷಣೆಗೆ ತನ್ನನ್ನು ತಾನು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಪರಿಸರ ಸಂರಕ್ಷಣೆಗಾಗಿ ಪರಿಣಾಮಕಾರಿ ಯೋಜನೆಗಳು, ಕಾರ್ಯಕ್ರಮಗಳನ್ನು ಜಾರಿಗೆ ತರುವುದರ ಮೂಲಕ ಜನರಲ್ಲಿ ಅರಿವು ಮೂಡಿಸುವ ಅಗತ್ಯವಿದೆ.

ಮಹಿಳೆಯರ ಸ್ವ-ಸಹಾಯ ಸಮೂಹಗಳು

ಕೇವಲ ಚಳುವಳಿಗಳಲ್ಲದೆ ನಂಬಿಕೆ, ಸಹಕಾರ ಆಧಾರಿತ ಸ್ವಸಹಾಯ ಸಮೂಹಗಳನ್ನು ನೋಡಬಹುದು. ಇವು ಸಾಮೂಹಿಕ ವರ್ತನೆಯ ವಿಶಿಷ್ಟ ರೂಪಗಳಾಗಿವೆ.

ಮಹಿಳೆಯರ ಸ್ವ-ಸಹಾಯ ಸಮೂಹ ಎಂಬುದು ಸ್ವಪ್ರಜ್ಞೆ, ಸ್ವಪ್ರೇರಣೆ ಹಾಗೂ ಪರಸ್ಪರ ನಂಬಿಕೆಯೊಂದಿಗೆ, ತಮ್ಮ ಆರ್ಥಿಕ, ಸಾಮಾಜಿಕ ಅಗತ್ಯತೆಗಳನ್ನು ತಾವೇ ತಮ್ಮ ಸ್ವಂತ ಪ್ರಯತ್ನ ಮತ್ತು ಸಹಕಾರದಿಂದ ಪೂರೈಸಿಕೊಳ್ಳುವ ಉದ್ದೇಶದಿಂದ ರೂಪಿತವಾದ 10 ರಿಂದ 20 ಮಂದಿ ಸ್ತ್ರೀಯರನ್ನೊಳಗೊಂಡ ಒಂದು ಸ್ಥಳೀಯ ಸಮೂಹವಾಗಿರುತ್ತದೆ. ಈ ಸ್ತ್ರೀಯರು ತಮ್ಮ ದುಡಿಮೆಯ ಸ್ವಲ್ಪ ಹಣವನ್ನು ಉಳಿಸುತ್ತಾರೆ. ಸರ್ಕಾರವು ಅದಕ್ಕೆ ತನ್ನ ಹಣವನ್ನು ಸೇರಿಸುತ್ತದೆ. ಇದರಿಂದ ಹಣ ಸಂಗ್ರಹವಾಗಿ ಮಹಿಳೆಯರ ಕೌಟುಂಬಿಕ ಜೀವನಕ್ಕೆ ನೆರವಾಗುತ್ತದೆ. ಇದನ್ನು ಪುರುಷರಿಗೆ ಸಮಾನವಾದ ನೆಲೆಯಲ್ಲಿ ಪಾತ್ರವಹಿಸಲು ಸಹಾಯಕವಾಗುವಂತೆ ಸ್ತ್ರೀಯರನ್ನು ಸಜ್ಜುಗೊಳಿಸಲು ಅವರಿಗೆ ಸಮಾನ ಹಕ್ಕು, ಅವಕಾಶ, ಹೊಣೆಗಾರಿಕೆ ಹಾಗೂ ಅಧಿಕಾರ ನೀಡುವಂತಹ ಒಂದು ಪ್ರಯತ್ನ ಎನ್ನಬಹುದು.

ಸ್ತ್ರೀಯರ ಸಾಮಾಜಿಕ ಶಕ್ತಿಯನ್ನು ಬಲಪಡಿಸುವಲ್ಲಿ ಸ್ವಸಹಾಯ ಸಮೂಹಗಳು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಇವು ಸ್ತ್ರೀಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರನ್ನಾಗಿಸುತ್ತವೆ. ಭಾರತ ಸರ್ಕಾರ ಕೂಡ ಸ್ತ್ರೀಯರು ಸ್ವಸಹಾಯ ಸಮೂಹಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೋತ್ಸಾಹ ಮಾಡುತ್ತಿದೆ. ಸ್ವ-ಸಹಾಯ ಸಮೂಹಗಳು ಭಾರತದ ಹಣಕಾಸು ಉದ್ಯಮದ ನವೀನ ರೂಪವೇ ಆಗಿವೆ. ಸ್ತ್ರೀಯರು ಸ್ವ-ಸಹಾಯ ಸಮೂಹಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸುವುದರಿಂದ ಚಿಕ್ಕ ಮಟ್ಟದ ಆರ್ಥಿಕ ಮೂಲಗಳನ್ನು ದೊಡ್ಡ ಮಟ್ಟದಲ್ಲಿ ಒದಗಿಸುವುದು ಹಾಗೂ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ಅವಕಾಶ ಮಾಡಿಕೊಡುವುದು ಸಾಧ್ಯವಾಗುವುದು.



ಮಹಿಳಾ ಸ್ವಸಹಾಯ ಸಮೂಹ

ಸ್ವ-ಸಹಾಯ ಸಮೂಹಗಳು ಸ್ತ್ರೀಯರಲ್ಲಿ ಶಿಕ್ಷಣ ಜಾಗೃತಿಯೊಂದಿಗೆ ಸ್ವಾವಲಂಬಿ ಜೀವನ ನಡೆಸಲು ಸಹಕಾರಿಯಾಗಿವೆ. ಸ್ತ್ರೀಯರು ತಮ್ಮ ಮೇಲೆ ನಡೆಯುವ ದೌರ್ಜನ್ಯಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಇವು ಸಹಾಯಕ. ಸ್ತ್ರೀಯರು ತಮ್ಮ ಪಾಲಿನ ಮಾನವ ಹಕ್ಕುಗಳನ್ನು ಸ್ವತಂತ್ರವಾಗಿ ಪಡೆಯಲು ಕೂಡ ಇವು ನೆರವಾಗುವುವು.

ಈ ಸಮೂಹಗಳು ಸ್ತ್ರೀಯರ ಪ್ರಜಾಸತ್ತಾತ್ಮಕ ಹಕ್ಕು, ಅಧಿಕಾರ ಹಾಗೂ ಗೌರವಗಳನ್ನು ಗಮನದಲ್ಲಿರಿಸಿಕೊಂಡು ವ್ಯವಹರಿಸುವುವು. ಇವು ಸಾಮಾಜಿಕ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಸ್ತ್ರೀಯರಿಗೆ ಸೂಕ್ತ ಅವಕಾಶ ಒದಗಿಸುವಂತೆ ಮಾಡುವುವು. ಅಲ್ಲದೆ ಅಭಿವೃದ್ಧಿ ಯೋಜನೆಗಳಲ್ಲಿ ಸ್ತ್ರೀಯರಿಗೂ ಸೂಕ್ತ ಪ್ರಾತಿನಿಧ್ಯ ಲಭಿಸುವಂತೆ ಮಾಡುವುವು. ಸ್ವ-ಸಹಾಯ ಸಮೂಹಗಳು ಸಾಮೂಹಿಕ ಹೊಣೆಗಾರಿಕೆಯ ಮೂಲಕ ಸಂಘರ್ಷಗಳನ್ನು ನಿವಾರಣೆ ಮಾಡಿಕೊಳ್ಳುವ ಸಾಮರ್ಥ್ಯ ಬೆಳೆಸುವುವು. ಇವುಗಳ ಮೂಲಕ ಸರ್ಕಾರದ ಹಲವಾರು ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಲು ಸಾಧ್ಯವಾಗುವುದು.

ನಿಮಗಿದು ತಿಳಿದಿರಲಿ :

ಸ್ವ ಸಹಾಯ ಸಮೂಹಗಳ ಮೂಲಕ ಸಾಧಿಸಬಹುದಾದ ಮಹಿಳಾ ಸ್ವಾವಲಂಬಿ ಬದುಕಿಗೆ ಸ್ತ್ರೀ ಶಕ್ತಿ ಯೋಜನೆ ಒಂದು ಉತ್ತಮ ನಿದರ್ಶನವಾಗಿದೆ. 'ಸ್ತ್ರೀಶಕ್ತಿ ಯೋಜನೆ'ಯ ಹೆಸರಿನಲ್ಲಿ ಕರ್ನಾಟಕದ ಮಹಿಳಾ ಸ್ವ-ಸಹಾಯ ಸಮೂಹಗಳು ಇತ್ತೀಚೆಗೆ ರಾಜ್ಯಾದ್ಯಂತ ಬಹಳ ಜನಪ್ರಿಯವಾಗುತ್ತಿವೆ. ಈ ಕುರಿತಾದ ಒಂದು ಉದಾಹರಣೆ ಇಲ್ಲಿ ಉಲ್ಲೇಖನೀಯ.

ಉದಾ : ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಸೇರಿದ 'ಸಿರಿ' ಎಂಬ ಗ್ರಾಮೋದ್ಯೋಗ ಸಂಸ್ಥೆ ಗ್ರಾಮೀಣ ಮಹಿಳೆಯರಿಗೆ ಮೌಲ್ಯಯುತ ಆರ್ಥಿಕ ವಸ್ತುಗಳನ್ನು ಉತ್ಪಾದಿಸಲು ಅವಕಾಶ ಕಲ್ಪಿಸಿದೆ. ಅಲ್ಲದೇ ಅದು ಉತ್ಪಾದಿಸಿದ ವಸ್ತುಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡುವಲ್ಲಿ ಮತ್ತು ಮಹಿಳೆಯರಲ್ಲಿ ಹೊಸ ಆರ್ಥಿಕ ಭರವಸೆಗಳನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ.

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ಚಿಪ್ಕೋ ಚಳುವಳಿ ನಡೆದ ರಾಜ್ಯ __________
2. 'ನರ್ಮದಾ ಆಂದೋಲನ' ದ ನೇತೃತ್ವ ವಹಿಸಿದ್ದವರು __________
3. ಡಾ.ಶಿವರಾಮ ಕಾರಂತರು __________ ದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪಿಸುವದನ್ನು ವಿರೋಧಿಸಿದರು.

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಸಮೂಹ ವರ್ತನೆ ಎಂದರೇನು ?
2. ಚಿಪ್ಕೋ ಚಳುವಳಿಯ ನೇತಾರ ಯಾರು ?
3. ಸ್ವ – ಸಹಾಯ ಸಮೂಹ ಎಂದರೇನು?

III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ :

1. ಸಮೂಹ ವರ್ತನೆಯ ಮಾದರಿಗಳಾವುವು ?
2. ಜನಮಂದೆ ಎಂದರೇನು? ಉದಾಹರಣೆ ಕೊಡಿ.
3. ಜನಮಂದೆಯ ಸ್ವರೂಪವನ್ನು ತಿಳಿಸಿ.
4. ಪರಿಸರ ಮಾಲಿನ್ಯದ ಅರ್ಥ ಮತ್ತು ಸ್ವರೂಪವನ್ನು ತಿಳಿಸಿ.
5. ಮಹಿಳಾ ಸ್ವ–ಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿ.

IV. ಚಟುವಟಿಕೆ :

1. ನಿಮ್ಮ ಊರಿನಲ್ಲಿರುವ ಸ್ತ್ರೀ ಸಂಘ ಹಾಗೂ ಸ್ವ–ಸಹಾಯ ಸಮೂಹಗಳಿಗೆ ಭೇಟಿ ನೀಡಿ. ಇಂತಹ ಸಂಘಟನೆಗಳ ಮುಖ್ಯ ಉದ್ದೇಶಗಳೊಂದಿಗೆ ರೂಪಿಸಿ ಕೊಂಡಿರುವ ಕಾರ್ಯಕ್ರಮಗಳನ್ನು ಸಂಗ್ರಹಿಸಿರಿ.
2. ಸ್ತ್ರೀಶಕ್ತಿ ಸಂಘ ಮತ್ತು ಸ್ವ–ಸಹಾಯ ಸಂಘಗಳು ಮಹಿಳೆಯರಲ್ಲಿ ಆರ್ಥಿಕಾಭಿವೃದ್ಧಿಯ ಮನೋಭಾವವನ್ನು ಹೇಗೆ ವೃದ್ಧಿಸಿವೆ ಎಂಬ ಬಗ್ಗೆ ಆ ಸಂಘಗಳ ಸದಸ್ಯರುಗಳಿಂದ ಮಾಹಿತಿ ಪಡೆಯಿರಿ.

V. ಯೋಜನೆ :

1. ಕರ್ನಾಟಕದಲ್ಲಿ ಪರಿಸರ ಮತ್ತು ಅರಣ್ಯ ಸಂರಕ್ಷಣೆಗಾಗಿ ನಡೆಯುತ್ತಿರುವ ಚಳುವಳಿ ಹೋರಾಟಗಳ ಬಗ್ಗೆ ವೃತ್ತ ಪತ್ರಿಕೆಗಳಲ್ಲಿ ಬರುತ್ತಿರುವ ಮಾಹಿತಿಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

ಅಧ್ಯಾಯ – 4

ಸಾಮಾಜಿಕ ಸಮಸ್ಯೆಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಬಾಲ ಕಾರ್ಮಿಕ ಸಮಸ್ಯೆ – ಅರ್ಥ, ಪರಿಣಾಮ, ಸಮಸ್ಯೆಗಳ ನಿರ್ಮೂಲನೆಗಾಗಿ ಸಾಂವಿಧಾನಿಕ ಕ್ರಮಗಳು.*
- *ಸ್ತ್ರೀಯರ ಮೇಲಿನ ಹಿಂಸಾಚಾರ.*
- *ವರದಕ್ಷಿಣೆ – ಸ್ವರೂಪ, ಪರಿಣಾಮಗಳು, ಪರಿಹಾರ ಕ್ರಮಗಳು.*
- *ಹೆಣ್ಣು ಭ್ರೂಣಹತ್ಯೆ*

ಸಮಾಜವು ಸಂಕೀರ್ಣವಾದಂತೆಲ್ಲಾ, ಮುಗಿಲು ಮುಟ್ಟುವ ಕಾರ್ಯನಿರ್ವಹಣೆಯ ಬಿಕ್ಕಟ್ಟುಗಳು ಕೆಲವೊಮ್ಮೆ ವ್ಯಕ್ತಿ ಮತ್ತು ಸಂಸ್ಥೆಗಳನ್ನು ಕುಬ್ಜವಾಗಿಸಿ ಶೋಷಣೆಗೆ ದೂಡುವುದುಂಟು. ಅವು ಆಯಾ ಕಾಲದ ಸಾಮಾಜಿಕ ಶೋಷಣೆಗಳಾಗಿ, ಸಮಸ್ಯೆಗಳಾಗಿ ವ್ಯಕ್ತವಾಗುತ್ತವೆ. ಸಾಮಾಜಿಕ ಸಮಸ್ಯೆಗಳಲ್ಲಿ ಕೆಲವು ಆಧುನಿಕತೆಯ ಉತ್ಪನ್ನವೂ ಹೌದು ! ಅವುಗಳಲ್ಲಿ ಕೆಲವನ್ನು ಇಲ್ಲಿ ನೀವು ತಿಳಿಯುವಿರಿ.

ಭಾರತದಂತಹ ಅಭಿವೃದ್ಧಿ ಪಥದಲ್ಲಿರುವ ಸಮಾಜಗಳಲ್ಲಿ ಹಲವಾರು ಬಗೆಯ ಸಾಮಾಜಿಕ ಸಮಸ್ಯೆಗಳು ತಾಂಡವವಾಡುತ್ತಿವೆ. ಉದಾಹರಣೆಗೆ : ಮಿತಿಮೀರಿದ ಜನಸಂಖ್ಯೆ, ಬಡತನ, ನಿರುದ್ಯೋಗ, ಭಿಕ್ಷಾಟನೆ, ಬಾಲಾಪರಾಧ, ಬಾಲಕಾರ್ಮಿಕರ ಸಮಸ್ಯೆ, ಭ್ರಷ್ಟಾಚಾರ, ಮಹಿಳೆಯರ ಶೋಷಣೆ, ವರದಕ್ಷಿಣೆ ಕಿರುಕುಳ, ಯುವಜನರ ಅಶಾಂತಿ, ಇತ್ಯಾದಿ.

ಇಂತಹ ಹಲವಾರು ಸಾಮಾಜಿಕ ಸಮಸ್ಯೆಗಳಲ್ಲಿ ಕೆಲವು ಪ್ರಮುಖ ಸಮಸ್ಯೆಗಳ ಬಗ್ಗೆ ಕಿರುಪರಿಚಯ ಮಾಡಿಕೊಳ್ಳೋಣ.

ಬಾಲಕಾರ್ಮಿಕ ಸಮಸ್ಯೆ

ಸಾಮಾನ್ಯವಾಗಿ, ಅಪ್ರಾಪ್ತ ವಯಸ್ಸಿನ ಮಕ್ಕಳ ದುಡಿಮೆಯನ್ನು ಬಾಲಕಾರ್ಮಿಕತನ ಎಂದು ಕರೆಯಲಾಗುತ್ತಿದೆ. ಭಾರತದ ಸಂವಿಧಾನದ ಪ್ರಕಾರ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ಸಂಪಾದನೆಯ ಉದ್ದೇಶದಿಂದ ದುಡಿಮೆ ಮಾಡುತ್ತಿದ್ದರೆ ಅಂತಹವರನ್ನು ಬಾಲ ಕಾರ್ಮಿಕರು ಎಂದು ಕರೆಯಲಾಗಿದೆ.

ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ಹಲವಾರು ದೇಶಗಳಲ್ಲಿ ಮಕ್ಕಳ ದುರ್ಬಳಕೆ ಹಾಗೂ ದುಡಿತ ಒಂದು ಸಾಮಾಜಿಕ ದುರಂತವೆಂಬಂತಿದೆ. ಇದು ವರ್ಷದಿಂದ ವರ್ಷಕ್ಕೆ ಮತ್ತಷ್ಟು ಗಂಭೀರ ಸ್ವರೂಪ ತಳೆಯುತ್ತಿದೆ. ಹದಿನಾಲ್ಕು ವರ್ಷ ವಯಸ್ಸನ್ನು ಮೀರದ ಅದೆಷ್ಟೋ ಮಕ್ಕಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಹೆಚ್ಚಿನ ಸಂಖ್ಯೆಯ ಬಾಲಕಾರ್ಮಿಕರು ಹೊಲ, ಗದ್ದೆ, ತೋಟಗಳು ಮುಂತಾದ ಗ್ರಾಮೀಣ ಪರಿಸರದಲ್ಲಿ ದುಡಿಯುತ್ತಿದ್ದರೆ, ಮಿಕ್ಕುಳಿದವರು ನಗರ ಹಾಗೂ ಕೈಗಾರಿಕಾ ಪ್ರದೇಶಗಳಲ್ಲಿ ದುಡಿಯುತ್ತಿದ್ದಾರೆ.



ಕಡುಬಡತನ, ಕೌಟುಂಬಿಕ ಕಲಹ, ವಿಚ್ಛೇದನ, ಕೌಟುಂಬಿಕ ಹಿಂಸೆ, ಪೋಷಕರ ಅತಿಯಾದ ನಿಯಂತ್ರಣ, ಉದ್ಯಮಿಗಳ ಲಾಭಕೋರತನ, ಅನಕ್ಷರತೆ, ಮಕ್ಕಳ ಅಪಹರಣ ಹಾಗೂ ಜೀತ, ಮುಂತಾದ ಕಾರಣಗಳಿಂದ ಬಾಲಕಾರ್ಮಿಕರ ಸಮಸ್ಯೆ ಹೆಚ್ಚುತ್ತಲೇ ಇದೆ.

ಮಕ್ಕಳ ದುಡಿತವೆಂಬುದು ಸಾಮಾಜಿಕ ವ್ಯವಸ್ಥೆಯ ಒಂದು ಗಂಭೀರ ಪಿಡುಗಾಗಿದೆ. ಮಕ್ಕಳನ್ನು ದಿನವಿಡೀ ದುಡಿಸಿಕೊಳ್ಳುವುದೇ ಅಲ್ಲದೆ ಅವರ ಮಾನಸಿಕ, ಭಾವನಾತ್ಮಕ, ಶೈಕ್ಷಣಿಕ, ವೈದ್ಯಕೀಯ ಮತ್ತಿತರ ಅಗತ್ಯತೆಗಳ ಬಗ್ಗೆ ಇವರಿಗೆ ಯಾವುದೇ ಕಾಳಜಿ ಇರುವುದಿಲ್ಲ. ಅದರ ಬದಲು ಅವರನ್ನು ದೈಹಿಕವಾಗಿ ಮಾನಸಿಕವಾಗಿ ಹಿಂಸಿಸುವುದು ಕಂಡುಬಂದಿದೆ.

ಅನಾರೋಗ್ಯ, ಪೌಷ್ಠಿಕ ಆಹಾರದ ಕೊರತೆ, ವೈದ್ಯಕೀಯ ಸೌಲಭ್ಯಗಳ ಕೊರತೆ, ಒತ್ತಾಯದ ದುಡಿತ, ಆರ್ಥಿಕ ಮತ್ತು ಸಾಮಾಜಿಕ ಶೋಷಣೆ ಇವೇ ಮುಂತಾದ ಕಾರಣಗಳಿಂದ ಲಕ್ಷಾಂತರ ಮಂದಿ ಬಾಲಕಾರ್ಮಿಕರು ಇಂದಿಗೂ ಬವಣೆ ಪಡುತ್ತಿದ್ದಾರೆ. ಆಟವಾಡುವ, ಕನಸುಕಾಣುವ ಮತ್ತು ಓದುವ ವಯಸ್ಸಿನಲ್ಲಿ ಅವರನ್ನು ದುಡಿಮೆಗೆ ದೂಡಿ ಅವರ ಬಾಲ್ಯವನ್ನು ಕಸಿದುಕೊಳ್ಳಲಾಗಿದೆ.

ಬಾಲಕಾರ್ಮಿಕರನ್ನು ದುಡಿಯುವ ಕ್ಷೇತ್ರದಿಂದ ಹೊರ ತಂದು ಶೋಷಣೆಯಿಂದ ಮುಕ್ತಗೊಳಿಸಿದ ಮೇಲೆ ಅವರನ್ನು ಸುಧಾರಿಸಲು ಸರ್ಕಾರವು ಕಾರ್ಯಯೋಜನೆಗಳನ್ನು ಕಾಲದಿಂದ ಕಾಲಕ್ಕೆ ಸಿದ್ಧ ಪಡಿಸಿದೆ. ಭಾರತ ಸರ್ಕಾರವು 'ಬಾಲಕಾರ್ಮಿಕರ ಪುನರ್ವಸತಿ ಕಲ್ಯಾಣ ನಿಧಿ' ಸ್ಥಾಪನೆಯ ಮೂಲಕ ಬಾಲಕಾರ್ಮಿಕರ ಶೈಕ್ಷಣಿಕ, ವೈದ್ಯಕೀಯ, ಮೂಲಭೂತ ಅಗತ್ಯತೆಗಳನ್ನು ಪೂರೈಸುವ ಹಾಗೂ ಅವರ ಶೋಷಣೆಯನ್ನು ತಡೆಯುವ ಕಾರ್ಯ ಯೋಜನೆಯನ್ನು ಹಮ್ಮಿಕೊಂಡಿದೆ.

ಬಾಲಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕೆಂದು 'ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯನ್ನು' (1986) ಜಾರಿಗೊಳಿಸಲಾಗಿದೆ. ಈ ಕಾಯ್ದೆ ಅಥವಾ ಶಾಸನವನ್ನು ಉಲ್ಲಂಘಿಸಿದ ಉದ್ಯೋಗಪತಿಗಳು ಪ್ರತಿಯೊಬ್ಬ ಬಾಲ ಕಾರ್ಮಿಕನ ಪರವಾಗಿ 20,000/– ರೂ ಗಳ ದಂಡವನ್ನು ಕಲ್ಯಾಣ ನಿಧಿಗೆ ಕಡ್ಡಾಯವಾಗಿ ಭರಿಸಬೇಕಾಗುತ್ತದೆ.

ಸಾಂವಿಧಾನಿಕ ಪರಿಹಾರ ಕ್ರಮಗಳು :

ನಮ್ಮ ಸಂವಿಧಾನದ 24ನೇ ವಿಧಿಯು 14 ವರ್ಷಕ್ಕೂ ಕಿರಿಯ ವಯಸ್ಸಿನ ಮಕ್ಕಳನ್ನು ದುಡಿಮೆಗೆ ನೇಮಿಸುವುದು ಶಿಕ್ಷಾರ್ಹ ಅಪರಾಧ' ಎಂದು ಘೋಷಿಸಿದೆ. ಅಪಾಯಕಾರಿಯಾದ ಯಾವುದೇ ಕೈಗಾರಿಕಾ ಘಟಕದಲ್ಲಿ ಮಕ್ಕಳನ್ನು ಉದ್ಯೋಗಿಗಳಾಗಿ ನೇಮಕ ಮಾಡಬಾರದು ಎಂದು ಎಚ್ಚರಿಸಿದೆ. ಸಂವಿಧಾನದ ರಾಜ್ಯ ನಿರ್ದೇಶಕ ಸೂತ್ರಗಳ ಪ್ರಕಾರ ಮಕ್ಕಳ ಹಿತ ಸಂರಕ್ಷಣೆಯನ್ನು ಸಾಧಿಸುವ ಹೊಣೆಗಾರಿಕೆ ಸರ್ಕಾರಕ್ಕಿದೆ ಎಂದು ತಿಳಿಸಿದೆ.

ಬಾಲಕಾರ್ಮಿಕತನವನ್ನು ನಿರ್ಮೂಲನ ಮಾಡಲು ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ. 1988 ರಲ್ಲಿ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯನ್ನು (NCLP- National Child Labour Project) ಜಾರಿಗೆ ತಂದಿದೆ. ಈ ಯೋಜನೆಯು ರಾಜ್ಯಗಳ ಹಂತದಲ್ಲಿಯೂ ಇದೆ. ರಾಜ್ಯದಲ್ಲಿ ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು ಸೇರಿ ಕಾರ್ಖಾನೆಗಳಿಗೆ ಭೇಟಿ ಮಾಡಿ ಬಾಲಕಾರ್ಮಿಕರನ್ನು ಪತ್ತೆ ಹಚ್ಚುತ್ತಾರೆ. ಬಾಲಕಾರ್ಮಿಕರಾಗಿ ಸಿಕ್ಕಿದಂತಹ ಮಕ್ಕಳನ್ನು ಕರೆತಂದು ಎಲ್ಲಾ ರೀತಿಯ ಉಚಿತ ಸೌಲಭ್ಯಗಳೊಂದಿಗೆ ಶಿಕ್ಷಣವನ್ನು ನೀಡಲಾಗುತ್ತದೆ. ಇಂತಹ ಮಕ್ಕಳ ಶಿಕ್ಷಣಕ್ಕಾಗಿ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಬಾಲಮಂದಿರಗಳನ್ನು ತೆರೆದಿದ್ದು, ಈ ಮಕ್ಕಳಿಗೆ ಉಚಿತವಾಗಿ ವಸತಿ, ಊಟ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಸರ್ವಶಿಕ್ಷಣ ಅಭಿಯಾನದಲ್ಲಿ ಕರ್ನಾಟಕ ರಾಜ್ಯದಲ್ಲಿ ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆದು 'ಕೂಲಿಯಿಂದ ಶಾಲೆಗೆ' ಎಂಬ ಕಾರ್ಯಕ್ರಮದ ಮೂಲಕ ಈ ಮಕ್ಕಳನ್ನು ಶಾಲೆಯಲ್ಲಿ ದಾಖಲಿಸಿಕೊಂಡು ಉಚಿತ ಶಿಕ್ಷಣ ನೀಡಲಾಗುತ್ತದೆ. ಶಿಕ್ಷಣಹಕ್ಕು ಕಾಯ್ದೆ 2009 ರಲ್ಲಿ 6 ರಿಂದ 14 ವರ್ಷ ಮಕ್ಕಳಿಗೆ ಕಡ್ಡಾಯವಾಗಿ ಉಚಿತ ಶಿಕ್ಷಣದ ಹಕ್ಕನ್ನು ಕಲ್ಪಿಸಿದೆ. ಈ ಕಾಯ್ದೆಯ ಪ್ರಕಾರ ಖಾಸಗಿ ಶಾಲೆಗಳಲ್ಲಿ ಶೇ 25ರಷ್ಟು ಸೀಟುಗಳನ್ನು ಬಾಲಕಾರ್ಮಿಕ ಮಕ್ಕಳು, ಹಿಂದುಳಿದ ವರ್ಗದ ಮಕ್ಕಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳು ಹಾಗೂ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಮೀಸಲಿಡಬೇಕಾಗಿದೆ.

ಚಟುವಟಿಕೆ :

ನಿಮ್ಮ ಸ್ನೇಹಿತರು ಯಾರಾದರೂ ಬಾಲಕಾರ್ಮಿಕತನಕ್ಕೆ ಒಳಗಾಗಿದ್ದರೆ, ಶಾಲೆಯಿಂದ ಹೊರಗುಳಿದಿದ್ದರೆ ಕೂಡಲೇ ಶಿಕ್ಷಕರ ಗಮನಕ್ಕೆ ತನ್ನಿ.

ಸರ್ವೋನ್ನತ ನ್ಯಾಯಾಲಯವು ಬಾಲಶ್ರಮಿಕರ ಶೋಷಣೆ ತಪ್ಪಿಸಿ ಅವರ ಆರ್ಥಿಕ ಆಸಕ್ತಿ ಹಾಗೂ ಮಾನವೀಯ ಹಕ್ಕುಗಳನ್ನು ಸಂರಕ್ಷಿಸಲು ಬಾಲಕಾರ್ಮಿಕ ಪುನರ್ವಸತೀಕರಣ ಕಲ್ಯಾಣ ನಿಧಿಯನ್ನು' ಸ್ಥಾಪಿಸಬೇಕೆಂದು ಆದೇಶಿಸಿದೆ. 1964 ಬಾಲಕಾರ್ಮಿಕ ನಿಷೇಧ ಕಾಯ್ದೆ ಭಾರತ ಸರ್ಕಾರವು 1987 ರಲ್ಲಿ ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ 'ರಾಷ್ಟ್ರೀಯ ನೀತಿ'ಯನ್ನು ಜಾರಿಗೊಳಿಸಿತು. 1988 ರಲ್ಲಿ ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಯಯೋಜನೆ (ಪ್ರಕಲ್ಪಿತ ಯೋಜನೆ)ಯನ್ನು ರೂಪಿಸಿತು. 2006 ರಲ್ಲಿ ಸರ್ಕಾರ "ಬಾಲಶ್ರಮ ನಿರ್ಮೂಲನ ಮತ್ತು ಪುನರ್ವಸತೀಕರಣ ಕಾಯ್ದೆ"ಯನ್ನು ಜಾರಿಗೊಳಿಸಿತು.

ಗಮನಿಸಿ : 2011 ರ ಜನಗಣತಿಯಂತೆ ಭಾರತದಲ್ಲಿ ಇಂದಿಗೂ 12.6 ದಶಲಕ್ಷ ಮಂದಿ ಮಕ್ಕಳು ಮನೆಗಳಲ್ಲಿ, ಬೀದಿ ಬದಿಯಲ್ಲಿ, ಕಾರ್ಖಾನೆ ಹಾಗೂ ಕೃಷಿಕ್ಷೇತ್ರಗಳಲ್ಲಿ ಬಾಲಕಾರ್ಮಿಕರಾಗಿ ಬಲವಂತದ ದುಡಿಮೆಗೆ ಗುರಿಯಾಗಿದ್ದಾರೆ. ಇದೇ ರೀತಿ ಇಡೀ ಪ್ರಪಂಚದಲ್ಲಿ 215 ದಶಲಕ್ಷ ಮಂದಿ ಮಕ್ಕಳು ವಿವಿಧ ಕ್ಷೇತ್ರಗಳಲ್ಲಿ ದುಡಿತಕ್ಕೆ ಒಳಗಾಗಿದ್ದಾರೆ.

ಸ್ತ್ರೀಯರ ಮೇಲಿನ ಹಿಂಸಾಚಾರ

ಭಾರತೀಯ ಸ್ತ್ರೀಯರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಲ್ಲಿ ಹಿಂಸಾಚಾರವೂ ಒಂದು. ಇತ್ತೀಚಿನ ಶೈಕ್ಷಣಿಕ, ಆರ್ಥಿಕ, ರಾಜಕೀಯ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿ ಸ್ತ್ರೀಯರ ಮೇಲೆ ಹಿಂಸಾಚಾರಗಳು ನಡೆಯುತ್ತಲೇ ಇವೆ. ಅತ್ಯಾಚಾರ, ದೌರ್ಜನ್ಯ, ವರದಕ್ಷಿಣೆ ಕಿರುಕುಳ, ದೈಹಿಕ ಮತ್ತು ಮಾನಸಿಕ ಕಿರುಕುಳ, ಗರ್ಭಪಾತಕ್ಕೆ ಪ್ರೇರೇಪಿಸುವುದು, ಅವಾಚ್ಯ ಪದಗಳ ಬಳಕೆ ಮುಂತಾದ ರೂಪದಲ್ಲಿ ಹಿಂಸಾಚಾರಗಳು ಕುಟುಂಬದ ಒಳಗೂ ಮತ್ತು ಹೊರಗೂ ಸ್ತ್ರೀಯರ ಮೇಲೆ ನಡೆಯುತ್ತಲೇ ಇವೆ. ಅವುಗಳಲ್ಲಿ ಕೆಲವು ಪ್ರಮುಖ ಸಮಸ್ಯೆಗಳ ಬಗ್ಗೆ ಚರ್ಚಿಸೋಣ.

ವರದಕ್ಷಿಣೆ :

ವರದಕ್ಷಿಣೆ ಎಂಬುದು ಭಾರತೀಯ ವಿವಾಹ ಪದ್ಧತಿಯಲ್ಲಿ ಕಂಡು ಬಂದಿರುವ ಒಂದು ಆಚರಣೆ. 'ವರ' ಎಂದರೆ ವಿವಾಹವಾಗುವ ಪ್ರಾಪ್ತ ವಯಸ್ಸಿನ ಗಂಡು ಎಂದರ್ಥ. ದಕ್ಷಿಣೆ ಎಂದರೆ 'ಬಳುವಳಿ ನೀಡುವಿಕೆ'.

ವಿವಾಹದ ಉಡುಗೊರೆಯಾಗಿ ವಧುವಿನ ಕುಟುಂಬದವರಿಂದ ನಾನಾರೂಪದಲ್ಲಿ ಅಪೇಕ್ಷಿಸಲಾಗುವ ಸ್ವತ್ತು, ಚಿನ್ನಾಭರಣ, ನಗದು ಅಥವಾ ವಾಹನ ಇತ್ಯಾದಿಗಳು ವರದಕ್ಷಿಣೆಯ ರೂಪಗಳಾಗಿರುತ್ತವೆ. ವರದಕ್ಷಿಣೆಯನ್ನು ಕೊಡುವುದು ಹಾಗೂ ಪಡೆಯುವುದು ಶಿಕ್ಷಾರ್ಹ ಅಪರಾಧ.

ವರನ ಕಡೆಯವರ ಬೇಡಿಕೆ ಮೇರೆಗೆ ಕೇಳಿದಷ್ಟು ಹಣ, ಚಿನ್ನಾಭರಣ ಇತ್ಯಾದಿಗಳನ್ನು ನೀಡಬೇಕಾದ ಅನಿವಾರ್ಯತೆ ವಧುವಿನ ಕಡೆಯವರಿಗೆ ಉಂಟಾದರೆ ಅದು ಒಂದು ಬಗೆಯ ಶೋಷಣೆಯಾಗುತ್ತದೆ. ಈ ಶೋಷಣೆಯಿಂದ ವಧುವಿನ ಕಡೆಯವರು ತೀವ್ರ ಆರ್ಥಿಕ ಮತ್ತು ಮಾನಸಿಕ ಸಂಕಷ್ಟಗಳಿಗೆ ಒಳಗಾಗುತ್ತಾರೆ.

ಹೀಗೆ ವರದಕ್ಷಿಣೆ ಎಂಬುದು ಸ್ತ್ರೀಯರನ್ನು ಕಾಡುತ್ತಿರುವ ಒಂದು ಸಾಮಾಜಿಕ ಪಿಡುಗಾಗಿದೆ. ವರದಕ್ಷಿಣೆಯಿಂದ ಸ್ತ್ರೀಯರ ಮೇಲೆ ದೌರ್ಜನ್ಯವೆಸಗಲಾಗುತ್ತಿದೆಯಲ್ಲದೆ ಅವರನ್ನು ಶೋಷಣೆ, ಕೊಲೆ ಮತ್ತು ಹಿಂಸೆಗಳಿಗೆ ಒಳಪಡಿಸಲಾಗುತ್ತಿದೆ.

ವರದಕ್ಷಿಣೆಯ ದುಷ್ಪರಿಣಾಮಗಳು

ವರದಕ್ಷಿಣೆ ಸ್ತ್ರೀಯರ ಸ್ವಾಭಿಮಾನ, ಗೌರವ, ಸ್ಥಾನಮಾನವನ್ನು ಕುಗ್ಗಿಸುತ್ತದೆ ಮತ್ತು ಕೌಟುಂಬಿಕ ಕಲಹಗಳನ್ನುಂಟು ಮಾಡುತ್ತದೆ. ಅದು ಸ್ತ್ರೀ ಪುರುಷರ ನಡುವೆ ಒಡಕು ಉಂಟಾಗಲು ಕಾರಣವಾಗಿದೆ.

ವರದಕ್ಷಿಣೆ ಪಿಡುಗಿನಿಂದಾಗಿ ಅನೈತಿಕತೆ ಮತ್ತು ಕ್ರೌರ್ಯ ಹೆಚ್ಚುವುದು, ಕೌಟುಂಬಿಕ ಸಂಬಂಧಗಳು ಹಾಳಾಗುವುವು. ವರದಕ್ಷಿಣೆ ಹಣದ ದಾಹದಿಂದಾಗಿ ಮೋಸದ ವಿವಾಹಗಳು ಕೂಡಾ ನಡೆಯುತ್ತಿವೆ. ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ. ವಿವಾಹ ವಿಚ್ಛೇದನ ಪ್ರಕರಣಗಳ ಸಂಖ್ಯೆಗಳು ಹೆಚ್ಚುತ್ತಿವೆ.

ವರದಕ್ಷಿಣೆ ಸಮಸ್ಯೆಯ ಪರಿಹಾರ ಕ್ರಮಗಳು :

1961 ರ ವರದಕ್ಷಿಣೆ ನಿಷೇಧ ಕಾಯ್ದೆ :

ವರದಕ್ಷಿಣೆ ಪಿಡುಗನ್ನು ಶಾಸನಾತ್ಮಕವಾಗಿ ನಿವಾರಣೆ ಮಾಡಲು ಭಾರತ ಸರ್ಕಾರ 1961 ರಲ್ಲಿ 'ವರದಕ್ಷಿಣೆ ನಿಷೇಧ' ಕಾಯ್ದೆಯನ್ನು ಜಾರಿಗೊಳಿಸಿತು. ವರದಕ್ಷಿಣೆ ಷರತ್ತಿನ ಮೇರೆಗೆ ವಿವಾಹವಾಗುವುದನ್ನು ಈ ಕಾನೂನು ನಿಷೇಧಿಸಿದೆ. ಈ ಕಾಯ್ದೆ ಉಲ್ಲಂಘಿಸಿದವರಿಗೆ 5000 ರೂ.ಗಳ ದಂಡ, ಇಲ್ಲವೇ 6 ತಿಂಗಳ ಕಾರಾಗೃಹವಾಸ, ಇಲ್ಲವೇ ಎರಡನ್ನೂ ಒಟ್ಟಿಗೆ ವಿಧಿಸಬಹುದಾಗಿದೆ.

ಈ ಕಾಯ್ದೆಯನ್ನು 1986ರಲ್ಲಿ ತಿದ್ದುಪಡಿಮಾಡಿ ಅದನ್ನು ಮತ್ತಷ್ಟು ಕಠಿಣಗೊಳಿಸಲಾಯಿತು. ತಿದ್ದುಪಡಿಗೊಂಡಿರುವ ಈ ಕಾಯ್ದೆ ಪ್ರಕಾರ ವರದಕ್ಷಿಣೆ ಕೊಡುವ ಮತ್ತು ತೆಗೆದುಕೊಳ್ಳುವ ಹಾಗೂ ಕೊಡುವಂತೆ ಒತ್ತಾಯಿಸುವ ವ್ಯಕ್ತಿಗಳಿಗೆ 5 ವರ್ಷಗಳಿಗೂ ಕಡಿಮೆಯಿರದ ಕಾರಾಗೃಹ ಶಿಕ್ಷೆ ಮತ್ತು 15,000 ರೂಗಳಿಗೆ ಕಡಿಮೆಯಿರದ ಹಣವನ್ನು ದಂಡವಾಗಿ ವಿಧಿಸಬಹುದು.

ವರದಕ್ಷಿಣೆ ಸಾವು ಪ್ರಕರಣವನ್ನು 'ಭಾರತ ದಂಡ ಸಂಹಿತೆ' (Indian Penal Code) ಹಾಗೂ 'ಭಾರತ ಅಪರಾಧ ವಿಚಾರಣಾ ಸಂಹಿತೆ'ಗೆ (Criminal Procedure Code.) ಸೇರ್ಪಡೆಗೊಳಿಸಲಾಗಿದೆ. ಈ ವಿಚಾರಣೆಯನ್ನು ಜಾಮೀನು ರಹಿತ ಮತ್ತು ರಾಜಿರಹಿತ ನೆಲೆಯಲ್ಲಿ ನಡೆಸಬಹುದಾಗಿದೆ.

ಕಾನೂನಿನ ಮೂಲಕವಲ್ಲದೆ ಜನಜಾಗೃತಿ, ಅಂತರ್ಜಾತಿ ವಿವಾಹ, ಆಧುನಿಕ ಪ್ರಚಾರ ಮಾಧ್ಯಮಗಳು, ಸ್ವಯಂ ಸೇವಾ ಸಂಘಟನೆಗಳು ಮತ್ತು ಮಹಿಳಾ ಸಂಘಟನೆಗಳನ್ನು ಪ್ರೋತ್ಸಾಹಿಸುವುದರ ಮೂಲಕ ವರದಕ್ಷಿಣೆ ಪಿಡುಗನ್ನು ತೊಲಗಿಸಬಹುದು.

ಹೆಣ್ಣು ಭ್ರೂಣಹತ್ಯೆ ಮತ್ತು ಹೆಣ್ಣು ಶಿಶುಹತ್ಯೆ

ಆಧುನಿಕ ಸ್ವತಂತ್ರ ಭಾರತದ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆಗಳೆರಡೂ ಕೂಡ ಅಮಾನವೀಯ ಪದ್ಧತಿಗಳಾಗಿವೆ.

ಹೆಣ್ಣು ಭ್ರೂಣ ಹತ್ಯೆ

ಗರ್ಭದಲ್ಲಿರುವ ಭ್ರೂಣವು ಹೆಣ್ಣು ಭ್ರೂಣವಾಗಿದ್ದು, ಅದು ತಂದೆ-ತಾಯಿಯರಿಗೆ ಬೇಡವಾದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದೇ 'ಹೆಣ್ಣು ಭ್ರೂಣಹತ್ಯೆ'.

ಆಧುನಿಕ ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚು ಪ್ರಗತಿಯಾಗಿರುವ ಹಿನ್ನೆಲೆಯಲ್ಲಿ ತಾಯಿಯ ಗರ್ಭದಲ್ಲಿರುವ ಭ್ರೂಣವು ಹೆಣ್ಣೇ ಅಥವಾ ಗಂಡೇ ಎಂಬುದನ್ನು ಲಿಂಗ ಪರೀಕ್ಷಾ ವಿಧಾನಗಳಿಂದ ತಿಳಿಯಲು ಸಾಧ್ಯವಾಗಿದೆ.

ಗಂಡು ಮಕ್ಕಳ ಬಯಕೆಯ ವ್ಯಾಮೋಹದಿಂದಾಗಿ ಆಧುನಿಕ ತಂತ್ರಜ್ಞಾನದ ದುರ್ಬಳಕೆ ನಡೆಯುತ್ತಿದೆ. ಸ್ಕ್ಯಾನಿಂಗ್ ಎಂಬ ಆಧುನಿಕ ತಂತ್ರಜ್ಞಾನದ ಬಳಕೆಯಿಂದ ತಾಯಿಯ ಗರ್ಭದಲ್ಲಿರುವ ಮಗುವಿನ ಲಿಂಗವನ್ನು ಪತ್ತೆ ಹಚ್ಚಿ ಅದು ಹೆಣ್ಣು ಶಿಶುವಾಗಿದ್ದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದರ ಮೂಲಕ ಗರ್ಭಪಾತದ ಪ್ರಕರಣಗಳು ಹೆಚ್ಚುತ್ತಿವೆ.

ಬಡತನ, ವರದಕ್ಷಿಣೆಯ ಭೀತಿ, ಅನಕ್ಷರತೆ, ಅಜ್ಞಾನ, ಸ್ತ್ರೀ ವಿರೋಧಿ ನಿಲುವುಗಳು, ಗಂಡುಮಗುವಿನ ಬಯಕೆ ಮುಂತಾದ ಕಾರಣಗಳಿಂದಾಗಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ನಡೆಯುತ್ತಿವೆ.

ಹೆಣ್ಣು ಭ್ರೂಣ ಹತ್ಯೆಯಂತಹ ಪ್ರಕರಣಗಳಿಂದ ಸ್ತ್ರೀಪುರುಷರ ಲಿಂಗಾನುಪಾತದಲ್ಲಿ ಏರುಪೇರು, ಲಿಂಗ ತಾರತಮ್ಯತೆ, ಹೆಣ್ಣಿನ ಅಪಮೌಲ್ಯೀಕರಣ ಮುಂತಾದ ದುಷ್ಪರಿಣಾಗಳುಂಟಾಗುತ್ತಿವೆ.

ಆಧುನಿಕ ತಂತ್ರಜ್ಞಾನದ ಮೂಲಕ ಗರ್ಭದಲ್ಲಿರುವ ಲಿಂಗ ಪತ್ತೆ ಹಚ್ಚುವುದನ್ನು ನಿಯಂತ್ರಿಸಲು 1994 ರಲ್ಲಿ 'ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ'ಯನ್ನು ಜಾರಿಗೆ ತರಲಾಯಿತು. ಆದರೂ ರಹಸ್ಯವಾಗಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಇಂದಿಗೂ ನಡೆಯುತ್ತಲೇ ಇವೆ.

ಗಮನಿಸಿ : *ಭಾರತದ 2011ರ ಜನಗಣತಿಯಂತೆ ಕೇರಳ ಮತ್ತು ಪಾಂಡಿಚೇರಿ ರಾಜ್ಯಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ರಾಜ್ಯಗಳಲ್ಲಿ ಲಿಂಗಾನುಪಾತದಲ್ಲಿ ಪುರುಷರ ಸಂಖ್ಯೆಗಿಂತ ಸ್ತ್ರೀಯರ ಸಂಖ್ಯೆ ಕಡಿಮೆ ಇದೆ.*

2001ರ ಜನಗಣತಿಯಂತೆ ಲಿಂಗಾನುಪಾತ		*2011ರ ಜನಗಣತಿಯಂತೆ ಲಿಂಗಾನುಪಾತ*		
ಸ್ತ್ರೀಯರು	ಪುರುಷರು		ಸ್ತ್ರೀಯರು	ಪುರುಷರು
			940	*1000*
933	*1000*	ಗ್ರಾಮೀಣ	*947*	*1000*
		ನಗರ	*926*	*1000*

ಹೆಣ್ಣು ಶಿಶು ಹತ್ಯೆ

'ಜನನದ ನಂತರದಲ್ಲಿ ಹೆಣ್ಣು ಮಗುವನ್ನು ಹತ್ಯೆ ಮಾಡುವ ಕ್ರೂರ ಪದ್ಧತಿಯೇ ಹೆಣ್ಣು ಶಿಶು ಹತ್ಯೆ'. ಇತ್ತೀಚಿನ ದಿನಗಳಲ್ಲಿಯೂ ಹೆಣ್ಣು ಶಿಶು ಹತ್ಯೆಯ ಪ್ರಕರಣಗಳು ಅಲ್ಲಲ್ಲಿ ಬೆಳಕಿಗೆ ಬಂದಿವೆ.

ಹೆಣ್ಣು ಶಿಶು ಹತ್ಯೆಯಂತಹ ಹೇಯ ಕೃತ್ಯಗಳನ್ನು ತಡೆಗಟ್ಟಲು ಸರ್ಕಾರ ಪ್ರತಿಬಂಧಕ ಕಾಯ್ದೆಗಳನ್ನು ಜಾರಿಗೊಳಿಸಿದೆ. ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆಗಳೆರಡು ಶಿಕ್ಷಾರ್ಹ ಅಪರಾಧವಾಗಿವೆ.

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ಸಂವಿಧಾನದ __________ ವಿಧಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ ಎಂದು ಘೋಷಿಸಿದೆ.
2. 'ಬಾಲ ಕಾರ್ಮಿಕ ನಿಷೇಧ ಕಾಯ್ದೆ' ಜಾರಿಗೆ ಬಂದ ವರ್ಷ __________
3. ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ __________ ರಲ್ಲಿ 'ರಾಷ್ಟ್ರೀಯ ನೀತಿ' ಜಾರಿಗೊಳಿಸಿತು.
4. ವರದಕ್ಷಿಣೆ ನಿಷೇಧ ಕಾಯ್ದೆ ಮೊದಲು __________ ರಲ್ಲಿ ಜಾರಿಗೆ ಬಂದಿತು.

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಭಾರತದ ಯಾವುದಾದರೂ ಎರಡು ಸಾಮಾಜಿಕ ಸಮಸ್ಯೆಗಳನ್ನು ಹೆಸರಿಸಿ.
2. ಬಾಲ ಕಾರ್ಮಿಕರು ಎಂದರೆ ಯಾರು ?
3. ಹೆಣ್ಣು ಭ್ರೂಣ ಹತ್ಯೆ ಎಂದರೇನು ?
4. ಹೆಣ್ಣು ಶಿಶುಹತ್ಯೆ ಎಂದರೇನು ?

III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :

1. ಬಾಲ ಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು ? ತಿಳಿಸಿ.
2. ಬಾಲ ಕಾರ್ಮಿಕ ಸಮಸ್ಯೆಯಿಂದಾಗುವ ಪರಿಣಾಮಗಳೇನು ?
3. ಬಾಲ ಕಾರ್ಮಿಕ ಸಮಸ್ಯೆಯ ನಿರ್ಮೂಲನಾ ಕ್ರಮಗಳಾವುವು ? ವಿವರಿಸಿ.
4. ವರದಕ್ಷಿಣೆ ಪಿಡುಗಿನಿಂದಾಗುವ ದುಷ್ಪರಿಣಾಮಗಳಾವುವು ?
5. ವರದಕ್ಷಿಣೆ ಸಮಸ್ಯೆಗೆ ಪರಿಹಾರ ಕ್ರಮಗಳಾವುವು ?

IV. ಚಟುವಟಿಕೆ :

1. ನಿಮ್ಮ ಊರಿನ ಸಾಮಾಜಿಕ ಸಮಸ್ಯೆಗಳನ್ನು ಪಟ್ಟಿ ಮಾಡಿ ಅವುಗಳಿಗೆ ಪರಿಹಾರಗಳನ್ನು ಬರೆಯಿರಿ.

V. ಯೋಜನೆ :

1. ನಿಮ್ಮ ಶಾಲೆಗೆ ಕಾನೂನು ತಜ್ಞರನ್ನು ಕರೆದು, ಬಾಲಕಾರ್ಮಿಕತನ ಮತ್ತು ಶಿಶು ಹತ್ಯೆಗೆ ಸಂಬಂಧಿಸಿದಂತೆ ಇರುವ ಕಾನೂನಿನ ಬಗ್ಗೆ ಉಪನ್ಯಾಸ ಏರ್ಪಡಿಸಿ.

ಭೂಗೋಳಶಾಸ್ತ್ರ

ಅಧ್ಯಾಯ-1


ಭಾರತ ನಮ್ಮ ಮಾತೃಭೂಮಿ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.


- *ನಮ್ಮ ದೇಶದ ಹಿರಿಮೆ ಹಾಗೂ ಪರಂಪರೆಗಳು.*
- *'ಭಾರತ' ಎಂಬ ಹೆಸರಿನ ಹಿನ್ನೆಲೆ ಹಾಗೂ ವೈವಿಧ್ಯತೆ.*
- *ಭಾರತದ ಭೌಗೋಳಿಕ ಸ್ಥಾನ, ವಿಸ್ತೀರ್ಣ, ಭೂ ಮತ್ತು ಜಲ ಮೇರೆಗಳು ಹಾಗೂ ನೆರೆಯ ರಾಷ್ಟ್ರಗಳು.*

ಪ್ರಾಚೀನ ಕಾಲದಿಂದಲೂ ನಮ್ಮ ದೇಶದಲ್ಲಿ ವಿವಿಧತೆಯಲ್ಲಿ ಏಕತೆಯನ್ನು ಕಾಣಬಹುದು. ಈ ವೈವಿಧ್ಯವು ನಮ್ಮ ದೇಶಕ್ಕೆ ಬೇರೆ ಯಾವ ದೇಶದಲ್ಲೂ ಇರದಂತಹ ಶ್ರೀಮಂತಿಕೆಯನ್ನು ಕೊಟ್ಟಿದೆ. ಇಲ್ಲಿಯ ವಿವಿಧ ರೀತಿಯ ಮೇಲ್ಮೈ ಲಕ್ಷಣಗಳು, ವಾಯುಗುಣ, ಸ್ವಾಭಾವಿಕ ಸಸ್ಯವರ್ಗಗಳು ಹಾಗೂ ಜನರಲ್ಲಿನ ವೈವಿಧ್ಯತೆಗಳನ್ನು ಗಮನಿಸಿದಾಗ ಇದನ್ನು ಒಂದು 'ಉಪಖಂಡ' (Sub continent) ಎಂದು ಕರೆಯಬಹುದಾಗಿದೆ.

ಪ್ರಪಂಚದಲ್ಲಿ ಭಾರತದ ಸ್ಥಾನ : ಭಾರತವು ಏಷ್ಯಾಖಂಡದ ದಕ್ಷಿಣ ಭಾಗದಲ್ಲಿರುವ ಪರ್ಯಾಯ ದ್ವೀಪವಾಗಿದೆ. ಇದನ್ನು **'ಇಂಡಿಯಾ'** ಹಾಗೂ ಹಿಂದೂಸ್ಥಾನ ಎಂದು ಕರೆಯುತ್ತಾರೆ. ಇಂಡಿಯಾ ಎಂಬ ಹೆಸರು **'ಸಿಂಧೂ'** ನದಿಯಿಂದ ಬಳಕೆಗೆ ಬಂದಿದೆ. **'ಭಾರತ'** ವೆಂಬ ಹೆಸರು ಭರತ ಎಂಬ ಪುರಾತನ ಚಕ್ರವರ್ತಿಯ ಹೆಸರಿನಿಂದ ಬಂದಿದೆ. ಭಾರತವು ಸಂಪೂರ್ಣವಾಗಿ ಉತ್ತರಾರ್ಧ ಗೋಳದಲ್ಲಿದೆ. ಇದು ಉತ್ತರದಲ್ಲಿ ಅಗಲವಾಗಿದ್ದು ದಕ್ಷಿಣದ ಕಡೆಗೆ ಕಿರಿದಾಗಿ ತ್ರಿಕೋನಾಕೃತಿಯಲ್ಲಿ ಹಿಂದೂ ಮಹಾಸಾಗರದಲ್ಲಿ ಚಾಚಿಕೊಂಡಿದೆ.



ಪ್ರಪಂಚ – ಭಾರತದ ಸ್ಥಾನ


ಅಕ್ಷಾಂಶ ಮತ್ತು ರೇಖಾಂಶ ಸ್ಥಾನ
68°
72°
76°
80°
82½°
84°
88°
92°
96°
36°
32°
28°
24°
23½
20°
16°
12°
8°
ಅಫ್ಘಾನಿಸ್ತಾನ
ಜಮ್ಮು ಮತ್ತು ಕಾಶ್ಮೀರ
ಹಿಮಾಚಲ ಪ್ರದೇಶ
ಚೀನಾ
ಪಾಕಿಸ್ತಾನ
ಪಂಜಾಬ್
ಚಂಡೀಗಡ
ಹರಿಯಾಣ
ಉತ್ತರಖಂಡ
ದೆಹಲಿ
ನೇಪಾಳ
ಅರುಣಾಚಲ ಪ್ರದೇಶ
ಸಿಕ್ಕಿಂ
ಭೂತಾನ್
ಉತ್ತರಪ್ರದೇಶ
ರಾಜಸ್ತಾನ
ಪಶ್ಚಿಮದ ಅಗಲ
ಪೂರ್ವ
ಅಸ್ಸಾಂ
ನಾಗಾಲ್ಯಾಂಡ್
ಬಿಹಾರ
ಮೇಘಾಲಯ
ಮಯನ್ಮಾರ್
ಅಲಹಾಬಾದ್
ಭಾರತ
ಮಣಿಪುರ
ತ್ರಿಪುರಾ
ಗುಜರಾತ್
ಭೂಪಾಲ್
ಜಬ್ಬಲ್‌ಪುರ
ಜಾರ್ಖಂಡ್
ಪ.ಬಂಗಾಳ
ಬಾಂಗ್ಲಾದೇಶ
ಮಿಜೋರಾಂ
ಮಧ್ಯಪ್ರದೇಶ
ಒಡಿಸ್ಸಾ
ಮಹಾರಾಷ್ಟ್ರ
ಭಾರತದ
ಭೌಗೋಳಿಕ ಕೇಂದ್ರ
ತೆಲಂಗಾಣ
ಕಾಕಿನಾಡ
ಅರಬ್ಬೀಸಮುದ್ರ
ಆಂಧ್ರಪ್ರದೇಶ
ಕರ್ನಾಟಕ
ಬಂಗಾಳಕೊಲ್ಲಿ
ಅಂಡಮಾನ್ ಮತ್ತು
ನಿಕೋಬಾರ್ ದ್ವೀಪಗಳು
ಲಕ್ಷದ್ವೀಪ
ತಮಿಳುನಾಡು
ಪಾಕ್ ಜಲಸಂಧಿ
ಮನ್ನಾರ
ಕೊಲ್ಲಿ
ಕನ್ಯಾಕುಮಾರಿ
ಶ್ರೀಲಂಕಾ
N
100 0 200 400 600 800 km
ಇಂದಿರಾ ಪಾಯಿಂಟ್
(ಪಿಗ್ಮೇಲಿಯನ್ ಪಾಯಿಂಟ್)

ಗಾತ್ರ (Size) : ಭಾರತವು ಒಟ್ಟು 32,87,263 (ಅಂದರೆ 32.87 ಲಕ್ಷ) ಚದರ ಕಿ.ಮಿಗಳಷ್ಟು ವಿಸ್ತಾರವಾಗಿದೆ. ಭೂಕ್ಷೇತ್ರದ ದೃಷ್ಟಿಯಿಂದ ಇದು ಪ್ರಪಂಚದ ಏಳನೆಯ ದೊಡ್ಡ ರಾಷ್ಟ್ರ. ಪ್ರಪಂಚದ ಭೂಕ್ಷೇತ್ರದ ಶೇ 2.4 ರಷ್ಟನ್ನು ಒಳಗೊಂಡಿದೆ. ಇದರಲ್ಲಿ ಒಟ್ಟು 29 ರಾಜ್ಯ ಹಾಗೂ 6 ಕೇಂದ್ರಾಡಳಿತ ಪ್ರದೇಶಗಳಿವೆ. 'ದೆಹಲಿಯನ್ನು ರಾಷ್ಟ್ರೀಯ ರಾಜಧಾನಿ ಪ್ರದೇಶ' **(NCT- National Capital Territory)** ಎಂದು ಕರೆಯಲಾಗಿದೆ. ಭಾರತವು 2011 ರ ಜನಗಣತಿಯ ಪ್ರಕಾರ 121 ಕೋಟಿ ಜನಸಂಖ್ಯೆಯನ್ನು ಒಳಗೊಂಡಿದೆ. ಇದು ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ 17.5 ರಷ್ಟಿರುವುದು. ಪ್ರಪಂಚದಲ್ಲಿ ಭಾರತವು ಚೈನಾ ದೇಶದ ನಂತರ ಎರಡನೆಯ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರವಾಗಿದೆ.

ಅಕ್ಷಾಂಶಿಕ ಸ್ಥಾನ : ಭಾರತವು 8^0 4' ಉತ್ತರ ಅಕ್ಷಾಂಶದಿಂದ 37^0 6' ಉತ್ತರ ಅಕ್ಷಾಂಶದವರೆಗೆ ಹರಡಿದೆ. ದಕ್ಷಿಣದ ಕನ್ಯಾಕುಮಾರಿ ಭೂಶಿರದಿಂದ ಉತ್ತರದ ಕಾಶ್ಮೀರದವರೆಗೆ 3214 ಕಿ.ಮೀ ಉದ್ದವಾಗಿದೆ. ದ್ವೀಪಗಳನ್ನು ಪರಿಗಣಿಸಿದಾಗ ಗ್ರೇಟ್ ನಿಕೋಬಾರ್ ದ್ವೀಪದ **'ಇಂದಿರಾ ಪಾಯಿಂಟ್'** 6^0 45' ಉತ್ತರ ಅಕ್ಷಾಂಶದಲ್ಲಿದ್ದು ಭಾರತದ ಅತ್ಯಂತ ದಕ್ಷಿಣದ ಭಾಗವಾಗಿದೆ. $23\frac{1}{2}^0$ ಉತ್ತರ ಅಕ್ಷಾಂಶ (ಕರ್ಕಾಟಕ ಸಂಕ್ರಾಂತಿ ವೃತ್ತ) ಭಾರತದ ಮಧ್ಯಭಾಗದಲ್ಲಿ ಹಾಯ್ದು ಹೋಗುತ್ತದೆ.

ರೇಖಾಂಶಿಕ ಸ್ಥಾನ : ರೇಖಾಂಶದ ವಿಸ್ತರಣೆಯನ್ನು ನೋಡಿದಾಗ ಭಾರತವು 68^0 7' ಪೂರ್ವ ರೇಖಾಂಶದಿಂದ 97^0 25' ಪೂರ್ವ ರೇಖಾಂಶಗಳವರೆಗೆ ಹಬ್ಬಿದೆ. ಇದು 2933 ಕಿ.ಮೀಗಳಷ್ಟು ಪೂರ್ವ ಪಶ್ಚಿಮವಾಗಿ ಹಬ್ಬಿದೆ. $82\frac{1}{2}^0$ ಪೂರ್ವ ರೇಖಾಂಶವನ್ನು ಆಧರಿಸಿ (ಅಲಹಾಬಾದ್) ಭಾರತದ ವೇಳೆಯನ್ನು ನಿರ್ಧರಿಸಲಾಗುತ್ತಿದೆ. ಇದು ಗ್ರೀನ್‌ವಿಚ್ (0^0 ರೇಖಾಂಶ) ಕಾಲಮಾನಕ್ಕಿಂತ 5 ಘಂಟೆ 30 ನಿಮಿಷ ಮುಂದೆ ಇರುವುದು.

ಭೂಮೇರೆಗಳು ಮತ್ತು ನೆರೆಯ ರಾಷ್ಟ್ರಗಳು :

ಭಾರತವು ಒಂದು ಪರ್ಯಾಯ ದ್ವೀಪವಾಗಿದ್ದು ಇದು ಭೂ ಮತ್ತು ಜಲ ಮೇರೆಗಳೆರಡನ್ನೂ ಒಳಗೊಂಡಿದೆ. ಭಾರತವು 15200 ಕಿ.ಮೀ. ಭೂಗಡಿ ಹಾಗೂ 6100 ಕಿ.ಮೀ ಕರಾವಳಿಯನ್ನು ಹೊಂದಿದೆ.

ಭಾರತವು ಏಳು ರಾಷ್ಟ್ರಗಳೊಡನೆ ಭೂಗಡಿರೇಖೆಯನ್ನು ಹಂಚಿಕೊಂಡಿದೆ. ವಾಯವ್ಯದಲ್ಲಿ ಪಾಕಿಸ್ತಾನ ಮತ್ತು ಅಫಘಾನಿಸ್ತಾನ, ಉತ್ತರದಲ್ಲಿ ಚೈನಾ, ನೇಪಾಳ ಮತ್ತು ಭೂತಾನ್ ಹಾಗೂ ಪೂರ್ವದಲ್ಲಿ ಮಯನ್ಮಾರ್ (ಬರ್ಮಾ) ಹಾಗೂ ಬಾಂಗ್ಲಾ ದೇಶಗಳೊಡನೆ ಭೂಗಡಿಯನ್ನು ಹೊಂದಿದೆ. ಇದಲ್ಲದೆ ದೇಶದ ದಕ್ಷಿಣದಲ್ಲಿರುವ ಶ್ರೀಲಂಕಾ ಹಾಗೂ ನೈರುತ್ಯದಲ್ಲಿರುವ ಮಾಲ್ಡೀವ್ಸ್ ದ್ವೀಪಗಳೂ ಸಹ ಭಾರತದ ನೆರೆಯ ರಾಷ್ಟ್ರಗಳಾಗಿವೆ.

ನಿಮಗೆ ಇದು ತಿಳಿದಿರಲಿ

ಭಾರತದ ನೆರೆಯ ರಾಷ್ಟ್ರಗಳು

ರಾಷ್ಟ್ರಗಳು	ಭಾರತದೊಡನೆ ಗಡಿ ರೇಖೆಯ ಉದ್ದ ಕಿ.ಮೀ
ಪಾಕಿಸ್ತಾನ	3310
ಅಫಘಾನಿಸ್ತಾನ	80
ಚೈನಾ	3917
ನೇಪಾಳ	1752
ಭೂತಾನ್	587
ಮಯನ್ಮಾರ್	1458
ಬಾಂಗ್ಲಾದೇಶ	4096
ಶ್ರೀಲಂಕಾ	--
ಮಾಲ್ಡೀವ್ಸ್	--
ಭಾರತ	**15200**

ಚಟುವಟಿಕೆ :

ನಿಮ್ಮ ಜಿಲ್ಲೆಯ ನೆರೆಹೊರೆಯ ಜಿಲ್ಲೆಗಳನ್ನು ಗುರುತಿಸಿ.

ನಿಮಗೆ ಇದು ತಿಳಿದಿರಲಿ

- *ಭಾರತ ಮತ್ತು ಪಾಕಿಸ್ತಾನದ ನಡುವೆ ಇರುವ ಗಡಿರೇಖೆ 'ರ್‍ಯಾಡ್‌ಕ್ಲಿಫ್' (Rad cliff) ರೇಖೆ*
- *ಭಾರತ ಮತ್ತು ಚೈನಾದ ನಡುವೆ ಇರುವ ಗಡಿರೇಖೆ 'ಮ್ಯಾಕ್‌ಮಹೋನ್' (Mc Mahon) ರೇಖೆ*
- *ಭಾರತ ಮತ್ತು ಅಫಘಾನಿಸ್ತಾನದ ನಡುವೆ ಇರುವ ಗಡಿ 'ಡ್ಯೂರ್‍ಯಾಂಡ್' (Durrand) ರೇಖೆ*

ಅಭ್ಯಾಸಗಳು

I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿರಿ.

1) ಇಂಡಿಯಾ ಎಂಬ ಹೆಸರು __________ ನದಿಯಿಂದ ಬಳಕೆಗೆ ಬಂದಿದೆ.

2) ಭಾರತವು ಒಟ್ಟು __________ ಚದರ ಕಿ.ಮೀಗಳಷ್ಟು ವಿಸ್ತಾರವಾಗಿದೆ.

3) ಭಾರತದ ಮಧ್ಯಭಾಗದಲ್ಲಿ__________ಉತ್ತರ ಅಕ್ಷಾಂಶ ಹಾಯ್ದು ಹೋಗುತ್ತದೆ.

4) ಭಾರತದ ದಕ್ಷಿಣ ತುದಿಯಲ್ಲಿರುವ ದೇಶ __________ .

5) ಭಾರತವು ಹೊಂದಿರುವ ಉದ್ದವಾದ ಕರಾವಳಿಯು__________ಕಿ.ಮೀ.ಗಳಷ್ಟು ಆಗಿದೆ.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.

1) ಭಾರತವು ಏಷ್ಯಾ ಖಂಡದ ಯಾವ ಭಾಗದಲ್ಲಿದೆ?

2) ಭಾರತವು ಭೂಮಿಯ ಯಾವ ಗೋಳಾರ್ಧದಲ್ಲಿದೆ?

3) ಭಾರತದ ಭೂರಾಶಿಯ ದಕ್ಷಿಣ ತುದಿ ಯಾವುದು?

4) ಭಾರತದ ದಕ್ಷಿಣದ ಭಾಗದ ಭೂಶಿರದ ಹೆಸರೇನು?

5) ಭಾರತದ ಮಧ್ಯಭಾಗದಲ್ಲಿ ಹಾಯ್ದು ಹೋಗುವ ಮುಖ್ಯ ಅಕ್ಷಾಂಶ ಯಾವುದು?

6) ಇಂದಿರಾಪಾಯಿಂಟ್ ಯಾವ ದ್ವೀಪದಲ್ಲಿದೆ?

III. ಚಟುವಟಿಕೆಗಳು :

1) ಭಾರತದ ನಕ್ಷೆಯನ್ನು ಬರೆದು ಅಕ್ಷಾಂಶ ಮತ್ತು ರೇಖಾಂಶಿಕ ಸ್ಥಾನವನ್ನು ಹಾಗೂ ಮಧ್ಯಭಾಗದಲ್ಲಿ ಹಾಯ್ದುಹೋಗಿರುವ $23\frac{1}{2}^0$ ಅಕ್ಷಾಂಶಿಕ ರೇಖೆಯನ್ನು ಗುರುತಿಸಿರಿ.

IV. ಯೋಜಿತ ಕಾರ್ಯ :

1) ಭಾರತದ ನಕ್ಷೆಯನ್ನು ಬರೆದು ಅದರಲ್ಲಿ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳನ್ನು ನಿಮ್ಮ ಬೋಧಕರ ಸಹಾಯದಿಂದ ಗುರುತಿಸಿ.

2) ಭಾರತದ ನಕ್ಷೆ ಬರೆದು, ನೆರೆಯ ರಾಷ್ಟ್ರಗಳನ್ನು ಗುರುತಿಸಿ.

ಅಧ್ಯಾಯ–2

ಭಾರತದ ಪ್ರಾಕೃತಿಕ ಲಕ್ಷಣಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭಾರತದ ಪ್ರಾಕೃತಿಕ ಲಕ್ಷಣಗಳು.*
- *ಭಾರತದ ಪ್ರಾಕೃತಿಕ ವಿಭಾಗಗಳು.*
- *ಎತ್ತರವಾದ ಪರ್ವತಗಳು, ಬೆಟ್ಟಗಳು, ಮೈದಾನಗಳು, ಕರಾವಳಿಗಳು.*

ಭಾರತವು ವಿವಿಧ ಬಗೆಯ ಭೂಸ್ವರೂಪಗಳನ್ನು ಒಳಗೊಂಡಿದೆ. ಈ ಸ್ವರೂಪಗಳು ದೇಶದ ವಿವಿಧ ಭಾಗಗಳಲ್ಲಿ ಕಂಡು ಬರುತ್ತವೆ. ಇವುಗಳ ಭೂಇತಿಹಾಸ ವಿವಿಧ ಅವಧಿಗಳಲ್ಲಿ ನಿರ್ಮಿತವಾಗಿದ್ದು, ಭೂರಚನೆ ಹಾಗೂ ಮೇಲ್ಮೈ ಲಕ್ಷಣಗಳಲ್ಲಿ ವ್ಯತ್ಯಾಸಗಳನ್ನು ಹೊಂದಿದೆ. ಇವುಗಳನ್ನು ಆಧರಿಸಿ ದೇಶವನ್ನು ನಾಲ್ಕು ಪ್ರಧಾನ ಭೂಸ್ವರೂಪ ವಿಭಾಗಳಾಗಿ ವಿಂಗಡಿಸಬಹುದು.

1) ಉತ್ತರದ ಪರ್ವತಗಳು :

ಉತ್ತರದಲ್ಲಿರುವ ಹಿಮಾಲಯ ಪರ್ವತ ಶ್ರೇಣಿಯು ಜಗತ್ತಿನಲ್ಲಿಯೇ ಅತಿ ಎತ್ತರವಾದ ಶಿಖರಗಳನ್ನು ಆಳವಾದ ಕಣಿವೆಗಳನ್ನು, ಹಿಮನದಿ ಮುಂತಾದವುಗಳನ್ನು ಹೊಂದಿದೆ. ಹಿಮಾಲಯ ಪರ್ವತ ಶ್ರೇಣಿಯು ಪಾಮಿರ್ ಗ್ರಂಥಿಯಿಂದ ಪ್ರಾರಂಭವಾಗಿ ಪೂರ್ವದಲ್ಲಿ ಅರುಣಾಚಲದವರೆಗೆ ಸುಮಾರು 2500 ಕಿಮೀ ಉದ್ದವಾಗಿ ಹಬ್ಬಿದೆ. ಈ ಮಡಿಕೆ ಪರ್ವತ ಶ್ರೇಣಿಗಳು ಮೂರು ಪ್ರಮುಖ ಶ್ರೇಣಿಗಳನ್ನು ಒಳಗೊಂಡಿದೆ. ಇವುಗಳೆಂದರೆ ಅ) ಶಿವಾಲಿಕ್ ಶ್ರೇಣಿ (ಹಿಮಾಲಯದ ಪಾದ ಬೆಟ್ಟಗಳು), ಬ) ಹಿಮಾಚಲ (ಮಧ್ಯ ಹಿಮಾಲಯ), ಕ) ಮಹಾಹಿಮಾಲಯ (ಹಿಮಾದ್ರಿ).

ಅ) ಶಿವಾಲಿಕ್ ಶ್ರೇಣಿ : ಇದು ಹಿಮಾಲಯ ಪರ್ವತಗಳಲ್ಲಿ ಇತ್ತೀಚೆಗೆ ನಿರ್ಮಿತವಾದುದು. ಇದು ಅತ್ಯಂತ ದಕ್ಷಿಣದಲ್ಲಿರುವ ಸರಣಿ ಹಾಗೂ ಅತಿ ಕಡಿಮೆ ಎತ್ತರವನ್ನು ಹೊಂದಿದೆ. ಇದನ್ನು ಹಿಮಾಲಯದ **ಪಾದ ಬೆಟ್ಟಗಳು** ಎಂದೂ ಸಹ ಕರೆಯುವರು. ಇಲ್ಲಿ ಸಮತಟ್ಟಾದ ಕಿರಿದಾದ ಮೈದಾನಗಳಿವೆ. ಈ ಮೈದಾನಗಳನ್ನು ಡೂನ್‌ಗಳು ಎಂದು ಕರೆಯುವರು. ಉದಾ : ಡೆಹರಾ ಡೂನ್, ಕೋಟಾ, ಪಾಟ್ಲಿ ಚೌಕಾಂಬಾ, ಉದಾಂಪೂರ ಮತ್ತು ಕೋಟ್ಲಾಗಳು. ಇವು ಸಮುದ್ರದಿಂದ 600–1500 ಮಿ.ಗಳಷ್ಟು ಎತ್ತರವಾಗಿವೆ.

ಬ) ಹಿಮಾಚಲ (ಮಧ್ಯ ಹಿಮಾಲಯ) : ಇದು ಮಹಾ ಹಿಮಾಲಯ ಮತ್ತು ಶಿವಾಲಿಕ್ ಬೆಟ್ಟಗಳ ನಡುವೆ ಸುಮಾರು 3600 ಮೀ.ಗಳಿಂದ 4500 ಮೀ ಗಳಷ್ಟು ಸರಾಸರಿ ಎತ್ತರವನ್ನು ಹೊಂದಿವೆ. ಇವು 60 ರಿಂದ 80 ಕಿ.ಮೀ ಅಗಲವಾಗಿವೆ. ಇಲ್ಲಿ ಅನೇಕ ಸಮಾನಾಂತರ ಪರ್ವತ ಶ್ರೇಣಿಗಳಿವೆ. ಉದಾಹರಣೆಗೆ ಪೀರ್‌ಪಂಜಾಲ, ಮಹಾಭಾರತಶ್ರೇಣಿ, ನಾಗತಿಬ್ಬ, ಮಸ್ಸೋರಿ ಇತ್ಯಾದಿ. ಕಂಗ್ರಾ, ಕುಲು ಇವು ಪ್ರಸಿದ್ಧ ಕಣಿವೆಗಳಾಗಿವೆ. ಶಿಮ್ಲಾ, ಮಸ್ಸೂರಿ, ನೈನಿತಾಲ್, ರಾಣಿಖೇಟ್, ಚಕ್ರಾತ ಮತ್ತು ಡಾರ್ಜಿಲಿಂಗ್ ಇತ್ಯಾದಿ ಗಿರಿಧಾಮಗಳಿವೆ.

ಕ) ಮಹಾ ಹಿಮಾಲಯ (ಹಿಮಾದ್ರಿ) : ಇದು ಹಿಮಾಲಯ ಪರ್ವತಗಳಲ್ಲಿ ಅತಿ ಎತ್ತರವಾದ ಹಾಗೂ ಮೊದಲು ನಿರ್ಮಿತಗೊಂಡಿರುವ ಸರಣಿಯಾಗಿದೆ. ಇದು ಸಂಪೂರ್ಣವಾಗಿ **ಹಿಮದಿಂದ ಆವೃತವಾಗಿದೆ.** ಆದುದರಿಂದ ಇದನ್ನು **ಹಿಮಾದ್ರಿ** ಎಂದು ಕರೆಯುತ್ತಾರೆ. ಸಮುದ್ರ ಮಟ್ಟದಿಂದ ಈ ಶ್ರೇಣಿಯು 6000 ಮೀ.ದಿಂದ 8000 ಮೀ.ಗಿಂತಲೂ ಹೆಚ್ಚು ಎತ್ತರವಾಗಿದೆ. ಹಿಮಾಲಯದಲ್ಲಿ ಅತ್ಯಂತ ಎತ್ತರವಾದ ಶಿಖರಗಳು ಇವೆ. ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾದ **ಮೌಂಟ್ ಎವರೆಸ್ಟ** (8848 ಮೀ) ನೇಪಾಳ ಮತ್ತು ಟಿಬೆಟ್ ಮಧ್ಯದಲ್ಲಿದೆ. ಈ ಸರಣಿಯಲ್ಲಿರುವ ಇತರೆ ಮುಖ್ಯ ಶಿಖರಗಳೆಂದರೆ ಕಾಂಚನ ಗಂಗಾ, ಧವಳಗಿರಿ, ನಂದಾದೇವಿ ಗೌರಿಶಂಕರ. ಇವು ಅನೇಕ ಹಿಮನದಿಗಳನ್ನು ಹೊಂದಿವೆ. ಅವುಗಳಲ್ಲಿ ಗಂಗೋತ್ರಿ ಪ್ರಸಿದ್ಧವಾಗಿದ್ದು ಗಂಗಾನದಿಯ ಉಗಮ ಸ್ಥಾನವಾಗಿದೆ. ಕಾಶ್ಮೀರದ ಬುರ್ಜಿಲ್, ಜೋಜಿಲಾ, ಹಿಮಾಚಲ ಪ್ರದೇಶದ ಬಾರಾಲಾಘ್‌ಚ, ಮುಂತಾದ ಕಣಿವೆ ಮಾರ್ಗಗಳು ಉತ್ತಮ ಸಂಚಾರ ಸೌಲಭ್ಯವನ್ನು ಒದಗಿಸಿರುವುದಲ್ಲದೆ, ಪ್ರವಾಸಿಗರಿಗೆ ಆಕರ್ಷಣೀಯ ಕೇಂದ್ರಗಳಾಗಿವೆ.

ಮಹಾ ಹಿಮಾಲಯ ಸರಣಿಯ ಉತ್ತರಕ್ಕಿರುವ ಮಡಿಕೆ ಪರ್ವತಗಳನ್ನು ಹೊರ ಹಿಮಾಲಯವೆಂದು ಕರೆಯುತ್ತಾರೆ. ಇದರಲ್ಲಿ ಕಾರಾಕೋರಮ್ ಪರ್ವತಶ್ರೇಣಿ ಹಾಗೂ ಕೈಲಾಸ ಪರ್ವತಗಳಿವೆ. ಗಾಡ್ವಿನ್‌ಆಸ್ಟಿನ್ ಅಥವಾ K_2 ಎಂಬುದು ಭಾರತದಲ್ಲಿ ಅತಿ ಎತ್ತರವಾದ (8611ಮೀ) ಶಿಖರವಾಗಿದೆ. **'ಲಡಾಕ'** ಪ್ರಸ್ಥಭೂಮಿಯೂ ಇದೇ ಪ್ರದೇಶದಲ್ಲಿ ಕಂಡು ಬರುತ್ತದೆ.

ಹಿಮಾಲಯದ ಮಹತ್ವ : ಹಿಮಾಲಯ ಪರ್ವತ ಶ್ರೇಣಿಗಳು ಭಾರತದ ಜನಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರುತ್ತವೆ. ಇವು ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ. ಏಷ್ಯಾದಿಂದ ಬೀಸುವ ಶೀತಗಾಳಿಗಳನ್ನು ತಡೆಹಿಡಿಯುತ್ತವೆ. ನದಿಗಳ ಉಗಮ ಪ್ರದೇಶವಾಗಿವೆ. ಜಲವಿದ್ಯುತ್‌ಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ. ಇದು ವಿಶಾಲವಾದ ಮೈದಾನಗಳನ್ನು ನಿರ್ಮಿಸಿವೆ. ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಗಳಿಗೆ ಆಶ್ರಯ ತಾಣವಾಗಿದೆ. ಅಪಾರ ಪ್ರಮಾಣದ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿವೆ ಹಾಗೂ ಪ್ರವಾಸೋದ್ದಿಮೆ ಮತ್ತು ಧಾರ್ಮಿಕ ಕೇಂದ್ರಗಳಿಗೆ ಪ್ರಾಮುಖ್ಯತೆಯನ್ನು ಪಡೆದಿದೆ.

2. ಉತ್ತರದ ಮಹಾ ಮೈದಾನ :


ಉತ್ತರ ಭಾರತದ ಮಹಾ ಮೈದಾನವನ್ನು ಸಟ್ಲೇಜ್ ಗಂಗಾ ಮೈದಾನ ವೆಂತಲೂ ಕರೆಯುವರು. ಇದು ಉತ್ತರದಲ್ಲಿ ಹಿಮಾಲಯ ಪರ್ವತಗಳು ಹಾಗೂ ದಕ್ಷಿಣದಲ್ಲಿ ಪರ್ಯಾಯ ಪ್ರಸ್ಥಭೂಮಿಯ ನಡುವೆ ಕಂಡು ಬರುವುದು. ಈ ಮೈದಾನವು ಪಶ್ಚಿಮದ ಸಿಂಧೂ ನದಿಯ ಮೈದಾನದಿಂದ ಪೂರ್ವದಲ್ಲಿ ಬ್ರಹ್ಮಪುತ್ರ ಕಣಿವೆಯುವರೆಗೂ ವಿಸ್ತರಿಸಿದೆ. ಪಶ್ಚಿಮದಿಂದ ಪೂರ್ವಕ್ಕೆ ಸುಮಾರು 2400 ಕಿ.ಮೀ ಉದ್ದವಾಗಿರುವ ಈ ಮೈದಾನವು 70 ರಿಂದ 500 ಕಿ.ಮೀ. ಅಗಲವಾಗಿದೆ. ಈ ಮೈದಾನವು ಬಹುತೇಕವಾಗಿ ಸಮತಟ್ಟಾಗಿದೆ. ಉತ್ತರ ಭಾರತದ ಮೈದಾನವು, ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿರುವ **ಸಂಚಯನ ಮೈದಾನ**ವಾಗಿದೆ.

ನಿಮಗೆ ತಿಳಿದಿರಲಿ :

ಬಬರ್, ಭಂಗರ್ ಮತ್ತು ಖದರ್ : *ಹಿಮಾಲಯದ ತಪ್ಪಲಿನಲ್ಲಿ ನದಿಗಳು ಮೈದಾನವನ್ನು ಪ್ರವೇಶಿಸುವ ಕಡೆ ಅವುಗಳು ಹೊತ್ತು ತಂದ ದಪ್ಪ ಶಿಲಾ ಚೂರುಗಳನ್ನು ಸಂಚಯಿಸಿದೆ. ಇದನ್ನೆ* ***ಬಬರ್*** *ಎಂದು ಕರೆಯುವರು. ಪುರಾತನ ಕಾಲದಲ್ಲಿ ಸಂಚಯಿತವಾಗಿರುವ ಮೆಕ್ಕಲು ಮಣ್ಣಿನ ವಲಯವನ್ನು* ***ಭಂಗರ್*** *ಎಂದು ಕರೆಯುವರು. ಇತ್ತೀಚಿನ ಅವಧಿಯಲ್ಲಿ ಸಂಚಯಿತಗೊಂಡು ನಿರ್ಮಿತವಾಗಿರುವ ಮೆಕ್ಕಲು ಮಣ್ಣನ್ನು* ***ಖದರ್*** *ಎಂದು ಕರೆಯುವರು.*

3) ಪರ್ಯಾಯ ಪ್ರಸ್ಥಭೂಮಿ :

ಪರ್ಯಾಯ ಪ್ರಸ್ಥಭೂಮಿಯು ಭಾರತದ ಭೂಸ್ವರೂಪ ವಿಭಾಗಗಳಲ್ಲಿ ಅತಿ ದೊಡ್ಡದು. ಅಲ್ಲದೆ ಭೂ ಇತಿಹಾಸದ ಪ್ರಕಾರ ಇದು 'ಅತಿ ಪುರಾತನ'ವಾಗಿದ್ದು ಭೂ ಖಂಡಗಳ ಆರಂಭದಲ್ಲಿದ್ದ ಗೊಂಡ್ವಾನ ಭೂರಾಶಿಯ ಒಂದು ಭಾಗವಾಗಿದೆಯೆಂದು ಭೂವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ.



ಈ ಪ್ರಸ್ಥಭೂಮಿಯು ಸಟ್ಲಜ್‌ಗಂಗಾ ಮೈದಾನದ ದಕ್ಷಿಣದಲ್ಲಿ ಹಿಂದೂಮಹಾಸಾಗರದವರೆಗೂ ಚಾಚಿಕೊಂಡಿದೆ. ಇದರ ಒಟ್ಟು ಕ್ಷೇತ್ರ ಸುಮಾರು 16 ಲಕ್ಷ ಚ.ಕಿ.ಮೀ. ಇದು ಉತ್ತರದಲ್ಲಿ ಅರಾವಳಿ ಪರ್ವತದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೂ ಹರಡಿದೆ. ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳಿಂದ ಪೂರ್ವದಲ್ಲಿ 'ಜಾರ್ಖಂಡ್'ನ ರಾಜಮಹಲ್ ಬೆಟ್ಟಗಳವರೆಗೆ ಸುಮಾರು 1400 ಕಿ.ಮೀ ಅಗಲವಾಗಿದೆ. ಈ ಪರ್ಯಾಯ ಪ್ರಸ್ಥಭೂಮಿಯು ತ್ರಿಕೋನಾಕೃತಿಯಲ್ಲಿದ್ದು ಉತ್ತರದಲ್ಲಿ ಅಗಲವಾಗಿದ್ದು ದಕ್ಷಿಣದ ಕಡೆಗೆ ಕಿರಿದಾಗಿದೆ. ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಪೂರ್ವದಲ್ಲಿ ಬಂಗಾಳಕೊಲ್ಲಿ ಹಾಗೂ ದಕ್ಷಿಣದಲ್ಲಿ ಹಿಂದೂ ಮಹಾಸಾಗರಗಳನ್ನು ಇದು ಒಳಗೊಂಡಿದೆ.

ಈ ಪ್ರಸ್ಥಭೂಮಿಯ ಉತ್ತರಭಾಗದಲ್ಲಿ ಪ್ರಮುಖವಾಗಿ ವಿಂಧ್ಯ ಪರ್ವತಗಳು, ಸಾತ್ಪುರಾ ಬೆಟ್ಟ, ಅರಾವಳಿ ಬೆಟ್ಟಗಳು, ಮಾಳ್ವಾ ಪ್ರಸ್ಥಭೂಮಿ, ಛೋಟಾನಾಗಪುರ ಪ್ರಸ್ಥಭೂಮಿಗಳಿದ್ದು ಇವುಗಳ ಮಧ್ಯದಲ್ಲಿ ನರ್ಮದಾ ಮತ್ತು ತಪತಿ ನದಿ ಹಾಗೂ ದಾಮೋದರನದಿಗಳಲ್ಲದೇ ಅನೇಕ ಚಿಕ್ಕ ನದಿಗಳು ಹರಿಯುತ್ತವೆ. ಇವೆಲ್ಲವುಗಳನ್ನು ಕೇಂದ್ರ ಪ್ರಸ್ಥಭೂಮಿ ಎನ್ನುವರು. ಇವುಗಳ ದಕ್ಷಿಣದಲ್ಲಿ ದಖನ್ ಪ್ರಸ್ಥಭೂಮಿಯಿದ್ದು, ಮಹಾದೇವ, ಮೈಕಲ ಶ್ರೇಣಿ, ಅಮರಕಂಟಕ ಬೆಟ್ಟಗಳು, ರಾಜಮಹಲ ಬೆಟ್ಟಗಳು ಇದರ ಉತ್ತರದಲ್ಲಿವೆ. ದಖನ್ ಪ್ರಸ್ಥಭೂಮಿಯ ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳಿವೆ. ಇವುಗಳನ್ನು ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಸಹ್ಯಾದ್ರಿ ಎಂದು ಕರೆಯುತ್ತಾರೆ. ಅಣ್ಣಾಮಲೈ ಸರಣಿಯ 'ಅನೈಮುಡಿ' (2665 ಮೀಟರ) ಶಿಖರ ದಕ್ಷಿಣ ಭಾರತದಲ್ಲಿಯೇ ಅತ್ಯುನ್ನತ ಪ್ರದೇಶವಾಗಿದೆ. ದಖನ್ ಪ್ರಸ್ಥಭೂಮಿಯ ಪೂರ್ವಕ್ಕೆ ಪೂರ್ವಘಟ್ಟಗಳಿವೆ. ಅವು ಪಶ್ಚಿಮ ಘಟ್ಟಗಳನ್ನು ನೀಲಗಿರಿ ಬೆಟ್ಟಗಳಲ್ಲಿ ಸಂಧಿಸುತ್ತವೆ. ಪೂರ್ವ ಘಟ್ಟಗಳು ಹೆಚ್ಚು ಎತ್ತರವಾಗಿಲ್ಲ ಮತ್ತು ನಿರಂತರವಾಗಿಯೂ ಇಲ್ಲ. ಈ ಘಟ್ಟಗಳು ನದಿ ಕಣಿವೆಗಳಿಂದ ಅಲ್ಲಲ್ಲಿ ಪ್ರತ್ಯೇಕಿಸಲ್ಪಟ್ಟಿವೆ.

ಈ ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ಏಕೆಂದರೆ ಇಲ್ಲಿ ಅಪಾರವಾದ ಖನಿಜ ಸಂಪನ್ಮೂಲಗಳಿವೆ. ಇಲ್ಲಿನ ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಅನುಕೂಲವಾಗಿವೆ.

4) ಕರಾವಳಿ ಮೈದಾನಗಳು :

ಭಾರತವು ದ್ವೀಪಗಳನ್ನು ಹೊರತುಪಡಿಸಿ 6100 ಕಿ.ಮೀ ಉದ್ದ ಕರಾವಳಿಯನ್ನು ಹೊಂದಿದೆ. ಇದು ಪಶ್ಚಿಮದಲ್ಲಿ ಗುಜರಾತಿನ ಕಛ್ ಪ್ರದೇಶದಿಂದ ಪೂರ್ವದಲ್ಲಿ ಗಂಗಾ ನದಿಯ ಮುಖಜಭೂಮಿಯವರೆಗೂ ವಿಸ್ತರಿಸಿದೆ. ತೀರ ಪ್ರದೇಶದ ಉದ್ದಕ್ಕೂ ಕಂಡು ಬರುವ ಕಿರಿದಾದ ಮೈದಾನವನ್ನು ಕರಾವಳಿ ಮೈದಾನವೆಂದು ಕರೆಯುವರು. ಭಾರತದ ಕರಾವಳಿಯನ್ನು 'ಪಶ್ಚಿಮ ಕರಾವಳಿ' ಮತ್ತು 'ಪೂರ್ವ ಕರಾವಳಿ' ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ.

ಪಶ್ಚಿಮ ಕರಾವಳಿಯು ಅರಬ್ಬೀ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಗುಜರಾತಿನ ಕಛ್‌ನಿಂದ ಕನ್ಯಾಕುಮಾರಿ ಭೂಶಿರದವರೆಗೆ 1500 ಕಿ.ಮೀ.ಗಳಷ್ಟು ಉದ್ದವಾಗಿದೆ. ಇದನ್ನು ಕೇರಳದಲ್ಲಿ ಮಲಬಾರ್ ತೀರ, ಕರ್ನಾಟಕದಲ್ಲಿ ಕರ್ನಾಟಕ ಅಥವಾ ಕೆನರಾತೀರ, ಗೋವಾ ಮತ್ತು ಮಹಾರಾಷ್ಟ್ರದಲ್ಲಿ ಕೊಂಕಣತೀರ ಮತ್ತು ಗುಜರಾತಿನಲ್ಲಿ ಗುಜರಾತ್ ತೀರ ಎಂದು ವಿಂಗಡಲಿಸಲಾಗಿದೆ. ಮುಂಬೈ, ಮಾರ್ಮಗೋವಾ, ಕೊಚ್ಚಿನ್, ಕಾಂಡ್ಲಾ, ಕಾರವಾರ, ಮಂಗಳೂರು ಇಲ್ಲಿನ ಮುಖ್ಯ ಬಂದರುಗಳಾಗಿವೆ. ಕನ್ಯಾಕುಮಾರಿಯಿಂದ ಉತ್ತರದಲ್ಲಿ ಗಂಗಾನದಿ ಮುಖಜ ಭೂಮಿಯವರೆಗೆ ಪೂರ್ವ ಘಟ್ಟಗಳು ಹಬ್ಬಿವೆ. ಪೂರ್ವ ಘಟ್ಟ ಹಾಗೂ ಬಂಗಾಳಕೊಲ್ಲಿಯ ನಡುವೆ ಪೂರ್ವ ಕರಾವಳಿ ಮೈದಾನವಿದೆ. ಈ ಕರಾವಳಿಯ ಮೈದಾನವು ಹೆಚ್ಚು ಅಗಲ ಮತ್ತು ಒಂದೇ ರೀತಿ ಸಮತಟ್ಟಾಗಿದೆ. ಇದು ಮಹಾನದಿ, ಗೋದಾವರಿ, ಕೃಷ್ಣಾ ಮತ್ತು ಕಾವೇರಿ ನದಿಗಳ ಮುಖಜ ಭೂಮಿಗಳನ್ನು ಒಳಗೊಂಡಿದೆ. ಪೂರ್ವ ತೀರದಲ್ಲಿ ಸಮುದ್ರದ ಉಪ್ಪು ನೀರಿನಿಂದ ನಿರ್ಮಿತವಾದ ಕೆಲವು ಸರೋವರ ಅಥವಾ ಲಗೂನ್‌ಗಳಿವೆ. ಇವುಗಳಲ್ಲಿ ಒಡಿಸ್ಸಾದ ಚಿಲ್ಕಾ, ತಮಿಳುನಾಡಿನ 'ಪುಲಿಕಾಟ್' ಸರೋವರಗಳು ಮುಖ್ಯವಾಗಿವೆ. ಪೂರ್ವ ಕರಾವಳಿಯನ್ನು ಉತ್ಕಲ ತೀರ ಮತ್ತು ಕೋರಮಂಡಲ ತೀರ ಎಂದು ವಿಂಗಡಿಸಲಾಗಿದೆ.

ದ್ವೀಪಗಳು : ಭಾರತಕ್ಕೆ ಸೇರಿರುವ ಒಟ್ಟು 247 ದ್ವೀಪಗಳಿವೆ. ಅವುಗಳಲ್ಲಿ 204 ದ್ವೀಪಗಳು ಬಂಗಾಳ ಕೊಲ್ಲಿಯಲ್ಲಿ ಮತ್ತು 43 ದ್ವೀಪಗಳು ಅರಬ್ಬಿ ಸಮುದ್ರದಲ್ಲಿವೆ. ಮನ್ನಾರ್ ಖಾರಿಯಲ್ಲಿ ಕೆಲವು ಹವಳದ ದ್ವೀಪಗಳಿವೆ. ಬಂಗಾಳ ಕೊಲ್ಲಿಯಲ್ಲಿರುವ ಅಂಡಮಾನ ನಿಕೋಬಾರ ದ್ವೀಪಗಳು ಗಟ್ಟಿಯಾದ ಜ್ವಾಲಾಮುಖಿ

ನಿರ್ಮಿತ ಶಿಲೆಗಳಿಂದ ಕೂಡಿದೆ. ಲಕ್ಷದ್ವೀಪಗಳು ಹವಳದ ದ್ವೀಪಗಳಾಗಿವೆ. ಭಾರತದ ದಕ್ಷಿಣದ ತುದಿಯು ನಿಕೋಬಾರ ದ್ವೀಪದ ದಕ್ಷಿಣ ತುದಿಯಲ್ಲಿದೆ. ಇದನ್ನು **ಇಂದಿರಾ ಪಾಯಿಂಟ್** ಎಂದು ಕರೆಯುತ್ತಾರೆ.

ಅಭ್ಯಾಸಗಳು

I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.

1) ಭಾರತದ ಭೂಸ್ವರೂಪವನ್ನು ____________ ಪ್ರಧಾನ ವಿಭಾಗಗಳಾಗಿ ವಿಂಗಡಿಸಲಾಗಿದೆ.
2) ಮಹಾ ಹಿಮಾಲಯವನ್ನು ____________ .ಎಂದೂ ಕರೆಯುವರು.
3) ಪ್ರಪಂಚದಲ್ಲಿಯೇ ____________ ಅತ್ಯುನ್ನತ ಶಿಖರವಾಗಿದೆ.
4) ಉತ್ತರ ಭಾರತದ ಮೈದಾನವು ____________ ಮಣ್ಣಿನಿಂದ ನಿರ್ಮಾಣವಾಗಿದೆ.
5) ಕರ್ನಾಟಕದಲ್ಲಿ ಪಶ್ಚಿಮ ಘಟ್ಟಗಳನ್ನು ____________ ಎಂದು ಕರೆಯುವರು.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.

1) ಹಿಮಾಲಯದ ಪಾದ ಬೆಟ್ಟಗಳ ಮತ್ತೊಂದು ಹೆಸರು ಯಾವುದು?
2) ಭಾರತದ ಭೂ ಸ್ವರೂಪ ವಿಭಾಗಗಳಲ್ಲಿ ಯಾವುದು ಇತ್ತೀಚಿನ ಅವಧಿಯಲ್ಲಿ ನಿರ್ಮಿತವಾಗಿದೆ?
3) ಹಿಮಾಲಯ ಪರ್ವತದಿಂದಾಗುವ ಪ್ರಯೋಜನಗಳು ಯಾವುವು?
4) ಪರ್ಯಾಯ ಪ್ರಸ್ಥಭೂಮಿಯು ಹೊಂದಿರುವ ವ್ಯಾಪ್ತಿಯನ್ನು ವಿವರಿಸಿ.
5) ಸಿವಾಲಿಕ್ ಶ್ರೇಣಿಯನ್ನು ಕುರಿತು ಬರೆಯಿರಿ.
6) ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ. ಏಕೆ?

III. ಚಟುವಟಿಕೆ :

1) ಭಾರತದ ನಕ್ಷೆ ಬರೆದು ಪ್ರಮುಖ ಶಿಖರಗಳನ್ನು ಹಾಗೂ ಪಶ್ಚಿಮ, ಪೂರ್ವ ಘಟ್ಟಗಳನ್ನು ಗುರುತಿಸಿ.
2) ಮಂಗಳೂರು, ಧರ್ಮಸ್ಥಳ ಈ ಭಾಗದಲ್ಲಿ ರಸ್ತೆ ಪ್ರಯಾಣಮಾಡಿದಾಗ ಘಟ್ಟ ಪ್ರದೇಶದಲ್ಲಿ ಪ್ರಾಕೃತಿಕವಾಗಿ ಕಾಣುವ ಮತ್ತು ನಿಮಗೆ ಆಗುವ ಅನುಭವಗಳನ್ನು ಶಿಕ್ಷಕರೊಂದಿಗೆ ಹಂಚಿಕೊಳ್ಳಿ.

IV. ಯೋಜನೆ:

1. ಕರ್ನಾಟಕದ ಪಶ್ಚಿಮ ಘಟ್ಟಗಳು ಮತ್ತು ಮಧ್ಯ ಕರ್ನಾಟಕದ ಮೈದಾನ ಪ್ರದೇಶಗಳಲ್ಲಿನ ಸ್ವಾಭಾವಿಕ ವೈವಿಧ್ಯತೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ವಿಶ್ಲೇಷಣೆ ಮಾಡಿರಿ.

ಅಧ್ಯಾಯ–3

ಭಾರತದ ಮಾನ್ಸೂನ್ ವಾಯುಗುಣದ ಋತುಮಾನಗಳು ಮತ್ತು ಲಕ್ಷಣಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭಾರತದ ವಾಯುಗುಣದ ಪ್ರಮುಖ ಲಕ್ಷಣಗಳು.*
- *ಭಾರತದ ಋತುಮಾನಗಳ ವಾಯುಗುಣದ ಪರಿಸ್ಥಿತಿ.*
- *ಭಾರತದ ಋತುಕಾಲಿಕ ಮಳೆಯ ಹಂಚಿಕೆ ಮತ್ತು ಪರಿಣಾಮಗಳು.*

ಭಾರತವು ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣವನ್ನು ಹೊಂದಿದೆ. ಈ ಮಾದರಿಯ ವಾಯುಗುಣದಲ್ಲಿ ಮಾರುತಗಳು ವರ್ಷದ ವಿವಿಧ ಋತುಗಳಲ್ಲಿ ಪರಸ್ಪರ ವಿರುದ್ಧ ದಿಕ್ಕಿನಿಂದ ಬೀಸುತ್ತವೆ.

ವರ್ಷದ ಅರ್ಧಭಾಗ ನೈಋತ್ಯ ದಿಕ್ಕಿನಿಂದ ಈಶಾನ್ಯದ ಕಡೆಗೆ ಬೀಸುವ ಮಾನ್ಸೂನ್ ಮಾರುತಗಳು, ಉಳಿದ ಅವಧಿಯಲ್ಲಿ ಈಶಾನ್ಯದಿಂದ ನೈಋತ್ಯದ ಕಡೆಗೆ ಬೀಸುತ್ತವೆ. ಜೊತೆಗೆ ಭಾರತವು ಭೌಗೋಳಿಕವಾಗಿ ಉಷ್ಣವಲಯದ ಹಾಗೂ ಸಮಶೀತೋಷ್ಣ ವಲಯ ಗಳೆರಡರಲ್ಲಿಯೂ ಹಂಚಿಕೆಯಾಗಿದೆ. ಅಕ್ಷಾಂಶ, ಸಮುದ್ರ ಮಟ್ಟದಿಂದ ಇರುವ ಎತ್ತರ, ಸಾಗರಗಳಿಂದ ಇರುವ ದೂರ, ಮಾರುತಗಳ ದಿಕ್ಕು, ಪರ್ವತ ಸರಣಿಗಳು ಹಬ್ಬಿರುವ ರೀತಿ, ಸಾಗರ ಪ್ರವಾಹಗಳು ಮುಂತಾದವು ಭಾರತದ ವಾಯುಗುಣದ ಮೇಲೆ ಹೆಚ್ಚು ಪ್ರಭಾವಬೀರುತ್ತವೆ.

ನಿಮಗೆ ಇದು ತಿಳಿದಿರಲಿ :
ಮಾನ್ಸೂನ್ ಎಂಬ ಪದವು ಅರೇಬಿಕ್ ಭಾಷೆಯ 'ಮೌಸಮ್' ಎಂಬ ಪದದಿಂದ ರೂಢಿಗೆ ಬಂದಿದೆ. ಇದು ***ನಿಯತಕಾಲಿಕ*** *ಅಥವಾ ಋತುಮಾನಿಕ ಎಂಬ ಅರ್ಥವನ್ನು ಒಳಗೊಂಡಿದೆ.*

ಭಾರತದಲ್ಲಿ ಕಂಡು ಬರುವ ವಾರ್ಷಿಕ ವಾಯುಗುಣವನ್ನು ನಾಲ್ಕು ಋತುಮಾನಗಳನ್ನಾಗಿ ವಿಂಗಡಿಸಲಾಗಿದೆ.

1) **ಬೇಸಿಗೆ ಕಾಲ** – ಮಾರ್ಚ್‌ನಿಂದ–ಮೇವರೆಗೆ
2) **ನೈಋತ್ಯ ಮಾನ್ಸೂನ ಕಾಲ ಅಥವಾ ಮುಂಗಾರು ಮಳೆಗಾಲ** – ಜೂನ್‌ನಿಂದ – ಸೆಪ್ಟಂಬರ್‌ವರೆಗೆ
3) **ಮಾನ್ಸೂನ್ ಮಾರುತಗಳ ನಿರ್ಗಮನಕಾಲ ಅಥವಾ ಹಿಂಗಾರು ಮಳೆಗಾಲ** – ಅಕ್ಟೋಬರನಿಂದ – ನವಂಬರ್‌ವರೆಗೆ
4) **ಚಳಿಗಾಲ** – ಡಿಸೆಂಬರ್‌ನಿಂದ – ಫೆಬ್ರವರಿವರೆಗೆ.

ಬೇಸಿಗೆ ಕಾಲ : ಭಾರತದಲ್ಲಿ ಬೇಸಿಗೆ ಕಾಲವು ಮಾರ್ಚ್ ತಿಂಗಳ ಮೊದಲವಾರದಲ್ಲಿ ಪ್ರಾರಂಭವಾಗಿ ಮೇ ತಿಂಗಳ ಕೊನೆಯವರೆಗೂ ಮುಂದುವರೆಯುತ್ತದೆ. ಈ ಅವಧಿಯಲ್ಲಿ ಸೂರ್ಯನ ಲಂಬ ಕಿರಣಗಳು ಉತ್ತರಾರ್ಧಗೋಳದ ಮೇಲೆ ಬೀಳುವುದರಿಂದ ಭಾರತದಲ್ಲಿ ಉಷ್ಣಾಂಶ ಅಧಿಕವಾಗಿರುತ್ತದೆ. ದೀರ್ಘ ಹಗಲು ಮತ್ತು ಸಮುದ್ರಕ್ಕೆ ದೂರವಾಗಿರುವ ಉತ್ತರ ಭಾರತವು ಹೆಚ್ಚು ಉಷ್ಣಾಂಶದಿಂದ ಕೂಡಿರುತ್ತದೆ. ರಾಜಸ್ತಾನದ ಗಂಗಾನಗರವು 52^0 ಸೆ.ಗಳಷ್ಟು ಉಷ್ಣಾಂಶವನ್ನು ಹೊಂದಿದ್ದು ದೇಶದಲ್ಲಿಯೇ ಅತಿ ಹೆಚ್ಚು ಉಷ್ಣಾಂಶವನ್ನು ಹೊಂದಿದ ಪ್ರದೇಶವಾಗಿದೆ. ದಕ್ಷಿಣ ಭಾರತವು ಮೂರು ಕಡೆಗಳಲ್ಲಿ ಸಾಗರಗಳಿಂದ

ಆವೃತ್ತವಾಗಿದ್ದು ಇದರ ಉಷ್ಣಾಂಶದಲ್ಲಿ ಇಳಿಕೆ ಕಂಡು ಬರುತ್ತದೆ. ಅದು ಕೇವಲ 32^0 ಸೆ.ದಿಂದ 35^0 ಸೆ.ಗಳಷ್ಟು ಕಂಡು ಬರುತ್ತದೆ. ಈ ಅವಧಿಯಲ್ಲಿ ಉತ್ತರ ಭಾರತದ ಪರ್ವತ ಪ್ರದೇಶ ಮತ್ತು ಪರ್ಯಾಯ ಪ್ರಸ್ಥಭೂಮಿಗಳು ಸಾಕಷ್ಟು ತಂಪಾಗಿರುತ್ತವೆ. ಅಲ್ಲಲ್ಲಿ ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಮಳೆಯಾಗುತ್ತದೆ. ಈ ಮಳೆಯನ್ನು ಪಶ್ಚಿಮ ಬಂಗಾಳದಲ್ಲಿ ಕಾಲ ಬೈಸಾಕಿ, ದಕ್ಷಿಣ ಭಾರತದಲ್ಲಿ ಕರ್ನಾಟಕದಲ್ಲಿ ಕಾಫಿ ತುಂತುರು ಹಾಗೂ ಕೇರಳದಲ್ಲಿ 'ಮಾವಿನಹೊಯ್ಲು' ಎಂದು ಕರೆಯುತ್ತಾರೆ. ಬೇಸಿಗೆಯಲ್ಲಿ ದೇಶವು ವಾರ್ಷಿಕ ಮಳೆಯ ಶೇ. 10 ರಷ್ಟನ್ನು ಮಾತ್ರ ಪಡೆಯುತ್ತದೆ.

ನೈಋತ್ಯ ಮನ್ಸೂನ್ ಮಳೆಗಾಲ : ಭಾರತದಲ್ಲಿ ನೈಋತ್ಯ ಮನ್ಸೂನ್ ಎಂದರೆ ಮಳೆಗಾಲವೆಂದರ್ಥ. ಇವುಗಳನ್ನು ಮುಂಗಾರು ಮಳೆಗಾಲದ ಮಾರುತಗಳೆಂದು ಕರೆಯುತ್ತಾರೆ. ಇವು ಜಲಾಂಶಪೂರಿತ ಮಾರುತಗಳಾಗಿದ್ದು ಭಾರತದ ಹೆಚ್ಚು ಭಾಗದಲ್ಲಿ ಮಳೆ ಸುರಿಸುತ್ತವೆ. ಇದು ಜೂನ್‌ನಿಂದ ಸೆಪ್ಟೆಂಬರ ವರೆಗೆ ಕಂಡುಬರುವುದು. ಭಾರತದ ಒಟ್ಟು ಮಳೆಯಲ್ಲಿ ಶೇ 75 ರಷ್ಟು ಈ ಕಾಲದಲ್ಲಿ ಬೀಳುವುದು. ನೈಋತ್ಯ ಮನ್ಸೂನ್ ಮಾರುತಗಳು ಭಾರತವನ್ನು ಎರಡು ಕವಲುಗಳಾಗಿ ಪ್ರವೇಶಿಸುತ್ತವೆ. ಅವುಗಳೆಂದರೆ ಅರಬ್ಬಿ ಸಮುದ್ರ ಶಾಖೆ ಹಾಗೂ ಬಂಗಾಳಕೊಲ್ಲಿಯ ಶಾಖೆ. ಅರಬ್ಬಿ ಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳಿಂದ ತಡೆಯಲ್ಪಟ್ಟು ಘಟ್ಟಗಳ ಪಶ್ಚಿಮ ಭಾಗಕ್ಕೆ ಹೆಚ್ಚು ಮಳೆ ಸುರಿಸುತ್ತವೆ. ಈ ಮಾರುತಗಳು ಪೂರ್ವಕ್ಕೆ ಮುಂದುವರೆದಂತೆ ಮಳೆ ಕಡಿಮೆಯಾಗುತ್ತದೆ. ಪಶ್ಚಿಮ ಘಟ್ಟಗಳ ಪೂರ್ವ ಭಾಗವು ಮಳೆಯ ನೆರಳಿನ ಪ್ರದೇಶವೆನಿಸಿದೆ. ಬಂಗಾಳಕೊಲ್ಲಿಯ ಶಾಖೆಯು ಮಯನ್ಮಾರ್ (ಬರ್ಮಾ) ಬಾಂಗ್ಲಾದೇಶ, ಭಾರತದ ಈಶಾನ್ಯ ಭಾಗ, ಹಿಮಾಲಯದ ತಪ್ಪಲು ಮತ್ತು ಉತ್ತರದ ಮೈದಾನಗಳ ಕಡೆಗೆ ಮಳೆಯನ್ನು ತರುತ್ತದೆ. ಉತ್ತರ ಭಾರತದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹೋದಂತೆಲ್ಲಾ ಮಳೆ ಕಡಿಮೆಯಾಗುತ್ತದೆ. ತಮಿಳುನಾಡು ಹೊರತುಪಡಿಸಿ ಭಾರತದ ಹೆಚ್ಚು ಭಾಗಕ್ಕೆ ನೈಋತ್ಯ ಮನ್ಸೂನ್ ಮಾರುತಗಳು ಮಳೆಯನ್ನು ಸುರಿಸುತ್ತದೆ.

ಮನ್ಸೂನ್ ಮಾರುತಗಳ ನಿರ್ಗಮನಕಾಲ : ಅಕ್ಟೋಬರ ತಿಂಗಳ ಕೊನೆಯ ಭಾಗದ ಒಳಗಾಗಿ ಭಾರತದ ಉಪಖಂಡದಲ್ಲಿ ಮಳೆ ಸುರಿದ ಪರಿಣಾಮವಾಗಿ ಉಷ್ಣಾಂಶವು ಕಡಿಮೆಯಾಗುತ್ತದೆ. ಅಲ್ಲದೆ ಸೂರ್ಯನ ಕಿರಣಗಳು ಕೂಡಾ ಈ ಅವಧಿಯಲ್ಲಿ ದಕ್ಷಿಣಾರ್ಧ ಗೋಳಾರ್ಧದಲ್ಲಿ ಲಂಬವಾಗಿ ಬೀಳುತ್ತವೆ. ಇದರಿಂದ ಉತ್ತರಾರ್ಧಗೋಳದಲ್ಲಿ ಉಷ್ಣಾಂಶವು ಕಡಿಮೆಯಾಗುತ್ತದೆ. ಪರಿಣಾಮವಾಗಿ ಆ ಪ್ರದೇಶವು ಹೆಚ್ಚು ಒತ್ತಡ ಪ್ರದೇಶವಾಗಿ ಪರಿವರ್ತನೆಯಾಗುತ್ತದೆ. ಅದಕ್ಕಾಗಿ ನೈಋತ್ಯ ಮನ್ಸೂನ್ ಮಾರುತಗಳು ಅಕ್ಟೋಬರ್‌ನಿಂದ ಹಿಮ್ಮೆಟ್ಟಲು ಪ್ರಾರಂಭ ಮಾಡುತ್ತವೆ. ನಿಧಾನವಾಗಿ ನವೆಂಬರ್ ತಿಂಗಳ ಅಂತ್ಯದ ವೇಳೆಗೆ ಇವು ಬೀಸುವುದನ್ನು ನಿಲ್ಲಿಸುತ್ತವೆ. ಇದನ್ನೇ ಮನ್ಸೂನ್ ಮಾರುತಗಳ 'ನಿರ್ಗಮನ ಕಾಲ' ಅಥವಾ ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ ಎಂದು ಕರೆಯುವರು. ಈ ಅವಧಿಯಲ್ಲಿ ಭಾರತವು ಶೇ 13 ರಷ್ಟು ಮಳೆಯನ್ನು ಪಡೆಯುತ್ತದೆ.ಈ ಕಾಲದಲ್ಲಿ ಉಷ್ಣವಲಯದ ಆವರ್ತ ಗಾಳಿಗಳು (ಚಂಡಮಾರುತ) ಬಂಗಾಳಕೊಲ್ಲಿ ಮತ್ತು ಅರಬ್ಬಿ ಸಮುದ್ರಗಳಲ್ಲಿ ನಿರ್ಮಿತಗೊಳ್ಳುತ್ತವೆ. ಈ ಆರ್ವತ ಗಾಳಿಗಳು ಅಧಿಕ ವೇಗ ಹಾಗೂ ಮಳೆಯಿಂದ ಕೂಡಿರುತ್ತವೆ. ಇವು ಜೀವ ಹಾಗೂ ಆಸ್ತಿ ಹಾನಿಯನ್ನು ಉಂಟುಮಾಡುತ್ತವೆ. ಆದರೆ ಒಳನಾಡಿಗೆ ಸಾಕಷ್ಟು ಮಳೆ ತರುತ್ತವೆ.


ಚಟುವಟಿಕೆ :
ದಿನಪತ್ರಿಕೆಗಳಲ್ಲಿ ನೀಡುವ ದೇಶದ ಪ್ರಮುಖ ನಗರಗಳಲ್ಲಿಯ ಉಷ್ಣಾಂಶದ ವಿವರಗಳನ್ನು ಸಂಗ್ರಹಿಸಿ, ಶಿಕ್ಷಕರೊಂದಿಗೆ ಉಷ್ಣಾಂಶದಲ್ಲಾಗುವ ವ್ಯತ್ಯಾಸದ ಬಗ್ಗೆ ಚರ್ಚಿಸಿ.

ಚಳಿಗಾಲ : ಭಾರತದಲ್ಲಿ ಚಳಿಗಾಲದ ಅವಧಿಯು ಡಿಸೆಂಬರ್‌ನಿಂದ ಆರಂಭವಾಗಿ ಫೆಬ್ರವರಿಯ ಕೊನೆಯವರೆಗೂ ಮುಂದುವರೆಯುವುದು. ಈ ಅವಧಿಯಲ್ಲಿ ಉತ್ತರದ ರಾಜ್ಯಗಳಾದ ಜಮ್ಮು ಮತ್ತು ಕಾಶ್ಮೀರ,

ಹಿಮಾಚಲ ಪ್ರದೇಶ ಹಾಗೂ ಉತ್ತರದ ಮೈದಾನ ಪ್ರದೇಶಗಳಲ್ಲಿ ಅತಿ ಕಡಿಮೆ ಉಷ್ಣಾಂಶವು ಕಂಡು ಬರುತ್ತದೆ. ಕೆಲವು ಕಡೆಗಳಲ್ಲಿ ಉಷ್ಣಾಂಶವು ನೀರು ಹೆಪ್ಪುಗಟ್ಟುವ ಬಿಂದುವಿಗಿಂತಲೂ ಕಡಿಮೆ ಇರುವುದು. ಆದರೆ ದಕ್ಷಿಣ ಭಾರತದಲ್ಲಿ ಉಷ್ಣಾಂಶವು ಸಾಧಾರಣವಾಗಿದ್ದು ಹವಾಮಾನವು ಹಿತಕರವಾಗಿರುತ್ತದೆ. ಭಾರತವು ತನ್ನ ವಾರ್ಷಿಕ ಮಳೆಯ ಶೇ. 2 ರಷ್ಟನ್ನು ಮಾತ್ರ ಈ ಅವಧಿಯಲ್ಲಿ ಪಡೆಯುವದು. ಆದುದರಿಂದ ಚಳಿಗಾಲವು ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಅವಧಿಯಾಗಿದೆ.

ಮಳೆಯ ಹಂಚಿಕೆ :

ಭಾರತದಲ್ಲಿ ಸಾಮಾನ್ಯವಾಗಿ ನೈಋತ್ಯ ಮನ್ಸೂನ್ ಮಾರುತಗಳ ಕಾಲದಲ್ಲಿ ಮಳೆಯಾಗುತ್ತದೆ. ಭಾರತವು ವರ್ಷದ ಎಲ್ಲಾ ಅವಧಿಗಳಲ್ಲಿಯೂ ಮಳೆಯನ್ನು ಪಡೆಯುತ್ತದೆ. ದೇಶದ ಸರಾಸರಿ ಮಳೆಯ ಪ್ರಮಾಣ 118 ಸೆಂ.ಮಿ.ಗಳು ಆದರೆ ವಿವಿಧ ಕಾಲದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಮಳೆ ಬೀಳುವುದು. ಅಲ್ಲದೇ ಮಳೆಯ ಪ್ರಮಾಣವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವ್ಯತ್ಯಾಸ ವಾಗುವುದು. ಮಳೆಯ ಹಂಚಿಕೆಯ ಆಧಾರದ ಮೇಲೆ ಭಾರತವನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದು.



1) ಕಡಿಮೆ ಮಳೆಯ ಪ್ರದೇಶ : ಈ ಪ್ರದೇಶದಲ್ಲಿ ಸುಮಾರು 50 ಸೆಂ.ಮೀ ಗಳಿಗಿಂತ ಕಡಿಮೆ ಮಳೆಬೀಳುತ್ತದೆ. ರಾಜಸ್ತಾನದ ಥಾರ ಮರುಭೂಮಿ ಹಾಗೂ ಅದಕ್ಕೆ ಹೊಂದಿಕೊಂಡಂತಿರುವ ಪಂಜಾಬ, ಹರಿಯಾಣ, ಗುಜರಾತಿನ ಕಛ್ ಪ್ರದೇಶ ಮತ್ತು ಜಮ್ಮು ಮತ್ತು ಕಾಶ್ಮೀರ, ಮಹಾರಾಷ್ಟ್ರದ ಪೂರ್ವಭಾಗ, ಕರ್ನಾಟಕದ ಒಳನಾಡು ಕಡಿಮೆ ಮಳೆ ಬೀಳುವ ವಲಯವಾಗಿದೆ. ರಾಜಸ್ಥಾನದ ಜೈಸಲ್ಮೇರ್ ಜಿಲ್ಲೆಯು 'ರೂಯಿಲ್ಲಿ' (Ruyli)ಯು ವಾರ್ಷಿಕ ಸರಾಸರಿ ಮಳೆಯು 8.3 ಸೆಂ.ಮೀ.ಗಳಷ್ಟಾಗಿದೆ. ಇದು ಭಾರತದಲ್ಲಿ ಅತಿ ಕಡಿಮೆ ಮಳೆ ಪಡೆಯುವ ಪ್ರದೇಶವಾಗಿದೆ.

2) ಸಾಧಾರಣ ಮಳೆ ಪಡೆಯುವ ಪ್ರದೇಶ : ಇಲ್ಲಿ ಸುಮಾರು 50 ರಿಂದ 250 ಸೆಂ.ಮೀ ಮಳೆ ಬೀಳುತ್ತದೆ. ಈ ಭಾಗಗಳನ್ನು ಅತಿ ಕಡಿಮೆ ಹಾಗೂ ಅತಿ ಹೆಚ್ಚು ಮಳೆಯ ಪ್ರದೇಶಗಳನ್ನು ಬಿಟ್ಟು ಭಾರತದ ಉಳಿದೆಲ್ಲಾ ಭಾಗಗಳನ್ನು ಒಳಗೊಂಡಿರುವುದು.

3) ಅಧಿಕ ಮಳೆಯ ಪ್ರದೇಶ : ಸುಮಾರು 250 ಸೆಂ.ಮೀ.ಗಳಿಗಿಂತ ಹೆಚ್ಚು ಮಳೆ ಬೀಳುವ ಭಾಗಗಳನ್ನು ಅಧಿಕ ಮಳೆ ಬೀಳುವ ಪ್ರದೇಶಗಳೆಂದು ಗುರುತಿಸುತ್ತೇವೆ. ಪಶ್ಚಿಮ ಘಟ್ಟಗಳ ಪಶ್ಚಿಮಭಾಗ, ಅಸ್ಸಾಂ ಹಾಗೂ ಇತರ ಪೂರ್ವ ರಾಜ್ಯಗಳು ಹಾಗೂ ಪಶ್ಚಿಮ ಬಂಗಾಳ ಈ ವಲಯದಲ್ಲಿ ಸೇರುತ್ತವೆ. ಮೇಘಾಲಯದ 'ಮಾಸಿನ್‌ರಾಮ್' ದೇಶದಲ್ಲಿಯೇ ಅತ್ಯಧಿಕ ಮಳೆ ಪಡೆಯುವುದು. ಇದು ಪ್ರಪಂಚದಲ್ಲಿಯೇ ಅತಿ ಹೆಚ್ಚು ಮಳೆಯನ್ನು ದಾಖಲಿಸಿದೆ.

ದೇಶದ ಆರ್ಥಿಕ ಬೆಳವಣಿಗೆಯ ಮೇಲೆ ವಾಯುಗುಣವು ಹೆಚ್ಚಿನ ಪ್ರಭಾವ ಬೀರುತ್ತದೆ. ಭಾರತದ ಜನತೆಯ ಪ್ರಧಾನ ಉದ್ಯೋಗವು ವ್ಯವಸಾಯವಾಗಿರುವದರಿಂದ ನೈಋತ್ಯ ಮನ್ಸೂನ್ ಮಾರುತಗಳು ಒಂದು ವಿಧದಲ್ಲಿ ದೇಶದ ವ್ಯವಸಾಯವನ್ನು ನಿಯಂತ್ರಿಸುತ್ತವೆ. ಈ ಮಳೆ ವಿಫಲವಾದರೆ ಬರಗಾಲ ಬರುವುದು. ಅತಿ ಹೆಚ್ಚಾದಾಗ ಪ್ರವಾಹ ಉಂಟಾಗಿ ಪ್ರಾಣ ಹಾನಿ ಮತ್ತು ಆಸ್ತಿಗಳಿಗೆ ಹಾನಿ ಉಂಟಾಗುತ್ತದೆ. ಆದ್ದರಿಂದಲೇ 'ಭಾರತದ ವ್ಯವಸಾಯವನ್ನು ಮನ್ಸೂನ್ ಜೊತೆಯಲ್ಲಿ ಆಡುವ ಜೂಜಾಟ' ಎಂದು ಕರೆಯುತ್ತಾರೆ.

ಚಟುವಟಿಕೆ :

ಈ ವರ್ಷ ನಿಮ್ಮ ತಾಲ್ಲೂಕಿನಲ್ಲಿ ಮಳೆಗಾಲದಲ್ಲಿ ಆದ ಮಳೆಯ ಪ್ರಮಾಣ ವನ್ನು ತಿಳಿಯಿರಿ.

ನಿಮ್ಮ ತಾಲ್ಲೂಕಿನಲ್ಲಿ ಈ ವರ್ಷ ಇದ್ದಂತಹ ವಾಯುಗುಣದ ಲಕ್ಷಣಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿ.

ಅಭ್ಯಾಸಗಳು

I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿರಿ.

1) ದೇಶದಲ್ಲಿಯೇ ಅತಿ ಹೆಚ್ಚು ಉಷ್ಣಾಂಶ ಹೊಂದಿದ ಸ್ಥಳ __________ ಆಗಿದೆ.
2) ಅತಿ ಹೆಚ್ಚು ಮಳೆ ಬೀಳುವ ಋತುಮಾನ __________ ಆಗಿದೆ.
3) ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶ __________ .
4) ಭಾರತದಲ್ಲಿಯೇ ಅತಿ ಹೆಚ್ಚು ಮಳೆಯಾಗುವ ಸ್ಥಳ__________ .
5) ಭಾರತದ ವ್ಯವಸಾಯವನ್ನು __________ ಮಳೆಯ ಜೊತೆಯಲ್ಲಿ ಆಡುವ ಜೂಜಾಟ ಎಂದು ಕರೆಯುತ್ತಾರೆ.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.

1) ಭಾರತವು ಯಾವ ಬಗೆಯ ವಾಯುಗುಣವನ್ನು ಹೊಂದಿದೆ?
2) ಮಾನ್ಸೂನ್ ಮಾರುತ ಎಂದರೇನು?
3) ಯಾವ ಋತುವನ್ನು ಸಾಮಾನ್ಯವಾಗಿ ಮಳೆಗಾಲವೆಂದು ಕರೆಯುವರು?
4) ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
5) ಭಾರತದ ವ್ಯವಸಾಯವು 'ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ' ಚರ್ಚಿಸಿರಿ.

III. ಚಟುವಟಿಕೆ :

1) ಭಾರತದ ನಕ್ಷೆ ಬರೆದು ಮಳೆ ಹಂಚಿಕೆಯನ್ನು ಗುರುತಿಸಿ.

IV. ಯೋಜಿತ ಕಾರ್ಯ :

1) ನೀವು ವಾಸವಾಗಿರುವ ಪ್ರದೇಶದಲ್ಲಿ ಋತುಮಾನಗಳಲ್ಲಾಗುವ ಬದಲಾವಣೆ ಬಗ್ಗೆ ನಿಮ್ಮ ಬೋಧಕರಿಂದ ತಿಳಿದು ಯೋಜನಾಕಾರ್ಯ ಕೈಗೊಳ್ಳಿ.

ಅಧ್ಯಾಯ–4

ಭಾರತದ ಮಣ್ಣುಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭಾರತದಲ್ಲಿನ ಮಣ್ಣಿನ ವಿಧಗಳು ಹಾಗೂ ಹಂಚಿಕೆ.*
- *ಮಣ್ಣಿನ ಸವೆತ ಹಾಗೂ ಸವೆತಕ್ಕೆ ಕಾರಣಗಳು.*
- *ಮಣ್ಣಿನ ಸವೆತದ ಪರಿಣಾಮಗಳು.*
- *ಮಣ್ಣಿನ ಸಂರಕ್ಷಣೆ ಮತ್ತು ನಿರ್ವಹಣೆ.*


ಮಣ್ಣು ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದಾಗಿದೆ. ಭಾರತವು ವಿವಿಧ ಬಗೆಯ ಮಣ್ಣುಗಳನ್ನು ಒಳಗೊಂಡಿದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ ಅವುಗಳು ಉತ್ಪತ್ತಿಯಾಗಿರುವ ಮೂಲ ಶಿಲೆಗಳು ಮತ್ತು ವಾಯುಗುಣಗಳ ವ್ಯತ್ಯಾಸವೇ ಆಗಿದೆ. ಕೆಲವು ಮಣ್ಣುಗಳು ವಿವಿಧ ಕರ್ತೃಗಳಿಂದ ಸಾಗಿಸಲ್ಪಟ್ಟು ಸಂಚಯಿತಗೊಂಡಿವೆ. ಮಣ್ಣು ಸಸ್ಯ ಮತ್ತು ಪ್ರಾಣಿಗಳ 'ಕೊಳೆತ ಜೈವಿಕಾಂಶ'ವನ್ನು ಒಳಗೊಂಡಿದೆ. ಭಾರತದಲ್ಲಿ ಕಂಡು ಬರುವ ಮಣ್ಣನ್ನು ಆರು ಪ್ರಮುಖ ವಿಧಗಳಾಗಿ ವಿಂಗಡಿಸಲಾಗಿದ್ದು ಮುಂದೆ ಅವುಗಳ ಬಗ್ಗೆ ತಿಳಿಯೋಣ.

1) ಮೆಕ್ಕಲು ಮಣ್ಣು : ನದಿಗಳು ಪರ್ವತ ಪ್ರದೇಶಗಳಿಂದ ಹೊತ್ತು ತಂದು ಸಂಚಯಿಸಿರುವ ಮಣ್ಣಿಗೆ ಮೆಕ್ಕಲು ಮಣ್ಣು ಎನ್ನುವರು. ಭಾರತದಲ್ಲಿ ಮೆಕ್ಕಲು ಮಣ್ಣು ಇತರ ಎಲ್ಲಾ ಬಗೆಯ ಮಣ್ಣುಗಳಿಗಿಂತ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಹರಡಿರುವುದು. ಈ ಮಣ್ಣು ಸುಮಾರು 7.7 ದಶಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುವುದು. ಇದು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಸಾ, ಪಂಜಾಬ, ಹರಿಯಾಣ ಅಸ್ಸಾಂ ರಾಜ್ಯದ ಬ್ರಹ್ಮಪುತ್ರಾ ಕಣಿವೆಯ ಭಾಗವನ್ನು ಆವರಿಸಿದೆ. ಅಲ್ಲದೆ ನರ್ಮದಾ ಮತ್ತು ತಪತಿ ನದಿಗಳ ಕಣಿವೆಗಳು, ಪರ್ಯಾಯ ಪ್ರಸ್ಥಭೂಮಿಯ ಎರಡು ಕಡೆಗಳಲ್ಲಿರುವ ತೀರ ಪ್ರದೇಶಗಳೂ ಸಹ ಮೆಕ್ಕಲು ಮಣ್ಣಿನಿಂದಲೇ ನಿರ್ಮಿತವಾಗಿವೆ. ಗೋಧಿ, ಭತ್ತ, ಕಬ್ಬು, ಹತ್ತಿ ಮತ್ತು ಸೆಣಬು ಈ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳಾಗಿವೆ.

2) ಕಪ್ಪು ಮಣ್ಣು : ಕಪ್ಪು ಮಣ್ಣನ್ನು 'ರೇಗೂರ್ ಮಣ್ಣು' ಎಂತಲೂ ಕರೆಯುತ್ತಾರೆ. ಈ ಮಣ್ಣು ಹತ್ತಿ ಬೆಳೆಗೆ ಬಹು ಸೂಕ್ತವಾಗಿರುವುದರಿಂದ ಕಪ್ಪುಹತ್ತಿ ಬೆಳೆಯುವ ಮಣ್ಣು ಎಂತಲೂ ಕರೆಯುವರು. ಇದು ಸುಮಾರು 5.46 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುತ್ತದೆ. ಕಪ್ಪು ಮಣ್ಣಿನ ಪ್ರದೇಶವನ್ನು ಡೆಕ್ಕನ್ ಟ್ರಾಪ್ ಎಂದು ಸಹ ಕರೆಯುತ್ತಾರೆ. ಈ ಮಣ್ಣು ಅಗ್ನಿ ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾಗಿದೆ. ಇದರಲ್ಲಿ ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿ ಕಂಡು ಬರುತ್ತವೆ. ಈ ಮಣ್ಣು ಫಲವತ್ತಾಗಿದ್ದು ತೇವಾಂಶವನ್ನು ಹಿಡಿದಿಟ್ಟುಕೊಳ್ಳಲು ಸಮರ್ಥವಾಗಿದೆ. ಇದು ಮಹಾರಾಷ್ಟ್ರ, ಗುಜರಾತ್,ಮಧ್ಯಪ್ರದೇಶ, ಆಂಧ್ರ ಪ್ರದೇಶದ ಪಶ್ಚಿಮ ಭಾಗ ಮತ್ತು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ಮಣ್ಣು ಕಬ್ಬಿಣ ಸುಣ್ಣ

ಹಾಗೂ ಮೆಗ್ನೇಶಿಯಂ ಕಾರ್ಬೋನೇಟ್‌ಗಳನ್ನು ಅಧಿಕ ಪ್ರಮಾಣದಲ್ಲಿ ಒಳಗೊಂಡಿದೆ. ಇದು ಒಣಬೇಸಾಯಕ್ಕೆ ಸೂಕ್ತವಾಗಿದ್ದು ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನಕಾಯಿ, ಹೊಗೆಸೊಪ್ಪು, ಎಣ್ಣೆ ಕಾಳು, ನಿಂಬೆ, ದ್ರಾಕ್ಷಿ ಈ ಮಣ್ಣಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳಾಗಿವೆ.

3) ಕೆಂಪು ಮಣ್ಣು : ಕೆಂಪು ಮಣ್ಣು ಪರ್ಯಾಯ ಪ್ರಸ್ಥಭೂಮಿಯಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿರುವ ಮಣ್ಣಿನ ಪ್ರಕಾರವಾಗಿದೆ. ಇದು ಸುಮಾರು 5.18 ಲಕ್ಷ ಚ.ಕಿ.ಮೀ ಭೂ ಪ್ರದೇಶದಲ್ಲಿ ಕಂಡುಬರುವುದು. ಇದು ದಕ್ಷಿಣದಲ್ಲಿ ಕನ್ಯಾಕುಮಾರಿಯಿಂದ ಉತ್ತರದಲ್ಲಿ ಮಧ್ಯಪ್ರದೇಶದ ಝಾನ್ಸಿಯವರೆಗೆ ಹಬ್ಬಿದೆ. ಪಶ್ಚಿಮದಲ್ಲಿ ಗುಜರಾತಿನ ಕಛ್ ಪ್ರದೇಶದಿಂದ ಪೂರ್ವದಲ್ಲಿ ಜಾರ್ಖಂಡನ ರಾಜಮಹಲ್ ಬೆಟ್ಟಗಳವರೆಗೂ ವ್ಯಾಪಿಸಿದೆ. ಕೆಂಪು ಮಣ್ಣಿನಲ್ಲಿ ಬೆಳೆಯಲಾಗುತ್ತಿರುವ ಪ್ರಮುಖ ಬೆಳೆಗಳೆಂದರೆ ರಾಗಿ, ಹೊಗೆಸೊಪ್ಪು ಮತ್ತು ಎಣ್ಣೆಕಾಳುಗಳು ಹಾಗೂ ನೀರಾವರಿಯು ಸೌಲಭ್ಯವಿರುವ ಪ್ರದೇಶಗಳಲ್ಲಿ ಭತ್ತ, ಕಬ್ಬು, ಹತ್ತಿ ಮುಂತಾದವುಗಳನ್ನು ಬೆಳೆಯುವರು.



4) ಜಂಬಿಟ್ಟಿಗೆ (ಲ್ಯಾಟ್‌ರೈಟ್) ಮಣ್ಣು : ಜಂಬಿಟ್ಟಿಗೆ ಮಣ್ಣು ಸಾಮಾನ್ಯವಾಗಿ 200 ಸೆಂ.ಮೀಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ನಿರ್ಮಿತಗೊಂಡಿದೆ. ಅಧಿಕ ಮಳೆಯಿಂದ ಮಣ್ಣಿನಲ್ಲಿರುವ ಲವಣಾಂಶಗಳು ತೊಳೆಸಲ್ಪಟ್ಟು ಕೇವಲ ಕಬ್ಬಿಣದ ಆಕ್ಸೈಡ್ ಮತ್ತು ಅಲ್ಯುಮಿನಿಯಂಗಳು ಮಾತ್ರ ಮೇಲ್ಪದರಿನಲ್ಲಿ ಉಳಿದಿರುವುದು. ಇದರಿಂದಾಗಿ ಈ ಮಣ್ಣು ಕೆಂಪು ಬಣ್ಣವನ್ನು ಹೊಂದಿರುವುದು. ಮಳೆಯ ನೀರು ಲವಣಗಳನ್ನು ಕರಗಿಸಿ ದ್ರಾವಣದ ರೂಪದಲ್ಲಿ ಭೂಮಿಯ ಹೆಚ್ಚು ಆಳದವರೆಗೆ ಸಾಗಿಸಿರುವುದು. ಆದುದರಿಂದ ಮೇಲ್ಪದರದ ಮಣ್ಣಿನಲ್ಲಿ ನೀರಿನಲ್ಲಿ ಕರಗದ ಕಬ್ಬಿಣ ಆಕ್ಸೈಡ್ ಮತ್ತು ಅಲ್ಯೂಮಿನಿಯಂಗಳು ಮಾತ್ರ ಕಂಡು ಬರುತ್ತವೆ. ಜಂಬಿಟ್ಟಿಗೆ ಮಣ್ಣಿನಲ್ಲಿ ಫಲವತ್ತತೆ ಅತಿ ಕಡಿಮೆ ಸಾರಜನಕ ಮತ್ತು ಲವಣಗಳ ಕೊರತೆಯನ್ನು ಈ ಮಣ್ಣಿನಲ್ಲಿ ಕಾಣಬಹುದು. ಇದು ಭಾರತದಲ್ಲಿ ಸುಮಾರು 2.48 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡು ಬರುವುದು. ಪಶ್ಚಿಮ ಘಟ್ಟಗಳು, ವಿಂಧ್ಯ, ಸಾತ್ಪುರ ಮತ್ತು ರಾಜಮಹಲ್ ಬೆಟ್ಟಗಳು ಹಾಗೂ ಪೂರ್ವಾಚಲ ಪ್ರದೇಶಗಳಲ್ಲಿ ಈ ಮಣ್ಣು ವ್ಯಾಪಕವಾಗಿ ಹರಡಿದೆ. ಇದು ಕಾಫಿ ಟೀ ಮುಂತಾದ ತೋಟಗಾರಿಕೆ ಬೆಳೆಗಳಿಗೆ ಬಹು ಉಪಯುಕ್ತವಾಗಿದೆ.

5) ಮರುಭೂಮಿ ಮಣ್ಣು : ಅತಿ ಕಡಿಮೆ ಮಳೆ ಮತ್ತು ಅಧಿಕ ಉಷ್ಣಾಂಶದ ಪ್ರದೇಶದಲ್ಲಿ ಮರಳು ಮಣ್ಣು ನಿರ್ಮಾಣಗೊಳ್ಳುತ್ತದೆ. ಈ ಮಣ್ಣು ಕೆಂಪು ಮತ್ತು ಕಂದು ಬಣ್ಣವನ್ನು ಹೊಂದಿದೆ. ಕಣಗಳ ನಡುವೆ ಅಧಿಕ ರಂಧ್ರತೆ ಇರುವುದರಿಂದ ನೀರು ನಿಲ್ಲದೆ ತೀವ್ರವಾಗಿ ಬಸಿದು ಹೋಗುತ್ತದೆ ಮತ್ತು ಬೇಗ ಆರ್ದ್ರತೆ ಕಡಿಮೆ ಆಗುತ್ತದೆ. ಭಾರತದಲ್ಲಿ ಈ ಮಣ್ಣು ಸುಮಾರು 1.4 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಹರಡಲ್ಪಟ್ಟಿದೆ. ಸಜ್ಜೆ, ಖರ್ಜೂರ ಇತ್ಯಾದಿಗಳನ್ನು ಬೆಳೆಯಬಹುದು. ಭಾರತದ ವಾಯವ್ಯ ಭಾಗದ ರಾಜಸ್ತಾನ, ಪಂಜಾಬ ಮತ್ತು ಹರಿಯಾಣ ರಾಜ್ಯಗಳಲ್ಲಿ ಹಾಗೂ ಪಶ್ಚಿಮದ ಗುಜರಾತಿನ ಕಛ್ ಪ್ರದೇಶ ಹಾಗೂ ಅರಾವಳಿ ಶ್ರೇಣಿಯ ಪಶ್ಚಿಮ ಭಾಗದಲ್ಲಿ ಹಂಚಿಕೆಯಾಗಿದೆ.

6) ಪರ್ವತ ಮಣ್ಣು : ಕೊಳೆತ ಜೈವಿಕಾಂಶಗಳನ್ನು ಅಧಿಕ ಪ್ರಮಾಣದಲ್ಲಿ ಈ ಮಣ್ಣು ಹೊಂದಿದೆ. ಪರ್ವತಗಳಲ್ಲಿ ನಿರ್ಮಾಣಗೊಂಡ ಈ ಮಣ್ಣು ಇಳಿಜಾರಿನ ಮೈದಾನಕ್ಕೆ ಇಳಿದು ಬರುತ್ತದೆ. ಇದು ಸಾರಜನಕ ಮತ್ತು ಸಾವಯವ ಅವಶೇಷಗಳನ್ನು ಹೆಚ್ಚಾಗಿ ಒಳಗೊಂಡಿರುತ್ತದೆ. ಕಾಫಿ, ಚಹಾ, ಸಾಂಬಾರ ಪದಾರ್ಥಗಳು ಮತ್ತು ಹಣ್ಣುಗಳಿಗೆ ಸೂಕ್ತವಾಗಿದೆ. ಹಿಮಾಲಯದ ಪಾದ ಬೆಟ್ಟಗಳು, ಜಮ್ಮು ಮತ್ತು ಕಾಶ್ಮೀರ,ಹಿಮಾಚಲ ಪ್ರದೇಶ, ಉತ್ತರಾಖಂಡ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಪರ್ವತ ಪ್ರದೇಶಗಳಲ್ಲಿ ಈ ಮಣ್ಣು ಹಂಚಲ್ಪಟ್ಟಿದೆ.

ಮಣ್ಣಿನ ಸವೆತ :

ಭೂ ಮೇಲ್ಮೈಯಲ್ಲಿ ಕಂಡು ಬರುವ ಸಡಿಲವಾದ ಪದರವು ವಿವಿಧ ಪ್ರಾಕೃತಿಕ ಶಕ್ತಿಗಳಿಂದ ಸ್ಥಳಾಂತರ ಹೊಂದುವ ಕ್ರಿಯೆಯನ್ನೇ "ಮಣ್ಣಿನ ಸವೆತ" ಅಥವಾ "ಭೂ ಸವೆತ" ಎಂದು ಕರೆಯುತ್ತಾರೆ. ಹರಿಯುವ ನೀರು, ಗಾಳಿ ಸಮುದ್ರದ ಅಲೆ ಮುಂತಾದವುಗಳು ಭೂಸವೆತದ ಮುಖ್ಯ ಕರ್ತೃಗಳಾಗಿವೆ.

ಮಣ್ಣಿನ ಸವೆತಕ್ಕೆ ಕಾರಣಗಳು : ಮಣ್ಣಿನ ಸವೆತವು ದೇಶದ ಮುಖ್ಯ ಸಮಸ್ಯೆಗಳಲ್ಲಿ ಒಂದಾಗಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಅಧಿಕವಾಗಿದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ 1)ಅರಣ್ಯಗಳ ನಾಶ, 2) ಸಾಕು ಪ್ರಾಣಿಗಳನ್ನು ಮೇಯಿಸುವುದು, 3) ಅವೈಜ್ಞಾನಿಕ ಬೇಸಾಯ, 4) ಅಧಿಕ ನೀರಾವರಿ ಬಳಕೆ ಮೊದಲಾದವು. ಉದಾ: ಇಟ್ಟಿಗೆ, ಹೆಂಚು, ಮಡಿಕೆ ತಯಾರಿಕೆ ಮುಂತಾದವುಗಳಿಂದ ಮೇಲ್ಮಣ್ಣು ನಾಶವಾಗಿ ಅನುಪಯುಕ್ತವಾದ ಮಣ್ಣು ಉಳಿದುಕೊಳ್ಳುವುದು.

ಮಣ್ಣಿನ ಸವೆತದ ಪರಿಣಾಮಗಳು: ಮಣ್ಣಿನ ಸವೆತವು ಅನೇಕ ಸಮಸ್ಯೆಗಳಿಗೆ ಕಾರಣವಾಗುವುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ,

1) ಮಣ್ಣಿನ ಸವೆತದಿಂದ ನದಿಗಳಲ್ಲಿ ಹೂಳುತುಂಬಿ ಪ್ರವಾಹ ಉಂಟಾಗುತ್ತದೆ. 2) ನದಿಯ ಪಾತ್ರದಲ್ಲಿ ಹೂಳು ತುಂಬುವುದರಿಂದ ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತವೆ. 3) ಜಲಾಶಯ ಮತ್ತು ಕೆರೆಗಳಲ್ಲಿ ಹೂಳು ತುಂಬುವುದರಿಂದ ನೀರನ್ನು ಸಂಗ್ರಹಿಸುವ ಅವುಗಳ ಸಾಮರ್ಥ್ಯವು ಕಡಿಮೆಯಾಗುವುದು 4) ಭೂಸವೆತದಿಂದ ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗುವುದು. ಇದರಿಂದ ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ. ಭಾರತವು ವ್ಯವಸಾಯ ಪ್ರಧಾನವಾದ ರಾಷ್ಟ್ರ ಇದರಿಂದ ಭೂಸವೆತವು ವ್ಯವಸಾಯದ ಉತ್ಪಾದನೆಯ ಮೇಲೆ ಹೆಚ್ಚು ಪರಿಣಾಮವನ್ನು ಬೀರುವುದು. ಆದುದರಿಂದ ಫಲವತ್ತತೆ ಹಾಗೂ ಉತ್ಪಾದನೆಯನ್ನು ಕಾಪಾಡಲು ಮಣ್ಣಿನ ಸವೆತವನ್ನು ತಡೆಗಟ್ಟುವುದು ಅಗತ್ಯವಾಗಿದೆ.

ಮಣ್ಣಿನ ಸಂರಕ್ಷಣೆ ಮತ್ತು ನಿರ್ವಹಣೆ :

ಮಣ್ಣಿನ ಸವೆತವನ್ನು ತಡೆಗಟ್ಟುವುದು ಹಾಗೂ ಅದರ ಫಲವತ್ತತೆಯನ್ನು ಕಾಪಾಡುವುದೇ "ಮಣ್ಣಿನ ಸಂರಕ್ಷಣೆ" ಜೊತೆಗೆ ಫಲವತ್ತತೆ ಕಡಿಮೆಯಾಗದಂತೆ ಸುಸ್ಥಿರ ರೀತಿಯಲ್ಲಿ ಮಣ್ಣನ್ನು ಬಳಕೆಮಾಡಿ ನಿರಂತರವಾಗಿ ಬೆಳೆಗಳ ಉತ್ಪಾದನೆಯನ್ನು ಪಡೆಯುವುದೇ ಮಣ್ಣಿನ ನಿರ್ವಹಣೆಯಾಗಿದೆ. ದೇಶದ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಮಣ್ಣಿನ ಸವೆತವನ್ನು ತಡೆಗಟ್ಟುವ ಹಲವಾರು ವಿಧಾನಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ,

1) ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.

2) ಅಡ್ಡ ಬದುಗಳನ್ನು ನಿರ್ಮಿಸುವುದು.

3) ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ.

4) ಅರಣ್ಯ ನಾಶವನ್ನು ತಡೆಗಟ್ಟುವುದು ಮತ್ತು ಅರಣ್ಯಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು.

5) ಪ್ರಾಣಿಗಳನ್ನು ಮೇಯಿಸುವುದನ್ನು ನಿಯಂತ್ರಿಸುವುದು.

6) ನೀರಿನ ಯೋಜಿತ ಬಳಕೆ.

7) ಚೆಕ್ ಡ್ಯಾಮ್‌ಗಳ ನಿರ್ಮಾಣ ಇತ್ಯಾದಿ.

ನಿಮಗೆ ಇದು ತಿಳಿದಿರಲಿ

- *ಮಣ್ಣು ಒಂದು ಪ್ರಮುಖ ನೈಸರ್ಗಿಕ ಸಂಪನ್ಮೂಲವಾಗಿದೆ. ಇದು ರಾಷ್ಟ್ರದ ಪ್ರಮುಖ ಸಂಪತ್ತಾಗಿರುತ್ತದೆ.*
- *ಭಾರತದಲ್ಲಿ ಕಂಡು ಬರುವ ಭೂ ಬಳಕೆಯ ರೀತಿಗಳ ಮೇಲೆ ಭೌಗೋಳಿಕ ಅಂಶಗಳಾದ ಭೂಸ್ವರೂಪ, ವಾಯುಗುಣ, ಮಣ್ಣು ಮುಂತಾದವುಗಳು ಪ್ರಭಾವ ಬೀರುತ್ತವೆ.*
- *ಅತಿ ಸೂಕ್ಷ್ಮ ಕಣಗಳಿಂದ ಕೂಡಿರುವ ಮಣ್ಣನ್ನು ಜೇಡಿ (Clay) ಮಣ್ಣು ಎಂದು ಕರೆಯುವರು*
- *ಮರಳು ಮಣ್ಣು ಅತಿ ದಪ್ಪವಾದ ಕಣಗಳನ್ನು ಒಳಗೊಂಡಿರುವುದು.*
- *ಮಣ್ಣುಗಳ ಉತ್ಪತ್ತಿ, ಕಣರಚನೆ, ರಾಸಾಯನ ಸಂಯೋಜನೆ ಹಾಗೂ ಅದರ ಬದಲಾವಣೆ ಮುಂತಾದವುಗಳ ಅಧ್ಯಯನವನ್ನು "ಮಣ್ಣಿನ ಶಾಸ್ತ್ರ" (Pedology) ಎಂದು ಕರೆಯುವರು.*

ಅಭ್ಯಾಸಗಳು

I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.

1) ನದಿಗಳು ಪರ್ವತ ಪ್ರದೇಶಗಳಿಂದ ತಂದು ಸಂಚಯಿಸಿರುವ ಮಣ್ಣಿಗೆ ___________ ಎಂದು ಕರೆಯುವರು.

2) ಕಪ್ಪು ಮಣ್ಣಿನ ಪ್ರದೇಶವನ್ನು ___________ ಎಂದು ಸಹ ಕರೆಯುವರು.

3) ರಾಜಸ್ತಾನದಲ್ಲಿ __________ ಮಣ್ಣು ಹೆಚ್ಚಾಗಿ ಕಂಡುಬರುವದು.

4) ಜೋಳ ಬೆಳೆಯಲು __________ ಮಣ್ಣು ಸೂಕ್ತವಾಗಿದೆ.

5) ರಾಗಿ ಮತ್ತು ಎಣ್ಣೆಕಾಳು ಬೆಳೆಯಲು __________ ಮಣ್ಣು ಸೂಕ್ತವಾಗಿದೆ.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.

1) ಕಪ್ಪು ಮಣ್ಣು ಯಾವ ಬೆಳೆಗೆ ಹೆಚ್ಚು ಉಪಯುಕ್ತವಾಗಿದೆ?

2) ಭಾರತದಲ್ಲಿ ಕಂಡು ಬರುವ ಮಣ್ಣಿನ ಮುಖ್ಯ ಪ್ರಕಾರಗಳಾವುವು?

3) ಉತ್ತರ ಮೈದಾನ ಪ್ರದೇಶದಲ್ಲಿ ಯಾವ ಮಣ್ಣು ಕಂಡು ಬರುತ್ತದೆ?

4) ಮಣ್ಣಿನ ಸಂರಕ್ಷಣೆ ಎಂದರೇನು? ಅದರ ವಿಧಾನಗಳನ್ನು ಪಟ್ಟಿ ಮಾಡಿರಿ.

5) ಮಣ್ಣಿನ ಸವೆತ ಎಂದರೇನು? ಅದರಿಂದ ಉಂಟಾಗುವ ಪರಿಣಾಮಗಳನ್ನು ಸಂಗ್ರಹಿಸಿರಿ.

6) ಹಿಮಾಲಯ ಪರ್ವತಗಳಲ್ಲಿ ಯಾವ ಬಗೆಯ ಮಣ್ಣು ಕಂಡು ಬರುವವು?

III. 'ಅ' ಪಟ್ಟಿಯಲ್ಲಿನ ಮಣ್ಣುಗಳನ್ನು 'ಬ' ಪಟ್ಟಿಯಲ್ಲಿನ ಅಂಶಗಳೊಂದಿಗೆ ಹೊಂದಿಸಿ ಬರೆಯಿರಿ.

ಅ	ಬ
1) ಮೆಕ್ಕಲು ಮಣ್ಣು	ಎ) ರಾಗಿ ಮತ್ತು ಎಣ್ಣೆ ಕಾಳು ಬೆಳೆಯಲು
2) ಕಪ್ಪು ಮಣ್ಣು	ಬಿ) ಪಶ್ಚಿಮ ಘಟ್ಟಗಳ ಮಣ್ಣು
3) ಕೆಂಪು ಮಣ್ಣು	ಸಿ) ಗಂಗಾ ನದಿಯ ಮೈದಾನ
4) ಜಂಬಿಟ್ಟಿಗೆ ಮಣ್ಣು	ಡಿ) ಹತ್ತಿ ಬೆಳೆಯಲು
	ಇ) ಕಾಫಿ ಮತ್ತು ಚಹಾ ಬೆಳೆಯಲು.

IV. ಚಟುವಟಿಕೆ :

1) ನಿಮ್ಮ ತಾಲೂಕಿನ ಕೃಷಿ ಸಹಾಯಕ ನಿರ್ದೇಶಕರ ಕಾರ್ಯಾಲಯಕ್ಕೆ ಅಥವಾ ರೈತ ಸಂಪರ್ಕಕೇಂದ್ರಕ್ಕೆ ಭೇಟಿ ನೀಡಿ ವಿವಿಧ ನಮೂನೆಯ ಮಣ್ಣುಗಳನ್ನು ಪಟ್ಟಿಮಾಡಿ ಅವುಗಳ ಉಪಯೋಗ ತಿಳಿಯಿರಿ.

V. ಯೋಜಿತ ಕಾರ್ಯ :

1) ನಿಮ್ಮ ಮನೆಯ ಸುತ್ತ ಮುತ್ತಲಿನ ಅಥವಾ ನಿಮ್ಮ ಹೊಲದ ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಬೋಧಕರ ಸಹಾಯದಿಂದ ಮಣ್ಣು ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಿಸಿ. ಆ ಮಣ್ಣು ಯಾವ ಬೆಳೆಗೆ ಸೂಕ್ತ ಎಂಬುದನ್ನು ತಿಳಿದುಕೊಳ್ಳಿ.

ಅಧ್ಯಾಯ–5

ಭಾರತದ ಅರಣ್ಯಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭಾರತದ ಅರಣ್ಯಗಳ ವಿಧಗಳು, ಹಂಚಿಕೆ.* • *ಅರಣ್ಯಗಳ ಸಂರಕ್ಷಣೆ, ಸಂರಕ್ಷಣಾ ವಿಧಾನಗಳು.*
- *ವನ್ಯಜೀವಿ ಧಾಮಗಳು, ರಾಷ್ಟ್ರೀಯ ಉದ್ಯಾನವನಗಳು.*
- *ಜೈವಿಕ ಸಂರಕ್ಷಣಾ ವಲಯಗಳು.*

ಒಂದು ಪ್ರದೇಶದಲ್ಲಿ ಪ್ರಕೃತಿದತ್ತವಾಗಿ ಬೆಳೆದಿರುವ ಎಲ್ಲ ಬಗೆಯ ಸಸ್ಯ ಸಮೂಹವನ್ನು ಅರಣ್ಯಗಳು ಅಥವಾ ಸ್ವಾಭಾವಿಕ ಸಸ್ಯವರ್ಗವೆಂದು ಕರೆಯುವರು. ಇದು ಪ್ರಾಕೃತಿಕ ಪರಿಸರದ ಇತರ ಅಂಶಗಳಾದ ಉಷ್ಣಾಂಶ, ಮಳೆ, ಭೂಸ್ವರೂಪ, ಮಣ್ಣುಗಳು ಮುಂತಾದವುಗಳಿಂದ ಹೆಚ್ಚು ಪ್ರಭಾವಿತವಾಗುವುದು. ಭಾರತವು 2009 ರ ಅಂದಾಜಿನಂತೆ 6.9 ಲಕ್ಷ ಚ.ಕಿ.ಮೀ(69.0 ದ.ಲ.ಹೇ) ಅಂದರೆ ಭೌಗೋಳಿಕ ಕ್ಷೇತ್ರದ ಶೇ 21.02 ರಷ್ಟು ಭೂಭಾಗವು ಅರಣ್ಯಗಳಿಂದ ಕೂಡಿರುವುದಾಗಿದೆ.

ಭಾರತವು ಬಹುವಿಸ್ತಾರವಾದ ದೇಶವಾಗಿದ್ದು ವಿವಿಧ ಬಗೆಯ ಪ್ರಾಕೃತಿಕ ಪರಿಸರಗಳಿಂದ ಕೂಡಿದ್ದು, ಇದು ಹೊಂದಿರುವ ಪ್ರಾಕೃತಿಕ ಸಸ್ಯವರ್ಗದಲ್ಲಿ ಅನೇಕ ವಿಧಗಳನ್ನು ಕಾಣಬಹುದು. ಇವುಗಳನ್ನು ಆರು ಮುಖ್ಯ ಪ್ರಕಾರಗಳಾಗಿ ವಿಂಗಡಿಸಬಹುದಾಗಿದ್ದು ಅವುಗಳ ಬಗ್ಗೆ ತಿಳಿಯೋಣ.


1) ನಿತ್ಯ ಹರಿದ್ವರ್ಣದ ಅರಣ್ಯಗಳು : ಭಾರತದಲ್ಲಿ ನಿತ್ಯಹರಿದ್ವರ್ಣದ ಅರಣ್ಯಗಳನ್ನು 250 ಸೆಂ.ಮೀ.ಗಳಿಗಿಂತ ಹೆಚ್ಚು ಮಳೆ ಪಡೆಯುವ 900 ಮೀ.ಗಳಿಗಿಂತ ಕಡಿಮೆ ಎತ್ತರವನ್ನು ಹೊಂದಿರುವ ಪ್ರದೇಶಗಳಲ್ಲಿ ಕಾಣಬಹುದು. ಈ ಬಗೆಯ ಅರಣ್ಯಗಳು ಪಶ್ಚಿಮ ಘಟ್ಟಗಳು, ಈಶಾನ್ಯ ರಾಜ್ಯಗಳಾದ ಅಸ್ಸಾಂ, ಮೇಘಾಲಯ, ತ್ರಿಪುರಾ, ಮಣಿಪುರ, ನಾಗಾಲ್ಯಾಂಡ್ ಹಾಗೂ ಅಂಡಮಾನ್ ನಿಕೋಬಾರ್ ಮತ್ತು ಲಕ್ಷದ್ವೀಪಗಳಲ್ಲಿ ಕಂಡು ಬರುತ್ತವೆ. ಭಾರತದಲ್ಲಿ ನಿತ್ಯ ಹರಿದ್ವರ್ಣದ ಅರಣ್ಯಗಳು ಸುಮಾರು 2.6 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹರಡಿವೆ. ಈ ಪ್ರದೇಶದಲ್ಲಿ ಸಸ್ಯವರ್ಗವು ವರ್ಷವೆಲ್ಲಾ ಹಸಿರಾಗಿರುವದರಿಂದಲೇ ಇವುಗಳನ್ನು **ನಿತ್ಯ ಹರಿದ್ವರ್ಣ** ಅಥವಾ ಸದಾ ಹಸಿರಾಗಿರುವ ಅರಣ್ಯವೆಂದು ಕರೆಯುವರು.

2) ಎಲೆಯುದುರಿಸುವ ಮಾನ್ಸೂನ್ ಅರಣ್ಯಗಳು : ಈ ಪ್ರಕಾರದ ಅರಣ್ಯಗಳು ಭಾರತದಲ್ಲಿ ಅತಿಹೆಚ್ಚು ವಿಸ್ತಾರವಾಗಿ ಹರಡಿವೆ. ಇವುಗಳು 75 ರಿಂದ 250 ಸೆಂ.ಮೀ. ಮಳೆ ಪಡೆಯುವ ಪ್ರದೇಶಗಳಲ್ಲಿ ವ್ಯಾಪಕವಾಗಿ ವಿಸ್ತರಿಸಿವೆ. ಇದು ಭಾರತದ ಶೇ 65.5 ರಷ್ಟು ಒಟ್ಟು ಅರಣ್ಯದಲ್ಲಿ ಹರಡಿವೆ. ಭಾರತವು ಮಾನ್ಸೂನ್ ವಾಯುಗುಣವನ್ನು ಹೊಂದಿರುವುದರಿಂದ ಈ ಬಗೆಯ ಅರಣ್ಯಗಳು ವ್ಯಾಪಕವಾಗಿ ಹಂಚಿಕೆಯಾಗಿವೆ. ಇವುಗಳು ವರ್ಷದ ನಿರ್ದಿಷ್ಟ ಒಣ ಹವೆಯ ಋತುವಿನಲ್ಲಿ ಎಲೆಯುದುರಿಸುವುದನ್ನು ರೂಢಿಸಿ ಕೊಂಡಿರುವುದರಿಂದ ಇವುಗಳನ್ನು ಎಲೆಯುದುರಿಸುವ ಮಾನ್ಸೂನ್ ಅರಣ್ಯಗಳೆಂದು ಕರೆಯುವರು.

3) ಉಷ್ಣವಲಯದ ಹುಲ್ಲುಗಾವಲು ಅರಣ್ಯ : ಭಾರತದಲ್ಲಿ 60 ರಿಂದ 75 ಸೆಂ.ಮೀ ಮಳೆ ಪಡೆಯುವ ಪ್ರದೇಶಗಳಲ್ಲಿ ಹುಲ್ಲುಗಾವಲು ಸಸ್ಯವರ್ಗ ಪ್ರಧಾನವಾಗಿ ಕಂಡುಬರುವುದು. ಈ ವಲಯಗಳಲ್ಲಿ ಎತ್ತರವಾದ ಹುಲ್ಲು ಹಾಗೂ ವಿರಳವಾಗಿ ಅಲ್ಲಲ್ಲಿ ಕುರುಚಲ ಜಾತಿಯ ಸಸ್ಯವರ್ಗಗಳನ್ನು ಕಾಣಬಹುದು. ದಖನ್

ಪ್ರಸ್ಥಭೂಮಿಯ ಕೇಂದ್ರಭಾಗ, ಅರಾವಳಿ ಪರ್ವತಗಳ ಪಶ್ಚಿಮದಲ್ಲಿರುವ ಥಾರ್ ಮರುಭೂಮಿಯ ಅಂಚಿನ ವಲಯಗಳು ಈ ಬಗೆಯ ಸಸ್ಯವರ್ಗವನ್ನು ಹೊಂದಿವೆ. ಬಬೂಲ್, ಶಿಷಮ್, ಸಭಾಯ್ ಹುಲ್ಲು ಇತ್ಯಾದಿ ಇಲ್ಲಿ ಬೆಳೆಯುತ್ತವೆ.

4) **ಮ್ಯಾಂಗ್ರೂವ್ ಅರಣ್ಯಗಳು :** ತೀರ ಪ್ರದೇಶಗಳ ತಗ್ಗುವಲಯಗಳು ಸಮುದ್ರದ ಉಬ್ಬರದ ಕಾಲದಲ್ಲಿ ನೀರಿನಿಂದ ಆವರಿಸಲ್ಪಡುತ್ತವೆ. ಈ ಕಾಡುಗಳು ಇಂತಹ ನದಿ ಮುಖಜ ಭೂಮಿಗಳು ಮತ್ತು ನದಿ ಅಳಿವೆಗಳ ತಗ್ಗು ಪ್ರದೇಶಗಳಲ್ಲಿ ಕಂಡು ಬರುತ್ತವೆ. ಗಂಗಾ,ಮಹಾನದಿ,ಗೋದಾವರಿ,ಕೃಷ್ಣಾನದಿ ಮುಖಜಭೂಮಿಯಲ್ಲಿ ಕಂಡುಬರುತ್ತವೆ. ಗಂಗಾನದಿಯ ಮುಖಜ ಭೂಮಿಯಲ್ಲಿ ಸುಂದರಿ ಮರಗಳು ಹೇರಳವಾಗಿರುವದರಿಂದ ಈ ಪ್ರದೇಶವನ್ನು **ಸುಂದರಬನ್** ಎಂದು ಕರೆಯುತ್ತಾರೆ. ಈ ಅರಣ್ಯಗಳ ಕ್ಷೇತ್ರ ದೇಶದಲ್ಲಿ 4.4 ಸಾವಿರ ಚ.ಕಿ.ಮೀ ರಷ್ಟಿರುವುದು.



5) **ಮರುಭೂಮಿ ಅರಣ್ಯಗಳು :** ಈ ಅರಣ್ಯಗಳು ಸಾಮಾನ್ಯವಾಗಿ ವಾರ್ಷಿಕ 50 ಸೆ.ಮೀ.ಗಿಂತಲೂ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಕಂಡು ಬರುತ್ತವೆ. ರಾಜಸ್ತಾನದ ಥಾರ್ ಮರುಭೂಮಿ ಅದಕ್ಕೆ ಹೊಂದಿಕೊಂಡ ಪಂಜಾಬ್, ಹರಿಯಾಣ ಮತ್ತು ಗುಜರಾತ್ ರಾಜ್ಯಗಳ ಕೆಲವು ಭಾಗಗಳಲ್ಲಿ ಈ ಅರಣ್ಯಗಳಿವೆ. ಈ ಸಸ್ಯವರ್ಗಗಳು ಆಳವಾಗಿ ಬೇರುಗಳನ್ನು ಹೊಂದಿದ್ದು ಕುರುಚಲ ಜಾತಿಯ ಸಸ್ಯವರ್ಗಗಳು ಮುಳ್ಳು ಕಂಟಿಗಳಿಂದ ಕೂಡಿರುತ್ತವೆ.

6) ಹಿಮಾಲಯದ ಅಲ್ಪೈನ್ ಅರಣ್ಯಗಳು : ಹಿಮಾಲಯ ಪರ್ವತಗಳಲ್ಲಿ ವಿವಿಧ ಬಗೆಯ ಅರಣ್ಯಗಳು ಕಂಡು ಬರುತ್ತವೆ. ಏಕೆಂದರೆ ಎತ್ತರವು ಹೆಚ್ಚಿದಂತೆ ಉಷ್ಣವಲಯದಿಂದ ಧ್ರುವ ಪ್ರದೇಶದವರೆಗಿನ ವಾಯುಗುಣಗಳನ್ನು ಈ ಪರ್ವತಗಳಲ್ಲಿ ಕಾಣಬಹುದು. ವಾಯುಗುಣಕ್ಕೆ ಅನುಗುಣವಾಗಿ ವಿವಿಧ ಪ್ರಕಾರದ ಸಸ್ಯವರ್ಗಗಳು ಇಲ್ಲಿ ಕಂಡು ಬರುವುವು. ಇಲ್ಲಿ ಬೆಳೆಯುವ ಮುಖ್ಯ ಮರಗಳೆಂದರೆ ಸಾಲ್, ಬೈರಾ, ಟೂನ್, ಸಿಲ್ವರ್,ಸ್ಪ್ರೂಸ್, ಲಾರೆಲ್ ಮುಂತಾದ ಎಲೆ ಮೊನಚಾದ ಅರಣ್ಯಗಳು ಪ್ರಧಾನವಾಗಿ ಬೆಳೆದಿರುತ್ತವೆ.

> ***ಚಟುವಟಿಕೆ :***
>
> *ನಿಮ್ಮ ಊರಿನ ಸುತ್ತ ಇದ್ದಂತಹ ಮರಗಳ ತೋಪು ಮತ್ತು ಪರಿಸರದ ಬಗ್ಗೆ ನಿಮ್ಮ ಹಿರಿಯರಿಂದ ಮಾಹಿತಿ ಪಡೆದು, ಇಂದು ಅಲ್ಲಿ ಆಗಿರುವ ಬದಲಾವಣೆಗಳನ್ನು ಗಮನಿಸಿ.*

ಅರಣ್ಯಗಳ ಹಂಚಿಕೆ :

ಯಾವುದೇ ಪ್ರದೇಶವು ಅನುಕೂಲಕರ ಪರಿಸರವನ್ನು ಹೊಂದಿರಲು ಶೇ 33 ರಷ್ಟು ಅರಣ್ಯ ಕ್ಷೇತ್ರವನ್ನು ಹೊಂದಿರಬೇಕೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಭಾರತವು ಹೊಂದಿರುವ ಅರಣ್ಯದ ವಿಸ್ತೀರ್ಣವು ದೇಶದ ಒಟ್ಟು ಕ್ಷೇತ್ರಕ್ಕೆ ಹೋಲಿಸಿದರೆ ಅತಿಕಡಿಮೆ. ರಾಜ್ಯವಾರು ಅರಣ್ಯಗಳ ಕ್ಷೇತ್ರವನ್ನು ವಿಶ್ಲೇಷಿಸಿದಾಗ ಮಧ್ಯಪ್ರದೇಶ ರಾಜ್ಯವು ಪ್ರಥಮ ಸ್ಥಾನದಲ್ಲಿದ್ದರೆ, ಹರಿಯಾಣ ರಾಜ್ಯವು ಕೊನೆ ಸ್ಥಾನದಲ್ಲಿದ್ದು, ಕರ್ನಾಟಕವು 13ನೇ ಸ್ಥಾನದಲ್ಲಿದೆ.

ಅರಣ್ಯಗಳ ಸಂರಕ್ಷಣೆ : ಅರಣ್ಯಗಳನ್ನು ಮಾನವ, ಪ್ರಾಣಿಗಳಿಂದ ಹಾಗೂ ನೈಸರ್ಗಿಕ ವಿಪತ್ತುಗಳಿಂದ ಕಾಪಾಡುವುದನ್ನೇ **'ಸಂರಕ್ಷಣೆ'** ಎಂದು ಕರೆಯುವರು. ಭಾರತದಲ್ಲಿ ಅರಣ್ಯಗಳ ಕ್ಷೇತ್ರವು ನಿರಂತರವಾಗಿ ಇಳಿಮುಖವಾಗುತ್ತಿದೆ. ವ್ಯವಸಾಯದ ವಿಸ್ತರಣೆ, ಹೈನುಗಾರಿಕೆ, ರಸ್ತೆಗಳು, ರೈಲುಮಾರ್ಗಗಳು, ನೀರಾವರಿ ಯೋಜನೆಗಳ ನಿರ್ಮಾಣ, ಕಾಡ್ಗಿಚ್ಚು, ಗಣಿಗಾರಿಕೆ ಮುಂತಾದವುಗಳು ಅರಣ್ಯ ನಾಶಕ್ಕೆ ಮುಖ್ಯ ಕಾರಣಗಳಾಗಿವೆ. ಆದ್ದರಿಂದಾಗಿ ಅರಣ್ಯಗಳನ್ನು ಸಂರಕ್ಷಿಸಬೇಕಾದುದು ಅತ್ಯಂತ ಮುಖ್ಯವಾಗಿದೆ. ಇದಕ್ಕಾಗಿ ಕೆಲವು ಸಂರಕ್ಷಣಾ ಕ್ರಮಗಳನ್ನು ಮಾಡಬೇಕಿದೆ.

ಸಂರಕ್ಷಣಾ ವಿಧಾನಗಳು : ಕಾಡ್ಗಿಚ್ಚು ಉಂಟುಮಾಡುವ ಘರ್ಷಿತ ಮರಗಳನ್ನು ತೆಗೆಯುವುದು. ಅರಣ್ಯದ ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು. ಸಸಿಗಳನ್ನು ನೆಡುವುದು, ಬೀಜಗಳನ್ನು ಹರಡುವುದು. ಕಾನೂನು ಬಾಹಿರವಾಗಿ ಮರ ಕಡಿಯುವದನ್ನು ನಿಯಂತ್ರಿಸುವುದು. ಅರಣ್ಯಗಳಲ್ಲಿ ಸಾಕು ಪ್ರಾಣಿಗಳ ಮೇಯಿಸುವಿಕೆಯನ್ನು ನಿಯಂತ್ರಿಸುವುದು. ಸಾರ್ವಜನಿಕರನ್ನು ಮರ ನೆಡಲು ಪ್ರೋತ್ಸಾಹಿಸುವುದು ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ನೀಡಿ ರಕ್ಷಣೆಗೆ ಪ್ರೇರೇಪಿಸುವುದು. ಸಾಮಾಜಿಕ ಅರಣ್ಯ ಯೋಜನೆಯನ್ನು ತ್ವರಿತವಾಗಿ ಯಶಸ್ವಿಯಾಗಿ ಕಾರ್ಯಗತಗೊಳಿಸುವುದು.

ವನ್ಯ ಜೀವಿ ಧಾಮಗಳು : ವಿವಿಧ ಪ್ರಾಣಿಗಳನ್ನು ಅವುಗಳ ಮೂಲ ಸ್ಥಳದಲ್ಲಿಯೇ ಸಂರಕ್ಷಿಸಲು ವನ್ಯಜೀವಿ ಧಾಮಗಳನ್ನು ನಿರ್ಮಿಸಲಾಗಿದೆ. ಭಾರತದಲ್ಲಿ ಇಂದು ಸುಮಾರು 523 ವನ್ಯಜೀವಿ ಧಾಮಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ :

- **ತಮಿಳುನಾಡು :** ಅಣ್ಣಾಮಲೈ ವನ್ಯ ಜೀವಿಧಾಮ, ಕೊಯಿಮತ್ತೂರು, ನೀಲಗಿರಿ.
- **ಪಶ್ಚಿಮ ಬಂಗಾಳ :** ಮದಾರಿಹಾತ್, ಜಾಲ್ದಾಪಾರ.
- **ರಾಜಸ್ತಾನ :** ಭರತಪುರ, ಕಿವೋಲ ಡಿವೋ ಪಕ್ಷಿಧಾಮ.

- **ಹರಿಯಾಣ :** ಸುಲ್ತಾನಪೂರ, ಗುರೆಗಾಂವ.
- **ಪಂಜಾಬ :** ಬೀರ್‌ಮೊತಿಬಾಗ್, ಪಟಿಯಾಲ.
- **ಆಂಧ್ರಪ್ರದೇಶ :** ಗುಂಟೂರು, ನಾಗಾರ್ಜುನ ಸಾಗರ.

ರಾಷ್ಟ್ರೀಯ ಉದ್ಯಾನವನಗಳು : (ಎನ್.ಪಿ) ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನವೆಂದರೆ ಉತ್ತರಾಂಚಲದ ಜಿಮ್ ಕಾರ್ಬೆಟ್. ದೇಶದ ಅತಿಮುಖ್ಯ ರಾಷ್ಟ್ರೀಯ ಉದ್ಯಾನವನಗಳೆಂದರೆ :

1) ಕಾಜಿರಂಗ ನ್ಯಾಷನಲ್ ಪಾರ್ಕ್, ಸಿಬ್‌ಸಾಗರ, ಅಸ್ಸಾಂ.
2) ಸುಂದರಬನ, 24 ಪರಗಣ ಜಿಲ್ಲೆ, ಪಶ್ಚಿಮ ಬಂಗಾಳ.
3) ಹಜಾರಿಭಾಗ ನ್ಯಾಷನಲ್ ಪಾರ್ಕ್, ಬಿಹಾರ.
4) ಗಿರ್ ನ್ಯಾಷನಲ್ ಪಾರ್ಕ್, ಜಗನ್ನಾಥ, ಗುಜರಾತ.
5) ಕನ್ಹಾ ರಾಷ್ಟ್ರೀಯ ಉದ್ಯಾನವನ, ಮಾಂಡ್ಯ ಮತ್ತು ಬಾಲಘಾಟ್ ಮಧ್ಯ ಪ್ರದೇಶ.
6) ತಾಂಡೋವಾ ರಾಷ್ಟ್ರೀಯ ಉದ್ಯಾನವನ, ಚಂದ್ರಾಪೂರ, ಮಹಾರಾಷ್ಟ್ರ.

ಜೈವಿಕ ಸಂರಕ್ಷಣಾ ವಲಯಗಳು (Biosphere Reserves) :

ಭಾರತವು ಸಸ್ಯ ಸಮೃದ್ಧತೆಯ ಜೊತೆಗೆ ಪ್ರಾಣಿ ಸಂಪತ್ತಿನ ವೈವಿಧ್ಯತೆಯನ್ನು ಒಳಗೊಂಡಿದೆ. ಈ ಜೈವಿಕ ವ್ಯವಸ್ಥೆಗಳನ್ನು ಕಾಪಾಡಲು ದೇಶದಲ್ಲಿ 18 ಜೈವಿಕ ವಲಯಗಳನ್ನು ಸಂರಕ್ಷಿಸಲಾಗುತ್ತಿದೆ. ಅವುಗಳೆಂದರೆ ನೀಲಗಿರಿ, ನಂದಾದೇವಿ, ನೋಕ್ರೆಕ್, ಗ್ರೇಟ್‌ನಿಕೊಬಾರ್, ಮನ್ನಾರ್ ಅಖಾತ, ಮನಾಸ್ ಸುಂದರಬನ, ಸಿಮಿಲಿಪಾಲ್, ಕಾಂಚನಗಂಗಾ, ಅಮರಕಂಟಕ, ಶೀತ ಮರುಭೂಮಿ (ಹಿಮಾಚಲ ಪ್ರದೇಶ) ಪನ್ನಾ ಮತ್ತು ಶೇಷಾಚಲಂ ನೀಲಗಿರಿ ಸಂರಕ್ಷಣಾ ವಲಯವು ದೇಶದಲ್ಲಿ ಪ್ರಥಮವಾಗಿದೆ.

ನಿಮಗೆ ಇದು ತಿಳಿದಿರಲಿ

- *ಭಾರತದಲ್ಲಿ ಸುಮಾರು 523 ವನ್ಯಜೀವಿ ಧಾಮಗಳಿವೆ.*
- *99 ರಾಷ್ಟ್ರೀಯ ಉದ್ಯಾನವನಗಳಿವೆ.*
- *70 ಸಸ್ಯೋದ್ಯಾನ (ಬಟಾನಿಕಲ್ ಗಾರ್ಡನ್)ಗಳಿವೆ.*
- *275 ಪ್ರಾಣಿ ಸಂಗ್ರಾಹಲಯಗಳಿವೆ.*
- *104 ಜೌಗು ಹಾಗೂ ತೇವಯುತ ಜೈವಿಕ ಸಂರಕ್ಷಣಾ ವಲಯಗಳಿವೆ.*
- *ಭಾರತದಲ್ಲಿ ಪ್ರಪಂಚದ 17 ಮಹಾಜೀವಿ ವೈವಿಧ್ಯತೆಯ ರಾಷ್ಟ್ರಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಪ್ರಪಂಚದ ಶೇ 8 ರಷ್ಟು ಜೀವ ವೈವಿಧ್ಯತೆಯನ್ನು ಭಾರತವು ಹೊಂದಿದೆ.*

ಅಭ್ಯಾಸಗಳು

I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.

1) ಅಸ್ಸಾಂ, ಮೇಘಾಲಯಗಳಲ್ಲಿ ಕಂಡುಬರುವ ಅರಣ್ಯದ ಪ್ರಕಾರವು __________ ಆಗಿದೆ.

2) ಹಿಮಾಲಯದಲ್ಲಿ __________ ಅರಣ್ಯಗಳು ಕಂಡು ಬರುತ್ತವೆ.

3) ಗಂಗಾನದಿ ಮುಖಜ ಭೂಮಿ ಪ್ರದೇಶವನ್ನು __________ ವೆಂದು ಕರೆಯುತ್ತಾರೆ.

4) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವು __________ ರಾಜ್ಯದಲ್ಲಿದೆ.

5) ಸುಂದರಬನ್ ಎಂದು ಕರೆಯಲು __________ ಮರಗಳು ಬೆಳೆಯಲು ಕಾರಣವಾಗಿದೆ.

II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.

1. ಭಾರತವು ಹೊಂದಿರುವ ಅರಣ್ಯ ಪ್ರದೇಶಗಳೆಷ್ಟು ?
2. ಕರ್ನಾಟಕದ ಎರಡು ರಾಷ್ಟ್ರೀಯ ಉದ್ಯಾನವನಗಳನ್ನು ಹೆಸರಿಸಿ.
3. ಸ್ವಾಭಾವಿಕ ಸಸ್ಯವರ್ಗ ಎಂದರೇನು?
4. ದೇಶದಲ್ಲಿನ ಅರಣ್ಯ ಸಂರಕ್ಷಣೆಗೆ ನಿಮ್ಮ ಸಲಹೆಗಳು ಯಾವುವು ?
5. ಜೈವಿಕ ವೈವಿದ್ಯತೆ ಎಂದರೇನು?
6. ಭಾರತದಲ್ಲಿ ಎಲೆ ಉದುರುವ ಅರಣ್ಯಗಳ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.
7. ಅರಣ್ಯ ಸಂರಕ್ಷಣೆ ಎಂದರೇನು? ಅದರ ಪ್ರಾಮುಖ್ಯತೆ ಮತ್ತು ವಿಧಾನಗಳನ್ನು ತಿಳಿಸಿ.

III. ಚಟುವಟಿಕೆ :

1) ನೀವಿರುವ ಪ್ರದೇಶದ ಸ್ವಾಭಾವಿಕ ಸಸ್ಯ ವರ್ಗವನ್ನು ತಿಳಿಸಿ. ಅಲ್ಲಿರುವ ಮುಖ್ಯ ಸಸ್ಯವರ್ಗ ಮತ್ತು ಪ್ರಾಣಿವರ್ಗವನ್ನು ಪಟ್ಟಿ ಮಾಡಿರಿ.

2) ನೀವು ನೋಡಿರುವ ವಿವಿಧ ಮರಗಳ ಹೆಸರುಗಳನ್ನು ಪಟ್ಟಿ ಮಾಡಿರಿ.

VI. ಯೋಜಿತ ಕಾರ್ಯ :

1) ವನ್ಯ ಜೀವಿಧಾಮಗಳಲ್ಲಿ ವಾಸಿಸುವ ಪ್ರಾಣಿಗಳ ಚಿತ್ರಗಳ ಆಲ್ಬಂ ತಯಾರಿಸಿ.

2) ಭಾರತದ ನಕ್ಷೆಯಲ್ಲಿ ಜೈವಿಕ ಸಂರಕ್ಷಣಾವಲಯಗಳನ್ನು ಗುರುತಿಸಿ.

ಅಧ್ಯಾಯ–6

ಜಲ ಸಂಪನ್ಮೂಲಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ನೀರಾವರಿ ಮಹತ್ವ*
- *ನೀರಾವರಿ ವಿಧಗಳು.*
- *ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು.*
- *ಭಾರತದ ಪ್ರಮುಖ ಜಲ ವಿದ್ಯುಚ್ಛಕ್ತಿ ಯೋಜನೆಗಳು*
- *ರಾಷ್ಟ್ರೀಯ ವಿದ್ಯುತ್ ಜಾಲ.*
- *ಮಳೆ ನೀರು ಸಂಗ್ರಹಣೆ.*

ನೀರು ಒಂದು ಪ್ರಮುಖ ನೈಸರ್ಗಿಕ ಸಂಪನ್ಮೂಲವಾಗಿದೆ. ಇದು ಮಾನವನ ಮೂಲ ಬೇಡಿಕೆಯಾಗಿದ್ದು, ರಾಷ್ಟ್ರದ ಸಂಪತ್ತಾಗಿರುವುದು. ಇದನ್ನು ನೀರಾವರಿ, ಜಲವಿದ್ಯುಚ್ಛಕ್ತಿ ಉತ್ಪಾದನೆ, ಕೈಗಾರಿಕೆ, ಗೃಹಬಳಕೆ, ಜಲಸಾರಿಗೆ, ಮೀನುಗಾರಿಕೆ ಮತ್ತು ಮನರಂಜನಾ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಸತತವಾಗಿ ಹೆಚ್ಚುತ್ತಿರುವ ಜನಸಂಖ್ಯೆಯ ಅಗತ್ಯಗಳು ಮತ್ತು ರಾಷ್ಟ್ರದ ನೈಸರ್ಗಿಕ ಸಂಪತ್ತಿನ ನ್ಯಾಯಸಮ್ಮತ ಬಳಕೆ, ಇವುಗಳ ದೃಷ್ಟಿಯಿಂದ ಜಲಸಂಪತ್ತಿನ ಅಭಿವೃದ್ಧಿಯು ಅವಶ್ಯಕವಾಗಿದೆ.

ಭೂಮಿಯ ಮೇಲಿನ ನೀರಿನ ಮೂಲಗಳೆಂದರೆ ನದಿಗಳು ಮತ್ತು ಸರೋವರಗಳು. ಅಂತರ್ಜಲದ ನೀರಿನ ಮೂಲಗಳೆಂದರೆ ಬಾವಿ ಮತ್ತು ಚಿಲುಮೆಗಳು. ಇವುಗಳಲ್ಲಿ ನೀರಿನ ಲಭ್ಯತೆಯು ಪ್ರದೇಶದಿಂದ ಪ್ರದೇಶಕ್ಕೆ ಕಾಲದಿಂದ ಕಾಲಕ್ಕೆ ವ್ಯತ್ಯಾಸ ಹೊಂದುತ್ತದೆ. ಭಾರತದಲ್ಲಿ ಮಳೆಯು ಅನಿಶ್ಚಿತ, ಅಸಮಾನ ಹಾಗೂ ನಿಯತಕಾಲಿಕವಾಗಿರುವುದರಿಂದ ವ್ಯವಸಾಯ ಮಾಡಲು ಕಾಲುವೆ, ಕೆರೆ ಹಾಗೂ ಬಾವಿ ನೀರಾವರಿಗಳನ್ನು ಅವಲಂಬಿಸಿದೆ.

ನೀರಾವರಿ ಎಂದರೆ "ವ್ಯವಸಾಯದ ಭೂಮಿಗೆ ಕೃತಕವಾಗಿ ಕಾಲುವೆ, ಬಾವಿ ಮತ್ತು ಕೆರೆಗಳಿಂದ ನೀರು ಸರಬರಾಜು ಮಾಡುವುದು." ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಮತ್ತು ವ್ಯವಸಾಯವು ಅತ್ಯಂತ ಪ್ರಧಾನವಾಗಿರುವ ಕಡೆಗಳಲ್ಲಿ ನೀರಾವರಿ ಬಹಳ ಅವಶ್ಯಕವಾಗಿದೆ. ನೀರಾವರಿ ವ್ಯವಸಾಯ ಪದ್ಧತಿಯು ಕೃಷಿಯು ಇತಿಹಾಸದಲ್ಲಿಯೇ ಒಂದು ಮಹತ್ವದ ಸಾಧನೆಯಾಗಿದೆ. ದೇಶದಲ್ಲಿ ಬಳಕೆಗೆ ದೊರೆಯುವ ಒಟ್ಟು ಜಲಸಂಪತ್ತಿನ ಪ್ರಮಾಣ ಗರಿಷ್ಠ 140 ದಶಲಕ್ಷ ಹೆಕ್ಟರ್ ಪ್ರದೇಶಕ್ಕೆ ನೀರಾವರಿಯನ್ನು ಒದಗಿಸಬಹುದು. ಆದರೆ ಅಭಿವೃದ್ಧಿ ಪಡಿಸಿರುವ ನಿವ್ವಳ ನೀರಾವರಿಯ ಕ್ಷೇತ್ರ 62.2 ದಶಲಕ್ಷ ಹೆಕ್ಟೇರ್‌ಗಳಷ್ಟು ಮಾತ್ರ. ಭಾರತವು ಇಂದು ಪ್ರಪಂಚದಲ್ಲಿ ಅತಿ ಹೆಚ್ಚು ನೀರಾವರಿಯ ಕ್ಷೇತ್ರವನ್ನು ಹೊಂದಿದೆ.

ನಿಮಗೆ ತಿಳಿದಿರಲಿ :

- *ನದಿಗಳ ಮೂಲಕ ಹರಿಯುವ ನೀರಿನ ಪ್ರಮಾಣ 1869 ಬಿಲಿಯನ್ ಘನ ಕಿ.ಮೀ. ಇದರಲ್ಲಿ ಬಳಸಿಕೊಳ್ಳುಬಹುದಾದ ಪ್ರಮಾಣ 690 ದ.ಲ. ಕಿ.ಮೀ.*
- *ಅಂತರ್ಜಲದ ಪ್ರಮಾಣ 432 ದ.ಲ.ಘನ ಕಿ.ಮೀ.*
- *ದೇಶದಲ್ಲಿ ಬಳಕೆಗೆ ದೊರೆಯುವ ಒಟ್ಟು ಜಲಸಂಪತ್ತಿನ ಪ್ರಮಾಣ 1122 ಬಿಲಿಯನ್ ಘನ ಕಿ.ಮೀ.*
- *1 ಹೆಕ್ಟೇರ್ = 2.47 ಎಕರೆ*

ನೀರಾವರಿಯ ವಿಧಗಳು : ಭಾರತವು ಪ್ರಾಕೃತಿಕ ಪರಿಸರ ವೈವಿಧ್ಯತೆಗಳಿಗೆ ಹೆಸರಾದದ್ದು. ಜೊತೆಗೆ ಜಲ ಸಂಪತ್ತಿನ ಹಂಚಿಕೆಯಲ್ಲಿ ಈ ವ್ಯತ್ಯಾಸವನ್ನು ಸ್ಪಷ್ಟವಾಗಿ ಕಾಣಬಹುದು. ಇದಲ್ಲದೆ ವ್ಯವಸಾಯಕ್ಕೆ ಬೇಕಾಗಿರುವ ನೀರಾವರಿಯ ಪ್ರಮಾಣ, ಮಳೆಯ ಹಂಚಿಕೆ, ಮೇಲ್ಮೈ ಲಕ್ಷಣ, ಬೆಳೆಯುವ ಬೆಳೆಗಳು, ರೂಢಿಯಲ್ಲಿರುವ ವ್ಯವಸಾಯ ಪದ್ಧತಿ ಮುಂತಾದವುಗಳನ್ನು ಅನುಸರಿಸಿ ವಿವಿಧ ಪ್ರದೇಶಗಳಲ್ಲಿ ವಿವಿಧ ಬಗೆಯ ನೀರಾವರಿ ಪದ್ಧತಿಗಳು ದೇಶದಾದ್ಯಂತ ರೂಢಿಯಲ್ಲಿವೆ. ಇವುಗಳನ್ನು ನೀರಾವರಿಯ ಮೂಲದ ಆಧಾರದ ಮೇಲೆ ಬಾವಿ ನೀರಾವರಿ, ಕಾಲುವೆ ನೀರಾವರಿ, ಕೆರೆ ನೀರಾವರಿ ಎಂದು ವಿಂಗಡಿಸಬಹುದು.

> *ನಿಮಗೆ ತಿಳಿದಿರಲಿ :*
> *ಭಾರತವು ಪ್ರಪಂಚದಲ್ಲಿ ಅತಿ ಹೆಚ್ಚು ನೀರಾವರಿಯ ಕ್ಷೇತ್ರವನ್ನು ಹೊಂದಿದೆ. ಚೈನಾ ಎರಡನೆಯ ಸ್ಥಾನದಲ್ಲಿದೆ.*

(1) **ಬಾವಿ ನೀರಾವರಿ :** ಭಾರತದ ಪ್ರಮುಖ ನೀರಾವರಿ ಮೂಲಗಳಲ್ಲಿ ಬಾವಿ ನೀರಾವರಿಯು ಅತಿ ಮುಖ್ಯವಾದುದು. ಇದು ದೇಶದಲ್ಲಿ ಅತಿ ಹೆಚ್ಚು ಕೃಷಿ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ವಿಧಾನವಾಗಿದೆ. ಬಾವಿಗಳನ್ನು ತೋಡಿ ತನ್ಮೂಲಕ ಭೂ ಅಂತರ್ಜಲವನ್ನು ಹೊರತೆಗೆದು ಕೃಷಿಗೆ ಬಳಸುವದೇ ಬಾವಿ ನೀರಾವರಿ. ಬಾವಿ ನೀರಾವರಿಯನ್ನು ಕಡಿಮೆ ಮಳೆ ಬೀಳುವ ಭಾಗಗಳಲ್ಲಿ ಹೆಚ್ಚು ಉಪಯುಕ್ತವಾಗಿವೆ. ಬಾವಿಯ ನಿರ್ಮಾಣ ಮತ್ತು ನಿರ್ವಹಣೆಯು ಸುಲಭ. ಕೆರೆ ಮತ್ತು ಕಾಲುವೆ ನೀರಾವರಿ ಸೌಲಭ್ಯವಿಲ್ಲದ ಭಾಗಗಳಲ್ಲಿ ಬಾವಿ ನೀರಾವರಿ ಅವಶ್ಯಕ. ಬಾವಿಗಳಲ್ಲಿ ಎರಡು ಪ್ರಕಾರವಾಗಿ ವಿಂಗಡಿಸಲಾಗಿದೆ. (1) ತೆರೆದ ಬಾವಿ (2) ಕೊಳವೆ ಬಾವಿ.

ತೆರೆದ ಬಾವಿ : ಇಂತಹ ಬಾವಿಗಳನ್ನು ಕೃಷಿ ಭೂಮಿಯ ಸೂಕ್ತವಾದ ಸ್ಥಳದಲ್ಲಿ ತೋಡಲಾಗುವುದು. ಅವುಗಳಿಂದ ನೀರನ್ನು ಮಾನವನ ದೈಹಿಕ ಬಲ, ಪ್ರಾಣಿಗಳಿಂದ ಅಥವಾ ಯಂತ್ರಗಳ ಸಹಾಯದಿಂದ ಮೇಲೆತ್ತಿ ಜಮೀನಿಗೆ ಒದಗಿಸಲಾಗುವುದು. ಇತ್ತೀಚೆಗೆ ಡೀಸೆಲ್ ಮತ್ತು ವಿದ್ಯುತ್ ಚಾಲಿತ ಯಂತ್ರ ಇತ್ಯಾದಿ ವಿಧಾನಗಳಿಂದ ನೀರನ್ನು ಹೊರತೆಗೆಯಲಾಗುವುದು.

ಕೊಳವೆ ಬಾವಿ : ಭಾರತದ ಬಾವಿ ನೀರಾವರಿಯಲ್ಲಿ ಇಂದು ಕೊಳವೆ ಬಾವಿಗಳ ಪಾತ್ರ ಅತಿ ಪ್ರಧಾನ. ಒಟ್ಟು ಬಾವಿ ನೀರಾವರಿ ಕ್ಷೇತ್ರದ ಶೇ. 59.7 ರಷ್ಟು ಹಾಗೂ ದೇಶದ ಒಟ್ಟು ನೀರಾವರಿ ಕ್ಷೇತ್ರ ಶೇ. 33.7 ರಷ್ಟು ಕೊಳವೆ ಬಾವಿ ನೀರಾವರಿಗೊಳಪಟ್ಟಿದೆ.

2) **ಕಾಲುವೆ ನೀರಾವರಿ :** ಭಾರತದಲ್ಲಿ ರೂಢಿಯಲ್ಲಿರುವ ನೀರಾವರಿ ಪದ್ಧತಿಗಳಲ್ಲಿ ಕಾಲುವೆ ನೀರಾವರಿಯು ಪ್ರಮುಖವಾದುದು. ಜಗತ್ತಿನಲ್ಲಿ ಕಾಲುವೆ ನೀರಾವರಿಯನ್ನು ಹೊಂದಿದ ದೇಶಗಳಲ್ಲಿ ಭಾರತವೂ ಸಹ ಮುಖ್ಯವಾದುದು. ವಿಸ್ತಾರವಾದ ಸಾಗುವಳಿ ಭೂಮಿಗೆ ಕಾಲುವೆ ನೀರಾವರಿಯನ್ನು ಒದಗಿಸಬಹುದಾಗಿದೆ. ಭಾರತವು ಸುಮಾರು 16.5 ದಶಲಕ್ಷ ಹೆಕ್ಟೇರ್ ಪ್ರದೇಶವು ಕಾಲುವೆ ನೀರಾವರಿ ಕ್ಷೇತ್ರವನ್ನು ಹೊಂದಿದೆ. ಇದು ದೇಶದಲ್ಲಿ ಬಾವಿಯ ನಂತರ ಎರಡನೆಯ ಮುಖ್ಯ ನೀರಾವರಿಯ ಮೂಲವಾಗಿದೆ. ಇದರಲ್ಲಿ ಎರಡು ಪ್ರಕಾರಗಳಿವೆ. (1) ಪ್ರವಾಹ ಕಾಲುವೆ (2) ಸರ್ವಕಾಲಿಕ ಕಾಲುವೆ.

> *ನಿಮಗೆ ತಿಳಿದಿರಲಿ :*
> ***ಕ್ಯುಸೆಕ್ಸ್ (Cusecs) :***
> *Cubic feet per second*
> *ಪ್ರತಿ ಸೆಕೆಂಡಿಗೆ ಹರಿಯುವ ಘನ ಅಡಿ ನೀರು.*

ಪ್ರವಾಹ ಕಾಲುವೆಗಳು : ಯಾವುದೇ ರೀತಿಯ ಅಣೆಕಟ್ಟೆಗಳನ್ನು ಕಟ್ಟದೆ ನದಿಗಳಿಂದ ನೇರವಾಗಿ ಕಾಲುವೆಗಳನ್ನು ತೋಡಲಾಗುವುದು. ನದಿಗಳು ತುಂಬಿ ಹರಿಯುವಾಗ ಈ ಕಾಲುವೆಗಳ ಮೂಲಕ ನೀರು ಹರಿಯುವುದು. ಇವುಗಳಿಗೆ **ಪ್ರವಾಹ ಕಾಲುವೆಗಳು** ಎಂದು ಕರೆಯುವರು.

ಸಾರ್ವಕಾಲಿಕ ಕಾಲುವೆ : ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ಜಲಾಶಯಗಳನ್ನು ನಿರ್ಮಿಸಿ, ನೀರನ್ನು ಸಂಗ್ರಹಿಸಿ, ಕೃಷಿ ಭೂಮಿಗೆ ನೀರನ್ನೊದಗಿಸಲು ತೋಡುವ ಕಾಲುವೆಗಳಿಗೆ 'ಸರ್ವ ಕಾಲಿಕ ಕಾಲುವೆ' ಗಳೆಂದು ಕರೆಯುವರು. ಭಾರತದಲ್ಲಿ ಉತ್ತರ ಪ್ರದೇಶ, ಆಂಧ್ರ ಪ್ರದೇಶ, ಮಧ್ಯ ಪ್ರದೇಶ, ಪಂಜಾಬ್, ರಾಜಸ್ತಾನ, ಹರಿಯಾಣ ಮತ್ತು ಬಿಹಾರ ಜಿಲ್ಲೆಗಳಲ್ಲಿ ಈ ಕಾಲುವೆ ಜಾಲ ಹರಡಿದೆ.

3) ಕೆರೆ ನೀರಾವರಿ : ಭಾರತದಲ್ಲಿ ಕೆರೆ ನೀರಾವರಿಯು ಪುರಾತನ ಕಾಲದಿಂದಲೂ ರೂಢಿಯಲ್ಲಿದೆ. ಝರಿ, ತೊರೆ ಮತ್ತು ಹಳ್ಳಗಳು ಹರಿಯುವ ಇಳಿಜಾರಿಗೆ ಅಡ್ಡಲಾಗಿ ಒಡ್ಡುಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸುವದೇ 'ಕೆರೆಗಳು'. ಹೀಗೆ ಸಂಗ್ರಹಿಸಿದ ನೀರನ್ನು ತೂಬುಗಳ ಮೂಲಕ ಹಾಗೂ ಚಿಕ್ಕ ಕಾಲುವೆಗಳ ಮೂಲಕ ಕೃಷಿ ಭೂಮಿಗೆ ಸರಬರಾಜು ಮಾಡಲಾಗುವುದು. ಆಂಧ್ರ ಪ್ರದೇಶ, ತಮಿಳುನಾಡು, ಒರಿಸ್ಸಾ, ಕರ್ನಾಟಕಗಳಲ್ಲಿ ಕೆರೆ ನೀರಾವರಿಯು ಹೆಚ್ಚಾಗಿ ಕಂಡುಬರುವುದು. ಇದಲ್ಲದೆ ಮಧ್ಯಪ್ರದೇಶ, ರಾಜಸ್ತಾನ, ಜಾರ್ಖಂಡ, ಉತ್ತರ ಪ್ರದೇಶಗಳಲ್ಲಿಯೂ ಸಹ ಕೆರೆ ನೀರಾವರಿಯನ್ನು ಕಾಣಬಹುದು.

> ***ಚಟುವಟಿಕೆ :***
> *ನಿಮಗೆ ಹತ್ತಿರದಲ್ಲಿರುವ ಪ್ರಮುಖ ಕೆರೆಗಳ ಪಟ್ಟಿ ಮಾಡಿ. ಕೆರೆಗಳನ್ನು ಸಂರಕ್ಷಿಸಲು ನಿಮ್ಮ ಸಲಹೆಗಳನ್ನು ತಿಳಿಸಿ.*

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು

ಭಾರತವು ಹಲವಾರು ನದಿ, ಕಣಿವೆ ಯೋಜನೆಗಳನ್ನು ರೂಪಿಸಿ, ಕಾರ್ಯಗತಗೊಳಿಸಿದೆ. ನದಿ ಕಣಿವೆಯಲ್ಲಿ ಅದರ ಉಪನದಿಗಳನ್ನು ಒಳಗೊಂಡಂತೆ ಹಲವಾರು ಅಣೆಕಟ್ಟುಗಳನ್ನು ನಿರ್ಮಿಸಲಾಗುವುದು. ಇದರಿಂದ ಆ ನದಿ ಕಣಿವೆಯಲ್ಲಿನ ಜಲ ಸಂಪತ್ತಿನ ಗರಿಷ್ಠ ಪ್ರಮಾಣದ ಬಳಕೆಯು ಸಾಧ್ಯವಾಗುವುದು. ಇಂತಹ ಯೋಜನೆಗಳು ವ್ಯವಸಾಯಕ್ಕೆ ನೀರನ್ನು ಒದಗಿಸುವುದಲ್ಲದೆ ಇನ್ನಿತರ ಹಲವಾರು ಉದ್ದೇಶಗಳನ್ನು ಹೊಂದಿರುತ್ತವೆ. ಇವುಗಳನ್ನು **ವಿವಿಧೋದ್ದೇಶ ನದಿಕಣಿವೆ ಯೋಜನೆ**ಗಳೆಂದು ಕರೆಯುವರು. ಈ ಯೋಜನೆಯ ಮುಖ್ಯ ಉದ್ದೇಶವೆಂದರೆ (1) ನೀರಾವರಿ ಸೌಲಭ್ಯವನ್ನು ಒದಗಿಸುವುದು (2) ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು (3) ನದಿಗಳ ಪ್ರವಾಹವನ್ನು ನಿಯಂತ್ರಿಸುವುದು (4) ನೌಕಾಯಾನದ ಸೌಲಭ್ಯವನ್ನು ಒದಗಿಸುವುದು, (5) ಗೃಹ ಬಳಕೆ ಹಾಗೂ ಕೈಗಾರಿಕೆಗಳಿಗೆ ನೀರನ್ನು ಒದಗಿಸುವುದು. (6) ಮಣ್ಣಿನ ಸವಕಳಿಯನ್ನು ನಿಯಂತ್ರಿಸುವುದು, (7) ಮೀನುಗಾರಿಕೆಯ ಅಭಿವೃದ್ಧಿ ಮಾಡುವುದು. (8) ಅರಣ್ಯ ಸಂಪತ್ತನ್ನು ವೃದ್ಧಿಸುವುದು.

ಭಾರತದ ಕೆಲವು ಮುಖ್ಯ ವಿವಿದೋದ್ದೇಶ ನದಿಕಣಿವೆ ಯೋಜನೆಗಳು

1) **ದಾಮೋದರ ನದಿ ಕಣಿವೆ ಯೋಜನೆ :** ದಾಮೋದರ ಯೋಜನೆಯು ಸ್ವತಂತ್ರ ಭಾರತದ ಮೊದಲನೆಯ ವಿವಿಧೋದ್ದೇಶ ನದಿ ಕಣಿವೆ ಯೋಜನೆಯಾಗಿದೆ. ಇದು ಬಿಹಾರ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳು ಜೊತೆಗೂಡಿ ಕೈಗೊಂಡ ಯೋಜನೆಯಾಗಿದೆ. ಈ ನದಿಯು ಪಶ್ಚಿಮ ಬಂಗಾಳದಲ್ಲಿ

ಪ್ರವಾಹಗಳಿಂದ ಅಪಾರ ಹಾನಿಯನ್ನುಂಟು ಮಾಡುತ್ತಿದ್ದು, ಇದನ್ನು ಪಶ್ಚಿಮ ಬಂಗಾಳದ **'ಕಣ್ಣೀರಿನ ನದಿ'** ಎಂದು ಕರೆಯುತ್ತಿದ್ದರು. ಈ ನದಿಯಿಂದ ಆಗುವ ಹಾನಿಯನ್ನು ತಡೆಗಟ್ಟಲು ಈ ಯೋಜನೆಯನ್ನು ಕೈಗೊಳ್ಳಲಾಯಿತು.

ಈ ಯೋಜನೆಯು ಸುಮಾರು 2495 ಕಿ.ಮೀ ಉದ್ದವಾದ ಕಾಲುವೆಗಳ ಜಾಲವನ್ನು ಹೊಂದಿದ್ದು ಸುಮಾರು 4.5 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಿದೆ. ತಿಲೈಯಾ, ಮೈಥಾನ್ ಕೊನಾರ್ ಮತ್ತು ಪಂಚೆಟ್ ಹಿಲ್‌ಗಳಲ್ಲಿ ದಾಮೋದರ ಹಾಗೂ ಅದರ ಉಪ ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಬೊಕಾರೋ, ಚಂದ್ರಾಪುರ ಹಾಗೂ ದುರ್ಗಾಪುರಗಳಲ್ಲಿ ಶಾಖೋತ್ಪನ್ನ ವಿದ್ಯುದಾಗಾರಗಳನ್ನು ನಿರ್ಮಿಸಲಾಗಿದೆ. ಈ ಯೋಜನೆಯಿಂದ ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಉಪಯೋಗವನ್ನು ಪಡೆದಿವೆ.

(2) ಭಾಕ್ರಾ ನಂಗಲ್ ಯೋಜನೆ : ಇದು ಭಾರತದಲ್ಲಿಯೇ ಅತ್ಯಂತ ಎತ್ತರವಾದ ಮತ್ತು ಪ್ರಮುಖವಾದ ವಿವಿಧೋದ್ದೇಶ ನದಿ ಕಣಿವೆ ಯೋಜನೆಯಾಗಿದೆ. ಇದು ಪಂಜಾಬ್, ಹರಿಯಾಣ ಮತ್ತು ರಾಜಸ್ತಾನ ರಾಜ್ಯಗಳ ಸಂಯುಕ್ತ ಯೋಜನೆಯಾಗಿದೆ, ಹಿಮಾಚಲ ಪ್ರದೇಶದ ಭಾಕ್ರಾ ಮತ್ತು ನಂಗಲ್ ಎಂಬಲ್ಲಿ ಸಟ್ಲೆಜ ನದಿಗೆ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಭಾಕ್ರಾ ಅಣೆಕಟ್ಟು ಏಷ್ಯಾದಲ್ಲಿಯೇ ಅತ್ಯಂತ ಎತ್ತರವಾದ (226 ಮೀ) ಅಣೆಕಟ್ಟೆಯಾಗಿದೆ. ಇದು 3402 ಕಿ.ಮೀ. ಉದ್ದವಾದ ಕಾಲುವೆಗಳ ಜಾಲವನ್ನು ಹೊಂದಿದ್ದು, 14.6 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸುತ್ತದೆ. ಈ ಯೋಜನೆಯಿಂದ ದೆಹಲಿ, ಹಿಮಾಚಲ ಪ್ರದೇಶಗಳು ಸಹ ನೀರಾವರಿ ಮತ್ತು ಜಲ ವಿದ್ಯುಚ್ಛಕ್ತಿ ಸೌಲಭ್ಯವನ್ನು ಪಡೆದಿವೆ. ಇದರ ಜಲಾಶಯವನ್ನು **ಗೋವಿಂದ ಸಾಗರ** ಎಂದು ಕರೆಯುತ್ತಾರೆ.

(3) ಕೋಸಿ ಯೋಜನೆ : ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ಪ್ರವಾಹ ನಿಯಂತ್ರಣ. ಕೋಸಿ ನದಿಯನ್ನು ಬಿಹಾರಿನ 'ಕಣ್ಣೀರಿನ ನದಿ' ಎಂದು ಕರೆಯುತ್ತಾರೆ. ಇದು ಭಾರತ ಮತ್ತು ನೇಪಾಳ ರಾಷ್ಟ್ರಗಳ ಜಂಟಿ ಯೋಜನೆಯಾಗಿದೆ. ಭಾರತ ಮತ್ತು ನೇಪಾಳ ಗಡಿಯಲ್ಲಿ ಬರುವ 'ಹನುಮಾನ ನಗರ' ಎಂಬಲ್ಲಿ ಕೋಸಿ ನದಿಗೆ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಯೋಜನೆಯು ಸುಮಾರು 8.75 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಪಡೆದಿವೆ. ಇದರಿಂದ ಉತ್ಪಾದಿಸಲಾಗುವ ವಿದ್ಯುಚ್ಛಕ್ತಿಯಲ್ಲಿ ಶೇ 50 ರಷ್ಟನ್ನು ನೇಪಾಳಕ್ಕೆ ಒದಗಿಸಲಾಗುತ್ತಿದೆ.

(4) ಹಿರಾಕುಡ್ ಯೋಜನೆ : ಒರಿಸ್ಸಾದ ಸಾಂಬಾಲಪುರ ಜಿಲ್ಲೆಯಿಂದ 10 ಕಿ.ಮೀ.ದೂರದಲ್ಲಿ ಮಹಾನದಿಗೆ ಈ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ನದಿಯು 'ಒರಿಸ್ಸಾದ ಕಣ್ಣೀರಿನ ನದಿ' ಎಂದು ಕರೆಯಲಾಗಿದೆ. ಹಿರಾಕುಡ್ 4801 ಮೀ. ಉದ್ದವಾಗಿದ್ದು, ಭಾರತದಲ್ಲಿಯೇ ಅತ್ಯಂತ ಉದ್ದವಾದ ಅಣೆಕಟ್ಟೆಯಾಗಿದೆ. ಇದು ಒಟ್ಟು 2.54 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿದೆ. ಇದರಿಂದ ಒರಿಸ್ಸಾ, ಬಿಹಾರ ಮತ್ತು ಛತ್ತೀಸಗಡ ರಾಜ್ಯಗಳು ನೀರಾವರಿ ಮತ್ತು ಜಲ ವಿದ್ಯುಚ್ಛಕ್ತಿ ಸೌಲಭ್ಯವನ್ನು ಪಡೆದಿವೆ.


(5) ತುಂಗಭದ್ರಾ ಯೋಜನೆ : ನೀರಾವರಿ ಜಲವಿದ್ಯುಚ್ಛಕ್ತಿ ಉತ್ಪಾದನೆ ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಕರ್ನಾಟಕ ಮತ್ತು ಆಂಧ್ರ ಪ್ರದೇಶ ರಾಜ್ಯಗಳ ಸಂಯುಕ್ತ ಯೋಜನೆಯಾಗಿದೆ,

ಈ ಅಣೆಕಟ್ಟನ್ನು ಬಳ್ಳಾರಿ ಜಿಲ್ಲೆಯ ಹೊಸಪೇಟೆ ಬಳಿ ಮಲ್ಲಾಪುರ ಎಂಬಲ್ಲಿ ತುಂಗಭದ್ರಾ ನದಿಗೆ ನಿರ್ಮಿಸಲಾಗಿದೆ. ಈ ಜಲಾಶಯವನ್ನು 'ಪಂಪ ಸಾಗರ' ಎಂದು ಕರೆಯುವರು. ಇದು ಆಂಧ್ರ ಪ್ರದೇಶ ಮತ್ತು ಕರ್ನಾಟಕದ 5.5 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಹಾಗೂ ವಿದ್ಯುಚ್ಛಕ್ತಿ ಒದಗಿಸಿದೆ.

(6) ನಾಗಾರ್ಜುನ ಸಾಗರ ಯೋಜನೆ : ಆಂಧ್ರ ಪ್ರದೇಶದ ನಂದಿಕೊಂಡ ಗ್ರಾಮದ ಬಳಿ ಕೃಷ್ಣಾನದಿಗೆ ಈ ಅಣೆಕಟ್ಟನ್ನು ನಿರ್ಮಿಸಲಾಗಿದೆ. ನೀರಾವರಿ ಮತ್ತು ಜಲವಿದ್ಯುಚ್ಛಕ್ತಿ ಉತ್ಪಾದನೆ ಈ ಯೋಜನೆಯ ಮುಖ್ಯ ಉದ್ದೇಶಗಳಾಗಿವೆ. ಇದು ಸುಮಾರು 8.30 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿದೆ.

(7) ಕೃಷ್ಣಾ ಮೇಲ್ದಂಡೆ ಯೋಜನೆ : ಈ ಯೋಜನೆಯು ಕರ್ನಾಟಕದ ದೊಡ್ಡ ಯೋಜನೆಯಾಗಿದೆ. ವಿಜಾಪುರ, ಬಾಗಲಕೋಟ, ರಾಯಚೂರ, ಗುಲ್ಬರ್ಗಾ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಹಾಗೂ ಕುಡಿಯುವ ನೀರಿನ ಯೋಜನೆಯಾಗಿದೆ. ಇದನ್ನು ಬಿಜಾಪುರ ಜಿಲ್ಲೆಯ ಆಲಮಟ್ಟಿ ಬಳಿ ಕೃಷ್ಣಾ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಲಾಗಿದೆ. ಇದರಿಂದ ಲಾಲ್‌ಬಹದ್ದೂರ್ ಶಾಸ್ತ್ರಿ ಜಲಾಶಯ ನಿರ್ಮಿತವಾಗಿದೆ ಹಾಗೂ ನಾರಾಯಣಪುರ ಬಳಿ ಮತ್ತೊಂದು ಅಣೆಕಟ್ಟು ನಿರ್ಮಿಸಲಾಗಿದೆ. ಇದರ ಜಲಾಶಯದ ಹೆಸರು ಬಸವ ಸಾಗರ. ಇವುಗಳಿಂದ ಒಟ್ಟು 6.47 ಲಕ್ಷ ಹೆಕ್ಟೇರ್ ಭೂಮಿ ನೀರಾವರಿ ಸೌಲಭ್ಯವನ್ನು ಒದಗಿಸಿದೆ ಹಾಗೂ ಇತ್ತೀಚೆಗೆ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುತ್ತಿದೆ.

(8) ನರ್ಮದಾ ಕಣಿವೆ ಯೋಜನೆ : ಈ ಯೋಜನೆಯ ಪ್ರಾರಂಭದಿಂದಲೂ ವಿವಾದಗಳು ಉಂಟಾಗಿದ್ದರಿಂದ ನರ್ಮದಾ ನದಿ ನೀರಿನ ವಿವಾದದ ಪ್ರಾಧಿಕಾರ ನೇಮಿಸಿ ಮಧ್ಯಪ್ರದೇಶ ಮತ್ತು ಗುಜರಾತ ರಾಜ್ಯಗಳ ನಡುವೆ ಈ ನದಿಗೆ ಅಡ್ಡಲಾಗಿ ಕಟ್ಟಿದ ಅಣೆಕಟ್ಟುಗಳ ನೀರಿನ ಹಂಚಿಕೆ ವಿವಾದವನ್ನು ತೀರ್ಮಾನಿಸಿತು. ಒಟ್ಟು 23 ಅಣೆಕಟ್ಟುಗಳನ್ನು ಹೊಂದಿರುವ ನರ್ಮದಾ ನೀರಾವರಿ ಯೋಜನೆಯಲ್ಲಿ ಸರದಾರ ಸರೋವರ, ನರ್ಮದಾ ಸಾಗರ ಮತ್ತು ನರ್ಮದಾ ಮೇಲ್ದಂಡೆ ಯೋಜನೆಗಳು ಪ್ರಮುಖವಾಗಿವೆ. ಈ ಅಣೆಕಟ್ಟುಗಳಿಂದ ಉತ್ತರ ಗುಜರಾತ, ರಾಜಸ್ತಾನ ಮತ್ತು ಮಹಾರಾಷ್ಟ್ರದ ಕೆಲಭಾಗಗಳಿಗೆ ನೀರಾವರಿ ಮತ್ತು ವಿದ್ಯುಚ್ಛಕ್ತಿ ಸೌಲಭ್ಯವನ್ನು ಪಡೆದಿವೆ.



ಭಾರತದ ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು

ಭಾರತದ ಪ್ರಮುಖ ಜಲ ವಿದ್ಯುಚ್ಛಕ್ತಿ ಯೋಜನೆಗಳು :

ಭಾರತವು ಉತ್ಪಾದಿಸುತ್ತಿರುವ ವಿದ್ಯುತ್ತಿನ ಮೂಲಗಳಲ್ಲಿ ಜಲವಿದ್ಯುತ್ ಎರಡನೆ ಸ್ಥಾನವನ್ನು ಹೊಂದಿದೆ. ಇದು ದೇಶವು 2011ರ ಪ್ರಕಾರ ಉತ್ಪಾದಿಸುತ್ತಿರುವ ಒಟ್ಟು ವಿದ್ಯುತ್ತಿನ ಶೇ 13.9 ರಷ್ಟನ್ನು ಹೊಂದಿದೆ. ಭಾರತವು ಸುಮಾರು 410 ಬಿಲಿಯನ್ ಕಿಲೋವ್ಯಾಟ್ಸ್ ಜಲವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೊಂದಿದೆಯೆಂದು ಅಂದಾಜು ಮಾಡಲಾಗಿದೆ. ಆದರೆ ಪ್ರಸ್ತುತ ಜಲವಿದ್ಯುತ್ತಿನ ಉತ್ಪಾದನೆ ಕೇವಲ 106.68 ಬಿಲಿಯನ್ ಕಿಲೋವ್ಯಾಟ್ಸ್‌ಗಳಷ್ಟಾಗಿದೆ. ಈ ಕೆಳಗಿನ ರಾಜ್ಯಗಳು ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಕೇಂದ್ರಗಳನ್ನು ಹೊಂದಿವೆ.

ಕರ್ನಾಟಕ : ಶಿವನಸಮುದ್ರ, ತುಂಗಭದ್ರಾ, ಜೋಗ, ಭದ್ರಾ, ಕೃಷ್ಣಾ ಮೇಲ್ದಂಡೆ, ಕಾಳಿ (ಸೂಪಾ), **ಆಂಧ್ರಪ್ರದೇಶ :** ನಾಗಾರ್ಜುನ ಸಾಗರ, ಶ್ರೀಶೈಲಂ ಯೋಜನೆ, ರಾಮಪಾದ ಸಾಗರ ಯೋಜನೆ, ಸೀಲೇರು ಯೋಜನೆ,

ತಮಿಳುನಾಡು : ಮೆಟ್ಟೂರು ಯೋಜನೆ, ಪೈಕಾರ ವಿದ್ಯುತ್ ಯೋಜನೆ, ಪೆರಿಯಾರ ಯೋಜನೆ, ಕುಂದ್ವಾ ಯೋಜನೆ, ಮೋಯಾರ ಯೋಜನೆ, ಕೋಡಯಾರ ಯೋಜನೆ, ಇತ್ಯಾದಿ

ಮಧ್ಯಪ್ರದೇಶ : ಬನ್‌ಸಾಗರ, ಗಾಂಧಿ ಸಾಗರ, ಪಂಚಯೋಜನೆ.

ಮಹಾರಾಷ್ಟ್ರ : ಟಾಟಾ ಜಲ ವಿದ್ಯುತ್ ಯೋಜನೆ, ಬೀರಾ ಯೋಜನೆ, ವೈತರಣಾ ಯೋಜನೆ, ಕೊಯ್ನಾ ಯೋಜನೆ.

ಒರಿಸ್ಸಾ : ಹಿರಾಕುಡ್ ಯೋಜನೆ, ಕೋಲಾಜ ಯೋಜನೆ, ರಂಗಾಲಿ ಯೋಜನೆ, ನಾರಾಜ ಯೋಜನೆ.

ಬಿಹಾರ : ಕೋಸಿ ಯೋಜನೆ, ಸುವರ್ಣ ರೇಖಾ ಯೋಜನೆ, ತಾವಾ ಯೋಜನೆ.


ಗುಜರಾತ : ಕಕ್ರಪಾರ ಯೋಜನೆ, ಕಾಡನ ಯೋಜನೆ, ಉಕೈಯೋಜನೆ. ಮೇಲಿನ ಯೋಜನೆಗಳಲ್ಲದೆ ಅನೇಕ ನದಿ ಕಣಿವೆಯೋಜನೆಗಳಲ್ಲಿ ಹಲವಾರು ಜಲ ವಿದ್ಯುತ್ ಕೇಂದ್ರಗಳು ಕಂಡುಬರುತ್ತವೆ.

ರಾಷ್ಟ್ರೀಯ ವಿದ್ಯುತ್ ಜಾಲ (National Power Grid) : ಎಲ್ಲಾ ರಾಜ್ಯಗಳು ವರ್ಷದ ಎಲ್ಲಾ ಅವಧಿಯಲ್ಲಿಯೂ ಸಾಕಷ್ಟು ವಿದ್ಯುತ್ತಿನ ಪೂರೈಕೆಯನ್ನು ಹೊಂದಿರುವುದಿಲ್ಲ. ಇದರಿಂದ ಹೆಚ್ಚುವರಿ ವಿದ್ಯುತ್ತನ್ನು ಕೊರತೆಯಿರುವ ಪ್ರದೇಶಗಳಿಗೆ ಸಾಗಿಸಲು ಹಾಗೂ ವಿದ್ಯುತ್ತನ್ನು ಸಮರ್ಪಕವಾಗಿ ಪ್ರಸರಣ ಮಾಡಲು ರಾಷ್ಟ್ರೀಯ ವಿದ್ಯುತ್ ಜಾಲವನ್ನು ನಿರ್ಮಿಸಲಾಗಿದೆ. ಇದರಿಂದ ದೇಶದ ಯಾವುದೇ ಭಾಗದಲ್ಲಿ ಹೆಚ್ಚುವರಿ ವಿದ್ಯುತ್ ಉತ್ಪಾದಿಸಲ್ಪಟ್ಟಿದ್ದರೂ ಅದನ್ನು ಕೊರತೆಯಿರುವ ಪ್ರದೇಶಗಳಿಗೆ ಪೂರೈಸಬಹುದಾಗಿದೆ.

ಮಳೆಕೊಯ್ಲು ಅಥವಾ ಮಳೆ ನೀರು ಸಂಗ್ರಹಣೆ (Rain Water Harvesting) : ನೀರು ಅತಿ ಅಮೂಲ್ಯವಾದುದು. ಭಾರತವು ಜಲಸಂಪತ್ತನ್ನು ಅಪಾರ ಪ್ರಮಾಣದಲ್ಲಿ ಒಳಗೊಂಡಿದ್ದರೂ ಅದರ ಹಂಚಿಕೆಯು ಹೆಚ್ಚು ತಾರತಮ್ಯಗಳಿಂದ ಕೂಡಿರುವುದು. ಅಲ್ಲದೆ ಮಳೆಗಾಲದ ಅವಧಿ ಕಡಿಮೆಯಾಗಿದ್ದು, ಹೆಚ್ಚು ಮಳೆ ಬೀಳುವ ಪ್ರದೇಶಗಳೂ ದೀರ್ಘವಾದ ಮಳೆರಹಿತ ಪ್ರದೇಶಗಳಾಗುತ್ತಿದ್ದು ಬೇಸಿಗೆಯಲ್ಲಿ ನೀರಿನ ಕೊರತೆ ಕಂಡುಬರುತ್ತದೆ. ದೇಶದಲ್ಲಿ ಕಂಡು ಬರುತ್ತಿರುವ ಜಲಕ್ಷಾಮದ ಪರಿಹಾರಕ್ಕೆ ಇರುವ ಸರಳ ಮಾರ್ಗವೆಂದರೆ 'ಮಳೆ ಕೊಯ್ಲು' ಅಥವಾ ಮಳೆ ನೀರಿನ ಸಂಗ್ರಹಣೆ. ಮಳೆ ನೀರನ್ನು ಸಂಗ್ರಹಸಿ

ಬಳಕೆ ಮಾಡುವುದನ್ನೇ **ಮಳೆಕೊಯ್ಲು** ಎಂದು ಕರೆಯುವರು.

ಇದರಲ್ಲಿ ಎರಡು ವಿಧಗಳಿವೆ. (1) ಮಳೆಬಿದ್ದ ಸ್ಥಳದಲ್ಲಿಯೇ ನೀರನ್ನು ಸಂಗ್ರಹಿಸುವುದು. ಉದಾ : ಮನೆಯ ಮೇಲ್ಛಾವಣಿಯಿಂದ. (2) ಮಳೆ ಬಿದ್ದ ನಂತರ ಹರಿಯುವ ನೀರನ್ನು ಸಂಗ್ರಹಿಸುವುದು. ಉದಾ : ಒಡ್ಡು ಕಟ್ಟಿ ನೀರನ್ನು ಸಂಗ್ರಹಿಸುವುದು.



- ಮನೆಯ ಮೇಲ್ಛಾವಣಿಯ ಮೇಲೆ ಬಿದ್ದು ಹರಿಯುವ ನೀರನ್ನು ಸಂಗ್ರಹಿಸಿ ದಿನನಿತ್ಯದ ಬಳಕೆಗೆ ಬಳಸುವುದು. ಇದರಿಂದ ಸಾರ್ವಜನಿಕ ನೀರು ಪೂರೈಕೆಯ ಮೇಲಿನ ಅವಲಂಬನೆ ಕಡಿಮೆ ಮಾಡುವದು.
- ವ್ಯವಸಾಯ ಕ್ಷೇತ್ರಗಳಲ್ಲಿ ಹೊಂಡಗಳನ್ನು ತೋಡಿ ನೀರನ್ನು ಸಂಗ್ರಹಿಸುವುದು.
- ಮಳೆ ನೀರು ಹರಿದು ಹೋಗದಂತೆ ತಡೆಯೊಡ್ಡಿ ಭೂಮಿಯಲ್ಲಿ ಇಂಗುವಂತೆ ಮಾಡುವುದು. ಇದರಿಂದ ಅಂತರ್ಜಲ ಮಟ್ಟವು ಮರುಪೂರಣ (Recharging) ಗೊಳ್ಳುವುದು.
- ವೈಯಕ್ತಿಕ ಮಟ್ಟದಲ್ಲಿ ಮಾತ್ರವಲ್ಲದೆ ಸಮುದಾಯಗಳು ಸಹ ಹರಿಯುವ ನೀರಿಗೆ ಅಡ್ಡಗಟ್ಟೆಗಳನ್ನು ನಿರ್ಮಿಸಿ ಸಣ್ಣ ಹೊಂಡ,ಕೆರೆಗಳ ರೂಪದಲ್ಲಿ ನೀರನ್ನು ಸಂಗ್ರಹಿಸಬಹುದು.

ಕರ್ನಾಟಕದಲ್ಲಿ ಮಳೆಕೊಯ್ಲು ಪುರಾತನ ಕಾಲದಿಂದಲೂ ರೂಢಿಯಲ್ಲಿದೆ. ರಾಜ್ಯದಾದ್ಯಂತ ಕಂಡುಬರುವ ಕೆರೆ, ಕಟ್ಟೆ, ಹೊಂಡ, ಮೊದಲಾದವು ಮಳೆ ನೀರಿನ ಸಂಗ್ರಹಣೆಯ ವಿಧಾನಗಳಾಗಿವೆ. ಇವುಗಳನ್ನು ನಿರ್ಲಕ್ಷಿಸಿದುದರಿಂದ ಇಂದು ಜಲಕ್ಷಾಮ ಕಾಣುತ್ತಿದೆ. ಇವುಗಳನ್ನು ರಕ್ಷಿಸಿ, ಸರಿಯಾಗಿ ನಿರ್ವಹಿಸಿ ದೇಶದಲ್ಲಿ ಕಂಡುಬರುವ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದಾಗಿದೆ.

ಅಭ್ಯಾಸಗಳು :

I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.

1) ದಾಮೋದರ ನದಿಯನ್ನು ಬಂಗಾಳದ __________ ನದಿ ಎಂದು ಕರೆಯುತ್ತಾರೆ.

2) ಬಿಹಾರಿನ ಕಣ್ಣೀರಿನ ನದಿ __________ .

3) ಕರ್ನಾಟಕದ ದೊಡ್ಡ ನೀರಾವರಿ ಯೋಜನೆ __________ .

4) ಕಾವೇರಿ ನದಿಗೆ __________ ಎಂಬಲ್ಲಿ ವಿದ್ಯುಚ್ಛಕ್ತಿ ಯೋಜನೆಯನ್ನು ನಿರ್ಮಿಸಲಾಗಿದೆ.

5) ಹಿರಾಕುಡ್ ಯೋಜನೆಯನ್ನು __________ ನದಿಗೆ ನಿರ್ಮಿಸಲಾಗಿದೆ.

II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.

1) ನೀರಾವರಿ ಎಂದರೇನು?

2) ನೀರಾವರಿಯ ವಿಧಗಳಾವವು?

3) ವಿವಿಧೋದ್ದೇಶ ನದಿ ಕಣಿವೆ ಯೋಜನೆ ಎಂದರೇನು? ಅದರ ಉದ್ದೇಶಗಳಾವವು?

4) ಭಾಕ್ರಾ-ನಂಗಲ್ ಯೋಜನೆಯನ್ನು ಕುರಿತು ಬರೆಯಿರಿ.

5) ಕರ್ನಾಟಕ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಹೆಸರಿಸಿ.

6) ಮಳೆಕೊಯ್ಲು ಅಥವಾ ಮಳೆ ನೀರಿನ ಸಂಗ್ರಹಣೆ ಇಂದು ಕಡ್ಡಾಯವಾಗಿದೆ. ಏಕೆ ?

7) ರಾಷ್ಟ್ರೀಯ ವಿದ್ಯುತ್ ಜಾಲ ಎಂದರೇನು?

III. 'ಅ' ಪಟ್ಟಿಯಲ್ಲಿರುವ ನೀರಾವರಿ ಯೋಜನೆಗಳನ್ನು 'ಬ' ಪಟ್ಟಿಯಲ್ಲಿರುವ ರಾಜ್ಯಗಳೊಂದಿಗೆ ಹೊಂದಿಸಿ ಬರೆಯಿರಿ.

ಅ	ಬ
1) ಭಾಕ್ರಾ ನಂಗಲ್ ಯೋಜನೆ	ಎ) ಓರಿಸ್ಸಾ
2) ತುಂಗಭದ್ರಾ ಯೋಜನೆ	ಬಿ) ಹಿಮಾಚಲ ಪ್ರದೇಶ
3) ಹಿರಾಕುಡ್ ಯೋಜನೆ	ಸಿ) ಕರ್ನಾಟಕ
4) ಕೋಸಿ ಯೋಜನೆ	ಡಿ) ಬಿಹಾರ
	ಇ) ಮಧ್ಯಪ್ರದೇಶ.

IV. ಚಟುವಟಿಕೆ :

1) ಭಾರತದ ಪ್ರಮುಖ ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉಪಯೋಗಗಳನ್ನು ಪಟ್ಟಿ ಮಾಡಿರಿ.

2) ನಿಮ್ಮ ಹತ್ತಿರದ ಮನೆಯಲ್ಲಿ ಅಳವಡಿಸಿರುವ ಮಳೆಕೊಯ್ಲು ವಿಧಾನವನ್ನು ಭೇಟಿ ನೀಡಿ ಪರಿಶೀಲಿಸಿ ಹೆಚ್ಚಿನ ಮಾಹಿತಿ ಪಡೆಯಿರಿ.

V. ಯೋಜಿತ ಕಾರ್ಯ :

1) ನಿಮ್ಮ ಸುತ್ತಲಿನ ಪ್ರದೇಶಗಳ ವಿವಿಧ ನೀರಾವರಿ ಪದ್ಧತಿ ಪಟ್ಟಿ ಮಾಡಿ, ಅವುಗಳ ಬಳಕೆಯನ್ನು ತಿಳಿದುಕೊಳ್ಳಿ.

2) ನೀವು ನೋಡಿರುವ ಯಾವುದಾದರೂ ಒಂದು ನೀರಾವರಿ ಯೋಜನೆಯ ಬಗ್ಗೆ ವರದಿ ಸಿದ್ಧಪಡಿಸಿ.

ಅಧ್ಯಾಯ-7

ಭಾರತದ ಭೂ ಬಳಕೆ ಹಾಗೂ ವ್ಯವಸಾಯ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳು.*
- *ಭೂ ಬಳಕೆಯ ಪ್ರಕಾರಗಳು.*
- *ವ್ಯವಸಾಯದ ಅರ್ಥ ಮತ್ತು ಪ್ರಾಮುಖ್ಯತೆ.*
- *ವ್ಯವಸಾಯದ ಪ್ರಾಮುಖ್ಯತೆ.*
- *ವ್ಯವಸಾಯದ ವಿಧಗಳು.*
- *ಬೆಳೆಗಳ ಹಂಚಿಕೆ, ಬೆಳೆಯ ಮಾದರಿಯನ್ನು ನಿರ್ಧರಿಸುವ ಅಂಶಗಳು*
- *ಆಹಾರದ ಬೆಳೆಗಳು, ವಾಣಿಜ್ಯ ಬೆಳೆಗಳು, ನಾರಿನ ಬೆಳೆಗಳು, ಪಾನೀಯ ಬೆಳೆಗಳು, ತೋಟಗಾರಿಕೆ, ಪುಷ್ಪ ಬೇಸಾಯ.*

ಭೂ ಬಳಕೆ

ಭೂಮಿ ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಅತಿ ಮುಖ್ಯವಾದುದು. ಇದನ್ನು ಸಾಗುವಳಿ, ಅರಣ್ಯ, ಹುಲ್ಲುಗಾಲು, ಬೀಳುಭೂಮಿ, ವ್ಯವಸಾಯೇತರ ಬಳಕೆ, ಹೀಗೆ ವಿವಿಧ ಉದ್ದೇಶಗಳಿಗೆ ಬಳಸುವದನ್ನೇ 'ಭೂ ಬಳಕೆ' ಎನ್ನುವರು.

ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳು :

ಭೂಮಿಯನ್ನು ಅವುಗಳ ಗುಣಲಕ್ಷಣ ಹಾಗೂ ಅಗತ್ಯತೆಗೆ ಅನುಗುಣವಾಗಿ ವಿವಿಧ ಉದ್ದೇಶಗಳಿಗೆ ಬಳಸಲಾಗುವುದು. ಭೂ ಬಳಕೆಯ ಮೇಲೆ ಹಲವಾರು ಪ್ರಾಕೃತಿಕ, ಆರ್ಥಿಕ ಹಾಗೂ ಸಾಮಾಜಿಕ ಅಂಶಗಳು ಪ್ರಭಾವ ಬೀರುತ್ತವೆ. ಅವುಗಳಲ್ಲಿ ಭೂ ಸ್ವರೂಪಗಳು, ವಾಯುಗುಣ, ಮಣ್ಣಿನ ಲಕ್ಷಣಗಳು ಪ್ರಾಕೃತಿಕವಾಗಿ ಪ್ರಭಾವ ಬೀರುತ್ತವೆ. ಭೂ ಹಿಡುವಳಿ, ಜನಸಂಖ್ಯೆ, ವ್ಯವಸಾಯೋತ್ಪನ್ನಗಳ ಬೇಡಿಕೆ, ಉದ್ಯೋಗ, ಜನರ ಮನೋಭಾವ, ಸಾಮಾಜಿಕ ಪರಿಸ್ಥಿತಿ, ಮಾರುಕಟ್ಟೆ ಮೊದಲಾದ ಅಂಶಗಳು ಪ್ರಭಾವ ಬೀರುತ್ತವೆ. ತಾಂತ್ರಿಕತೆ, ನೀರಾವರಿ ಸೌಲಭ್ಯ, ಮಾನವನ ಸಾಮರ್ಥ್ಯ, ಭೂ ಒಡೆತನ ಮೊದಲಾದವು ಭೂ ಬಳಕೆಯ ಮೇಲೆ ಪ್ರಭಾವವನ್ನು ಬೀರುತ್ತವೆ.

ಭೂ ಬಳಕೆಯ ಪ್ರಕಾರಗಳು (Types of Land use) :

ಭಾರತದಲ್ಲಿ ಲಭ್ಯವಿರುವ ಭೂಮಿಯ ಬಳಕೆಯನ್ನು ವಿವಿಧ ಪ್ರಕಾರಗಳನ್ನಾಗಿ ವಿಂಗಡಿಸಲಾಗಿದೆ. 1) ನಿವ್ವಳ ಸಾಗುವಳಿ ಕ್ಷೇತ್ರ, 2) ಅರಣ್ಯ ಭೂಮಿ, 3) ವ್ಯವಸಾಯೇತರ ಭೂ ಬಳಕೆ, 4) ಬೀಳು ಭೂಮಿ, 5) ಹುಲ್ಲುಗಾವಲು, 6) ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ ಇತ್ಯಾದಿ.

1) **ನಿವ್ವಳ ಸಾಗುವಳಿ ಕ್ಷೇತ್ರ :** ಇದು ಭಾರತದ ಭೂ ಬಳಕೆಯ ವಿಧಗಳಲ್ಲಿ ಅತ್ಯಂತ ಪ್ರಮುಖವಾಗಿದೆ. ಭಾರತದ ವ್ಯವಸಾಯ ಪ್ರಧಾನ ಆರ್ಥಿಕತೆಗೆ ಅನುಗುಣವಾಗಿ ಅತಿಹೆಚ್ಚು ಭೂಮಿಯನ್ನು ಸಾಗುವಳಿಗೆ ಬಳಸಲಾಗುತ್ತಿದೆ. ಭಾರತವು ಪ್ರಪಂಚದಲ್ಲಿ ಸಾಗುವಳಿ ಕ್ಷೇತ್ರದ ವಿಸ್ತೀರ್ಣದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ ನಂತರ ಎರಡನೇ ಸ್ಥಾನದಲ್ಲಿದೆ. ಹರಿಯಾಣ, ಪಂಜಾಬ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಬಿಹಾರಗಳಲ್ಲಿ ನಿವ್ವಳ ಸಾಗುವಳಿ ಕ್ಷೇತ್ರವು ಪ್ರತಿಶತ 60ಕ್ಕಿಂತ ಹೆಚ್ಚಾಗಿದೆ.

2) **ಅರಣ್ಯ ಭೂಮಿ :** ಭಾರತದಲ್ಲಿ ಸಮೀಕ್ಷೆಗೊಳಪಟ್ಟ ಒಟ್ಟು ಭೂ ಪ್ರದೇಶ ಪ್ರತಿಶತ 21.3 ರಷ್ಟು ಮಾತ್ರ ಅರಣ್ಯಗಳಿಂದ ಕೂಡಿದೆ. ಅದು 1950-51 ರಲ್ಲಿ ಪ್ರತಿಶತ 16.2 ರಷ್ಟಿತ್ತು. ರಾಷ್ಟ್ರೀಯ

ಅರಣ್ಯ ಯೋಜನೆ ಪ್ರಕಾರ ಪ್ರತಿಶತ 33 ರಷ್ಟು ಅರಣ್ಯವಿರಬೇಕು. ಆದ್ದರಿಂದ ಅರಣ್ಯ ಭೂಮಿಯನ್ನು ಹೆಚ್ಚಿಸಲು ಸಾಕಷ್ಟು ಪ್ರಯತ್ನಿಸಲಾಗುತ್ತಿದೆ.

3) **ವ್ಯವಸಾಯೇತರ ಭೂ ಬಳಕೆ :** ಸಾಗುವಳಿ ಹಾಗೂ ಅರಣ್ಯ ಕ್ಷೇತ್ರದ ವಿಸ್ತಾರವನ್ನು ಹೊರತುಪಡಿಸಿ ವ್ಯವಸಾಯೇತರ ಬಳಕೆಗಾಗಿ ಹೆಚ್ಚು ಭೂಮಿಯನ್ನು ಬಳಸಲಾಗಿದೆ. ಕಟ್ಟಡ ನಿರ್ಮಾಣ, ಜಲಾಶಯ, ಕೈಗಾರಿಕೆ, ರಸ್ತೆ ಮೊದಲಾದವುಗಳ ನಿರ್ಮಾಣಕ್ಕಾಗಿ ಹೆಚ್ಚು ಭೂಮಿಯನ್ನು ಬಳಸಲಾಗುತ್ತಿದೆ.

4) **ಬೀಳು ಭೂಮಿ :** ಜನಸಂಖ್ಯೆ ಅಧಿಕಗೊಂಡಂತೆ ವ್ಯವಸಾಯೋತ್ಪನ್ನಗಳ ಮೇಲೆ ಹೆಚ್ಚು ಒತ್ತಡವಾಗಿದ್ದು, ಅದಕ್ಕೆ ಅನುಗುಣವಾಗಿ ಹೆಚ್ಚು ಕ್ಷೇತ್ರವನ್ನು ಸಾಗುವಳಿಗೆ ಬಳಸಲಾಗಿದೆ. ಅಲ್ಲದೆ ಬೀಳು ಬಿದ್ದಿದ್ದ ಹಾಗೂ ವ್ಯವಸಾಯ ಯೋಗ್ಯವಲ್ಲದ ಭೂ ಪ್ರದೇಶಗಳನ್ನು ಸಹ ತಾಂತ್ರಿಕತೆಯ ಅಳವಡಿಕೆಯೊಂದಿಗೆ ಇಂದು ವ್ಯವಸಾಯಕ್ಕೆ ಬಳಸಲಾಗಿದೆ.

5) **ಹುಲ್ಲುಗಾವಲು :** ವ್ಯವಸಾಯ ಪ್ರದೇಶದ ವಿಸ್ತರಣೆಯೊಂದಿಗೆ ಹುಲ್ಲುಗಾವಲುಗಳ ಕ್ಷೇತ್ರ ನಿರಂತರವಾಗಿ ಕಡಿಮೆಯಾಗಿದೆ. ಹಿಮಾಚಲ ಪ್ರದೇಶ ರಾಜ್ಯವು ಹೆಚ್ಚು ಹುಲ್ಲುಗಾವಲು ಪ್ರದೇಶವನ್ನು ಹೊಂದಿದ್ದು, ಪಂಜಾಬ, ಹರಿಯಾಣ ರಾಜ್ಯಗಳು ಅತ್ಯಂತ ಕಡಿಮೆ ಹುಲ್ಲುಗಾವಲುಗಳನ್ನು ಹೊಂದಿವೆ.

6) **ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ :** ಭಾರತದ ವಿವಿಧ ಭಾಗಗಳಲ್ಲಿ ಹಿಂದೆ ಬೇಸಾಯಕ್ಕೆ ಬಳಸಲಾಗುತ್ತಿದ್ದ ಕೆಲವು ಭಾಗಗಳು ಇಂದು ಮಣ್ಣಿನ ರಾಸಾಯನಿಕ ಸಂಯೋಜನೆಯ ಬದಲಾವಣೆಗಳಿಂದಾಗಿ ಅನುಪಯುಕ್ತವಾಗಿ ಪರಿಣಮಿಸಿವೆ.

ವ್ಯವಸಾಯ

ವ್ಯವಸಾಯವು ಮಾನವನ ಪುರಾತನ ವೃತ್ತಿಗಳಲ್ಲಿ ಒಂದಾಗಿದ್ದು, ನಾಗರಿಕತೆಯ ಆರಂಭದಿಂದಲೂ ಮಾನವನು ಈ ವೃತ್ತಿಯಲ್ಲಿ ತೊಡಗಿರುವನು. ವ್ಯವಸಾಯ 'ಭೂಮಿಯನ್ನು ಉಳುಮೆ ಮಾಡುವ ಕಲೆ' ಎಂದು ವ್ಯಾಖ್ಯಾನಿಸಲಾಗಿದೆ. ಭೂಮಿಯನ್ನು ಉಳುಮೆ ಮಾಡಿ ಸಸ್ಯಗಳನ್ನು ಪೋಷಿಸಿ ಅದರಿಂದ ಮಾನವ ಮತ್ತು ಪ್ರಾಣಿಗಳಿಗೆ ಉಪಯೋಗವನ್ನು ಪಡೆಯುವುದನ್ನೇ ವ್ಯವಸಾಯ ಅಥವಾ ಕೃಷಿ ಎಂದು ಕರೆಯುವರು. ವ್ಯಾಪಕ ಅರ್ಥದಲ್ಲಿ ಇದು ಮೀನುಗಾರಿಕೆ, ಪಶುಪಾಲನೆ ಮತ್ತು ಅರಣ್ಯಗಾರಿಕೆಯನ್ನೂ ಸಹ ಒಳಗೊಂಡಿದೆ.

ವ್ಯವಸಾಯದ ಪ್ರಾಮುಖ್ಯತೆ : ವ್ಯವಸಾಯವು ಭಾರತೀಯರ ಮುಖ್ಯ ಉದ್ಯೋಗವಾಗಿದೆ. ಇದು ದೇಶದ ಎಲ್ಲ ಭಾಗಗಳಲ್ಲಿಯೂ ವಿವಿಧ ರೂಪ ಹಾಗೂ ವಿವಿಧ ಉತ್ಪಾದನೆಗಳಲ್ಲಿ ತೊಡಗಿರುವುದನ್ನು ಕಾಣಬಹುದು. ದೇಶದ ಅಗಾಧ ಜನಸಂಖ್ಯೆಗೆ ವ್ಯವಸಾಯವು ಆಹಾರ ಧಾನ್ಯಗಳನ್ನು ಪೂರೈಸುತ್ತದೆ. ವ್ಯವಸಾಯವು ಜೀವನಾಧಾರ ಉದ್ಯೋಗವಾಗಿದ್ದು, ಉಳಿದ ಎಲ್ಲ ಕ್ಷೇತ್ರಗಳಿಗಿಂತಲೂ ಹೆಚ್ಚು ಜನರಿಗೆ ಉದ್ಯೋಗಾವಕಾಶಗಳನ್ನು ನೀಡಿದೆ. ಭಾರತವು ಉತ್ಪಾದಿಸುವ ಹಲವಾರು ಬಗೆಯ ವ್ಯವಸಾಯೋತ್ಪನ್ನಗಳನ್ನು, ಕಚ್ಚಾ ವಸ್ತುವನ್ನಾಗಿ ಆಧರಿಸಿದ ಅಸಂಖ್ಯಾತ ಕೈಗಾರಿಕೆಗಳನ್ನು ಹೊಂದಿದೆ. ವ್ಯವಸಾಯವು ಪರೋಕ್ಷವಾಗಿಯೂ ಹಲವಾರು ಕೈಗಾರಿಕೆಗಳನ್ನು ಪೋಷಿಸುತ್ತದೆ. ಉದಾ: ರಾಸಾಯನಿಕ ಗೊಬ್ಬರ, ಕ್ರಿಮಿ–ಕೀಟನಾಶಕಗಳು, ಯಂತ್ರೋಪಕರಣ ಕೈಗಾರಿಕೆಗಳು ಇತ್ಯಾದಿ. ವ್ಯವಸಾಯವು ಸಂಚಾರ ಸಾರಿಗೆ ವ್ಯಾಪಾರ ಮೊದಲಾದ ಹಲವಾರು ತೃತೀಯ ಆರ್ಥಿಕ ಉದ್ಯೋಗಗಳನ್ನು ಪೋಷಿಸಿದೆ.

ವ್ಯವಸಾಯದ ವಿಧಗಳು :

1) **ಸಾಂದ್ರ ಬೇಸಾಯ (Intensive Farming) :** ಒಂದು ವರ್ಷದಲ್ಲಿ ಒಂದೇ ವ್ಯವಸಾಯ ಕ್ಷೇತ್ರದಿಂದ 2–3 ಬೆಳೆಗಳನ್ನು ಬೆಳೆಯುವುದಕ್ಕೆ ಸಾಂದ್ರ ಬೇಸಾಯ ಎಂದು ಕರೆಯುವರು. ಅಧಿಕ ಜನಸಂಖ್ಯೆ ಇರುವ ಫಲವತ್ತಾದ ಪ್ರದೇಶಗಳಲ್ಲಿ ಇಂತಹ ಬೇಸಾಯವು ರೂಢಿಯಲ್ಲಿದೆ.

2) **ಜೀವನಾಧಾರದ ಬೇಸಾಯ (Subsistance Farming) :** ರೈತರು ತಮ್ಮ ಜೀವನಕ್ಕೆ ಅವಶ್ಯಕವಿರುವ ಹುಟ್ಟುವಳಿಗಳನ್ನು ಬೆಳೆಯುವದಕ್ಕೆ ಜೀವನಾಧಾರದ ಬೇಸಾಯ ಎಂದು ಕರೆಯುವರು. ಈ ಬೇಸಾಯ ಪದ್ಧತಿಯಲ್ಲಿ ರೈತರು ಆಹಾರ ಧಾನ್ಯ, ಎಣ್ಣೆಕಾಳು, ತರಕಾರಿ ಮುಂತಾದವುಗಳನ್ನು ಬೆಳೆಯುವರು. ಈ ಬೇಸಾಯದಲ್ಲಿ ಎರಡು ಪ್ರಕಾರಗಳಿವೆ ಎ) ಸ್ಥಿರ ಬೇಸಾಯ, ಬಿ) ಸ್ಥಳಾಂತರ ಬೇಸಾಯ.

ಎ) **ಸ್ಥಿರ ಬೇಸಾಯ :** ಯಾವುದೇ ಒಂದು ಪ್ರದೇಶದಲ್ಲಿ ಜನರು ಶಾಶ್ವತವಾಗಿ ನೆಲೆಸಿ ಬೇಸಾಯವನ್ನು ಮಾಡುವುದಕ್ಕೆ ಸ್ಥಿರ ಬೇಸಾಯ ಎಂದು ಕರೆಯುವರು. ಈ ಬೇಸಾಯವು ಸಾಂಪ್ರದಾಯಿಕವಾಗಿದ್ದು, ಚಿಕ್ಕ ಹಿಡುವಳಿಯನ್ನು ಹೊಂದಿರುತ್ತದೆ.

ಬಿ) **ಸ್ಥಳಾಂತರ ಬೇಸಾಯ :** ಯಾವುದೇ ಒಂದು ಪ್ರದೇಶದಲ್ಲಿ ಜನರು ಸ್ಥಿರವಾಗಿ ನೆಲೆಸದೆ ಅಲ್ಲಿರುವ ಅರಣ್ಯಗಳನ್ನು ಕಡಿದು ಬೇಸಾಯ ಮಾಡುವರು. ಒಂದೆರಡು ವರ್ಷ ಬೇಸಾಯ ಮಾಡಿ ಅಲ್ಲಿನ ಮಣ್ಣಿನ ಫಲವತ್ತತೆ ಕಡಿಮೆಯಾದ ನಂತರ ಬೇರೆ ಪ್ರದೇಶಗಳಿಗೆ ಹೋಗಿ ಬೇಸಾಯ ಮಾಡುವರು. ಇಂತಹ ಬೇಸಾಯವನ್ನು ಸ್ಥಳಾಂತರ ಬೇಸಾಯ ಎಂದು ಕರೆಯುವರು. ಇಂದು ಇದನ್ನು ನಿಷೇಧಿಸಲಾಗಿದೆ.

3) **ವಾಣಿಜ್ಯ ಬೇಸಾಯ :** ವ್ಯಾಪಾರದ ಉದ್ದೇಶದ ಸಲುವಾಗಿ ಕೈಗೊಳ್ಳುವ ಬೇಸಾಯವನ್ನು ವಾಣಿಜ್ಯ ಬೇಸಾಯ ಎಂದು ಕರೆಯುವರು. ಹೊಗೆಸೊಪ್ಪು, ಅಡಿಕೆ, ತೆಂಗು, ಕಬ್ಬು, ಹತ್ತಿ, ಚಹ, ಕಾಫಿ, ರಬ್ಬರ್ ಇತ್ಯಾದಿ ವಾಣಿಜ್ಯ ಬೇಸಾಯದ ಬೆಳೆಗಳಾಗಿವೆ.

4) **ಮಿಶ್ರ ಬೇಸಾಯ :** ಕೃಷಿ ಭೂಮಿಯನ್ನು ಬೆಳೆಗಳನ್ನು ಬೆಳೆಯುವುದಕ್ಕಷ್ಟೇ ಅಲ್ಲದೆ ದನಕರು ಸಾಕಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹಂದಿ ಸಾಕಾಣಿಕೆ, ರೇಷ್ಮೆ ಕೃಷಿ ಮುಂತಾದ ಉದ್ದೇಶಗಳಿಗಾಗಿಯೂ ಬಳಸಲಾಗುವದು. ಇದಕ್ಕೆ **'ಮಿಶ್ರಬೇಸಾಯ'** ಎಂದು ಕರೆಯುವರು.

5) **ತೋಟಗಾರಿಕಾ ಬೇಸಾಯ :** ಭಾರತದ ಮುಖ್ಯ ಬೇಸಾಯ ಪದ್ಧತಿಗಳಲ್ಲಿ ತೋಟಗಾರಿಕೆ ಬೇಸಾಯವು ಸಹ ಒಂದು. ಕಾಫಿ, ಚಹ ಮತ್ತು ರಬ್ಬರ್ ತೋಟಗಾರಿಕೆ ಬೆಳೆಗಳಲ್ಲಿ ಮುಖ್ಯವಾದವು. ಒಂದೇ ಬೆಳೆಯನ್ನು ವಿಸ್ತಾರವಾದ ತೋಟಗಳಲ್ಲಿ ಬೆಳೆಯಲಾಗುವುದು.

ಬೆಳೆಗಳ ಮಾದರಿ (Cropping Pattern) : ಯಾವುದೇ ಒಂದು ಪ್ರದೇಶವು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಹಲವಾರು ಬೆಳೆಗಳಿಂದ ಆವರಿಸಿದ್ದು, ಇವುಗಳ ಅನುಪಾತವನ್ನು ಬೆಳೆ ಮಾದರಿ ಎಂದು ಕರೆಯುವರು. ಬೆಳೆ ಮಾದರಿಯಲ್ಲಿ ಮುಖ್ಯವಾಗಿ ಆಹಾರ ಧಾನ್ಯಗಳು ಮತ್ತು ಆಹಾರೇತರ ಅಥವಾ ವಾಣಿಜ್ಯ ಬೆಳೆಗಳೆಂದು ಎರಡು ಬೆಳೆಗಳ ಅನುಪಾತವನ್ನು ಕಾಣಬಹುದು. ಭಾರತದ ಯಾವುದೇ ಒಂದು ಪ್ರದೇಶದ ಬೆಳೆ ಮಾದರಿಯು ಮುಖ್ಯವಾಗಿ ಭೂಸ್ವರೂಪ, ವಾಯುಗುಣ, ಮಣ್ಣು, ನೀರಿನ ಪೂರೈಕೆ, ಆರ್ಥಿಕ ಅಂಶಗಳು, ಸಾಮಾಜಿಕ ಅಂಶಗಳು ಮತ್ತು ತಂತ್ರಜ್ಞಾನವನ್ನು ಅವಲಂಬಿಸಿದೆ.

ಬೆಳೆಯ ಮಾದರಿಯನ್ನು ನಿರ್ಧರಿಸುವ ಅಂಶಗಳು : ಯಾವುದೇ ಒಂದು ಪ್ರದೇಶದ ಬೆಳೆಯು ಅಲ್ಲಿರುವ ನೈಸರ್ಗಿಕ, ಆರ್ಥಿಕ, ಸಾಮಾಜಿಕ ಮತ್ತು ರೈತರ ಮನೋಭಾವ ಮುಂತಾದ ಅಂಶಗಳಿಂದ ನಿರ್ಧರಿಸಲ್ಪಡುತ್ತದೆ.

1) **ನೈಸರ್ಗಿಕ ಅಂಶಗಳು :** ನೈಸರ್ಗಿಕ ಅಂಶಗಳಲ್ಲಿ ಭೂಸ್ವರೂಪ, ವಾಯುಗುಣ ಮತ್ತು ಮಳೆ ಪ್ರಮುಖವಾಗಿದ್ದು, ಬೆಳೆಯ ಮಾದರಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

2) **ಆರ್ಥಿಕ ಅಂಶಗಳು :** ಭಾರತದ ಕೆಲವು ವಿಶಾಲ ಹಿಡುವಳಿ ಹೊಂದಿರುವ ಪ್ರದೇಶಗಳಲ್ಲಿ ಮುಖ್ಯವಾಗಿ ಹೆಚ್ಚು ಬೆಲೆಕೊಡುವ ವಾಣಿಜ್ಯ ಉತ್ಪನ್ನಗಳನ್ನು ಬೆಳೆಯಲಾಗುತ್ತದೆ. ಇದರ ಮುಖ್ಯ ಉದ್ದೇಶ ಹೆಚ್ಚು ಆರ್ಥಿಕ ಲಾಭ ಪಡೆಯುವುದಾಗಿದೆ.

3) **ಸಾಮಾಜಿಕ ಅಂಶಗಳು :** ಪ್ರಮುಖವಾಗಿ ಸಾಮಾಜಿಕ ಅಂಶಗಳಾದ ಸಂಪ್ರದಾಯ, ಮೂಢನಂಬಿಕೆ, ಅನಕ್ಷರತೆ, ಮುಂತಾದ ಅಂಶಗಳು ಸಹ ಬೆಳೆಯ ಮಾದರಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

4) **ರೈತರ ಮನೋಭಾವ :** ಯಾವುದೇ ಒಂದು ಪ್ರದೇಶದ ಬೆಳೆ ಮಾದರಿಯಲ್ಲಿ ರೈತರ ಧೋರಣೆಯು ಪ್ರಮುಖ ಪ್ರಭಾವ ಬೀರುತ್ತದೆ. ಉದಾ : ಉತ್ತರ ಕರ್ನಾಟಕದಲ್ಲಿ ರೈತರು ಮೊದಲು ಜೋಳ, ಗೋಧಿಯನ್ನು ಹೆಚ್ಚಾಗಿ ಬೆಳೆಯುತ್ತಿದ್ದರು. ಆದರೆ ಇತ್ತೀಚಿಗೆ ಆರ್ಥಿಕ ಲಾಭ ಕೊಡುವ ಸೂರ್ಯಕಾಂತಿ ಮತ್ತು ಶೇಂಗಾ, ತೊಗರಿ, ಈರುಳ್ಳಿ ಬೆಳೆಯನ್ನು ಬೆಳೆಯುತ್ತಿದ್ದಾರೆ.

ಮೇಲಿನ ಅಂಶಗಳಲ್ಲದೆ ನೀರಿನ ಪೂರೈಕೆ, ಸಾರಿಗೆ ಸಂಪರ್ಕ, ಮಾರುಕಟ್ಟೆ, ಸುಧಾರಿತ ತಳಿಗಳು, ರಾಸಾಯನಿಕ ಗೊಬ್ಬರ, ಭೂಸುಧಾರಣೆ ಮುಂತಾದವುಗಳು ಸಹ ಬೆಳೆ ಮಾದರಿಯ ಮೇಲೆ ಪ್ರಭಾವ ಬೀರುತ್ತವೆ.

ಬೆಳೆ ಋತುಗಳು ಅಥವಾ ವ್ಯವಸಾಯದ ಅವಧಿಗಳು (Crop seasons) : ಭಾರತದಲ್ಲಿ ವರ್ಷದ ಎಲ್ಲ ಅವಧಿಯಲ್ಲೂ ವಿವಿಧ ಪ್ರದೇಶಗಳಲ್ಲಿ ಬೆಳೆಗಳನ್ನು ಬೆಳೆಯಲಾಗುವುದು. ಹೀಗೆ ದೇಶದಾದ್ಯಂತ ವರ್ಷದಲ್ಲಿ ಒಂದಿಲ್ಲ ಒಂದು ಭಾಗದಲ್ಲಿ ಬೆಳೆಗಳನ್ನು ಬೆಳೆಯುವುದನ್ನು ಕಾಣಬಹುದು. ದೇಶದಲ್ಲಿ ಮೂರು ವ್ಯವಸಾಯದ ಅವಧಿಗಳು ಕಂಡುಬರುತ್ತವೆ. 1) ಮುಂಗಾರು ಅಥವಾ ಖರೀಫ್ ಬೇಸಾಯ 2) ಹಿಂಗಾರು ಅಥವಾ ರಬಿ ಬೇಸಾಯ 3) ಬೇಸಿಗೆ ಅಥವಾ ಜೇಡ್ ಬೇಸಾಯ.

1) **ಮುಂಗಾರು ಅಥವಾ ಖರೀಫ್ ಬೇಸಾಯ :** ನೈಋತ್ಯ ಮನ್ಸೂನ್ ಮಾರುತಗಳ ಅವಧಿಯ ಬೇಸಾಯವನ್ನೇ 'ಮುಂಗಾರು ಬೇಸಾಯ' ಅಥವಾ 'ಖರೀಫ್ ಬೇಸಾಯ' ವೆಂದು ಕರೆಯುವರು. ಜೂನ್ ಅಥವಾ ಜುಲೈ ತಿಂಗಳಿನಲ್ಲಿ ಬಿತ್ತನೆ ಮಾಡಿ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಕಟಾವು ಮಾಡುವರು. ದೇಶದ ಹೆಚ್ಚು ಭಾಗವು ಈ ಅವಧಿಯಲ್ಲಿ ಸಾಗುವಳಿಗೆ ಒಳಪಟ್ಟಿರುವುದು. ಭತ್ತ, ರಾಗಿ, ಹತ್ತಿ, ಜೋಳ, ಮೆಕ್ಕೆಜೋಳ,ಎಣ್ಣೆಕಾಳುಗಳು ಈ ಅವಧಿಯ ಮುಖ್ಯ ಬೆಳೆಗಳಾಗಿವೆ.

2) **ಹಿಂಗಾರು ಅಥವಾ ಚಳಿಗಾಲದ ಅಥವಾ ರಬಿ ಬೇಸಾಯ :** ಇದು ಚಳಿಗಾಲದಲ್ಲಿ ಮಳೆ ಪಡೆಯುವ ಪ್ರದೇಶಗಳ ಮುಖ್ಯ ಸಾಗುವಳಿಯ ಅವಧಿಯಾಗಿದೆ. ವಾಯುವ್ಯ ಭಾರತದ ಪಂಜಾಬ್, ಹರಿಯಾಣ, ಜಮ್ಮು ಮತ್ತು ಕಾಶ್ಮೀರ, ಉತ್ತರ ಪ್ರದೇಶ ಹಾಗೂ ದಕ್ಷಿಣದಲ್ಲಿ ಆಂಧ್ರಪ್ರದೇಶ ಮತ್ತು ತಮಿಳುನಾಡುಗಳು ಈ ಅವಧಿಯ ಬೇಸಾಯಕ್ಕೆ ಒಳಪಟ್ಟಿವೆ. ವಾಯವ್ಯ ಭಾರತದಲ್ಲಿ ಗೋಧಿ ಅತಿ ಮುಖ್ಯ ರಬಿ ಬೆಳೆಯಾಗಿದೆ. ಚಳಿಗಾಲದಲ್ಲಿ ತಂಪಾದ ಸಮಶೀತೋಷ್ಣವಾದ ತುಂತುರು ಮಳೆಯಿಂದ ಕೂಡಿರುವ ವಾಯುಗುಣವಿರುವುದು. ಇದು ಗೋಧಿ ಬೇಸಾಯಕ್ಕೆ ಅತ್ಯಂತ ಸೂಕ್ತವಾಗಿದೆ. ಅಕ್ಟೋಬರ–ನವಂಬರನಲ್ಲಿ ಬಿತ್ತನೆ ಮಾಡಿ ಫೆಬ್ರುವರಿ–ಮಾರ್ಚ ಅವಧಿಯಲ್ಲಿ ಕಟಾವು ಮಾಡುವರು.


3) **ಬೇಸಿಗೆಯ ಅಥವಾ ಜೇಡ್ ಬೇಸಾಯ :** ರಬಿ ಹಾಗೂ ಖರೀಪ್ ಬೇಸಾಯದ ನಡುವಿನ ಅವಧಿಯಲ್ಲಿಯೂ ಭಾರತದ ಹಲವು ಕಡೆಗಳಲ್ಲಿ ಬೇಸಾಯ ಕಂಡು ಬರುವುದು. ಬೇಸಿಗೆಯ ಈ ಬೇಸಾಯವನ್ನೇ 'ಜೇಡ್ ಬೇಸಾಯ' ವೆಂದು ಕರೆಯುವರು. ದ್ವಿದಳ ಧಾನ್ಯಗಳಾದ ಉದ್ದು, ಹೆಸರು, ಎಣ್ಣೆಕಾಳುಗಳು ಮತ್ತು ತರಕಾರಿಗಳನ್ನು ಈ ಅವಧಿಯಲ್ಲಿ ಬೆಳೆಯುವರು.

ಪ್ರಮುಖ ಬೆಳೆಗಳು : ಭಾರತವು ಪ್ರಪಂಚದ ಪ್ರಮುಖ ವ್ಯವಸಾಯದ ರಾಷ್ಟ್ರಗಳಲ್ಲಿ ಒಂದಾಗಿದೆ. ಹಸಿರುಕ್ರಾಂತಿಯ ಪರಿಣಾಮವಾಗಿ ಭಾರತದ ವ್ಯವಸಾಯ ಕ್ಷೇತ್ರವು ನೀರಾವರಿ, ಆಧುನಿಕ ಯಂತ್ರೋಪಕರಣ, ರಾಸಾಯನಿಕ ಗೊಬ್ಬರ, ಅಧಿಕ ಇಳುವರಿ ಕೊಡುವ ತಳಿಗಳು, ಕ್ರಿಮಿನಾಶಕ ಮತ್ತು ರೋಗನಾಶಕ

ಮುಂತಾದವುಗಳನ್ನು ಬಳಸಿಕೊಂಡು ಸಾಕಷ್ಟು ಅಭಿವೃದ್ಧಿಯನ್ನು ಕಂಡಿದೆ. ಜೊತೆಗೆ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿದೆ. ಭಾರತವು ಉತ್ಪಾದಿಸುತ್ತಿರುವ ಬೆಳೆಗಳಲ್ಲಿ ಆಹಾರ ಧಾನ್ಯಗಳು, ವಾಣಿಜ್ಯ ಬೆಳೆಗಳು, ನಾರಿನ ಬೆಳೆಗಳು ಮತ್ತು ಪಾನೀಯ ಬೆಳೆಗಳು ಪ್ರಮುಖವಾಗಿವೆ.

1) ಆಹಾರದ ಬೆಳೆಗಳು (Food Crops) :

ಭತ್ತ : ಭಾರತವು ಉತ್ಪಾದಿಸುತ್ತಿರುವ ಆಹಾರ ಧಾನ್ಯಗಳಲ್ಲಿ ಭತ್ತವು ಅತಿ ಮುಖ್ಯವಾಗಿದೆ. ಭಾರತವು ಪ್ರಪಂಚದಲ್ಲಿ ಅತಿ ಹೆಚ್ಚು ಭತ್ತದ ಕ್ಷೇತ್ರವನ್ನು ಹೊಂದಿದ್ದು ಉತ್ಪಾದನೆಯಲ್ಲಿ ಎರಡನೆ ಸ್ಥಾನದಲ್ಲಿದೆ. ದೇಶದ ಬಹುಪಾಲು ಜನರು ಭತ್ತವನ್ನೆ ಪ್ರಮುಖ ಆಹಾರ ಧಾನ್ಯವಾಗಿ ಬಳಸುವರು. ಭತ್ತವು ಪ್ರಮುಖವಾಗಿ **'ಖಾರಿಫ್'** ಬೆಳೆಯಾಗಿದೆ. ಭತ್ತದ ಬೇಸಾಯಕ್ಕೆ 25^0 ಸೆಲ್ಸಿಯಸ್ ಉಷ್ಣಾಂಶ ಮತ್ತು 100 ರಿಂದ 200 ಸೆಂ.ಮೀ ವಾರ್ಷಿಕ ಮಳೆ ಅವಶ್ಯಕ. ಫಲವತ್ತಾದ ಮೆಕ್ಕಲು ಮಣ್ಣು, ಜೇಡಿ ಮಣ್ಣು, ಭತ್ತದ ಬೆಳೆಗೆ ಸೂಕ್ತವಾಗಿರುತವೆ. ಬೆಳೆಯು ಕೊಯ್ಲಿಗೆ ಬರುವವರೆಗೂ ಪೈರಿನ ತಳದಲ್ಲಿ ನೀರು ನಿಂತಿರ ಬೇಕಾದುದರಿಂದ ಸಮತಟ್ಟಾದ ಭೂಮಿ ಬೇಕಾಗುತ್ತದೆ. ಕಡಿಮೆ ಮಳೆ ಬೀಳುವ ಕಡೆಗಳಲ್ಲಿ ನೀರಾವರಿ ಅವಶ್ಯಕ.




ಪಶ್ಚಿಮ ಬಂಗಾಳ ರಾಜ್ಯವು ಅತಿ ಹೆಚ್ಚು ಭತ್ತವನ್ನು ಬೆಳೆಯುವ ರಾಜ್ಯವಾಗಿದೆ. ಆಂಧ್ರಪ್ರದೇಶ, ತಮಿಳುನಾಡು, ಒರಿಸ್ಸಾ, ಕರ್ನಾಟಕ, ಉತ್ತರಪ್ರದೇಶ, ಭತ್ತ ಬೆಳೆಯುವ ಇತರ ರಾಜ್ಯಗಳಾಗಿವೆ.

ಗೋಧಿ :

ಇದು ಭಾರತದ ಚಳಿಗಾಲದ (ರಬಿ) ಮುಖ್ಯ ಬೆಳೆಯಾಗಿದೆ. ನಮ್ಮ ದೇಶ ಗೋಧಿಯ ಉತ್ಪಾದನೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದೆ. ಹಾಗೂ ಗೋಧಿಯನ್ನು ರಫ್ತು ಮಾಡುವ ಪ್ರಪಂಚದ ಪ್ರಮುಖ ರಾಷ್ಟ್ರಗಳಲ್ಲಿ ಒಂದಾಗಿದೆ. ಗೋಧಿ ಬೆಳೆಗೆ 10^0ಯಿಂದ 15^0 ಸೆಲ್ಸಿಯಸ್ ಉಷ್ಣಾಂಶ 50 ರಿಂದ 70 ಸೆಂ ಮೀ

ವಾರ್ಷಿಕ ಮಳೆ ಅವಶ್ಯಕ. ಮರಳು ಮಿಶ್ರಿತ ಜೇಡಿಮಣ್ಣು ಮತ್ತು ಕಪ್ಪುಮಣ್ಣಿನಲ್ಲಿ ಚೆನ್ನಾಗಿ ಗೋಧಿಯು ಬೆಳೆಯುತ್ತದೆ.

ಉತ್ತರದ ಮೈದಾನಗಳಾದ ಪಂಜಾಬ್, ಹರಿಯಾಣ ಮತ್ತು ಉತ್ತರಪ್ರದೇಶಗಳಲ್ಲಿ ಗೋಧಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. 'ಪಂಜಾಬ್' ಗೋಧಿಯ ಕಣಜವೆನಿಸಿದೆ. ಮಧ್ಯಪ್ರದೇಶ, ಬಿಹಾರ, ರಾಜಸ್ತಾನ, ಗುಜರಾತ್, ಕರ್ನಾಟಕದ ಉತ್ತರ ಭಾಗ ಮತ್ತು ಮಹಾರಾಷ್ಟ್ರಗಳು ಗೋಧಿಯನ್ನು ಬೆಳೆಯುವ ಇತರ ರಾಜ್ಯಗಳಾಗಿವೆ. ಉತ್ತರಪ್ರದೇಶವು ಗೋಧಿ ಉತ್ಪಾದನೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ.



ವಾಣಿಜ್ಯ ಬೆಳೆಗಳು (Commercial Crops) :

1) ಕಬ್ಬು : (Sugarcane) ಇದು ಭಾರತದ ಅತಿಮುಖ್ಯ ವಾಣಿಜ್ಯ ಬೆಳೆಯಾಗಿದೆ. ಭಾರತದಲ್ಲಿ ಕಬ್ಬಿನ ಬೇಸಾಯವು ಅತೀ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಭಾರತವು ಇದರ ಮೂಲವಾಗಿದ್ದು, ಪ್ರಪಂಚದಲ್ಲಿ ಎರಡನೆಯ ಸ್ಥಾನವನ್ನು ಹೊಂದಿರುವುದು. ಇದು ವಾರ್ಷಿಕ ಬೆಳೆಯಾಗಿದ್ದು ನೀರಾವರಿ ಪ್ರದೇಶದಲ್ಲಿ ಬೆಳೆಯುವ ಬೆಳೆಯಾಗಿದೆ. ಈ ಬೆಳೆಗೆ ಹೆಚ್ಚು ಉಷ್ಣಾಂಶ ಮತ್ತು ತೇವಾಂಶ ಹೊಂದಿರುವ ವಾಯುಗುಣ ಅವಶ್ಯಕ. ಇದಕ್ಕೆ 21^0 ರಿಂದ 26^0 ಸೆಲ್ಸಿಯಸ್ ಉಷ್ಣಾಂಶ, 100 ರಿಂದ 150 ಸೆಂ.ಮೀ. ವಾರ್ಷಿಕ ಮಳೆ ಬೇಕಾಗುವುದು. ಮೆಕ್ಕಲು ಮತ್ತು ಕಪ್ಪು ಮಣ್ಣಿನಲ್ಲಿ ಕಬ್ಬು ಚೆನ್ನಾಗಿ ಬೆಳೆಯುತ್ತದೆ. ಉತ್ತರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಗುಜರಾತ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಕಬ್ಬು ಮುಖ್ಯ ವಾಣಿಜ್ಯ ಬೆಳೆ. ಭಾರತದ ಬಹುತೇಕ ರಾಜ್ಯಗಳಲ್ಲಿ ಇದನ್ನು ಬೆಳೆಯುತ್ತಾರೆ.

ನಿಮಗೆ ತಿಳಿದಿರಲಿ :

- *"ಕಬ್ಬು ಅಫಿಸಿನೇರಮ್ ಗುಂಪಿಗೆ ಸೇರಿದ ಬಹು ವಾರ್ಷಿಕ ಸಸ್ಯ". ದೇಶದ ಸಕ್ಕರೆ ಕೈಗಾರಿಕೆ, ಖಂಡಸಾರಿ ಕೈಗಾರಿಕೆ, ಬೆಲ್ಲ ತಯಾರಿಕೆ ಮತ್ತು ಆಲ್ಕೋಹಾಲ್ ಉದ್ಯಮಗಳು ಕಬ್ಬಿನ ಉತ್ಪಾದನೆಯನ್ನು ಅವಲಂಬಿಸಿವೆ. ಇದಲ್ಲದೆ ಕಬ್ಬಿನ ಸಿಪ್ಪೆಯು ಕಾಗದದ ಕೈಗಾರಿಕೆಯ ಮುಖ್ಯ ಕಚ್ಚಾ ವಸ್ತುವಾಗಿದೆ.*
- *ಭಾರತದಲ್ಲಿ ಕಬ್ಬಿನ ಉತ್ಪಾದನೆಗೆ ಬಳಸುತ್ತಿರುವ ಪದ್ಧತಿಗಳಲ್ಲಿ 'ಕೂಳೆ ಪದ್ಧತಿ' (Ratoon System) ಅತಿ ಮುಖ್ಯವಾದದ್ದು. ಮೊದಲು ಕಬ್ಬಿನ ತುಂಡುಗಳನ್ನು ನೆಟ್ಟು ಫಸಲನ್ನು ಪಡೆದ ನಂತರ ಅದರ ಕೂಳೆಯನ್ನು ಬಿಟ್ಟು ಉಳುಮೆ ಮಾಡಿ ಕೂಳೆ ಚಿಗುರಿ ಅದರಿಂದ ಮತ್ತೊಂದು ಫಸಲನ್ನು ಪಡೆಯುವರು. ಇದನ್ನೇ 'ಕೂಳೆ ಪದ್ಧತಿ' ಎಂದು ಕರೆಯುವರು.*

> **ಇದು ನಿಮಗೆ ತಿಳಿದಿರಲಿ :**
> ಹೊಗೆಸೊಪ್ಪು 'ನಿಕೋಷಿಯಾನ' ವರ್ಗಕ್ಕೆ ಸೇರಿದ ಸಸ್ಯ. ಇದರ ಮೂಲ ದಕ್ಷಿಣ ಅಮೇರಿಕಾದ ಆ್ಯಂಡಿಸ್ ಪರ್ವತ ಪ್ರದೇಶ. ಜೀನ್ ನಿಕೋಟ್ ಎಂಬುವನು ಇದನ್ನು ಫ್ರಾನ್ಸಿಗೆ ಪರಿಚಯಿಸಿದನು. ಅಲ್ಲಿಂದ ಭಾರತಕ್ಕೆ ಪೋರ್ಚುಗೀಸರು 17ನೇ ಶತಮಾನದಲ್ಲಿ ಪರಿಚಯಿಸಿದ್ದಾರೆ.

2) **ಹೊಗೆಸೊಪ್ಪು (Tobacco)** : ಭಾರತವು ಇದರ ಉತ್ಪಾದನೆಯಲ್ಲಿ ಜಗತ್ತಿನಲ್ಲಿಯೇ ಮೂರನೆಯ ಸ್ಥಾನವನ್ನು ಪಡೆದಿದೆ. ಹೊಗೆಸೊಪ್ಪನ್ನು ಬೀಡಿ, ಸಿಗರೇಟು, ಹುಕ್ಕಾ, ನಸ್ಯಗಳ ತಯಾರಿಕೆ ಹಾಗೂ ತಿನ್ನಲು ಬಳಸುತ್ತಾರೆ. ಹೊಗೆಸೊಪ್ಪು ಸೇವನೆ ಆರೋಗ್ಯಕ್ಕೆ ಹಾನಿಕಾರಕ ಎಂಬುದು ಗೊತ್ತಿದ್ದರೂ ಇಂದು ಪ್ರಪಂಚದ ಮಾರುಕಟ್ಟೆಯಲ್ಲಿ ಹೊಗೆಸೊಪ್ಪಿಗೆ ಮತ್ತು ಅದರಿಂದ ತಯಾರಿಸಿದ ವಸ್ತುಗಳಿಗೆ ಬೇಡಿಕೆಯು ದಿನೇ ದಿನೇ ಹೆಚ್ಚಾಗುತ್ತಿದೆ. ಇದು ಉಷ್ಣವಲಯದ ಬೆಳೆಯಾಗಿದ್ದು, 21^0 ರಿಂದ 27^0 ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ. ಸಾಧಾರಣ ಮಳೆ ಬೀಳುವ ಪ್ರದೇಶ ಅವಶ್ಯವಿದ್ದು, ಸರಾಸರಿ 50 ಸೆಂ.ಮೀ. ಮಳೆ ಬೇಕು. ಮರಳು ಮಿಶ್ರಿತ ಮಣ್ಣು, ರಾಸಾಯನಿಕ ಗೊಬ್ಬರ ಅವಶ್ಯಕ. ಆಂಧ್ರಪ್ರದೇಶ, ಗುಜರಾತ, ಉತ್ತರಪ್ರದೇಶ, ಕರ್ನಾಟಕ, ಬಿಹಾರ, ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ಹೊಗೆ ಸೊಪ್ಪನ್ನು ಉತ್ಪಾದಿಸುವರು. ಕರ್ನಾಟಕದ ನಿಪ್ಪಾಣಿ ಬೆಳಗಾವಿ ಜಿಲ್ಲೆ ನಗರವು ಹೊಗೆಸೊಪ್ಪು ಮಾರುಕಟ್ಟೆ ಕೇಂದ್ರವಾಗಿದೆ.

ನಾರಿನ ಬೆಳೆ (Fibre Crops) :

ಹತ್ತಿ ಮತ್ತು ಸೆಣಬು ಭಾರತವು ಉತ್ಪಾದಿಸುತ್ತಿರುವ ಅತಿ ಮುಖ್ಯ ನಾರಿನ ಬೆಳೆಗಳಾಗಿದ್ದು ಇವು ಹತ್ತಿ ಬಟ್ಟೆ ಕೈಗಾರಿಕೆ ಹಾಗೂ ಸೆಣಬಿನ ಕೈಗಾರಿಕೆಗಳನ್ನು ಪೋಷಿಸಿವೆ.

1) **ಹತ್ತಿ (Cotton)** : ಭಾರತವು ಉತ್ಪಾದಿಸುವ ನಾರಿನ ಬೆಳೆಗಳಲ್ಲಿ ಹತ್ತಿ ಪ್ರಮುಖವಾದುದು. ಕಚ್ಚಾ ಹತ್ತಿಯನ್ನು ಹತ್ತಿ ಗಿರಣಿಗಳಲ್ಲಿ ಕಚ್ಚಾ ವಸ್ತುವಾಗಿ ಬಳಸುವುದಲ್ಲದೆ, ಅಧಿಕ ಪ್ರಮಾಣದ ಹತ್ತಿಯನ್ನು ರಫ್ತುಮಾಡಿ ವಿದೇಶಿ ವಿನಿಮಯವನ್ನು ಗಳಿಸುತ್ತದೆ. ಭಾರತವು ಹತ್ತಿ ಬೆಳೆಯುವ ಪ್ರದೇಶದಲ್ಲಿ ಪ್ರಪಂಚದಲ್ಲಿ ಮೊದಲ ಹಾಗೂ ಉತ್ಪಾದನೆಯಲ್ಲಿ ಎರಡನೆ ಸ್ಥಾನದಲ್ಲಿದೆ. ಹತ್ತಿಯು ಉಷ್ಣ ವಲಯ ಮತ್ತು ಉಪ ಉಷ್ಣವಲಯದ ಬೆಳೆ. ಇದರ ಉತ್ಪಾದನೆ 20^0 ರಿಂದ 25^0 ಸೆಲ್ಸಿಯಸ್. ಉಷ್ಣಾಂಶ ಅವಶ್ಯಕ. ಸುಮಾರು 75 ರಿಂದ 150 ಸೆಂ.ಮೀ ಗಿಂತ ಹೆಚ್ಚು ಮಳೆ ಪಡೆಯುವ ಪ್ರದೇಶಗಳಲ್ಲಿ ಬೆಳೆಯಬಲ್ಲದು. ಕಪ್ಪು ಮಣ್ಣು, ಮೆಕ್ಕಲು ಮಣ್ಣುಗಳಲ್ಲಿ ಬೆಳೆಯಬಲ್ಲವು. ಆದರೆ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಮಣ್ಣು ಇದಕ್ಕೆ ಹೆಚ್ಚು ಸೂಕ್ತ. ಇದನ್ನು ಮುಂಗಾರು (ಖರೀಫ್) ಬೆಳೆಯಾಗಿ ಬೆಳೆಯುತ್ತಾರೆ. ಗುಜರಾತ್, ಮಹಾರಾಷ್ಟ್ರ, ಆಂಧ್ರಪ್ರದೇಶ, ಹರಿಯಾಣ, ಕರ್ನಾಟಕ ಮತ್ತು ಮಧ್ಯಪ್ರದೇಶಗಳಲ್ಲಿ ಹತ್ತಿಯನ್ನು ಬೆಳೆಯುತ್ತಾರೆ.

ಪಾನೀಯ ಬೆಳೆ (Beverage Crops)

ಭಾರತವು ಉತ್ಪಾದಿಸುವ ಮುಖ್ಯ ತೋಟಗಾರಿಕಾ ಬೆಳೆಗಳಾದ ಚಹಾ ಮತ್ತು ಕಾಫಿ ಮುಖ್ಯ ಪಾನೀಯ ಬೆಳೆಗಳಾಗಿವೆ. ಭಾರತವು ಪ್ರಪಂಚದಲ್ಲಿ ಈ ಬೆಳೆಗಳನ್ನು ಉತ್ಪಾದಿಸುವ ಮತ್ತು ರಫ್ತು ಮಾಡುವ ಪ್ರಮುಖ ರಾಷ್ಟ್ರವಾಗಿದೆ.

1) **ಚಹ (Tea) :** ಚಹ ಭಾರತದಲ್ಲಿ ಮಾತ್ರವಲ್ಲದೇ ಪ್ರಪಂಚದಲ್ಲಿಯೇ ಅತಿ ಮುಖ್ಯವಾದ ಪಾನೀಯವಾಗಿದೆ. ಭಾರತವು ಚಹದ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಮೊದಲ ಸ್ಥಾನವನ್ನು ಪಡೆದಿದೆ. ಬಹುಕಾಲದವರೆಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತವು ರಫ್ತಿನ ಏಕಸ್ವಾಮ್ಯತೆಯನ್ನು ಹೊಂದಿತ್ತು. ಚಹವು ಅಪಾರ ಉದ್ಯೋಗ ಅವಕಾಶಗಳನ್ನು ಒದಗಿಸುವುದರಿಂದ ಪ್ರಾಮುಖ್ಯತೆಯನ್ನು ಗಳಿಸಿದೆ. ಚಹವು ಉಷ್ಣವಲಯ ಮತ್ತು ಉಪ ಉಷ್ಣವಲಯಗಳಲ್ಲಿ ಬೆಳೆಯುವ ನಿತ್ಯ ಹರಿದ್ವರ್ಣದ ಬಹುವಾರ್ಷಿಕ ಬೆಳೆಯಾಗಿದ್ದು, ಸರಾಸರಿ ಉಷ್ಣಾಂಶ 21^0 ಸೆಲ್ಸಿಯಸ್ ಉಪಯುಕ್ತ. 150–200 ಸೆಂ.ಮೀ. ಮಳೆ ಅವಶ್ಯಕ. ಕೊಳೆತ ಜೈವಿಕಾಂಶವುಳ್ಳ ಹಾಗೂ ನೀರು ಸುಲಭವಾಗಿ ಬಸಿದು ಹೋಗುವಂತಹ ಮರಳು ಮಿಶ್ರಿತ ಜೇಡಿ ಮಣ್ಣು ಚಹದ ಬೇಸಾಯಕ್ಕೆ ಉತ್ಕೃಷ್ಟವಾದದ್ದರಿಂದ ಸುಮಾರು 1200 ರಿಂದ 2400 ಮೀ. ಎತ್ತರವುಳ್ಳ ಇಳಿಜಾರುಗಳಲ್ಲಿ ಬೆಳೆಯಲಾಗುವುದು. ಅಸ್ಸಾಂ, ಪಶ್ಚಿಮ ಬಂಗಾಳ ತಮಿಳುನಾಡು ಹಾಗೂ ಕೇರಳಗಳಲ್ಲಿ ಚಹದ ಬೇಸಾಯವನ್ನು ಕಾಣುತ್ತೇವೆ ಭಾರತವು ಚಹದ ರಫ್ತಿಗೆ ಹೆಸರಾಗಿದೆ.

> **ಇದು ನಿಮಗೆ ತಿಳಿದಿರಲಿ :**
>
> ಚಹವು 'ಥೀಯನ್' ಎಂಬ ಉತ್ತೇಜಕಾರಕವನ್ನು ಒಳಗೊಂಡಿದೆ.
>
> ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ತ್ರಿಪುರಾ, ಹಿಮಾಚಲ ಪ್ರದೇಶ, ಕರ್ನಾಟಕ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪೂರಗಳಲ್ಲಿ ಚಹಾ ತೋಟಗಳನ್ನು ಕಾಣಬಹುದು.

ವ್ಯವಸಾಯದ ಅಭಿವೃದ್ಧಿಯಲ್ಲಿ ತೋಟಗಾರಿಕೆ ಹಾಗೂ ಪುಷ್ಪ ಬೇಸಾಯದ ಪಾತ್ರ :

ಭಾರತವು ಆಹಾರ ಬೆಳೆಗಳು, ವಾಣಿಜ್ಯ ಬೆಳೆಗಳು, ನಾರಿನ ಬೆಳೆಗಳಲ್ಲದೆ, ತೋಟಗಾರಿಕಾ ಬೆಳೆಗಳು ಹಾಗೂ ಪುಷ್ಪ ಬೇಸಾಯದಲ್ಲಿ ಇತ್ತೀಚೆಗೆ ಹೆಚ್ಚು ಅಭಿವೃದ್ಧಿ ಹೊಂದಿದ್ದು, ಸಂಶೋಧನಾ ಸಂಸ್ಥೆಗಳ ಪಾತ್ರ ಅತ್ಯಂತ ಮಹತ್ತರವಾದುದು.

ತೋಟಗಾರಿಕಾ ಅಥವಾ ಕೈತೋಟಗಾರಿಕೆ ಬೆಳೆಗಳು (Horticultural crops) : ತೋಟಗಾರಿಕೆಯು ಹಣ್ಣು, ತರಕಾರಿ ಹಾಗೂ ಹೂಗಳ ಉತ್ಪಾದನೆಗಳನ್ನು ಒಳಗೊಂಡಿದೆ. ಇದು ಬಹುತೇಕ ಅಲ್ಪಾವಧಿಯ ಅಥವಾ ನಿಯತಕಾಲಿಕವಾದ ಅಂದರೆ ನಿರ್ದಿಷ್ಟ ಅವಧಿಯಲ್ಲಿ ಫಸಲು ನೀಡುವ ಬೆಳೆಗಳನ್ನು ಒಳಗೊಂಡಿದೆ. ತೋಟಗಾರಿಕೆ ಬೇಸಾಯವು ಇತರೆ ಬೇಸಾಯ ಪದ್ಧತಿಗಳಿಗಿಂತ ಹೆಚ್ಚು ಸಾಂದ್ರಯುತ ಹಾಗೂ ವಾಣಿಜ್ಯ ಮಾದರಿಯದಾಗಿದೆ.

> ***ನಿಮಗೆ ತಿಳಿದಿರಲಿ :***
>
> *ಭಾರತದಲ್ಲಿ ವ್ಯವಸಾಯ ಕ್ಷೇತ್ರದ ಸಂಶೋಧನೆಯಲ್ಲಿ*
>
> - ***ICAR*** *(ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್)*
> - ***NIHR*** *(ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಹಾರ್ಟಿಕಲ್ಚರಲ್ ರಿಸರ್ಚ ಆಫ್ ಇಂಡಿಯಾ) ಮೊದಲಾದ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತವೆ.*

ಭಾರತದಲ್ಲಿ ಮಾವು, ಬಾಳೆ, ಸಪೋಟ ಹಾಗೂ ನಿಂಬೆ ಜಾತಿಯ ಹಣ್ಣುಗಳ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಮೊಲನೆಯ ಸ್ಥಾನದಲ್ಲಿದೆ. ಇದರಿಂದ ಸರಕಾರವು ತೋಟಗಾರಿಕೆ ಬೇಸಾಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದು, ಈ ಕ್ಷೇತ್ರವು ಅಪಾರ ಪ್ರಗತಿಯನ್ನು ಸಾಧಿಸಿದೆ. ತೋಟಗಾರಿಕೆ ಬೇಸಾಯದ ಈ

ಪ್ರಗತಿಯನ್ನು **'ಸುವರ್ಣ ಕ್ರಾಂತಿ'** (Golden Revolution) ಎಂದು ಕರೆಯುವರು. ತೋಟಗಾರಿಕೆಗೆ ಅವಶ್ಯಕವಾದ ಎಲ್ಲ ಭೌಗೋಳಿಕ ವೈವಿಧ್ಯಮಯ ಭೂಸ್ವರೂಪ, ವಾಯುಗುಣ, ಮಣ್ಣು, ನೀರಾವರಿ ಸೌಲಭ್ಯ, ಕಾರ್ಮಿಕರು, ಮಾರುಕಟ್ಟೆ, ಸರಕಾರದ ಉತ್ತೇಜನ ಮುಂತಾದವುಗಳು ದೇಶದಲ್ಲಿ ಹೆಚ್ಚು ಪೂರಕವಾಗಿವೆ.

> **ನಿಮಗೆ ತಿಳಿದಿರಲಿ :**
> *ತೋಟಗಾರಿಕಾ ಬೆಳೆಗಳ ಉತ್ಪಾದನೆಯ ಪ್ರದೇಶಗಳನ್ನು ಮಾರುಕಟ್ಟೆಗಳೊಡನೆ ಸಂಪರ್ಕಿಸುವ ಮಹತ್ತರ ಯೋಜನೆಯನ್ನು ಕೈಗೊಳ್ಳಲಾಗಿದೆ. ಈ ಮಾರುಕಟ್ಟೆಗಳು ಸುತ್ತಲಿನ ಉತ್ಪಾದನಾ ಪ್ರದೇಶಗಳೊಡನೆ ನೇರ ಸಂಪರ್ಕವನ್ನು ಹೊಂದಿರುತ್ತವೆ. ಇದನ್ನು* ***'ಟರ್ಮಿನಲ್ ಮಾರ್ಕೆಟ್'*** *(Terminal Market) ಎಂದು ಕರೆಯುವರು.*

ಪುಷ್ಪ ಬೇಸಾಯ (Floriculture) :

ಭಾರತದ ವ್ಯವಸಾಯ ಪದ್ಧತಿಗಳಲ್ಲಿ ಪುಷ್ಪ ಕೃಷಿಯೂ ಸಹ ಒಂದು. ಹೂವು ಬೆಳೆಯುವ ಕಲೆಯು ಭಾರತೀಯರಿಗೆ ಅತಿ ಪುರಾತನ ಕಾಲದಿಂದಲೂ ತಿಳಿದಿತ್ತು. ವಾಣಿಜ್ಯ ಮಾದರಿಯ ಪುಷ್ಪ (ಹೂವು) ಕೃಷಿ ಅಥವಾ ಬೇಸಾಯವನ್ನು 'ಫ್ಲೋರಿಕಲ್ಚರ್' ಎಂದು ಕರೆಯುವರು. ಭಾರತವು ಬೆಳೆಯುವ ಹೂವುಗಳಲ್ಲಿ ಮಲ್ಲಿಗೆ, ದುಂಡುಮಲ್ಲಿಗೆ, ಸಂಪಿಗೆ, ಚಂಡು ಹೂವು, ಸೇವಂತಿಗೆ, ಕನಕಾಂಬರ, ಗುಲಾಬಿ, ಲಿಲ್ಲಿ ಮುಂತಾದವುಗಳು ಪ್ರಮುಖವಾಗಿವೆ. ಸಾಂಪ್ರದಾಯಿಕ ರೀತಿಯ ಹೂಗಳಿಗಿಂತ ಉದ್ದವಾಗಿ ಕತ್ತರಿಸಿದ (Cut Flowers) ಗುಲಾಬಿ, ಆರ್ಕಿಡ್, ಲಿಲ್ಲಿ, ಗ್ಲಾಡಿಯೋಲಸ್, ಕಾರನೇಷನ್, ಆಂಥೋರಿಯಂ, ಮೊದಲಾದ ಹೂವುಗಳಿಗೆ ಅಪಾರ ಬೇಡಿಕೆಯಿದ್ದು, ಇವುಗಳ ಉತ್ಪಾದನೆ ಹೆಚ್ಚು ಪ್ರಾಮುಖ್ಯತೆ ಗಳಿಸಿದೆ.

ಪುಷ್ಪ ಬೇಸಾಯವು ಕೆಲವೇ ರಾಜ್ಯಗಳಿಗೆ ಸೀಮಿತವಾಗಿದೆ. ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಉತ್ತರಪ್ರದೇಶ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ಹಿಮಾಚಲ ಪ್ರದೇಶ, ಹರಿಯಾಣ, ರಾಜಸ್ಥಾನ ಮುಂತಾದ ರಾಜ್ಯಗಳು ಪುಷ್ಪ ಬೇಸಾಯವನ್ನು ಒಳಗೊಂಡಿವೆ. ಭಾರತದ ಬೇಸಾಯವು ಪ್ರಸ್ತುತ ವೈವಿಧ್ಯತೆಯನ್ನು ಮೈಗೂಡಿಸಿಕೊಳ್ಳುತ್ತಿದೆ. ಇದರಿಂದಾಗಿ ಪುಷ್ಪ ಬೇಸಾಯವು ಉದ್ಯಮದ ಮಾದರಿಯಲ್ಲಿ ಅಭಿವೃದ್ಧಿ ಹೊಂದಲು ಉತ್ತಮ ಅವಕಾಶಗಳಿವೆ. ತೋಟಗಾರಿಕಾ ಬೆಳೆಗಳು ಮತ್ತು ಪುಷ್ಪ ಬೇಸಾಯವು ಇತ್ತೀಚಿನ ದಿನಗಳಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಪ್ರಮುಖವಾದ ಆರ್ಥಿಕತೆಯನ್ನು ಹೊಂದಿವೆ. ಇವುಗಳು ರೈತರಿಗೆ ಇತರೆ ವ್ಯವಸಾಯಗಳ ಬೆಳವಣಿಗೆಗೆ ಪೂರಕವಾಗಿವೆ.

ಅಭ್ಯಾಸಗಳು

I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.

1) ಭೂಮಿಯನ್ನು ವಿವಿಧ ಉದ್ದೇಶಗಳಿಗೆ ಬಳಸುವುದನ್ನು __________ ಎನ್ನುವರು.

2) ಒಂದೇ ವ್ಯವಸಾಯದ ಭೂಮಿಯಲ್ಲಿ ಏಕಕಾಲದಲ್ಲಿ ಎರಡು–ಮೂರು ಬೆಳೆಗಳನ್ನು ಬೆಳೆಯುವುದಕ್ಕೆ __________ ಎಂದು ಕರೆಯುವರು.

3) ರೈತರು ತಮ್ಮ ಜೀವನಕ್ಕೆ ಅವಶ್ಯಕವಿರುವ ಹುಟ್ಟುವಳಿಗಳನ್ನು ಮಾತ್ರ ಬೆಳೆಯುವುದಕ್ಕೆ __________ ಬೇಸಾಯ ಎಂದು ಕರೆಯುವರು.

4) ವಾಣಿಜ್ಯ ಬೇಸಾಯದ ಬೆಳೆ __________ .

5) ಭಾರತದಲ್ಲಿ ಅತಿ ಹೆಚ್ಚು ಭತ್ತ ಬೆಳೆಯುವ ರಾಜ್ಯ __________ .

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.

1) ಭೂ ಬಳಕೆ ಎಂದರೇನು ?

2) ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳು ಯಾವವು ?

3) ವ್ಯವಸಾಯ ಎಂದರೇನು ?

4) ವ್ಯವಸಾಯದ ವಿಧಗಳು ಯಾವುವು ?

5) ಖರೀಫ್ ಬೇಸಾಯ ಎಂದರೇನು ?

6) ರಬಿ ಬೇಸಾಯ ಎಂದರೇನು ?

7) ಹತ್ತಿ ಬೆಳೆ ಬೆಳೆಯಲು ಅವಶ್ಯಕವಿರುವ ಪೂರಕಾಂಶಗಳಾವುವು ?

8) ಪುಷ್ಪ ಬೇಸಾಯದಲ್ಲಿ ನಿಮ್ಮ ಸುತ್ತ-ಮುತ್ತ ಬೆಳೆಯುತ್ತಿರುವ ಪುಷ್ಪಗಳ ಪಟ್ಟಿ ತಯಾರಿಸಿ.

III. ಚಟುವಟಿಕೆಗಳು :

1) ಭಾರತದಲ್ಲಿ ಬೆಳೆಯುವ ವಿವಿಧ ಆಹಾರ ಮತ್ತು ದ್ವಿದಳ ಧಾನ್ಯಗಳನ್ನು ಸಂಗ್ರಹಿಸಿರಿ.

2) ಭಾರತದಲ್ಲಿ ಗೋಧಿ ಮತ್ತು ಭತ್ತ ಬೆಳೆಯುವ ಪ್ರದೇಶಗಳನ್ನು ಭಾರತದ ನಕ್ಷೆಯಲ್ಲಿ ಗುರುತಿಸಿ.

3) ತಂಬಾಕು ಸೇವನೆಯು ಆರೋಗ್ಯಕ್ಕೆ ಹಾನಿಕಾರಕ ಹೇಗೆ ಎಂಬ ಬಗ್ಗೆ ಹತ್ತಿರದ ವೈದ್ಯರಿಂದ ಮಾಹಿತಿ ತಿಳಿಯಿರಿ.

IV. ಯೋಜಿತ ಕಾರ್ಯ :

1) ನಿಮ್ಮ ಸುತ್ತಲಿನ ಪ್ರದೇಶದ ಸಾಗುವಳಿ ಮಾಡುವ ವಿವಿಧ ಬೆಳೆಗಳನ್ನು ಕುರಿತು ಟಿಪ್ಪಣೆ ಮಾಡಿ, ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ.

2) ಹೆಣ್ಣು ಮಕ್ಕಳನ್ನು ಸ್ವಾವಲಂಬಿಗಳಾಗಿ ಮಾಡಲು ಪುಷ್ಪ ಬೇಸಾಯ ಹೇಗೆ ಪೂರಕವಾಗಿದೆ ಎಂಬುದನ್ನು ಚರ್ಚಿಸಿ.

ಅಧ್ಯಾಯ–8

ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

(Mineral and Power Resources)

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭಾರತದಲ್ಲಿ ದೊರೆಯುವ ಖನಿಜಗಳ ಪರಿಚಯ ಮತ್ತು ಅವುಗಳ ಪ್ರಾಮುಖ್ಯತೆ.*
- *ಭಾರತದ ಪ್ರಮುಖ ಖನಿಜಗಳ ಹಂಚಿಕೆ ಹಾಗೂ ಉತ್ಪಾದನೆ.*
- *ಅಸಂಪ್ರದಾಯಕ ಶಕ್ತಿ ಮೂಲಗಳು, ಸೌರಶಕ್ತಿ, ಪವನಶಕ್ತಿ ಅವಶ್ಯಕತೆ.*
- *ಶಕ್ತಿ ಸಂಪನ್ಮೂಲಗಳ ಕೊರತೆ ಮತ್ತು ಸಂರಕ್ಷಣೆ ಹಾಗೂ ಪರಿಹಾರಗಳು.*
- *ಶಕ್ತಿ ಸಂಪನ್ಮೂಲಗಳ ಕೊರತೆಗೆ ಕಾರಣಗಳು.*

ಖನಿಜಗಳು ನೈಸರ್ಗಿಕ ಸಂಪನ್ಮೂಲಗಳಲ್ಲಿ ಅತಿ ಮುಖ್ಯವಾದವು. "ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ದೊರೆಯುವ ನಿರ್ದಿಷ್ಟ ರಾಸಾಯನಿಕ ಸಂಯೋಜನೆಯನ್ನು ಒಳಗೊಂಡಿರುವ ಮಿಶ್ರಣವನ್ನೇ ಖನಿಜ"ಗಳೆಂದು ಕರೆಯುವರು. ಇವು ಶಿಲೆ ಹಾಗೂ ಇನ್ನಿತರ ಭೂ ಮೇಲ್ಮೈ ವಲಯದ ಮಿಶ್ರಣಗಳೊಡನೆ ದೊರೆಯುತ್ತವೆ. ಅವುಗಳಲ್ಲಿ ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ಬಾಕ್ಸೈಟ್ ಅದಿರು, ಅಭ್ರಕ, ಚಿನ್ನದ ಅದಿರು ಮುಖ್ಯವಾದವು. ಇವುಗಳಲ್ಲದೆ ಶಕ್ತಿ ಸಂಪನ್ಮೂಲಗಳಾದ ಕಲ್ಲಿದ್ದಲು, ಪೆಟ್ರೋಲಿಯಂ ಅಣು ಖನಿಜಗಳನ್ನು ದೇಶದಲ್ಲಿ ಉತ್ಪಾದಿಸಲಾಗುವುದು. ಜೊತೆಗೆ ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳಾದ ಸೌರಶಕ್ತಿ, ಗಾಳಿಶಕ್ತಿ ಮೊದಲಾದವು ವಿದ್ಯುತ್ತಿನ ಅಪಾರ ಕೊರತೆಯಿರುವ ನಮ್ಮ ದೇಶದಲ್ಲಿ ಅತಿ ಮುಖ್ಯವಾಗಿವೆ.

1) **ಕಬ್ಬಿಣ ಅದಿರು (Iron ore)** : ಭಾರತವು ಉತ್ಪಾದಿಸುವ ಕಬ್ಬಿಣ ಸಂಬಂಧಿ ಅದಿರುಗಳಲ್ಲಿ ಹಾಗೂ ಲೋಹ ಖನಿಜಗಳಲ್ಲಿ ಕಬ್ಬಿಣದ ಅದಿರು ಅತಿ ಮುಖ್ಯವಾದುದು. ದೇಶವು ಉತ್ಪಾದಿಸುವ ಒಟ್ಟು ಖನಿಜಗಳ ಮೌಲ್ಯದ ಶೇ 20 ರಷ್ಟನ್ನು ಕಬ್ಬಿಣ ಅದಿರು ಒಳಗೊಂಡಿದೆ. ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿರುವ ರಾಷ್ಟ್ರಗಳಲ್ಲಿ ಭಾರತವು ಪ್ರಪಂಚದಲ್ಲಿ ಆರನೆಯ ಸ್ಥಾನವನ್ನು ಪಡೆದಿದೆ.


ನಿಮಗೆ ತಿಳಿದಿರಲಿ :

ಕಬ್ಬಿಣದ ಅದಿರಿನ ವಿಧಗಳು : ಕಬ್ಬಿಣದ ಅದಿರನ್ನು ಒಳಗೊಂಡಿರುವ ಖನಿಜಾಂಶದ ಪ್ರಮಾಣ ಮತ್ತು ಕಶ್ಮಲಗಳ ಪ್ರಮಾಣವನ್ನು ಆಧರಿಸಿ ನಾಲ್ಕು ಮುಖ್ಯ ವಿಧಗಳಾಗಿ ವಿಂಗಡಿಸಲಾಗಿದೆ. ಇವುಗಳೆಂದರೆ,

1) ಮ್ಯಾಗ್ನಟೈಟ್,2) ಹೆಮಟೈಟ್, 3) ಲಿಮೊನೈಟ್, 4) ಸಿಡರೈಟ್

ಭಾರತದಲ್ಲಿ ಜಾರ್ಖಂಡ, ಒಡಿಶಾ ಮತ್ತು ಕರ್ನಾಟಕ ರಾಜ್ಯಗಳು ಅತಿ ಹೆಚ್ಚು ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿರುವ ರಾಜ್ಯಗಳಾಗಿವೆ.ಜಾರ್ಖಂಡನ ಸಿಂಗಭೂಮ್, ಒರಿಸ್ಸಾದ ಕೆಯೊಂಜ್ಹಾರ್, ಮಯೂರ್ ಭಂಜ್ ಮತ್ತು ಸುಂದರ ಘರ್ ಜಿಲ್ಲೆಗಳಲ್ಲಿ ಅಪಾರ ಪ್ರಮಾಣದ ಕಬ್ಬಿಣ ಅದಿರಿನ ನಿಕ್ಷೇಪವಿದೆ. ಇದಲ್ಲದೆ ಛತ್ತೀಸಘಡದ ಬಸ್ತಾರ್, ದುರ್ಗ ಮತ್ತು ರಾಯಪುರಗಳು ಹೆಸರಾಗಿವೆ. ಗೋವಾ, ಆಂಧ್ರ ಪ್ರದೇಶ ಮತ್ತು ತಮಿಳನಾಡು ಕಬ್ಬಿಣದ ನಿಕ್ಷೇಪವನ್ನು ಒಳಗೊಂಡಿವೆ. ಕರ್ನಾಟಕದ ಕೆಮ್ಮಣ್ಣುಗುಂಡಿ, ಹೊಸಪೇಟೆ, ಸೊಂಡೂರು, ಕುದುರೆಮುಖಗಳಲ್ಲಿ ಕಬ್ಬಿಣ ಅದಿರಿನ ನಿಕ್ಷೇಪಗಳಿವೆ.

ಕಬ್ಬಿಣ ಅದಿರನ್ನು ಕರ್ನಾಟಕ, ಛತ್ತೀಸಘಡ, ಜಾರ್ಖಂಡ್, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಒಡಿಶಾ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳಲ್ಲಿ ಬಳಸಲಾಗುತ್ತಿದೆ. ಜೊತೆಗೆ ಜಪಾನ್, ಚೈನಾ, ಇಟಲಿ, ಇರಾನ್ ಮೊದಲಾದ ದೇಶಗಳಿಗೆ ರಫ್ತು ಮಾಡಿ ವಿದೇಶಿ ವಿನಿಮಯವನ್ನು ಗಳಿಸಲಾಗುತ್ತಿದೆ.



ಮ್ಯಾಂಗನೀಸ್ ಅದಿರು : ಭಾರತವು ಉತ್ಪಾದಿಸುತ್ತಿರುವ ಕಬ್ಬಿಣ ಮಿಶ್ರ ಲೋಹಗಳಲ್ಲಿ ಮ್ಯಾಂಗನೀಸ್ ಅತಿ ಮುಖ್ಯವಾದುದು. ಇದರ ಮುಖ್ಯ ಉಪಯೋಗಗಳೆಂದರೆ ಮ್ಯಾಂಗನೀಸ್‌ನ್ನು ಉಕ್ಕಿನ ಉತ್ಪಾದನೆಯಲ್ಲಿ ಬಳಸುವರು. ರಾಸಾಯನಿಕ ಮತ್ತು ವಿದ್ಯುತ್ ಉಪಕರಣಗಳ ತಯಾರಿಕೆ ಹಾಗೂ ಬಣ್ಣದ ಗಾಜುಗಳ ತಯಾರಿಕೆಯಲ್ಲಿ ಬಳಸಲಾಗುವುದು.


ಮ್ಯಾಂಗನೀಸ್ ಅದಿರಿನ ವಿಧಗಳು : ಮ್ಯಾಂಗನೀಸ್‌ನ ಮುಖ್ಯ ಅದಿರುಗಳೆಂದರೆ ಪೈರೋಲೋಸೈಟ್, ಸೈಲೊಮೆಲೆನ್, ಮ್ಯಾಗ್ನೆಟೈಟ್, ಬ್ರಾನೈಟ್ ಮತ್ತು ಹೋಲ್ಯಾಂಡೈಟ್.

ಭಾರತದಲ್ಲಿ ದೊರಕುವ ಮ್ಯಾಂಗನೀಸ್ ಅದಿರು ಅತ್ಯುತ್ತಮವಾಗಿದೆ. ಪೈರೋಲೋಸೈಟ್ ಮತ್ತು ಸೈಲೋಮೆಲೇನ ಮ್ಯಾಂಗನೀಸ್‌ದ ಮುಖ್ಯ ಅದಿರುಗಳಾಗಿವೆ. ಒಡಿಶಾ, ಕರ್ನಾಟಕ, ಮಧ್ಯಪ್ರದೇಶ

ಮತ್ತು ಮಹಾರಾಷ್ಟ್ರಗಳು ಮ್ಯಾಂಗನೀಸ್ ಅದಿರನ್ನು ಉತ್ಪಾದಿಸುವ ಪ್ರಮುಖ ರಾಜ್ಯಗಳಾಗಿವೆ. ಇವುಗಳಲ್ಲದೆ ಬಿಹಾರ, ಛತ್ತೀಸಘಡ್, ರಾಜಸ್ತಾನ, ಪಂಜಾಬ ಮತ್ತು ಗೋವಾಗಳಲ್ಲೂ ಮ್ಯಾಂಗನೀಸ್ ಅದಿರು ದೊರೆಯುತ್ತದೆ.

ಬಾಕ್ಸೈಟ್ ಅದಿರು : ಬಾಕ್ಸೈಟ್ ಅಲ್ಯುಮಿನಿಯಂ ಲೋಹದ ಮುಖ್ಯ ಅದಿರಾಗಿದೆ. ಕಬ್ಬಿಣದ ಆಕ್ಸೈಡ್ ಮತ್ತು ಮರಳಿನೊಂದಿಗೆ ಮಿಶ್ರಿತವಾಗಿರುತ್ತದೆ. ಕಂದು ಹಳದಿ ಮತ್ತು ಬೂದು ಬಣ್ಣಗಳಿಂದ ಮಿಶ್ರಿತವಾಗಿರುವ ಬಾಕ್ಸೈಟ್ ಜೇಡಿಮಣ್ಣಿನಂತೆ ಜಿಗುಟು ಗುಣವನ್ನು ಹೊಂದಿರುತ್ತದೆ. ಬಾಕ್ಸೈಟ್ ಅದಿರು ಪ್ರತಿಶತ 60 ರಿಂದ 70 ರಷ್ಟು ಅಲ್ಯುಮಿನಿಯಂ ಆಕ್ಸೈಡ್ ಹೊಂದಿದ್ದು, ಅದನ್ನು ಸಂಸ್ಕರಿಸಿ ಅಲ್ಯುಮಿನಿಯಂನ್ನು ಪಡೆಯಲಾಗುತ್ತದೆ. ಬಾಕ್ಸೈಟ್ ವೈವಿಧ್ಯಮಯ ಉಪಯೋಗಗಳಿಗಾಗಿ ಬಳಸಲ್ಪಡುವುದರಿಂದ 20ನೇ ಶತಮಾನದ **'**ಅದ್ಭುತ ಲೋಹ**'**ವೆಂದು ಕರೆಯಲಾಗುತ್ತದೆ.

ಬಾಕ್ಸೈಟ್ ಅದಿರು ಮುಖ್ಯವಾಗಿ ಅಲ್ಯುಮಿನಿಯಂ ತಯಾರಿಕೆಯಲ್ಲಿ ಉಪಯೋಗವಾಗುತ್ತದೆ. ಭಾರತವು ಹೇರಳವಾದ ಬಾಕ್ಸೈಟ್‌ನ ನಿಕ್ಷೇಪವನ್ನು ಹೊಂದಿದ್ದು, ಅಲ್ಯುಮಿನಿಯಂ ಉತ್ಪಾದನೆಯಲ್ಲಿ ಸ್ವಾವಲಂಬನೆಯಾಗಿದೆ. ನಿಕ್ಷೇಪದಲ್ಲಿ ದೇಶವು ಪ್ರಪಂಚದಲ್ಲಿ 5ನೇ ಸ್ಥಾನದಲ್ಲಿದೆ. ಭಾರತದಲ್ಲಿ ಮುಖ್ಯವಾಗಿ **ಒಡಿಶಾದ** ಕೋರಾಪಟ್, ಕಾಳಹಂದಿ, ಬೋಲಾಂಗೀರ್, ಸುಂದರಘರ್; **ಗುಜರಾತ್‌ನ** ಜಾಮನಗರ,



ಭಾವನಗರ, ಜುನಾಗಡ, ಬರೂಚ್, ಸೂರತ ಜಿಲ್ಲೆಗಳಲ್ಲಿ; **ಜಾರ್ಖಂಡನ** ರಾಂಚಿ, ಪಲಮಾವು, ಶಹಬಾದ್, ಲೋಹರದಗ ಜಿಲ್ಲೆಗಳಲ್ಲಿ; **ಮಹಾರಾಷ್ಟ್ರದ** ರತ್ನಾಗಿರಿ, ಕೊಲ್ಲಾಪೂರ, ಅಂಬೋಲಿಘಾಟ, ಉದಯಗಿರಿ, ರಾಧಾನಗರಿ, ದಂಗರ್ವಾಡಿ ಮತ್ತು ದರ್ಭಾಂಗ, ಛತ್ತೀಸಗಡದ ಬಸ್ತಾರ, ಬಿಲಾಸ್ಪುರ, ರಾಯಗಡ್ ಮತ್ತು ಸುರಗುಜಾಗಳಲ್ಲಿ ಹಂಚಿಕೆಯಾಗಿದೆ. ಇದಲ್ಲದೆ ಮಧ್ಯಪ್ರದೇಶ, ಕರ್ನಾಟಕದ ಬೆಳಗಾವಿ, ತಮಿಳುನಾಡಿನ ಸೇಲಂ, ಮಧುರೈ, ಆಂಧ್ರ ಪ್ರದೇಶದ ವಿಶಾಖಪಟ್ಟಣ ಮೊದಲಾದ ಸ್ಥಳಗಳಲ್ಲಿ ಬಾಕ್ಸೈಟ್ ಅದಿರು ದೊರೆಯುತ್ತದೆ. ಭಾರತವು ಸೌದಿ ಅರೇಬಿಯಾ, ಯು.ಎ.ಇ., ಬ್ರಿಟನ್, ಜರ್ಮನಿ, ಜಪಾನ. ಯು.ಎಸ್.ಎ. ರಾಷ್ಟ್ರಗಳಿಗೆ ಬಾಕ್ಸೈಟ್ ಅದಿರನ್ನು ರಫ್ತು ಮಾಡುತ್ತಿವೆ.

4) ಅಭ್ರಕ (Mica) : ಕಬ್ಬಿಣೇತರ ವರ್ಗದ ಖನಿಜಗಳಲ್ಲಿ ಅಭ್ರಕವು ಅತಿ ಮುಖ್ಯವಾದ ಅದಿರಾಗಿದೆ. ಭಾರತವು ಅಭ್ರಕದ ನಿಕ್ಷೇಪ ಮತ್ತು ಫಲಕಅಭ್ರಕದ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಅಗ್ರಸ್ಥಾನದಲ್ಲಿದೆ. ಅಭ್ರಕವು ಒಳ್ಳೆಯ ಪಾರದರ್ಶಕತೆ, ಸ್ಥಿತಿ ಸ್ಥಾಪಕತ್ವ, ಶಾಖ ನಿರೋಧಕ ಹಾಗೂ ಹೊಳಪುಳ್ಳ ಸಿಲಿಕೇಟ ಖನಿಜವಾಗಿದೆ. ಇದು ಶಾಖ ಮತ್ತು ವಿದ್ಯುತ್ತಿನ ಮಂದವಾಹಕವಾಗಿರು ವುದರಿಂದ ಇದನ್ನು ಶಾಖ ನಿರೋಧಕ ಹಾಗೂ ವಿದ್ಯುತ್ ನಿರೋಧಕ ವಸ್ತುವಾಗಿ ಟೆಲಿಫೋನ, ಟೆಲಿಗ್ರಾಫ್, ನಿಸ್ತಂತು ಸೇವೆ, ಗಾಜು ತಯಾರಿಕೆ, ಬಣ್ಣ ವಾರ್ನಿಷ್, ಕೃತಕ ರಬ್ಬರ್, ಡೈನೊಮೋಗಳು, ರಾಸಾಯನಿಕ ಕೈಗಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಅಭ್ರಕವು **'ಕಾಗೆ ಬಂಗಾರ'** ಎಂದು ಪ್ರಸಿದ್ಧಿಪಡೆದಿದೆ.

ಅಭ್ರಕದ ವಿಧಗಳು : ಅಭ್ರಕದಲ್ಲಿ ಕಂಡು ಬರುವ ರಾಸಾಯನಿಕ ಅಂಶ ಹಾಗೂ ಬಣ್ಣಗಳಿಗನುಗುಣವಾಗಿ ಅದನ್ನು ಅನೇಕ ವಿಧಗಳನ್ನಾಗಿ ವಿಂಗಡಿಸಲಾಗಿದೆ. ಇವುಗಳೆಂದರೆ ಮಸ್ಕೊವೈಟ್ (ಶ್ವೇತ ಅಭ್ರಕ) ಬಯೋಟೈಟ್ (ಕಪ್ಪು ಅಭ್ರಕ), ಫ್ಲೊಗೋವೈಟ್ (ಕಂದು ಅಭ್ರಕ) ಮೊದಲಾದವು. ಭಾರತದಲ್ಲಿ ಅತ್ಯುತ್ತಮ ದರ್ಜೆಯ ಶ್ವೇತ ಅಭ್ರಕವು ವ್ಯಾಪಕವಾಗಿ ಹರಡಿದೆ.

ಭಾರತದಲ್ಲಿ ಅಭ್ರಕವು ಆಂಧ್ರ ಪ್ರದೇಶದ ನೆಲ್ಲೂರ್, ವಾರಂಗಲ್, ಕೃಷ್ಣಾ ಮತ್ತು ಪೂರ್ವ ಗೋದಾವರಿ ಜಿಲ್ಲೆಗಳು, ಜಾರ್ಖಂಡ ರಾಜ್ಯದ ಧನಭಾದ್, ಪಲಮಾವು, ಗಿರಧಿ, ಕೋಡರ್ಮ; ಬಿಹಾರದ ಗಯಾ, ಮೊಂಗೈರ್, ಬಾಗಲ್‌ಪುರ, ನಾವಡ ಜಿಲ್ಲೆಗಳು; ರಾಜಸ್ತಾನದ ಉದಯಪುರ, ಅಜ್ಮೀರ ಬಿಲ್ವಾರ, ಜೈಪುರ; ಕೇರಳದ ತಿರುವನಂತಪುರ; ತಮಿಳುನಾಡಿನ ಸೇಲಂ; ಮಧ್ಯ ಪ್ರದೇಶದ ಜಿಂದ್ವಾರ, ಬಸ್ತಾರ್, ಬಾಲಘಾಟಗಳಲ್ಲಿ ಹಂಚಿಕೆಯಾಗಿದೆ. ಹಿಂದಿನ ವರ್ಷಗಳಲ್ಲಿ ಭಾರತವು ಅಪಾರ ಪ್ರಮಾಣದಲ್ಲಿ ಉತ್ಪಾದಿಸಿ, ರಫ್ತು ಮಾಡುತ್ತಿತ್ತು. ಇಂದು ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿದ್ದು, ಇದರ ರಫ್ತು ಕಡಿಮೆಯಾಗಿದೆ.

5. ಚಿನ್ನದ ಅದಿರು : ಚಿನ್ನವು ಅತ್ಯಮೂಲ್ಯವಾದ ಲೋಹವಾಗಿದ್ದು, ಪ್ರಪಂಚದಾದ್ಯಂತ ಪ್ರಾಚೀನ ಕಾಲದಿಂದಲೂ ಅತ್ಯಂತ ಹೆಚ್ಚಿನ ಮೌಲ್ಯವನ್ನು ಹೊಂದಿದೆ. ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆ ಯಲ್ಲಿ ಹಾಗೂ ಅಂತರರಾಷ್ಟ್ರೀಯ ಮೌಲ್ಯ ನಿರ್ಧರಿಸುವಲ್ಲಿ ಚಿನ್ನವು ನಿರ್ಧಾರಕ ಮಾಧ್ಯಮವಾಗಿ ಬಳಸಲ್ಪಡುವುದು. ಭಾರತದಲ್ಲಿ ಚಿನ್ನದ ನಿಕ್ಷೇಪ ಬಹಳ ಕಡಿಮೆ ಇದೆ. ಕರ್ನಾಟಕದ ಕೋಲಾರ, ರಾಯಚೂರು, ಹಟ್ಟಿ ನಿಕ್ಷೇಪಗಳು, ಆಂಧ್ರ ಪ್ರದೇಶದ ಅನಂತಪುರ, ಬಿಹಾರ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ಕಂಡುಬರುತ್ತವೆ. ಇದಲ್ಲದೆ ಗದಗ ಬಳಿ ಇರುವ ಕಪ್ಪತಗುಡ್ಡದಲ್ಲಿ ಬೆಣಚುಕಲ್ಲಿನ ಶಿಲಾಸ್ತರಗಳಲ್ಲಿ ಎಳೆಗಳ ರೂಪದಲ್ಲಿ ದೊರೆಯುತ್ತದೆ. ಸದ್ಯದಲ್ಲಿ ಹಟ್ಟಿಗಣಿ ದೇಶದಲ್ಲಿ ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸಲಾಗುತ್ತದೆ.

ಶಕ್ತಿ ಸಂಪನ್ಮೂಲಗಳು (Power Resources) :

ಶಕ್ತಿ ಸಂಪನ್ಮೂಲಗಳು ದೇಶದ ಆರ್ಥಿಕ ಅಭಿವೃದ್ಧಿಗೆ ಅತ್ಯವಶ್ಯಕವಾಗಿವೆ. ಸಾಂಪ್ರದಾಯಕ (conventional) ಹಾಗೂ ಮುಗಿದು ಹೋಗುವ ಶಕ್ತಿ ಸಂಪನ್ಮೂಲಗಳಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂ, ಅಣುಶಕ್ತಿಗಳನ್ನು ಉದಾಹರಿಸಬಹುದಾಗಿದೆ. ಮುಗಿಯದೇ ಇರುವ ಶಕ್ತಿ ಸಂಪನ್ಮೂಲಗಳಲ್ಲಿ ಸೌರಶಕ್ತಿ, ಗಾಳಿ, ಜಲವಿದ್ಯುತ್‌ಗಳು ಪ್ರಮುಖವಾಗಿವೆ.

ಕಲ್ಲಿದ್ದಲು (Coal) : ಭಾರತವು ಉತ್ಪಾದಿಸುತ್ತಿರುವ ಹಾಗೂ ಬಳಕೆ ಮಾಡುತ್ತಿರುವ ಶಕ್ತಿ ಸಂಪನ್ಮೂಲಗಳಲ್ಲಿ ಕಲ್ಲಿದ್ದಲು ಅತ್ಯಂತ ಪ್ರಮುಖವಾದುದು. ಭಾರತವು ಪ್ರಪಂಚದಲ್ಲಿ ಕಲ್ಲಿದ್ದಲಿನ ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿದೆ. ಕೋಟ್ಯಾಂತರ ವರ್ಷಗಳ ಹಿಂದೆ ಭೂಮಿಯಲ್ಲಿ ದಟ್ಟವಾದ ಅರಣ್ಯಗಳಿಂದ ಕೂಡಿದ್ದವೆಂದೂ, ಕ್ರಮೇಣ ಇವುಗಳು ಭೂಮಿಯ ಪದರುಗಳಲ್ಲಿ ಹುದುಗಿ ಹೋಗಿ ಶಾಖ ಮತ್ತು ಒತ್ತಡದಿಂದ ಕಲ್ಲಿದ್ದಲಾಗಿ ಮಾರ್ಪಾಡು ಹೊಂದಿದವೆಂದು ನಂಬಲಾಗಿದೆ. ಕಲ್ಲಿದ್ದಲು ಕೇವಲ ಶಕ್ತಿಯ ಖನಿಜವಾಗಿರದೇ ಕೀಟ ನಿರೋಧಕಗಳು, ಸ್ಫೋಟಕ ವಸ್ತುಗಳು, ಕೃತಕ ನಾರು, ಕೃತಕ ರಬ್ಬರ್, ಪ್ಲಾಸ್ಟಿಕ್, ರಾಸಾಯನಿಕ ಗೊಬ್ಬರ, ಮುಂತಾದವುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಕಲ್ಲಿದ್ದಲು ಬಹು ಉಪಯೋಗಿ ಖನಿಜವಾಗಿರುವುದರಿಂದ ಇದನ್ನು "ಕಪ್ಪು ಬಂಗಾರ" (Black Gold) ಎಂದು ಕರೆಯುವರು.

> **ನಿಮಗೆ ತಿಳಿದಿರಲಿ**
>
> *ಕಲ್ಲಿದ್ದಲಿನಲ್ಲಿರುವ ಇಂಗಾಲ ಮತ್ತು ಅದು ಕೊಡುವ ಉಷ್ಣಾಂಶವನ್ನಾಧರಿಸಿ ನಾಲ್ಕು ವಿಧಗಳನ್ನಾಗಿ ವಿಂಗಡಿಸಲಾಗಿದೆ. 1) ಅಂತ್ರಸೈಟ್ 2) ಬಿಟುಮಿನಸ್, 3) ಲಿಗ್ನೈಟ್, 4) ಪೀಟ್*

ಭಾರತದಲ್ಲಿ ಕಲ್ಲಿದ್ದಲಿನ ನಿಕ್ಷೇಪಗಳು ದಾಮೋದರ ನದಿ ಕಣಿವೆಯಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿವೆ. ಜಾರ್ಖಂಡ, ಛತ್ತೀಸಘಡ್ ರಾಜ್ಯಗಳು ಅತಿ ಹೆಚ್ಚು ಕಲ್ಲಿದ್ದಲನ್ನು ಉತ್ಪಾದಿಸುವ ರಾಜ್ಯಗಳಾಗಿವೆ. ಝರಿಯಾ, ಬೊಕಾರೊ, ಗಿರಿಧಿ, ಕರಣಪುರ ಮುಖ್ಯ ಪ್ರದೇಶಗಳಾಗಿವೆ. ಇವಲ್ಲದೆ ಗೋದಾವರಿ, ಮಹಾನದಿ ಮತ್ತು ವಾರ್ಧಾ ನದಿಗಳ ಕಣಿವೆಯಲ್ಲಿ ನಿಕ್ಷೇಪಗಳಿವೆ. ಕಲ್ಲಿದ್ದಲನ್ನು ಉತ್ಪಾದಿಸುವ ಮುಖ್ಯ ರಾಜ್ಯಗಳೆಂದರೆ ಜಾರ್ಖಂಡ್, ಛತ್ತೀಸ್‌ಘಡ, ಒರಿಸ್ಸಾ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ ಮತ್ತು ಮಧ್ಯಪ್ರದೇಶ. ದೇಶದಲ್ಲಿ ಕಲ್ಲಿದ್ದಲಿನ ಬೇಡಿಕೆ ಅಧಿಕವಾಗಿದ್ದು, ಇದರಿಂದ ಉತ್ತಮ ದರ್ಜೆಯ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲಾಗುತ್ತದೆ.

ಪೆಟ್ರೋಲಿಯಂ (Petrolieum) ಪೆಟ್ರೋಲಿಯಂ ಪುರಾತನ ಕಾಲದಲ್ಲಿ ಜೀವಿಗಳ ಅವಶೇಷಗಳಿಂದ ಉತ್ಪತ್ತಿ ಹೊಂದಿರುವದೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿರುವರು. ಭೂಮಿಯಿಂದ ಹೊರ ತೆಗೆಯುವ ಪೆಟ್ರೋಲಿಯಂ ಹಲವಾರು ಬಗೆಯ ಮಿಶ್ರಣಗಳಿಂದ ಕೂಡಿದ್ದು, ಅದನ್ನು 'ಕಚ್ಚಾತೈಲ' (Crude oil) ಎಂದು ಕರೆಯುವರು. ಇದನ್ನು ಶುದ್ಧೀಕರಣ ಕೇಂದ್ರಗಳಲ್ಲಿ ಶುದ್ಧೀಕರಿಸಿ ಗ್ಯಾಸೋಲಿನ್, ಪೆಟ್ರೋಲ್, ಡೀಸಲ್, ಸೀಮೆಎಣ್ಣೆ ಮುಂತಾದವುಗಳನ್ನು ಪಡೆಯಲಾಗುವುದು. ಪೆಟ್ರೋಲಿಯಂ ಪ್ರಮುಖವಾದ ಶಕ್ತಿ ಸಂಪನ್ಮೂಲ ಮಾತ್ರವಾಗಿರದೆ, ಒಂದು ಮುಖ್ಯ ಕಚ್ಚಾ ವಸ್ತುವೂ ಸಹ ಆಗಿದೆ. ಇದನ್ನು ಕಚ್ಚಾ ವಸ್ತುವನ್ನಾಗಿ ಅವಲಂಬಿಸಿದ ಅನೇಕ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ವ್ಯವಸಾಯ, ಕೈಗಾರಿಕೆ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿ ಪೆಟ್ರೋಲಿಯಂ ಅಮೂಲ್ಯ ಶಕ್ತಿ ಸಂಪನ್ಮೂಲ. ಇದು ಶಾಂತಿ ಹಾಗೂ ಯುದ್ಧ ಕಾಲಗಳೆರಡರಲ್ಲೂ ಅಮೂಲ್ಯವಾದುದು. ಆದುದರಿಂದಲೇ ಇದನ್ನು 'ದ್ರವರೂಪದ ಚಿನ್ನ' ಎಂದು ಕರೆಯಲಾಗಿದೆ.

ಭಾರತದಲ್ಲಿ ಅಸ್ಸಾಂನ 'ದಿಗ್ಬಾಯ್' ಎಂಬಲ್ಲಿ ಪೆಟ್ರೋಲಿಯಮ್‌ನ್ನು ಮೊದಲು ಪತ್ತೆ ಮಾಡಲಾಯಿತು. ಸ್ವಾತಂತ್ರ್ಯ ಬರುವವರೆಗೆ ಅದೊಂದೇ ತೈಲ ಉತ್ಪಾದನಾ ಪ್ರದೇಶವಾಗಿತ್ತು. ಇಂದು ಲಕಿಮ್‌ಪುರ ಹುಗ್ರಿಜನ್, ಮೊರಾನ್, ನಹರ್‌ಕಟಿಯಾ ಹಾಗೂ ಇತರ ಬಾವಿಗಳಿಂದ ಎಣ್ಣೆಯನ್ನು ಉತ್ಪಾದಿಸಲಾಗುತ್ತದೆ.

ಗುಜರಾತ್ ರಾಜ್ಯವು ಕಚ್ಚಾ ತೈಲವನ್ನು ಉತ್ಪಾದಿಸುವ ಮತ್ತೊಂದು ಪ್ರದೇಶವಾಗಿದೆ. ಅಂಕಲೇಶ್ವರದಲ್ಲಿ ಮೊದಲನೇ ತೈಲ ಬಾವಿಯನ್ನು ಕೊರೆಯಲಾಯಿತು. 1974ರಲ್ಲಿ ಅರಬ್ಬೀ ಸಮುದ್ರದಲ್ಲಿ ಮುಂಬೈಯಿಂದ 110 ಕಿ.ಮೀ. ದೂರದ 'ಬಾಂಬೆ ಹೈ' ನಲ್ಲಿ ತೈಲವನ್ನು ಪತ್ತೆಮಾಡಿ 1976ರಲ್ಲಿ ತೈಲೋತ್ಪಾದನೆಯನ್ನು ಪ್ರಾರಂಭಿಸಲಾಯಿತು. ಇದು ಭಾರತದ ಅತಿ ದೊಡ್ಡ ತೈಲ ನಿಕ್ಷೇಪವಾಗಿದೆ. ಇತ್ತೀಚೆಗೆ ಕಾವೇರಿ, ಕೃಷ್ಣಾ, ಗೋದಾವರಿ ಮತ್ತು ಮಹಾನದಿಗಳ ಮುಖಜ ಭೂಮಿಯಲ್ಲಿ ತೈಲ ನಿಕ್ಷೇಪವನ್ನು ಪತ್ತೆ ಮಾಡಲಾಗಿದೆ. ಈಗ ಒಟ್ಟು 19 ತೈಲ ಶುದ್ಧೀಕರಣ ಕೇಂದ್ರಗಳಿದ್ದು, ಇವುಗಳ ಮುಖಾಂತರ ಕಚ್ಚಾತೈಲವನ್ನು ಪಡೆಯಲಾಗುತ್ತದೆ. ಭಾರತದಲ್ಲಿ ಉತ್ಪಾದನೆ ಕಡಿಮೆ ಇದ್ದು, ಇರಾನ್, ಇರಾಕ್, ಸೌದಿ ಅರೇಬಿಯಾ ಮತ್ತು ರಷ್ಯಾದಿಂದ ಕಚ್ಚಾ ತೈಲವನ್ನು ಆಮದುಮಾಡಿಕೊಳ್ಳುತ್ತಿದೆ.

ಅಣು ಖನಿಜಗಳು (Atomic Minerals) :

ಭಾರತವು ಹೇರಳವಾದ ಅಣು ಖನಿಜಗಳನ್ನು ಹೊಂದಿರುವ ದೇಶ. ಅಣು ಖನಿಜಗಳಿಂದ ಅಣುಶಕ್ತಿಯನ್ನು ಉತ್ಪಾದಿಸಲಾಗುತ್ತದೆ. ಒಂದು ದೇಶದ ಸ್ಥಾನಮಾನ ಮತ್ತು ಶಕ್ತಿಯನ್ನು ಪ್ರದರ್ಶಿಸುವಲ್ಲಿ ಅಣುಶಕ್ತಿಯ ಪಾತ್ರ ಅತಿ ಮಹತ್ವದ್ದಾಗಿದೆ. ಅಣುಶಕ್ತಿಯನ್ನು ಕೇವಲ ದೇಶದ ರಕ್ಷಣಾ ವ್ಯವಸ್ಥೆಗೆ ಮಾತ್ರ ಬಳಸಲಾಗುತ್ತಿತ್ತು. ಇಂದು ಇದರ ವಿದ್ಯುತ್ ಉತ್ಪಾದನೆಯೂ ಪ್ರಮುಖವಾಗಿದೆ. ಭಾರತದಲ್ಲಿ ಕಂಡು ಬರುವ ಅಣು ಖನಿಜಗಳಲ್ಲಿ ಯುರೇನಿಯಂ, ಥೋರಿಯಂ. ಬೆರಿಲಿಯಂ, ಲಿಥಿಯಂ ಮುಂತಾದವುಗಳು ಪ್ರಮುಖವಾಗಿವೆ.

ಎ) **ಯುರೇನಿಯಂ** : ಜಾರ್ಖಂಡ್‌ನ ಸಿಂಗಭೂಮ್, ಗಯಾ ಮತ್ತು ಹಜಾರಿಬಾಗ್ ಜಿಲ್ಲೆಗಳು, ಉತ್ತರ ಪ್ರದೇಶದ ಶಹರಣ್‌ಪುರದ ಮೆಕ್ಕಲು ಮಣ್ಣು, ಕೇರಳದ ತೀರದಲ್ಲಿ ಹಂಚಿಕೆಯಾಗಿದೆ.

ಬಿ) **ಥೋರಿಯಂ** : ಇದು ಕೇರಳ, ಬಿಹಾರ, ತಮಿಳುನಾಡು ಮತ್ತು ರಾಜಸ್ತಾನಗಳಲ್ಲಿ ಹಂಚಿಕೆಯಾಗಿದೆ.

ಸಿ) **ಬೆರಿಲಿಯಂ** : ಬೆರಿಲಿಯಂ ಆಕ್ಸೈಡನ್ನು ಅಣುವಿದ್ಯುತ್ ಉತ್ಪಾದನೆಯ ರಿಯಾಕ್ಟರುಗಳಲ್ಲಿ 'ಮಾಡರೇಟರ್' ಕಾರ್ಯಕ್ಕಾಗಿ ಬಳಸಲಾಗುವುದು. ಭಾರತವು ಅಗತ್ಯವಾದಷ್ಟು ಬೆರಿಲಿಯಂ ನಿಕ್ಷೇಪವನ್ನು ಹೊಂದಿದೆ.


ಡಿ) **ಲಿಥಿಯಂ** : ಇದು ಹಗುರವಾದ ಲೋಹವಾಗಿದ್ದು ಲೆಪಿಡೋಲೆಟ್ ಹಾಗೂ ಫ್ಯೂಡೋಮಿನ್ ಅದಿರುಗಳಿಂದ ಪಡೆಯಲಾಗುವುದು. ಭಾರತದಲ್ಲಿ ಜಾರ್ಖಂಡ್ ಹಾಗೂ ಮಧ್ಯ ಪ್ರದೇಶಗಳಲ್ಲಿ ಇದು ವ್ಯಾಪಕವಾಗಿ ಹಂಚಿಕೆಯಾಗಿದೆ.

ಅಸಂಪ್ರದಾಯಕ ಶಕ್ತಿ ಮೂಲಗಳು (Non-conventional Energy Sources) : ಪ್ರಪಂಚದಾದ್ಯಂತ ಸಾಂಪ್ರದಾಯಕ ಶಕ್ತಿ ಮೂಲಗಳ ಬಳಕೆಯಿಂದ ಹಸಿರು ಮನೆಯ ಪರಿಣಾಮ ಉಂಟಾಗುತ್ತಿದ್ದು, ಭೂಮಿಯ ವಾಯುಮಂಡಲದ ಉಷ್ಣಾಂಶ ಹೆಚ್ಚಾಗುವ ಸಂಭವನೀಯತೆಯನ್ನು ಗಮನಿಸಲಾಗಿದೆ. ಇದನ್ನೇ 'ಗ್ಲೋಬಲ್ ವಾರ್ಮಿಂಗ್' (ಜಾಗತಿಕ ತಾಪಮಾನ ಏರಿಕೆ) ಎಂದು ಕರೆಯಲಾಗಿದೆ. ಅಲ್ಲದೆ ಜನಸಂಖ್ಯಾ ಹೆಚ್ಚಳ, ನಗರೀಕರಣ, ಕೈಗಾರಿಕಾಭಿವೃದ್ಧಿ ಮೊದಲಾದವು ಈ ಸಾಂಪ್ರದಾಯಕ ಇಂಧನಗಳ ಬಳಕೆಯು ನಿರಂತರವಾಗಿ ಹೆಚ್ಚಲು ಕಾರಣವಾಗಿದೆ. ಇದರಿಂದ ಪರಿಸರ ಮಾಲಿನ್ಯತೆ ಸಹ ಹೆಚ್ಚಾಗುತ್ತಿದೆ. ಆದ್ದರಿಂದ ಇವುಗಳ ಬಳಕೆಯನ್ನು ಮಿತಿ ಗೊಳಿಸಿ ಅಸಂಪ್ರದಾಯಿಕ ಶಕ್ತಿ ಮೂಲಗಳನ್ನು ಉಪಯೋಗಿಸುವುದು ಅಗತ್ಯವಾಗಿದೆ.

ಪುನರ್ ಬಳಕೆ ಮಾಡಬಹುದಾದ ಶಕ್ತಿ ಮೂಲಗಳಾದ ಸೌರಶಕ್ತಿ, ಪವನ ಶಕ್ತಿ, ಸಾಗರನೀರಿನ ಉಬ್ಬರ ಇಳಿತ ಶಕ್ತಿ, ಭೂ ಅಂತರಾಳದ ಶಕ್ತಿ, ಜೈವಿಕ ಅನಿಲ ಶಕ್ತಿ ಮೊದಲಾದವುಗಳನ್ನು ಅಸಂಪ್ರದಾಯಕ ಶಕ್ತಿ ಮೂಲಗಳೆಂದು ಕರೆಯುವರು.

1) ಸೌರಶಕ್ತಿ (Solar Energy) : ಸೂರ್ಯನ ಕಿರಣಗಳಿಂದ ಹೊರ ಸೂಸಲ್ಪಡುವ ಶಾಖದ ಬಳಕೆಯನ್ನೇ 'ಸೌರಶಕ್ತಿ' ಎಂದು ಕರೆಯುವರು. ಇದು ಮುಗಿಯದ ಶಕ್ತಿ ಸಂಪನ್ಮೂಲವಾಗಿದ್ದು, ಸೌರ ಶಕ್ತಿಯನ್ನು ನೇರವಾಗಿ ಶಾಖ ಶಕ್ತಿಯನ್ನಾಗಿ ಪರಿವರ್ತಿಸಬಹುದು. ಸೌರಶಕ್ತಿಯನ್ನು ಈಗಾಗಲೇ ವಿವಿಧ ವಿಧಾನಗಳಲ್ಲಿ ಬಳಸಲಾಗುತ್ತಿದ್ದು, ಇವುಗಳಲ್ಲಿ ಸೋಲಾರ್ ವಾಟರ್ ಹೀಟರ್, ಕುಕ್ಕರ್, ಸೋಲಾರ್ ಥರ್ಮಲ್, ವಿದ್ಯುತ್ ದೀಪ, ರೆಲ್ವೆ ಸಿಗ್ನಲ್, ನೀರೆತ್ತಲು ಹಾಗೂ ಸಂಪರ್ಕ ಮಾಧ್ಯಮಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಮೊದಲ ಸೌರ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ರಾಜಸ್ಥಾನದ 'ಬಾರ್‌ಮರ್'ನಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ. ಇತ್ತೀಚೆಗೆ ಕರ್ನಾಟಕದ ಚಿಕ್ಕ ಬಳ್ಳಾಪುರ ಜಿಲ್ಲೆಯಲ್ಲಿಯೂ ಸೌರ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

2) ಪವನ ಶಕ್ತಿ (Wind Energy) : ಭಾರತದಲ್ಲಿ ಪವನ ಶಕ್ತಿಯು ವಾಣಿಜ್ಯ ಪ್ರಮಾಣದಲ್ಲಿ ಉತ್ಪಾದಿಸಲ್ಪಡುತ್ತಿದ್ದು, ಮುಂದಿನ ದಶಕಗಳಲ್ಲಿ ದೇಶದ ಹಲವಾರು ಭಾಗಗಳು ಪವನ ಶಕ್ತಿಯನ್ನು ಪ್ರಧಾನವಾಗಿ ಬಳಸಬಹುದಾದ ಸಾಧ್ಯತೆಗಳು ಕಂಡು ಬರುತ್ತಿವೆ. ಭಾರತವು ಪ್ರಪಂಚದಲ್ಲಿ ಗಾಳಿಯಿಂದ ವಿದ್ಯುತ್ತನ್ನು ಉತ್ಪಾದಿಸುವ. ಐದನೆಯ ದೊಡ್ಡ ದೇಶವಾಗಿದೆ. ತಮಿಳುನಾಡು, ಮಹಾರಾಷ್ಟ್ರ, ಕರ್ನಾಟಕ, ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ಪವನ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗುತ್ತಿದೆ.



ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ (Need for non-conventional Energy): ಭಾರತದಲ್ಲಿ ಬಳಸುವ ಶಕ್ತಿ ಸಂಪನ್ಮೂಲಗಳಲ್ಲಿ ಮುಗಿದುಹೋಗುವ (ಸಂಪ್ರದಾಯಕ) ಸಂಪನ್ಮೂಲಗಳೇ ಪ್ರಧಾನವಾಗಿವೆ. ಇವುಗಳ ಉತ್ಪಾದನೆಯು ಕಡಿಮೆ ಇದ್ದು, ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗಿದೆ.

ಇದರಿಂದ ರಾಷ್ಟ್ರೀಯ ಆದಾಯದ ಮೇಲೆ ಪರಿಣಾಮ ಉಂಟಾಗುತ್ತದೆ. ಆದ್ದರಿಂದಾಗಿ ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಉಪಯೋಗ ಅನಿವಾರ್ಯವಾಗಿದೆ. ಮುಗಿಯದೇ ಇರುವ ಸಂಪನ್ಮೂಲಗಳ ಶೋಧನೆ ಮತ್ತು ಬಳಕೆಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಸಾಕಷ್ಟು ಪ್ರಾಮುಖ್ಯತೆ ನೀಡಲಾಗುತ್ತಿದೆ.

ಪರಿಹಾರಗಳು (Remedies) : ಭಾರತದಲ್ಲಿ ಉಂಟಾಗುತ್ತಿರುವ ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನೀಗಿಸಲು ಹಲವಾರು ಪರಿಹಾರಗಳನ್ನು ಕೈಗೊಳ್ಳುವುದು ಅವಶ್ಯಕವಾಗಿದೆ ಮತ್ತು ಅನಿವಾರ್ಯವಾಗಿದೆ. 1) ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸುವುದು, 2) ಜಲವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯತೆ ನೀಡುವುದು. 3) ಬದಲಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು. 4) ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆಗೆ ಪ್ರೋತ್ಸಾಹ ನೀಡುವುದು, 5) ಶಕ್ತಿ ಸಂಪನ್ಮೂಲಗಳನ್ನು ಮಿತವಾಗಿ ಬಳಸಲು ತಿಳುವಳಿಕೆ ನೀಡುವುದು, 6) ನಿರುಪಯುಕ್ತ ವಸ್ತುಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವುದು ಮೊದಲಾದವು.

ಅಭ್ಯಾಸಗಳು

I ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.

1) ಭಾರತದಲ್ಲಿ __________ ಮತ್ತು __________ ರಾಜ್ಯಗಳು ಅತಿ ಹೆಚ್ಚು ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿವೆ.
2) ಬಾಕ್ಸೈಟ್ ಅದಿರಿನಿಂದ __________ ಲೋಹವನ್ನು ಉತ್ಪಾದಿಸುತ್ತಾರೆ.
3) ಅಭ್ರಕವನ್ನು __________ ಬಂಗಾರ ಎಂದು ಕರೆಯುತ್ತಾರೆ.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.

1) ಭಾರತದಲ್ಲಿ ದೊರಕುವ ಖನಿಜ ಸಂಪನ್ಮೂಲಗಳಾವವು?
2) ಭಾರತದಲ್ಲಿ ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ರಾಜ್ಯಗಳು ಯಾವುವು?
3) ಭಾರತದಲ್ಲಿ ಉತ್ಪಾದಿಸುವ ಕಬ್ಬಿಣದ ಅದಿರಿನ ವಿಧಗಳನ್ನು ತಿಳಿಸಿ.
4) ಭಾರತದ ಪ್ರಮುಖ ಶಕ್ತಿ ಸಂಪನ್ಮೂಲಗಳಾವುವು? ವಿವರಿಸಿ.
5) ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳೆಂದರೇನು? ಅವುಗಳ ಪ್ರಾಮುಖ್ಯತೆಯನ್ನು ವಿವರಿಸಿ.
6) ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸಲು ನಿಮ್ಮದೇ ಆದ ಸಲಹೆಗಳನ್ನು ನೀಡಿ.

III ಚಟುವಟಿಕೆಗಳು :

1) ಖನಿಜಗಳ ಹಂಚಿಕೆಯನ್ನು ಭಾರತದ ನಕ್ಷೆಯಲ್ಲಿ ಗುರುತಿಸಿ ಮತ್ತು ಹೆಸರಿಸಿ.

IV. ಯೋಜಿತ ಕಾರ್ಯ :

1) ಭಾರತದಲ್ಲಿ ದೊರೆಯುವ ಖನಿಜಗಳ ಮಾದರಿಯನ್ನು ಸಂಗ್ರಹಿಸಿರಿ ಮತ್ತು ಟಿಪ್ಪಣಿ ಬರೆಯಿರಿ.

ಅಧ್ಯಾಯ–9

ಭಾರತದ ಭೂ ಸಾರಿಗೆ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭಾರತದಲ್ಲಿ ಸಾರಿಗೆಯ ಮಹತ್ವ.*
- *ರಸ್ತೆ ಸಾರಿಗೆ ವಿಧಗಳು–ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳು.*
- *ರಸ್ತೆ ಸಾರಿಗೆಯ ಸಮಸ್ಯೆಗಳು.*

ವಸ್ತುಗಳು, ಸೇವೆಗಳು, ಮಾಹಿತಿ ಮತ್ತು ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದನ್ನೇ 'ಸಾರಿಗೆ' ಎಂದು ಕರೆಯುವರು. ಸರಕು ಮತ್ತು ಸೇವೆಗಳನ್ನು ಉತ್ಪಾದಿತ ಪ್ರದೇಶಗಳಿಂದ ಬೇಡಿಕೆಯಿರುವ ಪ್ರದೇಶಗಳಿಗೆ ಪೂರೈಸುವುದು. ಸಾರಿಗೆಯ ಮೂಲಕ ವಸ್ತುಗಳು ಮತ್ತು ಸೇವೆಗಳು ಉತ್ಪಾದಿಸುವ ಪ್ರದೇಶಗಳಿಂದ ಕೊರತೆಯಿರುವ ಪ್ರದೇಶಗಳಿಗೆ ಸಾಗಿಸಲ್ಪಟ್ಟು ಬಳಕೆಗೆ ಸಹಾಯಕವಾಗುವುದು.

ಸಾರಿಗೆಯು ಆರ್ಥಿಕ ಅಭಿವೃದ್ಧಿಯಲ್ಲಿ ನಿರ್ವಹಿಸುವ ಪಾತ್ರ ಮಹತ್ತರವಾದುದು. ಆರ್ಥಿಕತೆಯ ಮುಖ್ಯ ಕ್ಷೇತ್ರಗಳಾದ ವ್ಯವಸಾಯ, ಕೈಗಾರಿಕೆ, ಗಣಿಗಾರಿಕೆ, ಅರಣ್ಯಗಾರಿಕೆ, ಮೀನುಗಾರಿಕೆ, ಹೈನುಗಾರಿಕೆ ಮೊದಲಾದವುಗಳನ್ನು ಸಾರಿಗೆಯು ಮಾರುಕಟ್ಟೆಗಳೊಡನೆ ಸಂಪರ್ಕಿಸುವುದು. ಇದರಿಂದ ತ್ವರಿತಗತಿಯ ಆರ್ಥಿಕ ಬೆಳವಣಿಗೆಗೆ ಸಾರಿಗೆಯ ಅಭಿವೃದ್ಧಿಯು ಅಗತ್ಯವಾಗಿದೆ.

ನಿಮಗಿದು ತಿಳಿದಿರಲಿ :

ವ್ಯವಸಾಯ ಮತ್ತು ಕೈಗಾರಿಕೆ ಒಂದು ರಾಷ್ಟ್ರದ ದೇಹ ಮತ್ತು ಎಲುಬುಗಳಾಗಿದ್ದರೆ, ಸಾರಿಗೆ ಅದರ ನರಮಂಡಲವೆಂದು ಪರಿಗಣಿಸಲ್ಪಟ್ಟಿದೆ. ದೇಹದ ರಕ್ತನಾಳಗಳಂತೆ ಇವು ಕಾರ್ಯನಿರ್ವಹಿಸುತ್ತಿವೆ.

ಸಾರಿಗೆಯ ವಿಧಗಳು : ಸಾರಿಗೆಯಲ್ಲಿ ಮುಖ್ಯವಾಗಿ ನಾಲ್ಕು ಪ್ರಕಾರಗಳಿವೆ : 1) ರಸ್ತೆ ಸಾರಿಗೆ, 2) ರೈಲು ಸಾರಿಗೆ, 3) ವಾಯು ಸಾರಿಗೆ, 4) ಜಲ ಸಾರಿಗೆ.

1) ರಸ್ತೆ ಸಾರಿಗೆ (Road Transport) : ಭಾರತದಲ್ಲಿ ಪುರಾತನ ಕಾಲದಿಂದಲೂ ರಸ್ತೆಗಳು ನಿರ್ಮಾಣಗೊಂಡಿವೆ. ಪ್ರಾಚೀನ ಭಾರತದಲ್ಲಿ ಅನೇಕ ರಾಜರುಗಳು ರಸ್ತೆಗಳ ನಿರ್ಮಾಣಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದರು. ಬ್ರಿಟೀಷರ ಕಾಲದಲ್ಲಿ ರಸ್ತೆಗಳನ್ನು ಬಹುಮಟ್ಟಿಗೆ ರಕ್ಷಣಾ ವ್ಯವಸ್ಥೆಗಳಿಗಾಗಿ ನಿರ್ಮಿಸಲಾಗಿತ್ತು.

ಭಾರತದಲ್ಲಿ ರಸ್ತೆಗಳ ಪ್ರಾಮುಖ್ಯತೆ : ಭಾರತ ಹಳ್ಳಿಗಳ ದೇಶ ಹಾಗೂ ಕೃಷಿ ಪ್ರಧಾನವಾದ ದೇಶ. ಹಳ್ಳಿಯ ಮತ್ತು ಕೃಷಿಯ ಅಭಿವೃದ್ಧಿಗೆ ರಸ್ತೆಗಳ ಅವಶ್ಯಕತೆ ಮುಖ್ಯವಾಗಿದೆ. ರೈತರು ತಾವು ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಗೆ ಒಯ್ಯಲು ರಸ್ತೆಗಳ ಸಹಾಯದಿಂದ ಮಾತ್ರ ಸಾಧ್ಯ. ಹಳ್ಳಿಗಳಿಗೆ ಬೇಕಾದ ಅವಶ್ಯಕ ವಸ್ತುಗಳನ್ನು ಪೂರೈಸಿಕೊಳ್ಳಲು ರಸ್ತೆಗಳು ಸಹಾಯ ಮಾಡುತ್ತವೆ. ರಸ್ತೆ ಸಾರಿಗೆಗಳು ರೈಲು ಸಾರಿಗೆಗೆ ಪೂರಕವಾಗಿವೆ. ಸರಕು ಸಾಗಾಣಿಕೆ ರಸ್ತೆ ಮಾರ್ಗಗಳಿಂದ ಸಾಧ್ಯವಾಗಿದೆ. ರಸ್ತೆ ಸಾರಿಗೆಯನ್ನು ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು, ಜಿಲ್ಲಾ ರಸ್ತೆಗಳು ಮತ್ತು ಗ್ರಾಮೀಣ ರಸ್ತೆಗಳು ಎಂದು ವರ್ಗೀಕರಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿಗಳು (National Highways) :

> ***ಚಟುವಟಿಕೆ :*** *ನೀವು ಸಚಿವರೆಂದು ಊಹಿಸಿಕೊಂಡು ರಸ್ತೆಗಳು ಹಾಳಾಗದಂತೆ ಉತ್ತಮ ಪಡಿಸಲು ಕ್ರಮಗಳನ್ನು ಪಟ್ಟಿಮಾಡಿ.*

ಇವು ದೇಶದ ಅತಿ ಮುಖ್ಯ ರಸ್ತೆಗಳು. ದೇಶದ ಉದ್ದಗಲಕ್ಕೂ ನಿರ್ಮಿತವಾಗಿವೆ. ರಾಜ್ಯದ ರಾಜಧಾನಿಗಳು, ಪ್ರಧಾನ ಬಂದರುಗಳು ಮತ್ತು ಕೈಗಾರಿಕಾ ನಗರಗಳನ್ನು ಸಂಪರ್ಕಿಸುತ್ತಿವೆ. ಇವುಗಳ ನಿರ್ಮಾಣ ಮತ್ತು ನಿರ್ವಹಣೆ ಕೇಂದ್ರ ಸರಕಾರದ ಜವಾಬ್ದಾರಿಯಾಗಿದೆ. ಭಾರತವು ಸುಮಾರು 70,934 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ಮಾರ್ಗಗಳನ್ನು ಒಳಗೊಂಡಿದೆ. ಭಾರತ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಗೆ 1989 ರಲ್ಲಿ ರಾಷ್ಟೀಯ ಹೆದ್ದಾರಿ ಪ್ರಾಧಿಕಾರ (National Highway Authority of India) (NHAI) ವನ್ನು ಸ್ಥಾಪಿಸಿದೆ, ಮೊದಲ ವರ್ಗದ ರಾಷ್ಟ್ರೀಯ ಹೆದ್ದಾರಿಗಳು ಭಾರತವನ್ನು ನೆರೆಯ ರಾಷ್ಟ್ರಗಳ ರಾಜಧಾನಿಯೊಡನೆ ಸಂಪರ್ಕಿಸುತ್ತವೆ. ಉದಾ : ಲಾಹೋರ–ಅಮೃತಸರ–ದೆಹಲಿ–ಆಗ್ರಾ–ಕೋಲ್ಕೊತ್ತಾ–ಇಂಫಾಲ, ಹಾಗೂ ಮಾಂಡಲೆ–ಬಾರಿ–ಕಟ್ಮಂಡು ಹೆದ್ದಾರಿಗಳು. ಎರಡನೆಯ ಪ್ರಕಾರದ ರಾಷ್ಟ್ರೀಯ ಹೆದ್ದಾರಿಗಳು ರಾಜ್ಯದ ರಾಜಧಾನಿಗಳು ಹಾಗೂ ಪ್ರಧಾನ ಬಂದರುಗಳನ್ನು ಸಂಪರ್ಕಿಸುತ್ತವೆ. ಇವುಗಳಲ್ಲಿ ವಾರಾಣಾಸಿ–ಕನ್ಯಾಕುಮಾರಿಗಳನ್ನು 7ನೇ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ಸಂಪರ್ಕಿಸುವುದು. ಇದು 2343 ಕಿ.ಮೀ ಉದ್ದವಾಗಿದ್ದು, ದೇಶದ ಅತಿ ಉದ್ದವಾದ ರಾಷ್ಟ್ರೀಯ ಹೆದ್ದಾರಿಯಾಗಿದೆ. ಕುಲುಮನಾಲಿ (ಹಿಮಾಚಲಪ್ರದೇಶ) ಮತ್ತು ಲ್ಹೇ (ಕಾಶ್ಮೀರ)ಗಳನ್ನು ಸಂಪರ್ಕಿಸುವ ಹೆದ್ದಾರಿ 4267 ಮೀ. ಎತ್ತರದಲ್ಲಿದೆ. ಇದು ಜಗತ್ತಿನ ಎತ್ತರದ ರಸ್ತೆಮಾರ್ಗವಾಗಿದೆ.

ಸುವರ್ಣ ಚತುಷ್ಕೋನ ಮತ್ತು ಕಾರಿಡಾರ್ ಹೆದ್ದಾರಿಗಳು : (Golden Quadrilateral and Corrider project) : ಈ ಯೋಜನೆಯು ಚತುಷ್ಪಥ\ಷಟ್ಪಥ ರಸ್ತೆಗಳನ್ನು ಹೊಂದಿದ 15000 ಕಿ.ಮೀ. ಗಳಷ್ಟು ಉದ್ದವಾಗಿರುವ ರಾಷ್ಟ್ರೀಯ ಹೆದ್ದಾರಿಯಾಗಿದೆ. ಈ ಯೋಜನೆಯನ್ನು 1999 ರಲ್ಲಿ ಆರಂಭಿಸಿದ್ದು, ಈ ಯೋಜನೆಯ ಒಟ್ಟು ವೆಚ್ಚ 54000 ಕೋಟಿ ರೂ. ಗಳಾಗಿರುವುದು. ಇದು ಪ್ರಪಂಚದ ಯಾವುದೇ ಒಂದು ದೇಶವು ಒಂದು ಅವಧಿಯಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಯೋಜನೆಗಳಿಗಿಂತ ಅತಿ ದೊಡ್ಡದಾಗಿದೆ. ಈ ಯೋಜನೆಯು ದೇಶದ ಆರ್ಥಿಕ ಅಭಿವೃದ್ಧಿಗೆ ಅತಿ ಅಗತ್ಯವಾಗಿದೆ.


> ***ನಿಮಗೆ ತಿಳಿದಿರಲಿ***
> *ವಿಶ್ವಬ್ಯಾಂಕಿನ ಅಧ್ಯಯನದ ಅಂದಾಜಿನಂತೆ ಸುವರ್ಣ ಚತುಷ್ಕೋನ ಯೋಜನೆಯಿಂದ ಪ್ರತಿ ವರ್ಷ 800 ಕೋಟಿ ರೂ.ಗಳ ಆದಾಯವಿರುವುದು.*

ಕಾರಿಡಾರ್ ರಸ್ತೆಗಳು ಆರ್ಥಿಕವಾಗಿ ಮಾತ್ರವಲ್ಲದೆ ರಾಜಕೀಯವಾಗಿಯೂ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ದೇಶವನ್ನು ಉತ್ತರ ಹಾಗೂ ದಕ್ಷಿಣ ಮತ್ತು ಪೂರ್ವ ಹಾಗೂ ಪಶ್ಚಿಮವಾಗಿ ಸಂಪರ್ಕಿಸುವ ಹೆದ್ದಾರಿಗಳೇ ಕಾರಿಡಾರ್ ರಸ್ತೆಗಳು. ಸರಕು ಸಾಮಗ್ರಿಗಳನ್ನು ಅತ್ಯಲ್ಪ ಅವಧಿಯಲ್ಲಿ ದೇಶದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅತಿ ಕಡಿಮೆ ವೆಚ್ಚದಲ್ಲಿ ಸಾಗಿಸಲು ಉಪಯುಕ್ತವಾಗಿದೆ. ಈ ಯೋಜನೆಯು ಕೈಗಾರಿಕೆಗಳಿಗೆ ವರದಾನವಾಗಿದೆ.

ಸುವರ್ಣ ಚತುಷ್ಕೋನ ಹೆದ್ದಾರಿಯು ದೇಶದ ಮಹಾನಗರಗಳಾದ ದೆಹಲಿ, ಮುಂಬಯಿ, ಬೆಂಗಳೂರು, ಚೆನ್ನೈ, ಕೊಲ್ಕತ್ತಾ ನಗರಗಳನ್ನು ಸಂಪರ್ಕಿಸುತ್ತವೆ. ಈ ಹೆದ್ದಾರಿ ಮೂಲಕ ಸಂಪರ್ಕ ಪಡೆಯುವ ಇತರೆ ನಗರಗಳೆಂದರೆ ಪುಣೆ, ಸತಾರ, ಬೆಳಗಾವಿ, ಕಾಂಚೀಪುರಂ, ಆಗ್ರಾ, ಕಾನ್ಪುರ, ಅಲಹಾಬಾದ್, ವಾರಣಾಸಿ, ವಿಶಾಖಪಟ್ಟಣ, ಖರಗಪುರ, ವಿಜಯವಾಡ.

ರಸ್ತೆ ಸಾರಿಗೆಯ ತೊಡಕುಗಳು

1) ಅನೇಕ ಗ್ರಾಮೀಣ ಮತ್ತು ಜಿಲ್ಲಾ ರಸ್ತೆಗಳು ಮಳೆಗಾಲದಲ್ಲಿ ವಾಹನ ಸಂಚಾರಕ್ಕೆ ಕೆಲವು ವೇಳೆ ಅನುಪಯುಕ್ತವಾಗಿರುತ್ತವೆ.
2) ರಸ್ತೆ ಸಾರಿಗೆಯು ಪರಿಸರ ಮಾಲಿನ್ಯ, ವಾಹನ ದಟ್ಟಣೆ ಹಾಗೂ ಅಪಘಾತಗಳಿಗೂ ಕಾರಣಗಳಾಗಿವೆ.
3) ರಸ್ತೆಗಳು ಮಳೆ, ಪ್ರವಾಹ ಮತ್ತು ಚಂಡಮಾರುತಗಳಿಂದ ಪ್ರತಿ ವರ್ಷವೂ ಹಾಳಾಗುತ್ತಿವೆ.
4) ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯೂ ಅಸಮರ್ಪಕ.
5) ರಸ್ತೆಗಳ ಬದಿಯಲ್ಲಿ ಬೇಕಾದ ಅಗತ್ಯಗಳ ಕೊರತೆಯನ್ನು ದೇಶದಾದ್ಯಂತ ಕಾಣಬಹುದು.



ಪ್ರಮುಖ ಬಂದರುಗಳು : ಭಾರತವು ಪುರಾತನ ಕಾಲದಿಂದಲೂ ಜಲಮಾರ್ಗವನ್ನು ಹೊಂದಿದೆ. ಭಾರತವು ಮೂರೂ ಕಡೆ ಸಮುದ್ರ ಪ್ರದೇಶವನ್ನು ಹೊಂದಿದೆ. ಬಂದರುಗಳನ್ನು ಕೂಡಾ ಹೊಂದಿದೆ. ಕೆಲವು ಬಂದರುಗಳ ಪರಿಚಯ ಇಂತಿದೆ.

ಕಾಂಡ್ಲಾ – ಇದು ಕಚ್ ಖಾರಿಯ ಶಿರೋಭಾಗದಲ್ಲಿದೆ.

ಮುಂಬಯಿ – ಇದು ಮಹಾರಾಷ್ಟ್ರ ರಾಜ್ಯದಲ್ಲಿದೆ. ಈ ಬಂದರು ಹೆಚ್ಚಿನ ಒತ್ತಡವನ್ನು ಹೊಂದಿದ್ದರಿಂದ ಈ ಬಂದರಿನ ಆಚೆಗೆ ನವಾಶೇವಾ ಎಂಬ ಬಂದರನ್ನು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ನಿರ್ಮಿಸಲಾಗಿದೆ. ಮುಂಬೈ ಬಂದರನ್ನು 'ಭಾರತದ ಹೆಬ್ಬಾಗಿಲು' ಎಂದು ಕರೆಯುತ್ತೇವೆ.

ಮರ್ಮಗೋವಾ – ಈ ಬಂದರು ಗೋವಾ ರಾಜ್ಯದ ಝುವಾರಿ ಕೊಲ್ಲಿಯ ಪ್ರದೇಶದಲ್ಲಿದೆ.

ನವ ಮಂಗಳೂರು – ಕರ್ನಾಟಕ ರಾಜ್ಯದಲ್ಲಿದ್ದು, ಕರ್ನಾಟಕದ ಪ್ರಮುಖ ಬಂದರಾಗಿದೆ.

ಕೊಚ್ಚಿ – ಇದು ಕೇರಳ ರಾಜ್ಯದಲ್ಲಿದೆ.

ತುತುಕುಡಿ – ಇದು ತಮಿಳುನಾಡು ರಾಜ್ಯದಲ್ಲಿದೆ.

ಚೆನ್ನೈ – ಈ ಬಂದರು ಕೃತಕ ಬಂದರಾಗಿದ್ದು ಹಳೆಯದಾಗಿದೆ. ಇದು ಕೂಡಾ ತಮಿಳುನಾಡು ರಾಜ್ಯದಲ್ಲಿದೆ.

ವಿಶಾಖ ಪಟ್ಟಣ – ಇದು ನೈಸರ್ಗಿಕ ಬಂದರಾಗಿದ್ದು ಆಂಧ್ರಪ್ರದೇಶ ರಾಜ್ಯದಲ್ಲಿದೆ.

ಪಾರಾ ದೀಪ – ಒಡಿಸ್ಸಾ ರಾಜ್ಯದಲ್ಲಿದ್ದು, ಇತ್ತೀಚೆಗೆ ಅಭಿವೃದ್ಧಿ ಪಡಿಸಿದ ಬಂದರಾಗಿದೆ.

ಕೊಲ್ಕತ್ತಾ – ಇದು ಪಶ್ಚಿಮ ಬಂಗಾಳ ರಾಜ್ಯದಲ್ಲಿದೆ. ಇದು ನೈಸರ್ಗಿಕ ರೇವು ಪಟ್ಟಣವಾಗಿರುತ್ತದೆ. ಈ ಬಂದರನ್ನು 'ಭಾರತದ ಚಹದ ಬಂದರು' ಎಂದು ಕರೆಯಲಾಗಿದೆ.

ಹಾಲ್ದಿಯಾ – ಕೊಲ್ಕಾತ್ತಾದ ಬಂದರಿನ ಒತ್ತಡ ಕಡಿಮೆ ಮಾಡಲು ನಿರ್ಮಿಸಿರುವ ಕೃತಕ ಬಂದರಾಗಿರುತ್ತದೆ. ಇದೂ ಕೂಡಾ ಪಶ್ಚಿಮ ಬಂಗಾಳ ರಾಜ್ಯದಲ್ಲಿದೆ.

ಪ್ರಮುಖ ವಿಮಾನ ನಿಲ್ದಾಣಗಳು : ಸುವರ್ಣ ಚತುಷ್ಕೋನ ಮತ್ತು ಕಾರಿಡಾರ್ ರಸ್ತೆಗಳು ಭಾರತದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಿಗೆ ಸಂಪರ್ಕವನ್ನು ಕಲ್ಪಿಸುತ್ತವೆ.

ಭಾರತ ಸರಕಾರವು 1955 ರಲ್ಲಿ 'ದಿ ಏರ್‌ಪೋರ್ಟ ಅಥಾರಿಟಿ ಆಫ್ ಇಂಡಿಯಾ' ಸಂಸ್ಥೆಯನ್ನು ಸ್ಥಾಪಿಸಿದ್ದು, ದೇಶದ ವಿಮಾನ ನಿಲ್ದಾಣಗಳ ನಿರ್ವಹಣೆಯನ್ನು ನೀಡಲಾಗಿದೆ. ಇದು ಭಾರತದಲ್ಲಿ 11 ಅಂತರರಾಷ್ಟ್ರೀಯ ನಿಲ್ದಾಣ ಹಾಗೂ 115 ಆಂತರಿಕ ವಿಮಾನ ನಿಲ್ದಾಣಗಳನ್ನು ನಿರ್ವಹಿಸುತ್ತಿದೆ. ಪ್ರಮುಖ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳೆಂದರೆ 1) ಮುಂಬೈ, (ಸಹರಾ ಮತ್ತು ಸಾಂತ್ರಾಕ್ರೂಜ), 2) ದೆಹಲಿ (ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, 3) ಕೋಲ್ಕತ್ತಾ (ಸುಭಾಷ್‌ಚಂದ್ರ ಬೋಸ್ ವಿಮಾನ ನಿಲ್ದಾಣ), 4) ಚೆನ್ನೈ (ಅಣ್ಣಾ ಅಥವಾ ಮೀನಂಬಾಕಂ), 5) ಬೆಂಗಳೂರು (ನಾಡಪ್ರಭು ಕೆಂಪೇಗೌಡ), 6) ಹೈದರಾಬಾದ್, 7) ಅಹಮದಾಬಾದ್, 8) ಪಣಜಿ, 9) ಅಮೃತಸರ್, 10) ಗುವಾಹಟಿ, 11) ತಿರುವನಂತಪುರ–ಇವುಗಳಿಗೆ ಎಲ್ಲ ಹೆದ್ದಾರಿಗಳು ಮತ್ತು ಕಾರಿಡಾರ್ ರಸ್ತೆಗಳು ಸಂಪರ್ಕ ಪಡೆಯುತ್ತವೆ.

ಅಭ್ಯಾಸಗಳು

I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.

1) ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರು ________

2) ಹಳ್ಳಿಗಳು ಮತ್ತು ಕೃಷಿ ಅಭಿವೃದ್ಧಿಗೆ ________ ಅವಶ್ಯಕವಾಗಿದೆ.

3) ಭಾರತದ ಹೆಬ್ಬಾಗಿಲು ಎಂದು ________ ಬಂದರನ್ನು ಕರೆಯುತ್ತಾರೆ.

4) ಬೆಂಗಳೂರು, ಮುಂಬೈ ನಡುವೆ ಇರುವ ರಾಷ್ಟ್ರಿಯ ಹೆದ್ದಾರಿ ಸಂಖ್ಯೆ ________ .

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.

1) ಸಾರಿಗೆಯಿಂದಾಗುವ ಪ್ರಯೋಜನಗಳಾವುವು?

2) ಭಾರತದಲ್ಲಿರುವ ನಾಲ್ಕು ಪ್ರಕಾರದ ಮುಖ್ಯ ರಸ್ತೆಗಳಾವವು?

3) ಸುವರ್ಣ ಚತುಷ್ಕೋನ ಯೋಜನೆ ಎಂದರೇನು?

4) ರಾಷ್ಟ್ರೀಯ ಹೆದ್ದಾರಿಗಳ ಕಾರ್ಯವನ್ನು ವಿವರಿಸಿ.

5) ಭಾರತದಲ್ಲಿರುವ ಪ್ರಮುಖ ಬಂದರುಗಳ ಪಟ್ಟಿ ಮಾಡಿ.

6) ಭಾರತದ ನಕ್ಷೆಯನ್ನು ಬರೆದು ಮುಖ್ಯ ರಾಷ್ಟ್ರೀಯ ಹೆದ್ದಾರಿಗಳನ್ನು ಗುರುತಿಸಿರಿ.

III. ಚಟುವಟಿಕೆಗಳು :

1) ಭಾರತದಲ್ಲಿ ಕಂಡು ಬರುವ ಸುವರ್ಣ ಕಾರಿಡಾರ್ ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ನಕ್ಷೆಯಲ್ಲಿ ಗುರುತಿಸಿ ಮತ್ತು ಹೆಸರಿಸಿ.

IV. ಯೋಜಿತ ಕಾರ್ಯ :

1) ನಿಮ್ಮ ಪ್ರದೇಶದ ಸಾರಿಗೆ ವ್ಯವಸ್ಥೆಯನ್ನು ಕುರಿತು ಟಿಪ್ಪಣಿ ಬರೆಯಿರಿ.

2) ಹಳ್ಳಿ ರಸ್ತೆಗಳ ಸ್ಥಿತಿಗತಿ ಬಗೆಗೆ ನಿರ್ವಹಣೆಯ ಅಗತ್ಯತೆಯನ್ನು ಕುರಿತು ಚರ್ಚಿಸಿರಿ.

3) ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಸಾರಿಗೆಗಳ ಪಾತ್ರವನ್ನು ವಿವರಿಸಿ.

ಅಧ್ಯಾಯ-10

ಭಾರತದ ಪ್ರಮುಖ ಕೈಗಾರಿಕೋದ್ಧಿಮೆಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಭಾರತದ ಕೈಗಾರಿಕೆಗಳ ಮಹತ್ವ ಮತ್ತು ಪ್ರಮುಖ ಕೈಗಾರಿಕಾ ಪ್ರದೇಶಗಳು.*
- *ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು.*
- *ವಿವಿಧ ಕೈಗಾರಿಕೆಗಳ ಪರಿಚಯ.*
- *ಜ್ಞಾನಾಧಾರಿತ ಕೈಗಾರಿಕೆಗಳು; ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಉನ್ನತ ತಂತ್ರಜ್ಞಾನ.*

ಮಾನವನ ಆಧುನಿಕ ಆರ್ಥಿಕ ಚಟುವಟಿಕೆಗಳಲ್ಲಿ ಕೈಗಾರಿಕೆಗಳು ಅತ್ಯಂತ ಮಹತ್ವದ್ದಾಗಿವೆ. ಯಾವುದೇ ದೇಶದ ಆರ್ಥಿಕ ಪ್ರಗತಿಯನ್ನು ನಿರ್ಧರಿಸಲು ಆ ದೇಶವು ಹೊಂದಿರುವ ಕೈಗಾರಿಕೆಯ ಅಭಿವೃದ್ಧಿಯನ್ನು ಸಹ ಪ್ರಧಾನವಾಗಿ ಪರಿಗಣಿಸಲಾಗುವುದು. ಕೈಗಾರಿಕೆಗಳು ಆಧುನಿಕ ನಾಗರಿಕತೆಯ ಲಕ್ಷಣಗಳಾಗಿದ್ದು, ನಮಗೆ ಅವಶ್ಯಕವಾದ ವಸ್ತುಗಳನ್ನು ಪೂರೈಸುವುದಲ್ಲದೆ ಸಾಕಷ್ಟು ಉದ್ಯೋಗಾವಕಾಶಗಳನ್ನು ದೊರಕಿಸಿಕೊಡುತ್ತವೆ. ಸಾಮಾನ್ಯವಾಗಿ ಕಚ್ಚಾವಸ್ತುಗಳನ್ನು ಸಿದ್ದ ವಸ್ತುಗಳನ್ನಾಗಿ ಪರಿವರ್ತಿಸುವ ಮಾನವನ ಎಲ್ಲ ಉದ್ಯೋಗಗಳನ್ನು ಕೈಗಾರಿಕೆ ಎಂದು ಕರೆಯುತ್ತಾರೆ.

ನಿಮಗಿದು ತಿಳಿದಿರಲಿ

ಕೈಗಾರಿಕೆಗಳ ವಿಧಗಳು :

1) ದೊಡ್ಡ ಪ್ರಮಾಣದ ಕೈಗಾರಿಕೆಗಳು.
2) ಮಧ್ಯಮ ಪ್ರಮಾಣ ಕೈಗಾರಿಕೆಗಳು.
3) ಸಣ್ಣ ಪ್ರಮಾಣದ ಕೈಗಾರಿಕೆಗಳು.

ಕಚ್ಚಾವಸ್ತುಗಳನ್ನಾಧರಿಸಿ ಕೈಗಾರಿಕೆಗಳನ್ನು ವಿವಿಧ ಪ್ರಕಾರಗಳನ್ನಾಗಿ ವಿಂಗಡಿಸಲಾಗಿದೆ.

1) ವ್ಯವಸಾಯ ಆಧಾರಿತ ಕೈಗಾರಿಕೆಗಳು
2) ಖನಿಜ ಆಧಾರಿತ ಕೈಗಾರಿಕೆಗಳು
3) ಅರಣ್ಯ ಆಧಾರಿತ ಕೈಗಾರಿಕೆಗಳು
4) ರಾಸಾಯನಿಕ ಕೈಗಾರಿಕೆಗಳು

ಉದಾ : ಕಬ್ಬನ್ನು ಸಕ್ಕರೆಯಾಗಿ,ಹತ್ತಿಯನ್ನು ಬಟ್ಟೆಯನ್ನಾಗಿ, ಬಾಕ್ಸೈಟನ್ನು ಅಲ್ಯುಮಿನಿಯಂ ಲೋಹವನ್ನಾಗಿ, ಮರದ ತಿರುಳನ್ನು ಕಾಗದವನ್ನಾಗಿ ಪರಿವರ್ತಿಸುವುದು.

ಭಾರತದ ಕೈಗಾರಿಕಾ ಪ್ರದೇಶಗಳು (Industrial Regions of India)

ಭಾರತದಲ್ಲಿ ಸ್ವಾತಂತ್ರ್ಯಾ ನಂತರದ ಅವಧಿಯ ಎಲ್ಲ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಕೈಗಾರಿಕೆಗಳಿಗೆ ಆದ್ಯತೆ ನೀಡಲಾಯಿತು. ಕಳೆದ ಐದು ದಶಕಗಳಲ್ಲಿ ಭಾರತವು ಕೈಗಾರಿಕೆ ಮತ್ತು ತಾಂತ್ರಿಕತೆಯ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿ ಮಹತ್ವಪೂರ್ಣವಾದುದು. ಕೈಗಾರಿಕೆಗಳು ದೇಶದ ಸಮಗ್ರ ರಾಷ್ಟ್ರೀಯ ಆದಾಯದ ಶೇ.35 ರಷ್ಟು ಪೂರೈಸುತ್ತಿದ್ದು, ದೇಶದ ಒಟ್ಟು ಕಾರ್ಮಿಕರಲ್ಲಿ ಶೇ 16 ರಷ್ಟು ಜನರಿಗೆ ಉದ್ಯೋಗವನ್ನು ಕಲ್ಪಿಸಿವೆ. ಆದಾಯ ಹಾಗೂ ಉದ್ಯೋಗ ನೀಡಿಕೆಗಳೆರಡರಲ್ಲಿಯೂ ಕೈಗಾರಿಕೆಗಳು ಭಾರತದಲ್ಲಿ ವ್ಯವಸಾಯದ ನಂತರ ಎರಡನೆಯ ಸ್ಥಾನದಲ್ಲಿವೆ.

ದೇಶದ ಕೆಲವು ಭಾಗಗಳಲ್ಲಿ ಕೈಗಾರಿಕೆಗಳು ಹೆಚ್ಚು ಕೇಂದ್ರೀಕೃತವಾಗಿವೆ. ಇಂತಹವುಗಳನ್ನು 'ಕೈಗಾರಿಕಾ ವಲಯ'ವೆಂದು ಕರೆಯುವರು.

ಭಾರತದಲ್ಲಿ 8 ಪ್ರಧಾನ ಕೈಗಾರಿಕಾ ವಲಯಗಳನ್ನು ಗುರುತಿಸಲಾಗಿದೆ. ಇವುಗಳೆಂದರೆ, 1) ಹೂಗ್ಲಿ ಪ್ರದೇಶ 2) ಮುಂಬೈ–ಪೂನಾ ಪ್ರದೇಶ 3) ಅಹಮದಾಬಾದ್–ವಡೋದರ ಪ್ರದೇಶ 4) ದಾಮೋದರ ಕಣಿವೆ ಪ್ರದೇಶ 5) ದಕ್ಷಿಣದ ಕೈಗಾರಿಕಾ ಪ್ರದೇಶ 6) ನ್ಯಾಷನಲ್ ಕ್ಯಾಪಿಟಲ್ ಪ್ರದೇಶ 7) ವಿಶಾಖಪಟ್ಟಣ–ಗುಂಟೂರು ಪ್ರದೇಶ 8) ಕೊಲ್ಲಂ–ತಿರುವನಂತಪುರ ಪ್ರದೇಶ.

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು :

ಕೈಗಾರಿಕೆಗಳು ಅತ್ಯಂತ ಅನುಕೂಲಕರವಾದ ಸ್ಥಾನಗಳಲ್ಲಿ ಮಾತ್ರ ಸ್ಥಾಪನೆಗೊಂಡಿರುತ್ತವೆ. ಇವುಗಳ ಸ್ಥಾನದ ಮೇಲೆ ಕಚ್ಚಾವಸ್ತುಗಳು, ಶಕ್ತಿ ಸಂಪನ್ಮೂಲಗಳು, ಮಾರುಕಟ್ಟೆ, ಸಂಚಾರ ಸೌಲಭ್ಯ, ಕಾರ್ಮಿಕರ ಪೂರೈಕೆ, ಬಂದರುಗಳ ಸೌಲಭ್ಯ ಮೊದಲಾದ ಹಲವಾರು ಅಂಶಗಳು ಪ್ರಭಾವ ಬೀರುತ್ತವೆ. ಕೈಗಾರಿಕೆಗಳ ಸ್ಥಾನವು ಕಡಿಮೆ ದರದ ಭೂಮಿ ದೊರೆಯುವಿಕೆ, ತಾಂತ್ರಿಕತೆ, ಸರ್ಕಾರದ ನೀತಿ ನಿಯಮಗಳಿಂದಲೂ ಪ್ರಭಾವಿತವಾಗಿರುವುದು. ಕೈಗಾರಿಕೆಗಳ ಸ್ಥಾನೀಕರಣದ ಅಂಶಗಳು ಒಂದು ಬಗೆಯ ಕೈಗಾರಿಕೆಯಿಂದ ಮತ್ತೊಂದು ಬಗೆಯ ಕೈಗಾರಿಕೆಗಳಿಗೆ ವ್ಯತ್ಯಾಸ ಹೊಂದುತ್ತವೆ.

ಭಾರತದ ಪ್ರಮುಖ ಕೈಗಾರಿಕೆಗಳು :

ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ :

ಇದನ್ನು ಮೂಲ ಕೈಗಾರಿಕೆ ಎಂದು ಕರೆಯುತ್ತಾರೆ. ಇದಕ್ಕೆ ಕಾರಣವೆಂದರೆ ಈ ಕೈಗಾರಿಕೆಯು ಯಂತ್ರೋಪಕರಣ, ರೈಲ್ವೆ, ಹಡಗು ನಿರ್ಮಾಣ, ವಿದ್ಯುತ್ ಯೋಜನೆ, ನೀರಾವರಿ ಯೋಜನೆ, ಕಟ್ಟಡ ನಿರ್ಮಾಣ, ಗೃಹ ನಿರ್ಮಾಣ ಮುಂತಾದ ಇನ್ನಿತರ ಹಲವಾರು ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾವಸ್ತುವನ್ನು ಒದಗಿಸುವುದು.

ಹಂಚಿಕೆ :

ಭಾರತದಲ್ಲಿ ಒಟ್ಟು 9 ಬೃಹತ್ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳಿವೆ. ದೇಶದಲ್ಲಿ ಪ್ರಥಮ ಉಕ್ಕಿನ ಕೈಗಾರಿಕೆಯು 1870 ರಲ್ಲಿ ಪಶ್ಚಿಮ ಬಂಗಾಳದ **'ಕುಲ್ಟಿ'** ಎಂಬಲ್ಲಿ ಬೆಂಗಾಲ್ ಐರನ್ ಕಂಪನಿ ಲಿ., ಸಂಸ್ಥೆಯಿಂದ ಸ್ಥಾಪಿತಗೊಂಡಿತು. ನಂತರ 1907 ರಲ್ಲಿ ಟಾಟಾ ಐರನ್ ಅಂಡ್ ಸ್ಟೀಲ್ ಕಂಪನಿಯು ಜಮ್‌ಶೆಡ್‌ಪುರ ಬಳಿ ಹಾಗೂ 1919 ರಲ್ಲಿ ದಿ ಇಂಡಿಯನ್ ಐರನ್ ಅಂಡ್ ಸ್ಟೀಲ್ ಕಂಪನಿಯು ಪಶ್ಚಿಮ ಬಂಗಾಳದ ಬರ್ನ್‌ಪುರ ಎಂಬಲ್ಲಿ ಉಕ್ಕಿನ ಸ್ಥಾವರವನ್ನು ಆರಂಭಿಸಿತು. 1923 ರಲ್ಲಿ ಮೈಸೂರು ರಾಜ ಸಂಸ್ಥಾನವು ದಿ ಮೈಸೂರ್ ಐರನ್ ಅಂಡ್ ಸ್ಟೀಲ್ ವರ್ಕ್ಸ್ ಕೈಗಾರಿಕೆಯನ್ನು ಭದ್ರಾವತಿಯಲ್ಲಿ ಸ್ಥಾಪಿಸಿತು.

ಪ್ರಸ್ತುತ ಭಾರತದಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಮುಖ್ಯ ಕೈಗಾರಿಕೆಗಳೆಂದರೆ :

1) ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ (Tisco) ಜಮ್‌ಶೆಡ್‌ಪುರ (ಜಾರ್ಖಂಡ್)
2) ಇಂಡಿಯನ್ ಐರನ್ ಮತ್ತು ಸ್ಟೀಲ್ ಕಂಪನಿ (IISCO), ಬರ್ನ್‌ಪುರ–ಪಶ್ಚಿಮಬಂಗಾಳ
3) ವಿಶ್ವೇಶ್ವರಯ್ಯ ಐರನ್ ಮತ್ತು ಸ್ಟೀಲ್ ಕಂಪನಿ (VISCO), ಭದ್ರಾವತಿ, ಕರ್ನಾಟಕ
4) ಬಿಲಾಯಿ ಐರನ್ ಮತ್ತು ಸ್ಟೀಲ್ ಕಂಪನಿ, ಬಿಲಾಯಿ, ಛತ್ತೀಸ್‌ಘಡ್
5) ಐರನ್ ಮತ್ತು ಸ್ಟೀಲ್ ಕಂಪನಿ, ರೂರ್ಕೆಲ ಒರಿಸ್ಸಾ
6) ಐರನ್ ಮತ್ತು ಸ್ಟೀಲ್ ಕಂಪನಿ, ದುರ್ಗಾಪುರ – ಪಶ್ಚಿಮ ಬಂಗಾಳ

7) ಐರನ್ ಮತ್ತು ಸ್ಟೀಲ್ ಕಂಪನಿ, ಬೋಕಾರೋ – ಝಾರ್ಖಂಡ್

8) ಐರನ್ ಮತ್ತು ಸ್ಟೀಲ್ ಕಂಪನಿ, ಸೇಲಂ – ತಮಿಳುನಾಡು

9) ಐರನ್ ಮತ್ತು ಸ್ಟೀಲ್ ಕಂಪನಿ, ವಿಶಾಖಪಟ್ಟಣ – ಆಂಧ್ರಪ್ರದೇಶ

ಇತ್ತೀಚೆಗೆ ಅನೇಕ ಖಾಸಗಿ ಸಂಸ್ಥೆಗಳು ಉಕ್ಕಿನ ಕಾರ್ಖಾನೆಗಳನ್ನು ಸ್ಥಾಪಿಸುತ್ತಿವೆ. ಭಾರತವು ಉಕ್ಕಿನ ಉತ್ಪಾದನೆ ಹಾಗೂ ರಫ್ತಿಗೆ ಉತ್ತಮ ಅವಕಾಶವನ್ನು ಹೊಂದಿದ್ದು, ಇದರಿಂದಾಗಿ ರಫ್ತು ಅಧಿಕಗೊಳ್ಳುತ್ತಿದೆ.

2) ಹತ್ತಿ ಬಟ್ಟೆ ಕೈಗಾರಿಕೆ

ವಿವಿಧ ಬಗೆಯ ನಾರುಗಳಿಂದ ಬಟ್ಟೆಯನ್ನು ತಯಾರಿಸುವುದನ್ನು 'ಜವಳಿ ಕೈಗಾರಿಕೆ' (Textile Industry) ಯೆಂದು ಕರೆಯುವರು. ಜವಳಿ ಕೈಗಾರಿಕೆಯಲ್ಲಿ ಹತ್ತಿ ಬಟ್ಟೆ ಕೈಗಾರಿಕೆ, ಸೆಣಬಿನ ಕೈಗಾರಿಕೆ, ರೇಷ್ಮೆ ಕೈಗಾರಿಕೆ, ಉಣ್ಣೆ ಬಟ್ಟೆ ಕೈಗಾರಿಕೆ ಮತ್ತು ಕೃತಕ ನಾರಿನ ಬಟ್ಟೆ ತಯಾರಿಕೆ ಮೊದಲಾದವುಗಳಿವೆ. ಹತ್ತಿ ಬಟ್ಟೆ ಕೈಗಾರಿಕೆಗೆ ಇತಿಹಾಸವು ಇತರೆ ಕೈಗಾರಿಕೆಗಳಿಗಿಂತ ಸುದೀರ್ಘವಾದುದು. ದೇಶದಲ್ಲಿ ಈ ಕೈಗಾರಿಕೆ ಮೊದಲು 1854 ರಲ್ಲಿ ಮುಂಬೈ ಹಾಗೂ ಬರೂಚ್‌ಗಳಲ್ಲಿ ಸ್ಥಾಪಿಸಲ್ಪಟ್ಟವು. 1951 ರಲ್ಲಿ ದೇಶವು ಒಟ್ಟು 378 ಹತ್ತಿ ಬಟ್ಟೆ ಕೈಗಾರಿಕೆಗಳನ್ನು ಹೊಂದಿದ್ದು, 2008 ರಲ್ಲಿ ಇವುಗಳ ಸಂಖ್ಯೆ 1773ಕ್ಕೆ ಏರಿದೆ. ಇವು ದೇಶದ 175 ಪಟ್ಟಣ ಮತ್ತು ನಗರಗಳಲ್ಲಿ ಹಂಚಿಕೆಯಾಗಿವೆ.

ಹಂಚಿಕೆ :

ಮಹಾರಾಷ್ಟ್ರ, ಗುಜರಾತ, ತಮಿಳುನಾಡು, ಕರ್ನಾಟಕ, ಉತ್ತರ ಪ್ರದೇಶ, ಮಧ್ಯಪ್ರದೇಶ ರಾಜ್ಯಗಳು ಬಹುಪಾಲು ಹತ್ತಿ ಬಟ್ಟೆ ಕೈಗಾರಿಕೆಗಳನ್ನು ಹೊಂದಿವೆ. ಮಹಾರಾಷ್ಟ್ರದ ಮುಂಬಯಿಯಲ್ಲಿ ಅತಿ ಹೆಚ್ಚು ಹತ್ತಿ ಗಿರಣಿಗಳಿದ್ದು ಇದನ್ನು ಭಾರತದ 'ಮ್ಯಾಂಚೆಸ್ಟರ್' (ಇಂಗ್ಲೆಂಡಿನ ಅತಿ ಪ್ರಮುಖ ಹತ್ತಿ ಬಟ್ಟೆ ಕೈಗಾರಿಕಾ ಕೇಂದ್ರ) ಅಥವಾ ಭಾರತದ 'ಕಾಟನೋಪೊಲಿಸ್' ಎಂದು ಕರೆಯುತ್ತಾರೆ. ಇದಲ್ಲದೆ ನಾಗಪುರ, ಸೊಲ್ಲಾಪುರ, ಪಶ್ಚಿಮ ಬಂಗಾಳ, ಕೊಲ್ಕತ್ತಾ, ಉತ್ತರಪ್ರದೇಶದ ಕಾನ್ಪುರ, ಮಧ್ಯಪ್ರದೇಶದ ಇಂದೋರ್, ಗುಜರಾತಿನ ಸೂರತ್, ತಮಿಳುನಾಡಿನ ಕೊಯಿಮತ್ತೂರ, ಸೇಲಂ, ಚೆನ್ನೈ, ಕರ್ನಾಟಕದ ಬೆಂಗಳೂರು, ದಾವಣಗೆರೆ ಪ್ರಮುಖ ಹತ್ತಿ ಬಟ್ಟೆ ಕೈಗಾರಿಕಾ ಕೇಂದ್ರಗಳಾಗಿವೆ.

3) ಸಕ್ಕರೆ ಕೈಗಾರಿಕೆ :

ಭಾರತವು ಪ್ರಪಂಚದಲ್ಲಿ ಸಕ್ಕರೆ ಉತ್ಪಾದನೆಯಲ್ಲಿ ಬ್ರೆಜಿಲ್ ನಂತರ ಎರಡನೆಯ ಸ್ಥಾನವನ್ನು ಪಡೆದಿದೆ. ಸಕ್ಕರೆ ತಯಾರಿಕೆ ಭಾರತೀಯರಿಗೆ ಪುರಾತನ ಕಾಲದಿಂದಲೂ ತಿಳಿದಿದೆ. ಈ ಕೈಗಾರಿಕೆಯನ್ನು ಕಬ್ಬು ಬೆಳೆಯುವ ಪ್ರದೇಶದಲ್ಲಿ ಸ್ಥಾಪಿಸಲಾಗುತ್ತಿದೆ. ಭಾರತದ ಬಹಳಷ್ಟು ಸಕ್ಕರೆ ಕೈಗಾರಿಕೆಗಳು ಗಂಗಾ ನದಿಯ ಮೈದಾನ ಪ್ರದೇಶದಲ್ಲಿ ಸ್ಥಾಪಿತಗೊಂಡಿವೆ. ಈ ಕೈಗಾರಿಕೆಯನ್ನು ಹೊಂದಿರುವ ಪ್ರಮುಖ ರಾಜ್ಯಗಳೆಂದರೆ ಮಹಾರಾಷ್ಟ್ರ, ಉತ್ತರ ಪ್ರದೇಶ, ತಮಿಳುನಾಡು, ಕರ್ನಾಟಕ, ಆಂಧ್ರ ಪ್ರದೇಶ, ಮಧ್ಯ ಪ್ರದೇಶ ಮೊದಲಾದವು. ಭಾರತದಲ್ಲಿ ಒಟ್ಟು 516 ಸಕ್ಕರೆ ಕೈಗಾರಿಕೆಗಳಿದ್ದು, ಸುಮಾರು 263.6 ಲಕ್ಷ ಟನ್‌ಗಳಷ್ಟು ಸಕ್ಕರೆಯನ್ನು ಉತ್ಪಾದಿಸುತ್ತದೆ. ಭಾರತದಿಂದ ಸಕ್ಕರೆಯು ಯು.ಎಸ್.ಎ. ಬ್ರಿಟನ್, ಇರಾನ, ಕೆನಡಾ, ಮಲೇಷಿಯಾ ದೇಶಗಳಿಗೆ ರಫ್ತಾಗುತ್ತದೆ.


4) ಅಲ್ಯೂಮಿನಿಯಂ ಕೈಗಾರಿಕೆ :

ಅಲ್ಯೂಮಿನಿಯಂ ಇತ್ತೀಚೆಗೆ ಅಂದರೆ 1886 ರಲ್ಲಿ ಶೋಧಿಸಲ್ಪಟ್ಟಿದೆ. ಭಾರತವು ಉತ್ಪಾದಿಸುವ ಕಬ್ಬಿಣೇತರ ಲೋಹಗಳಲ್ಲಿ ಅಲ್ಯೂಮಿನಿಯಂ ಅತೀ ಮುಖ್ಯವಾದುದು. ಅಲ್ಯೂಮಿನಿಯಂ ಕೈಗಾರಿಕೆಗಳು

> **ನಿಮಗಿದು ತಿಳಿದಿರಲಿ :**
> ಉತ್ತರ ಪ್ರದೇಶದ ಗೋರಖಪುರ ಜಿಲ್ಲೆ ಹೆಚ್ಚು ಸಕ್ಕರೆ ಕೈಗಾರಿಕೆಗಳನ್ನು ಹೊಂದಿರುವದರಿಂದ ಇದನ್ನು **ಭಾರತದ ಜಾವಾ** ಎಂದು ಕರೆಯುವರು.

ದೇಶದ ಕೆಲವೇ ಸ್ಥಳಗಳಲ್ಲಿ ಮಾತ್ರ ಸ್ಥಾಪಿಸಲ್ಪಟ್ಟಿವೆ. ಈ ಕೈಗಾರಿಕೆಯು ಪ್ರಮುಖ ಮೂರು ಅಂಶಗಳನ್ನು ಅವಲಂಬಿಸಿದೆ. ವಿದ್ಯುಚ್ಛಕ್ತಿಯ ದೊರೆಯುವಿಕೆ, ಬಾಕ್ಸೈಟ್‌ನ ಪೂರೈಕೆ, ಇತರ ಲೋಹ ಮತ್ತು ಬಂಡವಾಳದ ಪೂರೈಕೆ. ಭಾರತದಲ್ಲಿ ಒರಿಸ್ಸಾ, ಜಾರ್ಖಂಡ್, ಛತ್ತೀಸಗರ್, ಮಧ್ಯಪ್ರದೇಶ, ಗುಜರಾತ, ಮಹಾರಾಷ್ಟ್ರ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಈ ಕೈಗಾರಿಕೆಗಳಿವೆ.

5) ಕಾಗದದ ಕೈಗಾರಿಕೆ :



ಭಾರತದಲ್ಲಿ ಮೊದಲ ಕಾಗದದ ಕೈಗಾರಿಕೆಯು 1840 ರಲ್ಲಿ ಪಶ್ಚಿಮ ಬಂಗಾಳದ ಸೆರಾಂಪುರದಲ್ಲಿ ಹೂಗ್ಲಿನದಿ ದಡದಲ್ಲಿ ಸ್ಥಾಪನೆಗೊಂಡಿತು. ನಂತರ 1867 ರಲ್ಲಿ ಮತ್ತೊಂದು ಕೈಗಾರಿಕೆಯು ಕೋಲ್ಕತ್ತಾದ ಬಳಿಯಿರುವ ಬಾಲ್ಲಿ ನಗರದಲ್ಲಿ ಆರಂಭಗೊಂಡಿತು. ಅರಣ್ಯಗಳಿಂದ ದೊರೆಯುವ ಬಿದಿರು, ಮರದ ತಿರುಳು, ಹುಲ್ಲು, ಕಾಗದ ತಯಾರಿಕೆಯಲ್ಲಿ ಬಳುಸುವ ಪ್ರಮುಖ ಕಚ್ಚಾ ವಸ್ತುಗಳು ದೇಶದ ಹೆಚ್ಚಿನ ಕಾಗದ ಕೈಗಾರಿಕೆಗಳು ಪಶ್ಚಿಮ ಬಂಗಾಳದಲ್ಲಿ ಕಂಡುಬರುತ್ತವೆ. ಇದಲ್ಲದೆ ಮುಂಬೈ, ಪೂನಾ, ಚಿಂದ್ವಾರ, ಅಮರಾವತಿ, ನಾಗಪುರ, ನಾಸಿಕ, ಕರಾಡ, ಆಂಧ್ರಪ್ರದೇಶದ ರಾಜಮಂಡ್ರಿ, ರಾಯಘಡ್, ತಿರುಪತಿ, ಉತ್ತರ ಪ್ರದೇಶದ ಮಿರತ, ವಾರಣಾಸಿ, ಗಾಜಿಯಾಬಾದ, ಲಕ್ನೊ, ಪ್ರಮುಖವಾಗಿವೆ. ಗುಜರಾತ, ಓರಿಸ್ಸಾ, ಮಧ್ಯಪ್ರದೇಶ, ತಮಿಳುನಾಡಿನ ಹಲವುಕಡೆ ಕಾಗದ ಕೈಗಾರಿಕೆ ಸ್ಥಾಪನೆಗೊಂಡಿವೆ. ದೇಶದಲ್ಲಿ ಒಟ್ಟು 568 ಕಾಗದ ಕೈಗಾರಿಕೆಗಳಿವೆ, ನ್ಯೂಸ್ ಪ್ರಿಂಟ್ ಕಾಗದವನ್ನು ನಾರ್ವೆ, ಸ್ವೀಡನ್, ಕೆನಡಾ ಮತ್ತು ಯುಎಸ್ಎ ದಿಂದ ಆಮದು ಮಾಡಿಕೊಳ್ಳಲಾಗಿದೆ.

6) ಜ್ಞಾನಾಧಾರಿತ ಕೈಗಾರಿಕೆಗಳು (Knowledge Based Industry) :

ಭಾರತದಲ್ಲಿ ಪ್ರಸ್ತುತ ಅತಿ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಕೈಗಾರಿಕೆಯೆಂದರೆ ಮಾಹಿತಿ ತಂತ್ರಜ್ಞಾನ (Information Technology). ಇದನ್ನೇ 'ಜ್ಞಾನಾಧಾರಿತ ಕೈಗಾರಿಕೆ'ಯೆಂದು ಕರೆಯಲಾಗಿದೆ. ಇದಕ್ಕೆ ಮಾನವನ ಜ್ಞಾನವೇ ಆಧಾರವಾಗಿರುವುದರಿಂದ ಇದನ್ನು ಈ ಹೆಸರಿಂದ ಕರೆಯಲಾಗಿದೆ. ಇದು ದೇಶದ ಆರ್ಥಿಕತೆ ಹಾಗೂ ಜನರ ಜೀವನ ಶೈಲಿಯ ಮೇಲೆ ಅಪಾರ ಪರಿಣಾಮವನ್ನು ಬೀರಿದೆ. ಇದರ ಬೆಳವಣಿಗೆಯ ಪ್ರಮಾಣವು ಉಳಿದ ಎಲ್ಲಾ ಕೈಗಾರಿಕೆಗಳಿಗಿಂತಲೂ ಮುಂದಿದೆ.

a) ಮಾಹಿತಿ ತಂತ್ರಜ್ಞಾನ (IT-Information Technology) :

> ***ಚಟುವಟಿಕೆ :*** *ಮಾಹಿತಿ ತಂತ್ರಜ್ಞಾನವನ್ನು ನಿಮ್ಮ ಶಾಲೆಯಲ್ಲಿ ಯಾವ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ, ತಿಳಿಯಿರಿ.*

ಭಾರತ ಸರಕಾರವು ಸಾಫ್ಟ್‌ವೇರ್ ಉದ್ಯಮ ಬೆಳವಣಿಗೆಯನ್ನು ಪ್ರೋತ್ಸಾಹಿಸಿ ರಫ್ತನ್ನು ಉತ್ತೇಜಿಸಲು ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕಗಳನ್ನು (STP) 1991 ರಲ್ಲಿಯೇ ಸ್ಥಾಪಿಸಿತು. ಇಂದು ದೇಶದಲ್ಲಿ ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ಮತ್ತು ಆಂಧ್ರ ಪ್ರದೇಶ ರಾಜ್ಯಗಳು ಈ ಉದ್ಯಮದ ಮೇಲೆ ಸಂಪೂರ್ಣ ಹತೋಟಿಯನ್ನು ಸಾಧಿಸಿವೆ. ಈ ರಾಜ್ಯಗಳಲ್ಲಿ ಮಾಹಿತಿ ತಂತ್ರಜ್ಞಾನದ ತರಬೇತಿ ಕೇಂದ್ರ ಹಾಗೂ ವಿಶ್ವವಿದ್ಯಾನಿಲಯಗಳನ್ನು ಅಭಿವೃದ್ಧಿ ಪಡಿಸಿವೆ. ಸಾಫ್ಟ್‌ವೇರ್ ಮುಖ್ಯ ರಫ್ತಿನ ಸರಕಾಗಿದ್ದು, ವಿದೇಶೀ ವಿನಿಮಯ ಗಳಿಕೆಗೆ ಸಹಾಯಕವಾಗಿದೆ. ಬೆಂಗಳೂರು ಮಾಹಿತಿ ತಂತ್ರಜ್ಞಾನದ ಮುಖ್ಯ ಕೇಂದ್ರವಾಗಿದ್ದು ಇದನ್ನು 'ಸಿಲಿಕಾನ್ ಸಿಟಿ' ಎಂದು ಕರೆಯಲಾಗಿದೆ.

b) ಜೈವಿಕ ತಂತ್ರಜ್ಞಾನ (BT-Biotechnology) :

ಭಾರತ ಸರಕಾರವು 1980 ರಲ್ಲಿ ಜೈವಿಕ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಪ್ರತ್ಯೇಕವಾದ ಸಂಸ್ಥೆಯನ್ನು ಹುಟ್ಟುಹಾಕಿತು. ಇದರಿಂದ ವ್ಯವಸಾಯದಲ್ಲಿ ದೊಡ್ಡ ಕ್ರಾಂತಿಯೇ ಜರುಗಲು ಪ್ರಾರಂಭಿಸಿತು.

ಸಸ್ಯ, ಪ್ರಾಣಿ ಮೊದಲಾದವುಗಳಿಗೆ ಕಸಿ ಮಾಡುವಿಕೆಯಿಂದ ಹೊಸ ಹೊಸ ಬೀಜ, ಔಷಧ, ರಸಗೊಬ್ಬರ, ಜೈವಿಕ ಗೊಬ್ಬರ ಬಳಕೆಯಿಂದ ಸೋಯಾ ಅವರೆ, ಮೆಕ್ಕೆಜೋಳ (ಗೋವಿನಜೋಳ), ಹತ್ತಿ, ಮೊದಲಾದ ಸಮ್ಮಿಶ್ರ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇತ್ತೀಚಿಗೆ ಸಸ್ಯ ಜೈವಿಕ ತಂತ್ರಜ್ಞಾನ, ಪರಿಸರ, ಜೈವಿಕ ವೈವಿಧ್ಯತೆ, ವೈದ್ಯಕೀಯ ಜೈವಿಕ ತಂತ್ರಜ್ಞಾನವನ್ನು ಸಹ ಬಳಸಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಸಾಕಷ್ಟು ರಾಜ್ಯಗಳು ಜೈವಿಕ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿವೆ. ಇವುಗಳಲ್ಲಿ ಉತ್ತರ ಪ್ರದೇಶ ಅರುಣಾಚಲ ಪ್ರದೇಶ, ಮಧ್ಯ ಪ್ರದೇಶ, ಕೇರಳ, ಪಶ್ಚಿಮ ಬಂಗಾಳ, ಜಮ್ಮು ಕಾಶ್ಮೀರ, ಹರಿಯಾಣ, ಪಂಜಾಬ, ಗುಜರಾತ್ ಮತ್ತು ಕರ್ನಾಟಕ ಮುಖ್ಯವಾದವು.

3) ಉನ್ನತ ತಂತ್ರಜ್ಞಾನ (AT : Advanced Technology) :

ಮಾನವನ ಜ್ಞಾನ ಅಭಿವೃದ್ಧಿ ಹೊಂದಿದಂತೆ ಉನ್ನತ ಅಥವಾ ಸುಧಾರಿಸಿದ ತಂತ್ರಜ್ಞಾನ ಬಹುತೇಕವಾಗಿ ಬಳಕೆಯಾಗುತ್ತಿದ್ದು, ಕಾನೂನಾತ್ಮಕವಾಗಿ ಕೇಂದ್ರ ಸರಕಾರವು ನವಂಬರ್ 1990 ರಲ್ಲಿ (Advanced Technology Attachment) "ಉನ್ನತ ತಂತ್ರಜ್ಞಾನದ" ಬಳಕೆಯನ್ನು ಅಧಿಕೃತವಾಗಿ ಜಾರಿಗೆ ತಂದಿತು. ಇದರಿಂದಾಗಿ ಟೆಲಿಫೋನ್, ಅಂತರ್‌ಜಾಲ ಸಂಪರ್ಕ, ರಕ್ಷಣಾ ಇಲಾಖೆಗೆ ಸಂಬಂಧಿಸಿದಂತೆ ಫೋನ್, ಯುದ್ಧ ಸಾಮಗ್ರಿಗಳ ತಯಾರಿಕೆ, ಅಣುಬಾಂಬ್ ತಯಾರಿಕೆ, ಉಪಗ್ರಹ ಉಡಾವಣೆ, ಚಂದ್ರನ ಮೇಲೆ ಪಾದಾರ್ಪಣೆ, ಸರಕಾರಿ ಕಚೇರಿಗಳಲ್ಲಿ ಪಾರದರ್ಶಕ ಇ–ಆಡಳಿತ. (ಉದಾ : ನೆಮ್ಮದಿ, ಆಧಾರ ಸಕಾಲ ಇತ್ಯಾದಿ,) ಜಾಗತಿಕ ಆರ್ಥಿಕ ವ್ಯವಸ್ಥೆ ಸುಧಾರಣೆ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಚುನಾವಣೆಗಳಿಗೆ ಸಂಬಂಧಿಸಿದಂತೆ ಉನ್ನತ ತಂತ್ರಜ್ಞಾನ ಬಳಸಿಕೊಳ್ಳುವುದಾಗಿದೆ.

ಅಭ್ಯಾಸಗಳು

I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.

1) ಬೆಂಗಾಲ್ ಐರನ್ ಕಂಪನಿಯು ಪಶ್ಚಿಮ ಬಂಗಾಳದ ________ ಎಂಬಲ್ಲಿ ಸ್ಥಾಪಿತಗೊಂಡಿತು.
2) ವಿವಿಧ ಬಗೆಯ ನಾರುಗಳಿಂದ ಬಟ್ಟೆಯನ್ನು ತಯಾರಿಸುವುದನ್ನೇ ___________ ಎಂದು ಕರೆಯುವರು.
3) ಸಕ್ಕರೆ ಕೈಗಾರಿಕೆಯ ಮುಖ್ಯ ಕಚ್ಚಾ ವಸ್ತು ___________ .
4) ಭಾರತದ ಮೊದಲ ಕಾಗದದ ಕೈಗಾರಿಕೆಯು ___________ ನದಿಯ ದಡದಲ್ಲಿ ಸ್ಥಾಪನೆಗೊಂಡಿತು.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.

1) ಕೈಗಾರಿಕಾ ವಲಯಗಳ ಪಟ್ಟಿ ತಯಾರಿಸಿ.
2) ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಇರುವ ಸ್ಥಳಗಳಾವುವು?
3) ಗಂಗಾನದಿ ಬಯಲು ಪ್ರದೇಶದಲ್ಲಿ ಸಕ್ಕರೆ ಕೈಗಾರಿಕೆಯು ಹೆಚ್ಚು ಕೇಂದ್ರೀಕೃತವಾಗಿದೆ. ಏಕೆ?
4) ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವವು?
5) ಕಾಗದ ತಯಾರಿಕೆಯಲ್ಲಿ ಬಳಸುವ ಕಚ್ಚಾವಸ್ತುಗಳು ಯಾವುವು ?
6) ಹತ್ತಿ ಬಟ್ಟೆ ಕೈಗಾರಿಕೆಯ ಹಂಚಿಕೆಯನ್ನು ವಿವರಿಸಿ.
7) ಜೈವಿಕ ತಂತ್ರಜ್ಞಾನದಿಂದ ಕೃಷಿ ಕ್ಷೇತ್ರದ ಮೇಲಿನ ಪರಿಣಾಮಗಳೇನು ?
8) ಸುಧಾರಿತ ತಂತ್ರಜ್ಞಾನದ ಬಳಕೆಯಿಂದ ಆದ ಬದಲಾವಣೆಗಳೇನು ?

III. 'ಅ' ಪಟ್ಟಿಯಲ್ಲಿರುವ ನಗರಗಳಿಗೆ 'ಬ' ಪಟ್ಟಿಯಲ್ಲಿನ ಕೈಗಾರಿಕೆಗಳನ್ನು ಹೊಂದಿಸಿ ಬರೆಯಿರಿ.

ಅ	ಬ
1) ಮುಂಬಯಿ	ಎ) 'ಸಿಲಿಕಾನ್ ಸಿಟಿ'
2) ಬೆಂಗಳೂರು	ಬಿ) ಸಕ್ಕರೆ ಕೈಗಾರಿಕೆಗಳು
3) ಭದ್ರಾವತಿ	ಸಿ) ಮ್ಯಾಂಚೆಸ್ಟರ್ ಆಫ್ ಇಂಡಿಯಾ
4) ಬೆಳಗಾವಿ ಜಿಲ್ಲೆ	ಡಿ) ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಕಂಪನಿ
	ಇ) ಜೈವಿಕ ತಂತ್ರಜ್ಞಾನ

IV. ಚಟುವಟಿಕೆಗಳು :

1) ಭಾರತದ ನಕ್ಷೆ ಬರೆದು ವಿವಿಧ ಕೈಗಾರಿಕಾ ಪ್ರದೇಶಗಳನ್ನು ಗುರುತಿಸಿ.

V. ಯೋಜಿತ ಕಾರ್ಯ :

ನಿಮ್ಮ ಸಮೀಪದ ಯಾವುದಾದರೊಂದು ಕೈಗಾರಿಕೆಗೆ ಭೇಟಿ ನೀಡಿ, ಅಲ್ಲಿ ಪೂರೈಕೆಯಾಗುವ ಕಚ್ಚಾವಸ್ತುಗಳು ಉತ್ಪಾದಿಸುವ ವಸ್ತುವಿನ ಬಗ್ಗೆ ಮಾಹಿತಿ ಸಂಗ್ರಹಿಸಿ.

ಅಧ್ಯಾಯ–11

ಸಂಪರ್ಕ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಸಮೂಹ ಮಾಧ್ಯಮಗಳ ಬಗ್ಗೆ ತಿಳಿಯುವುದು.*
- *ಸಂಪರ್ಕದ ವಿಧಗಳು, ಸಂಪರ್ಕದ ಪ್ರಾಮುಖ್ಯತೆ.*
- *ಭೌಗೋಳಿಕ ಮಾಹಿತಿ ವ್ಯವಸ್ಥೆ.*
- *ಜಿ.ಪಿ.ಎಸ್.ದೂರಸಂವೇದಿ ತಂತ್ರಜ್ಞಾನ*

ಇಂದು ಹಲವಾರು ಸಂಪರ್ಕ ಮಾಧ್ಯಮಗಳು ರೂಢಿಯಲ್ಲಿದ್ದು, ವಿವಿಧ ಪ್ರದೇಶಗಳ ಜನರೊಡನೆ ಸುಲಭವಾಗಿ ಸಂಪರ್ಕಿಸಬಹುದು. ಹೀಗೆ ಎಲ್ಲಾ ಜನರನ್ನು ತಲುಪುವ ಸಂಪರ್ಕ ಮಾಧ್ಯಮವೇ 'ಸಮೂಹ ಮಾಧ್ಯಮ'. ಸಾಂಪ್ರದಾಯಿಕ ವೃತ್ತ ಪತ್ರಿಕೆ, ರೇಡಿಯೋಗಳಲ್ಲದೆ, ವಿದ್ಯುನ್ಮಾನ ತಾಂತ್ರಿಕ ಸಂಶೋಧನೆಗಳ ಸಂಪರ್ಕದ ಜಾಲವು ಭಾರತದಲ್ಲಿ ವಿಸ್ತೃತವಾಗಿ ಹಂಚಿಕೆಯಾಗಿದ್ದು, ಇಂದು ಮಹತ್ತರವಾದ ಕಾರ್ಯವನ್ನು ನಿರ್ವಹಿಸುತ್ತಿದೆ.

ಸಂಪರ್ಕದ ವಿಧಗಳು :

ವಿದ್ಯುನ್ಮಾನ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಇಂದು ಹಲವಾರು ಸಂಪರ್ಕ ಮಾಧ್ಯಮಗಳು ರೂಢಿಗೆ ಬಂದಿವೆ. ಸಾಂಪ್ರದಾಯಿಕ ವಿಧಾನಗಳಾದ ಅಂಚೆ ಮತ್ತು ವೃತ್ತ ಪತ್ರಿಕೆಗಳ ಜೊತೆಗೆ ರೇಡಿಯೋ, ದೂರದರ್ಶನ, ಕೃತಕ ಉಪಗ್ರಹಗಳು, ಕಂಪ್ಯೂಟರ್ ಜಾಲ, ಅಂತರ್ಜಾಲ, ಇ–ಮೇಲ್, ಸಂಚಾರಿ ದೂರವಾಣಿಗಳು ಮೊದಲಾದವುಗಳು ಇಂದು ಸಂಪರ್ಕದ ಪ್ರಧಾನ ವಿಧಗಳಾಗಿವೆ.

ಸಂಪರ್ಕದ ಪ್ರಾಮುಖ್ಯತೆ :

- ಸಂಪರ್ಕ ಮಾಧ್ಯಮಗಳು ದೇಶದ ಜನರಿಗೆ ವಿವಿಧ ಪ್ರದೇಶದ ಆಗು–ಹೋಗುಗಳನ್ನು ತಿಳಿಯಲು ಅಗತ್ಯವಾಗಿದೆ.
- ಸರಕಾರದ ನೀತಿ ನಿಯಮಗಳನ್ನು ತಿಳಿಯಪಡಿಸಿ ಅದರ ಬಗ್ಗೆ ತಿಳುವಳಿಕೆಯನ್ನು ಮೂಡಿಸ ಬಹುದು.
- ಜನರಿಗೆ ಬೇಕಾದ ವ್ಯವಸಾಯ, ಕೈಗಾರಿಕೆ ಮುಂತಾದವುಗಳ ಜ್ಞಾನವನ್ನು ನೀಡುವುದರಿಂದ ಅಭಿವೃದ್ಧಿಯ ಪ್ರಕ್ರಿಯೆಯು ಶೀಘ್ರವಾಗಿ ಮುಂದುವರಿಯುವುದು.
- ವಾಣಿಜ್ಯ ವ್ಯಾಪಾರದ ಅಭಿವೃದ್ಧಿಗೆ ಸಂಪರ್ಕ ಮಾಧ್ಯಮಗಳು ಮೂಲ ಅಗತ್ಯವಾಗಿವೆ.
- ದೇಶದ ಏಕತೆ, ಒಗ್ಗಟ್ಟು ಹಾಗೂ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಅನುಕೂಲವಾಗುವುದು.

1) ಭೌಗೋಳಿಕ ಮಾಹಿತಿ ವ್ಯವಸ್ಥೆ (GIS-Geographical Information System) :

ಪೃಥ್ವಿಯ ಮೇಲ್ಮೈನ ಅಂಕಿ–ಅಂಶ ಅಥವಾ ಮಾಹಿತಿಯನ್ನು ಕಲೆಹಾಕುವ, ಸಂಗ್ರಹಿಸುವ, ಅಗತ್ಯವಿದ್ದಾಗ ಬಳಕೆ ಮಾಡುವ, ಮಾರ್ಪಡಿಸುವ ಹಾಗೂ ತೋರಿಸುವ ಪ್ರಬಲ ಸಲಕರಣೆಯ ಸಮೂಹವನ್ನು ಭೌಗೋಳಿಕ ಮಾಹಿತಿ (GIS) ವ್ಯವಸ್ಥೆ ಎಂದು ಕರೆಯಲಾಗಿದೆ. 1960 ರಲ್ಲಿ ಕೆನಡಾದಲ್ಲಿ ಆರಂಭಗೊಂಡು ಇಂದು ಇದರ ಬಳಕೆ ವಿಶ್ವವ್ಯಾಪಿಯಾಗಿದೆ.

ಭೂ ಮೇಲ್ಮೈ ವಿವಿಧ ಬಗೆಯ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಲಕ್ಷಣಗಳೆರಡನ್ನು ಸಹ ಒಳಗೊಂಡಿರುವುದು. ಇದರಲ್ಲಿ ಜಿಲ್ಲೆಗಳು, ಭೂಸ್ವರೂಪಗಳು, ನದಿ ವ್ಯವಸ್ಥೆ, ವಸತಿಗಳ ಹಂಚಿಕೆ, ಭೂ ಸ್ವರೂಪ, ಭೂ ಬಳಕೆ, ಮಣ್ಣು–ಬೆಳೆಗಳ ಹಂಚಿಕೆ ಮೊದಲಾದವುಗಳನ್ನು ಒಂದರ ಮೇಲೊಂದರಂತೆ ಇರಿಸಿ ಅವುಗಳ ಸಂಬಂಧವನ್ನು ಸುಲಭವಾಗಿ ವಿಶ್ಲೇಷಿಸಬಹುದು. ಹೀಗೆ "ಜಿ.ಐ.ಎಸ್. ಕಂಪ್ಯೂಟರ್ ಆಧಾರಿತ ಭೂಮೇಲ್ಮೈನ ವೈವಿಧ್ಯಮಯ ಅಂಕಿ–ಅಂಶಗಳನ್ನು ಸಂಸ್ಕರಿಸುವ ಮತ್ತು ವಿಶ್ಲೇಷಿಸುವ ಒಂದು ವ್ಯವಸ್ಥೆ"ಯಾಗಿದೆ.

ಉಪಯೋಗಗಳು :

- ಜಿ.ಐ.ಎಸ್ ತಂತ್ರಜ್ಞಾನ ಆಧಾರಿತ ನಕ್ಷೆಗಳು ಹೆಚ್ಚು ಆಕರ್ಷಕ ಹಾಗೂ ಮಾಹಿತಿಯನ್ನು ಸ್ಪಷ್ಟವಾಗಿ ನೀಡುತ್ತವೆ.
- ವಿವಿಧ ಬಗೆಯ ಭೌಗೋಳಿಕ ಸಾಮಾಜಿಕ, ಆರ್ಥಿಕ ಭೂಮೇಲ್ಮೈ ಮಾಹಿತಿಯನ್ನು ಸುಲಭವಾಗಿ ವಿಶ್ಲೇಷಿಸಬಹುದು ಹಾಗೂ ಅವುಗಳ ಮಾದರಿಯನ್ನು ರಚಿಸಬಹುದು.
- ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಜಿಐಎಸ್ ತಂತ್ರಜ್ಞಾನದ ಪ್ರಾಮುಖ್ಯತೆ ಹೆಚ್ಚು ಕಂಡು ಬರುತ್ತದೆ.
- ಇದು ಕಂಪ್ಯೂಟರ್ ಆಧಾರಿತ ವಿಶ್ಲೇಷಣೆಯಾಗಿದ್ದು, ನಕ್ಷೆಗಳನ್ನು ಅತಿ ಶೀಘ್ರವಾಗಿ, ಅಗತ್ಯಕ್ಕೆ ತಕ್ಕಂತೆ ನಕ್ಷಾ ಶಾಸ್ತ್ರಜ್ಞರ ನೆರವಿಲ್ಲದೆ ಅತಿ ಕಡಿಮೆ ಅವಧಿಯಲ್ಲಿ ಪಡೆಯಬಹುದು ಹಾಗೂ ನಕ್ಷೆಗಳನ್ನು ಮಾರ್ಪಡಿಸಬಹುದು.

ಪ್ರಸ್ತುತ ಬಳಕೆಯಾಗುತ್ತಿರುವ ಭೌಗೋಳಿಕ ಮಾಹಿತಿ ವ್ಯವಸ್ಥೆ ಹಾಗೂ ನಕ್ಷೆಗಳ ರಚನೆಯ ತಂತ್ರಾಂಶದಲ್ಲಿ ಆ್ಯಪಲ್, ಆರ್ಕ್ ಇನ್ ಫೊ, ಆ್ಯಟೋಕ್ಯಾಡ್, ಮ್ಯಾಪ್ ಇನ್ ಫೋ, ಆಕ್‌ವ್ಯೂ ಮೊದಲಾದವುಗಳು ಅತಿ ಮುಖ್ಯವಾಗಿವೆ.

2) ಗ್ಲೋಬಲ್ ಪೊಜಿಶನಿಂಗ್ (GPS) ಸಿಸ್ಟಂ :

ಇದರ ಮುಖ್ಯ ಕಾರ್ಯ ಭೂ ಮೇಲ್ಮೈಯಲ್ಲಿನ ಯಾವುದೇ ಒಂದು ಸ್ಥಿರವಾಗಿರುವ ಅಥವಾ ಚಲಿಸುತ್ತಿರುವ ವಸ್ತು ಅಥವಾ ವ್ಯಕ್ತಿಯ ಸ್ಥಾನವನ್ನು ಅಕ್ಷಾಂಶ ಮತ್ತು ರೇಖಾಂಶಗಳ ಮೂಲಕ ನಿಖರವಾಗಿ ಸೂಚಿಸುವುದು ಹಾಗೂ ಆ ವಸ್ತುವಿನ ಸ್ಥಾನದ ಎತ್ತರವನ್ನು ಸಹ ಸೂಚಿಸುವುದು.

ಈ ವ್ಯವಸ್ಥೆಯು ಇಂದು ಅತಿ ಹೆಚ್ಚು ಉಪಯುಕ್ತತೆಯನ್ನು ಹೊಂದಿದ್ದು, ಹಲವಾರು ಕ್ಷೇತ್ರಗಳಲ್ಲಿ ಲಾಭದಾಯಕವಾಗಿ ಈ ತಂತ್ರಜ್ಞಾನವನ್ನು ಬಳಕೆ ಮಾಡಲಾಗುತ್ತಿದೆ. ಜಿ.ಪಿ.ಎಸ್. ತಂತ್ರಜ್ಞಾನವು ಕೃತಕ ಉಪಗ್ರಹಗಳು ಕಳುಹಿಸುವ ಮಾಹಿತಿ ಹಾಗೂ ಭೂ ಮೇಲ್ಮೈಯಲ್ಲಿ ಯಾವುದೇ ವ್ಯಕ್ತಿಯ ಬಳಿಯಿರುವ ರಿಸೀವರ್‌ಗಳಿಂದ ಕಾರ್ಯ ನಿರ್ವಹಿಸಲ್ಪಡುವುದು.

ಕಾರ್ಯನಿರ್ವಹಣೆ :

ಚರ್ಚಿಸಿ : 'ಮೊಬೈಲ್ ದೂರವಾಣಿಗಳು ಇಂದು ಅನಿವಾರ್ಯ.' ಹೇಗೆ?

ಜಿ.ಪಿ.ಎಸ್ ವ್ಯವಸ್ಥೆಯು 24 ಕೃತಕ ಉಪಗ್ರಹಗಳ ವ್ಯವಸ್ಥೆಯನ್ನು ಒಳಗೊಂಡಿದ್ದು, ಇದನ್ನು ಅಮೆರಿಕಾ ಸಂಯುಕ್ತ ಸಂಸ್ಥಾನವು ಉಡಾಯಿಸಿ ನಿರ್ವಹಿಸುತ್ತಿದೆ. ಇವುಗಳು ಭೂಮಿಯನ್ನು ನಿರಂತರವಾಗಿ ಸುತ್ತುತ್ತಿವೆ. ಪ್ರತಿಯೊಂದು ಉಪಗ್ರಹವು ಪ್ರಬಲವಾದ ಕ್ಯಾಮರಾ ಹಾಗೂ ಸೌರ ಶಾಖದಿಂದ ಚಲಿಸುವ ನಿಖರವಾದ ಗಡಿಯಾರ ಮತ್ತು ಮಾಹಿತಿ ರವಾನೆಯ ಆ್ಯಂಟೆನಾವನ್ನು ಒಳಗೊಂಡಿರುತ್ತದೆ. ಇವುಗಳಿಂದ ಕಳುಹಿಸುವ ಮಾಹಿತಿಯನ್ನು ಭೂಮಿಯಲ್ಲಿ ಯಾವುದೇ ವ್ಯಕ್ತಿಯ ಬಳಿಯಿರುವ ರಿಸ್ಸೀವರ್ ಪಡೆದು ವಿಶ್ಲೇಷಿಸಿ ಆ ವ್ಯಕ್ತಿಯು ಇರುವ ಸ್ಥಾನ ಹಾಗೂ ವ್ಯಕ್ತಿಯು ಇರುವ ಸ್ಥಳದ ಎತ್ತರವನ್ನು ಸೂಚಿಸುವುದು. ಉಪಗ್ರಹಗಳಿಂದ ಪಡೆಯುವ ಮಾಹಿತಿಯ ಆಧಾರದ ಮೇಲೆ ಆ ವಸ್ತುವಿನಿಂದ ಆಯಾ ಉಪಗ್ರಹಗಳು ಎಷ್ಟು ದೂರದಲ್ಲಿವೆ ಎಂಬುದನ್ನು ಲೆಕ್ಕಾಚಾರ ಮಾಡಿ ಆ ವಸ್ತುವಿನ ಸ್ಥಾನವನ್ನು ಅಕ್ಷಾಂಶ ಮತ್ತು ರೇಖಾಂಶಗಳ ಮೂಲಕ ಸ್ಪಷ್ಟವಾಗಿ ತಿಳಿಯಪಡಿಸುವುದು. ಇದರಿಂದಾಗಿ ಜಿ.ಪಿ.ಎಸ್. ವ್ಯವಸ್ಥೆಯನ್ನು 'ಮಾರ್ಗಸೂಚಿ' ಅಥವಾ ಪಾತ್ ಫೈಂಡರ್ (Path finder) ಎಂದೂ ಕರೆಯುವರು. ಇಂದು ಜಿಪಿಎಸ್ ವ್ಯವಸ್ಥೆಯು ರಕ್ಷಣಾ ದೃಷ್ಟಿಯಿಂದಲೂ ಅತಿಮುಖ್ಯ. ಇದರಿಂದಾಗಿ ಭಾರತವು ತನ್ನದೇ ಆದ ಪ್ರಾದೇಶಿಕ ಜಿಪಿಎಸ್ ವ್ಯವಸ್ಥೆಯನ್ನು ಹೊಂದಲು ಏಳು ಉಪಗ್ರಹಗಳನ್ನು ಉಡಾಯಿಸಿದೆ.

ಉಪಯೋಗಗಳು :

- ಪ್ರಾಕೃತಿಕ ವಿಕೋಪಗಳ ಸ್ಪಷ್ಟ ಭೌಗೋಳಿಕ ಸ್ಥಾನವನ್ನು ಗುರುತಿಸಿ ಪರಿಹಾರ ಕೈಗೊಳ್ಳಲು ಇವುಗಳು ಉಪಯುಕ್ತ.
- ಅರಣ್ಯ ಹಾಗೂ ಪರ್ವತ ಚಾರಣ ಮಾಡುವವರಿಗೆ ಮಾರ್ಗ ತಿಳಿಯಲು ಉಪಯುಕ್ತವಾಗಿವೆ.
- ಸೈನಿಕರು, ವೈಮಾನಿಕರು, ಮೀನುಗಾರರು ಹಾಗೂ ನಾವಿಕರು ಸರಿಯಾದ ಮಾರ್ಗವನ್ನು ಅನುಸರಿಸಲು ಜಿ.ಪಿ.ಎಸ್. ವ್ಯವಸ್ಥೆ ಅಗತ್ಯ ಮಾಹಿತಿಯನ್ನು ನೀಡುವುದು. ಇಂದು ಸಾರಿಗೆ ಸಿಬ್ಬಂದಿ ನಿರ್ವಹಣೆಯಲ್ಲಿಯೂ ಇದರ ಬಳಕೆ ಹೆಚ್ಚಾಗಿದೆ.

3) ದೂರ ಸಂವೇದಿ ತಂತ್ರಜ್ಞಾನ (Remote Sensing Technology) : ಭೂ ಮೇಲ್ಮೈಗೆ ಸಂಬಂಧಿಸಿದ ಅಂಕಿ–ಅಂಶಗಳ ಸಂಗ್ರಹಣೆಯಲ್ಲಿ ಇಂದು ಬಳಕೆಯಲ್ಲಿರುವ ಆಧುನಿಕ ತಂತ್ರಜ್ಞಾನಗಳಲ್ಲಿ 'ದೂರಸಂವೇದಿ' ಅತಿ ಮುಖ್ಯವಾದುದು. ವಸ್ತುಗಳನ್ನು ಭೌತಿಕವಾಗಿ ಸ್ಪರ್ಶಿಸದೆ ದೂರದಿಂದಲೇ ಅವುಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಣೆಯನ್ನು 'ದೂರ ಸಂವೇದಿ' **(Remote Sensing)** ಎಂದು ಕರೆಯುವರು. ವೈಮಾನಿಕ ಚಿತ್ರಗಳು ಹಾಗೂ ಉಪಗ್ರಹಗಳಿಂದ ಪಡೆದ ಚಿತ್ರಗಳು ದೂರ ಸಂವೇದಿ ಚಿತ್ರಗಳಾಗಿವೆ.

ಉಪಯೋಗಗಳು :

- ಈ ಚಿತ್ರಗಳಿಂದ ಆ ಕಾಲದ ಅವಧಿಯಲ್ಲಿನ ನೈಜ ಹಾಗೂ ನಂಬಲರ್ಹವಾದ ಸ್ಪಷ್ಟ ಮಾಹಿತಿ ದೊರೆಯುವುದು.
- ಇದು ಭೂ ಮೇಲ್ಮೈನ ಸರ್ವೇಕ್ಷಣೆಗಿಂತ ಅತಿ ಶೀಘ್ರ, ಅಲ್ಪಾವಧಿ ಹಾಗೂ ಕಡಿಮೆ ವೆಚ್ಚದ ಮಾಹಿತಿ ಸಂಗ್ರಹಣೆಯ ವಿಧಾನವಾಗಿದೆ.
- ಇದರಿಂದ ಪಡೆಯುವ ಮಾಹಿತಿಯನ್ನು ಸುಲಭವಾಗಿ ಕಂಪ್ಯೂಟರುಗಳಿಂದ ವಿಶ್ಲೇಷಿಸಬಹುದು.
- ಹವಾಮಾನದ ವೈಪರೀತ್ಯ ಹಾಗೂ ಭೂ ಮೇಲ್ಮೈ ಅಡಚಣೆಗಳಿದ್ದರೂ ದೂರ ಸಂವೇದಿ ಚಿತ್ರಗಳನ್ನು ಉಪಗ್ರಹಗಳಿಂದ ಪಡೆಯಬಹುದು.
- ಚಂಡಮಾರುತ, ಬಿರುಗಾಳಿ, ಪ್ರವಾಹ, ಬರಗಾಲ ಮೊದಲಾದ ನೈಸರ್ಗಿಕ ಪ್ರಕೋಪಗಳ ಪ್ರಭಾವದ ಪ್ರದೇಶ ಹಾಗೂ ಅವುಗಳ ಅನಾಹುತಗಳ ತೀವ್ರತೆಯ ಅಧ್ಯಯನಗಳಿಗೆ ದೂರಸಂವೇದಿ ಚಿತ್ರಗಳು ಅತ್ಯಂತ ಉಪಯುಕ್ತವಾಗಿವೆ.
- ಉಪಗ್ರಹ ಚಿತ್ರಗಳು, ಭೂಬಳಕೆ, ಅರಣ್ಯ ಪ್ರದೇಶ, ಜಲರಾಶಿಗಳು, ವಸತಿ ಪ್ರದೇಶಗಳು, ಬೆಳೆಗಳ ಹಂಚಿಕೆ, ಭೂ ಸವೆತ, ಕರಾವಳಿ ಹೀಗೆ ವಿವಿಧ ಬಗೆಯ ಪ್ರಾಕೃತಿಕ ಸಂಪನ್ಮೂಲಗಳ ವಿಶ್ಲೇಷಣೆಯಲ್ಲಿ ಅತ್ಯಂತ ಮಹತ್ತರವಾದವು.

ಅಭ್ಯಾಸಗಳು

I. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.

1) ಸಂಪರ್ಕ ಮಾಧ್ಯಮ ಎಂದರೇನು?
2) ಸಂಪರ್ಕದ ವಿಧಗಳಾವವು?
3) ಸಂಪರ್ಕದ ಪ್ರಾಮುಖ್ಯತೆಯನ್ನು ತಿಳಿಸಿರಿ.
4) ಜಿ.ಐ.ಎಸ್. ಎಂದರೇನು? ಹಾಗೂ ಅದರ ಉಪಯೋಗಗಳನ್ನು ತಿಳಿಸಿರಿ.
5) ದೂರ ಸಂವೇದಿ ತಂತ್ರಜ್ಞಾನವನ್ನು ಕುರಿತು ಬರೆಯಿರಿ.

II. ಚಟುವಟಿಕೆ :

1) ಭಾರತದ ಕೃತಕ ಉಪಗ್ರಹ ಉಡಾವಣೆಯ ಚಿತ್ರಗಳನ್ನು ಸಂಗ್ರಹಿಸಿ.

III. ಯೋಚಿತ ಕಾರ್ಯ

1) ಕರ್ನಾಟಕದಲ್ಲಿ ಇಸ್ರೊ ಕಾರ್ಯ ಚಟುವಟಿಕೆಗಳ ಬಗ್ಗೆ ವಿಷಯ ಸಂಗ್ರಹಿಸಿ.

ಅಧ್ಯಾಯ-12

ನೈಸರ್ಗಿಕ ವಿನಾಶಕಾರಕಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ನೈಸರ್ಗಿಕ ಪ್ರಕೋಪಗಳಾದ ಚಂಡಮಾರುತಗಳು, ಕಾರಣಗಳು, ಪರಿಣಾಮಗಳು, ಮುನ್ನೆಚ್ಚರಿಕೆ ಕ್ರಮಗಳು.*
- *ಪ್ರವಾಹಗಳು, ಕಾರಣಗಳು, ಒಳಪಡುವ ಪ್ರದೇಶಗಳು, ಪರಿಣಾಮಗಳು, ನಿಯಂತ್ರಣಗಳು.*
- *ಭೂಕುಸಿತದ, ಕಡಲಕೊರೆತ, ಭೂಕಂಪಗಳು.*

ನೈಸರ್ಗಿಕ ವಿನಾಶಕಾರಕಗಳು (Natural Disasters) :

"ಪ್ರಕೃತಿಯಲ್ಲಿ ಸಂಭವಿಸುವ ಹಲವಾರು ಘಟನೆಗಳು ಮಾನವಾತೀತವಾದವು. ಇವುಗಳನ್ನು ತಡೆಗಟ್ಟುವುದು, ಅವುಗಳು ಎಲ್ಲಿ, ಯಾವಾಗ, ಹೇಗೆ ಸಂಭವಿಸುತ್ತವೆಯೆಂಬುದನ್ನು ಕರಾರುವಕ್ಕಾಗಿ ಊಹಿಸುವುದು ಇಂದಿನ ವೈಜ್ಞಾನಿಕ ಕಾಲದಲ್ಲಿಯೂ ಅಸಾಧ್ಯವಾಗಿದೆ". ಪ್ರಾಕೃತಿಕವಾಗಿ ಸಂಭವಿಸುವ ಮಾನವನ ಪ್ರಾಣ, ಆಸ್ತಿ – ಪಾಸ್ತಿ ಸೇರಿದಂತೆ ನೈಸರ್ಗಿಕ ಸಂಪತ್ತುಗಳ ನಾಶಕ್ಕೆ ಕಾರಣವಾಗುವ ವಿನಾಶಕಾರಿ ಘಟನೆಗಳನ್ನು ಪ್ರಾಕೃತಿಕ ವಿನಾಶಕಾರಗಳೆಂದು ಕರೆಯುವರು". ಇಂತಹ ಪ್ರಾಕೃತಿಕ ವಿನಾಶಕಾರಕಗಳಲ್ಲಿ ಭೂಕಂಪಗಳು, ಪ್ರವಾಹಗಳು ಮತ್ತು ಕ್ಷಾಮಗಳು, ಚಂಡಮಾರುತಗಳು, ಭೂ ಕುಸಿತ, ಕರಾವಳಿ ಕೊರೆತ, ಹಿಮಪಾತ ಮೊದಲಾದವು ನೈಸರ್ಗಿಕ ವಿನಾಶಕಾರಕಗಳಾಗಿವೆ.

ಚಂಡಮಾರುತಗಳು (Cyclones) :

ಪೃಥ್ವಿಯ ಮೇಲೆ ಸಂಭವಿಸುವ ನೈಸರ್ಗಿಕ ವಿಕೋಪಗಳಲ್ಲಿ ಆವರ್ತಗಾಳಿಗಳು ಅತ್ಯಂತ ಹಾನಿಕಾರಕ ಮತ್ತು ವಿನಾಶಕಾರಕಗಳಾಗಿವೆ. ಈ ಗಾಳಿಗಳನ್ನು ಸಾಮಾನ್ಯವಾಗಿ ಚಂಡ ಮಾರುತಗಳೆಂದು ಕರೆಯಲಾಗುವುದು.

ಚಂಡ ಮಾರುತಗಳು ಉಂಟಾಗಲು ಕಾರಣಗಳು : ಚಂಡ ಮಾರುತಗಳು ಬಂಗಾಳಕೊಲ್ಲಿಯಲ್ಲಿ ಉಗಮಗೊಳ್ಳುತ್ತವೆ. ಮೂರು ಕಡೆಗಳಲ್ಲಿ ಭೂಭಾಗವಿದ್ದು ಭೂಮಿ ಸಾಗರ ಭಾಗಗಳ ನಡುವೆ ಉಷ್ಣಾಂಶ ಹಾಗೂ ಒತ್ತಡದಲ್ಲಿ ತೀವ್ರ ವ್ಯತ್ಯಾಸವಿದ್ದು ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ಉಂಟಾಗಲು ಕಾರಣವಾಗಿವೆ.

- ಸಾಮಾನ್ಯವಾಗಿ ಇವು ಬಂಗಾಳ ಉಪಸಾಗರದಲ್ಲಿ ಉಗಮಗೊಂಡು ಪಶ್ಚಿಮದ ಕಡೆಗೆ ಚಲಿಸಿ ತಮಿಳು ನಾಡು ಅಥವಾ ಆಂಧ್ರ ಪ್ರದೇಶದ ತೀರಕ್ಕೆ ಅಪ್ಪಳಿಸುತ್ತವೆ. ಕೆಲವೊಮ್ಮೆ ವಾಯವ್ಯಕ್ಕೆ ಚಲಿಸಿ ಒಡಿಶಾ ತೀರವನ್ನು ಅಪ್ಪಳಿಸುತ್ತವೆ. ಭಾರತದಲ್ಲಿ ಚಂಡಮಾರುತಗಳು ಎರಡು ಅವಧಿಯಲ್ಲಿ ಹೆಚ್ಚು ಸಂಭವಿಸುತ್ತವೆ. ಇವುಗಳು


ನಿಮಗಿದು ತಿಳಿದಿರಲಿ

ಚಂಡಮಾರುತಗಳಿಗೆ 2004ರ ಅಂತರಾಷ್ಟ್ರೀಯ ಒಪ್ಪಂದದ ರೀತಿಯಲ್ಲಿ ಹೆಸರುಗಳನ್ನು ನೀಡಲಾಗುವದು. ಇದರಂತೆ ಉತ್ತರ ಹಿಂದೂ ಮಹಾಸಾಗರದ ತೀರವನ್ನು ಹೊಂದಿರುವ ಬಾಂಗ್ಲಾ, ಭಾರತ, ಮಾಲ್ದೀವ್ಸ, ಮಯಾನ್ಮಾರ, ಓಮನ್, ಪಾಕಿಸ್ತಾನ, ಶ್ರೀಲಂಕಾ ಮತ್ತು ಥೈಲ್ಯಾಂಡಗಳು ತಮ್ಮ ಆಯ್ಕೆಯ ಚಂಡ ಮಾರುತಗಳ ಹೆಸರನ್ನು ಭಾರತೀಯ ಹವಾಮಾನ ಸಂಸ್ಥೆಯ ಪ್ರಾದೇಶಿಕ ಕಚೇರಿ ದೆಹಲಿಗೆ ಸಲ್ಲಿಸುತ್ತವೆ. ಇತ್ತೀಚೆಗೆ ಸಂಭವಿಸಿದ ಚಂಡಮಾರುತವನ್ನು ಪಾಕಿಸ್ತಾನ ಸೂಚಿಸಿದ "ಲೈಲಾ" ಎಂದು ಕರೆಯಲಾಯಿತು. ನಂತರದಲ್ಲಿ ಶ್ರೀಲಂಕಾದ 'ಬಂಡೂ' ಥೈಲ್ಯಾಂಡಿನ 'ಫೆಟ್', ಬಾಂಗ್ಲಾದ 'ಗಿರಿ' ಭಾರತದ 'ಜಲ್' ಮಾಲ್ದೀವ್ಸನ ಲೈಲಾ ಮಯನ್ಮಾರಿನ 'ಥಾನೆ' ಓಮನ್‌ನ 'ಮುಜಾನ್.' ಎಂದು ಕರೆದಿದೆ.

ಅಕ್ಟೋಬರ್–ನವಂಬರ್ ತಿಂಗಳಲ್ಲಿ ಹೆಚ್ಚು ಸಂಭವಿಸುತ್ತವೆ. ಮೇ–ಜೂನ್ ತಿಂಗಳಲ್ಲಿಯೂ ಸಂಭವಿಸುತ್ತವೆ.

ಚಂಡಮಾರುತದ ಪರಿಣಾಮಗಳು :

- ಕೆಲವು ವೇಳೆ ಚಂಡಮಾರುತ ಅಪ್ಪಳಿಸಿದ ಪ್ರದೇಶದ ಜನಜೀವನವೇ ಸಂಪೂರ್ಣ ಮಾರ್ಪಾಡು ಹೊಂದುವುದು.
- ಇವುಗಳಿಂದ ಅಪಾರ ಸಾವು ನೋವು ಉಂಟಾಗುತ್ತದೆ.
- ಸಾಗರದ ಅಲೆಗಳು ಒಳನಾಡಿಗೆ ಚಾಚಿ ಜಲರಾಶಿಗಳು ಲವಣಯುಕ್ತವಾಗುತ್ತವೆ.
- ಬೆಳೆಗಳು ಸಂಪೂರ್ಣ ನಾಶವಾಗುತ್ತವೆ.



- ಸಾರಿಗೆ ಸಂಪರ್ಕ, ವಿದ್ಯುತ್ ಸೌಕರ್ಯ, ಜನಜೀವನ ಅಸ್ತವ್ಯಸ್ತವಾಗುವುದು.
- ಚಂಡಮಾರುತಗಳು ನಿಂತ ನಂತರ ಸಾಂಕ್ರಾಮಿಕ ರೋಗಗಳು ಅಪಾರ ಹಾನಿಯನ್ನುಂಟು ಮಾಡುತ್ತವೆ.

ಮುನ್ನೆಚ್ಚರಿಕೆಯ ಕ್ರಮಗಳು :

- ಅಪಾಯಕಾರಿ ತಗ್ಗು ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸುವುದು.
- ವಿದ್ಯುಜ್ಜನಕ ಯಂತ್ರಗಳು, ದೋಣಿಗಳು, ಹೆಲಿಕಾಪ್ಟರ್ ಮೊದಲಾದ ಸಾರಿಗೆಗಳನ್ನು ಸಜ್ಜಾಗಿರಿಸುವುದು.
- ರೈಲು–ಬಸ್ಸು ಮೊದಲಾದ ಮಾರ್ಗಗಳನ್ನು ಚಂಡಮಾರುತ ಪ್ರಭಾವದ ವಲಯದಿಂದ ಬದಲಾಯಿಸುವುದು.
- ಸಮೂಹ ಮಾಧ್ಯಮಗಳ ಮೂಲಕ ಚಂಡಮಾರುತಗಳ ಬಗ್ಗೆ ವಿವರಗಳನ್ನು ನಿರಂತರವಾಗಿ ಜನರಿಗೆ ನೀಡುವುದು.
- ಅಗತ್ಯವಿರುವ ಸೇನಾ ತುಕಡಿಗಳನ್ನು ಸಿದ್ಧಗೊಳಿಸಿಡುವುದು.
- ಸಾಕಷ್ಟು ಸಿಹಿನೀರು ಹಾಗೂ ಉಡುಪುಗಳನ್ನು ಸಂಗ್ರಹಿಸಿಡುವುದು.
- ಔಷಧ ಹಾಗೂ ಇತರ ವೈದ್ಯಕೀಯ ನೆರವಿಗಾಗಿ ಸಿದ್ಧರಾಗಿರುವುದು.

2) ಪ್ರವಾಹಗಳು (Floods) :

> ***ನಿಮಗಿದು ತಿಳಿದಿರಲಿ***
>
> *ಜುಲೈ 17, 2013ರಂದು ಇತ್ತೀಚೆಗೆ ಉತ್ತರಾಖಂಡದಲ್ಲಿ ಮಂದಾಕಿನಿನದಿಯ ಪ್ರವಾಹದಿಂದ ಕೇದಾರನಾಥದಲ್ಲಿ ಉಂಟಾದ ಅನಾಹುತ ಅತ್ಯಂತ ಭೀಕರವಾಗಿದ್ದಿತು.*

ಭಾರತವು ಪ್ರತಿ ವರ್ಷ ಎದುರಿಸುತ್ತಿರುವ ನೈಸರ್ಗಿಕ ವಿಕೋಪಗಳಲ್ಲಿ ಪ್ರವಾಹಗಳು ಅತ್ಯಂತ ಅಪಾಯಕಾರಿಯಾಗಿವೆ. ಅತ್ಯಧಿಕ ಮಳೆ ಸುರಿದಾಗ ಮತ್ತು ಅತ್ಯಧಿಕ ಪ್ರಮಾಣದಲ್ಲಿ ಹಿಮ ಕರಗಿದಾಗ ನದಿಗಳ ನೀರಿನ ಪ್ರಮಾಣವು ಅವುಗಳ ಪಾತ್ರದ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ನದಿ ದಂಡೆಗಳ ಇಕ್ಕೆಲಗಳಲ್ಲಿ ಉಕ್ಕಿ ಹರಿಯುವುದು. ಇದನ್ನು **ನದಿ ಪ್ರವಾಹ**ಗಳೆಂದು ಕರೆಯುತ್ತಾರೆ. ನದಿಗಳ ನೀರು ನದಿಯ ಪಾತ್ರದಲ್ಲಿ ಹರಿಯಲಾಗದೆ ಎರಡೂ ಕಡೆಯ ತಗ್ಗು ಭಾಗಗಳನ್ನು ಆವರಿಸುವುದು. ಕೆಲವು ವೇಳೆ ಒಂದೇ ಕಡೆಯಲ್ಲಿ ಧಾರಾಕಾರವಾದ ಮಳೆ ಬೀಳುವುದರಿಂದ ಒಮ್ಮೆಲೇ ನದಿಗಳು ಉಕ್ಕಿ ಹರಿಯುತ್ತವೆ.

ಪ್ರವಾಹಗಳು ಉಂಟಾಗಲು ಕಾರಣಗಳು (Causes of Floods) :

- ಮಾನ್‌ಸೂನ್ ಮಳೆ ಅನಿಶ್ಚಿತ. ಕೆಲವು ವೇಳೆ ಅತ್ಯಧಿಕ ಮಳೆ ಬೀಳುವುದರಿಂದ ಪ್ರವಾಹಗಳುಂಟಾಗುತ್ತವೆ.
- ನದಿಯ ಪಾತ್ರಗಳಲ್ಲಿ ಹೂಳು ತುಂಬಿ ನೀರು ಇಕ್ಕೆಲಗಳಲ್ಲಿಯೂ ಹರಿದು ಪ್ರವಾಹಗಳು ಉಂಟಾಗುತ್ತವೆ.
- ಅಣೆಕಟ್ಟು ಹಾಗೂ ಇತರೆ ಅಡ್ಡಗಟ್ಟೆಗಳು ಒಡೆದು ಒಮ್ಮೆಗೇ ಬಿಡುಗಡೆಯಾಗುವ ನೀರಿನಿಂದ ಪ್ರವಾಹಗಳು ಉಂಟಾಗುತ್ತವೆ.

- ನದಿಗಳು ಪಾತ್ರವನ್ನು ಬದಲಾಯಿಸುವುದರಿಂದಲೂ ಪ್ರವಾಹಗಳು ಉಂಟಾಗುತ್ತವೆ.
- ಚಂಡಮಾರುತಗಳಿಂದ ಅಪಾರ ಮಳೆ ಬೀಳುವುದೂ ಸಹ ಪ್ರವಾಹಗಳಿಗೆ ಕಾರಣವಾಗುವುದು.
- ಸಮುದ್ರಗಳ ಮಧ್ಯದಲ್ಲಿ ಭೂಕಂಪನಗಳು ಸಂಭವಿಸುವುದರಿಂದಲೂ ಪ್ರವಾಹಗಳುಂಟಾಗುತ್ತವೆ.

ಮೇಲಿನ–ನೈಸರ್ಗಿಕ ಕಾರಣಗಳಷ್ಟೇ ಅಲ್ಲದೆ ಮಾನವಿಕ ಕಾರಣಗಳಾದ ಅರಣ್ಯನಾಶ, ಸರಿಯಾದ ರೀತಿಯಲ್ಲಿ ಕಟ್ಟಿರದ ಸೇತುವೆಗಳು, ಒಡ್ಡುಗಳು, ನದಿ ಪಾತ್ರ, ಅಕ್ರಮವಾಗಿ ಭೂ ಬಳಕೆಯಲ್ಲಾಗುತ್ತಿರುವ ಬದಲಾವಣೆ ಮುಂತಾದವುಗಳು ಪ್ರಮುಖವಾಗಿವೆ.

ಪ್ರವಾಹಕ್ಕೆ ಒಳಪಡುವ ಪ್ರದೇಶಗಳು :

ದೇಶದಾದ್ಯಂತ ಪ್ರವಾಹಕ್ಕೆ ಒಳಪಡುವ ಪ್ರದೇಶಗಳು ಕಂಡುಬರುತ್ತವೆ.

- ಗಂಗಾ ನದಿಯ ಉಪನದಿಗಳಾದ ಯಮುನಾ, ಗಂಡಕ್, ಕೋಸಿ, ಘಾಘ್ರ ನದಿಗಳು. ಉತ್ತರ ಪ್ರದೇಶ, ಬಿಹಾರಗಳಲ್ಲಿ ಪ್ರವಾಹವನ್ನುಂಟು ಮಾಡುತ್ತವೆ.
- ದಾಮೋದರ ಮತ್ತು ಸುವರ್ಣ ರೇಖಾ ನದಿಗಳು ಛತ್ತೀಸಘಡ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಪ್ರವಾಹವನ್ನುಂಟು ಮಾಡುತ್ತವೆ.
- ಬ್ರಹ್ಮಪುತ್ರ ಮತ್ತು ಇದರ ಉಪನದಿಗಳಾದ ದಿಹಾಂಗ, ದಿಬಾಂಗ, ಸುಬನ್‌ಸಿರಿ ಮತ್ತು ಲೂಹಿತ್– ಅಸ್ಸಾಂ ಕಣಿವೆ ನದಿಗಳಿಂದ ಅಸ್ಸಾಂನಲ್ಲಿ ಪ್ರವಾಹ ಉಂಟಾಗುತ್ತವೆ.
- ಹಿಮಾಲಯ ಪರ್ವತಗಳಲ್ಲಿ ಮೇಘಸ್ಫೋಟದಿಂದ ಆಗಿಂದಾಗ್ಗೆ ಕ್ಷಿಪ್ರ ಪ್ರವಾಹಗಳುಂಟಾಗುತ್ತವೆ.
- ನರ್ಮದಾ, ತಪತಿ, ಸಬರಮತಿ ಮತ್ತು ಮಹಿ ನದಿಗಳು ವರ್ಷದ ಕೆಲವು ದಿನಗಳಲ್ಲಿ ಗುಜರಾತ್ ರಾಜ್ಯದಲ್ಲಿ ಪ್ರವಾಹ ಉಂಟುಮಾಡುತ್ತವೆ.
- ಕರ್ನಾಟಕದಲ್ಲಿ ಕೃಷ್ಣಾ, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ದೋಣಿನದಿ, ಬೆಣ್ಣೆಹಳ್ಳ, ಮುಂತಾದವುಗಳು ಮಳೆಗಾಲದಲ್ಲಿ ರಭಸವಾಗಿ ಹರಿದು ಪ್ರವಾಹವನ್ನುಂಟು ಮಾಡುತ್ತವೆ.

ಪ್ರವಾಹಗಳಿಂದುಂಟಾಗುವ ಪರಿಣಾಮಗಳು :

- ಪ್ರವಾಹಗಳು ಜನರ ಆಸ್ತಿ–ಪಾಸ್ತಿ, ಮನೆ, ಭೂಮಿ ಮತ್ತು ಬೆಳೆಗಳನ್ನು ಹಾನಿಗೀಡುಮಾಡುತ್ತವೆ.
- ದೂರ ಸಂಪರ್ಕ, ವಿದ್ಯುತ್ ಪೂರೈಕೆ, ಸಾರಿಗೆ ಸೌಲಭ್ಯ ಮುಂತಾದವುಗಳು ಅಸ್ತ–ವ್ಯಸ್ತಗೊಳ್ಳುತ್ತವೆ.
- ಪ್ರವಾಹಗಳ ಪರಿಣಾಮದಿಂದ ಫಲವತ್ತಾದ ಮಣ್ಣಿನ ಮೇಲ್ಭಾಗವು ಕೊಚ್ಚಿಹೋಗುತ್ತದೆ ಹಾಗೂ ಅನೇಕ ಗಿಡ ಮರಗಳು ಹಾನಿಗೊಳಗಾಗುತ್ತವೆ.
- ಪ್ರವಾಹಗಳಿಂದ ವಿಶಾಲವಾಗಿ ಹರಡಿದ ನೀರು ಅನೇಕ ರೋಗಗಳ ಉಲ್ಬಣಕ್ಕೆ ಕಾರಣವಾಗುತ್ತದೆ.

ಪ್ರವಾಹ ನಿಯಂತ್ರಣ ಕ್ರಮಗಳು :

- ಪ್ರವಾಹ ನಿಯಂತ್ರಣಕ್ಕೆ ನದಿಯ ಇಕ್ಕೆಲಗಳಲ್ಲಿ ಅಡ್ಡಗಟ್ಟೆಗಳನ್ನು ನಿರ್ಮಿಸುವುದು.
- ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಿ ಜಲಾಶಯಗಳಲ್ಲಿ ನೀರನ್ನು ಸಂಗ್ರಹಿಸಿ ಇತರ ಕಡೆಗಳಿಗೆ ನೀರನ್ನು ಹರಿಸುವುದು.

- ಪ್ರವಾಹಗಳ ಮುನ್ಸೂಚನೆಯನ್ನು ನೀಡಲು ಕೇಂದ್ರಗಳನ್ನು ಸ್ಥಾಪಿಸುವುದು.
- ಜಲಾನಯನ ಪ್ರದೇಶಗಳಲ್ಲಿ ಅರಣ್ಯಗಳನ್ನು ಬೆಳೆಸುವುದು. ಇದರಿಂದ ಮಣ್ಣಿನ ಸವೆತವನ್ನು ನಿಯಂತ್ರಿಸಿ, ನದಿ ಹಾಗೂ ಜಲಾಶಯಗಳಲ್ಲಿ ಹೂಳು ತುಂಬುವುದನ್ನು ತಪ್ಪಿಸಿ ಪ್ರವಾಹಗಳನ್ನು ತಡೆಗಟ್ಟಬಹುದು.

3) ಭೂಕುಸಿತ ಅಥವಾ ಭೂಪಾತ (Land Slide)

ಪರ್ವತಗಳ ಅಥವಾ ಬೆಟ್ಟಗಳ ಮೇಲ್ಭಾಗದಿಂದ ಕಡಿದಾದ ಇಳಿಜಾರಿನಗುಂಟ ಕೆಳಕ್ಕೆ ಜಾರುವ ಭೂರಾಶಿಗೆ ಭೂಕುಸಿತಗಳೆನ್ನುವರು. ಪರ್ವತಗಳಿಂದ ಕೆಳಕ್ಕೆ ಜಾರುವ ವಸ್ತುಗಳಲ್ಲಿ ಕಲ್ಲು, ಮಣ್ಣು ಮತ್ತು ಭಗ್ನಾವಶೇಷಗಳು ಪ್ರಮುಖವಾಗಿವೆ. ಅತಿ ಹೆಚ್ಚು ಕಡಿದಾದ ಪರ್ವತ ಪ್ರದೇಶಗಳಲ್ಲಿ ಭೂಕುಸಿತವಾದರೆ, ಅವು ಹೆಚ್ಚು ವಿನಾಶಕಾರಿಯಾಗಿರುತ್ತವೆ. ಹಿಮಾಲಯ ಪ್ರದೇಶದಲ್ಲಿ ಭೂಕುಸಿತದ ಜೊತೆಗೆ ಹಿಮಪಾತಗಳು ಉಂಟಾಗಿ ಜನಜೀವನಕ್ಕೆ ಹಾನಿಯನ್ನುಂಟು ಮಾಡುತ್ತವೆ.

ಭೂ ಕುಸಿತಕ್ಕೆ ಕಾರಣಗಳು :

- ಪರ್ವತ ಮತ್ತು ಸಮುದ್ರ ತೀರಗಳಲ್ಲಿ ಕ್ರಮವಾಗಿ ಹರಿಯುವ ನೀರು ಹಾಗೂ ಅಲೆಗಳು ಭೂಮಿಯನ್ನು ಕೊರೆದು ಇಳಿಜಾರನ್ನು ನಿರ್ಮಿಸಿ ಭೂಕುಸಿತವುಂಟಾಗಲು ಕಾರಣವಾಗುತ್ತವೆ.
- ಕಡಿದಾದ ಪರ್ವತ ವಲಯಗಳಲ್ಲಿ ರಸ್ತೆ, ರೈಲು ಮಾರ್ಗ, ಕಾಲುವೆ ಮೊದಲಾದವುಗಳನ್ನು ನಿರ್ಮಿಸಿದಾಗ ಇಳಿಜಾರು ಮತ್ತಷ್ಟು ಕಡಿದಾಗಿ ಭೂಕುಸಿತಗಳುಂಟಾಗುತ್ತವೆ.
- ಜೇಡಿಮಣ್ಣಿನ ಪದರದ ಮೇಲೆ ಸಡಿಲವಾದ ಮಣ್ಣಿನ ಪದರವಿದ್ದಲ್ಲಿ, ಇಳಿಜಾರು ಕಡಿದಾಗಿದ್ದು ಭೂ ಕುಸಿತವುಂಟಾಗುವುದು.
- ಗಣಿಗಾರಿಕೆಯ ಪ್ರದೇಶದಲ್ಲಿ ಭೂಕುಸಿತಗಳು ಸಾಮಾನ್ಯ. ಆಳದಲ್ಲಿರುವ ಅದಿರಿನ ನಿಕ್ಷೇಪದವರೆಗೆ ಗಣಿಗಳನ್ನು ತೆಗೆದಿದ್ದು ಇದರಿಂದ ಭೂಕುಸಿತಗಳುಂಟಾಗುತ್ತವೆ.
- ಅರಣ್ಯಗಳನ್ನು ಕಡಿಯುವುದರಿಂದ ಹಾಗೂ ಕಡಿದಾದ ಇಳಿಜಾರನ್ನು ಆಳವಾಗಿ ಉಳಿಮೆ ಮಾಡುವುದರಿಂದ ಭೂಕುಸಿತಗಳುಂಟಾಗುತ್ತವೆ.

ಭೂಕುಸಿತದ ಪರಿಣಾಮಗಳು :

- ಭೂಕುಸಿತದಿಂದಾಗಿ ಅನೇಕ ಚಿಕ್ಕ ನದಿಗಳು ಹರಿಯುವುದಕ್ಕೆ ಅಡ್ಡಿ ಉಂಟಾಗುತ್ತದೆ.
- ಸಾರಿಗೆ ಸಂಚಾರಕ್ಕೆ ಅಡ್ಡಿ ಉಂಟಾಗುತ್ತದೆ.
- ಹಳ್ಳಗಳು ಮತ್ತು ಅನೇಕ ಸಸ್ಯವರ್ಗಗಳು ಭೂಗತವಾಗುತ್ತವೆ.
- ಭೂಕುಸಿತಗಳು ಅನೇಕ ಜೀವಹಾನಿ ಮತ್ತು ಆಸ್ತಿ ಹಾನಿಯನ್ನುಂಟುಮಾಡುತ್ತವೆ.

4) ಕಡಲಕೊರೆತ (Coastal Erosion) :

ಸಮುದ್ರದ ಅಲೆಗಳು ನಿರಂತರವಾಗಿ ತೀರ ಪ್ರದೇಶಗಳಿಗೆ ಅಪ್ಪಳಿಸುತ್ತವೆ. ಇವುಗಳಿಂದ ತೀರ ಪ್ರದೇಶವು ಸವೆತಕ್ಕೀಡಾಗುವುದು. ಹೀಗೆ ಅಲೆಗಳಿಂದ ತೀರ ವಲಯವು ಸವೆಸಲ್ಪಡುವುದನ್ನು ತೀರ ಪ್ರದೇಶದ ಕೊರೆತ ಅಥವಾ ಸಾಮಾನ್ಯವಾಗಿ 'ಕಡಲಕೊರೆತ' ಎಂದು ಕರೆಯುವರು.

ಭಾರತದಲ್ಲಿ ಕಡಲಕೊರೆತ ಅಲೆಗಳ ಅಬ್ಬರ ಹೆಚ್ಚಾಗಿರುವ ನೈರುತ್ಯ ಮನ್ಸೂನ್ ಮಾರುತಗಳ ಅವಧಿ ಹಾಗೂ ಚಂಡಮಾರುತಗಳ ಅವಧಿಯಲ್ಲಿ ಅತಿ ಹೆಚ್ಚು. ನೈರುತ್ಯ ಮನ್ಸೂನ್ ಮಾರುತಗಳು

ಆರಂಭದಲ್ಲಿ ಅರಬ್ಬಿ ಸಮುದ್ರದಲ್ಲಿ ಅತಿ ಹೆಚ್ಚು ಎತ್ತರದ ಅಲೆಗಳು ತೀರ ಪ್ರದೇಶಕ್ಕೆ ಅಪ್ಪಳಿಸಿ ಭೂ ಪ್ರದೇಶವನ್ನು ಕಬಳಿಸುತ್ತವೆ. ಇದರಿಂದ ಪಶ್ಚಿಮ ತೀರದ ರಾಜ್ಯಗಳಾದ ಕೇರಳ, ಕರ್ನಾಟಕ, ಗೋವಾ ರಾಜ್ಯಗಳಲ್ಲಿ ಕಡಲ ಕೊರೆತ ಹೆಚ್ಚು. ಇದಲ್ಲದೆ ತಮಿಳುನಾಡಿನ ಕನ್ಯಾಕುಮಾರಿ, ಮಹಾರಾಷ್ಟ್ರ ಮತ್ತು ಗುಜರಾತಗಳಲ್ಲಿ ಕಡಲಕೊರೆತ ಕಂಡುಬರುತ್ತದೆ. ಆದರೆ ಪೂರ್ವ ಕರಾವಳಿಯಲ್ಲಿ ಕಡಲ ಕೊರೆತದ ಪ್ರಮಾಣ ಬಹಳ ಕಡಿಮೆ.

ಪರಿಣಾಮಗಳು :

- ಅಲೆಗಳು ತೀರ ಸವೆಸುವುದರಿಂದ ಅಪಾರ ಭೂ ಪ್ರದೇಶ ಸಮುದ್ರದ ಪಾಲಾಗುವುದು.
- ಮನೆ, ರಸ್ತೆ ಮೊದಲಾದವು ಮುಳುಗಿ ಅಪಾರ ನಷ್ಟವುಂಟಾಗುವುದು.

ನಿರ್ವಹಣೆ :

- ತೀರ ಪ್ರದೇಶದಲ್ಲಿ ಮರಳು ತೆಗೆಯುವುದನ್ನು ನಿಯಂತ್ರಿಸುವುದು.
- ತೀರ ಪ್ರದೇಶದುದ್ದಕ್ಕೂ ಅಲೆಗಳು ಪ್ರಬಲವಾಗಿರುವ ಕಡೆ ತಡೆಗೋಡೆಯನ್ನು ನಿರ್ಮಿಸುವುದು.
- ತೀರದುದ್ದಕ್ಕೂ ದಪ್ಪ ಬಂಡೆಗಳ ರಾಶಿಹಾಕಿ ಅಲೆಗಳ ಪ್ರಭಾವವನ್ನು ನಿಯಂತ್ರಿಸುವುದು.
- ಇವೆಲ್ಲವುಗಳಿಗಿಂತಲೂ ತೀರದುದ್ದಕ್ಕೂ 'ಮ್ಯಾಂಗ್ರೂವ್' ಅರಣ್ಯಗಳನ್ನು ಬೆಳೆಸಲು ಕಾರ್ಯಕ್ರಮ ರೂಪಿಸುವುದು ಅತ್ಯಂತ ಪರಿಣಾಮಕಾರಿ.

5) ಭೂಕಂಪಗಳು (Earth Quakes) :

ಭೂಮಿಯ ಮೇಲೆ ಸಂಭವಿಸುವ ನೈಸರ್ಗಿಕ ವಿಕೋಪಗಳಲ್ಲಿ ಭೂಕಂಪಗಳು ಪ್ರಮುಖವಾಗಿವೆ. ಭೂಮಿಯ ಒಳಗಿನ ಆಂತರಿಕ ಶಕ್ತಿಯಿಂದ ಅನಿರೀಕ್ಷಿತವಾಗಿ ಭೂಮಿಯ ಮೇಲ್ಪದರವು ಕಂಪಿಸುವುದನ್ನು 'ಭೂಕಂಪ' ಎಂದು ಕರೆಯುವರು. ಇದರಿಂದ ಭೂಮೇಲ್ಮೈ ಕಂಪಿಸುವುದು, ನಡುಗುವುದು ಉಂಟಾಗುತ್ತದೆ.

ಭೂಕಂಪಕ್ಕೆ ಕಾರಣಗಳನ್ನು ನೀಡುವುದು :

1) ನಗರೀಕರಣದಿಂದ ಭೂಮಿಯ ಒಡಲಲ್ಲಿ ಒತ್ತಡ ಹೆಚ್ಚಾಗಿ ಭೂಕಂಪನ ಸಂಭವಿಸುತ್ತದೆ.

2) ಅರಣ್ಯನಾಶ, ಅಣೆಕಟ್ಟುಗಳ ನಿರ್ಮಾಣ, ಗಣಿಗಾರಿಕೆಗಳಿಂದಾಗಿ ಭೂಕಂಪನ ಸಂಭವಿಸುತ್ತದೆ.

ಭಾರತದಲ್ಲಿ ಇವುಗಳ ಹಂಚಿಕೆ : ಉತ್ತರದ ಹಿಮಾಲಯ ಪರ್ವತ, ಪೂರ್ವ ಆಸ್ಸಾಂ, ಪಶ್ಚಿಮದಲ್ಲಿ ಗುಜರಾತ ವಲಯಗಳಲ್ಲಿ ಬಹುತೇಕ ಭೂಕಂಪಗಳು ಸಂಭವಿಸಿವೆ. ದಕ್ಷಿಣ ಭಾರತದಲ್ಲಿ ಕೊಯ್ನಾ, ಲಾತೂರ್ ಮೊದಲಾದ ಕಡೆಗಳಲ್ಲಿ ಭೂಕಂಪಗಳು ಸಂಭವಿಸಿವೆ.

ಭೂಕಂಪದ ಪರಿಣಾಮಗಳು :

ಭೂಕಂಪಗಳು ಸಾಮಾನ್ಯವಾಗಿ ಜನರ ಸಾವು ನೋವು ಮತ್ತು ಆಸ್ತಿ–ಪಾಸ್ತಿಗಳ ಹಾನಿಯ ಪ್ರಮಾಣದ ಮೇಲೆ ನಿರ್ಧರಿಸಲ್ಪಡುವುದು ಹಾಗೂ ಸಾರಿಗೆ ಸಂಪರ್ಕ ಕಡಿತ, ರೋಗಗಳ ಹರಡುವಿಕೆ, ಸಾಗರದ ಅಲೆಗಳು ದಡಗಳಿಗೆ ಅಪ್ಪಳಿಸುವಿಕೆ, ನದಿಯ ದಿಕ್ಕು ಬದಲಾಗುವಿಕೆ ಇತ್ಯಾದಿಗಳು ಸಂಭವಿಸುತ್ತವೆ.

ಭೂಕಂಪದ ಮುನ್ನಚ್ಚರಿಕೆಯ ಕ್ರಮಗಳು :

- ಭೂಕಂಪನ ಹೆಚ್ಚು ಸಂಭವನೀಯ ವಲಯಗಳಲ್ಲಿ ಬಹು ಅಂತಸ್ತಿನ ಕಟ್ಟಡಗಳನ್ನು ನಿಷೇಧಿಸುವುದು.
- ಈ ವಲಯಗಳಲ್ಲಿ ಕಟ್ಟಡಗಳನ್ನು ಹಗುರವಾದ ವಸ್ತುಗಳಿಂದ ನಿರ್ಮಿಸುವುದು.
- ಕಟ್ಟಡಗಳು ಸ್ಥಿತಿ ಸ್ಥಾಪಕತ್ವ ಗುಣವನ್ನು ಹೊಂದುವಂತೆ ನಿರ್ಮಿಸುವುದು.
- ಸಂತ್ರಸ್ತರಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವುದು.
- ಭೂಕಂಪನ ಉಂಟಾದಾಗ ಶೀಘ್ರವೇ ವಿದ್ಯುತ್ ಸಂಪರ್ಕವನ್ನು ಕತ್ತರಿಸುವುದು.

ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಪರಿಹಾರೋಪಾಯಗಳು :

ಸಿದ್ಧಪಡಿಸಿದ ಆಹಾರ, ಆಹಾರದ ಹಂಚಿಕೆ, ಶುದ್ಧ ಕುಡಿಯುವ ನೀರಿನ ಪೂರೈಕೆ, ಔಷಧಿ ಹಂಚಿಕೆ ತಾತ್ಕಾಲಿಕ ವಸತಿ ವ್ಯವಸ್ಥೆ, ಅಗತ್ಯ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಒದಗಿಸುವಂತಹ ಕ್ರಮಗಳನ್ನು ಕೈಗೊಳ್ಳುವುದು.

ಅಭ್ಯಾಸಗಳು

I. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.

1) ಪ್ರಾಕೃತಿಕ ವಿನಾಶಕಗಳು ಎಂದರೇನು?
2) ಚಂಡಮಾರುತಗಳ ಪರಿಣಾಮಗಳಾವುವು?
3) ಪ್ರವಾಹಗಳೆಂದರೇನು?
4) ಭೂ ಕುಸಿತ ಎಂದರೇನು?
5) ಭೂಕಂಪ ಎಂದರೇನು?
6) ಪ್ರವಾಹಗಳು ಉಂಟಾಗಲು ಕಾರಣಗಳು ಮತ್ತು ಒಳಪಡುವ ಪ್ರದೇಶಗಳನ್ನು ವಿವರಿಸಿ.
7) ಕಡಲಕೊರೆತ ಎಂದರೇನು? ಅದರ ನಿರ್ವಹಣೆಯನ್ನು ತಿಳಿಸಿ.
8) ಭೂಕಂಪದ ಪರಿಣಾಮಗಳನ್ನು ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.

II. ಚಟುವಟಿಕೆಗಳು :

1) ಭಾರತದಲ್ಲಿ ಸಂಭವಿಸುವ ಭೂಕಂಪ 'ಪ್ರವಾಹ ಪೀಡಿತ ಪ್ರದೇಶಗಳನ್ನು ನಕ್ಷೆ'ಯಲ್ಲಿ ಗುರುತಿಸಿರಿ.

III. ಯೋಜಿತ ಕಾರ್ಯ :

1) ನಿಮ್ಮ ಅನುಕೂಲಕಾರಕ ಸಹಾಯದಿಂದ ಭಾರತದಲ್ಲಿ ಇದುವರೆಗೆ ಪ್ರವಾಹ ಪೀಡಿತ ಪ್ರದೇಶಗಳೆಂದು ಗುರುತಿಸಲಾಗಿರುವ ಪ್ರದೇಶಗಳನ್ನು ಪಟ್ಟಿಮಾಡಿರಿ.

ಅಧ್ಯಾಯ–13

ಭಾರತದ ಜನಸಂಖ್ಯೆ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಜನಸಂಖ್ಯೆಯ ಮಹತ್ವ.*
- *ಜನಸಂಖ್ಯೆಯ ಬೆಳವಣಿಗೆ, ಗಾತ್ರ ಮತ್ತು ಹಂಚಿಕೆ.*
- *ಜನಸಾಂದ್ರತೆ ಲಕ್ಷಣಗಳು, ಜನಸಾಂದ್ರತೆಯ ವಲಯಗಳು.*
- *ವಲಸೆ, ವಲಸೆಯ ಕಾರಣಗಳು, ವಲಸೆಯ ವಿಧಗಳು.*
- *ವಲಸೆಯಿಂದ ಉಂಟಾಗುವ ಸಮಸ್ಯೆಗಳು, ನಿಯಂತ್ರಣ ಕ್ರಮಗಳು.*


ಒಂದು ಪ್ರದೇಶದಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ವಾಸಿಸುತ್ತಿರುವ ಜನರ ಪ್ರಮಾಣವೇ ಅಲ್ಲಿನ ಜನಸಂಖ್ಯೆಯಾಗಿದೆ. ಜನರಿಗೆ ಸಂಬಂಧಿಸಿದ ಸಂಖ್ಯೆ ಹಾಗೂ ಅವರ ಜೀವನಕ್ಕೆ ಸಂಬಂಧಿಸಿದ ಇತರ ಎಲ್ಲಾ ಬಗೆಯ ಅಂಕಿ–ಅಂಶಗಳ ಸಂಗ್ರಹಣೆ ಹಾಗೂ ವಿಶ್ಲೇಷಣೆಯನ್ನು ಜನಗಣತಿ (Census) ಎಂದು ಕರೆಯುವರು. ಭಾರತದಲ್ಲಿ ಕ್ರಿ.ಶ. 1872ರಲ್ಲಿ ಪ್ರಥಮ ಬಾರಿಗೆ ಮತ್ತು ಅಲ್ಲಿಂದ ನಿರಂತರವಾಗಿ ಹತ್ತು ವರ್ಷಗಳಿಗೊಮ್ಮೆ ಜನಗಣತಿಯನ್ನು ನಡೆಸಲಾಗುತ್ತಿದೆ.

ಭಾರತವು ಅಪರಿಮಿತವಾದ ಮಾನವ ಸಂಪನ್ಮೂಲವನ್ನು ಒಳಗೊಂಡಿದೆ. 2011 ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆ 1210 ದಶಲಕ್ಷ (121 ಕೋಟಿ) ಗಳಷ್ಟಿರುವುದು. ಭಾರತವು ಚೈನಾದ ನಂತರ ಪ್ರಪಂಚದ ಎರಡನೆಯ ಅತಿ ಹೆಚ್ಚು ಜನಸಂಖ್ಯೆಯುಳ್ಳ ರಾಷ್ಟ್ರವಾಗಿದೆ. ಅಪಾರ ಜನಸಂಖ್ಯೆಯು ಜೊತೆಗೆ, ಅದರ ಬೆಳವಣಿಗೆಯ ಪ್ರಮಾಣವೂ ಸಹ ಅಧಿಕವಾಗಿದೆ. ಇದರಿಂದ ಜನಸಂಖ್ಯೆಯು ದೇಶದ ಸಂಪನ್ಮೂಲವಾಗಿರುವುದರ ಬದಲಾಗಿ ಬಹು ದೊಡ್ಡ ಸಮಸ್ಯೆಯಾಗಿದೆ.

ಜನಸಂಖ್ಯಾ ಬೆಳವಣಿಗೆ (Population Growth) :

ಭಾರತದ ಜನಸಂಖ್ಯೆಯ ಅಂಕಿ–ಅಂಶಗಳನ್ನು ಗಮನಿಸಿದಾಗ ಕಂಡು ಬರುವ ಮುಖ್ಯ ಲಕ್ಷಣವೆಂದರೆ ಜನಸಂಖ್ಯೆಯ ತೀವ್ರಗತಿ ಬೆಳವಣಿಗೆ. 1872ರಲ್ಲಿ ಭಾರತದ ಜನಸಂಖ್ಯೆ 234 ದಶಲಕ್ಷಗಳಷ್ಟು (23.4 ಕೋಟಿ) ಕಂಡು ಬಂದಿತು. ಇಂದು ಭಾರತದ ಜನಸಂಖ್ಯೆ (2011ರ ಜನಗಣತಿ) 1210 ದಶಲಕ್ಷ (121 ಕೋಟಿ) ಗಳಷ್ಟಾಗಿದೆ. ದೇಶವು ಅತ್ಯಧಿಕ ಪ್ರಮಾಣದ ಜನಸಂಖ್ಯೆಯನ್ನು ಹೊಂದಿರುವುದು ಮಾತ್ರವಲ್ಲದೆ, ಅದರ ಬೆಳವಣಿಗೆಯ ವೇಗವೂ ಸಹ ಅತ್ಯಧಿಕವಾಗಿರುವುದು. ಆದರೆ 1981–2011ರ ಅವಧಿಯಲ್ಲಿ ಅದರ ಬೆಳವಣಿಗೆಯಲ್ಲಿ ಸ್ವಲ್ಪ ಇಳಿಕೆ ಕಂಡುಬರುತ್ತಿದೆ.

1901–11ರ ಅವಧಿಯಲ್ಲಿ ಜನಸಂಖ್ಯೆಯ ಹೆಚ್ಚಳವು ತೀರಾ ಕಡಿಮೆ. ಆದರೆ 1911–21ರ ಅವಧಿಯಲ್ಲಿ ಬೆಳವಣಿಗೆ ಋಣಾತ್ಮಕವಾಗಿರುವುದನ್ನು ಶೇ. 0.31 ರಷ್ಟೆಂದು ತಿಳಿದು ಬಂದಿದೆ. ಈ ಅವಧಿಯಲ್ಲಿ ಪ್ಲೇಗ್, ಕಾಲರಾ ಮೊದಲಾದ ಸಾಂಕ್ರಾಮಿಕ ರೋಗಗಳಿಂದ ಅಪಾರ ಸಂಖ್ಯೆಯ ಜನರು ಮರಣ ಹೊಂದಿದುದರಿಂದ ಜನಸಂಖ್ಯೆಯು ಕಡಿಮೆಯಾಯಿತು. ನಂತರ 1971 ರಲ್ಲಿ ಶೇ. 24.80 ರಷ್ಟು ಹೆಚ್ಚಳವಾಯಿತು. ಇದು ಭಾರತದಲ್ಲಿ ಅತ್ಯಧಿಕ ಜನಸಂಖ್ಯೆ ಬೆಳವಣಿಗೆಯ ದರವನ್ನು ಹೊಂದಿರುವ ದಶಕವಾಗಿದೆ. ದಶಕವಾರು ಜನಸಂಖ್ಯಾ ಬೆಳವಣಿಗೆ 2001 ರಲ್ಲಿ ಶೇ 21.54 ರಷ್ಟಿದ್ದು, 2011ಕ್ಕೆ 17.64ಕ್ಕೆ ಇಳಿದಿದೆ. ಅಂದರೆ ಕಳೆದ ಹತ್ತು ವರ್ಷಗಳಲ್ಲಿ ಬೆಳವಣಿಗೆಯ ದರ ಶೇ 3.90 ರಷ್ಟು ಇಳಿಕೆಗೊಂಡಿದೆ.



ಜನಸಂಖ್ಯಾ ಹಂಚಿಕೆ ಮತ್ತು ಜನಸಾಂದ್ರತೆ (Population distribution and Density) :

ಭಾರತದಲ್ಲಿ ಜನಸಂಖ್ಯಾ ಹಂಚಿಕೆಯು ವೈವಿಧ್ಯತೆಯಿಂದ ಕೂಡಿರುವುದು. ಇದರ ಹಂಚಿಕೆ ಯಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಹೊಂದುತ್ತದೆ. ಗಂಗಾನದಿಯ ಮೈದಾನ ಪ್ರದೇಶವು ಭಾರತದ ಹೃದಯ ಭಾಗವಾಗಿದ್ದು, ಅತ್ಯಧಿಕ ಜನಸಂಖ್ಯೆಯನ್ನೊಳಗೊಂಡಿದೆ. ಇದರ ಇಕ್ಕೆಲಗಳಲ್ಲಿಯೂ ಪಶ್ಚಿಮದಲ್ಲಿ ರಾಜಸ್ತಾನ ಹಾಗೂ ಪೂರ್ವದಲ್ಲಿ ಈಶಾನ್ಯದ ರಾಜ್ಯಗಳು ಕಡಿಮೆ ಜನಸಂಖ್ಯೆಯನ್ನು ಹೊಂದಿವೆ. ದಕ್ಷಿಣೋತ್ತರವಾಗಿ ಹಂಚಿಕೆಯನ್ನು ಗಮನಿಸಿದಾಗ ದಕ್ಷಿಣದ ಕೇರಳ ರಾಜ್ಯವು ಅಧಿಕ ಜನಸಾಂದ್ರತೆಯನ್ನು ಹೊಂದಿದ್ದು, ಪರ್ಯಾಯ ಪ್ರಸ್ಥಭೂಮಿಯ ಕೇಂದ್ರ ಭಾಗವು ವಿರಳ ಜನಸಾಂದ್ರತೆಯನ್ನು ಹೊಂದಿದೆ. ಅದರೆ ಇದರ ಎರಡು ಕಡೆಗಳಲ್ಲಿನ ಕರಾವಳಿ ಮೈದಾನಗಳು ಅಧಿಕ ಜನಸಾಂದ್ರತೆಯನ್ನು ಹೊಂದಿವೆ ಹಾಗೂ ಉತ್ತರ ಪ್ರದೇಶ ಅಧಿಕ ಜನಸಂಖ್ಯೆಯನ್ನು ಹೊಂದಿದ ರಾಜ್ಯವಾದರೆ ಸಿಕ್ಕಿಂ ಅತೀ ಕಡಿಮೆ ಜನಸಂಖ್ಯೆ ಹೊಂದಿದ ರಾಜ್ಯವಾಗಿದೆ.

> **ನಿಮಗೆ ಇದು ತಿಳಿದಿರಲಿ :**
>
> ***ಬಿಮಾರು ರಾಜ್ಯಗಳು : 'ಬಿಮಾರು'*** ಎಂದರೆ ಬಿಹಾರ, ಮಧ್ಯಪ್ರದೇಶ, ರಾಜಸ್ತಾನ, ಉತ್ತರ ಪ್ರದೇಶ *(Bimaru)* ಇವುಗಳನ್ನು ಬಿಮಾರು ಎಂದರೆ ರೋಗಗ್ರಸ್ತ ರಾಜ್ಯಗಳೆಂದು ಕರೆಯುವರು. ಕಾರಣ ಇವು ಇಂದಿಗೂ ಸಹ ಅತಿ ಹೆಚ್ಚು ಜನಸಂಖ್ಯಾ ಬೆಳವಣಿಗೆಯನ್ನು ಹೊಂದಿವೆ.

ಜನಸಂಖ್ಯಾ ಹಂಚಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು :

ಭಾರತದ ಜನಸಂಖ್ಯಾ ಹಂಚಿಕೆಯ ಮೇಲೆ ಅನೇಕ ಭೌಗೋಳಿಕ, ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಅಂಶಗಳು ಪ್ರಭಾವ ಬೀರಿದ್ದು, ಅದು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವನ್ನು ಹೊಂದಲು ಕಾರಣವಾಗಿದೆ. ಇವುಗಳಲ್ಲದೆ ಮಳೆಯ ಹಂಚಿಕೆ, ಉಷ್ಣಾಂಶ, ಮಣ್ಣು, ನೀರಾವರಿ, ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು, ಕೈಗಾರಿಕಾಭಿವೃದ್ಧಿ, ಸಂಚಾರ ಸೌಲಭ್ಯಗಳು, ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು, ಸುರಕ್ಷತೆ ಹೀಗೆ

> **ನಿಮಗೆ ಇದು ತಿಳಿದಿರಲಿ**
>
> *ರಾಜಸ್ತಾನ, ಉತ್ತರ ಪ್ರದೇಶ, ಉತ್ತರಖಂಡ, ಬಿಹಾರ, ಜಾರ್ಖಂಡ್, ಮಧ್ಯ ಪ್ರದೇಶ, ಛತ್ತೀಸಗರ್, ಒರಿಸ್ಸಾ– ಈ ಎಂಟು ರಾಜ್ಯಗಳನ್ನು Empowered Action Group (EAG) ಎಂದು ಕರೆಯಲಾಗಿದೆ. ಕಾರಣ ಇವುಗಳ ಬೆಳವಣಿಗೆ ಬಹುಪಾಲು ದೇಶದ ಬೆಳವಣಿಗೆ ಯನ್ನು ನಿರ್ಧರಿಸುವುದು. ಉಳಿದ ರಾಜ್ಯಗಳನ್ನು (Non EAG) ರಾಜ್ಯಗಳೆಂದು ಕರೆದಿರುವರು.*

ವಿವಿಧ ಅಂಶಗಳ ಪ್ರಭಾವದಿಂದಾಗಿ ಭಾರತದಲ್ಲಿ ಜನಸಂಖ್ಯೆಯು ಅಸಮಾನ ಹಂಚಿಕೆಯಿಂದ ಕೂಡಿರುವುದು. ಜನ ವಸತಿ ಸೌಲಭ್ಯಗಳನ್ನು ಹೊಂದಿರುವ ಪ್ರದೇಶಗಳು ಅತ್ಯಧಿಕ ಜನಸಾಂದ್ರತೆಯಿಂದ ಕೂಡಿವೆ. ಇದಕ್ಕೆ ವಿರುದ್ಧವಾಗಿ ಜನವಸತಿ ಯೋಗ್ಯ ವಲ್ಲದ ಪರಿಸರವನ್ನು ಹೊಂದಿದ ವಿಸ್ತಾರವಾದ ಭೂಭಾಗಗಳು ವಿರಳ ಜನಸಾಂದ್ರತೆಯನ್ನು ಹೊಂದಿವೆ. ಭಾರತವು ಅತ್ಯಧಿಕ ಜನಸಂಖ್ಯೆಯನ್ನು ಹೊಂದಿದ್ದರೂ, ಇಂದಿನ ಅನೇಕ ಪ್ರದೇಶಗಳು ಅತ್ಯಂತ ವಿರಳ ಜನಸಂಖ್ಯೆಯನ್ನು ಹೊಂದಿರಲು ಈ ಅಂಶಗಳು ಮುಖ್ಯ ಕಾರಣಗಳಾಗಿವೆ.

ವಿರಳ ಜನಸಂಖ್ಯೆಗೆ ಕಾರಣವಾಗುವ ಅಂಶಗಳನ್ನು ಸೂಚಿಸುವುದು :

1) ಪ್ರವಾಹಗಳು 2) ಭೂಕಂಪಗಳು 3) ಮರುಭೂಮಿ ಪ್ರದೇಶಗಳು

4) ಚಂಡ ಮಾರುತಗಳು 5) ಇತರ ನೈಸರ್ಗಿಕ ವಿಕೋಪಗಳು

ಜನಸಾಂದ್ರತೆ (Density) :

ಜನಸಂಖ್ಯಾ ಹಂಚಿಕೆಯನ್ನು ವಿವರಿಸಲು, 'ಸಾಂದ್ರತೆ', ಎಂಬ ಪದವನ್ನು ಸಾಮಾನ್ಯವಾಗಿ ಬಳಸಲಾಗುವುದು. "ಒಂದು ಭೂ ಪ್ರದೇಶದಲ್ಲಿರುವ ಒಟ್ಟು ಜನರ ಸಂಖ್ಯೆಯನ್ನು ಆ ಭೂ ಪ್ರದೇಶದ ಕ್ಷೇತ್ರದಿಂದ ಭಾಗಿಸಿದಾಗ ಬರುವ ಭಾಗಲಬ್ಧವೇ ಜನಸಾಂದ್ರತೆ". ಸಾಮಾನ್ಯವಾಗಿ ಇದನ್ನು ಚದರ ಕಿ.ಮೀ. ಅಥವಾ ಚದರ ಮೈಲಿಗೆ ಕಂಡುಬರುವ ಜನರ ಸಂಖ್ಯೆಯೆಂದು ವಿವರಿಸಲಾಗುವುದು.

ಭಾರತವು ಅಪಾರವಾದ ಜನಸಂಖ್ಯೆಯನ್ನು ಹೊಂದಿರುವುದರ ಜೊತೆಗೆ ಅದರ ಹಂಚಿಕೆಯು ಸಹ ಅಸಮಾನವಾಗಿದೆ. ಕೆಲವು ಪ್ರದೇಶಗಳು ಅತ್ಯಧಿಕ ಜನಸಾಂದ್ರತೆಯನ್ನು ಹೊಂದಿದ್ದರೆ, ಇಂದಿಗೂ ವಿಸ್ತಾರವಾದ ಕೆಲವು ಭಾಗಗಳಲ್ಲಿ ವಿರಳವಾದ ಜನಸಾಂದ್ರತೆಯನ್ನು ಕಾಣಬಹುದು.

ಜನಸಾಂದ್ರತೆಯ ಲಕ್ಷಣಗಳು

ಭಾರತದ ಜನಸಾಂದ್ರತೆಯನ್ನು ವೀಕ್ಷಿಸಿದಾಗ ಹಲವಾರು ವೈವಿಧ್ಯತೆಗಳನ್ನು ಕಾಣಬಹುದು. ಸಾಂದ್ರತೆಯ ಪ್ರಮಾಣವು ಒಂದು ಜನಗಣತಿಯಿಂದ ಮತ್ತೊಂದಕ್ಕೆ ನಿರಂತರವಾಗಿ ಅಧಿಕಗೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. 1901 ರಲ್ಲಿ ಸಾಂದ್ರತೆಯ ಪ್ರಮಾಣವು ಪ್ರತಿ ಚ.ಕಿ.ಮೀ. 77 ಆಗಿದ್ದು, ಇದು 1991 ರಲ್ಲಿ 267ಕ್ಕೆ ಹಾಗೂ 2001 ರಲ್ಲಿ 324ಕ್ಕೆ ಹಾಗೂ 2011 ರಲ್ಲಿ 382ಕ್ಕೆ ಏರಿಕೆಗೊಂಡಿವೆ.

ಜನಸಾಂದ್ರತೆಯ ವಲಯಗಳು :

ಜನಸಾಂದ್ರತೆಯ ಆಧಾರದ ಮೇಲೆ ಮೂರು ವಲಯಗಳನ್ನಾಗಿ ವಿಂಗಡಿಸಲಾಗಿದೆ. 1) ಅಧಿಕ ಜನಸಾಂದ್ರತೆಯ ವಲಯ, 2) ಸಾಧಾರಣ ಜನಸಾಂದ್ರತೆಯ ವಲಯ, 3) ವಿರಳ ಜನ ಸಾಂದ್ರತೆಯ ವಲಯ.

1) ಅಧಿಕ ಜನಸಾಂದ್ರತೆಯ ವಲಯ : ಪ್ರತಿ ಚ.ಕಿ.ಮೀ.ಗೆ 500 ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಜ್ಯಗಳು ಈ ವಲಯದಲ್ಲಿವೆ. ಇವುಗಳೆಂದರೆ – ಬಿಹಾರ (1102), ಪಶ್ಚಿಮ ಬಂಗಾಳ (1029), ಕೇರಳ (859), ಉತ್ತರ ಪ್ರದೇಶ (828), ಹರಿಯಾಣ (573), ತಮಿಳುನಾಡು (555), ಪಂಜಾಬ (550).

2) ಸಾಧಾರಣ ಜನಸಾಂದ್ರತೆಯ ವಲಯ : ಈ ವಲಯವು ಪ್ರತಿ ಚದರ ಕಿ.ಮೀ.ಗೆ 251 ರಿಂದ 500 ಜನರನ್ನು ಹೊಂದಿದ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಿದೆ. ಆಸ್ಸಾಮ್ (397), ಗುಜರಾತ್ (308), ಗೋವಾ (394), ಮಹಾರಾಷ್ಟ್ರ (365), ಕರ್ನಾಟಕ (319), ಜಾರ್ಖಂಡ (414), ಆಂಧ್ರಪ್ರದೇಶ (308), ಓರಿಸ್ಸಾ (269), ತ್ರಿಪುರಾ (350) ಈ ವಲಯದಲ್ಲಿ ಸೇರಿವೆ.

3) ವಿರಳ ಜನಸಾಂದ್ರತೆಯ ವಲಯ : ಈ ವಲಯವು ಪ್ರತಿ ಚದರ ಕಿ.ಮೀ.ಗೆ 250ಕ್ಕಿಂತ ಕಡಿಮೆ ಜನಸಾಂದ್ರತೆಯನ್ನು ಹೊಂದಿರುವ ರಾಜ್ಯಗಳಾದ ಮಧ್ಯಪ್ರದೇಶ (236), ಚತ್ತೀಸಘರ (189), ಉತ್ತರಾಖಂಡ (189), ರಾಜಸ್ಥಾನ (201), ಹಿಮಾಚಲ ಪ್ರದೇಶ (123), ಮಣಿಪುರ (122), ಮೇಘಾಲಯ (132), ಜಮ್ಮು ಮತ್ತು ಕಾಶ್ಮೀರ (124), ನಾಗಾಲ್ಯಾಂಡ (119), ಸಿಕ್ಕಿಂ (86), ಮಿಜೋರಾಂ (52), ಅಂಡಮಾನ ನಿಕೋಬಾರ ದ್ವೀಪಗಳು (46), ಅರುಣಾಚಲ ಪ್ರದೇಶ (17) ಗಳನ್ನು ಒಳಗೊಂಡಿದೆ.

ನಿಮಗಿದು ತಿಳಿದಿರಲಿ :

ಭಾರತದ 2011ರ ಜನಗಣತಿಯ ಲಕ್ಷಣಗಳು

1) ಭಾರತದ ಒಟ್ಟು ಜನಸಂಖ್ಯೆ	*1210 ದಶಲಕ್ಷ (121 ಕೋಟಿ)*
2) ಸರಾಸರಿ ಸಾಂದ್ರತೆ	*ಪ್ರತಿ ಚದರ ಕಿ.ಮೀ.ಗೆ 382*
3) ಅಧಿಕ ಸಾಂದ್ರತೆಯುಳ್ಳ ರಾಜ್ಯ	*ಬಿಹಾರ ಪ್ರತಿ ಚ.ಕಿ.ಮೀಗೆ 1102 ಜನ*
4) ಅತಿ ಕಡಿಮೆ ಜನಸಾಂದ್ರತೆ ರಾಜ್ಯ	*ಅರುಣಾಚಲ ಪ್ರದೇಶ ಪ್ರತಿ ಚ.ಕಿ.ಮೀಗೆ 17 ಜನ*
5) ಅತ್ಯಧಿಕ ಜನಸಂಖ್ಯಾ ಬೆಳವಣಿಗೆ ಹೊಂದಿರುವ ರಾಜ್ಯ	*ಮೇಘಾಲಯ ಶೇ 27.82*
6) ಸರಾಸರಿ ಸಾಕ್ಷರತೆಯ ಪ್ರಮಾಣ	*ಶೇ 74.04*
7) ಗರಿಷ್ಠ ಸಾಕ್ಷರತೆಯ ರಾಜ್ಯ	*ಕೇರಳ ಶೇಕಡಾ (93.91)*
8) ಕನಿಷ್ಠ ಸಾಕ್ಷರತೆಯ ರಾಜ್ಯ	*ಬಿಹಾರ ಶೇಕಡಾ (63.82)*
9) ಅಧಿಕ ಜನಸಂಖ್ಯೆಯುಳ್ಳ ರಾಜ್ಯ	*ಉತ್ತರ ಪ್ರದೇಶ (199.5ದಶಲಕ್ಷ)*
10) ಅತಿ ಕಡಿಮೆ ಜನಸಂಖ್ಯೆಯುಳ್ಳ ರಾಜ್ಯ	*ಸಿಕ್ಕಿಂ (6.07ಲಕ್ಷ)*
11) ಅಧಿಕ ಜನಸಂಖ್ಯೆಯುಳ್ಳ ಕೇಂದ್ರಾಡಳಿತ ಪ್ರದೇಶ	*ದೆಹಲಿ (16.7 ದಶಲಕ್ಷ)*
12) ಅತಿ ಕಡಿಮೆ ಜನಸಂಖ್ಯೆಯುಳ್ಳ ಕೇಂದ್ರಾಡಳಿತ	*ಲಕ್ಷದ್ವೀಪ 60 ಸಾವಿರ ಪ್ರದೇಶ*
13) ಸರಾಸರಿ ಮರಣ ದರ	*ಪ್ರತಿ 1000ಕ್ಕೆ 6.58*
14) ಸರಾಸರಿ ಜನನ ದರ	*ಪ್ರತಿ 1000ಕ್ಕೆ 22.65*
15) ಸರಾಸರಿ ಲಿಂಗವಾರು ಅನುಪಾತ	*ಪ್ರತಿ 1000 ಪುರುಷರಿಗೆ 940 ಮಹಿಳೆಯರು*
16) ಅತಿ ಹೆಚ್ಚು ಲಿಂಗಾನುಪಾತವನ್ನು ಹೊಂದಿದ ಕೇರಳ ರಾಜ್ಯ	*ಪ್ರತಿ 1000 ಪುರುಷರಿಗೆ 1084 ಮಹಿಳೆಯರು.*
17) ಅತೀ ಕಡಿಮೆ ಲಿಂಗಾನುಪಾತ	*ಹರಿಯಾಣ ಪ್ರತಿ 1000 ಪುರುಷರಿಗೆ 877 ಮಹಿಳೆಯರು.*

ಜನಸಂಖ್ಯಾ ಬೆಳವಣಿಗೆಯಿಂದ ಉಂಟಾಗುವ ಪರಿಣಾಮಗಳು : ಮಾನವ ಸಂಪನ್ಮೂಲವು ಆರ್ಥಿಕ ಅಭಿವೃದ್ಧಿಗೆ ಅತ್ಯಾವಶ್ಯಕ. ಆದರೆ ಅದರ ಪ್ರಮಾಣವು ದೇಶದಲ್ಲಿ ದೊರೆಯುವ ನೈಸರ್ಗಿಕ ಸಂಪನ್ಮೂಲಗಳಿಗೆ ಅನುಗುಣವಾಗಿ ಆದರ್ಶ ಪ್ರಮಾಣದಲ್ಲಿರಬೇಕು. ಆದರೆ ಭಾರತವು ಈಗಾಗಲೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವುದನ್ನು ಕಾಣಬಹುದು. ಇದರಿಂದ ಜನಸಂಖ್ಯೆಯು ಸಂಪನ್ಮೂಲವಾಗಿರುವುದರ ಬದಲು ಹೊರೆಯಾಗಿ ಪರಿಣಮಿಸಿದೆ. ಜನಸಂಖ್ಯಾಸ್ಫೋಟವು ಆರ್ಥಿಕ ಪ್ರಗತಿಯ ಮೇಲೆ ದುಷ್ಪರಿಣಾಮವನ್ನುಂಟು ಮಾಡಿದೆ. ಆದರೆ ತೀವ್ರಗತಿಯ ಬೆಳವಣಿಗೆಯು ಹಲವು ಸಮಸ್ಯೆಗಳನ್ನು ಸೃಷ್ಟಿಸಿದೆ. ಅವುಗಳಲ್ಲಿ ನಿರುದ್ಯೋಗ ಸಮಸ್ಯೆ, ಆಹಾರ ಮತ್ತು ಪೌಷ್ಟಿಕಾಂಶದ ಕೊರತೆ ಸಾಮಾಜಿಕ ಹಾಗೂ ನಾಗರೀಕ ಸೌಲಭ್ಯಗಳ ಮೇಲೆ ಅಧಿಕ ಒತ್ತಡ, ಕಡಿಮೆ ತಲಾವಾರು ಆದಾಯ, ನಿಧಾನಗತಿಯ ಆರ್ಥಿಕಾಭಿವೃದ್ಧಿ, ರಾಜಕೀಯ ಕ್ಷೋಭೆ. ಸಾಮಾಜಿಕ ಸಮಸ್ಯೆಗಳು ಹೀಗೆ ದೇಶವು ಎದುರಿಸುತ್ತಿರುವ ಹಲವು ಜ್ವಲಂತ ಸಮಸ್ಯೆಗಳಿಗೆ ಜನಸಂಖ್ಯೆಯ ಹೆಚ್ಚಳವು ಮೂಲಕಾರಣವಾಗಿದೆ.

ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳು :

ಭಾರತ ಸರಕಾರವು ತ್ವರಿತಗತಿಯಲ್ಲಿ ಏರುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟಲು ಹಲವಾರು ಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಿದೆ. ಅವುಗಳಲ್ಲಿ ಕುಟುಂಬ ಯೋಜನೆ, ಮಹಿಳಾ ಕಲ್ಯಾಣ ಯೋಜನೆ, ಶಿಶು ಮರಣ ತಡೆಗಟ್ಟುವುದು, ಕ್ಷೇತ್ರ ಯೋಜನೆಗಳು, ಪ್ರಚಾರ ಜಾಹೀರಾತು. ಕುಟುಂಬ ಯೋಜನಾ ಶಿಬಿರಗಳು, ಗ್ರಾಮೀಣ ಪ್ರದೇಶಗಳಲ್ಲಿ ಅತಿ ಹೆಚ್ಚು ಪ್ರಚಾರವನ್ನು ಮಾಡಿ ಜನರಲ್ಲಿ ಅರಿವು ಮೂಡಿಸುವಲ್ಲಿ ಈ ಕಾರ್ಯಕ್ರಮಗಳು ಮುಂದುವರಿದಿವೆ.

ವಲಸೆ (Migration)

ಮಾನವನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಾಸಸ್ಥಳವನ್ನು ಬದಲಾಯಿಸುವುದನ್ನೇ ವಲಸೆ ಎಂದು ಕರೆಯುವರು. ವಲಸೆಗಾರ ಎಂದರೆ ತನ್ನ ಹುಟ್ಟಿದ ಪ್ರದೇಶವನ್ನು ಬಿಟ್ಟು ಬೇರೊಂದು ಸ್ಥಳದಲ್ಲಿ ಹೋಗಿ ನೆಲೆ ನಿಲ್ಲುವುದು ಎಂದರ್ಥ. ವಲಸೆಗೆ ಅನೇಕ ಕಾರಣಗಳಿವೆ.

ವಲಸೆಯ ಕಾರಣಗಳು : ತಮ್ಮ ವಾಸಸ್ಥಳವನ್ನು ಬದಲಿಸಿ ವಲಸೆ ಹೋದವರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಮದುವೆ ಕಾರಣಕ್ಕಾಗಿ ವಲಸೆ ಹೋಗಿದ್ದಾರೆ. ಇತರೆ ಕಾರಣಗಳಾದ ನೌಕರಿ, ವ್ಯಾಪಾರ, ಉತ್ತಮ ಜೀವನ ಹುಡುಕಾಟ, ಸಾಮಾಜಿಕ ಭದ್ರತೆ, ಉತ್ತಮ ಆರೋಗ್ಯ ಮೊದಲಾದವುಗಳ ಉದ್ದೇಶದಿಂದ ಜನರು ಮೂಲ ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬಂದು ನೆಲೆಸುತ್ತಾರೆ. ಇವುಗಳನ್ನು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕಾರಣಗಳಾಗಿ ವರ್ಗೀಕರಿಸ ಬಹುದು.

ವಲಸೆಯ ವಿಧಗಳು : ವಲಸೆಯಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ. ಅವುಗಳೆಂದರೆ ಅಂತರಾಷ್ಟ್ರೀಯ ವಲಸೆ, ಹಾಗೂ ಆಂತರಿಕ ವಲಸೆ.

1) **ಅಂತರ ರಾಷ್ಟ್ರೀಯ ವಲಸೆ :** ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರಕ್ಕೆ ಹೋಗಿ ನೆಲೆಸುವುದನ್ನು ಅಂತರ ರಾಷ್ಟ್ರೀಯ ವಲಸೆಯೆಂದು ಕರೆಯುವರು.

2) **ಆಂತರಿಕ ವಲಸೆ :** ಒಂದು ರಾಷ್ಟ್ರದ ಒಳಗೆ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗಿ ನೆಲೆಸುವುದನ್ನು ಆಂತರಿಕ ವಲಸೆ ಎಂದು ಕರೆಯುವರು. ಇದರಲ್ಲಿ ನಾಲ್ಕು ಪ್ರಕಾರಗಳಾಗಿ ವಿಂಗಡಿಸಲಾಗಿದೆ.

1) ಹಳ್ಳಿಯಿಂದ ಹಳ್ಳಿಗೆ ವಲಸೆ. 2) ಹಳ್ಳಿಯಿಂದ ನಗರಗಳಿಗೆ ವಲಸೆ.

3) ನಗರಗಳಿಂದ ಹಳ್ಳಿಗೆ ವಲಸೆ. 4) ನಗರಗಳಿಂದ ನಗರಗಳಿಗೆ ವಲಸೆ.

ವಲಸೆಯಿಂದ ಉಂಟಾಗುವ ಸಮಸ್ಯೆಗಳು :

ವಲಸೆಯ ಸಮಸ್ಯೆಗಳು ಹಲವು ರೀತಿಯಲ್ಲಿರುತ್ತವೆ.

- ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ಹೆಚ್ಚು ವಲಸೆ ಹೋಗುವ ಕಾರ್ಮಿಕರು ನೆಲೆಸಲು ಸ್ಥಳವಿಲ್ಲದೆ, ವಸತಿ ಸಮಸ್ಯೆಯಿಂದ ಕೊಳೆಗೇರಿಗಳು ನಿರ್ಮಾಣಗೊಳ್ಳುತ್ತವೆ.
- ವ್ಯಭಿಚಾರ ಹಾಗೂ ಇತರೆ ಅನೈತಿಕ ಚಟುವಟಕೆಗಳಿಗೆ ಬಹುತೇಕ ವಲಸೆಗಳು ಕಾರಣವಾಗುತ್ತವೆ.
- ನೀರು, ವಿದ್ಯುತ್, ರಸ್ತೆ, ವಿದ್ಯಾಭ್ಯಾಸ, ಮೊದಲಾದ ಮೂಲ ಸೌಕರ್ಯಗಳ ಮೇಲೆ ಒತ್ತಡ ಉಂಟಾಗಿ ದೊರೆಯದಂತಹ ಪರಿಸ್ಥಿತಿಗಳುಂಟಾಗುತ್ತವೆ.
- ವಲಸೆ ಇರುವ ಪ್ರದೇಶಗಳಲ್ಲಿ ಜನಸಾಂದ್ರತೆ ಹಾಗೂ ಬೆಳವಣಿಗೆ ಹೆಚ್ಚಾಗುವುದು.
- ಉದ್ಯೋಗಾವಕಾಶಗಳ ಮೇಲೆ ಪರಿಣಾಮ ಉಂಟಾಗುತ್ತದೆ. ಇದು ಕೊಲೆ, ಸುಲಿಗೆ, ದರೋಡೆ, ಘರ್ಷಣೆ ಮೊದಲಾದವುಗಳಿಗೆ ಕಾರಣವಾಗುತ್ತವೆ.

ವಲಸೆಯ ನಿಯಂತ್ರಣ ಕ್ರಮಗಳು :

ಚಟುವಟಿಕೆ : *ನಿಮ್ಮ ಪ್ರದೇಶದಲ್ಲಿ ವಲಸೆ ಹೋದವರು ಅಥವಾ ಬಂದವರೊಂದಿಗೆ ಸಂದರ್ಶನ ನಡೆಸಿ ವಲಸೆಗೆ ಕಾರಣಗಳನ್ನು ತಿಳಿಯಿರಿ.*

ಭಾರತದಲ್ಲಿ ಗ್ರಾಮೀಣ ಭಾಗಗಳಿಂದ ನಗರಗಳಿಗೆ ಹೋಗುವ ವಲಸೆಯಿಂದ ಹಲವಾರು ಸಮಸ್ಯೆಗಳು ಉಂಟಾಗಿದ್ದು, ವಲಸೆಯನ್ನು ತಡೆಗಟ್ಟಲು ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅವುಗಳಲ್ಲಿ : ಕೈಗಾರಿಕಾ ವಲಯಗಳನ್ನು ನಗರಗಳ ಹೊರಗೆ ನಿರ್ಮಿಸುವುದು. ಇದರಿಂದ ಕಾರ್ಮಿಕರು ಉಪನಗರಗಳಲ್ಲಿ ನೆಲೆಸುವಂತೆ ಪ್ರೇರೇಪಿಸುವುದು. ಗ್ರಾಮೀಣ ಕಸುಬು ಉಪಕಸುಬುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡುವುದು. ನಗರಗಳಲ್ಲಿ ಕಂಡುಬರುವ ಮೂಲ ಸೌಕರ್ಯಗಳನ್ನು ಅಂದರೆ ರಸ್ತೆ, ಕುಡಿಯುವ ನೀರು, ಚರಂಡಿ ವ್ಯವಸ್ಥೆ, ಗ್ರಂಥಾಲಯ, ಶೈಕ್ಷಣಿಕ ಸೌಲಭ್ಯಗಳನ್ನು ಹಳ್ಳಿಗಳು ಮತ್ತು ಪಟ್ಟಣಗಳಿಗೆ ವಿಸ್ತರಿಸುವುದು. ಇದನ್ನು **'ಪುರಯೋಜನೆ'** (Pura Project) ಎಂದು ಕರೆದಿರುವರು. ಇದರಿಂದ ನಗರಗಳಿಗೆ ಹೋಗುವ ವಲಸೆಯನ್ನು ನಿಯಂತ್ರಿಸಬಹುದಾಗಿದೆ. ನಗರ ಹಾಗೂ ಸುತ್ತಲಿನ ಗ್ರಾಮೀಣ ವಸತಿಗಳ ನಡುವೆ ಸಾರಿಗೆ ಸೌಲಭ್ಯಗಳನ್ನು ವಿಸ್ತರಿಸುವುದು. ನಗರಗಳಿಗೆ ಸಮೀಪದಲ್ಲಿಯೇ ಹೊರ ವಲಯದ ಅಂಚುಗಳಲ್ಲಿ ಉಪ ನಗರಗಳನ್ನು ನಿರ್ಮಿಸುವುದು.

ಅಭ್ಯಾಸಗಳು

I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.

1) ಜನಸಂಖ್ಯಾ ಹಂಚಿಕೆಯನ್ನು ವಿವರಿಸಲು ________ ಎಂಬ ಪದವನ್ನು ಬಳಸಲಾಗುವುದು.
2) 2011ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ __________
3) ಭಾರತದ ಸರಾಸರಿ ಜನಸಾಂದ್ರತೆಯ ಪ್ರಮಾಣ ಪ್ರ.ಚ.ಕಿ.ಮಿ.ಗೆ __________ ರಷ್ಟಿದೆ.
4) ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಜ್ಯ __________ .
5) ಅತಿ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ರಾಜ್ಯ __________ .
6) ಭಾರತದಲ್ಲಿ ಅತಿ ಹೆಚ್ಚು ಜನಸಾಂದ್ರತೆಯ ರಾಜ್ಯ __________ .

II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.

1) ಜನಸಂಖ್ಯೆ ಎಂದರೇನು?
2) ಜನಸಾಂದ್ರತೆ ಎಂದರೇನು?
3) ವಲಸೆ ಎಂದರೇನು?
4) ವಲಸೆಯ ವಿಧಗಳಾವವು?
5) ಜನಸಂಖ್ಯಾ ಹಂಚಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳಾವವು?
6) ಭಾರತದ ಜನಸಾಂದ್ರತೆಯ ವಲಯಗಳನ್ನು ಕುರಿತು ಬರೆಯಿರಿ.
7) ಜನಸಂಖ್ಯಾ ಬೆಳವಣಿಗೆಯಿಂದ ಉಂಟಾಗುವ ಪರಿಣಾಮಗಳಾವವು?
8) ವಲಸೆಯಿಂದ ಉಂಟಾಗುವ ಸಮಸ್ಯೆಗಳಾವವು? ಹಾಗೂ ವಲಸೆಯನ್ನು ನಿಯಂತ್ರಿಸುವ ಕ್ರಮಗಳಾವವು?

III. ಚಟುವಟಿಕೆಗಳು :

1) ಭಾರತದ ನಕ್ಷೆಯಲ್ಲಿ ಅತಿ ಹೆಚ್ಚು ಜನಸಾಂದ್ರತೆ ಇರುವ ರಾಜ್ಯಗಳನ್ನು ಗುರುತಿಸುವುದು.
2) ನಿಮ್ಮ ಪ್ರದೇಶದಲ್ಲಿ ವಲಸೆ ಬಂದವರು ಅಥವಾ ವಲಸೆ ಹೋದವರ ಬಗ್ಗೆ ಮಾಹಿತಿ ಸಂಗ್ರಹಿಸಿ ಮತ್ತು ಕಾರಣಗಳನ್ನು ಚರ್ಚಿಸಿರಿ.

IV. ಯೋಜಿತ ಕಾರ್ಯ :

1) ನಿಮ್ಮ ಜಿಲ್ಲೆಗೆ ಸಂಬಂಧಿಸಿದ ಜನಸಂಖ್ಯೆಯ ವಿವರಣೆ ಸಂಗ್ರಹಿಸಿ ಸಂಕ್ಷಿಪ್ತ ಟಿಪ್ಪಣೆ ಬರೆಯಿರಿ.

ಅರ್ಥಶಾಸ್ತ್ರ

ಅಧ್ಯಾಯ – 1

ಅಭಿವೃದ್ಧಿ (Development)

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಅಭಿವೃದ್ಧಿ ಮತ್ತು ಅನಾಭಿವೃದ್ಧಿಯ ಅರ್ಥ ಮತ್ತು ಸ್ವರೂಪ.*
- *ಆದಾಯ ಅಭಿವೃದ್ಧಿಯ ಸೂಚಕಗಳು.*
- *ಮಾನವ ಅಭಿವೃದ್ಧಿಯ ಸೂಚಕಗಳು.*
- *ಲಿಂಗ ಸಂಬಂಧಿ ಅಭಿವೃದ್ಧಿ.*

ಪ್ರತಿಯೊಬ್ಬ ವಿವೇಕಯುತ ವ್ಯಕ್ತಿಯು ತನ್ನ ಜೀವನಮಟ್ಟವನ್ನು ಉತ್ತಮಪಡಿಸಲು ನಿರಂತರವಾಗಿ ಪ್ರಯತ್ನಿಸುತ್ತಿರುತ್ತಾನೆ. ಅದೇ ರೀತಿಯಲ್ಲಿ ಪ್ರತಿಯೊಂದು ಅರ್ಥವ್ಯವಸ್ಥೆಯು ನಿಂತ ನೀರಿನಂತೆ ಸ್ಥಿರವಾಗಿರುವುದಿಲ್ಲ. ಬದಲಾಗಿ ಅದು ಹರಿವ ನೀರಿನಂತೆ ನಿರಂತರ ಪರಿವರ್ತನೆಗೊಳ್ಳುತ್ತಾ ಆಧುನಿಕತೆಯತ್ತ ಪ್ರಗತಿಹೊಂದಲು ಪ್ರಯತ್ನಿಸುತ್ತದೆ. ಈ ಅಧ್ಯಾಯದಲ್ಲಿ ಆರ್ಥಿಕ ಅಭಿವೃದ್ಧಿಯ ಪರಿಕಲ್ಪನೆ ಹಾಗೂ ಅಭಿವೃದ್ಧಿಯನ್ನು ಅಳೆಯುವ ಮಾನದಂಡಗಳನ್ನು ಕುರಿತು ತಿಳಿಯೋಣ.

1. ಅಭಿವೃದ್ಧಿ ಮತ್ತು ಅನಾಭಿವೃದ್ಧಿ (Development and Underdevelopment)

ಅಭಿವೃದ್ಧಿ : ಅಭಿವೃದ್ಧಿ ಎಂಬ ಪದವನ್ನು ನಮ್ಮ ದಿನನಿತ್ಯದ ಬದುಕಿನಲ್ಲಿ ಅನೇಕ ಬಾರಿ ಬಳಸುತ್ತೇವೆ. ಯಾವುದೇ ಒಂದು ಕ್ಷೇತ್ರ ಇಲ್ಲವೇ ವ್ಯಕ್ತಿಗಳ ಪ್ರಗತಿಯನ್ನು ಸೂಚಿಸಲು ನಾವು ಸಾಮಾನ್ಯವಾಗಿ 'ಅಭಿವೃದ್ಧಿ' ಪದವನ್ನು ಬಳಸುತ್ತೇವೆ. ಉದಾ : ಗ್ರಾಮೀಣ ಅಭಿವೃದ್ಧಿ, ಸಾಮಾಜಿಕ ಅಭಿವೃದ್ಧಿ, ಶೈಕ್ಷಣಿಕ ಅಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇತ್ಯಾದಿ. ಹಾಗೆಯೇ ಒಂದು ದೇಶದ ಆರ್ಥಿಕ ಪ್ರಗತಿಯನ್ನು ನಾವು ಆರ್ಥಿಕ ಅಭಿವೃದ್ಧಿ ಎಂದು ಗುರುತಿಸುತ್ತೇವೆ. ಆರ್ಥಿಕ ಅಭಿವೃದ್ಧಿಯ ವ್ಯಾಖ್ಯಾನವು ಕಾಲದಿಂದ ಕಾಲಕ್ಕೆ ಬದಲಾಗುತ್ತಿದ್ದು, ಅದರ ಅರ್ಥವ್ಯಾಪ್ತಿಯು ಇನ್ನೂ ಹೆಚ್ಚು ವಿಸ್ತಾರಗೊಳ್ಳುತ್ತಿದೆ.

ಸಾಮಾನ್ಯವಾಗಿ ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾಗುವ ಎಲ್ಲ ಸರಕು–ಸೇವೆಗಳ ಒಟ್ಟು ಮಾರುಕಟ್ಟೆ ಮೌಲ್ಯವನ್ನು ರಾಷ್ಟ್ರೀಯ ಆದಾಯ ಎನ್ನುತ್ತೇವೆ. ಬಹು ಹಿಂದಿನಿಂದ, ರಾಷ್ಟ್ರೀಯ ಆದಾಯದ ನಿರಂತರ ಹೆಚ್ಚಳವನ್ನು ಆರ್ಥಿಕ ಅಭಿವೃದ್ಧಿ ಎಂದು ಗುರುತಿಸಲಾಗುತ್ತಿತ್ತು.

ರಾಷ್ಟ್ರೀಯ ಆದಾಯವು ಹೆಚ್ಚಳವಾದಂತೆ, ರಾಷ್ಟ್ರದ ಜನರ ಆದಾಯವು ಹೆಚ್ಚಳವಾಗಿ ಉತ್ತಮ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳನ್ನು ಕುಟುಂಬದ ಸದಸ್ಯರು ಪಡೆಯಲು ಸಾಧ್ಯವಾಗುತ್ತದೆ. ಅಗತ್ಯ ಸರಕು ಸೇವೆಗಳನ್ನು ಕೊಳ್ಳುವುದರ ಜೊತೆಗೆ, ಭವಿಷ್ಯಕ್ಕಾಗಿ ಉಳಿತಾಯ ಮಾಡಿ, ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ.

ಜನರ ಜೀವನ ಮಟ್ಟ ಸುಧಾರಿಸಿದಂತೆ ಜನರು ಇನ್ನೂ ಉತ್ತಮ ಸರಕು ಸೇವೆಗಳನ್ನು ಅಪೇಕ್ಷಿಸುತ್ತಾರೆ. ಹಾಗಾಗಿ ಕೈಗಾರಿಕೆ ಹಾಗೂ ಸೇವಾ ವಲಯಗಳಲ್ಲಿ ಉದ್ಯೋಗ ಅವಕಾಶಗಳು ಹೆಚ್ಚಾಗುತ್ತದೆ. ಅದು ಕೃಷಿಯಲ್ಲಿನ ಹೆಚ್ಚುವರಿ ಶ್ರಮಿಕರಿಗೂ ಸೂಕ್ತ ತರಬೇತಿ ನೀಡಿ ಉದ್ಯೋಗ ನೀಡುತ್ತದೆ. ಇದರಿಂದ ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿ ದುಡಿಯುತ್ತಿರುವ ಸಂಖ್ಯೆ ಹೆಚ್ಚಳವಾಗಿ ರಾಷ್ಟ್ರೀಯ ಆದಾಯಕ್ಕೆ

ಈ ವಲಯಗಳ ಕೊಡುಗೆ ಹೆಚ್ಚಳವಾಗುತ್ತದೆ. ಹೀಗೆ ಅರ್ಥವ್ಯವಸ್ಥೆಯಲ್ಲಿ ಕೃಷಿ ವಲಯದಿಂದ ಕೃಷಿಯೇತರ ವಲಯಗಳಲ್ಲಿ ಹೆಚ್ಚಿನ ಜನರು ಕೆಲಸ ಮಾಡಿ, ರಾಷ್ಟ್ರೀಯ ಆದಾಯಕ್ಕೆ ಹೆಚ್ಚಿನ ಕೊಡುಗೆ ನೀಡುವುದನ್ನು **'ರಚನಾತ್ಮಕ ಬದಲಾವಣೆ'** ಎಂದು ಕರೆಯುತ್ತಾರೆ. ಈ ಪ್ರಕ್ರಿಯೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿದಂತೆ ಉತ್ಪಾದನಾ ಸಾಮರ್ಥ್ಯವು ಹೆಚ್ಚಾಗಿ ಆರ್ಥಿಕ ಅಭಿವೃದ್ಧಿ ಇನ್ನೂ ತೀವ್ರಗೊಳ್ಳುತ್ತದೆ.

ಆದರೆ ಆರ್ಥಿಕ ಅಭಿವೃದ್ಧಿಯ ಅರ್ಥಪೂರ್ಣವು ಹಾಗೂ ಎಲ್ಲಾರನ್ನು ಒಳಗೊಳ್ಳುವ ಅಭಿವೃದ್ಧಿಯಾದರೆ [Inclusive growth] ಮಾತ್ರ ಅದು ನೈಜ ಅಭಿವೃದ್ಧಿಯಾಗುತ್ತದೆ. ದೇಶದಲ್ಲಿ ಉತ್ಪಾದನೆಯಾಗುವ ಎಲ್ಲಾ ಸರಕು ಸೇವೆಗಳು ಹಾಗೂ ಆದಾಯದ ಹಂಚಿಕೆ ಎಲ್ಲ ವರ್ಗದ ಜನ ಸಾಮಾನ್ಯರಿಗೂ ತಲುಪಬೇಕಾಗುತ್ತದೆ. ಅಭಿವೃದ್ಧಿಯ ಪಾಲು ಎಲ್ಲರಿಗೂ ತಲುಪಬೇಕಾದರೆ ತಲಾದಾಯದ ಹೆಚ್ಚಳದ ಜೊತೆಗೆ, ಬಡತನ, ನಿರುದ್ಯೋಗ ಹಾಗೂ ಅಸಮಾನತೆ ಕಡಿಮೆಯಾಗಿ ದೇಶದ ಎಲ್ಲ ಜನರಿಗೆ ಪೌಷ್ಟಿಕ ಆಹಾರ, ಸಾಕಷ್ಟು ಬಟ್ಟೆ, ವಸತಿ, ಗುಣಾತ್ಮಕ ಶಿಕ್ಷಣ, ಆರೋಗ್ಯದ ಸುರಕ್ಷತೆ, ಶುದ್ಧವಾದ ಕುಡಿಯುವ ನೀರು, ಶುದ್ಧವಾದ ಗಾಳಿ, ಗುಣಮಟ್ಟದ ಶೌಚಾಲಯ ವ್ಯವಸ್ಥೆ, ಉತ್ತಮ ಪರಿಸರ ನಿಷ್ಪಕ್ಷಪಾತ ನ್ಯಾಯಿಕ ವ್ಯವಸ್ಥೆ ಮುಂತಾದ ಸೌಲಭ್ಯಗಳು ಎಲ್ಲಾ ನಾಗರಿಕರಿಗೂ ದೊರೆಯುವಂತೆ ಮಾಡಬೇಕಾಗುತ್ತದೆ. ಇಂತಹ ವ್ಯವಸ್ಥೆಯಿಂದ ಮಾತ್ರ ಜನರ ಜೀವನಮಟ್ಟ ಶ್ರೀಮಂತವಾಗಿ ನೈಜ ಅಭಿವೃದ್ಧಿಯಾಗುತ್ತದೆ.

ಅನಾಭಿವೃದ್ಧಿ : 'ಅನಾಭಿವೃದ್ಧಿ' ಎಂಬ ಶಬ್ದವು ಹಿಂದುಳಿದ, ಅಭಿವೃದ್ಧಿ ಹೊಂದದೇ ಇರುವ ನಿಶ್ಚಲ ಸ್ಥಿತಿಯನ್ನು ಸೂಚಿಸುತ್ತದೆ. ಅನಾಭಿವೃದ್ಧಿ ದೇಶದಲ್ಲಿ ಒಟ್ಟಾರೆ ಉತ್ಪಾದನೆ ಕಡಿಮೆಯಿದ್ದು, ಜನರ ಆದಾಯವು ಅತ್ಯಂತ ಕಡಿಮೆ ಇರುತ್ತದೆ. ಬಹುತೇಕ ಜನರಿಗೆ ಕನಿಷ್ಠ ಮೂಲಭೂತ ಅವಶ್ಯಕತೆಗಳಾದ ಊಟ, ಬಟ್ಟೆ, ವಸತಿಯನ್ನು ಪಡೆಯುವುದೂ ಕಷ್ಟವಾಗಿರುತ್ತದೆ. ಬಹುಸಂಖ್ಯಾತ ಜನರು ಅನಕ್ಷರಸ್ಥರಾಗಿದ್ದು, ಮೂಢನಂಬಿಕೆಗಳಲ್ಲಿ ಮುಳುಗಿರುತ್ತಾರೆ. ಆರೋಗ್ಯ ಮತ್ತು ನೈರ್ಮಲ್ಯದ ಸೌಲಭ್ಯಗಳಿಲ್ಲದೆ ಅನಾರೋಗ್ಯದಿಂದ ಬಳಲುತ್ತಿರುತ್ತಾರೆ. ಯಾವುದೇ ನಾಗರಿಕ ಸೌಲಭ್ಯಗಳಿರುವುದಿಲ್ಲ. ಸ್ವಚ್ಛಂದವಾಗಿ ಬದುಕುವ ಸ್ವಾತಂತ್ರ್ಯವೂ ಇಲ್ಲಿರುವುದಿಲ್ಲ. ಉದಾಹರಣೆಯಾಗಿ ಸ್ವಾತಂತ್ರ್ಯ ಪೂರ್ವ ಭಾರತವು ಬ್ರಿಟಿಷರ ದೀರ್ಘಕಾಲದ ಆಡಳಿತ ಹಾಗೂ ಆರ್ಥಿಕ ಶೋಷಣೆಯ ಪರಿಣಾಮವಾಗಿ ಒಂದು ಬಡ ರಾಷ್ಟ್ರವಾಗಿ ಮಾರ್ಪಟ್ಟಿತ್ತು. ಹಾಗಾಗಿ ಭಾರತವನ್ನು ಆರ್ಥಿಕವಾಗಿ ಬಡರಾಷ್ಟ್ರ, ಅನಾಭಿವೃದ್ಧಿ ರಾಷ್ಟ್ರ ಎಂದು ಕರೆಯಲಾಗುತ್ತಿತ್ತು.

ಎರಡನೆಯ ಮಹಾಯುದ್ಧದ ನಂತರ ಯುರೋಪಿಯನ್ನರಿಂದ ಬಿಡುಗಡೆ ಪಡೆದ ಬಹುತೇಕ ಎಲ್ಲ ದೇಶಗಳಲ್ಲಿ ಪರಿಸ್ಥಿತಿಯು ಭಾರತಕ್ಕಿಂತ ಭಿನ್ನವಾಗಿಯೇನೂ ಇರಲಿಲ್ಲ. ಈ ಎಲ್ಲ ದೇಶಗಳನ್ನು ಬಡ ದೇಶಗಳು, ಹಿಂದುಳಿದ ದೇಶಗಳು, ಅನಾಭಿವೃದ್ಧಿ ದೇಶಗಳು ಹೀಗೆ ನಾನಾ ಹೆಸರುಗಳಿಂದ ಕರೆಯಲಾಗುತ್ತಿತ್ತು. ಈಗ ಈ ಎಲ್ಲ ದೇಶಗಳಲ್ಲಿ ಪರಿಸ್ಥಿತಿ ಬದಲಾಗುತ್ತಿದೆ. ಅಭಿವೃದ್ಧಿ ಚಟುವಟಿಕೆಗಳು ಚುರುಕುಗೊಂಡಿವೆ. ಇವು ಅಭಿವೃದ್ಧಿಯ ಪಥದಲ್ಲಿ ಬೇರೆ ಬೇರೆ ಹಂತಗಳಲ್ಲಿ ಮುನ್ನಡೆಯುತ್ತಿವೆ. ಹಾಗಾಗಿ ಅಂದಿನ ಅನಾಭಿವೃದ್ಧಿ ದೇಶಗಳನ್ನು ಈಗ ಅಭಿವೃದ್ಧಿ ಹೊಂದುತ್ತಿರುವ (ಅಭಿವೃದ್ಧಿಶೀಲ) ದೇಶಗಳು ಎಂದು ಕರೆಯಲಾಗುತ್ತಿದೆ.

ವಿಶ್ವ ಅಭಿವೃದ್ಧಿ ವರದಿಯ ಪ್ರಕಾರ ಮಧ್ಯಮ ವರಮಾನದ ಹಾಗೂ ಕಡಿಮೆ ವರಮಾನದ ದೇಶಗಳೆಂದು ಗುರುತಿಸಲ್ಪಡುವ ಎಲ್ಲ ದೇಶಗಳನ್ನು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಎಂದು ಕರೆಯಲಾಗುತ್ತಿದೆ. ಭಾರತವು ಸ್ವಾತಂತ್ರ್ಯ ನಂತರ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದು, ಅಭಿವೃದ್ಧಿ ಚಟುವಟಿಕೆಗಳನ್ನು ತೀವ್ರಗೊಳಿಸಿತು. ಇದರ ಪರಿಣಾಮವಾಗಿ ಭಾರತವು ಅಭಿವೃದ್ಧಿ ಹೊಂದುತ್ತಿರುವ ದೇಶವೆನಿಸಿದೆ. ಇತ್ತೀಚಿನ ವರ್ಷಗಳಲ್ಲಿ ಇದರ ಅಭಿವೃದ್ಧಿಯ ವೇಗ ಮತ್ತಷ್ಟು ಹೆಚ್ಚಿದೆ.

ನಿಮಗಿದು ತಿಳಿದಿರಲಿ :

ವಿಶ್ವ ಅಭಿವೃದ್ಧಿ ವರದಿ–2012

2012 ರ ವಿಶ್ವ ಅಭಿವೃದ್ಧಿ ವರದಿಯ ಪ್ರಕಾರ 2010 ರಲ್ಲಿನ ತಲಾದಾಯದಂತೆ ದೇಶಗಳ ವರ್ಗೀಕರಣ ಈ ರೀತಿಯಿದೆ.


1. ***ಹೆಚ್ಚು ಆದಾಯದ ದೇಶಗಳು :*** *12,276 ಡಾಲರುಗಳಿಗಿಂತ ಹೆಚ್ಚು ತಲಾದಾಯ ಹೊಂದಿದ ದೇಶಗಳು.* ***ಉದಾ :*** *ಅಮೆರಿಕಾ, ಕೆನಡಾ, ಇಂಗ್ಲೆಂಡ್, ಜಪಾನ್, ಇತ್ಯಾದಿ (ಸುಮಾರು 30 ದೇಶಗಳು).*
2. ***ಮಧ್ಯಮ ಆದಾಯದ ದೇಶಗಳು :*** *ಕನಿಷ್ಠ 1006 ರಿಂದ ಗರಿಷ್ಠ 12,275 ಡಾಲರುಗಳಷ್ಟು ತಲಾದಾಯ ಹೊಂದಿದ ದೇಶಗಳು.* ***ಉದಾ :*** *ಚೀನಾ, ಭಾರತ, ಕೊರಿಯಾ, ಈಜಿಪ್ಟ್, ಇರಾನ್ ಇತ್ಯಾದಿ.*
3. ***ಕಡಿಮೆ ಆದಾಯದ ದೇಶಗಳು :*** *1005 ಡಾಲರುಗಳಿಗಿಂತ ಕಡಿಮೆ ತಲಾದಾಯ ಹೊಂದಿರುವ ದೇಶಗಳು.* ***ಉದಾ:*** *ಇಥಿಯೋಪಿಯಾ, ಕೀನ್ಯಾ, ಬಾಂಗ್ಲಾದೇಶ, ನೇಪಾಳ ಇತ್ಯಾದಿ.*

2. ಆದಾಯ ಅಭಿವೃದ್ಧಿಯ ಸೂಚಕಗಳು (Income indicators of development)

ಒಂದು ದೇಶದ ಅಭಿವೃದ್ಧಿಯು ಹಲವಾರು ಅಂಶಗಳನ್ನು ಅವಲಂಬಿಸಿದೆ. ಅವುಗಳಲ್ಲಿ ಅತ್ಯಂತ ಪ್ರಮುಖವಾದ ಅಂಶ ಅಲ್ಲಿನ ಆದಾಯ. ಒಂದು ದೇಶದ ಆದಾಯವೆಂದರೆ, ಆ ದೇಶದಲ್ಲಿ ವಾಸಿಸುತ್ತಿರುವ ಜನರೆಲ್ಲರ ಒಟ್ಟು ಆದಾಯ. ಇದನ್ನು ರಾಷ್ಟ್ರೀಯ ಆದಾಯ ಎನ್ನುತ್ತೇವೆ. ಬಹುಹಿಂದಿನಿಂದ ದೇಶದ ಆರ್ಥಿಕ ಅಭಿವೃದ್ಧಿಯನ್ನು ಗುರುತಿಸುವಾಗ ಹಾಗೂ ಒಂದು ದೇಶದ ಅಭಿವೃದ್ಧಿಯನ್ನು ಇತರೆ ದೇಶಗಳ ಅಭಿವೃದ್ಧಿಯೊಂದಿಗೆ ಹೋಲಿಸುವಾಗ ಅಲ್ಲಿನ ರಾಷ್ಟ್ರೀಯ ಆದಾಯವನ್ನು ಅಭಿವೃದ್ಧಿಯ ಸೂಚಕವಾಗಿ ಬಳಸಲಾಗುತ್ತಿದೆ. ಇದರ ಪ್ರಕಾರ ಹೆಚ್ಚಿನ ಆದಾಯ ಹೊಂದಿದ ದೇಶಗಳು ಮುಂದುವರಿದ ದೇಶಗಳೆನಿಸುತ್ತವೆ. ಇತರೆ ದೇಶಗಳು ಹಿಂದುಳಿದ ದೇಶಗಳೆನಿಸುತ್ತವೆ.

ಆದರೆ ಒಂದು ದೇಶದಲ್ಲಿ ರಾಷ್ಟ್ರೀಯ ಆದಾಯ ಹೆಚ್ಚಾದಂತೆ ಜನಸಂಖ್ಯೆಯಲ್ಲಿ ಹೆಚ್ಚಳವಾದರೆ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಬೇರೆ ಬೇರೆ ಪ್ರಮಾಣದ ಜನಸಂಖ್ಯೆ ಹೊಂದಿರುವ ದೇಶಗಳ ಅಭಿವೃದ್ಧಿಯನ್ನು ರಾಷ್ಟ್ರೀಯ ಆದಾಯದಿಂದ ಅಳೆಯುವುದು ಸಮಂಜಸವೆನಿಸುವುದಿಲ್ಲ.

ರಾಷ್ಟ್ರೀಯ ಆದಾಯಕ್ಕೆ ಬದಲಾಗಿ ತಲಾದಾಯವನ್ನು ಅಭಿವೃದ್ಧಿಯ ಸೂಚಕವಾಗಿ ಬಳಕೆಗೆ ತರಲಾಯಿತು. ದೇಶದ ರಾಷ್ಟ್ರೀಯ ಆದಾಯವನ್ನು ಅಲ್ಲಿನ ಒಟ್ಟು ಜನಸಂಖ್ಯೆಯಿಂದ ಭಾಗಿಸುವ ಮೂಲಕ ತಲಾದಾಯವನ್ನು ಕಂಡುಹಿಡಿಯಲಾಗುತ್ತದೆ. ಇದು ದೇಶದ ಪ್ರತಿಯೊಬ್ಬ ವ್ಯಕ್ತಿಯ ಸರಾಸರಿ ಆದಾಯವಾಗಿದೆ. ತಲಾದಾಯ ಹೆಚ್ಚಾದಂತೆ ಜನರ ಜೀವನ ಮಟ್ಟದಲ್ಲಿ ಹೆಚ್ಚಳವಾಗಿ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಭಾವಿಸಲಾಗಿದೆ. ಆದರೆ ಅದೂ ಕೂಡ ನೈಜವಾದ ಅಭಿವೃದ್ಧಿಯ ಮಾಪಕವಾಗುವುದಿಲ್ಲ. ಏಕೆಂದರೆ ಅದು ಆದಾಯವು ಜನರ ನಡುವೆ ಹೇಗೆ ಹಂಚಿಕೆಯಾಗಿದೆ ಎಂಬುದನ್ನು ತಿಳಿಸುವುದಿಲ್ಲ.

ದೇಶ–1 : ಆದಾಯದ ಅಸಮಾನ ಹಂಚಿಕೆ	ದೇಶ–2 : ಆದಾಯದ ಸಮಾನ ಹಂಚಿಕೆ
	

ಮೇಲಿನ ಎರಡು ಚಿತ್ರಗಳನ್ನು ಗಮನಿಸಿ. ಇವೆರಡೂ ಚಿತ್ರಗಳು ಎರಡು ಭಿನ್ನ ದೇಶಗಳ ಆದಾಯದ ಹಂಚಿಕೆಯನ್ನು ತಿಳಿಸುತ್ತವೆ. ಎರಡೂ ದೇಶಗಳಲ್ಲಿ ತಲಾದಾಯ ಒಂದೇ ಪ್ರಮಾಣದಲ್ಲಿದೆ. ಆದರೆ ಜನರ ನಡುವಿನ ಆದಾಯದ ಹಂಚಿಕೆ ಭಿನ್ನವಾಗಿದೆ. ಮೊದಲನೆ ದೇಶದಲ್ಲಿ ಆದಾಯವು ಅಸಮಾನವಾಗಿ ಹಂಚಿಕೆಯಾಗಿದೆ. ಆದುದರಿಂದ ಅಲ್ಲಿ ಕೆಲವೇ ಜನರು ಶ್ರೀಮಂತರಿದ್ದು, ಹಲವರು ಬಡವರಾಗಿದ್ದಾರೆ. ಬಡವರು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಆದರೆ ಎರಡನೇ ದೇಶದಲ್ಲಿ ಆದಾಯ ಎಲ್ಲ ಜನರಲ್ಲಿ ಸಮಾನವಾಗಿ ಹಂಚಿಕೆಯಾಗಿದೆ. ಆದುದರಿಂದ ಅಲ್ಲಿ ಯಾರೂ ಬಡವರಿಲ್ಲ, ಹಾಗೆಯೇ ಯಾರೂ ಶ್ರೀಮಂತರಿಲ್ಲ. ಎಲ್ಲರಿಗೂ ಸಮಾನ ಸೌಲಭ್ಯಗಳಿವೆ.

ಆದಾಯ ಎಲ್ಲ ಜನರಲ್ಲಿ ಸಮಾನವಾಗಿ ಹಂಚಿಕೆಯಾಗದೆ, ಕೇವಲ ತಲಾದಾಯ ಹೆಚ್ಚಳವಾದ ಮಾತ್ರಕ್ಕೆ ಅಲ್ಲಿನ ಜನರ ಜೀವನಮಟ್ಟ ಸುಧಾರಿಸಲಾರದು. ತಲಾದಾಯವು ಶಿಕ್ಷಣ, ಆರೋಗ್ಯ ಮುಂತಾದ ಸಾಮಾಜಿಕ ಅಂಶಗಳನ್ನು ಪರಿಗಣನೆ ಮಾಡುವುದಿಲ್ಲ. ಹಾಗಾಗಿ ಅಭಿವೃದ್ಧಿಯನ್ನು ಅಳೆಯಲು ಅನೇಕ ಪರ್ಯಾಯ ಮಾನದಂಡಗಳನ್ನು ಹುಡುಕಲಾಗಿದೆ.

3. ಮಾನವ ಅಭಿವೃದ್ಧಿ ಸೂಚಕಗಳು (Human Development Indicators)

ಆರ್ಥಿಕ ಅಭಿವೃದ್ಧಿಯ ಮುಖ್ಯ ಗುರಿ ಮಾನವ ಅಭಿವೃದ್ಧಿ. ಜನರು ಉತ್ತಮ ಗುಣಮಟ್ಟದ ಜೀವನವನ್ನು ನಡೆಸಲು ಅನುವು ಮಾಡುವುದೇ ಇದರ ಉದ್ದೇಶ. ಜನರು ಉತ್ತಮ ಗುಣಮಟ್ಟದ ಜೀವನವನ್ನು ನಡೆಸಬೇಕಾದರೆ ಉತ್ತಮ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ, ಕಾನೂನಿನ ನೆರವು, ಸಾಮಾಜಿಕ ಭದ್ರತೆ ಮುಂತಾದ ಸೌಲಭ್ಯಗಳ ಜೊತೆಗೆ ಶುದ್ಧವಾದ ನೀರು, ಶುದ್ಧವಾದ ಗಾಳಿ, ಸ್ವಚ್ಛವಾದ ಪರಿಸರ ಬೇಕಾಗುತ್ತದೆ.

ಮಾನವನ ಜೀವನದ ಗುಣಮಟ್ಟವನ್ನು ಅಳೆಯುವುದಕ್ಕಾಗಿ 'ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ'(UNDP)ವು 'ಮಾನವ ಅಭಿವೃದ್ಧಿ ಸೂಚಿ' (HDI) ಎಂಬ ಮಾನದಂಡವನ್ನು ರೂಪಿಸಿದೆ. ಮಾನವ ಅಭಿವೃದ್ಧಿ ಸೂಚಿಯಲ್ಲಿ ಆರೋಗ್ಯ, ಜ್ಞಾನ ಹಾಗೂ ಜೀವನಮಟ್ಟವನ್ನು ಅಳೆಯಲು ಮೂರು ಸೂಚಕಗಳನ್ನು ರೂಪಿಸಲಾಗಿದೆ.

ಅವುಗಳೆಂದರೆ : 1. ನಿರೀಕ್ಷಿತ ಜೀವಿತಾವಧಿ 2. ಶೈಕ್ಷಣಿಕ ಸಾಧನೆ 3. ಜೀವನ ಮಟ್ಟ

ದೇಶದ ಜನರು ಬದುಕುಳಿಯಬಹುದಾದ ಸರಾಸರಿ ವಯಸ್ಸನ್ನು ನಿರೀಕ್ಷಿತ ಜೀವಿತಾವಧಿ ಎನ್ನುತ್ತೇವೆ. ಹಾಗಾದರೆ ಮನುಷ್ಯ ದೀರ್ಘಕಾಲದವರೆಗೆ ಬದುಕಲು ಸಹಾಯಕವಾಗುವ ಅಂಶಗಳಾವುವು? ಪೌಷ್ಟಿಕ

ಆಹಾರದ ಲಭ್ಯತೆ, ಉತ್ತಮ ಆರೋಗ್ಯ ಮತ್ತು ನೈರ್ಮಲ್ಯದ ಸೌಲಭ್ಯಗಳು, ಶುದ್ಧವಾದ ಪರಿಸರ ಮುಂತಾದುವು ಮನುಷ್ಯನ ಆಯಸ್ಸನ್ನು ಹೆಚ್ಚಿಸಲು ಸಹಾಯಕವಾಗಿವೆ. ಈ ಎಲ್ಲ ಅಂಶಗಳನ್ನು ನಿರೀಕ್ಷಿತ ಜೀವಿತಾವಧಿ ಪ್ರತಿನಿಧಿಸುತ್ತದೆ.

ಶಿಕ್ಷಣದ ಮಟ್ಟ ಹೆಚ್ಚಾದಂತೆ ದೇಶದ ಆರ್ಥಿಕ ಪ್ರಗತಿ ಹೆಚ್ಚಾಗುತ್ತದೆ. ಒಂದು ದೇಶದ ಶೈಕ್ಷಣಿಕ ಸಾಧನೆಯನ್ನು ಅಳೆಯುವುದಾದರೂ ಹೇಗೆ?. ದೇಶದಲ್ಲಿನ 25 ವರ್ಷಗಳ ಮೇಲ್ಪಟ್ಟ ಜನರು ಪೂರೈಸಿರುವ 'ಸರಾಸರಿ ಶಾಲಾ ಶಿಕ್ಷಣದ ವರ್ಷಗಳು' ಮತ್ತು 5 ವರ್ಷದ ಮಕ್ಕಳು ತಮ್ಮ ಜೀವಿತಾವಧಿಯಲ್ಲಿ ಪಡೆಯಲಿರುವ 'ನಿರೀಕ್ಷಿತ ಶಾಲಾ ಶಿಕ್ಷಣದ ವರ್ಷಗಳು', ಈ ಎರಡು ಅಂಶಗಳ ಆಧಾರದ ಮೇಲೆ ಒಂದು ದೇಶದ ಶೈಕ್ಷಣಿಕ ಸಾಧನೆಯನ್ನು ಅಳೆಯಲಾಗುತ್ತದೆ.

ಜೀವನಮಟ್ಟವನ್ನು ಒಟ್ಟು ರಾಷ್ಟ್ರೀಯ ಆದಾಯದಿಂದ ಗಳಿಸಿದ ತಲಾದಾಯದ (Gross National Income percapita) ಕೊಂಡುಕೊಳ್ಳುವ ಶಕ್ತಿ, ಸಮಾನತೆಯ ತತ್ವದ ಆದಾರದ ಮೇಲೆ ಅಳೆಯಲಾಗುತ್ತದೆ.

ಹೀಗೆ ಒಂದು ದೇಶದ ಜನರ ನಿರೀಕ್ಷಿತ ಜೀವಿತಾವಧಿ, ಶೈಕ್ಷಣಿಕ ಸಾಧನೆ ಹಾಗೂ ತಲಾವರಮಾನ ಆ ದೇಶದ ಜನರ ಅಭಿವೃದ್ಧಿಯನ್ನು ಪ್ರತಿನಿಧಿಸುತ್ತವೆ. ಈ ಮೂರು ಅಂಶಗಳನ್ನು ಮಾನವ ಅಭಿವೃದ್ಧಿಯ ಸೂಚಕಗಳು ಎನ್ನುತ್ತಾರೆ. ಈ ಮೂರು ಸೂಚಕಗಳ ಸರಾಸರಿಯೇ **'ಮಾನವ ಅಭಿವೃದ್ಧಿ ಸೂಚಿ'(HDI)**.

ಮಾನವ ಅಭಿವೃದ್ಧಿ ಸೂಚಿಯ ಆಧಾರದ ಮೇಲೆ ದೇಶಗಳ ಅಭಿವೃದ್ಧಿಯನ್ನು ಗುರುತಿಸಲಾಗುತ್ತದೆ. ಹಾಗೆಯೇ ದೇಶಗಳ ಅಭಿವೃದ್ಧಿಯನ್ನು ಪರಸ್ಪರ ಹೋಲಿಕೆ ಮಾಡಲಾಗುತ್ತದೆ. ಮಾನವ ಅಭಿವೃದ್ಧಿ ಸೂಚಿಯ ಆಧಾರದ ಮೇಲೆ ವಿಶ್ವದ ದೇಶಗಳನ್ನು ಮೂರು ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ.

ನಿಮಗಿದು ತಿಳಿದಿರಲಿ :

ಮಾನವ ಅಭಿವೃದ್ಧಿ ಸೂಚಿ (HDI)

'ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ'ವು ಮಾನವನ ಜೀವನದ ಗುಣಮಟ್ಟವನ್ನು ಅಳೆಯುವುದಕ್ಕಾಗಿ ರೂಪಿಸಿದ ಮಾನದಂಡವೇ ಮಾನವ ಅಭಿವೃದ್ಧಿ ಸೂಚಿ. ಇದನ್ನು 1990 ರಲ್ಲಿ ರೂಪಿಸಲಾಯಿತು. ಇದನ್ನು ರೂಪಿಸಿದ ಕೀರ್ತಿ ಪಾಕಿಸ್ತಾನದ ಅರ್ಥಶಾಸ್ತ್ರಜ್ಞ ಮೆಹಬೂಬ್ ಉಲ್‌ಹಕ್ ಅವರಿಗೆ ಸಲ್ಲುತ್ತದೆ. ಭಾರತದ ಡಾ. ಅಮರ್ತ್ಯಸೇನ್ ಸಹ ಇದನ್ನು ರೂಪಿಸಲು ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದ್ದಾರೆ. ಮಾನವ ಅಭಿವೃದ್ಧಿ ಸೂಚಿಯ ಆಧಾರದ ಮೇಲೆ ವಿಶ್ವದ ರಾಷ್ಟ್ರಗಳನ್ನು ಮೂರು ಗುಂಪುಗಳನ್ನಾಗಿ ಮಾಡಲಾಗಿದೆ.

- ***ಹೆಚ್ಚು ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳು*** *– ಇವು 0.8 ಕ್ಕಿಂತ ಹೆಚ್ಚು ಮಾನವ ಅಭಿವೃದ್ಧಿ ಸೂಚಿ ಹೊಂದಿವೆ.*
- ***ಮಧ್ಯಮ ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳು*** *– ಇವು 0.5 ಮತ್ತು 0.8 ರ ನಡುವಿನ ಮಾನವ ಅಭಿವೃದ್ಧಿ ಸೂಚಿ ಹೊಂದಿವೆ.*
- ***ಕಡಿಮೆ ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳು*** *– ಇವು 0.5 ಕ್ಕಿಂತ ಕಡಿಮೆ ಮಾನವ ಅಭಿವೃದ್ಧಿ ಸೂಚಿ ಹೊಂದಿವೆ.*

ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಾನವ ಅಭಿವೃದ್ಧಿ ಸೂಚಿಯು ನಿರಂತರವಾಗಿ ಹೆಚ್ಚುತ್ತಿದ್ದು, ಅದು 2011 ರಲ್ಲಿ 0.547 ರಷ್ಟಿತ್ತು. ಹಾಗಾಗಿ ಭಾರತವು ಇಂದು ಮಧ್ಯಮ ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳ ಗುಂಪಿಗೆ ಸೇರಿದೆ.

2011ರ ಮಾನವ ಅಭಿವೃದ್ಧಿ ವರದಿಯ ಅಂಕಿ ಅಂಶಗಳು

ದೇಶಗಳು	HDI 2011	ನಿರೀಕ್ಷಿತ ಜೀವಿತಾವಧಿ (ವರ್ಷಗಳು)	ಸರಾಸರಿ ಶಾಲಾ ಅವಧಿ ವರ್ಷಗಳು	ನಿರೀಕ್ಷಿತ ಶಾಲಾ ಅವಧಿ ವರ್ಷಗಳು	ತಲಾಆದಾಯ (*PPP ಡಾಲರುಗಳಲ್ಲಿ)
ನಾರ್ವೆ	0.943	81.1	12.6	17.3	47,557
ಆಸ್ಟ್ರೇಲಿಯಾ	0.929	81.9	12.0	18.0	34,431
ಚೀನಾ	0.687	73.5	7.5	11.6	7,476
ಭಾರತ	**0.547**	**65.4**	**4.4**	**10.3**	**3,468**
ಪಾಕಿಸ್ತಾನ	0.504	65.4	4.9	6.9	2,550
ಬಾಂಗ್ಲಾದೇಶ	0.500	68.9	4.8	8.1	1,529

*** PPP ಡಾಲರುಗಳು : ಸಮಾನ ಕೊಳ್ಳುವ ಶಕ್ತಿಯ ಡಾಲರುಗಳು (Purchasing power parity dollers)**

4. ಲಿಂಗ ಸಂಬಂಧಿ ಅಭಿವೃದ್ಧಿ (Gender Related Development)

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯ ಪಾತ್ರ ಅತ್ಯಂತ ಮಹತ್ವವಾದುದು. ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರು ಅರ್ಥವ್ಯವಸ್ಥೆಯ ಎಲ್ಲ ಕ್ಷೇತ್ರಗಳಲ್ಲಿ ದುಡಿಯುವ ಸಾಮರ್ಥ್ಯವನ್ನು ಪಡೆದಿದ್ದಾರೆ. ಅವರಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಸಮಾನತೆಯನ್ನು ಒದಗಿಸಿಕೊಡಬೇಕಾದುದು ನಾಗರಿಕ ಸಮಾಜದ ಕರ್ತವ್ಯವಾಗಿದೆ.

ಸ್ವತಂತ್ರ ಭಾರತದಲ್ಲಿ ನಮ್ಮ ಸಂವಿಧಾನವು ಮಹಿಳೆಯರಿಗೆ ಪುರುಷರಷ್ಟೇ ಸಮಾನ ಸ್ವಾತಂತ್ರ್ಯ, ಸಮಾನತೆ ಮತ್ತು ಅವಕಾಶಗಳನ್ನು ನೀಡಿದೆ. ಹಾಗಾಗಿ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರು ಭಾಗಿದಾರರಾಗಿದ್ದಾರೆ. ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಪ್ರಯತ್ನಿಸಲಾಗುತ್ತಿದೆ.

ಗರ್ಭಿಣಿ ಮತ್ತು ಬಾಣಂತಿ ತಾಯಂದಿರ ಸುರಕ್ಷತೆಗೆ ಹೆಚ್ಚಿನ ಗಮನ ನೀಡಲಾಗಿದೆ. ತಾಯಂದಿರು ಮತ್ತು ಮಕ್ಕಳ ಅಪೌಷ್ಟಿಕತೆಯನ್ನು ನಿವಾರಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಇದರಿಂದ ತಾಯಂದಿರ ಮರಣದರ ಕಡಿಮೆ ಯಾಗುತ್ತಿದೆ. ತಾಯಿಯು ಗರ್ಭದಲ್ಲಿರುವಾಗಲೇ ಹೆಣ್ಣು ಭ್ರೂಣಗಳನ್ನು ಪತ್ತೆಹಚ್ಚಿ, ಹತ್ಯೆಮಾಡುವ ಕೆಟ್ಟ ಪರಂಪರೆ ಬೆಳೆಯುತ್ತಿದೆ. ಇದರಿಂದ ಲಿಂಗಾನುಪಾತ ಕುಸಿಯುತ್ತಿದೆ. ಇದನ್ನು ಸಮರ್ಥವಾಗಿ ತಡೆಯಲು ಶಿಕ್ಷಣ ಹಾಗೂ ಕಾನೂನಿನ ಮೂಲಕ ಪ್ರಯತ್ನಿಸಲಾಗುತ್ತಿದೆ.

ನಿಮಗಿದು ಗೊತ್ತೆ ?

ಲಿಂಗ ಸಮಾನತೆ ಸೂಚಿ (GEI)

ಆರ್ಥಿಕ ಅಭಿವೃದ್ಧಿಯಲ್ಲಿ ಲಿಂಗ ಸಮಾನತೆಯನ್ನು ಗುರುತಿಸುವುದಕ್ಕಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಲಿಂಗ ಸಮಾನತೆ ಸೂಚಿಯನ್ನು ರೂಪಿಸಲಾಗಿದೆ. ಈ ಸೂಚಿಯ ಮೌಲ್ಯಾಂಕವು 0 ಯಿಂದ 1 ರವರೆಗೆ ಇದ್ದು, 0 ಯು ಪರಿಪೂರ್ಣ ಸಮಾನತೆಯನ್ನು, 1 ಸಂಪೂರ್ಣ ಅಸಮಾನತೆಯನ್ನು ಪ್ರತಿನಿಧಿಸುತ್ತದೆ. 2008 ರಲ್ಲಿ ಭಾರತದ GEI 0.748 ಇದ್ದು, ಒಟ್ಟು 168 ರಾಷ್ಟ್ರಗಳ ಸಾಲಿನಲ್ಲಿ ಭಾರತವು 122 ನೇ ಸ್ಥಾನವನ್ನು ಪಡೆದಿದೆ. ಅಂದರೆ ಭಾರತದಲ್ಲಿ ಲಿಂಗ ಅಸಮಾನತೆ ಹೆಚ್ಚಿದೆ.

ಸರ್ಕಾರ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಆದರೂ ಪುರುಷರ ಸಾಕ್ಷರತಾ ಪ್ರಮಾಣಕ್ಕಿಂತ ಮಹಿಳಾ ಸಾಕ್ಷರರ ಪ್ರಮಾಣ ಕಡಿಮೆಯಿದೆ. 2011 ರ ಜನಗಣತಿ ಪ್ರಕಾರ ದೇಶದಲ್ಲಿ ಪುರುಷ ಸಾಕ್ಷರರು ಶೇ.82.14 ರಷ್ಟಿದ್ದರೆ, ಮಹಿಳಾ ಸಾಕ್ಷರರು ಶೇ.65.46 ರಷ್ಟಿದ್ದರು.

ದೇಶದಲ್ಲಿರುವ ಒಟ್ಟು ಮಹಿಳೆಯರಲ್ಲಿ ವಿವಿಧ ಉದ್ಯೋಗಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಶೇಕಡಾವಾರು ಪ್ರಮಾಣವನ್ನು 'ಮಹಿಳೆಯರ ಕೆಲಸದ ಭಾಗವಹಿಸುವಿಕೆ ದರ' ಎನ್ನುತ್ತೇವೆ. 2009–10 ರಲ್ಲಿನ ಅಂಕಿ–ಅಂಶಗಳ ಪ್ರಕಾರ ಪುರುಷರ ಕೆಲಸದ ಭಾಗವಹಿಸುವಿಕೆ ದರ ಶೇ. 54.6 ಇದ್ದರೆ, ಮಹಿಳೆಯರ ಕೆಲಸದ ಭಾಗವಹಿಸುವಿಕೆ ದರ ಕೇವಲ ಶೇ.22.8 ರಷ್ಟಿದೆ. ಅಂದರೆ ಒಟ್ಟು ಮಹಿಳೆಯರಲ್ಲಿ ವಿವಿಧ ಉದ್ಯೋಗಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಪ್ರಮಾಣ ಅತ್ಯಂತ ಕಡಿಮೆ ಇದೆ. ಮಹಿಳೆಯರು ಮನೆಯಲ್ಲಿ ಮಾಡುವ ಕೂಲಿ ರಹಿತ ಕೆಲಸವನ್ನು ಇಲ್ಲಿ ಪರಿಗಣಿಸಿಲ್ಲ. ಸರ್ಕಾರವು ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ದುಡಿಯುವ ಅವಕಾಶವನ್ನು ನೀಡಿದೆ. ವಿದ್ಯಾವಂತ ಮಹಿಳೆಯರು ಈ ಅವಕಾಶಗಳನ್ನು ಪಡೆಯಲು ಮುಂದಾಗುತ್ತಿದ್ದಾರೆ.

2011ರ ಜನಗಣತಿ ಪ್ರಕಾರ ಕೆಲವು ರಾಜ್ಯಗಳ ಅಂಕಿ–ಅಂಶಗಳು

ರಾಜ್ಯಗಳು	ಲಿಂಗಾನುಪಾತ *	ಮಕ್ಕಳ ಲಿಂಗಾನುಪಾತ (0–6 ವರ್ಷಗಳು)	ಒಟ್ಟು ಸಾಕ್ಷರತಾ ದರ	ಪುರುಷ ಸಾಕ್ಷರತಾ ದರ	ಮಹಿಳಾ ಸಾಕ್ಷರತಾ ದರ
ಹರಿಯಾಣ	877	830	76.64	85.38	66.77
ರಾಜಸ್ಥಾನ	926	883	67.06	80.51	52.66
ಬಿಹಾರ	916	933	63.82	73.39	53.33
ಕರ್ನಾಟಕ	968	943	75.60	82.85	68.13
ಕೇರಳ	1084	959	93.91	96.02	91.98
ಭಾರತ	**940**	**914**	**74.04**	**82.14**	**65.46**

*** ಪ್ರತಿ ಸಾವಿರ ಪುರುಷರಿಗೆ ಇರುವ ಸ್ತ್ರೀಯರ ಸರಾಸರಿ ಸಂಖ್ಯೆಯೇ ಲಿಂಗಾನುಪಾತ**

ಒಂದು ದೇಶವು ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ ಈ ಎರಡೂ ಪ್ರಧಾನ ಅಂಶಗಳೆಂದು ಜಾಗತಿಕವಾಗಿ ಗುರುತಿಸಲಾಗಿದೆ. ಮಹಿಳೆಯರಿಗೆ ಎಲ್ಲ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮಾನವಾಗಿ ದುಡಿಯುವ ಅವಕಾಶ ಒದಗಿಸಿದಾಗ ಸಮಾಜ ಮತ್ತು ದೇಶ ಅಭಿವೃದ್ಧಿ ಸಾಧಿಸಲು ಸಾಧ್ಯ. ಪುರುಷರಷ್ಟೇ ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದನ್ನೇ ಮಹಿಳಾ ಸಬಲೀಕರಣ ಎನ್ನುತ್ತೇವೆ.

ಚರ್ಚಿಸಿ :

ಇತ್ತೀಚೆಗೆ ಸರ್ಕಾರವು ಮಹಿಳಾ ಸಬಲೀಕರಣಕ್ಕಾಗಿ ಕೈಗೊಂಡಿರುವ ಯೋಜನೆಗಳ ಬಗ್ಗೆ ಸ್ತ್ರೀ ಶಕ್ತಿ ಸಂಘದವರೊಂದಿಗೆ ಚರ್ಚಿಸಿ ನಿಮ್ಮ ಸಲಹೆಗಳನ್ನು ಪಟ್ಟಿಮಾಡಿ.

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ಒಂದು ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾಗುವ ಎಲ್ಲ ಸರಕು–ಸೇವೆಗಳ ಒಟ್ಟು ಮೌಲ್ಯವನ್ನು ____________ ಎಂದು ಕರೆಯುತ್ತಾರೆ.
2. ಜೀವನ ಮಟ್ಟವನ್ನು ____________ ಮೂಲಕ ಅಳೆಯಲಾಗುತ್ತದೆ.
3. ನಿರೀಕ್ಷಿತ ಜೀವಿತಾವಧಿ, ಶೈಕ್ಷಣಿಕ ಸಾಧನೆ ಮತ್ತು ಜೀವನಮಟ್ಟ ಈ ಮೂರು ಸಾಮರ್ಥ್ಯಗಳ ಸರಾಸರಿಯನ್ನು ____________ ಎನ್ನುತ್ತಾರೆ.
4. ದೇಶದಲ್ಲಿರುವ ಒಟ್ಟು ಮಹಿಳೆಯರಲ್ಲಿ ವಿವಿಧ ಉದ್ಯೋಗಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಶೇಕಡಾವಾರು ಪ್ರಮಾಣಕ್ಕೆ ____________ ಎನ್ನುತ್ತಾರೆ.

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಆರ್ಥಿಕ ಅಭಿವೃದ್ಧಿ ಎಂದರೇನು ?
2. ಆದಾಯ ಅಭಿವೃದ್ಧಿಯ ಸೂಚಕಗಳನ್ನು ಹೆಸರಿಸಿ.
3. HDI ನ್ನು ವಿಸ್ತರಿಸಿ.
4. ಮಹಿಳಾ ಸಬಲೀಕರಣದ ಅರ್ಥ ತಿಳಿಸಿ.

III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1. ಜನರು ಗುಣಮಟ್ಟದ ಜೀವನ ನಡೆಸಲು ಯಾವ ಯಾವ ಸೌಲಭ್ಯಗಳು ದೊರೆಯಬೇಕಾಗಿದೆ?
2. ಅನಭಿವೃದ್ಧಿ ದೇಶಗಳ ಲಕ್ಷಣಗಳಾವುವು ?
3. ರಾಷ್ಟ್ರೀಯ ಆದಾಯದ ಮೂಲಕ ಅಭಿವೃದ್ಧಿಯನ್ನು ಅಳೆಯುವುದು ಸಮಂಜಸವಲ್ಲ, ಹೇಗೆ ?
4. ಮಾನವ ಅಭಿವೃದ್ಧಿಯ ಸೂಚಕಗಳಾವುವು ?
5. ತಲಾದಾಯವು ಅಭಿವೃದ್ಧಿಯ ನೈಜ ಮಾಪಕವಾಗಲಾರದು. ಏಕೆ ?
6. ಮನುಷ್ಯನ ಆಯಸ್ಸನ್ನು ಹೆಚ್ಚಿಸಲು ಸಹಾಯಕವಾಗುವ ಅಂಶಗಳಾವುವು ?

IV. ಚಟುವಟಿಕೆಗಳು.

1. ಅಂತರ್ಜಾಲದಲ್ಲಿ ಇತ್ತೀಚಿನ ಮಾನವ ಅಭಿವೃದ್ಧಿ ವರದಿಯನ್ನು ನೋಡಿ ಮಾನವ ಅಭಿವೃದ್ಧಿ ಸೂಚಿಯ ಸೂಚಕಗಳಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಸಂಗ್ರಹಿಸಿರಿ.
2. ನಿಮ್ಮ ಹತ್ತಿರದಲ್ಲಿರುವ ಸ್ತ್ರೀ ಶಕ್ತಿ ಸಂಘದವರೊಂದಿಗೆ ಸಂದರ್ಶನ ನಡೆಸಿ, ಅವರ ಕುಟುಂಬದಲ್ಲಿ ಕಳೆದ 5 ವರ್ಷಗಳಲ್ಲಿ ಉಂಟಾಗಿರುವ ಆರ್ಥಿಕ ಅಭಿವೃದ್ಧಿಯ ಬಗ್ಗೆ ಮಾಹಿತಿ ಸಂಗ್ರಹಿಸಿ.

ಅಧ್ಯಾಯ – 2

ಅರ್ಥವ್ಯವಸ್ಥೆ ಮತ್ತು ಸರ್ಕಾರ (Economy and Government)

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಅರ್ಥವ್ಯವಸ್ಥೆ ಮತ್ತು ಸರ್ಕಾರದ ನಡುವಿನ ಸಂಬಂಧ*
- *ಭಾರತದಲ್ಲಿ ಯೋಜನೆ.*
- *ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ಮತ್ತು ಸಾಧನೆಗಳು.*
- *ಹಸಿರು ಕ್ರಾಂತಿ.*
- *ಉದಾರೀಕರಣ ಮತ್ತು ಜಾಗತೀಕರಣ.*

ಮಾನವನ ಎಲ್ಲ ಆರ್ಥಿಕ ಚಟುವಟಿಕೆಗಳ ಒಂದು ಸಂಘಟಿತ ವ್ಯವಸ್ಥೆಯೇ ಅರ್ಥವ್ಯವಸ್ಥೆ. ಅರ್ಥವ್ಯವಸ್ಥೆಯ ಮೂಲ ಗುರಿ ಮಾನವನ ಕ್ಷೇಮಾಭಿವೃದ್ಧಿ. ಸರ್ಕಾರವೂ ಸಹ ಮಾನವನ ಕ್ಷೇಮಾಭ್ಯುದಯದ ದೃಷ್ಟಿಯಿಂದ ಕಾರ್ಯನಿರ್ವಹಿಸುತ್ತದೆ. ಹಾಗಾದರೆ ಮಾನವನ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರದ ಮಧ್ಯಪ್ರವೇಶ ಇರಬೇಕೆ? ಆರ್ಥಿಕಾಭಿವೃದ್ಧಿಯಲ್ಲಿ ಸರ್ಕಾರದ ಪಾತ್ರವೇನು? ಎಂಬ ಪ್ರಶ್ನೆಗಳು ಉಂಟಾಗುತ್ತವೆ.

19 ನೆಯ ಶತಮಾನದ ಅಂತ್ಯದವರೆಗೆ ಮಾನವನ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರದ ಮಧ್ಯಪ್ರವೇಶ ಇರಬಾರದು ಎಂದು ಅಂದಿನ ಹಲವು ಅರ್ಥಶಾಸ್ತ್ರಜ್ಞರ ಅಭಿಪ್ರಾಯವಾಗಿತ್ತು. ಆಗ ಸರ್ಕಾರಗಳು ಕೇವಲ ರಾಷ್ಟ್ರರಕ್ಷಣೆ, ನ್ಯಾಯನಿರ್ಣಯ ಮತ್ತು ಶಾಂತಿ–ಸುವ್ಯವಸ್ಥೆ ಪಾಲನೆ ಮುಂತಾದ ಮೂಲಭೂತ ಕಾರ್ಯಗಳನ್ನಷ್ಟೇ ನಿರ್ವಹಿಸುತ್ತಿದ್ದವು. ಆದರೆ 20 ನೆಯ ಶತಮಾನದಲ್ಲಿ 'ಕಲ್ಯಾಣ ರಾಜ್ಯ'ಗಳ ಉದಯದೊಂದಿಗೆ ಸರ್ಕಾರಗಳ ಕಾರ್ಯಕ್ಷೇತ್ರ ವಿಸ್ತರಣೆಯಾಯಿತು. ಸರ್ಕಾರಗಳು ಎಲ್ಲ ಪ್ರಜೆಗಳಿಗೆ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಸಾರಿಗೆ, ಸಂಪರ್ಕ ಮುಂತಾದ ಹಲವು ಸೌಕರ್ಯಗಳನ್ನು ಒದಗಿಸಿಕೊಡಲು ಮುಂದಾದವು. ಹಾಗಾಗಿ ಸರ್ಕಾರವು ಜನರ ಆರ್ಥಿಕ ಚಟುವಟಿಕೆಗಳಲ್ಲಿ ಮಧ್ಯಪ್ರವೇಶಿಸಲು ಮುಂದಾಯಿತು. ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸರ್ಕಾರದ ಪಾತ್ರ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯಿತು.

ಮುಂದುವರಿಯುತ್ತಿರುವ ದೇಶಗಳಲ್ಲಿ ಸಾಮಾನ್ಯವಾಗಿ ನಿರುದ್ಯೋಗ, ಬಡತನ, ಕೃಷಿಯ ಹಿಂದುಳಿದಿರುವಿಕೆ, ಆದಾಯ ಮತ್ತು ಸಂಪತ್ತಿನ ಅಸಮಾನ ಹಂಚಿಕೆಯಂತಹ ಸಮಸ್ಯೆಗಳು ಕಂಡುಬರುತ್ತಿವೆ. ಮೂಲಭೂತ ಸೌಲಭ್ಯಗಳಾದ ಸಾರಿಗೆ, ಸಂಪರ್ಕ, ವಿದ್ಯುತ್, ಶಿಕ್ಷಣ, ಆರೋಗ್ಯ ಮುಂತಾದ ಕೊರತೆಯನ್ನು ಎದುರಿಸುತ್ತಿವೆ. ಇಂತಹ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದ ಮಧ್ಯಪ್ರವೇಶ ಅನಿವಾರ್ಯವಾಗಿದ್ದು ಕೊರತೆಗಳನ್ನು ಹೋಗಲಾಡಿಸಲು ಶ್ರಮಿಸುತ್ತಿವೆ.

ಅರ್ಥವ್ಯವಸ್ಥೆಯಲ್ಲಿ ರಾಷ್ಟ್ರೀಯ ಆದಾಯ, ಉತ್ಪಾದನೆ, ಉದ್ಯೋಗ, ಹೂಡಿಕೆ, ಬೆಲೆ ಮುಂತಾದುವುಗಳು ನಿರಂತರವಾಗಿ ಏರಿಳಿತಗಳಿಂದ ಕೂಡಿರುತ್ತವೆ. ಇಂತಹ ಏರಿಳಿತಗಳಿಗೆ ಆರ್ಥಿಕ ಏರಿಳಿತಗಳು ಎನ್ನುತ್ತಾರೆ. ಅರ್ಥವ್ಯವಸ್ಥೆಯು ಹೆಚ್ಚಿನ ಏರಿಳಿತಗಳಿಲ್ಲದೆ ಪ್ರಗತಿಯತ್ತ ಸಾಗುವುದನ್ನು ಆರ್ಥಿಕ ಸ್ಥಿರತೆ ಎನ್ನುತ್ತಾರೆ. ಹಾಗೆಯೇ ದೇಶದಲ್ಲಿ ಉತ್ಪಾದನೆಯಾಗುವ ಆದಾಯ ಮತ್ತು ಸಂಪತ್ತು ಬಡವ–ಬಲ್ಲಿದ, ನಗರ–ಗ್ರಾಮೀಣ ಎಂಬ ಯಾವುದೇ ತಾರತಮ್ಯವಿಲ್ಲದೆ ಸಮಾಜದ ಎಲ್ಲ ಜನರಲ್ಲಿ ಆದಷ್ಟು ಸಮಾನವಾಗಿ ಹಂಚಿಕೆಯಾಗಬೇಕಾಗುತ್ತದೆ. ಇದನ್ನೇ ಸಾಮಾಜಿಕ ನ್ಯಾಯ ಎನ್ನುತ್ತಾರೆ. ಆರ್ಥಿಕ ಸ್ಥಿರತೆ ಮತ್ತು ಸಾಮಾಜಿಕ ನ್ಯಾಯದೊಂದಿಗೆ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕಾದಲ್ಲಿ ಸರ್ಕಾರದ ಪಾತ್ರ ಪ್ರಮುಖವಾದುದು.

20 ನೆಯ ಶತಮಾನದಲ್ಲಿ ಸರ್ಕಾರಗಳು ಶೀಘ್ರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಪ್ರಮುಖ ತಂತ್ರವಾಗಿ ಆರ್ಥಿಕ ಯೋಜನೆಗಳನ್ನು ಬಳಕೆಗೆ ತಂದವು. 1929 ರಲ್ಲಿ ಸೋವಿಯತ್ ರಷ್ಯಾ ಮೊಟ್ಟಮೊದಲು ಆರ್ಥಿಕ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಶೀಘ್ರ ಆರ್ಥಿಕ ಪ್ರಗತಿಯನ್ನು ಸಾಧಿಸುವಲ್ಲಿ ಯಶಸ್ವಿಯಾಯಿತು. ಎರಡನೆಯ ಮಹಾಯುದ್ಧದ ನಂತರ ವಿಶ್ವದ ಬಹುತೇಕ ದೇಶಗಳ ಸರ್ಕಾರಗಳು ತಮ್ಮ ಆರ್ಥಿಕ ಸಂಕಷ್ಟಗಳಿಂದ ಹೊರಬರಲು ಆರ್ಥಿಕ ಯೋಜನೆಗಳ ಮೊರೆ ಹೋದವು.

1. ಭಾರತದಲ್ಲಿ ಯೋಜನೆ (Planning in India) :

ಯೋಜನೆ ಎನ್ನುವುದು ಪ್ರತಿಯೊಬ್ಬ ವ್ಯಕ್ತಿಯ ಬದುಕಿಗೆ ಅವಶ್ಯಕ. ವೈಯಕ್ತಿಕ ಬದುಕಿನಲ್ಲಿ ಯಶಸ್ಸು ಗಳಿಸಬೇಕಾದರೆ ಸಂಪನ್ಮೂಲಗಳನ್ನು ಯೋಜಿತ ರೀತಿಯಲ್ಲಿ ಬಳಸಿಕೊಳ್ಳಬೇಕಾಗುತ್ತದೆ, ಅಲ್ಲವೇ? ವಿದ್ಯಾರ್ಥಿ ತಾನು ಉತ್ತಮ ಜ್ಞಾನ ಪಡೆಯಲು ಹಾಗೂ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಲು ತನ್ನ ದಿನದ ಸಮಯವನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳಬೇಕಾಗುತ್ತದೆ. ಪ್ರತಿದಿನ ಇಂತಿಷ್ಟು ಗಂಟೆ ಓದಬೇಕು, ಇಂತಿಷ್ಟು ಗಂಟೆ ಆಟವಾಡಬೇಕು, ನಿದ್ದೆ ಮಾಡಬೇಕು ಎಂದು ಯೋಜಿಸಿ, ಅದನ್ನು ಅನುಷ್ಠಾನಕ್ಕೆ ತರಬೇಕಾಗುತ್ತದೆ. ಅದೇ ರೀತಿಯಲ್ಲಿ ದೇಶವು ತನಗೆ ಲಭ್ಯವಿರುವ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡು, ಅಗತ್ಯ ಕ್ಷೇತ್ರಗಳನ್ನು ಆಯ್ಕೆ ಮಾಡಿ, ನಿರ್ದಿಷ್ಟ ಅವಧಿಯೊಳಗೆ ಪ್ರಗತಿ ಸಾಧಿಸಲು ಯೋಜನೆ ರೂಪಿಸುತ್ತದೆ.

'ಸರ್ಕಾರವು ಕೆಲವು ನಿರ್ಧಿಷ್ಟ ಧ್ಯೇಯೋದ್ದೇಶಗಳೊಂದಿಗೆ, ದೇಶದಲ್ಲಿರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು, ಜನರ ಸುಖವನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಲು, ಪ್ರಜ್ಞಾಪೂರ್ವಕವಾಗಿ ಮತ್ತು ವಿವೇಕಯುತವಾಗಿ ಜಾರಿಗೊಳಿಸುವ ಪ್ರಕ್ರಿಯೆಯನ್ನು ಯೋಜನೆ ಎನ್ನುತ್ತೇವೆ'. ಸರ್ಕಾರವು ದೇಶದ ಜನರ ಹಿತದೃಷ್ಠಿಯಿಂದ, ಲಭ್ಯವಿರುವ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು, ಏನನ್ನು ಉತ್ಪಾದಿಸಬೇಕು? ಎಷ್ಟು ಉತ್ಪಾದಿಸಬೇಕು? ಹಾಗೂ ಉತ್ಪಾದಿಸಿದ್ದನ್ನು ಹೇಗೆ ವಿತರಿಸಬೇಕು? ಎಂಬ ಮಹತ್ವದ ನಿರ್ಧಾರಗಳನ್ನು ಆದ್ಯತೆಯ ಮೇಲೆ ಕೈಗೊಳ್ಳುತ್ತದೆ. ಹೀಗೆ ಆರ್ಥಿಕ ಯೋಜನೆಯು ದೇಶದ ಸಮಗ್ರ ಅಭಿವೃದ್ಧಿಯ ಒಂದು ತಂತ್ರವಾಗಿ ಬಳಕೆಯಾಗುತ್ತಿದೆ.



ಭಾರತದಲ್ಲಿ ಮೊಟ್ಟಮೊದಲು ಆಧುನಿಕ ಯೋಜನೆಯ ಬಗ್ಗೆ ಚಿಂತಿಸಿದವರು ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರು. ಅವರು 1934 ರಲ್ಲಿ 'ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ'(Planned Economy for India) ಎಂಬ ಪುಸ್ತಕವನ್ನು ಪ್ರಕಟಿಸಿ, ಭಾರತದ ಆರ್ಥಿಕ ಅಭಿವೃದ್ಧಿಗೆ ಯೋಜನೆಯ ಅಗತ್ಯವನ್ನು ಒತ್ತಿ ಹೇಳಿದರು. ಹಾಗಾಗಿ ಅವರನ್ನು 'ಭಾರತದ ಆರ್ಥಿಕ ಯೋಜನೆಯ ಪಿತಾಮಹ' ಎಂದು ಕರೆಯಲಾಗುತ್ತಿದೆ.

ಸ್ವಾತಂತ್ರ್ಯಾನಂತರ ಭಾರತ ಸರ್ಕಾರವು 1950 ರಲ್ಲಿ 'ರಾಷ್ಟ್ರೀಯ ಯೋಜನಾ ಆಯೋಗ'ವನ್ನು (National Planning Commission) ರಚಿಸಿತು. ಪ್ರಧಾನ ಮಂತ್ರಿಯವರು ಇದರ ಅಧ್ಯಕ್ಷರಾಗಿರುತ್ತಾರೆ. ಇದರ ಮುಖ್ಯ ಉದ್ದೇಶವೆಂದರೆ, ದೇಶದಲ್ಲಿರುವ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲ ಮತ್ತು ಬಂಡವಾಳವನ್ನು ನಿಖರವಾಗಿ ಅಂದಾಜು ಮಾಡಿ, ಈ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಗೆ ಯೋಜನೆಗಳನ್ನು ತಯಾರಿಸುವುದು. ಭಾರತದಲ್ಲಿ ಯೋಜನೆಯ ಅವಧಿ 5 ವರ್ಷವಾಗಿರುವುದರಿಂದ ಪಂಚವಾರ್ಷಿಕ ಯೋಜನೆ ಎಂದು ಹೆಸರಿಸಲಾಗಿದೆ.

1952 ರಲ್ಲಿ **'ರಾಷ್ಟ್ರೀಯ ಅಭಿವೃದ್ಧಿ ಮಂಡಳಿ' (National Development Council)** ಯನ್ನು ಸ್ಥಾಪಿಸಲಾಗಿದೆ. ಇದರಲ್ಲಿ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಸದಸ್ಯರಾಗಿರುತ್ತಾರೆ. ಇದು ರಾಷ್ಟ್ರೀಯ ಯೋಜನಾ ಆಯೋಗವು ತಯಾರಿಸಿದ ಪಂಚವಾರ್ಷಿಕ ಯೋಜನೆಯ ಕರಡಿಗೆ ಅನುಮೋದನೆ ನೀಡುತ್ತದೆ. ಅಲ್ಲದೆ ಎಲ್ಲ ರಾಜ್ಯಗಳು ಸಮತೋಲನವಾಗಿ ಅಭಿವೃದ್ಧಿಗೊಳ್ಳುವಂತೆ ಗಮನಹರಿಸುತ್ತದೆ.

2. ಪಂಚವಾರ್ಷಿಕ ಯೋಜನೆಗಳು (Five Year Plans)

ಭಾರತದಲ್ಲಿ ಮೊಟ್ಟಮೊದಲ ಪಂಚವಾರ್ಷಿಕ ಯೋಜನೆಯು ಏಪ್ರಿಲ್ 1, 1951 ರಲ್ಲಿ ಜಾರಿಗೆ ಬಂದಿತು. ಇಲ್ಲಿಯವರೆಗೆ ಹನ್ನೊಂದು ಪಂಚವಾರ್ಷಿಕ ಯೋಜನೆಗಳು ಮುಕ್ತಾಯಗೊಂಡಿವೆ. ಸದ್ಯದಲ್ಲಿ ಏಪ್ರಿಲ್ 1, 2012 ರಿಂದ 12 ನೆಯ ಪಂಚವಾರ್ಷಿಕ ಯೋಜನೆಯು ಜಾರಿಗೆ ಬಂದಿದ್ದು, ಅದು 2017 ರ ಮಾರ್ಚ್ 31 ರಂದು ಮುಕ್ತಾಯಗೊಳ್ಳಲಿದೆ. ಪ್ರತಿ ಯೋಜನೆಯ ಅವಧಿಯಲ್ಲಿಯೂ ಅದರ ಹಿಂದಿನ ಯೋಜನೆಗಿಂತ ಹೆಚ್ಚಿನ ಬಂಡವಾಳವನ್ನು ಹೂಡಿಕೆ ಮಾಡಲಾಗುತ್ತದೆ.

ಭಾರತದಲ್ಲಿ ಯೋಜನೆಗಳು

ಯೋಜನೆ	ಯೋಜನಾ ಅವಧಿ	ಸಾರ್ವಜನಿಕ ವಲಯದ ವೆಚ್ಚ (ಕೋಟಿ ರೂ.)
1ನೇ ಯೋಜನೆ	1951–56	1,960
2ನೇ – " –	1956–61	4,672
3ನೇ – " –	1961–66	8,577
ವಾರ್ಷಿಕ –"–	1966–69	6,251
4ನೇಯೋಜನೆ	1969–74	6,160
5ನೇ – " –	1974–78	42,300
6ನೇ – " –	1980–85	1,09,953
7ನೇ – " –	1985–90	2,22,169
ವಾರ್ಷಿಕ –"–	1990–92	–––
8ನೇ – " –	1992–97	4,34,100
9ನೇ – " –	1997–02	9,41,041
10ನೇ – " –	2002–07	15,25,639
11ನೇ – " –	2007–12	36,44,718
12ನೇ – " –	2012–17	76,69,807


ಸರ್ಕಾರವು ಕೆಲವು ನಿರ್ದಿಷ್ಟ ಧ್ಯೇಯೋದ್ದೇಶಗಳೊಂದಿಗೆ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಿದೆ. ಈ ಉದ್ದೇಶಗಳು ಯೋಜನೆಗಳ ಮಾರ್ಗಸೂಚಿಗಳಾಗಿವೆ. ಭಾರತದ ಅರ್ಥವ್ಯವಸ್ಥೆಯ ಮೂಲ ಸಮಸ್ಯೆ ಬಡತನ. ಅದನ್ನು ಹೋಗಲಾಡಿಸುವ ಸಲುವಾಗಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಆದುದರಿಂದ ಭಾರತದಲ್ಲಿ ಆರ್ಥಿಕ ಯೋಜನೆಗಳ ಮೂಲ ಉದ್ದೇಶ ಬಡತನ ನಿರ್ಮೂಲನೆ ಹಾಗೂ ಜನರ ಜೀವನ ಮಟ್ಟವನ್ನು ಸಾಧ್ಯವಾದಷ್ಟು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು. ಈ ಮೂಲ ಉದ್ದೇಶದ ಸಾಧನೆಗೆ ಪೂರಕವಾಗಿ ಕೆಲವು ಉದ್ದೇಶಗಳನ್ನು ಸಾಧಿಸಬೇಕಾಗುತ್ತದೆ. ಅವುಗಳೆಂದರೆ;

1. ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು.
2. ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು.
3. ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು.
4. ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು.
5. ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು ಇತ್ಯಾದಿ.

ಪಂಚವಾರ್ಷಿಕ ಯೋಜನೆಗಳ ಸಾಧನೆ : ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ಜಾರಿಗೆ ಬಂದು 60 ವರ್ಷಗಳು ಮುಗಿದಿವೆ. ಹನ್ನೊಂದು ಯೋಜನೆಗಳು ಮುಕ್ತಾಯಗೊಂಡಿವೆ. ಈ ಅವಧಿಯಲ್ಲಿ ಯಾವ ಮಟ್ಟದ ಸಾಧನೆಯಾಗಿದೆ? ಅದರ ವಿಫಲತೆಗಳೇನು? ಎಂಬುದನ್ನು ತಿಳಿಯೋಣ.

ಮೊದಲು ರಾಷ್ಟ್ರೀಯ ಆದಾಯದ ಬೆಳವಣಿಗೆಯನ್ನು ಗಮನಿಸೋಣ. ಯೋಜನೆಯ ಪ್ರಾರಂಭದ 20 ವರ್ಷಗಳ ಅವಧಿಯಲ್ಲಿ ನಮ್ಮ ರಾಷ್ಟ್ರೀಯ ಆದಾಯವು ಸರಾಸರಿ ವಾರ್ಷಿಕ ಶೇ.3.5 ರ ದರದಲ್ಲಿ ಹೆಚ್ಚಳವಾದರೆ, ನಂತರದ 20 ವರ್ಷಗಳ ಅವಧಿಯಲ್ಲಿ ಅದು ಶೇ. 5 ರ ದರದಲ್ಲಿ ಹೆಚ್ಚಳವಾಗಿದೆ. 1991–2000 ರ ಅವಧಿಯಲ್ಲಿ ಸರಾಸರಿ ವಾರ್ಷಿಕ ಶೇ.5.6 ರ ದರದಲ್ಲಿ ಹೆಚ್ಚಿದರೆ, 2001–2010 ರ ಅವಧಿಯಲ್ಲಿ ಶೇ.7.3 ರ ದರದಲ್ಲಿ ಹೆಚ್ಚಳವಾಗಿದೆ. ಅಂದರೆ ವರ್ಷಗಳು ಕಳೆದಂತೆ ರಾಷ್ಟ್ರೀಯ ಆದಾಯದ ಬೆಳವಣಿಗೆಯ ವೇಗ ಕ್ರಮೇಣ ಹೆಚ್ಚಿದೆ. ಅದಕ್ಕೆ ತಕ್ಕಂತೆ ತಲಾ ಆದಾಯದ ಬೆಳವಣಿಗೆಯೂ ಹೆಚ್ಚಿದೆ. 2001–2010 ರ ಅವಧಿಯಲ್ಲಿ ತಲಾ ಆದಾಯವು ವಾರ್ಷಿಕ ಸರಾಸರಿ ಶೇ.5.6 ರ ದರದಲ್ಲಿ ಹೆಚ್ಚಿದೆ.

ಚಟುವಟಿಕೆ :



ಮೇಲಿನ ಕಂಬ ಚಿತ್ರವನ್ನು ಗಮನಿಸಿ ಈ ಪ್ರಶ್ನೆಗಳಿಗೆ ಉತ್ತರಿಸಿ.

1. 1950–51 ರಲ್ಲಿ ರಾಷ್ಟ್ರೀಯ ಆದಾಯಕ್ಕೆ ಅತಿಹೆಚ್ಚು ಕೊಡುಗೆ ನೀಡಿದ ವಲಯ ಯಾವುದು?

2. ಅದೇ ವರ್ಷದಲ್ಲಿ ಅತಿಕಡಿಮೆ ಆದಾಯ ಯಾವ ವಲಯದಿಂದ ಬಂದಿದೆ?

3. 2011–12 ರಲ್ಲಿ ಅತಿ ಹೆಚ್ಚು ಆದಾಯ ಯಾವ ವಲಯದಿಂದ ಬಂದಿದೆ?

4. 2011–12 ರಲ್ಲಿ ಕೃಷಿ ವಲಯದ ಕೊಡುಗೆ ಎಷ್ಟು?

ರಾಷ್ಟ್ರೀಯ ಆದಾಯದ ಬೆಳವಣಿಗೆಯಲ್ಲಿ ಅರ್ಥವ್ಯವಸ್ಥೆಯ ಮೂರೂ ವಲಯಗಳಾದ ಕೃಷಿ, ಕೈಗಾರಿಕೆ ಮತ್ತು ಸೇವಾವಲಯಗಳ ಕೊಡುಗೆ ಇರುತ್ತದೆ. ಯೋಜನೆಯ ಪ್ರಾರಂಭದಲ್ಲಿ ರಾಷ್ಟ್ರೀಯ ಆದಾಯಕ್ಕೆ ಕೃಷಿ ವಲಯದಿಂದ ಶೇ.50 ಕ್ಕಿಂತ ಹೆಚ್ಚಿನ ಆದಾಯ ಬರುತ್ತಿತ್ತು. ಆದರೆ ಈಗ ಈ ವಲಯದ ಪಾಲು ಶೇ. 12 ಆಗಿದೆ. ಸದ್ಯದಲ್ಲಿ ರಾಷ್ಟ್ರೀಯ ಆದಾಯಕ್ಕೆ ಸೇವಾ ವಲಯದಿಂದ ಅತಿಹೆಚ್ಚು ಅಂದರೆ ಶೇ.59 ರಷ್ಟು ಆದಾಯ ಬರುತ್ತಿದೆ.

ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಲಾಗಿದೆ. ಯೋಜನೆಗಳ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಸುಮಾರು ಐದು ಪಟ್ಟು ಹೆಚ್ಚಳವಾಗಿದ್ದು, 2011–12 ರಲ್ಲಿ 257.4 ದಶಲಕ್ಷ ಟನ್ನುಗಳಿಗೆ ಹೆಚ್ಚಿದೆ.

ಕೈಗಾರಿಕೆ ಮತ್ತು ಸೇವಾ ವಲಯಗಳ ವಿಸ್ತರಣೆಯಿಂದ ಉದ್ಯೋಗಾವಕಾಶಗಳು ಹೆಚ್ಚಿವೆ. ಬಡತನ ನಿರ್ಮೂಲನೆ ಹಾಗೂ ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ಗ್ರಾಮೀಣ ಬಡಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿಕೊಡಲು ಪ್ರಯತ್ನಿಸಲಾಗಿದೆ.

2007–12 ರ ಅವಧಿಯಲ್ಲಿದ್ದ ಒಟ್ಟು ಉದ್ಯೋಗ ಆಕಾಂಕ್ಷಿಗಳು ***8.4 ಕೋಟಿಗಳು***	–	*2007–12 ರ ಅವಧಿಯಲ್ಲಿ ಸೃಷ್ಟಿಯಾದ ಉದ್ಯೋಗಗಳು* ***5.3 ಕೋಟಿಗಳು***	=	*2007–12ರ ಕೊನೆಯಲ್ಲಿದ್ದ ನಿರುದ್ಯೋಗಿಗಳು* ***3.1 ಕೋಟಿಗಳು***

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಗಾಧ ಪ್ರಗತಿ ಕಂಡುಬಂದಿದೆ. ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ ಹೆಚ್ಚುತ್ತಿದೆ. ನಮ್ಮ ತಂತ್ರಜ್ಞರ ಸೇವೆಯನ್ನು ಹೊರ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಭಾರತದ ರಫ್ತು ಕ್ಷೇತ್ರದಲ್ಲಿ ತಯಾರಿಕಾ ಮತ್ತು ಎಂಜಿನಿಯರಿಂಗ್ ಸರಕುಗಳ ರಫ್ತು ಪ್ರಮಾಣ ಅಗಾಧವಾಗಿ ಹೆಚ್ಚಿದೆ.

ಭಾರತದ ಅರ್ಥವ್ಯವಸ್ಥೆಯಲ್ಲಿ ಹೆಚ್ಚುತ್ತಿರುವ ಅಸಮಾನತೆಯನ್ನು ಕಡಿಮೆಮಾಡಲು, ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಎಲ್ಲ ವರ್ಗದ ಜನರನ್ನು ಸೇರಿಸಿಕೊಳ್ಳುವ ಸಲುವಾಗಿ, ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯಲ್ಲಿ 'ಎಲ್ಲರನ್ನು ಒಳಗೊಂಡ ಬೆಳವಣಿಗೆಗೆ' (Inclusive Growth) ಪ್ರಾಮುಖ್ಯತೆ ನೀಡಲಾಯಿತು.

ಅಭಿವೃದ್ಧಿಯ ಇತರೆ ಮಾನದಂಡಗಳನ್ನು ಗಮನಿಸಿದಾಗ ಬಹಳಷ್ಟು ಸುಧಾರಣೆ ಕಂಡುಬರುತ್ತಿದೆ. ಜನರ ನಿರೀಕ್ಷಿತ ಜೀವಿತಾವಧಿ ಮತ್ತು ಸಾಕ್ಷರತಾ ಪ್ರಮಾಣ ಹೆಚ್ಚುತ್ತಿದೆ. ಶಿಶು ಮರಣ ಮತ್ತು ತಾಯಂದಿರ ಮರಣದರಗಳು ಕಡಿಮೆಯಾಗುತ್ತಿವೆ. ಜನನ ಮತ್ತು ಮರಣ ದರಗಳೆರಡೂ ಕಡಿಮೆಯಾಗುತ್ತಿದ್ದು, ಜನಸಂಖ್ಯಾ ಬೆಳವಣಿಗೆ ದರ ಇಳಿಕೆಯಾಗುತ್ತಿದೆ.

ಇಷ್ಟಾದರೂ ಪಂಚವಾರ್ಷಿಕ ಯೋಜನೆಗಳು ದುಡಿಯಲು ಸಮರ್ಥರಿರುವ ಎಲ್ಲ ಜನರಿಗೂ ಉದ್ಯೋಗ ಒದಗಿಸುವಲ್ಲಿ ವಿಫಲವಾಗಿವೆ. ಬಡತನದ ಪ್ರಮಾಣ ಕಡಿಮೆಯಾಗಿದ್ದರೂ, ಅದನ್ನು ಸಂಪೂರ್ಣವಾಗಿ ಹೋಗಲಾಡಿಸಲಾಗಿಲ್ಲ. ಬಡವ ಮತ್ತು ಶ್ರೀಮಂತರ ನಡುವಿನ ಅಸಮಾನತೆ ದಿನೇ ದಿನೇ ಹೆಚ್ಚುತ್ತಿದ್ದು, ಸಾಮಾಜಿಕ ನ್ಯಾಯ ಕನಸಿನ ಮಾತಾಗಿದೆ. ಮೂಲ ಸೌಕರ್ಯಗಳ ಕೊರತೆ ಹೆಚ್ಚಾಗಿದೆ.

3. ಹಸಿರು ಕ್ರಾಂತಿ (Green Revolution)

ಪಂಚವಾರ್ಷಿಕ ಯೋಜನೆಗಳ ಅತಿ ದೊಡ್ಡ ಸಾಧನೆಯೆಂದರೆ 'ಹಸಿರು ಕ್ರಾಂತಿ'. 'ಕ್ರಾಂತಿ' ಎಂದರೆ 'ಶೀಘ್ರ ಬದಲಾವಣೆ ಅಥವಾ ಪ್ರಗತಿ' ಎಂದರ್ಥ. 1967–70 ರ ಅವಧಿಯಲ್ಲಿ ಭಾರತದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಆದಂತಹ ಶೀಘ್ರ ಪ್ರಗತಿಯನ್ನು 'ಹಸಿರು ಕ್ರಾಂತಿ' ಎಂದು ಗುರುತಿಸಲಾಗುತ್ತಿದೆ. 1967 ರಲ್ಲಿ 74 ದಶಲಕ್ಷ ಟನ್ನುಗಳಷ್ಟಿದ್ದ ಆಹಾರ ಧಾನ್ಯಗಳ ಉತ್ಪಾದನೆಯು 1970 ರ ವೇಳೆಗೆ 108 ದಶಲಕ್ಷ ಟನ್ನುಗಳಿಗೆ ಹೆಚ್ಚಳವಾಯಿತು. ಕೇವಲ ಮೂರು ವರ್ಷಗಳ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಅಗಾಧ ಪ್ರಮಾಣದಲ್ಲಿ ಹೆಚ್ಚಳವಾಯಿತು. ಇದು ಹಸಿರು ಬೆಳೆಗಳಲ್ಲಾದ ಪ್ರಗತಿಯಾದುದರಿಂದ ಇದಕ್ಕೆ ಹಸಿರು ಕ್ರಾಂತಿ ಎಂದು ಹೆಸರಿಸಲಾಗಿದೆ. ಹಾಗಾದರೆ ಹಸಿರು ಕ್ರಾಂತಿಯ ಹಿನ್ನೆಲೆಯೇನು? ಇದಕ್ಕೆ ಪ್ರೇರಣೆಯಾದ ಅಂಶಗಳಾವುವು?

ಹಸಿರು ಕ್ರಾಂತಿಯು 'ಹೆಚ್ಚು ಇಳುವರಿ ಬೀಜ'ಗಳ ಬಳಕೆಯ ಪರಿಣಾಮವಾಗಿದೆ. 1960ರ ಪ್ರಾರಂಭದಲ್ಲಿ **ಡಾ. ನಾರ್ಮನ್ ಬೋರ್ಲಾಗ್** ಎಂಬ ಜರ್ಮನ್ ಕೃಷಿ ವಿಜ್ಞಾನಿ ಮೆಕ್ಸಿಕೋ ದೇಶದಲ್ಲಿ ನಡೆಸಿದ

ಪ್ರಯೋಗದ ಫಲವಾಗಿ ಗೋಧಿಯಲ್ಲಿ ಹೆಚ್ಚು ಇಳುವರಿ ಬೀಜಗಳ ಸಂಶೋಧನೆಯಾಯಿತು. ಈ ಬೀಜಗಳನ್ನು ಬಳಕೆಗೆ ತಂದ ಮೆಕ್ಸಿಕೋ ಮತ್ತು ತೈವಾನ್ ದೇಶಗಳು ಗೋಧಿಯ ಉತ್ಪಾದನೆಯಲ್ಲಿ ಅತಿಹೆಚ್ಚಿನ ಪ್ರಗತಿಯನ್ನು ಸಾಧಿಸಿದವು.



ಡಾ. ಎಂ.ಎಸ್. ಸ್ವಾಮಿನಾಥನ್

1965–66 ರ ಅವಧಿಯಲ್ಲಿ ಭಾರತದಲ್ಲಿ ಸಂಭವಿಸಿದ ಭೀಕರ ಬರಗಾಲದ ಪರಿಣಾಮವಾಗಿ ಕೃಷಿ ಉತ್ಪಾದನೆ ಅತ್ಯಂತ ಕಡಿಮೆಯಾಯಿತು. ಆಹಾರ ಧಾನ್ಯಗಳ ಕೊರತೆ ಅಗಾಧವಾಗಿ ಹೆಚ್ಚಿತು. ಈ ಸಮಸ್ಯೆಗೆ ಪರಿಹಾರವೆಂಬಂತೆ ಭಾರತ ಸರ್ಕಾರವು 1966 ರಲ್ಲಿ ಗೋಧಿಯ ಹೆಚ್ಚು ಇಳುವರಿ ಬೀಜಗಳನ್ನು ಪಂಜಾಬ್, ಹರಿಯಾಣ, ದೆಹಲಿ, ರಾಜಸ್ಥಾನ ಮತ್ತು ಉತ್ತರ ಪ್ರದೇಶದ ಆಯ್ದ ಜಿಲ್ಲೆಗಳಲ್ಲಿ ಬಳಕೆಗೆ ತಂದಿತು. ಹೆಚ್ಚು ಇಳುವರಿ ಬೀಜಗಳ ಬಳಕೆಯು ನಿಗಧಿತ ಪೋಷಕಾಂಶಗಳು, ನಿಯಮಿತವಾದ ನೀರು ಮತ್ತು ರೋಗಗಳಿಂದ ರಕ್ಷಣೆಯನ್ನು ಅಪೇಕ್ಷಿಸುತ್ತವೆ. ಆದುದರಿಂದ ಹೆಚ್ಚು ಇಳುವರಿ ಬೀಜಗಳ ಬಳಕೆಯ ಜೊತೆಗೆ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಬಳಕೆಗೆ ತರಲಾಯಿತು. ನೀರಾವರಿ ಸೌಲಭ್ಯಗಳನ್ನು ವಿಸ್ತರಿಸಲಾಯಿತು. ಇದರಿಂದ ಗೋಧಿಯ ಉತ್ಪಾದನೆ ಅಗಾಧವಾಗಿ ಹೆಚ್ಚಿತು. ಕೃಷಿ ಉತ್ಪಾದನೆಯಲ್ಲಿ ಬಳಸಲಾದ ಈ ಸುಧಾರಿತ ತಂತ್ರಜ್ಞಾನವನ್ನು 'ಸುಗ್ಗಿ ಪೂರ್ವ ತಂತ್ರಜ್ಞಾನ' (Pre-harvest Technology) ಎನ್ನುತ್ತಾರೆ. ಭಾರತದ ಕೃಷಿಯಲ್ಲಿ ಸುಧಾರಿತ ತಂತ್ರಜ್ಞಾನವನ್ನು ಬಳಕೆಗೆ ತರುವಲ್ಲಿ ಕೃಷಿ ವಿಜ್ಞಾನಿ ಡಾ. ಎಂ.ಎಸ್. ಸ್ವಾಮಿನಾಥನ್‌ರವರ ಪಾತ್ರ ಪ್ರಮುಖವಾದುದು. ಹಾಗಾಗಿ ಇವರು ಭಾರತದ 'ಹಸಿರು ಕ್ರಾಂತಿಯ ಪಿತಾಮಹ' ಎನಿಸಿದ್ದಾರೆ.

ಹಸಿರು ಕ್ರಾಂತಿಯ ಪ್ರಾರಂಭದಲ್ಲಿ ಸುಧಾರಿತ ತಂತ್ರಜ್ಞಾನವನ್ನು ಗೋಧಿ ಬೆಳೆಯಲ್ಲಿ ಮಾತ್ರ ಬಳಸಲಾಯಿತು. ಅದರ ಯಶಸ್ಸಿನಿಂದ ಪ್ರೇರಿತವಾದ ಸರ್ಕಾರವು ಭತ್ತ, ಜೋಳ, ರಾಗಿ, ಕಬ್ಬು ಮುಂತಾದ ಬೆಳೆಗಳಲ್ಲಿಯೂ ಹೆಚ್ಚು ಇಳುವರಿ ಬೀಜಗಳನ್ನು ಬಳಸಲು ಪ್ರೇರಣೆ ನೀಡಿತು. ಸುಧಾರಿತ ತಂತ್ರಜ್ಞಾನವನ್ನು ಎಲ್ಲ ಬೆಳೆಗಳಲ್ಲೂ ಬಳಸಲು ಪ್ರಯತ್ನಿಸಲಾಯಿತು. ಜೊತೆಗೆ ಇದನ್ನು ದೇಶಾದ್ಯಂತ ವಿಸ್ತರಣೆಗೆ ಕ್ರಮ ಕೈಗೊಳ್ಳಲಾಯಿತು. ಇದರಿಂದ ಕೃಷಿ ಉತ್ಪಾದನೆಯಲ್ಲಿ ಅಗಾಧ ಪ್ರಗತಿ ಸಾಧ್ಯವಾಯಿತು. 80 ರ ದಶಕದ ವೇಳೆಗೆ ಭಾರತವು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿತು.

ಹಸಿರು ಕ್ರಾಂತಿಯ ಲಾಭ ಕೇವಲ ದೊಡ್ಡ ಹಾಗೂ ಶ್ರೀಮಂತ ರೈತರಿಗೆ ಮಾತ್ರ ತಲುಪಿದೆ, ಬಡ ರೈತರಿಗೆ ಇದರ ಲಾಭ ತಲುಪಿಲ್ಲ ಎಂಬ ಕೂಗು ಎಲ್ಲೆಡೆ ಕೇಳಲಾರಂಭಿಸಿತು. ಏಕೆಂದರೆ ಸುಧಾರಿತ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಮುಂತಾದುವುಗಳನ್ನು ಕೊಳ್ಳುವ ಶಕ್ತಿ ಬಡ ರೈತರಿಗೆ ಇರಲಿಲ್ಲ. ಈ ತಾರತಮ್ಯವನ್ನು ಹೋಗಲಾಡಿಸುವುದು ಹೇಗೆ? ಆಗ ಸರ್ಕಾರವು ಸಣ್ಣ ಮತ್ತು ಬಡ ರೈತರಿಗೂ ಸುಧಾರಿತ ತಂತ್ರಜ್ಞಾನದ ಲಾಭ ದೊರೆಯುವಂತೆ ಮಾಡಲು 'ಸಹಾಯ ಧನ' ವ್ಯವಸ್ಥೆಯನ್ನು ಜಾರಿಗೊಳಿಸಿತು. ಸರ್ಕಾರವು ಹೆಚ್ಚಿನ ಸಹಾಯಧನದೊಂದಿಗೆ ಬೀಜ, ಗೊಬ್ಬರ, ಕ್ರಿಮಿನಾಶಕ, ಯಂತ್ರೋಪಕರಣಗಳು ಮುಂತಾದುವುಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ವಿತರಿಸಲು ಮುಂದಾಯಿತು. ಅಲ್ಲದೆ ರೈತರಿಗೆ ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳ ಮೂಲಕ ಕಡಿಮೆ ಬಡ್ಡಿದರದಲ್ಲಿ ಸಾಲ ಒದಗಿಸಲು ಮುಂದಾಯಿತು. ಇದರಿಂದ ಸುಧಾರಿತ ಕೃಷಿ ವಿಧಾನಗಳನ್ನು ಎಲ್ಲ ವರ್ಗದ ರೈತರು ಬಳಸಲು ಸಾಧ್ಯವಾಯಿತು. ಕೃಷಿ ಉತ್ಪಾದನೆ ಹೆಚ್ಚಿತು.

ಚಟುವಟಿಕೆ :

ಕೃಷಿ ಉತ್ಪನ್ನಗಳಿಗೆ ಬೆಂಬಲಗಳಿಗೆ ನೀಡುತ್ತಿರುವ ಬೆಲೆ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿ ಮತ್ತು ರೈತರೊಂದಿಗೆ ಸಂವಾದ ನಡೆಸಿರಿ.

ನಿಮಗಿದು ತಿಳಿದಿರಲಿ :

ಕಾಮನ ಬಿಲ್ಲು ಕ್ರಾಂತಿ

ರೈತರು ಕೃಷಿಯ ಜೊತೆಗೆ ಪಶುಪಾಲನೆ, ಕೋಳಿಸಾಕಣೆ, ಮೀನುಗಾರಿಕೆ, ರೇಷ್ಮೆಗಾರಿಕೆ ಮುಂತಾದ ಕೃಷಿ ಸಂಬಂಧಿತ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದಾರೆ. ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳ ಉತ್ಪಾದನೆಯಲ್ಲಿ ಆದಂತಹ ಅಗಾಧ ಹೆಚ್ಚಳವನ್ನು ಕಾಮನಬಿಲ್ಲು ಕ್ರಾಂತಿ ಎಂದು ಕರೆಯಲಾಗುತ್ತಿದೆ. ಕಾಮನ ಬಿಲ್ಲು ಕ್ರಾಂತಿಯು ಹಲವು ಕ್ರಾಂತಿಗಳನ್ನು ಒಳಗೊಂಡಿದೆ. ಅವುಗಳು ಯಾವುದರ ಪ್ರಗತಿಗೆ ಸಂಬಂಧಿಸಿವೆ ಎಂಬುದನ್ನು ತಿಳಿಯಿರಿ.

1. *ಹಸಿರು ಕ್ರಾಂತಿ – ಆಹಾರ ಧಾನ್ಯಗಳ ಉತ್ಪಾದನೆ*
2. *ನೀಲಿ ಕ್ರಾಂತಿ – ಮೀನುಗಳ ಉತ್ಪಾದನೆ*
3. *ಹಳದಿ ಕ್ರಾಂತಿ – ಎಣ್ಣೆ ಬೀಜಗಳ ಉತ್ಪಾದನೆ*
4. *ಬಿಳಿ ಕ್ರಾಂತಿ – ಹಾಲು ಉತ್ಪಾದನೆ*
5. *ಬೆಳ್ಳಿ ಕ್ರಾಂತಿ – ಮೊಟ್ಟೆಗಳ ಉತ್ಪಾದನೆ*
6. *ಬಂಗಾರ ಕ್ರಾಂತಿ– ಹಣ್ಣು / ಹೂಗಳ ಉತ್ಪಾದನೆ*
7. *ಕೆಂಪು ಕ್ರಾಂತಿ – ಮಾಂಸದ ಉತ್ಪಾದನೆ*

ಕೃಷಿ ಉತ್ಪಾದನೆಯ ಹೆಚ್ಚಳದಿಂದ ಕೃಷಿ ವಸ್ತುಗಳ ಬೆಲೆಗಳು ಇಳಿಕೆಯಾಗಿ, ರೈತರಿಗೆ ನಷ್ಟವಾಗುವ ಆತಂಕ ಸೃಷ್ಟಿಯಾಯಿತು. ರೈತರ ಉತ್ಪನ್ನಗಳಿಗೆ ನ್ಯಾಯೋಚಿತ ಬೆಲೆ ದೊರಕಿಸಿಕೊಡಬೇಕಾದ ಅನಿವಾರ್ಯತೆ ಉಂಟಾಯಿತು. ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿಸಿಕೊಡುವುದಾದರೂ ಹೇಗೆ? ಅದಕ್ಕಾಗಿ ಕೃಷಿ ಮಾರುಕಟ್ಟೆಗಳನ್ನು ಸುಧಾರಿಸಬೇಕಾಯಿತು. ಹೆಚ್ಚುವರಿ ಉತ್ಪನ್ನಗಳನ್ನು ಸಂಸ್ಕರಿಸಿ ಅವುಗಳಿಂದ ವಿವಿಧ ಉತ್ಪನ್ನಗಳನ್ನು ತಯಾರಿಸಲು ಕ್ರಮ ಕೈಗೊಳ್ಳಬೇಕಾಯಿತು. ಹೆಚ್ಚುವರಿ ಉತ್ಪನ್ನಗಳನ್ನು ಕೆಡದಂತೆ ಸಂಗ್ರಹಿಸಲು ಉಗ್ರಾಣಗಳು ಮತ್ತು ಶೈತ್ಯಾಗಾರಗಳನ್ನು ನಿರ್ಮಿಸುವ ಅವಶ್ಯಕತೆ ಉಂಟಾಯಿತು. ಹೀಗೆ ಕೃಷಿ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ ಮತ್ತು ಮಾರಾಟದಲ್ಲಿ ಬಳಕೆಗೆ ತರಲಾದ ಸುಧಾರಿತ ತಂತ್ರಜ್ಞಾನವನ್ನು **'ಸುಗ್ಗಿ ನಂತರದ ತಂತ್ರಜ್ಞಾನ' (Post-harvest Technology)** ಎಂದು ಕರೆಯುತ್ತಾರೆ. ಹಸಿರು ಕ್ರಾಂತಿಗೆ ಸುಗ್ಗಿ ಪೂರ್ವ ಮತ್ತು ಸುಗ್ಗಿ ನಂತರದ ತಂತ್ರಜ್ಞಾನಗಳೆರಡೂ ಪ್ರೇರಕ ಅಂಶಗಳಾಗಿವೆ.

ನಿಮಗಿದು ತಿಳಿದಿರಲಿ :

ರೈತಮಿತ್ರ ಸೂಕ್ಷ್ಮಾಣು ಜೀವಿಗಳು : *ಮಣ್ಣಿನಲ್ಲಿ ಕೋಟ್ಯಾಂತರ ಸೂಕ್ಷ್ಮಾಣು ಜೀವಿಗಳು ಮತ್ತು ಎರೆಹುಳುವಿನಂತಹ ಜೀವಿಗಳು ಇದ್ದು, ಅವು ಭೂಮಿಯ ಮೇಲೆ ಬೀಳುವ ಕಸ–ಕಡ್ಡಿಗಳು, ಎಲೆಗಳು ಮುಂತಾದ ಜೈವಿಕ ತ್ಯಾಜ್ಯಗಳನ್ನು ನಿರಂತರವಾಗಿ ಜೀರ್ಣಿಸಿಕೊಂಡು ಮಣ್ಣಿನಲ್ಲಿ ಸೇರಿಸುತ್ತವೆ. ಇದರಿಂದ ಮಣ್ಣು ಫಲವತ್ತಾಗುವುದಲ್ಲದೆ, ಮೃದುತ್ವವನ್ನು ಪಡೆಯುತ್ತದೆ. ಹೀಗೆ ಭೂಮಿಯು ತನ್ನ ಫಲವತ್ತತೆಯನ್ನು ಹೆಚ್ಚಿಸಿಕೊಳ್ಳುವ ಸಹಜಗುಣ ಪಡೆದಿದೆ. ಈ ಸೂಕ್ಷಾಣು ಜೀವಿಗಳು ಬೆಳೆಗಳಿಗೆ ರೋಗತರುವ ರೋಗಾಣುಗಳನ್ನು ನಿಯಂತ್ರಿಸುತ್ತವೆ, ಅಲ್ಲದೆ ಕ್ರಿಮಿಕೀಟಗಳು ಮಣ್ಣಿನಲ್ಲಿಡುವ ಮೊಟ್ಟೆಗಳನ್ನು ತಿಂದು, ಅವುಗಳ ಸಂತತಿ ಹೆಚ್ಚದಂತೆ ನಿಯಂತ್ರಿಸುತ್ತವೆ. ಹೀಗೆ ಮಣ್ಣಿನಲ್ಲಿರುವ ಸೂಕ್ಷಾಣು ಜೀವಿಗಳು ಒಂದೆಡೆ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿದರೆ, ಮತ್ತೊಂದೆಡೆ ಬೆಳೆಗಳಿಗೆ ಬಾದಿಸುವ ರೋಗಾಣುಗಳು ಮತ್ತು ಕೀಟಗಳನ್ನು ನಿಯಂತ್ರಿಸುತ್ತವೆ. ರೈತರು ಹೆಚ್ಚು ಉತ್ಪಾದಿಸುವ ಉತ್ಸಾಹದಲ್ಲಿ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ಕೀಟನಾಶಕ ಮುಂತಾದ ನಾನಾರೀತಿಯ ರಾಸಾಯನಿಕಗಳನ್ನು ಭೂಮಿಯಲ್ಲಿ ಅತಿಯಾಗಿ ಸುರಿಯುತ್ತಿರುವುದರಿಂದ ಮಣ್ಣಿನಲ್ಲಿರುವ ರೈತಮಿತ್ರ ಸೂಕ್ಷ್ಮಾಣು ಜೀವಿಗಳು ನಾಶವಾಗುತ್ತಿವೆ. ಭೂಮಿಯ ಸಹಜಗುಣ ನಾಶವಾಗುತ್ತಿದೆ. ಅದು ತನ್ನ ಮೃದುತ್ವವನ್ನು ಕಳೆದುಕೊಳ್ಳುತ್ತಿದೆ. ಇದರಿಂದ ಮಳೆಯ ನೀರು ಮಣ್ಣಿನಲ್ಲಿ ಇಂಗುವ ಪ್ರಮಾಣವೂ ಕಡಿಮೆಯಾಗುತ್ತಿದೆ. ಕೀಟಗಳು ಮತ್ತು ರೋಗಾಣುಗಳ ಸಂತಾನೋತ್ಪತ್ತಿಗೆ ನೈಸರ್ಗಿಕ ಅಡಚಣೆ ಇಲ್ಲದಂತಾಗಿ ಅವುಗಳ ಸಂತತಿ ಹೆಚ್ಚುತ್ತಿದೆ. ಹೀಗೆ ಕೃಷಿಯಲ್ಲಿ ಅತಿಯಾದ ರಾಸಾಯನಿಕಗಳ ಬಳಕೆಯಿಂದ ಒಂದೆಡೆ ಭೂಮಿಯ ಫಲವತ್ತತೆ ಕ್ರಮೇಣ ನಾಶವಾದರೆ, ಮತ್ತೊಂದೆಡೆ ರೋಗಗಳು ಮತ್ತು ಕೀಟಗಳ ಹಾವಳಿ ಹೆಚ್ಚುತ್ತಿದೆ. ಹೀಗಾಗಿ ರೈತರು ತಮ್ಮ ಉತ್ಪಾದನಾ ಮಟ್ಟವನ್ನು ಕಾಯ್ದುಕೊಳ್ಳಲು ವರ್ಷದಿಂದ ವರ್ಷಕ್ಕೆ ರಾಸಾಯನಿಕಗಳ ಬಳಕೆಯನ್ನು ಹೆಚ್ಚಿಸಬೇಕಾಗಿದೆ. ಇದರಿಂದ ಕೃಷಿಯ ವೆಚ್ಚ ಹೆಚ್ಚಾಗಿ ರೈತರು ಸಾಲದ ಬಲೆಗೆ ಸಿಲುಕುತ್ತಿದ್ದಾರೆ. ಇಂತಹ ವಿಷವೃತ್ತದಿಂದ ಹೊರಬರಲು ರೈತರು ಕಂಡುಕೊಂಡ ಮಾರ್ಗವೇ ಸಾವಯವ ಕೃಷಿ, ಸಹಜ ಕೃಷಿ.*

ಕೃಷಿ ವಲಯವು ಸದ್ಯದಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವೆಂಬಂತೆ ಸರ್ಕಾರವು ರೈತರಿಗೆ ಸಾವಯವ ಕೃಷಿ ವಿಧಾನವನ್ನು ಬಳಸುವಂತೆ ಪ್ರೋತ್ಸಾಹಿಸುತ್ತಿದೆ. ರಾಸಾಯನಿಕ ಗೊಬ್ಬರಗಳಿಗೆ ಬದಲಾಗಿ ಜೈವಿಕ ಗೊಬ್ಬರ, ರಾಸಾಯನಿಕ ಕ್ರಿಮಿನಾಶಕಗಳಿಗೆ ಬದಲಾಗಿ ಜೈವಿಕ ಕ್ರಿಮಿನಾಶಕಗಳ ಬಳಕೆಗೆ ಪ್ರೋತ್ಸಾಹಿಸಲಾಗುತ್ತಿದೆ. ಹೀಗೆ ಕೃಷಿಯಲ್ಲಿ ಎಲ್ಲ ರೀತಿಯ ಪರಸರ ಸ್ನೇಹಿ ತಂತ್ರಗಳನ್ನು ಬಳಸುವ ಮೂಲಕ, ಕೃಷಿ ಉತ್ಪಾದನೆಯನ್ನು ದ್ವಿಗುಣಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇದನ್ನು 'ಎರಡನೇ ಹಸಿರು ಕ್ರಾಂತಿ' ಅಥವಾ 'ಸದಾ ಹಸಿರು ಕ್ರಾಂತಿ' ಎಂದು ಗುರುತಿಸಲಾಗುತ್ತಿದೆ. ಕೆಲವು ಉತ್ಸಾಹಿ ರೈತರು ಸಾವಯವ ಕೃಷಿ, ಶೂನ್ಯ ಬಂಡವಾಳ ಕೃಷಿ ಮುಂತಾದ ಪರಿಸರ ಸ್ನೇಹಿ ಹಾಗೂ ಸುಸ್ಥಿರ ಕೃಷಿ ವಿಧಾನಗಳನ್ನು ಅಳವಡಿಸಿಕೊಂಡು ಅನುಕೂಲ ಪಡೆಯುತ್ತಿದ್ದಾರೆ.

4. ಉದಾರೀಕರಣ ಮತ್ತು ಜಾಗತೀಕರಣ (Liberalisation and Globalisation)

ಸ್ವಾತಂತ್ರ್ಯಾ ನಂತರ ಭಾರತ ಸರ್ಕಾರವು ಸಾಮಾಜಿಕ ನ್ಯಾಯದೊಂದಿಗೆ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಬಯಸಿತು. ಅದಕ್ಕಾಗಿ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸರ್ಕಾರವು ಪ್ರಧಾನ ಪಾತ್ರ ನಿರ್ವಹಿಸಲು ಮುಂದಾಯಿತು. ಅದು ನಿಯಂತ್ರಿತ ಅರ್ಥವ್ಯವಸ್ಥೆಯನ್ನು ಜಾರಿಗೆ ತಂದು, ಸರಕು–ಸೇವೆಗಳ ಉತ್ಪಾದನೆ, ವಿತರಣೆ ಮುಂತಾದ ಆರ್ಥಿಕ ಚಟುವಟಿಕೆಗಳ ಮೇಲೆ ಹಲವು ರೀತಿಯ ನಿಯಂತ್ರಣಗಳನ್ನು ವಿಧಿಸಿತು. ಕಬ್ಬಿಣ ಮತ್ತು ಉಕ್ಕು, ವಿದ್ಯುತ್, ಭಾರಿ ಯಂತ್ರೋಪಕರಣಗಳು ಮುಂತಾದ ಪ್ರಮುಖ ಮತ್ತು ಮೂಲ ಕೈಗಾರಿಕೆಗಳನ್ನು ಸರ್ಕಾರವೇ ಸ್ಥಾಪಿಸಲು ಮುಂದಾಯಿತು. ಖಾಸಗಿ ಕೈಗಾರಿಕೆಗಳ ಮೇಲೆ ಹಲವು ನಿಯಂತ್ರಣಗಳನ್ನು ವಿಧಿಸಿತು. ಖಾಸಗಿ ಉದ್ಯಮಗಳ ಸ್ಥಾಪನೆಗೆ ಪರವಾನಗಿಯನ್ನು ಕಡ್ಡಾಯಗೊಳಿಸಲಾಯಿತು. ಅಲ್ಲದೆ ಅವು ಹೂಡುವ ಬಂಡವಾಳದ ಮೇಲೆ ಮಿತಿ ಹೇರಲಾಯಿತು. ಅಗತ್ಯ ಸರಕು–ಸೇವೆಗಳ ಬೆಲೆಯನ್ನು ಸರ್ಕಾರವೇ ನಿರ್ಧರಿಸತೊಡಗಿತು. ದೇಶೀಯ ಉತ್ಪಾದಕರನ್ನು ರಕ್ಷಿಸುವ ಸಲುವಾಗಿ ಆಮದುಗಳ ಮೇಲೆ ಅತಿಯಾದ ತೆರಿಗೆಯನ್ನು ವಿಧಿಸಲಾಯಿತು. ಈ ಎಲ್ಲ ನಿಯಂತ್ರಣ ಮತ್ತು ನಿರ್ಬಂಧಗಳ ಪರಿಣಾಮವಾಗಿ ಭಾರತೀಯ ಕೈಗಾರಿಕಾ ವಲಯಕ್ಕೆ ಭದ್ರ ತಳಹದಿಯನ್ನು ಹಾಕಲು ಸಾಧ್ಯವಾಯಿತು. ಆದರೆ ಅಧಿಕಾರಶಾಹಿಗಳ ಅತಿಯಾದ ಹಸ್ತಕ್ಷೇಪದಿಂದ ಕೈಗಾರಿಕಾ ಬೆಳವಣಿಗೆ ನಿರೀಕ್ಷಿಸಿದ ವೇಗದಲ್ಲಿ ಅಭಿವೃದ್ಧಿಯನ್ನು ಕಾಣಲಿಲ್ಲ.

1991 ರಲ್ಲಿ ಭಾರತ ಸರ್ಕಾರವು ಆರ್ಥಿಕ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವ ಸಲುವಾಗಿ, ತಾನು ಅಲ್ಲಿಯವರೆಗೆ ಅನುಸರಿಸುತ್ತಿದ್ದ ನೀತಿಗಳಲ್ಲಿ ಬದಲಾವಣೆಯನ್ನು ಮಾಡಿ, ಹೊಸ ಆರ್ಥಿಕ ನೀತಿಗಳನ್ನು ಜಾರಿಗೆ ತಂದಿತು. ಇದನ್ನೇ ಆರ್ಥಿಕ ಸುಧಾರಣೆಗಳು ಎನ್ನುತ್ತೇವೆ. ಸರ್ಕಾರವು ಅಭಿವೃದ್ಧಿ ಚಟುವಟಿಕೆಗಳಲ್ಲಿ ತನ್ನ ಮಧ್ಯಪ್ರವೇಶವನ್ನು ಕಡಿಮೆಗೊಳಿಸಲು ನಿರ್ಧರಿಸಿತು. ಉತ್ಪಾದನೆ ಮತ್ತು ವಿತರಣೆ ಮೇಲಿನ ತನ್ನ ಅನಗತ್ಯ ನಿರ್ಬಂಧಗಳನ್ನು ಕಡಿಮೆಗೊಳಿಸಿ, ಸ್ಪರ್ಧೆಗೆ ಅವಕಾಶ ನೀಡುವ ಮೂಲಕ ಮುಕ್ತ ಅರ್ಥವ್ಯವಸ್ಥೆಯನ್ನು ಜಾರಿಗೊಳಿಸಲು ಮುಂದಾಯಿತು. ಅದಕ್ಕಾಗಿ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳನ್ನು ಜಾರಿಗೆ ತಂದಿತು.

ಉದಾರೀಕರಣ : ಸರ್ಕಾರವು ಜನರ ಆರ್ಥಿಕ ಚಟುವಟಿಕೆಗಳ ಮೇಲಿನ ತನ್ನ ಎಲ್ಲ ಅನಗತ್ಯ ನಿಯಂತ್ರಣ ಮತ್ತು ನಿರ್ಬಂಧಗಳನ್ನು ಸಡಿಲಗೊಳಿಸಿ ಮುಕ್ತ ಅರ್ಥವ್ಯವಸ್ಥೆಗೆ ಅವಕಾಶ ಮಾಡಿಕೊಡಲು ಮುಂದಾಗಿದೆ. ಈ ಪ್ರಕ್ರಿಯೆಯನ್ನು ಉದಾರೀಕರಣ ಎನ್ನುತ್ತೇವೆ. ಜನರ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರದ ಮಧ್ಯಪ್ರವೇಶವನ್ನು ಆದಷ್ಟು ಕಡಿಮೆಗೊಳಿಸಿ, ಸರಕು–ಸೇವೆಗಳ ಉತ್ಪಾದನೆ ಮತ್ತು ಮಾರಾಟದಲ್ಲಿ

ಸ್ಪರ್ಧೆಗೆ ಅವಕಾಶ ಮಾಡಿಕೊಡುವುದು ಉದಾರೀಕರಣದ ಹಿಂದಿರುವ ಆಶಯ. ಉತ್ಪಾದಕರ ನಡುವೆ ಸ್ಪರ್ಧೆಗೆ ಅವಕಾಶ ನೀಡಿದರೆ, ಸಂಪನ್ಮೂಲಗಳು ಸಮರ್ಪಕವಾಗಿ ಬಳಕೆಯಾಗಿ, ಉತ್ಪಾದನೆ ಹೆಚ್ಚಾಗುತ್ತದೆ. ಮಾರಾಟದಲ್ಲಿ ಸ್ಪರ್ಧೆಗೆ ಅವಕಾಶ ನೀಡಿದರೆ, ಸರಕು–ಸೇವೆಗಳ ಬೆಲೆಗಳು ಕಡಿಮೆಯಾಗಿ, ಅವು ಎಲ್ಲ ಜನರಲ್ಲಿ ಆದಷ್ಟೂ ಸಮಾನವಾಗಿ ಹಂಚಿಕೆಯಾಗಲು ಸಾಧ್ಯವಾಗುತ್ತದೆ.

ಖಾಸಗೀಕರಣ : ಸರ್ಕಾರವು ಖಾಸಗೀ ಉದ್ಯಮಗಳ ಸ್ಥಾಪನೆಯಲ್ಲಿದ್ದ ಪರವಾನಗಿ (ಲೈಸನ್ಸ್) ಕೊಡುವ ಪದ್ಧತಿಯನ್ನು ಸರಳಗೊಳಿಸಲಾಗಿದೆ. ಖಾಸಗೀ ಉದ್ಯಮಗಳ ಮೇಲಿನ ಬಂಡವಾಳ ಮಿತಿಯನ್ನು ತೆಗೆದುಹಾಕಲಾಗಿದೆ. ಉದ್ಯಮದ ಸ್ಥಾಪನೆ, ಇರುವ ಉದ್ಯಮದ ವಿಸ್ತರಣೆ ಹಾಗೂ ಇತರೆ ಉದ್ಯಮಗಳ ಜೊತೆಗೆ ಒಗ್ಗೂಡಿಕೆಗೆ ಮುಕ್ತ ಅವಕಾಶ ನೀಡಲಾಗಿದೆ. ವಿದೇಶಿ ಬಂಡವಾಳ ಮತ್ತು ವಿದೇಶಿ ತಂತ್ರಜ್ಞಾನವನ್ನು ಉತ್ಪಾದನೆಯಲ್ಲಿ ಬಳಸಿಕೊಳ್ಳಲು ಮುಕ್ತ ಅವಕಾಶ ನೀಡಲಾಗಿದೆ. ಹೀಗೆ ಉತ್ಪಾದನೆ, ವಿತರಣೆಯಲ್ಲಿ ಮುಕ್ತ ಸ್ಪರ್ಧೆಗೆ ಅವಕಾಶ ದೊರಕಿದೆ. ಇದರಿಂದ ಉದ್ಯಮಗಳು ಸ್ಪರ್ಧಾತ್ಮಕವಾಗಿ ಬೆಳವಣಿಗೆ ಹೊಂದಲು ಸಹಾಯಕವಾಗಿದೆ.

ಜಾಗತೀಕರಣ : ಚೀನಾದ ಗೊಂಬೆಗಳು, ಆಸ್ಟ್ರೇಲಿಯಾದ ಸೇಬುಗಳು, ಜಪಾನಿನ ಟಿ.ವಿ. ಮುಂತಾದ ಹಲವಾರು ವಿದೇಶಿ ಸರಕುಗಳು ನಮ್ಮ ಸುತ್ತಮುತ್ತಲಿನ ಅಂಗಡಿಗಳಲ್ಲಿ ಮಾರುತ್ತಿರುವುದನ್ನು ನಾವು ಗಮನಿಸಿರಬಹುದಲ್ಲವೇ? ಹಾಗೆಯೇ ನಮ್ಮ ಗಾರ್ಮೆಂಟ್ಸ್‌ಗಳಲ್ಲಿ ತಯಾರಾಗುವ ಸಿದ್ಧ ಉಡುಪುಗಳು, ಬೆಂಗಳೂರಿನ ಸುತ್ತಮುತ್ತಲಿನ ರೈತರು ಬೆಳೆಯುವ ಗುಲಾಬಿ ಹೂಗಳು, ಶಿರಾಳಕೊಪ್ಪದ ಉಪ್ಪಿನಕಾಯಿ, ಬೀದರಿನ ಬಿದರಿ ವಸ್ತುಗಳು ಮುಂತಾದುವು ವಿದೇಶೀ ಮಾರುಕಟ್ಟೆಗಳಲ್ಲಿ ಮಾರಾಟವಾಗುತ್ತಿವೆ. ಎರಡು ದಶಕಗಳಿಂದೀಚೆಗೆ ನಮ್ಮ ವಿದೇಶಿ ವ್ಯಾಪಾರದಲ್ಲಿ ಇಂತಹ ಮುಕ್ತ ವಾತಾವರಣ ನಿರ್ಮಾಣವಾಗಿದೆ. ಇದೆಲ್ಲವು ಜಾಗತೀಕರಣದ ಪರಿಣಾಮವಾಗಿದೆ. ಹಾಗಾದರೆ ಜಾಗತೀಕರಣ ಎಂದರೇನು?

ಭಾರತದ ಅರ್ಥವ್ಯವಸ್ಥೆಯನ್ನು ವಿಶ್ವದ ಅರ್ಥವ್ಯವಸ್ಥೆಯೊಂದಿಗೆ ಒಗ್ಗೂಡಿಸುವ ಪ್ರಕ್ರಿಯೆಯನ್ನು ಜಾಗತೀಕರಣ ಎನ್ನುತ್ತೇವೆ. ಅಂದರೆ ಆಮದು ಮತ್ತು ರಫ್ತು ವ್ಯಾಪಾರದಲ್ಲಿ ಜಾರಿಯಲ್ಲಿದ್ದ ಸರ್ಕಾರದ ನಿಯಂತ್ರಣ ಮತ್ತು ನಿರ್ಬಂಧಗಳನ್ನು ತೆಗೆದುಹಾಕಿ, ರಾಷ್ಟ್ರಗಳ ನಡುವೆ ಪರಸ್ಪರ ಸರಕು–ಸೇವೆಗಳು, ಬಂಡವಾಳ ಮತ್ತು ತಂತ್ರಜ್ಞಾನದ ಚಲನವಲನಕ್ಕೆ ಮುಕ್ತ ಅವಕಾಶ ಮಾಡಿಕೊಡುವುದು ಎಂದು ಅರ್ಥ. ಜಾಗತೀಕರಣದ ಜಾರಿಗಾಗಿ ಆಮದು–ರಫ್ತು ತೆರಿಗೆಗಳನ್ನು ಕಡಿಮೆಗೊಳಿಸಿ, ಸರಕು–ಸೇವೆಗಳ ವ್ಯಾಪಾರಕ್ಕೆ ಮುಕ್ತ ಅವಕಾಶ ನೀಡಲಾಗಿದೆ. ವಿದೇಶಿ ವ್ಯಾಪಾರದಲ್ಲಿದ್ದ ಕೋಟಾ ಪದ್ಧತಿ(Quota system)ಯನ್ನು

ನಿಮಗಿದು ಗೊತ್ತೆ ?

ವಿದೇಶೀ ನೇರ ಹೂಡಿಕೆ (Foreign Direct Investment) :

ವಿದೇಶೀ ಕಂಪನಿಗಳು ದೇಶದಲ್ಲಿ ಬಂಡವಾಳ ಹೂಡಿ ಉದ್ಯಮಗಳನ್ನು ಸ್ಥಾಪಿಸುವುದು ಅಥವಾ ಇಲ್ಲಿರುವ ಉದ್ಯಮಗಳನ್ನು ಕೊಳ್ಳುವುದಕ್ಕೆ ವಿದೇಶೀ ನೇರ ಹೂಡಿಕೆ ಎನ್ನುತ್ತಾರೆ. ಜಾಗತೀಕರಣವು ವಿದೇಶೀ ನೇರ ಹೂಡಿಕೆಗೆ ಅವಕಾಶ ಮಾಡಿಕೊಡುತ್ತದೆ. ಭಾರತವು 1991 ರಿಂದೀಚೆಗೆ ವಿದೇಶೀ ನೇರ ಹೂಡಿಕೆಗೆ ಮುಕ್ತ ಅವಕಾಶ ಮಾಡಿಕೊಟ್ಟಿದೆ.

ವಿದೇಶೀ ನೇರ ಹೂಡಿಕೆಯು ಬಂಡವಾಳ ಮತ್ತು ತಾಂತ್ರಿಕ ಪರಿಣತಿಯನ್ನು ತರುತ್ತದೆ. ಅಲ್ಲದೆ ಹೊಸ ಹೊಸ ದುಡಿಯುವ ಅವಕಾಶಗಳನ್ನು ಸೃಷ್ಟಿಸುತ್ತದೆ. ಆದರೆ ವಿದೇಶೀ ನೇರ ಹೂಡಿಕೆ ಮೂಲಕ ಬರುವ ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಜೊತೆ ಸ್ಪರ್ಧಿಸಲಾಗದೆ ದೇಶೀಯ ಉದ್ಯಮಗಳು ನಾಶ ಹೊಂದುವ ಅಪಾಯವಿದೆ.

ತೆಗೆದುಹಾಕಲಾಗಿದೆ. ವಿದೇಶಿ ಬಂಡವಾಳ ಮತ್ತು ತಂತ್ರಜ್ಞಾನದ ಆಮದಿಗೆ ಮುಕ್ತ ಅವಕಾಶ ನೀಡಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳ (MNC's) ಸ್ಥಾಪನೆಗೆ ಅವಕಾಶ ನೀಡಲಾಗಿದೆ.

ಕೆಲವು ಅರ್ಥಶಾಸ್ತ್ರಜ್ಞರು ವಾದಿಸುವಂತೆ ಜಾಗತೀಕರಣವು ಆಧುನಿಕ ತಂತ್ರಜ್ಞಾನ ಮತ್ತು ವಿದೇಶಿ ಬಂಡವಾಳದ ಒಳಹರಿವಿಗೆ ಅವಕಾಶ ಮಾಡಿಕೊಟ್ಟಿದೆ. ಇದರಿಂದ ಉತ್ಪಾದನೆಯಲ್ಲಿ ದಕ್ಷತೆ ಮತ್ತು ಗುಣಮಟ್ಟ ಹೆಚ್ಚಲು ಸಾಧ್ಯವಾಗಿದೆ. ಲಭ್ಯವಿರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಉತ್ಪಾದಕತೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತಿದೆ. ಅಲ್ಲದೆ ನಮ್ಮ ಅರ್ಥವ್ಯವಸ್ಥೆಯು ಅಂತರರಾಷ್ಟ್ರೀಯ ಸ್ಪರ್ಧೆಯನ್ನು ಎದುರಿಸಲು ಸಮರ್ಥವಾಗುವಂತಾಗಿದೆ.

ಆದರೆ ಮತ್ತೆ ಕೆಲವು ಅರ್ಥಶಾಸ್ತ್ರಜ್ಞರು ಹೇಳುವಂತೆ, ಉದಾರೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳು ಭಾರತೀಯರ ಮೇಲೆ ಹಲವು ರೀತಿಯಲ್ಲಿ ದುಷ್ಪರಿಣಾಮಗಳನ್ನು ಉಂಟುಮಾಡಿವೆ. ದೊಡ್ಡ ಮತ್ತು ಬಹುರಾಷ್ಟ್ರೀಯ ಕೈಗಾರಿಕೆಗಳ ಸ್ಪರ್ಧೆಯನ್ನು ಎದುರಿಸಲಾಗದೆ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ನಶಿಸುತ್ತಿವೆ. ನಗರ–ಗ್ರಾಮೀಣ ಮತ್ತು ಬಡವ–ಬಲ್ಲಿದರ ನಡುವಿನ ಅಂತರ ಅಗಾಧವಾಗಿ ಹೆಚ್ಚತೊಡಗಿದೆ. ಕೃಷಿ ಸರಕುಗಳಿಗೆ ನ್ಯಾಯೋಚಿತ ಬೆಲೆ ದೊರೆಯದೆ ರೈತರ ಆತ್ಮಹತ್ಯೆಗಳು ಹೆಚ್ಚುತ್ತಿವೆ. ಕಾರ್ಮಿಕರು ಅಭದ್ರತೆಯನ್ನು ಎದುರಿಸುವಂತಾಗಿದೆ.

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. 20ನೇ ಶತಮಾನದಲ್ಲಿ ಸರ್ಕಾರಗಳು ಆರ್ಥಿಕಾಭಿವೃದ್ಧಿಯ ತಂತ್ರವಾಗಿ ____________ನ್ನು ಜಾರಿಗೆ ತಂದವು.
2. ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುವ ಸಂಸ್ಥೆ ____________
3. ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯಲ್ಲಿ ____________ ಗೆ ಪ್ರಾಮುಖ್ಯತೆ ನೀಡಲಾಯಿತು.
4. ಭಾರತದ ಹಸಿರು ಕ್ರಾಂತಿಯ ಪಿತಾಮಹ ____________ .
5. ಪರಿಸರಸ್ನೇಹಿ ಹಾಗೂ ಸುಸ್ಥಿರ ಕೃಷಿಗಾಗಿ ಸರ್ಕಾರವು ರೈತರಿಗೆ ____________ ವಿಧಾನವನ್ನು ಬಳಸುವಂತೆ ಪ್ರೋತ್ಸಾಹಿಸುತ್ತಿದೆ.

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಆರ್ಥಿಕ ಯೋಜನೆಯ ಅರ್ಥ ತಿಳಿಸಿ.
2. ಭಾರತದ 'ಆರ್ಥಿಕ ಯೋಜನೆಯ ಪಿತ' ಯಾರು ?
3. ಪಂಚವಾರ್ಷಿಕ ಯೋಜನೆಗಳಿಗೆ ಅನುಮೋದನೆ ನೀಡುವ ಸಂಸ್ಥೆ ಯಾವುದು ?
4. ಹಸಿರುಕ್ರಾಂತಿ ಎಂದರೇನು ?

5. ಸುಗ್ಗಿ ನಂತರದ ತಂತ್ರಜ್ಞಾನ ಎಂದರೇನು ?

6. ಜಾಗತೀಕರಣ ಎಂದರೇನು ?

III. ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.

1. ಕಲ್ಯಾಣ ರಾಜ್ಯಗಳಲ್ಲಿ ಸರ್ಕಾರಗಳ ಕಾರ್ಯಕ್ಷೇತ್ರ ಹೇಗೆ ವಿಸ್ತರಣೆಗೊಂಡಿದೆ ?
2. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ಬರೆಯಿರಿ.
3. ಪಂಚವಾರ್ಷಿಕ ಯೋಜನೆಗಳ ಸಾಧನೆಗಳನ್ನು ಪಟ್ಟಿ ಮಾಡಿರಿ.
4. ಹಸಿರು ಕ್ರಾಂತಿಗೆ ಪ್ರೇರಣೆಯಾದ ಅಂಶಗಳಾವುವು ?
5. ಸದ್ಯದಲ್ಲಿ ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳೇನು ?
6. ಸರ್ಕಾರವು ಉದಾರೀಕರಣ ಪ್ರಕ್ರಿಯೆಯ ಅಡಿಯಲ್ಲಿ ಯಾವ ಕ್ರಮಗಳನ್ನು ಕೈಗೊಂಡಿದೆ?

IV. ಚಟುವಟಿಕೆಗಳು.

1. ನಿಮ್ಮ ಸುತ್ತ–ಮುತ್ತಲಿನಲ್ಲಿ ಬಳಕೆಯಾಗುತ್ತಿರುವ ವಿದೇಶಿ ಸರಕುಗಳನ್ನು ಗುರುತಿಸಿ ಪಟ್ಟಿ ಮಾಡಿರಿ.
2. ಅಂತರ್ಜಾಲದ ಸಹಾಯದಿಂದ ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಗುರಿ ಮತ್ತು ಉದ್ದೇಶಗಳನ್ನು ಪಟ್ಟಿ ಮಾಡಿರಿ.

V. ಯೋಜನಾ ಕಾರ್ಯ.

1. ನಿಮ್ಮ ಸುತ್ತ–ಮುತ್ತಲಿನಲ್ಲಿ ಪ್ರಗತಿಪರ ರೈತರೆಂದು ಗುರುತಿಸಲ್ಪಟ್ಟಿರುವ ರೈತರೊಬ್ಬರ ಹೊಲ ಮತ್ತು ತೋಟಗಳಿಗೆ ಭೇಟಿ ನೀಡಿ, ಅವರು ಅನುಸರಿಸುತ್ತಿರುವ ಕೃಷಿವಿಧಾನ, ಅವರು ಬಳಸಿಕೊಂಡಿರುವ ಸುಗ್ಗಿ ಪೂರ್ವ ಮತ್ತು ಸುಗ್ಗಿ ನಂತರದ ತಂತ್ರಜ್ಞಾನಗಳನ್ನು ಕುರಿತು ಒಂದು ವರದಿ ತಯಾರಿಸಿ.

ಅಧ್ಯಾಯ – 3

ಗ್ರಾಮೀಣಾಭಿವೃದ್ಧಿ (Rural Development)

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಗ್ರಾಮೀಣಾಭಿವೃದ್ಧಿ ಅರ್ಥ ಮತ್ತು ಮಹತ್ವ.*
- *ಗ್ರಾಮೀಣಾಭಿವೃದ್ಧಿ ಮತ್ತು ವಿಕೇಂದ್ರೀಕರಣ.*
- *ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳು.*
- *ಗ್ರಾಮೀಣಾಭಿವೃದ್ಧಿ ಮತ್ತು ಮಹಿಳೆ.*

ಭಾರತ ಹಳ್ಳಿಗಳ ದೇಶ 2011 ರ ಜನಗಣತಿಯ ಪ್ರಕಾರ ಶೇ.68.84 ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಬಹು ಹಿಂದೆಯೇ 'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದಿದ್ದರು.

ಸ್ವಾತಂತ್ರ್ಯಾನಂತರ ಸರ್ಕಾರವು ಅನುಸರಿಸಿದ ಅಭಿವೃದ್ಧಿ ತಂತ್ರಗಳು ನಗರ ಕೇಂದ್ರಿತ ಅಭಿವೃದ್ಧಿಗೆ ಅವಕಾಶ ನೀಡಿದವು. ಅಂದರೆ ನಗರಗಳಲ್ಲಿ ಕೈಗಾರಿಕೆಗಳು ಬೆಳವಣಿಗೆ ಹೊಂದಿ, ನಗರಗಳು ವಿಸ್ತರಣೆ ಗೊಂಡವು. ಗ್ರಾಮೀಣ ಕೈಗಾರಿಕೆಗಳು ನಶಿಸಿ, ಗ್ರಾಮೀಣ ಜನರು ನಗರಗಳಿಗೆ ವಲಸೆ ಬರಲಾರಂಭಿಸಿದರು. ಉದಾರೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳ ಜಾರಿಯಿಂದಾಗಿ ಅತ್ಯಾಧುನಿಕ ತಂತ್ರಜ್ಞಾನವನ್ನು ತನ್ನದಾಗಿಸಿಕೊಂಡ ಕೈಗಾರಿಕೆ ಮತ್ತು ಸೇವಾ ವಲಯಗಳು ಬಹಳ ವೇಗವಾಗಿ ವಿಸ್ತರಣೆಗೊಳ್ಳುತ್ತಿವೆ. ಈ ವಲಯಗಳಲ್ಲಿನ ಬಹುತೇಕ ಅವಕಾಶಗಳು ನಗರವಾಸಿಗಳ ಪಾಲಾಗುತ್ತಿವೆ. ಆಧುನಿಕ ಜೀವನಶೈಲಿಯಲ್ಲಿ ನಗರಗಳು ಪ್ರಕಾಶಿಸತೊಡಗಿವೆ.

ಬಹುತೇಕ ಕೃಷಿಯೊಂದನ್ನೇ ಅವಲಂಬಿಸಿರುವ ಗ್ರಾಮೀಣ ಜನರಲ್ಲಿ ಬಡತನ ಹೆಚ್ಚಾಗಿದೆ. ಇವರಲ್ಲಿ ಮೂರನೇ ಒಂದು ಭಾಗದ ಜನರು ಕಡು ಬಡತನದಲ್ಲಿ ಬದುಕುತ್ತಿದ್ದಾರೆ. ಆಧುನಿಕತೆಯ ಹೊಡೆತಕ್ಕೆ ಸಿಲುಕಿ ಗ್ರಾಮೀಣ ಗುಡಿಕೈಗಾರಿಕೆಗಳು ನಶಿಸಿಹೋಗಿವೆ. ಸುಮಾರು ಶೇ.60 ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದರೂ, ರಾಷ್ಟ್ರೀಯ ಆದಾಯಕ್ಕೆ ಈ ವಲಯದ ಕೊಡುಗೆ ಅತ್ಯಂತ ಕಡಿಮೆಯಿದ್ದು, ಅದು ನಿರಂತರವಾಗಿ ಕಡಿಮೆಯಾಗುತ್ತಿದೆ. ಇದರಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರ ದಿನೇ ದಿನೇ ಹೆಚ್ಚುತ್ತಿದೆ. ಈ ಅಸಮತೋಲನವನ್ನು ಹೋಗಲಾಡಿಸಿ, ದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಬೇಕಾದರೆ, ಮೊದಲು ಗ್ರಾಮೀಣ ಪ್ರದೇಶವನ್ನು ಅಭಿವೃದ್ಧಿಪಡಿಸಬೇಕಾದ ಅವಶ್ಯಕತೆಯಿದೆ.

1. ಅರ್ಥ ಮತ್ತು ಮಹತ್ವ (Meaning and Importance)

ಗ್ರಾಮೀಣಾಭಿವೃದ್ಧಿಯ ಅರ್ಥ : ಗ್ರಾಮೀಣಾಭಿವೃದ್ಧಿಯು ಬಹು ವಿಸ್ತಾರವಾದ ಅರ್ಥವ್ಯಾಪ್ತಿಯನ್ನು ಹೊಂದಿದೆ. ಅದು ಗ್ರಾಮೀಣ ಪ್ರದೇಶದಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳ ಅಭಿವೃದ್ಧಿಯ ಜೊತೆಗೆ ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಸಾರಿಗೆ, ಸಂಪರ್ಕ ಮುಂತಾದ ಸಾಮಾಜಿಕ ಮತ್ತು ಆರ್ಥಿಕ ಮೂಲಸೌಲಭ್ಯಗಳ ಅಭಿವೃದ್ಧಿ, ಉದ್ಯೋಗ ನಿರ್ಮಾಣ, ಸಾಮಾಜಿಕ ಕಲ್ಯಾಣ ಮುಂತಾದ ಹಲವಾರು ಚಟುವಟಿಕೆಗಳನ್ನು ಒಳಗೊಂಡಿರುವ ವಿಸ್ತೃತ ಅಭಿವೃದ್ಧಿ ಕಾರ್ಯಕ್ರಮವಾಗಿದೆ.

ಗ್ರಾಮೀಣಾಭಿವೃದ್ಧಿಯು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕೃಷಿಕರು, ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮುಂತಾದ ಎಲ್ಲ ಹಿಂದುಳಿದ ವರ್ಗಗಳ ಜನರ ಜೀವನಮಟ್ಟವನ್ನು ಉತ್ತಮಪಡಿಸುವ ಮಹತ್ತರ ಆಶಯವನ್ನು ಹೊಂದಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಗ್ರಾಮೀಣ ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಉನ್ನತೀಕರಿಸುವುದನ್ನು ಗ್ರಾಮೀಣಾಭಿವೃದ್ಧಿ ಎಂದು ಕರೆಯಬಹುದಾಗಿದೆ.

ಗ್ರಾಮೀಣಾಭಿವೃದ್ಧಿಯ ಮಹತ್ವ : ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಗ್ರಾಮೀಣಾಭಿವೃದ್ಧಿಯು ಹೆಚ್ಚಿನ ಮಹತ್ವ ಪಡೆದಿದೆ. ಗ್ರಾಮೀಣ ಪ್ರದೇಶದಲ್ಲಿ ಅತಿ ಹೆಚ್ಚಿನ ಜನರು ವಾಸಿಸುತ್ತಿದ್ದು, ಅವರು ಬಡತನ, ನಿರುದ್ಯೋಗ, ಅನಕ್ಷರತೆ, ಅನಾರೋಗ್ಯ, ಮೂಲ ಸೌಕರ್ಯಗಳ ಕೊರತೆ ಮುಂತಾದ ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, ಗ್ರಾಮೀಣ ಭಾರತವನ್ನು ಸಮೃದ್ಧ ಹಾಗೂ ಶ್ರೀಮಂತಗೊಳಿಸಬೇಕಾದ ಅವಶ್ಯಕತೆಯಿದೆ.

ಗ್ರಾಮೀಣ ಜನರಿಗೆ ಶಿಕ್ಷಣ, ತರಬೇತಿ, ಆರೋಗ್ಯ, ನೈರ್ಮಲ್ಯ ಮುಂತಾದ ಸೌಲಭ್ಯಗಳನ್ನು ಒದಗಿಸಿ, ಅವರ ಜ್ಞಾನ, ಕೌಶಲ್ಯ ಮತ್ತು ದುಡಿಯುವ ಸಾಮರ್ಥ್ಯವನ್ನು ಹೆಚ್ಚಿಸಬೇಕಾಗಿದೆ. ಗ್ರಾಮೀಣ ಭಾಗದಲ್ಲಿ ಕೃಷಿಯ ಜೊತೆಗೆ ಪಶುಪಾಲನೆ, ಮೀನುಗಾರಿಕೆ, ರೇಷ್ಮೆಕೃಷಿ, ಕೋಳಿಸಾಕಣೆ ಮುಂತಾದ ಕೃಷಿ ಸಂಬಂಧಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಿ, ಕೃಷಿಯನ್ನು ಒಂದು ಲಾಭದಾಯಕ ಹಾಗೂ ಆಕರ್ಷಕ ಉದ್ಯೋಗವನ್ನಾಗಿ ಅಭಿವೃದ್ಧಿಪಡಿಸಬೇಕಾಗಿದೆ. ಇದರಿಂದ ಗ್ರಾಮೀಣ ಜನರು ನಗರಗಳಿಗೆ ವಲಸೆಹೋಗುವುದನ್ನು ತಪ್ಪಿಸಬಹುದಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಎದ್ದು ಕಾಣುತ್ತದೆ. ವಿದ್ಯುತ್, ನೀರಾವರಿ, ಸಾರಿಗೆ, ಸಂಪರ್ಕ, ಮಾರುಕಟ್ಟೆ ಮುಂತಾದ ಅಗತ್ಯ ಮೂಲ ಸೌಕರ್ಯಗಳನ್ನು ಗ್ರಾಮೀಣ ಜನರಿಗೆ ಒದಗಿಸಿಕೊಟ್ಟು, ಗ್ರಾಮೀಣ ಉತ್ಪಾದಕತೆಯನ್ನು ಹೆಚ್ಚಿಸಬೇಕಾಗಿದೆ. ಕೃಷಿ ಉತ್ಪನ್ನಗಳನ್ನು ಕಚ್ಚಾರೂಪದಲ್ಲಿಯೇ ನಗರಗಳಿಗೆ ಸಾಗಿಸಿ, ಮಾರಾಟಮಾಡುವುದಕ್ಕೆ ಬದಲಾಗಿ, ಅವುಗಳನ್ನು ಹಳ್ಳಿಗಳಲ್ಲಿಯೇ ಸಂಸ್ಕರಿಸಿ, ಸಿದ್ಧವಸ್ತುಗಳನ್ನಾಗಿ ಮಾರ್ಪಡಿಸಿ, ಮೌಲ್ಯವರ್ಧನೆಮಾಡಿ ಮಾರಾಟಮಾಡಬಹುದು. ಇದರಿಂದ ಹಳ್ಳಿಯ ಜನರಿಗೆ ಉದ್ಯೋಗಾವಕಾಶಗಳು ಹೆಚ್ಚುವುದಲ್ಲದೆ, ಅವರ ಆದಾಯವೂ ಹೆಚ್ಚುವುದು. ಸಣ್ಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ, ಗ್ರಾಮೀಣ ಅರ್ಥವ್ಯವಸ್ಥೆಯನ್ನು ಬಲಪಡಿಸಬಹುದು.


ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಹಾಗೂ ಬಡ ವರ್ಗದ ಜನರಿಗೆ ನಿರಂತರವಾಗಿ ಉದ್ಯೋಗಾವಕಾಶಗಳು ದೊರೆಯುವಂತಹ ವ್ಯವಸ್ಥೆಯನ್ನು ನಿರ್ಮಿಸಬೇಕಾಗಿದೆ.

ನಗರಗಳಲ್ಲಿನ ಜನರಿಗೆ ಲಭ್ಯವಿರುವ ಎಲ್ಲ ಸೌಲಭ್ಯಗಳು ಮತ್ತು ಅವಕಾಶಗಳು ಗ್ರಾಮೀಣ ಜನರಿಗೂ ದೊರೆಯುವಂತಾಗಬೇಕು. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹಳ್ಳಿಗರೂ ಭಾಗವಹಿಸುವಂತಾಗಬೇಕು. ಅಭಿವೃದ್ಧಿಯ ಫಲ ಇವರಿಗೂ ಸಮಾನವಾಗಿ ದೊರೆಯಬೇಕು. ಗ್ರಾಮೀಣಾಭಿವೃದ್ಧಿಯ ಮೂಲಕ ಇದನ್ನು ಸಾಧಿಸಬೇಕಾಗಿದೆ.

2. ವಿಕೇಂದ್ರೀಕರಣ (De-centralisation)

ಪ್ರತಿಯೊಂದು ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೇ ವಹಿಸಿಕೊಡುವುದನ್ನು ಅಧಿಕಾರ ವಿಕೇಂದ್ರೀಕರಣ ಎನ್ನುತ್ತಾರೆ. ವಿಕೇಂದ್ರೀಕರಣದಿಂದ ಸ್ವಾವಲಂಬಿ, ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿಪಡಿಸಬಹುದು. ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು. ವಿಕೇಂದ್ರೀಕರಣವು ಎಲ್ಲ ರೀತಿಯ ಶೋಷಣೆಗಳನ್ನು ತಡೆಯುತ್ತದೆ, ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆ ಹಾಗೂ ಸಹಾನುಭೂತಿ ಮತ್ತು ಸಹಕಾರದಂತಹ ಮಾನವೀಯ ಮೌಲ್ಯಗಳನ್ನು ವೃದ್ಧಿಸುತ್ತದೆ.

ವಿಕೇಂದ್ರೀಕರಣದ ಜಾರಿಗಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಭಾರತ ಸರ್ಕಾರವು 1993 ರ ಸಂವಿಧಾನದ 73 ನೇ ತಿದ್ದುಪಡಿಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತಂದಿತು. ಇದರಿಂದ ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ದೊರೆಯಿತು. ಈ ತಿದ್ದುಪಡಿಯ ಪ್ರಕಾರ ಮೂರು ಹಂತದ (Three tier system) ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಿವೆ. ಅವುಗಳೆಂದರೆ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ. ಪಂಚಾಯತ್ ಸಂಸ್ಥೆಗಳು ಪ್ರಜಾಪ್ರಭುತ್ವದ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.



ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆ

3. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ (Role of Panchayath Raj Institutions)

ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಗಳ ಜನರು ಪಾಲ್ಗೊಳ್ಳುವಂತೆ ಮಾಡುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಹಿರಿದಾದುದು. ಇವು ಗ್ರಾಮಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ, ಶೌಚಾಲಯ, ಶಾಲೆ ಮತ್ತು ಆಸ್ಪತ್ರೆ ಕಟ್ಟಡಗಳು, ಮಾರುಕಟ್ಟೆ ಮುಂತಾದ ಸಮುದಾಯಕ್ಕೆ ಉಪಯೋಗವಾಗುವ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಸಾಧ್ಯವಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ವಯಸ್ಕ ಶಿಕ್ಷಣ, ತಾಂತ್ರಿಕ ಹಾಗೂ ವೃತ್ತಿ ತರಬೇತಿಗೆ ಪ್ರೋತ್ಸಾಹ, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವಲ್ಲಿಯೂ ಪಂಚಾಯತ್ ಸಂಸ್ಥೆಗಳು ಕಾರ್ಯನಿರ್ವಹಿಸಬೇಕಾಗಿದೆ.

ಗ್ರಾಮೀಣ ಉತ್ಪಾದಕ ಚಟುವಟಿಕೆಗಳಾದ ಕೃಷಿ, ಪಶುಪಾಲನೆ, ಕೋಳಿಸಾಕಣೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ ಮುಂತಾದುವುಗಳನ್ನು ಅಭಿವೃದ್ಧಿಪಡಿಸುವ ಮೂಲಕ ಜನರಿಗೆ ದುಡಿಯುವ ಅವಕಾಶಗಳನ್ನು ಹೆಚ್ಚಿಸಬಹುದಾಗಿದೆ. ಕೆರೆ ಕಟ್ಟೆಗಳ ನಿರ್ಮಾಣ, ಅವುಗಳ ಹೂಳು ತೆಗೆಯುವುದು, ಕಿರು ನೀರಾವರಿ ಯೋಜನೆಗಳ ನಿರ್ವಹಣೆ ಮುಂತಾದ ಕಾರ್ಯಗಳ ಮೂಲಕ ಕೃಷಿ ನೀರಾವರಿಯನ್ನು

ವಿಸ್ತರಿಸಬಹುದಾಗಿದೆ. ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬಹುದು. ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಬಹುದು. ಪಂಚಾಯ್ತಿಗಳ ಮೂಲಕ ಇವುಗಳ ಅಭಿವೃದ್ಧಿಗಾಗಿ ಸಮ್ಮೇಳನಗಳು, ವಿಚಾರ ಸಂಕಿರಣಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು.

'ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' (MGNREGP), 'ಸ್ವರ್ಣಜಯಂತಿ ಗ್ರಾಮ ಸ್ವ-ಉದ್ಯೋಗ ಯೋಜನೆ' (SGSY) ಮುಂತಾದ ಉದ್ಯೋಗ ನಿರ್ಮಾಣ ಹಾಗೂ ಬಡತನ ನಿರ್ಮೂಲನ ಯೋಜನೆಗಳನ್ನು ಪಂಚಾಯತ್ ಸಂಸ್ಥೆಗಳ ಮೂಲಕ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬಹುದಾಗಿದೆ. ಇದರಿಂದ ಗ್ರಾಮೀಣ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಲು ಸಾಧ್ಯವಿದೆ. 'ಇಂದಿರಾ ಆವಾಸ್ ಯೋಜನೆ', 'ಅಂಬೇಡ್ಕರ್-ವಾಲ್ಮೀಕಿ ವಸತಿ ಯೋಜನೆ', 'ಆಶ್ರಯ ಯೋಜನೆ' ಮುಂತಾದ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಎಲ್ಲ ವಸತಿ ಹೀನರಿಗೆ ಮನೆಗಳನ್ನು ನಿರ್ಮಿಸಿಕೊಡಬಹುದು. 'ಸುವರ್ಣ ಗ್ರಾಮೋದಯ ಯೋಜನೆ' ಮೂಲಕ ಮೂಲಭೂತ ಸೌಕರ್ಯಗಳನ್ನು ಬಲಪಡಿಸಬಹುದು. ಗ್ರಾಮಗಳಲ್ಲಿನ ಪಡಿತರ ವ್ಯವಸ್ಥೆಯನ್ನು ಬಲಪಡಿಸಿ, ಅರ್ಹ ಬಡಜನರಿಗೆ ಅಗತ್ಯ ಆಹಾರ ಧಾನ್ಯಗಳು ಸಮರ್ಪಕವಾಗಿ ದೊರೆಯುವಂತೆ ಮಾಡಬಹುದು.

ಗ್ರಾಮಗಳಲ್ಲಿನ ವಯೋವೃದ್ಧರು, ಅಂಗವಿಕಲರು, ವಿಧವೆಯರು, ಮಾನಸಿಕ ಅಸ್ವಸ್ಥರು ಮುಂತಾದವರನ್ನು ಗುರುತಿಸಿ, ಅವರಿಗೆ ಸರ್ಕಾರದಿಂದ ಸಿಗಬಹುದಾದ ಸೌಲಭ್ಯಗಳನ್ನು ದೊರಕಿಸಿಕೊಡುವ ಮೂಲಕ ಸಮಾಜ ಕಲ್ಯಾಣ ಸೇವೆಗಳನ್ನು ಒದಗಿಸಬಹುದಾಗಿದೆ. ಮಹಿಳಾ ಸ್ವಸಹಾಯ ಸಂಘಗಳನ್ನು ಸಂಘಟಿಸಿ, ಉತ್ಪಾದಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ, ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬಹುದು.

ನಿಮಗಿದು ತಿಳಿದಿರಲಿ :

PURA

(PURA = Providing Urban Amenities in Rural Areas)

'ಗ್ರಾಮೀಣ ಪ್ರದೇಶಗಳಿಗೆ ನಗರದ ಸೌಲಭ್ಯಗಳನ್ನು ಒದಗಿಸುವುದು' (PURA) ಇದು ಮಾಜಿ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂ ರವರು ಗ್ರಾಮೀಣ ಅಭಿವೃದ್ಧಿಗಾಗಿ ರೂಪಿಸಿದ ಒಂದು ಅತ್ಯುತ್ತಮ ಮಾದರಿ ಯೋಜನೆಯಾಗಿದೆ. PURA ಮಾದರಿಯು ಗ್ರಾಮಗಳ ನಾಲ್ಕು ರೀತಿಯ ಸಂಪರ್ಕಸುವಿಕೆಯನ್ನು ಒಳಗೊಂಡಿದೆ. 1) ಭೌತಿಕ ಸಂಪರ್ಕಸುವಿಕೆಯಲ್ಲಿ 15-25 ಹಳ್ಳಿಗಳ ಒಂದು ಗುಂಪು ಪರಸ್ಪರ ರಸ್ತೆ ಸಂಪರ್ಕ ಪಡೆಯಲಿದೆ. ಈ ಹಳ್ಳಿಗಳಿಗೆ ಹೊಂದಿಕೊಂಡಂತೆ ವರ್ತುಲ ರಸ್ತೆ ಇರಲಿದೆ. ಇದರ ಜೊತೆಗೆ ವಿದ್ಯುತ್ ಸಂಪರ್ಕವನ್ನು ಪಡೆಯಲಿವೆ. 2) ಜ್ಞಾನ ಸಂಪರ್ಕಸುವಿಕೆಯೆಂದರೆ, ವರ್ತುಲ ರಸ್ತೆಯ ಪ್ರತಿ 5-7 ಕಿ.ಮೀ. ಅಂತರದಲ್ಲಿ ಒಂದು ಶಾಲೆ, ಒಂದು ಉನ್ನತ ಶಿಕ್ಷಣ ಕೇಂದ್ರ ಮತ್ತು ಒಂದು ಆಸ್ಪತ್ರೆಯನ್ನು ಸ್ಥಾಪಿಸುವುದು. 3) ಎಲೆಕ್ಟ್ರಾನಿಕ್ ಸಂಪರ್ಕಸುವಿಕೆಯೆಂದರೆ, ಹಳ್ಳಿಗಳಿಗೆ ಆಧುನಿಕ ದೂರಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳನ್ನು ಒದಗಿಸುವುದು. 4) ಆರ್ಥಿಕ ಸಂಪರ್ಕಸುವಿಕೆಯ ಗುರಿ, ಹಳ್ಳಿಗಳ ಗುಂಪಿನ ಒಳಗಡೆ ಉತ್ತಮ ಮಾರುಕಟ್ಟೆ ಸ್ಥಾಪಿಸುವುದು. ಇಲ್ಲಿ ಹಳ್ಳಿಗರ ಎಲ್ಲ ಉತ್ಪನ್ನಗಳನ್ನು ಮಾರಲು ಮತ್ತು ದಿನಬಳಕೆಯ ವಸ್ತುಗಳನ್ನು ಕೊಳ್ಳಲು ಅನುಕೂಲವಾಗಿರಬೇಕು.

ಗ್ರಾಮೀಣ ಜಾತ್ರೆಗಳು, ಹಬ್ಬ ಹರಿದಿನಗಳ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹಿಸಬಹುದು. ಇದರಿಂದ ಗ್ರಾಮೀಣ ಕಲೆಗಳು ಬೆಳವಣಿಗೆ ಹೊಂದಿ, ಗ್ರಾಮೀಣ ಸಂಸ್ಕೃತಿ ಶ್ರೀಮಂತಗೊಳ್ಳುತ್ತದೆ.

ಒಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ, ಅಲ್ಲಿನ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸುವಲ್ಲಿ, ಸ್ವಾವಲಂಬಿ ಮತ್ತು ಸಮೃದ್ಧ ಬದುಕನ್ನು ಕಟ್ಟಿಕೊಡುವಲ್ಲಿ, ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಬಹು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಈ ಮೇಲೆ ಪ್ರಸ್ತಾಪಿಸಿರುವ ಎಲ್ಲಾ ಕಾರ್ಯಗಳನ್ನು ಕೈಗೊಂಡಿದ್ದು ಅಭಿವೃದ್ಧಿಯ ಪಥದಲ್ಲಿ ನಡೆಯುತ್ತಿರುವುದನ್ನು ಕಾಣಬಹುದಾಗಿದೆ.

4. ಅಭಿವೃದ್ಧಿಯಲ್ಲಿ ಮಹಿಳೆ (Women in Development)

ಮಾನವನ ಬದುಕಿನಲ್ಲಿ ಮಹಿಳೆ ತಾಯಿಯಾಗಿ, ಹೆಂಡತಿಯಾಗಿ, ಸೊಸೆಯಾಗಿ, ಮಗಳಾಗಿ ನಾನಾರೀತಿಯ ಕರ್ತವ್ಯಗಳನ್ನು ನಿರ್ವಹಿಸುತ್ತಾಳೆ. ಮಾನವನ ಬದುಕು ರೂಪುಗೊಳ್ಳುವುದೇ ಮಹಿಳೆಯಿಂದ. ಅವಳು ಮನೆಯೊಳಗೆ ದುಡಿಯುವುದಲ್ಲದೆ, ಮನೆಯ ಹೊರಗೆ ಕೃಷಿಕಳಾಗಿ, ಕಾರ್ಮಿಕಳಾಗಿ, ನೌಕರಳಾಗಿ, ಅಧಿಕಾರಿಯಾಗಿ, ಉದ್ಯಮಿಯಾಗಿ, ನೀತಿರೂಪಕಳಾಗಿ, ಪುರುಷರಿಗೆ ಸರಿಸಮನಾಗಿ ದುಡಿಯುತ್ತಿದ್ದಾಳೆ. ಹಾಗಾಗಿ ದೇಶದ ಅಭಿವೃದ್ಧಿಯಲ್ಲಿ, ಅದರಲ್ಲೂ ವಿಶೇಷವಾಗಿ ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ ನಿರ್ಣಾಯಕವಾದುದು.

ಕೃಷಿ, ಪಶುಪಾಲನೆ, ಮೀನುಗಾರಿಕೆ, ರೇಷ್ಮೆಕೃಷಿ, ತೋಟಗಾರಿಕೆ, ಪುಷ್ಪಕೃಷಿ, ಕೋಳಿಸಾಕಣೆಯ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಾಗಿ ದುಡಿಯುತ್ತಿದ್ದಾರೆ. ಕೃಷಿ ಕಾರ್ಮಿಕರಲ್ಲಿಯೂ ಮಹಿಳೆಯರೇ ಹೆಚ್ಚಾಗಿದ್ದಾರೆ. ವಿದ್ಯಾವಂತ ಮಹಿಳೆಯರು ಅರ್ಥವ್ಯವಸ್ಥೆಯ ವಿವಿಧ ಕ್ಷೇತ್ರಗಳಲ್ಲಿ, ನಾನಾರೀತಿಯ ಉದ್ಯೋಗಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಚೇರಿಗಳು, ವ್ಯಾಪಾರಿ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ವೃದ್ಧಾಶ್ರಮಗಳು ಮುಂತಾದ ಕಡೆಗಳಲ್ಲೆಲ್ಲಾ ಮಹಿಳೆಯರ ಸೇವೆ ಅಸಾಧಾರಣವಾದುದು. ಅಲ್ಲದೆ ವಿದ್ಯಾವಂತ ಮಹಿಳೆ ಜನಸಂಖ್ಯಾ ನಿಯಂತ್ರಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾಳೆ.



ಕೃಷಿಯಲ್ಲಿ ಮಹಿಳೆ



ಕೈಗಾರಿಕೆಯಲ್ಲಿ ಮಹಿಳೆ



ಪೈಲೆಟ್ ಆಗಿ ಮಹಿಳೆ

ಮಹಿಳೆಯರು ರಾಜಕೀಯ ಕ್ಷೇತ್ರದಲ್ಲೂ ತಮ್ಮ ಛಾಪು ಮೂಡಿಸುತ್ತಿದ್ದಾರೆ. ಗ್ರಾಮ ಪಂಚಾಯ್ತಿಯಿಂದ ಮೊದಲ್ಗೊಂಡು ರಾಷ್ಟ್ರಪತಿಯವರೆಗೆ ಸರ್ಕಾರದ ವಿವಿಧ ಹಂತಗಳಲ್ಲಿ ರಾಜಕೀಯ ಮುಂದಾಳುಗಳಾಗಿ ಹಲವು ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿರುವುದರಿಂದ, ಸಾಮಾನ್ಯ ಗ್ರಾಮೀಣ ಮಹಿಳೆಯೂ ಅಧಿಕಾರದ ಚುಕ್ಕಾಣಿ ಹಿಡಿದು ಗ್ರಾಮಗಳ ಅಭಿವೃದ್ಧಿಯಲ್ಲಿ ದುಡಿಯಲು ಅವಕಾಶವಾಗಿದೆ. ಸದ್ಯದಲ್ಲಿ ಕರ್ನಾಟಕದ ಪಂಚಾಯತ್ ಸಂಸ್ಥೆಗಳಿಗೆ ಚುನಾಯಿತರಾಗಿರುವ ಸದಸ್ಯರುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳಾ ಸದಸ್ಯರಿರುವುದು ಮಹತ್ವದ ಅಂಶವಾಗಿದೆ.

ಗ್ರಾಮೀಣ ಭಾಗದ ಎಲ್ಲಾ ಹಳ್ಳಿಗಳಲ್ಲಿ **'ಮಹಿಳಾ ಸ್ವಸಹಾಯ ಸಂಘ'** (**ಸ್ತ್ರೀಶಕ್ತಿ ಸಂಘ**)ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಇವು ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸುವಲ್ಲಿ ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿವೆ. ಈ ಸಂಘಗಳ ಸದಸ್ಯರಾಗಿರುವ ಮಹಿಳೆಯರು ಇವುಗಳ ಮೂಲಕ ಸುಲಭವಾಗಿ ಸಾಲ ಪಡೆದು ಉತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದಾರೆ. ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಂಘಗಳು ಉಳಿತಾಯ ಸಂಗ್ರಹದಲ್ಲಿ ಮತ್ತು ಸಾಲ ವಸೂಲಾತಿಯಲ್ಲಿ ಉತ್ತಮ ಸಾಧನೆಮಾಡುತ್ತಿವೆ. ಹಳ್ಳಿಗಳಲ್ಲಿ ಕುಡಿತ, ಜೂಜು ಮುಂತಾದ ದುಶ್ಚಟಗಳು ವ್ಯಾಪಕವಾಗಿ ಹೆಚ್ಚುತ್ತಿವೆ. ಬಾಲ್ಯವಿವಾಹ, ವರದಕ್ಷಿಣೆ, ಜಾತಿಪದ್ಧತಿ, ಮೂಢನಂಬಿಕೆ, ಮಹಿಳೆ ಮತ್ತು ಮಕ್ಕಳ ಶೋಷಣೆ ಮೊದಲಾದ ಸಾಮಾಜಿಕ ಪಿಡುಗುಗಳು ಇನ್ನೂ ಜೀವಂತವಾಗಿವೆ. ಎಚ್ಚೆತ್ತ ಮಹಿಳೆಯರು ಸಂಘಟಿತ ಪ್ರಯತ್ನದ ಮೂಲಕ ಇಂತಹ ಅನಿಷ್ಟಗಳನ್ನು ಹೋಗಲಾಡಿಸಬಹುದಾಗಿದೆ. ಆ ಮೂಲಕ ಸ್ವಚ್ಛ ಹಾಗೂ ಪ್ರಗತಿಪರ ಸಮಾಜವನ್ನು ಕಟ್ಟುವಲ್ಲಿ ನೆರವಾಗಬಹುದಾಗಿದೆ.

ಮಹಿಳೆಯರು ಮನೆಯಲ್ಲಿ ಮಾಡುವ ಕೂಲಿರಹಿತ ದುಡಿಮೆಯನ್ನು ಶ್ರಮ ಎಂದು ಪರಿಗಣಿಸುತ್ತಿಲ್ಲ. ಮನೆಯ ಒಳಗಿನ ಹಾಗೂ ಮನೆಯ ಹೊರಗಿನ ದುಡಿಮೆಯನ್ನು ಗಣನೆಗೆ ತೆಗೆದುಕೊಂಡರೆ ಮಹಿಳೆಯರು ಪುರುಷರಿಗಿಂತ ಹೆಚ್ಚಿನ ಅವಧಿ ದುಡಿಯುತ್ತಾರೆ. ಅದರೂ ಅವರ ದುಡಿಮೆಯ ಮುಕ್ಕಾಲು ಪಾಲು ಕೂಲಿರಹಿತ ದುಡಿಮೆಯಾಗಿದ್ದು, ಅದನ್ನು ರಾಷ್ಟ್ರೀಯ ಆದಾಯದಲ್ಲೂ ಪರಿಗಣಿಸುತ್ತಿಲ್ಲ. ಮಹಿಳಾ ಕಾರ್ಮಿಕರಿಗೆ ಸಮಾನವೇತನ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಭದ್ರತೆಯನ್ನು ಒದಗಿಸಿಕೊಡುವುದು ಅವಶ್ಯಕವಿದೆ. ಒಟ್ಟಿನಲ್ಲಿ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸ್ತ್ರೀ–ಪುರುಷರಿಬ್ಬರೂ ಸಮಾನವಾದ ಜವಾಬ್ದಾರಿಯನ್ನು ಹೊಂದಿದ್ದಾರೆ. ಅವರಿಬ್ಬರೂ ಪ್ರಗತಿ ರಥದ ಎರಡು ಚಕ್ರಗಳಿದ್ದಂತೆ.

> ***ಚಟುವಟಿಕೆ :***
> *ನಿಮ್ಮೂರಿನಲ್ಲಿರುವ ಮಹಿಳಾ ಸ್ವ–ಸಹಾಯ ಸಂಘಕ್ಕೆ ಭೇಟಿ ನೀಡಿ ಅದರ ಕಾರ್ಯಗಳನ್ನು ತಿಳಿಯಿರಿ.*

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ' ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು ____________
2. ಸಂವಿಧಾನದ 73 ನೆಯ ತಿದ್ದುಪಡಿಯ ಪ್ರಕಾರ ಭಾರತದಲ್ಲಿ __________ ಹಂತದ ಪಂಚಾಯಿತ್ತಿಗಳು ಅಸ್ತಿತ್ವಕ್ಕೆ ಬಂದಿವೆ.
3. ಪಂಚಾಯತ್ ಸಂಸ್ಥೆಗಳು _______ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ.
4. ಗ್ರಾಮೀಣ ಬಡಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು _______ ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಗ್ರಾಮೀಣಾಭಿವೃದ್ಧಿಯ ಅರ್ಥ ತಿಳಿಸಿ.
2. ಅಧಿಕಾರ ವಿಕೇಂದ್ರೀಕರಣ ಎಂದರೇನು?
3. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.
4. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ.
5. ಮಹಿಳೆಯರ ಯಾವ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ?

III. ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?
2. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.
3. ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ತಿಳಿಸಿ.
4. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ಬರೆಯಿರಿ.

IV. ಚಟುವಟಿಕೆಗಳು.

1. ನಿಮ್ಮ ಹತ್ತಿರದ ಗ್ರಾಮಪಂಚಾಯ್ತಿಗೆ ಭೇಟಿ ನೀಡಿ. ಅದು ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ನಿರ್ವಹಿಸುತ್ತಿರುವ ಕಾರ್ಯಗಳನ್ನು ಪಟ್ಟಿಮಾಡಿರಿ.
2. ನಿಮ್ಮ ಹತ್ತಿರದಲ್ಲಿರುವ ಮಹಿಳಾ ಸ್ವಸಹಾಯ ಸಂಘಕ್ಕೆ ಭೇಟಿ ನೀಡಿ. ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಅವುಗಳ ಪಾತ್ರವನ್ನು ಕುರಿತು ಮಾಹಿತಿ ಪಡೆದು ತರಗತಿಯಲ್ಲಿ ಚರ್ಚಿಸಿ.

ಅಧ್ಯಾಯ – 4

ಸಾರ್ವಜನಿಕ ಹಣಕಾಸು ಮತ್ತು ಆಯ–ವ್ಯಯ

(Public Finance and Budget)

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಸಾರ್ವಜನಿಕ ಹಣಕಾಸಿನ ಅರ್ಥ ಮತ್ತು ಮಹತ್ವ.*
- *ಆಯ–ವ್ಯಯ • ಸಾರ್ವಜನಿಕ ವೆಚ್ಚಗಳು ಮತ್ತು ಸಾರ್ವಜನಿಕ ಆದಾಯಗಳು*
- *ಕೊರತೆಯ ಹಣಕಾಸು ಮತ್ತು ವಿತ್ತೀಯ ಕೊರತೆ.*

ನಿಮಗೆ ನಿಮ್ಮ ಕುಟುಂಬವು ಯಾವ ಯಾವ ಮೂಲಗಳಿಂದ ಆದಾಯ ಪಡೆಯುತ್ತದೆ? ಮತ್ತು ಎಷ್ಟು ಆದಾಯ ಪಡೆಯುತ್ತದೆಂಬ ಮಾಹಿತಿಯಿದೆಯೆ?. ಸಾಮಾನ್ಯವಾಗಿ ಆದಾಯವನ್ನು ಒಂದು ವರ್ಷದ ಅವಧಿಗೆ ಅಂದಾಜು ಮಾಡಲಾಗುತ್ತದೆ. ಪ್ರತಿಯೊಂದು ಕುಟುಂಬ ಕೃಷಿ, ಕೈಗಾರಿಕೆ ಅಥವಾ ಸೇವಾವಲಯದ ಉದ್ಯೋಗಗಳಲ್ಲಿ ದುಡಿಯುವ ಮೂಲಕ ಆದಾಯ ಪಡೆಯುತ್ತದೆ. ಹೀಗೆ ಪಡೆಯಲಾಗುವ ಆದಾಯವನ್ನು ಅನುಭೋಗ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ವೆಚ್ಚ ಮಾಡಲಾಗುತ್ತದೆ. ವ್ಯಕ್ತಿ ಅಥವಾ ಕುಟುಂಬ ತನ್ನ ಆದಾಯ ಮತ್ತು ವೆಚ್ಚವನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಅಭಿವೃದ್ಧಿಯನ್ನು ಸಾಧಿಸುವುದು ಒಂದು ಕಲೆ. ಆದಾಯಕ್ಕಿಂತ ವೆಚ್ಚ ಅಧಿಕವಾದಾಗ ಸಾಲ ಮಾಡಬೇಕಾಗುತ್ತದೆ. ಹೀಗೆ ವ್ಯಕ್ತಿ ಅಥವಾ ಕುಟುಂಬದ ಆದಾಯ, ವೆಚ್ಚ ಮತ್ತು ಸಾಲದ ನಿರ್ವಹಣೆಯ ಬಗ್ಗೆ ತಿಳಿಸಿಕೊಡುವುದನ್ನು ***'ವೈಯಕ್ತಿಕ ಹಣಕಾಸು'*** ಎನ್ನುತ್ತೇವೆ. ಅದೇ ರೀತಿಯಲ್ಲಿ ಸರ್ಕಾರವು ತನ್ನದೇ ಹಣಕಾಸನ್ನು ನಿರ್ವಹಿಸುತ್ತದೆ. ಅದೇ ಸಾರ್ವಜನಿಕ ಹಣಕಾಸು. ಈ ಅಧ್ಯಾಯದಲ್ಲಿ ಸರ್ಕಾರವು ತನ್ನ ಹಣಕಾಸನ್ನು ಹೇಗೆ ನಿರ್ವಹಿಸುತ್ತದೆಂಬುದನ್ನು ತಿಳಿಯೋಣ.

1. ಸಾರ್ವಜನಿಕ ಹಣಕಾಸಿನ ಅರ್ಥ ಮತ್ತು ಮಹತ್ವ (Meaning and Importance of Public Finance) :

ಸರ್ಕಾರದ ಆದಾಯ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದೇ ಸಾರ್ವಜನಿಕ ಹಣಕಾಸು. ಸರ್ಕಾರದ ಆದಾಯ ಹಾಗೂ ವೆಚ್ಚಗಳ ನಿರ್ವಹಣೆ ಮತ್ತು ಅವುಗಳಲ್ಲಿನ ಹೊಂದಾಣಿಕೆ ಮಾಡುವ ಪ್ರಕ್ರಿಯೆ ಬಗ್ಗೆ ಅಭ್ಯಸಿಸುವುದೇ ಸಾರ್ವಜನಿಕ ಹಣಕಾಸು ಎಂದು ಡಾಲ್ಟನ್ ರವರು ವ್ಯಾಖ್ಯಾನಿಸುತ್ತಾರೆ. ಸಾರ್ವಜನಿಕ ಹಣಕಾಸು ಸರ್ಕಾರದ ಆದಾಯ, ವೆಚ್ಚ ಮತ್ತು ಸಾಲ ನಿರ್ವಹಣೆಯ ಸಮಗ್ರ ಚಿತ್ರಣವನ್ನು ನೀಡುತ್ತದೆ.

ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸಿನ ನಡುವೆ ಕೆಲವು ಮೂಲಭೂತ ಭಿನ್ನತೆಗಳಿವೆ. ಅವುಗಳೆಂದರೆ :

ವೈಯಕ್ತಿಕ ಹಣಕಾಸು	ಸಾರ್ವಜನಿಕ ಹಣಕಾಸು
• ವೈಯಕ್ತಿಕ ಅಥವಾ ಖಾಸಗೀ ಹಣಕಾಸು ಒಬ್ಬ ವ್ಯಕ್ತಿ ಅಥವಾ ಕುಟುಂಬದ ಆದಾಯ–ವೆಚ್ಚಗಳಿಗೆ ಸಂಬಂಧಿಸಿದೆ.	• ಸಾರ್ವಜನಿಕ ಹಣಕಾಸು ಸರ್ಕಾರದ ಆದಾಯ–ವೆಚ್ಚಗಳಿಗೆ ಸಂಬಂಧಿಸಿದೆ.

• ವೈಯಕ್ತಿಕ ಹಣಕಾಸಿನಲ್ಲಿ ವ್ಯಕ್ತಿಗಳು ಮೊದಲು ತಮ್ಮ ಆದಾಯವನ್ನು ಅಂದಾಜುಮಾಡಿ, ನಂತರ ಅದಕ್ಕೆ ಅನುಗುಣವಾಗಿ ವೆಚ್ಚ ಮಾಡುತ್ತಾರೆ.	• ಸಾರ್ವಜನಿಕ ಹಣಕಾಸಿನಲ್ಲಿ ಸರ್ಕಾರವು ಮೊದಲು ತನ್ನ ವೆಚ್ಚವನ್ನು ಅಂದಾಜು ಮಾಡಿ, ಅದಕ್ಕೆ ತಕ್ಕಂತೆ ಆದಾಯವನ್ನು ಹೊಂದಿಸುತ್ತದೆ.
• ವೈಯಕ್ತಿಕ ಹಣಕಾಸಿನ ವ್ಯವಹಾರಗಳನ್ನು ಆದಷ್ಟೂ ಗೌಪ್ಯವಾಗಿಡಲಾಗುತ್ತದೆ.	• ಸಾರ್ವಜನಿಕ ಹಣಕಾಸನ್ನು ಶಾಸನ ಸಭೆಗಳಲ್ಲಿ ಚರ್ಚಿಸಲಾಗುತ್ತದೆ, ಅಲ್ಲದೆ ಮಾಧ್ಯಮಗಳಲ್ಲಿ ಎಲ್ಲರಿಗೂ ತಿಳಿಯುವಂತೆ ಪ್ರಚಾರ ಮಾಡಲಾಗುತ್ತದೆ.
• ವ್ಯಕ್ತಿ ಅಥವಾ ಕುಟುಂಬ ಉಳಿತಾಯ ಮಾಡಿದರೆ ಅದು ಅವರ ಪ್ರಗತಿಗೆ ಪೂರಕವಾಗಿರುತ್ತದೆ.	• ಸರ್ಕಾರವು ಉಳಿತಾಯ ಮಾಡಿದರೆ ಅದು ಅಭಿವೃದ್ಧಿ ಹೊಂದುತ್ತಿರುವ ದೇಶದ ಪ್ರಗತಿಯನ್ನು ಕುಂಠಿತ ಗೊಳಿಸುತ್ತದೆ. ಆದುದರಿಂದ ಸರ್ಕಾರಗಳು ತಮ್ಮ ಆದಾಯಕ್ಕಿಂತ ಹೆಚ್ಚಿನ ಹಣವನ್ನು ಅಭಿವೃದ್ಧಿ ಕೆಲಸಗಳಿಗಾಗಿ ವೆಚ್ಚ ಮಾಡಲು ಪ್ರಯತ್ನಿಸುತ್ತವೆ.

ಸಾರ್ವಜನಿಕ ಹಣಕಾಸಿನ ಮಹತ್ವ : *ಆರ್ಥಿಕ ಅಭಿವೃದ್ಧಿ ಮತ್ತು ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಸರ್ಕಾರವು ತನ್ನ ಆದಾಯ, ವೆಚ್ಚ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಅನುಸರಿಸುವ ನೀತಿಗೆ ಕೋಶೀಯ ನೀತಿ ಅಥವಾ ವಿತ್ತೀಯ ನೀತಿ (Fiscal policy) ಎನ್ನುತ್ತಾರೆ.* ಸರ್ಕಾರವು ಕೋಶೀಯ ನೀತಿಯ ಮೂಲಕ ಸಾರ್ವಜನಿಕ ಹಣಕಾಸನ್ನು ನಿರ್ವಹಿಸುತ್ತದೆ. ಸಾರ್ವಜನಿಕ ಹಣಕಾಸು ದೇಶದ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ವಹಿಸಲ್ಪಡುತ್ತದೆ.

ಸರ್ಕಾರವು ತನ್ನ ಕೋಶೀಯ ನೀತಿಯ ಮೂಲಕ ದೇಶದಲ್ಲಿರುವ ನೈಸರ್ಗಿಕ ಸಂಪತ್ತು, ಶ್ರಮ ಮತ್ತು ಭೌತಿಕ ಬಂಡವಾಳವು ಉತ್ಪಾದಕರ ನಡುವೆ ಸಮರ್ಪಕವಾಗಿ ಹಂಚಿಕೆಯಾಗುವಂತೆ ಹಾಗೂ ಉತ್ಪಾದನೆಯು ಗರಿಷ್ಠ ಮಟ್ಟಕ್ಕೆ ಹೆಚ್ಚುವಂತೆ ತಂತ್ರಗಳನ್ನು ರೂಪಿಸುತ್ತದೆ. ಹಾಗೆಯೇ ದೇಶದಲ್ಲಿ ಉತ್ಪಾದನೆಯಾಗುವ ಆದಾಯವು ಎಲ್ಲ ಪ್ರಜೆಗಳಲ್ಲಿ ಆದಷ್ಟು ಸಮನಾಗಿ ಹಂಚಿಕೆಯಾಗುವಂತೆ ನೋಡಿಕೊಂಡು, ಸಮಾಜದ ಎಲ್ಲ ವರ್ಗದ ಜನರು ಶಾಂತಿ, ನೆಮ್ಮದಿಯಿಂದ ಬದುಕುವಂತೆ ಮಾಡಲು ಪ್ರಯತ್ನಿಸುತ್ತದೆ. ಇದರಿಂದ ಪ್ರಜೆಗಳ ಕಲ್ಯಾಣ ಹೆಚ್ಚಳವಾಗಿ, ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ.

ಸರ್ಕಾರವು ತನ್ನ ಕೋಶೀಯ ನೀತಿಯ ಮೂಲಕ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಿ, ಕೃಷಿ, ಸಣ್ಣ ಕೈಗಾರಿಕೆ, ಮೂಲಸೌಕರ್ಯ ಮೊದಲಾದ ಆದ್ಯತಾ ವಲಯಗಳಲ್ಲಿ ಬಂಡವಾಳ ಹೂಡಿಕೆಯು ಹೆಚ್ಚುವಂತೆ ಮಾಡುತ್ತದೆ. ಆ ಮೂಲಕ ಅರ್ಥವ್ಯವಸ್ಥೆಯ ಎಲ್ಲ ಕ್ಷೇತ್ರಗಳು ಸಮತೋಲನವಾಗಿ ಅಭಿವೃದ್ಧಿಹೊಂದುವಂತೆ ಕ್ರಮಕೈಗೊಳ್ಳುತ್ತದೆ.

ಭಾರತದಂತಹ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಬಡತನ ಮತ್ತು ನಿರುದ್ಯೋಗವನ್ನು ಹೊಗಲಾಡಿಸಲು ಹಾಗೂ ಆರ್ಥಿಕ ಏರಿಳಿತಗಳನ್ನು, ಬೆಲೆಗಳ ಏರಿಳಿತಗಳನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಹಾಗೂ ನಿಯಂತ್ರಣ ಮಾಡಿ, ಆರ್ಥಿಕ ಸ್ಥಿರತೆಯನ್ನು ಸಾಧಿಸಲು ಸಾರ್ವಜನಿಕ ಹಣಕಾಸು ನೀತಿಯನ್ನು ಅಸ್ತ್ರವನ್ನಾಗಿ ಬಳಸಲಾಗುತ್ತಿದೆ.

ಆಯ–ವ್ಯಯ (ಮುಂಗಡ ಪತ್ರ) : ಸರ್ಕಾರವು ಪ್ರತಿ ವರ್ಷ ತನ್ನ ಹಣಕಾಸು ವರ್ಷದ ಆಯ–ವ್ಯಯವನ್ನು ಮಂಡಿಸುತ್ತದೆ. ಭಾರತದಲ್ಲಿ ಹಣಕಾಸು ವರ್ಷವು ಆ ವರ್ಷದ ಏಪ್ರಿಲ್ 1 ರಂದು ಪ್ರಾರಂಭವಾಗಿ ಅದರ ಮುಂದಿನ ವರ್ಷದ ಮಾರ್ಚ್ 31 ರಂದು ಮುಕ್ತಾಯವಾಗುತ್ತದೆ. ಸರ್ಕಾರವು ಆಯ–ವ್ಯಯದ ಮೂಲಕ ತನ್ನ ಕೋಶೀಯ ನೀತಿಯ ಉದ್ದೇಶಗಳನ್ನು ಸಾಧಿಸಲು ಪ್ರಯತ್ನಿಸುತ್ತದೆ. ಹಾಗಾದರೆ ಆಯ–ವ್ಯಯ ಎಂದರೇನು?

ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯನ್ನು ಆಯ–ವ್ಯಯ ಪತ್ರ ಅಥವಾ ಮುಂಗಡ ಪತ್ರ ಎಂದು ಕರೆಯುತ್ತಾರೆ. ಇದು ಸರ್ಕಾರದ ಆದಾಯ ಮತ್ತು ವೆಚ್ಚವನ್ನು ತಿಳಿಸುವ ಒಂದು ದಾಖಲೆಯಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮದೇ ಪ್ರತ್ಯೇಕ ಆಯ–ವ್ಯಯವನ್ನು ಮಂಡಿಸುತ್ತವೆ.

ಭಾರತದಲ್ಲಿ ಕೇಂದ್ರ ಸರ್ಕಾರದ ಆಯ–ವ್ಯಯವನ್ನು ಕೇಂದ್ರ ಹಣಕಾಸು ಸಚಿವರು ಹಣಕಾಸು ಇಲಾಖೆಯ ಸಹಕಾರದೊಂದಿಗೆ ತಯಾರಿಸುತ್ತಾರೆ. ಸಾಮಾನ್ಯವಾಗಿ ಹಣಕಾಸು ಸಚಿವರು ಪ್ರತಿವರ್ಷ ಫೆಬ್ರವರಿ ಅಥವಾ ಮಾರ್ಚ್ ತಿಂಗಳ ಅಧಿವೇಶನದಲ್ಲಿ ಲೋಕಸಭೆಯಲ್ಲಿ ಕೇಂದ್ರ ಆಯ–ವ್ಯಯವನ್ನು ಮಂಡಿಸುತ್ತಾರೆ. ಲೋಕಸಭೆ ಮತ್ತು ರಾಜ್ಯಸಭೆಗಳೆರಡರಲ್ಲೂ ಆಯ–ವ್ಯಯ ಪತ್ರದ ಮೇಲೆ ಸುದೀರ್ಘ ಚರ್ಚೆ ನಡೆದು, ಮಾರ್ಚ್ 31 ರ ಒಳಗಾಗಿ ಎರಡೂ ಸದನಗಳ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ.

ಆಯ–ವ್ಯಯ ಪತ್ರದಲ್ಲಿ ಉಳಿತಾಯ ಆಯ–ವ್ಯಯ, ಕೊರತೆಯ ಆಯ–ವ್ಯಯ ಮತ್ತು ಸಮತೋಲನ ಆಯ–ವ್ಯಯ ಹೀಗೆ ಮೂರು ವಿಧಗಳಿವೆ. ಆಯ–ವ್ಯಯ ಪತ್ರದಲ್ಲಿ ಸರ್ಕಾರದ ಆದಾಯವು ಸರ್ಕಾರದ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ, ಅದನ್ನು ಉಳಿತಾಯ ಆಯ–ವ್ಯಯ ಎನ್ನುತ್ತಾರೆ. ಆಯ–ವ್ಯಯ ಪತ್ರದಲ್ಲಿ ಸರ್ಕಾರದ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದನ್ನು ಕೊರತೆಯ ಆಯ–ವ್ಯಯ ಎನ್ನುತ್ತಾರೆ. ಸರ್ಕಾರದ ಆದಾಯ ಮತ್ತು ವೆಚ್ಚವು ಸಮನಾಗಿದ್ದರೆ, ಅದನ್ನು ಸಮತೋಲನ ಆಯ–ವ್ಯಯ ಎನ್ನುತ್ತಾರೆ. ಅಭಿವೃದ್ಧಿಹೊಂದುತ್ತಿರುವ ಭಾರತದಂತಹ ರಾಷ್ಟ್ರಗಳಲ್ಲಿ ಸರ್ಕಾರಗಳು ಕೊರತೆಯ ಆಯ–ವ್ಯಯವನ್ನು ಮಂಡಿಸುವ ಮೂಲಕ ತನ್ನ ವೆಚ್ಚವನ್ನು ಹೆಚ್ಚುಮಾಡಿ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸುತ್ತಿವೆ.

2. ಸಾರ್ವಜನಿಕ ವೆಚ್ಚಗಳು (Public Expenditures)

ಸರ್ಕಾರವು ರಾಷ್ಟ್ರ ರಕ್ಷಣೆ, ಆಡಳಿತ ನಿರ್ವಹಣೆ, ಆರ್ಥಿಕ ಅಭಿವೃದ್ಧಿ ಹಾಗೂ ಜನರ ಯೋಗಕ್ಷೇಮದ ದೃಷ್ಟಿಯಿಂದ ವಿವಿಧ ಚಟುವಟಿಕೆಗಳಿಗಾಗಿ ಹಣವನ್ನು ವೆಚ್ಚ ಮಾಡುತ್ತದೆ. ಇದನ್ನು ಸಾರ್ವಜನಿಕ ವೆಚ್ಚ ಎನ್ನುತ್ತಾರೆ. ಅಂದರೆ ಸರ್ಕಾರವು ತನ್ನ ಪ್ರಜೆಗಳ ಹಿತದೃಷ್ಟಿಯಿಂದ ಮಾಡುವ ವೆಚ್ಚವೇ ಸಾರ್ವಜನಿಕ ವೆಚ್ಚ. 20 ನೆಯ ಶತಮಾನದಲ್ಲಿ ಕಲ್ಯಾಣ ರಾಜ್ಯಗಳ ಉದಯದೊಂದಿಗೆ ಆಧುನಿಕ ಸರ್ಕಾರಗಳ ಕಾರ್ಯಕ್ಷೇತ್ರ ಮತ್ತು ಪಾತ್ರ ವಿಸ್ತರಣೆಯಾಗಿದೆ. ಹಾಗಾಗಿ ಸಾರ್ವಜನಿಕ ವೆಚ್ಚವೂ ಹೆಚ್ಚಾಗಿದೆ.

ಭಾರತದಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳು ತಮ್ಮದೇ ಆದ ವೆಚ್ಚಗಳನ್ನು ಹೊಂದಿವೆ. ಕೇಂದ್ರ ಸರ್ಕಾರದ ವೆಚ್ಚದ ಬಾಬ್ತುಗಳನ್ನು ಮುಖ್ಯವಾಗಿ ಎರಡು ಪ್ರಕಾರಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಕಂದಾಯ ವೆಚ್ಚ ಮತ್ತು ಬಂಡವಾಳ ವೆಚ್ಚ.


I. ಕಂದಾಯ ವೆಚ್ಚ : ಕೇಂದ್ರ ಸರ್ಕಾರವು ತನ್ನ ಕಂದಾಯ ಆದಾಯದಿಂದ ಮಾಡುವ ವೆಚ್ಚವನ್ನು ಕಂದಾಯ ವೆಚ್ಚ ಎನ್ನುತ್ತಾರೆ. ಈ ವೆಚ್ಚವನ್ನು ವಿವಿಧ ರೀತಿಯ ಆರ್ಥಿಕ ಮತ್ತು ಸಾಮಾಜಿಕ ಸೇವೆಗಳು, ರಾಷ್ಟ್ರರಕ್ಷಣೆ, ಆಡಳಿತ, ಬಡ್ಡಿ ಪಾವತಿ, ರಾಜ್ಯಗಳಿಗೆ ಅನುದಾನ ಮುಂತಾದ ಉದ್ದೇಶಗಳಿಗಾಗಿ ವೆಚ್ಚ ಮಾಡಲಾಗುತ್ತಿದೆ. ಕಂದಾಯ ವೆಚ್ಚವನ್ನು ಯೋಜನಾ ವೆಚ್ಚ ಮತ್ತು ಯೋಜನೇತರ ವೆಚ್ಚಗಳೆಂದು ಎರಡು ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ.

ಎ) **ಯೋಜನಾ ವೆಚ್ಚ :** ಸರ್ಕಾರವು ವಿವಿಧ ಆರ್ಥಿಕ ಮತ್ತು ಸಾಮಾಜಿಕ ಸೇವೆಗಳು, ರಾಷ್ಟ್ರ ನಿರ್ಮಾಣ ಕಾರ್ಯಗಳು ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ಮಾಡುವ ವೆಚ್ಚಗಳನ್ನು ಯೋಜನಾ ವೆಚ್ಚ ಎನ್ನುತ್ತಾರೆ. ಕೇಂದ್ರ ಸರ್ಕಾರವು ಯೋಜನೆಗಳ ಅಡಿಯಲ್ಲಿ ಕೈಗೊಳ್ಳುವ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಮಾಡುವ ವೆಚ್ಚ ಇದಾಗಿದೆ. ಇದಲ್ಲದೆ ಕೇಂದ್ರ ಸರ್ಕಾರವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಹಾಯವನ್ನು ನೀಡುತ್ತದೆ.

ಕೇಂದ್ರ ಯೋಜನಾ ವೆಚ್ಚದ ಅಡಿಯಲ್ಲಿ ಕೇಂದ್ರ ಸರ್ಕಾರವು ಮೂರು ರೀತಿಯ ಸೇವೆಗಳ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ಹಣವನ್ನು ವೆಚ್ಚ ಮಾಡುತ್ತದೆ. ಅವುಗಳೆಂದರೆ,

1. **ಆರ್ಥಿಕ ಸೇವೆಗಳು :** ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳು, ಕೈಗಾರಿಕೆ, ಸಾರಿಗೆ, ಸಂಪರ್ಕ, ಇಂಧನ, ವಿಜ್ಞಾನ ಮತ್ತು ತಂತ್ರಜ್ಞಾನ, ಗ್ರಾಮೀಣಾಭಿವೃದ್ಧಿ ಇತ್ಯಾದಿ.
2. **ಸಾಮಾಜಿಕ ಸೇವೆಗಳು :** ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಕುಟುಂಬ ಕಲ್ಯಾಣ, ಕುಡಿಯುವ ನೀರು ಪೂರೈಕೆ, ಗೃಹ ನಿರ್ಮಾಣ, ಸಾಮಾಜಿಕ ಕಲ್ಯಾಣ ಇತ್ಯಾದಿ.
3. **ಸಾಮಾನ್ಯ ಸೇವೆಗಳು :** ದೇಶದಲ್ಲಿ ಶಾಂತಿ– ಸುವ್ಯವಸ್ಥೆ ಕಾಪಾಡಲು ಮಾಡುವ ವೆಚ್ಚಗಳು.

ಸಾರ್ವಜನಿಕ ವೆಚ್ಚಗಳು



ಬಿ) **ಯೋಜನೇತರ ವೆಚ್ಚ :** ಅಭಿವೃದ್ಧಿ ಕಾರ್ಯಗಳನ್ನು ಹೊರತುಪಡಿಸಿ, ಆಡಳಿತ ನಿರ್ವಹಣೆ, ರಾಷ್ಟ್ರರಕ್ಷಣೆ, ಬಡ್ಡಿ ಪಾವತಿ ಮುಂತಾದ ಬಾಬ್ತುಗಳಿಗೆ ಮಾಡಲಾಗುವ ವೆಚ್ಚವನ್ನು ಯೋಜನೇತರ ವೆಚ್ಚ ಎನ್ನುತ್ತೇವೆ. ಪ್ರಮುಖ ಯೋಜನೇತರ ವೆಚ್ಚಗಳೆಂದರೆ, ನಾಗರಿಕ ಆಡಳಿತ ವೆಚ್ಚ, ರಕ್ಷಣಾ ವೆಚ್ಚ, ಬಡ್ಡಿ ಪಾವತಿ ರಾಜ್ಯಗಳಿಗೆ ಯೋಜನೇತರ ಸಹಾಯ, ಸಹಾಯಧನದ ಮೇಲಿನ ವೆಚ್ಚ ಇತ್ಯಾದಿ.

II. ಬಂಡವಾಳ ವೆಚ್ಚ : ಕೃಷಿ, ಕೈಗಾರಿಕೆ, ಸಾರಿಗೆ, ವಿದ್ಯುತ್, ನೀರಾವರಿ ಯೋಜನೆಗಳು ಮುಂತಾದ ಕ್ಷೇತ್ರಗಳ ಅಭಿವೃದ್ಧಿಗಾಗಿ ಮತ್ತು ಹೊಸ ಆಸ್ತಿಗಳ ನಿರ್ಮಾಣಕ್ಕಾಗಿ ಸರ್ಕಾರವು ಹೊಸದಾಗಿ ಬಂಡವಾಳ ಹೂಡಲು ಮುಂದಾಗುತ್ತದೆ. ಇಂತಹ ವೆಚ್ಚಕ್ಕೆ ಬಂಡವಾಳ ವೆಚ್ಚ ಎನ್ನುತ್ತಾರೆ. ಸರ್ಕಾರವು ಈ ವೆಚ್ಚವನ್ನು ತನ್ನ ಬಂಡವಾಳ ಆದಾಯದಿಂದ ಭರಿಸುತ್ತದೆ.

ಬಂಡವಾಳ ವೆಚ್ಚದಲ್ಲಿಯೂ ಯೋಜನಾ ವೆಚ್ಚ ಮತ್ತು ಯೋಜನೇತರ ವೆಚ್ಚಗಳೆಂಬ ಎರಡು ವಿಭಾಗಗಳಿವೆ. ಶಾಶ್ವತ ಅಭಿವೃದ್ಧಿಯ ದೃಷ್ಟಿಯಿಂದ ಕೃಷಿ, ಕೈಗಾರಿಕೆ, ಸಾರಿಗೆ, ನೀರಾವರಿ ಯೋಜನೆ ಮುಂತಾದುವುಗಳ ಮೇಲೆ ಮಾಡಲಾಗುವ ವೆಚ್ಚವನ್ನು ಬಂಡವಾಳದ ಯೋಜನಾ ವೆಚ್ಚವೆಂದು ಕರೆಯಲಾಗುತ್ತಿದೆ. ಸರ್ಕಾರದ ಈ ಅಭಿವೃದ್ಧಿ ಯೋಜನೆಗಳಿಂದಾಗಿ ಸಂತ್ರಸ್ತರಾಗುವ ಜನರಿಗೆ ಶಾಶ್ವತ ಪರಿಹಾರಗಳನ್ನು ಕಲ್ಪಿಸಲು ಮಾಡುವ ವೆಚ್ಚವನ್ನು ಯೋಜನೇತರ ಬಂಡವಾಳ ವೆಚ್ಚ ಎಂದು ಕರೆಯಲಾಗುತ್ತದೆ.

ಹೀಗೆ ಸರ್ಕಾರವು ತನ್ನ ಆಡಳಿತ ನಿರ್ವಹಣೆ, ದೇಶದ ಆರ್ಥಿಕ ಅಭಿವೃದ್ಧಿ ಹಾಗೂ ಜನರ ಕಲ್ಯಾಣದ ಉದ್ದೇಶದಿಂದ ಹಣವನ್ನು ವೆಚ್ಚ ಮಾಡುತ್ತದೆ. ಈ ವೆಚ್ಚಗಳಿಗೆ ಅನುಗುಣವಾಗಿ ತನ್ನ ಆದಾಯವನ್ನು ಸಂಗ್ರಹಿಸಲು ಪ್ರಯತ್ನಿಸುತ್ತದೆ.

2013–14 ರ ಕೇಂದ್ರ ಸರ್ಕಾರದ ಅಂದಾಜು ವೆಚ್ಚದ ಶೇಕಡಾವಾರು ಪ್ರಮಾಣ

1. ರಾಜ್ಯ & ಕೇಂದ್ರಾಡಳಿತ ಪ್ರದೇಶಗಳಿಗೆ ಯೋಜನೇತರ ನೆರವು– 4 %

2. ರಾಜ್ಯ &ಕೇಂದ್ರಾಡಳಿತ ಪ್ರದೇಶಗಳಿಗೆ ಯೋಜನಾ ನೆರವು– 7 %

3. ರಕ್ಷಣಾ ವೆಚ್ಚ – 10 %


4. ಯೋಜನೇತರ ವೆಚ್ಚ – 11 %

5. ಸಹಾಯ ಧನ – 12 %

6. ರಾಜ್ಯಗಳಿಗೆ ತೆರಿಗೆ ಪಾಲು – 17 %

7. ಬಡ್ಡಿ ಪಾವತಿ – 18 %

8. ಕೇಂದ್ರ ಯೋಜನಾ ವೆಚ್ಚ – 21 %




3. ಸಾರ್ವಜನಿಕ ಆದಾಯ (Public Revenue)

ಸರ್ಕಾರವು ತನ್ನ ವೆಚ್ಚಗಳನ್ನು ಭರಿಸಲು ವಿವಿಧ ಮೂಲಗಳಿಂದ ಹಣವನ್ನು ಸಂಗ್ರಹಿಸುತ್ತದೆ. ಇದನ್ನು ಸಾರ್ವಜನಿಕ ಆದಾಯ ಎನ್ನುತ್ತಾರೆ. ಸರ್ಕಾರಗಳು ಪ್ರಜೆಗಳ ಕಲ್ಯಾಣಕ್ಕಾಗಿ ನಾನಾ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡಲು ಮತ್ತು ಶೀಘ್ರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಮುಂದಾಗಿವೆ. ಇದರಿಂದ ಸರ್ಕಾರಗಳ ಕಾರ್ಯಕ್ಷೇತ್ರ ವಿಸ್ತರಿಸಿದೆ. ಹಾಗಾಗಿ ಸಾರ್ವಜನಿಕ ವೆಚ್ಚ ಹೆಚ್ಚುತ್ತಿದ್ದು, ಅದಕ್ಕೆ ತಕ್ಕಂತೆ ಸಾರ್ವಜನಿಕ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಭಾರತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮದೇ ಆದ ಆದಾಯದ ಮೂಲಗಳನ್ನು ಹೊಂದಿವೆ. ಸದ್ಯದಲ್ಲಿ ಕೇಂದ್ರ ಸರ್ಕಾರದ ಆದಾಯದ ಮೂಲಗಳ ಬಗ್ಗೆ ತಿಳಿಯೋಣ.

ಕೇಂದ್ರ ಸರ್ಕಾರದ ಆದಾಯದ ಮೂಲಗಳನ್ನು ಬಹುಮುಖ್ಯವಾಗಿ ಕಂದಾಯ ಆದಾಯ ಮತ್ತು ಬಂಡವಾಳ ಆದಾಯ ಎಂದು ವಿಂಗಡಿಸಲಾಗಿದೆ.

ಕಂದಾಯ ಆದಾಯ (Revenue Receipts) : ಸರ್ಕಾರವು ವಿವಿಧ ತೆರಿಗೆಗಳು ಮತ್ತು ತೆರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ಆದಾಯವನ್ನು ಕಂದಾಯ ಆದಾಯ ಎಂದು ಕರೆಯುತ್ತಾರೆ. ಇದು ಸರ್ಕಾರದ ವಾಸ್ತವ ಆದಾಯವಾಗಿರುತ್ತದೆ. ಕಂದಾಯ ಆದಾಯವನ್ನು ಮುಖ್ಯವಾಗಿ ಎರಡು ವಿಧಗಳನ್ನಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ : ತೆರಿಗೆ ಆದಾಯ ಮತ್ತು ತೆರಿಗೆಯೇತರ ಆದಾಯ.



1) **ತೆರಿಗೆ ಆದಾಯ (Tax Revenue) :** ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಕೆಯನ್ನು ತೆರಿಗೆ ಎನ್ನುತ್ತೇವೆ. ಕೇಂದ್ರ ಸರ್ಕಾರವು ಪ್ರಜೆಗಳ ಮೇಲೆ ನಾನಾ ರೀತಿಯ ತೆರಿಗೆಗಳನ್ನು ವಿಧಿಸಿ ಆದಾಯವನ್ನು ಸಂಗ್ರಹಿಸುತ್ತಿದೆ. ತೆರಿಗೆಗಳು ಸರ್ಕಾರದ ಬಹುಮುಖ್ಯ ಆದಾಯದ ಮೂಲಗಳಾಗಿವೆ.

ಸರ್ಕಾರವು ತೆರಿಗೆಗಳನ್ನು ವಿಧಿಸುವಾಗ ಹೆಚ್ಚು ಆದಾಯವುಳ್ಳವರ ಮೇಲೆ ಹೆಚ್ಚಿನ ತೆರಿಗೆಯನ್ನೂ, ಕಡಿಮೆ ಆದಾಯವುಳ್ಳವರ ಮೇಲೆ ಕಡಿಮೆ ತೆರಿಗೆಯನ್ನು ವಿಧಿಸುತ್ತಿದೆ. ಬಡವರಿಗೆ ಆದಾಯ ತೆರಿಗೆಯಲ್ಲಿ ವಿನಾಯಿತಿ ನೀಡಿದೆ. ಅದೇ ರೀತಿಯಲ್ಲಿ ಶ್ರೀಮಂತರು ಬಳಸುವ ಸರಕು-ಸೇವೆಗಳ ಮೇಲೆ ಹೆಚ್ಚಿನ ತೆರಿಗೆಯನ್ನೂ ಮತ್ತು ಸಾಮಾನ್ಯ ಜನರು ಬಳಸುವ ಸರಕು-ಸೇವೆಗಳ ಮೇಲೆ ಕಡಿಮೆ ತೆರಿಗೆಯನ್ನು ವಿಧಿಸುತ್ತಿದೆ. ಸರ್ಕಾರ ತೆರಿಗೆ ವಿಧಿಸುವಲ್ಲಿ ಅನುಸರಿಸುವ ಈ ನೀತಿಯನ್ನು **ಪ್ರಗತಿಪರ ತೆರಿಗೆ ನೀತಿ** ಎನ್ನುತ್ತಾರೆ.

ಕೇಂದ್ರ ಸರ್ಕಾರ ವಿಧಿಸುವ ತೆರಿಗೆಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ. ಅವುಗಳೆಂದರೆ, ಅ) ಪ್ರತ್ಯಕ್ಷ ತೆರಿಗೆಗಳು ಬ) ಪರೋಕ್ಷ ತೆರಿಗೆಗಳು.

ಅ) *ಪ್ರತ್ಯಕ್ಷ ತೆರಿಗೆಗಳು* (Direct Taxes) : ಸರ್ಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ಹೊರೆಯನ್ನು ಹೊರುವಂತಿದ್ದರೆ, ಅಂತಹ ತೆರಿಗೆಯನ್ನು ಪ್ರತ್ಯಕ್ಷ ತೆರಿಗೆ ಎನ್ನುತ್ತಾರೆ. ಈ ತೆರಿಗೆಗಳ ಹೊರೆಯನ್ನು ಇತರರಿಗೆ ವರ್ಗಾಯಿಸಲು ಬರುವುದಿಲ್ಲ. ಸಾಮಾನ್ಯವಾಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳು ಗಳಿಸುವ ವರಮಾನ ಮತ್ತು ಸಂಪತ್ತಿನ ಮೇಲೆ ವಿಧಿಸುವ ತೆರಿಗೆಗಳು ಪ್ರತ್ಯಕ್ಷ ತೆರಿಗೆಗಳಾಗಿವೆ. ಪ್ರಮುಖ ಪ್ರತ್ಯಕ್ಷ ತೆರಿಗೆಗಳೆಂದರೆ, ವರಮಾನ ತೆರಿಗೆ, ಕಂಪನಿ ತೆರಿಗೆ, ಸಂಪತ್ತಿನ ತೆರಿಗೆ, ಸ್ಟಾಂಪು ತೆರಿಗೆ ಇತ್ಯಾದಿ.

ಬ) *ಪರೋಕ್ಷ ತೆರಿಗೆಗಳು* (Indirect Taxes) : ಸರ್ಕಾರವು ವಿಧಿಸುವ ತೆರಿಗೆಯ ಹೊರೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಿದ್ದರೆ, ಅಂತಹ ತೆರಿಗೆಯನ್ನು ಪರೋಕ್ಷ ತೆರಿಗೆ ಎನ್ನುತ್ತಾರೆ. ಸಾಮಾನ್ಯವಾಗಿ ಪರೋಕ್ಷ ತೆರಿಗೆಯನ್ನು ಸರಕುಗಳು ಮತ್ತು ಸೇವೆಗಳ ಮೇಲೆ ವಿಧಿಸಲಾಗುತ್ತದೆ. ಉದಾ:- ಸರ್ಕಾರವು ಸರಕು-ಸೇವೆಗಳ ಉತ್ಪಾದನೆಯ ಸಂದರ್ಭದಲ್ಲಿ ಉತ್ಪಾದಕನ ಮೇಲೆ ತೆರಿಗೆಯನ್ನು ವಿಧಿಸುತ್ತದೆ.

ಉತ್ಪಾದಕನು ಈ ತೆರಿಗೆಯ ಹೊರೆಯನ್ನು ಮಾರಾಟಗಾರನ ಮೇಲೆ ವರ್ಗಾಯಿಸುತ್ತಾನೆ. ಮಾರಾಟಗಾರನು ಅಂತಿಮವಾಗಿ ತೆರಿಗೆ ಹೊರೆಯನ್ನು ಬಳಕೆದಾರನ ಮೇಲೆ ವರ್ಗಾಯಿಸುತ್ತಾನೆ. ಅಂದರೆ ಸರ್ಕಾರ ಉತ್ಪಾದಕನ ಮೇಲೆ ತೆರಿಗೆ ವಿಧಿಸಿದರೆ, ಅದರ ಹೊರೆ ಹೊರುವವನು ಬಳಕೆದಾರನಾಗಿರುತ್ತಾನೆ. ಕೇಂದ್ರ ಸರ್ಕಾರ ವಿಧಿಸುವ ಪ್ರಮುಖ ಪರೋಕ್ಷ ತೆರಿಗೆಗಳೆಂದರೆ, ಕೇಂದ್ರ ಅಬಕಾರಿ ತೆರಿಗೆ, ಆಮದು–ರಫ್ತು ಸುಂಕಗಳು, ಸೇವಾ ತೆರಿಗೆ, ವಿದೇಶೀ ಪ್ರವಾಸಿಗರ ಮೇಲಿನ ತೆರಿಗೆ ಇತ್ಯಾದಿ.

ಹೀಗೆ ಕೇಂದ್ರ ಸರ್ಕಾರವು ಹಲವು ರೀತಿಯ ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳನ್ನು ವಿಧಿಸಿ ತನ್ನ ಆದಾಯವನ್ನು ಸಂಗ್ರಹಿಸುತ್ತದೆ. ತೆರಿಗೆಗಳ ಮೂಲಕ ಸರ್ಕಾರವು ಹೆಚ್ಚಿನ ಆದಾಯವನ್ನು ಸಂಗ್ರಹಿಸಲು ಬಯಸುತ್ತದೆ.

2) ತೆರಿಗೆಯೇತರ ಆದಾಯ (Non-Tax Revenue) : ಸರ್ಕಾರವು ತೆರಿಗೆಗಳನ್ನು ಹೊರತುಪಡಿಸಿ ಇತರೆ ಮೂಲಗಳಿಂದಲೂ ಆದಾಯವನ್ನು ಸಂಗ್ರಹಿಸುತ್ತದೆ. ಇದಕ್ಕೆ ತೆರಿಗೆಯೇತರ ಆದಾಯ ಎನ್ನುತ್ತಾರೆ. ಕೇಂದ್ರ ಸರ್ಕಾರ ಸಂಗ್ರಹಿಸುವ ಪ್ರಮುಖ ತೆರಿಗೆಯೇತರ ಆದಾಯಗಳೆಂದರೆ,

1. ಭಾರತೀಯ ರಿಸರ್ವ್ ಬ್ಯಾಂಕು ಗಳಿಸುವ ನಿವ್ವಳ ಲಾಭ.
2. ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭ.
3. ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ಆದಾಯ.
4. ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ.
5. ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ
6. ವಿವಿಧ ರೀತಿಯ ಶುಲ್ಕಗಳು, ದಂಡಗಳು ಇತ್ಯಾದಿ.

ಬಂಡವಾಳ ಆದಾಯ (Capital Receipts) :

ಸರ್ಕಾರವು ಅರ್ಥವ್ಯವಸ್ಥೆಯ ವಿವಿಧ ಕ್ಷೇತ್ರಗಳ ಅಭಿವೃದ್ಧಿ ಹಾಗೂ ಹೊಸ ಆಸ್ತಿಗಳನ್ನು ನಿರ್ಮಾಣ ಮಾಡುವ ದೃಷ್ಟಿಯಿಂದ, ಹೊಸದಾಗಿ ಬಂಡವಾಳ ಹೂಡುವ ಸಲುವಾಗಿ ಸಂಗ್ರಹಿಸುವ ಆದಾಯವನ್ನು ಬಂಡವಾಳ ಆದಾಯ ಎನ್ನುತ್ತಾರೆ. ಕೃಷಿ, ಕೈಗಾರಿಕೆ, ನೀರಾವರಿ, ವಿದ್ಯುತ್, ಮೂಲಸೌಲಭ್ಯಗಳು ಮುಂತಾದುವುಗಳ ಅಭಿವೃದ್ಧಿಗಾಗಿ ಬಳಸಲು ಈ ಆದಾಯವನ್ನು ಸಂಗ್ರಹಿಸಲಾಗುತ್ತದೆ.

ಸರ್ಕಾರವು ಬಂಡವಾಳ ಆದಾಯವನ್ನು ಬಹುಮುಖ್ಯವಾಗಿ ಆಂತರಿಕ ಹಾಗೂ ವಿದೇಶಿ ಮೂಲಗಳಿಂದ ಸಾಲ ಎತ್ತುವ ಮೂಲಕ ಸಂಗ್ರಹಿಸುತ್ತದೆ. ದೇಶದಲ್ಲಿರುವ ಪ್ರಜೆಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಉದ್ಯಮ ಸಂಸ್ಥೆಗಳು ಮುಂತಾದುವುಗಳಿಂದ ಸಂಗ್ರಹಿಸುವ ಸಾಲವನ್ನು ಆಂತರಿಕ ಸಾಲ ಎನ್ನುತ್ತಾರೆ. ವಿದೇಶಿ ಸರ್ಕಾರಗಳು, ವಿದೇಶಿ ಹಣಕಾಸು ಸಂಸ್ಥೆಗಳು ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲವನ್ನು ವಿದೇಶಿ ಸಾಲ ಎನ್ನುತ್ತಾರೆ.


ಸರ್ಕಾರವು ಸಾಲವಲ್ಲದೆ ಇತರೆ ಮೂಲಗಳಿಂದಲೂ ಬಂಡವಾಳ ಆದಾಯವನ್ನು ಸಂಗ್ರಹಿಸುತ್ತದೆ. ಅದು ಸಾರ್ವಜನಿಕ ಉದ್ಯಮಗಳಲ್ಲಿ ಹೂಡಿರುವ ತನ್ನ ಬಂಡವಾಳವನ್ನು ಹಿಂದಕ್ಕೆ ಪಡೆಯುತ್ತದೆ. ಇದಕ್ಕೆ ಹೂಡಿಕೆ ಹಿಂತೆಗೆತ ಎನ್ನುತ್ತಾರೆ. ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದಿಂದ ಪಡೆದಿರುವ

ಸಾಲ ಮತ್ತು ಹಣಕಾಸಿನ ನೆರವನ್ನು ಕಾಲಕಾಲಕ್ಕೆ ಮರುಪಾವತಿ ಮಾಡುತ್ತವೆ. ಹೀಗೆ ಹೂಡಿಕೆ ಹಿಂತೆಗೆತ ಮತ್ತು ಸಾಲ ಮರುಪಾವತಿಯಿಂದ ಸಂಗ್ರಹವಾಗುವ ಹಣವನ್ನು ಸಾಲೇತರ ಬಂಡವಾಳ ಆದಾಯ ಎನ್ನುತ್ತಾರೆ.

ಹೀಗೆ ಕೇಂದ್ರ ಸರ್ಕಾರವು ವಿವಿಧ ಮೂಲಗಳಿಂದ ಆದಾಯವನ್ನು ಸಂಗ್ರಹಿಸುತ್ತದೆ. ಆ ಮೂಲಕ ಸರ್ಕಾರದ ಆಡಳಿತ ನಿರ್ವಹಣೆ ಹಾಗೂ ಅರ್ಥವ್ಯವಸ್ಥೆಯ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಅಗತ್ಯವಿರುವ ಹಣ ಒದಗಿಸಲು ಪ್ರಯತ್ನಿಸುತ್ತದೆ.

2013–14 ರ ಕೇಂದ್ರ ಸರ್ಕಾರದ ಅಂದಾಜು ಆದಾಯದ ಶೇಕಡಾವಾರು ಪ್ರಮಾಣ

1. ಸಾಲೇತರ ಬಂಡವಾಳ ಆದಾಯ – 3%
2. ಸೇವಾತೆರಿಗೆ & ಇತರೆ ತೆರಿಗೆಗಳು – 9%
3. ತೆರಿಗೆಯೇತರ ಆದಾಯ – 9%
4. ಆಮದು–ರಫ್ತು ತೆರಿಗೆ – 9%
5. ಕೇಂದ್ರ ಅಬಕಾರಿ ತೆರಿಗೆ – 10%
6. ವರಮಾನ ತೆರಿಗೆ – 12%
7. ಕಂಪನಿ ತೆರಿಗೆ – 21%
8. ಸಾಲ ಮತ್ತಿತರ ಹೊಣೆಗಾರಿಕೆಗಳು – 27%



4. ಕೊರತೆಯ ಹಣಕಾಸು (Deficit Financing) :

ಸರ್ಕಾರವು ಮೊದಲು ತನ್ನ ವೆಚ್ಚವನ್ನು ಅಂದಾಜು ಮಾಡಿ, ಅದಕ್ಕೆ ತಕ್ಕಂತೆ ಆದಾಯವನ್ನು ಹೊಂದಿಸುತ್ತದೆ. ಹೀಗೆ ಮಾಡುವಾಗ ಸಾಮಾನ್ಯವಾಗಿ ತನ್ನ ಆದಾಯಕ್ಕಿಂತ ಹೆಚ್ಚಿನ ವೆಚ್ಚವನ್ನು ಮಾಡುತ್ತದೆ. ಇದು ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಉತ್ತಮವಾದುದು. ಸರ್ಕಾರವು ತನ್ನ ಆದಾಯ ಮತ್ತು ವೆಚ್ಚದ ನಡುವಿನ ಅಂತರವನ್ನು ಭಾರತೀಯ ರಿಜ಼ರ್ವ್ ಬ್ಯಾಂಕಿನಲ್ಲಿ ತಾನು ಹೊಂದಿರುವ ನಗದು ಸಂಗ್ರಹವನ್ನು ಹಿಂಪಡೆಯುವುದು, ಆಂತರಿಕ ಮತ್ತು ವಿದೇಶಿ ಮೂಲಗಳಿಂದ ಸಾಲ ಸಂಗ್ರಹಿಸುವುದು, ಭಾರತೀಯ ರಿಜ಼ರ್ವ್ ಬ್ಯಾಂಕಿನಿಂದ ಸಾಲ ಪಡೆಯುವುದು ಮುಂತಾದ ಕ್ರಮಗಳ ಮೂಲಕ ತುಂಬಿಕೊಳ್ಳುತ್ತದೆ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಸರ್ಕಾರದ ಆದಾಯಕ್ಕಿಂತ ಅದರ ವೆಚ್ಚಗಳು ಬಹಳವಾಗಿ ಹೆಚ್ಚುತ್ತಿವೆ. ಇದರಿಂದ ಕೊರತೆಯ ಹಣಕಾಸಿನ ಸನ್ನಿವೇಶಗಳು ಉದ್ಭವವಾಗುತ್ತಿವೆ. ಭಾರತ ಯೋಜನಾ ಆಯೋಗದ ವ್ಯಾಖ್ಯಾನದ ಪ್ರಕಾರ ಕೊರತೆಯ ಹಣಕಾಸು ಎಂದರೆ ಸರ್ಕಾರದ ಆಯ–ವ್ಯಯ ಪತ್ರದ ಕಾರ್ಯಾಚರಣೆ ಮೂಲಕ ಅರ್ಥವ್ಯವಸ್ಥೆಯ ನಿವ್ವಳ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಸರ್ಕಾರವು ತನ್ನ ಆದಾಯಕ್ಕಿಂತಲೂ ವೆಚ್ಚವನ್ನು ಹೆಚ್ಚು ಮಾಡುವುದನ್ನು ಕೊರತೆಯ ಹಣಕಾಸು ಎನ್ನುತ್ತಾರೆ. ಕೊರತೆಯ ಹಣಕಾಸಿನ ಪರಿಣಾಮವಾಗಿ ದೇಶದಲ್ಲಿ ಅಭಿವೃದ್ಧಿ ಚಟುವಟಿಕೆಗಳು ಹೆಚ್ಚಾಗಿ, ಹಣದ ಚಲಾವಣಾ ಪ್ರಮಾಣ ಹೆಚ್ಚುತ್ತದೆ. ಇದರಿಂದ ಜನರ ಕೊಳ್ಳುವ ಶಕ್ತಿ ಹೆಚ್ಚಾಗುತ್ತದೆ. ಕೊರತೆಯನ್ನು ಋಣ(–) ಚಿಹ್ನೆಯಲ್ಲಿ ಗುರುತಿಸಲಾಗುತ್ತದೆ.

ಕೊರತೆಯ ಹಣಕಾಸಿನಲ್ಲಿ ವಿತ್ತೀಯ ಕೊರತೆ, ಆಯವ್ಯಯ ಕೊರತೆ, ಕಂದಾಯ ಕೊರತೆ ಮತ್ತು ಪ್ರಾಥಮಿಕ ಕೊರತೆ ಎಂಬ ನಾಲ್ಕು ವಿಧಗಳನ್ನು ಗುರುತಿಸಲಾಗುತ್ತಿದೆ.

ವಿತ್ತೀಯ ಕೊರತೆ (Fiscal Deficit) : ಆಯವ್ಯಯದಲ್ಲಿ ಸರ್ಕಾರದ ಕಂದಾಯ ಆದಾಯ ಮತ್ತು ಸಾಲೇತರ ಬಂಡವಾಳ ಆದಾಯಗಳಿಗಿಂತ ಸರ್ಕಾರದ ಒಟ್ಟು ವೆಚ್ಚ ಹೆಚ್ಚಾಗಿದ್ದರೆ, ಅದನ್ನು ವಿತ್ತೀಯ ಕೊರತೆ ಎನ್ನುತ್ತಾರೆ. ಇಲ್ಲಿ ಸಾಲೇತರ ಬಂಡವಾಳ ಆದಾಯವೆಂದರೆ, ಸರ್ಕಾರ ನೀಡಿದ್ದ ಸಾಲ ಮರುಪಾವತಿ ಹಾಗೂ ಹೂಡಿಕೆ ಹಿಂತೆಗೆತದ ಮೂಲಕ ಸಂಗ್ರಹಿಸುವ ಆದಾಯವಾಗಿದೆ. ಸರ್ಕಾರದ ಒಟ್ಟು ವೆಚ್ಚವು ಅದರ ಕಂದಾಯ ವೆಚ್ಚ ಮತ್ತು ಬಂಡವಾಳ ವೆಚ್ಚವನ್ನು ಒಳಗೊಂಡಿದೆ. ವಿತ್ತೀಯ ಕೊರತೆಯು ಸರ್ಕಾರದ ಖಜಾನೆ ಮೇಲೆ ಬೀಳುವ ವಾಸ್ತವಿಕ ಹೊರೆಯನ್ನು ತಿಳಿಸುತ್ತದೆ. ಅಂದರೆ ಸರ್ಕಾರವು ಆಂತರಿಕ ಮತ್ತು ವಿದೇಶಿ ಮೂಲಗಳಿಂದ ಎಷ್ಟು ಸಾಲ ಸಂಗ್ರಹಿಸಬೇಕಾಗುತ್ತದೆ ಎಂಬುದನ್ನು ತಿಳಿಸುತ್ತದೆ. ಸಾಲ ಸಂಗ್ರಹದ ಮೂಲಕ ವಿತ್ತೀಯ ಕೊರತೆಯನ್ನು ತುಂಬಲು ಸಾಧ್ಯವಾಗದಿದ್ದಾಗ, ಭಾರತೀಯ ರಿಜ಼ರ್ವ್ ಬ್ಯಾಂಕು ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುವ ಮೂಲಕ ಸರ್ಕಾರಕ್ಕೆ ಸಾಲ ನೀಡುತ್ತದೆ. ವಿತ್ತೀಯ ಕೊರತೆಯನ್ನು ಸೂತ್ರ ರೂಪದಲ್ಲಿ ಹೀಗೆ ವ್ಯಕ್ತಪಡಿಸಬಹುದು.

ವಿತ್ತೀಯ ಕೊರತೆ = (ಕಂದಾಯ ಆದಾಯ + ಸಾಲೇತರ ಬಂಡವಾಳ ಆದಾಯ) – ಒಟ್ಟು ವೆಚ್ಚ

ಆಯವ್ಯಯದ ಇತರೆ ಕೊರತೆಗಳು

* *ಆಯ–ವ್ಯಯ ಕೊರತೆ = ಒಟ್ಟು ಆದಾಯ – ಒಟ್ಟು ವೆಚ್ಚ*
* *ಕಂದಾಯ ಕೊರತೆ = ಕಂದಾಯ ಆದಾಯ – ಕಂದಾಯ ವೆಚ್ಚ*
* *ಪ್ರಾಥಮಿಕ ಕೊರತೆ = ವಿತ್ತೀಯ ಕೊರತೆ – ಬಡ್ಡಿಪಾವತಿ*

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ಸರ್ಕಾರವು ಸಾರ್ವಜನಿಕ ಹಣಕಾಸನ್ನು ________ ಮೂಲಕ ನಿರ್ವಹಿಸುತ್ತದೆ.
2. ಆಯ–ವ್ಯಯದಲ್ಲಿ ಸರ್ಕಾರದ ಆದಾಯವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದನ್ನು _______ ಎಂದು ಕರೆಯುತ್ತಾರೆ.
3. ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕ ಸಭೆಯಲ್ಲಿ ಮಂಡಿಸುವವರು ________
4. ಸರ್ಕಾರವು ಆಂತರಿಕ ಹಾಗೂ ವಿದೇಶಿ ಸಾಲಗಳ ಮೂಲಕ ಸಂಗ್ರಹಿಸುವ ಆದಾಯವನ್ನು ________ ಎನ್ನುತ್ತಾರೆ.

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಸಾರ್ವಜನಿಕ ಹಣಕಾಸಿನ ಅರ್ಥ ತಿಳಿಸಿ.
2. ಆಯವ್ಯಯ ಎಂದರೇನು?
3. ಕೊರತೆಯ ಆಯ–ವ್ಯಯದ ಅರ್ಥ ಬರೆಯಿರಿ.

4. ಪ್ರತ್ಯಕ್ಷ ತೆರಿಗೆ ಎಂದರೇನು?

5. ವಿತ್ತೀಯ ಕೊರತೆಯನ್ನು ಸೂತ್ರ ರೂಪದಲ್ಲಿ ಬರೆಯಿರಿ.

III. ಮುಂದಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.

1. ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸು ನಡುವಿನ ಭಿನ್ನತೆಗಳನ್ನು ಗುರುತಿಸಿ.
2. ಸಾರ್ವಜನಿಕ ಹಣಕಾಸಿನ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.
3. ಕೇಂದ್ರ ಸರ್ಕಾರದ ಯೋಜನಾ ವೆಚ್ಚಗಳನ್ನು ಪಟ್ಟಿಮಾಡಿರಿ.
4. ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳನ್ನು ತಿಳಿಸಿ.
5. ಕೊರತೆಯ ಹಣಕಾಸು ಎಂದರೇನು? ಅದರ ನಾಲ್ಕು ವಿಧಗಳನ್ನು ತಿಳಿಸಿ.

IV. ಚಟುವಟಿಕೆಗಳು

1. ನಿಮ್ಮ ಹತ್ತಿರದ ಗ್ರಾಮಪಂಚಾಯ್ತಿ ಅಥವಾ ತಾಲ್ಲೂಕು ಪಂಚಾಯಿತ್ತಿಗೆ ಭೇಟಿ ನೀಡಿ, ಅಲ್ಲಿನ ಆಯ-ವ್ಯಯದ ಬಗ್ಗೆ ಮಾಹಿತಿ ಸಂಗ್ರಹಿಸಿ.
2. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಯವ್ಯಯ ಮಂಡನೆಯನ್ನು ದೂರದರ್ಶನದ ಮೂಲಕ ವೀಕ್ಷಿಸಿ. ಆ ಬಗ್ಗೆ ತರಗತಿಯಲ್ಲಿ ಚರ್ಚಿಸಿ.
3. ಆಯ-ವ್ಯಯ ಮಂಡನೆಯಾದ ಮರುದಿನ ದಿನಪತ್ರಿಕೆಯಲ್ಲಿ ಬರುವ ವರದಿಗಳನ್ನು ಸಂಗ್ರಹಿಸಿ. ತರಗತಿಯಲ್ಲಿ ಪ್ರದರ್ಶಿಸಿ.

V. ಯೋಜನೆ

1. ನಿಮ್ಮ ಕುಟುಂಬದ ಹಿರಿಯರೊಂದಿಗೆ ಚರ್ಚಿಸಿ ಕುಟುಂಬದ ಆದಾಯದ ಮೂಲಗಳು ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ಅಂದಾಜು ಆಯ-ವ್ಯಯವನ್ನು ಸಿದ್ಧಪಡಿಸಿ.

ವ್ಯವಹಾರ ಅಧ್ಯಯನ

ಅಧ್ಯಾಯ – 1

ಬ್ಯಾಂಕು ವ್ಯವಹಾರಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಬ್ಯಾಂಕಿನ ಅರ್ಥ*
- *ಹಣಕಾಸಿನ ವ್ಯವಹಾರಗಳಲ್ಲಿ ಬ್ಯಾಂಕುಗಳು ಮತ್ತು ಅಂಚೆ ಕಚೇರಿಗಳು.*
- *ಬ್ಯಾಂಕುಗಳ ಗುಣ ಲಕ್ಷಣಗಳು.*
- *ಬ್ಯಾಂಕಿನಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು.*
- *ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಯುವ ವಿಧಾನ.*
- *ಬ್ಯಾಂಕು ಖಾತೆಗಳಿಂದಾಗುವ ಅನುಕೂಲಗಳು.*

ಬ್ಯಾಂಕುಗಳು ಸುಮಾರು ಎರಡುನೂರು ವರ್ಷಗಳ ಹಿಂದೆ ಅಭಿವೃದ್ಧಿ ಹೊಂದಿದವು. ಬ್ಯಾಂಕುಗಳ ಸ್ವರೂಪವು ಕಾಲಕ್ಕನುಗುಣವಾಗಿ ಬದಲಾವಣೆ ಹೊಂದುತ್ತಾ ಬಂದಿತು. ಬ್ಯಾಂಕ್ ಎಂಬ ಪದವು ಹಣಕಾಸಿನ ವ್ಯವಹಾರಗಳಿಗೆ ಸಂಬಂಧಪಟ್ಟಿದೆ. ಇವು ಹಣಕಾಸಿನ ಸಂಸ್ಥೆಗಳಾಗಿದ್ದು ಗ್ರಾಹಕರು ಭದ್ರತೆಯ ದೃಷ್ಟಿಯಿಂದ ಬ್ಯಾಂಕುಗಳಲ್ಲಿ ತಮ್ಮ ಹಣವನ್ನು ಇಟ್ಟು ತಮಗೆ ಬೇಕಾದಾಗ ಹಿಂದಿರುಗಿ ಪಡೆಯಲು ಸಾಧ್ಯವಾಗಿದೆ. ಬ್ಯಾಂಕುಗಳು ಗ್ರಾಹಕರಿಗೆ ಸಾಲಗಳನ್ನು ಕೊಟ್ಟು ಅವುಗಳಿಗೆ ಬಡ್ಡಿ ವಸೂಲು ಮಾಡುತ್ತವೆ. ವಿವಿಧ ದೇಶಗಳ ವಿವಿಧ ಹಣವನ್ನು ವಿನಿಮಯ ಮಾಡುವ ಕಾರ್ಯ ಮಾಡುತ್ತವೆ. ಯಾವುದೇ ದೇಶದ ಅಭಿವೃದ್ಧಿಯು ಆ ದೇಶದ ಮುಖ್ಯ ಹಣಕಾಸು ಸಂಸ್ಥೆಯಾದ ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಅವಲಂಬಿಸಿರುತ್ತದೆ. ಬ್ಯಾಂಕುಗಳು ಸಮಾಜದ ಅಭಿವೃದ್ಧಿಯ ಮುಖ್ಯ ಅಂಗಗಳಾದ ವ್ಯವಸಾಯ, ಕೈಗಾರಿಕೆ, ವ್ಯಾಪಾರ ಮುಂತಾದುವುಗಳಿಗೆ ಅವಶ್ಯಬಿದ್ದಾಗ ಹಣವನ್ನು ಸಾಲ ರೂಪದಲ್ಲಿ ಕೊಡುತ್ತವೆ ಹಾಗೂ ಆರ್ಥಿಕ ಪ್ರಗತಿಯನ್ನು ತ್ವರಿತಗತಿಯಲ್ಲಿ ಬೆಳೆಸುತ್ತವೆ.

ಬ್ಯಾಂಕ್ ಎಂದರೇನು?

ಬ್ಯಾಂಕ್ ಎಂಬ ಪದವು ಇಟಾಲಿಯನ್‌ನ "ಬ್ಯಾಂಕೊ"(Banko) ಅಥವಾ ಫ್ರೆಂಚಿನ "ಬ್ಯಾಂಕ್" (Banque) ಎಂಬ ಶಬ್ಧಗಳಿಂದ ಬಂದಿದೆ. ಇವುಗಳ ಅರ್ಥ 'ಬೆಂಚು' ಅಥವಾ ಹಣವನ್ನು ವಿನಿಮಯ ಮಾಡಿಕೊಳ್ಳುವ ಟೇಬಲ್ ಆಗಿದೆ.

ಬ್ಯಾಂಕಿಂಗ್ ಕಂಪನಿಯು ಹಣಕಾಸಿನ ವ್ಯವಹಾರ ಅಂದರೆ ಹಣವನ್ನು ತಮ್ಮಲ್ಲಿ ಇಡುಗಂಟಾಗಿಟ್ಟುಕೊಂಡದ್ದನ್ನು ಸಾಲಕೊಡುವ ಸಂಸ್ಥೆಯಾಗಿದೆ ಎಂದು ವ್ಯಾಖ್ಯಾನಿಸಬಹುದು. ಬ್ಯಾಂಕು ಹಣಕಾಸಿನ ಸಂಸ್ಥೆಯಾಗಿದ್ದು ಠೇವಣಿಗಳನ್ನು ಸ್ವೀಕರಿಸಿ, ಆ ಠೇವಣಿಗಳನ್ನು ಸಾಲಗಳ ರೂಪದಲ್ಲಿ ಬೇರೆ ಬೇರೆ ಸೇವೆಗಳಿಗಾಗಿ ಕೊಡುತ್ತದೆ. ಇದು ಯಾರು ಹಣವನ್ನು ಉಳಿತಾಯ ಮಾಡಬೇಕೆಂದು ಬಯಸುವರೋ ಅವರಿಂದ ಸ್ವೀಕರಿಸಿ ಯಾರಿಗೆ ಅವಶ್ಯವಿದೆಯೋ ಅವರಿಗೆ ಸಾಲದ ರೂಪದಲ್ಲಿ ಕೊಡುತ್ತದೆ. ಬ್ಯಾಂಕಿನಲ್ಲಿಯ ಸೇವೆಗಳನ್ನು ಉಪಯೋಗಿಸಿಕೊಳ್ಳುವ ಆ ವ್ಯವಹಾರಗಳನ್ನು ಬ್ಯಾಂಕಿಂಗ್ ಎನ್ನುತ್ತೇವೆ.

ಬ್ಯಾಂಕುಗಳು ಸಾರ್ವಜನಿಕರ ಠೇವಣಿಗಳನ್ನು ಅವರಿಗೆ ಬೇಡಿಕೆ ಎನಿಸಿದಾಗ ಚೆಕ್ಕು, ಡ್ರಾಫ್ಟ್ ಮತ್ತಿತರ ರೂಪಗಳಲ್ಲಿ ಮರುಪಾವತಿಮಾಡುತ್ತವೆ.

ಬ್ಯಾಂಕುಗಳ ಗುಣ ಲಕ್ಷಣಗಳು.

- **ಹಣದ ವಹಿವಾಟು :** ಬ್ಯಾಂಕುಗಳು ಹಣಕಾಸಿನ ಸಂಸ್ಥೆಗಳಾಗಿದ್ದು ಸಾರ್ವಜನಿಕರ ಹಣದ ವಹಿವಾಟನ್ನು ಮಾಡುತ್ತವೆ.
- **ವ್ಯಕ್ತಿ/ಸಂಸ್ಥೆ/ಕಂಪನಿ :** ಬ್ಯಾಂಕು ಒಬ್ಬ ವ್ಯಕ್ತಿಯಾಗಿರಬಹುದು, ಸಂಸ್ಥೆ ಅಥವಾ ಕಂಪನಿ ಆಗಿರಬಹುದು. ಬ್ಯಾಂಕಿಂಗ್ ಕಂಪನಿ ಎಂದರೆ ಹಣಕಾಸಿನ ವ್ಯವಹಾರ ಮಾಡುವ ಸಂಸ್ಥೆ.
- **ಠೇವಣಿಗಳನ್ನು ಅಂಗೀಕರಿಸುತ್ತವೆ :** ಬ್ಯಾಂಕು ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುತ್ತದೆ. ಈ ಠೇವಣಿಗಳನ್ನು ಠೇವಣಿದಾರರು ಬೇಡಿಕೆ ಇಟ್ಟಾಗ ಅಥವಾ ಒಂದು ನಿರ್ಧಿಷ್ಟ ಅವಧಿ ಮುಗಿದ ಮೇಲೆ ಹಿಂದಿರುಗಿಸಬೇಕಾಗುತ್ತದೆ. ಈ ಠೇವಣಿಗಳಿಗೆ ಬ್ಯಾಂಕು ಭದ್ರತೆಯನ್ನು ಒದಗಿಸುತ್ತದೆ. ಬ್ಯಾಂಕು ಗ್ರಾಹಕರ ಠೇವಣಿಗಳಿಗೆ ಮೇಲ್ವಿಚಾರಕನಂತೆ ವರ್ತಿಸುತ್ತದೆ.
- **ಸಾಲಗಳನ್ನು ಕೊಡುವುದು:** ಬ್ಯಾಂಕು ಕೈಗಾರಿಕಾ ಕ್ಷೇತ್ರ, ಕೃಷಿಕ್ಷೇತ್ರ, ಶಿಕ್ಷಣ, ಗೃಹನಿರ್ಮಾಣ ಮೊದಲಾದ ಉದ್ದೇಶಗಳಿಗಾಗಿ ಹಣವನ್ನು ಸಾಲರೂಪದಲ್ಲಿ ಕೊಡುತ್ತದೆ.
- **ಪಾವತಿ ಮತ್ತು ಹಿಂದಕ್ಕೆ ಪಡೆಯುವುದು:** ಬ್ಯಾಂಕು ಸುಲಭ ರೀತಿಯಲ್ಲಿ ಠೇವಣಿದಾರರಿಗೆ ಚೆಕ್ಕು ಅಥವಾ ಹುಂಡಿಗಳ ಮೂಲಕ ಹಣವನ್ನು ಪಾವತಿಮಾಡುತ್ತದೆ ಮತ್ತು ಠೇವಣಿಗಳನ್ನು ಹಿಂದಕ್ಕೆ ಪಡೆಯಲು ಅನುವು ಮಾಡಿಕೊಡುತ್ತದೆ.
- **ಏಜೆಂಟ್ ಅಥವಾ ಏಜೆಂಟ್ ನಿಯೋಜನೆ ಮತ್ತು ಉಪಯುಕ್ತ ಸೇವೆಗಳು:** ಬ್ಯಾಂಕು ತನ್ನ ಗ್ರಾಹಕರಿಗೆ ಏಜೆಂಟರಂತೆ ಅನೇಕ ಉಪಯುಕ್ತ ಸೇವೆಗಳನ್ನು ಒದಗಿಸುತ್ತದೆ.
- **ಲಾಭ ಮತ್ತು ಸೇವಾ ಭಾವನೆ:** ಬ್ಯಾಂಕು ಸೇವೆಯ ಮನೋಭಾವ ಹೊಂದಿದ್ದು ಲಾಭ ಪಡೆಯುವ ಒಂದು ಸಂಸ್ಥೆಯಾಗಿದೆ.
- **ನಿರಂತರ ವಿಸ್ತರಿಸುತ್ತಾ ಹೋಗುವ ಕಾರ್ಯಗಳು:** ಬ್ಯಾಂಕುಗಳು ತಮ್ಮ ಕಾರ್ಯಗಳನ್ನು ನಿರಂತರವಾಗಿ ಬೇರೆ ಬೇರೆ ದಿಕ್ಕುಗಳತ್ತ ಸೇವೆಗಳನ್ನು ಮತ್ತು ಚಟುವಟಿಕೆಗಳನ್ನು ವಿಸ್ತರಿಸಿಕೊಂಡು ಹೋಗುತ್ತವೆ.
- **ಸಂಬಂಧ ಕಲ್ಪಿಸುವ ಕೊಂಡಿ :** ಬ್ಯಾಂಕು ಠೇಣಿದಾರರು ಮತ್ತು ಸಾಲ ಪಡೆಯುವವರ ಮಧ್ಯೆ ಸಂಪರ್ಕ ಕಲ್ಪಿಸುವ ಒಂದು ಕೊಂಡಿಯಂತೆ ತಮ್ಮ ಕಾರ್ಯಗಳನ್ನು ನಡೆಸುತ್ತದೆ. ಗ್ರಾಹಕರ ಉಳಿಕೆ ಹಣವನ್ನು ಠೇವಣಿಗಳ ಮೂಲಕ ಸಂಗ್ರಹಿಸಿ ಇದನ್ನು ಯಾರಿಗೆ ಅವಶ್ಯಕವಿದೆಯೋ ಅವರಿಗೆ ಸಾಲ ರೂಪದಲ್ಲಿ ಕೊಡುತ್ತದೆ.
- **ಬ್ಯಾಂಕಿಂಗ್ ವ್ಯವಹಾರ :** ಬ್ಯಾಂಕಿನ ಮುಖ್ಯ ಚಟುವಟಿಕೆ ಹಣಕಾಸಿನಿಂದ ಕೂಡಿದ ವ್ಯವಹಾರ (ಬ್ಯಾಂಕಿಂಗ್) ವಾಗಿದ್ದು ಇತರೆ ವ್ಯವಹಾರಗಳಿಗೆ ಅಧೀನವಾಗಿರುವುದಿಲ್ಲ.

- **ಹೆಸರಿನ ಗುರುತು:** ಬ್ಯಾಂಕು ಯಾವಾಗಲೂ ತನ್ನ ಹೆಸರಿನಲ್ಲಿ ಬ್ಯಾಂಕು ಎಂಬ ಪದವನ್ನು ಸೇರಿಸಿರಬೇಕು. ಉದಾ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೆನರಾ ಬ್ಯಾಂಕು, ಕಾರ್ಪೊರೇಷನ್ ಬ್ಯಾಂಕು ಮುಂತಾದವು ಇದರಿಂದಾಗಿ ಗ್ರಾಹಕರು ಯಾವ ಬ್ಯಾಂಕಿನ ಜೊತೆಯಲ್ಲಿ ವ್ಯವಹಾರ ಇಟ್ಟುಕೊಂಡಿದ್ದಾರೆಂದು ತಿಳಿಯುತ್ತದೆ.

ಬ್ಯಾಂಕಿನ ಕಾರ್ಯಗಳು :

1. ಸಾರ್ವಜನಿಕರಿಂದ ಅಥವಾ ಇತರರಿಂದ ಠೇವಣಿಗಳನ್ನು ಅಂಗೀಕರಿಸುವುದು.
2. ಸಾರ್ವಜನಿಕರಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು.
3. ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.
4. ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು ಮಾಡುವುದು.
5. ಹುಂಡಿಗಳನ್ನು ಸೋಡಿ ಮಾಡುವುದು.
6. ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
7. ವಿದೇಶಿ ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುವುದು.
8. ಬೆಲೆ ಬಾಳುವ ವಸ್ತುಗಳನ್ನು ತಮ್ಮ ಸುಪರ್ಧಿಗಳಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು.
9. ಸಾಲಪತ್ರಗಳನ್ನು ಮತ್ತು ಜವಾಬ್ದಾರಿ ಪತ್ರಗಳನ್ನು ಕೊಡುವುದು.
10. ಸರ್ಕಾರದ (ಕೇಂದ್ರ ಹಾಗೂ ರಾಜ್ಯ) ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವುದು.

ಬ್ಯಾಂಕರನಿಗೂ ಮತ್ತು ಗ್ರಾಹಕರಿಗೂ ಇರುವ ಸಂಬಂಧ :

ಬ್ಯಾಂಕರನಿಗೂ ಅದರ ಗ್ರಾಹಕರಿಗೂ ಇರುವ ಸಂಬಂಧಗಳನ್ನು ಎರಡು ರೀತಿಗಳಲ್ಲಿ ವಿಂಗಡಿಸಬಹುದು.

1. ಸಾಮಾನ್ಯ ಸಂಬಂಧ
2. ವಿಶೇಷ ಸಂಬಂಧ

1. ಸಾಮಾನ್ಯ ಸಂಬಂಧ : ಇದು ಮೂರು ಮುಖ್ಯ ವಿಧಗಳಿಂದ ಕೂಡಿದೆ.

- ಪ್ರಾಥಮಿಕ ಸಂಬಂಧ (ಸಾಲಿಗ ಮತ್ತು ಸಾಲಗಾರನ ಸಂಬಂಧದಂತೆ)
- ಸಹಾಯಕ ಅಥವಾ ಉಪಕಾರ ಸಂಬಂಧ (ಧರ್ಮದರ್ಶಿ ಅಥವಾ ನಿಕ್ಷೇಪಧಾರಿ ಮತ್ತು ಪ್ರಯೋಜನಕಾರಿಯ ನಡುವಿನ ಸಂಬಂಧ)
- ಕಾರಬಾರಿ ಅಥವಾ ನಿಯೋಗಿ ಮತ್ತು ಮುಖ್ಯಸ್ಥನ ಸಂಬಂಧ.

2. ವಿಶೇಷ ಸಂಬಂಧ :

- ಚೆಕ್ಕುಗಳನ್ನು ಮನ್ನಣೆ ಮಾಡುವುದು.
- ಗ್ರಾಹಕನ ಲೆಕ್ಕಗಳ ಗೋಪ್ಯತೆ ಕಾಪಾಡುವುದು.

ಚಟುವಟಿಕೆ :
ನಿಮ್ಮ ಹತ್ತಿರದ ಬ್ಯಾಂಕಿಗೆ ಭೇಟಿ ನೀಡಿ ಉನ್ನತ ವ್ಯಾಸಂಗಕ್ಕೆ ಸಾಲ ನೀಡುವ ಕ್ರಮದ ಬಗ್ಗೆ ವ್ಯವಸ್ಥಾಪಕರಿಂದ ಮಾಹಿತಿ ಸಂಗ್ರಹಿಸಿ.

ಬ್ಯಾಂಕುಗಳು ಸಲ್ಲಿಸುವ ಸೇವೆಗಳು:

1. ಜಮಾ ಕಾರ್ಡು (Credit Cards)ಗಳನ್ನು ಕೊಡುವುದು.
2. ಖಾಸಗಿ ಸಾಲಗಳು.
3. ಮನೆ ಕಟ್ಟಲು ಅಥವಾ ವಾಹನ ಖರೀದಿಸಲು ಸಾಲ ಕೊಡುವುದು.
4. ಪರಸ್ಪರ ನಿಧಿಗಳನ್ನು ನಿರ್ವಹಿಸುವುದು
5. ವ್ಯಾಪಾರಕ್ಕೆ ಬೇಕಾದ ಸಾಲಗಳು.
6. ಭದ್ರತಾ ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು.
7. ಭರವಸೆ ಸೇವೆಗಳು
8. ಸಹಿಗಳಿಗೆ ಜವಾಬ್ದಾರಿ ಹಾಕುವುದು.

ಬ್ಯಾಂಕಿಂಗ್ ವ್ಯವಹಾರ

ಬ್ಯಾಂಕುಗಳು ಮತ್ತು ಅಂಚೆ ಕಚೇರಿಗಳು

ಯಾವುದೇ ಒಂದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಬ್ಯಾಂಕು ವ್ಯವಹಾರಗಳೆನ್ನುತ್ತೇವೆ. ಬ್ಯಾಂಕುಗಳು ಹಣಕಾಸಿನ ಸಂಬಂಧ ವ್ಯವಹಾರಗಳನ್ನು ನಿರ್ವಹಿಸುವ ಸಂಸ್ಥೆಗಳಾಗಿವೆ. ಬ್ಯಾಂಕುಗಳು ಗ್ರಾಹಕರ ಹಣವನ್ನು ಠೇವಣಿಗಳಾಗಿ ಇಟ್ಟುಕೊಳ್ಳುತ್ತವೆ ಮತ್ತು ಈ ಠೇವಣಿಗಳಿಂದ ಸಂಗ್ರಹವಾದ ಹಣವನ್ನು ಗಿರಾಕಿಗಳಿಗೆ ಸಾಲವಾಗಿ ಕೊಡುತ್ತವೆ. ಈ ಸಾಲಗಳನ್ನು ಬ್ಯಾಂಕ್ ಸಾಲ ಎನ್ನುತ್ತೇವೆ. ಬ್ಯಾಂಕುಗಳು ತಮ್ಮ ಗಿರಾಕಿಗಳ ಠೇವಣಿಗಳನ್ನು ಬೇಡಿಕೆ ಇರುವ ಗ್ರಾಹಕರಿಗೆ ಸಾಲಗಳ ರೂಪದಲ್ಲಿ ಕೊಟ್ಟು ಇದಕ್ಕೆ ಬಡ್ಡಿ ವಸೂಲು ಮಾಡುತ್ತವೆ. ಈ ಬಡ್ಡಿಯಿಂದ ಬಂದ ಸ್ವಲ್ಪ ಭಾಗದ ಹಣವನ್ನು ತನ್ನ ಠೇವಣಿದಾರರಿಗೂ ಬಡ್ಡಿ ರೂಪದಲ್ಲಿ ಕೊಡುತ್ತವೆ. ಈ ಬಡ್ಡಿಯು ಠೇವಣಿದಾರರ ಆದಾಯವಾಗಿರುತ್ತದೆ. ಬ್ಯಾಂಕುಗಳು ತಮ್ಮ ಗಿರಾಕಿಗಳ ಹಣವನ್ನು ಸ್ಥಳೀಯ ಮತ್ತು ವಿದೇಶ ವ್ಯಾಪಾರಗಳಲ್ಲಿ ತೊಡಗಿಸಿ ಹಣವನ್ನು ವೃದ್ಧಿಮಾಡಿಕೊಳ್ಳುತ್ತವೆ.

ಭಾರತದಲ್ಲಿ ಬ್ಯಾಂಕುಗಳ ಎಲ್ಲ ಚಟುವಟಿಕೆಗಳು ರಿಜರ್ವ್ ಬ್ಯಾಂಕಿನ ಹತೋಟಿಯಲ್ಲಿರುತ್ತದೆ. ರಿಜರ್ವ್‌ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಅಥವಾ ಬ್ಯಾಂಕುಗಳ ತಾಯಿ ಎಂದೂ ಕರೆಯಬಹುದು. ರಿಜರ್ವ ಬ್ಯಾಂಕು ದೇಶದ ಕೇಂದ್ರ ಬ್ಯಾಂಕಾಗಿದೆ. ಇದು ಹಣಕಾಸಿನ ಕಾರ್ಯ ನೀತಿಯನ್ನು ರೂಪಿಸುತ್ತದೆ. ಈ ಕಾರ್ಯ ನೀತಿಯನ್ನು ಎಲ್ಲ ಬ್ಯಾಂಕುಗಳು ಪಾಲಿಸಬೇಕಾಗುತ್ತದೆ. ಈಗ ನಮ್ಮಲ್ಲಿ ಸ್ಟೇಟ್ ಬ್ಯಾಂಕ್ ಸಮೂಹಗಳು, ಇಪ್ಪತ್ತೊಂದು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಇಪ್ಪತ್ತೊಂದು ಖಾಸಗಿ ಬ್ಯಾಂಕುಗಳು ಇದೆ. ಹತ್ತೊಂಬತ್ತು ವಿದೇಶೀ ಬ್ಯಾಂಕುಗಳು ಇದ್ದು ಇದರ ಜಾಲ ಸುಮಾರು 8000 ಉಪಶಾಖೆಗಳಿಂದ ಕಾರ್ಯ ನಿರ್ವಹಿಸುತ್ತಿದೆ. ಗ್ರಾಮಾಂತರ ಅಲ್ಲದೆ ಬ್ಯಾಂಕುಗಳು ಮತ್ತು ರಾಜ್ಯ ಸರ್ಕಾರದ ಹಾಗೂ ಖಾಸಗಿ ಸಹಕಾರಿ ಬ್ಯಾಂಕುಗಳು ಇವೆ.

ಬ್ಯಾಂಕುಗಳ ಉದ್ಯಮದಲ್ಲಿ ಇತ್ತೀಚಿನ ಬೆಳವಣಿಗೆ ಎಂದರೆ ಅಂಚೆ ಕಚೇರಿಗಳನ್ನು ಬ್ಯಾಂಕು ವ್ಯವಹಾರಗಳ ಅಂಕಿತದೊಳಕ್ಕೆ ತಂದಿರುವುದು. ಭಾರತೀಯ ಅಂಚೆ ಇಲಾಖೆ "ಭಾರತೀಯ ಅಂಚೆ

ಬ್ಯಾಂಕ್" ನ ಜಾಲವನ್ನು ಅಂಚೆ ಕಚೇರಿಗಳೊಡನೆ ದೇಶದಾದ್ಯಂತ ಪ್ರಾರಂಭ ಮಾಡಲು ಯೋಜನೆಯನ್ನು ರೂಪಿಸಿದೆ. ಇವುಗಳಲ್ಲಿ ಶೇ 90 ರಷ್ಟು ಗ್ರಾಮಾಂತರ ಮತ್ತು ಸಣ್ಣ ಸಣ್ಣ ಪಟ್ಟಣಗಳಲ್ಲಿ ಪ್ರಾರಂಭಿಸಲು ನಿರ್ಧರಿಸಿದೆ. ಅಂಚೆ ಇಲಾಖೆಯು ಈಗಾಗಲೆ ರಾಷ್ಟ್ರೀಯ ಉಳಿತಾಯ ಪತ್ರಗಳು, ಅಂಚೆ ಉಳಿತಾಯ ಖಾತೆಗಳು, ಕಿಸಾನ್ ವಿಕಾಸ ಪತ್ರಗಳು, ಮಹೆಯಾನ ತೀರು ಠೇವಣಿಗಳು, ಅಂಚೆ ವಿಮೆ, ನಿವೃತ್ತಿವೇತನ, ಹಣವನ್ನು ವರ್ಗಾಯಿಸುವುದು ಮುಂತಾದ ಅನೇಕ ಹಣಕಾಸಿನ ವ್ಯವಹಾರಗಳನ್ನು ಕೈಗೊಂಡಿದೆ. ಅಂಚೆ ಇಲಾಖೆಯು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಬ್ಯಾಂಕು ವ್ಯವಹಾರಕ್ಕೆ ತೊಡಗಿಸಲು ಯೋಜನೆ ಹಾಕಿಕೊಂಡಿದೆ. ಇದು ಅಂಚೆ ಇಲಾಖೆಯ ಸಹಾಯಕ ಕ್ಷೇತ್ರವಾಗುತ್ತದೆ.

> ***ಚಟುವಟಿಕೆ :***
> *ಅಂಚೆ ಕಚೇರಿಗೆ ಭೇಟಿ ನೀಡಿ ಅಲ್ಲಿ ಬ್ಯಾಂಕ್ ವ್ಯವಹಾರ ನಿರ್ವಹಣೆಯು ನಡೆಯುವ ಕ್ರಮದ ಬಗ್ಗೆ ಮಾಹಿತಿ ಪಡೆಯಿರಿ.*

ಬ್ಯಾಂಕುಗಳ ವಿಧಗಳು :

ಬ್ಯಾಂಕುಗಳಲ್ಲಿ ಹಲವಾರು ವಿಧಗಳಿವೆ. ಪ್ರತಿಯೊಂದು ವಿಧದ ಬ್ಯಾಂಕು ತಮ್ಮ ಒಂದು ನಿರ್ದಿಷ್ಟ ವಿಧದ ವ್ಯವಹಾರದಲ್ಲಿ ಪರಿಣಿತಿ ಪಡೆದಿರುತ್ತವೆ.

ಕೆಲವು ಮುಖ್ಯ ಬ್ಯಾಂಕುಗಳ ವಿಧಗಳೆಂದರೆ :

1. ಕೇಂದ್ರ ಬ್ಯಾಂಕು ಅಥವಾ ಭಾರತೀಯ ರಿಜರ್ವ್ ಬ್ಯಾಂಕು
2. ವಾಣಿಜ್ಯ ಬ್ಯಾಂಕುಗಳು
3. ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು
4. ಭೂ–ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು
5. ಸ್ಥಳೀಯ ಬ್ಯಾಂಕುಗಳು (ಲೇವಾದೇವಿ ಗಾರರು ಅಥವಾ ಸಾಹುಕಾರರು)
6. ಸಹಕಾರಿ ಬ್ಯಾಂಕುಗಳು

(ಈ ವಿವಿಧ ಬ್ಯಾಂಕುಗಳ ವಿವರಣೆ ಬಗ್ಗೆ ಹಿಂದಿನ ತರಗತಿಯ ಅರ್ಥಶಾಸ್ತ್ರ ವಿಭಾಗದಲ್ಲಿ ತಿಳಿದಿದ್ದೀರಿ.)

ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು. (Typers of Bank Accounts)

ಬ್ಯಾಂಕುಗಳಲ್ಲಿ ಸಾಮಾನ್ಯವಾಗಿ ಈ ಕೆಳಗಿನ ನಾಲ್ಕು ವಿಧದ ಖಾತೆಗಳನ್ನು ತೆರೆಯಬಹುದು.

1) ಉಳಿತಾಯ ಖಾತೆ. (Savings Account)
2) ಚಾಲ್ತಿ ಖಾತೆ (Current Account)
3) ಆವರ್ತ ಠೇವಣೆ ಖಾತೆ (Recurring Deposit Account)
4) ನಿಶ್ಚಿತ ಠೇವಣೆ ಖಾತೆ. (Fixed Deposit Account)

1) **ಉಳಿತಾಯ ಖಾತೆ :** ಸಾಮಾನ್ಯವಾಗಿ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವ ಜನರಿಂದ ಉಳಿತಾಯ ಖಾತೆ ತೆರೆಯಲ್ಪಡುತ್ತದೆ. ಈ ಸೌಲಭ್ಯವನ್ನು

ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಪಿಂಚಣಿದಾರರು ಕೂಡ ತೆರೆಯಲು ಅವಕಾಶವಿದೆ. ಈ ಖಾತೆಯು ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ. ಉಳಿತಾಯ ಖಾತೆಯ ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ. ಬ್ಯಾಂಕಿನಿಂದ ಹಣ ಹಿಂದಕ್ಕೆ ಪಡೆಯಲು ಚೆಕ್ಕು ಪುಸ್ತಕ ಅಥವಾ ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಸಾಧ್ಯವಿದೆ.

ಚಟುವಟಿಕೆ :

ಪ್ರಸ್ತುತ ಕೆಳಕಂಡ ಬ್ಯಾಂಕ್ ಖಾತೆಗಳಿಗೆ ಬ್ಯಾಂಕುಗಳು ನೀಡುವ ವಾರ್ಷಿಕ ಬಡ್ಡಿದರ ತಿಳಿಯಿರಿ.

1. ಉಳಿತಾಯ ಖಾತೆ
2. ಚಾಲ್ತಿ ಖಾತೆ
3. ಆವರ್ತ ಠೇವಣಿ ಖಾತೆ

2) **ಚಾಲ್ತಿ ಖಾತೆ** : ಈ ಖಾತೆಯನ್ನು ಸಾಮಾನ್ಯವಾಗಿ ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ. ಇಲ್ಲಿ ಠೇವಣಿಗಳ ಮರುಪಾವತಿ ಮತ್ತು ಬೇಡಿಕೆ ಠೇವಣಿಗಳು ಅಥವಾ ಉಪಸರ್ಗ (Contra) ವ್ಯವಹಾರಗಳ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಾಗುತ್ತದೆ. ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬಬಹುದು ಮತ್ತು ಎಷ್ಟು ಬಾರಿಯಾದರೂ ಹಿಂಪಡೆಯಬಹುದು. ಈ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲ. ಆದರೆ ತಮ್ಮ ಸೇವೆಗೆ ಸೇವಾ ಶುಲ್ಕ ವಸೂಲು ಮಾಡುತ್ತವೆ.

3) **ಆವರ್ತ ಠೇವಣಿ ಖಾತೆ (Recurring Deposit Account) :** ಆವರ್ತ ಠೇವಣಿ ಖಾತೆಗಳನ್ನು ಸಾಮಾನ್ಯವಾಗಿ ಭವಿಷ್ಯ ಕಾಲದಲ್ಲಿ ಯಾವುದಾದರೂ ಒಂದು ನಿರ್ದಿಷ್ಟ ದಿನದಂದು ಹಿಂದಕ್ಕೆ ಪಡೆಯಲು ತೆರೆಯಲ್ಪಡುತ್ತದೆ. ಭವಿಷ್ಯದ ಅವಶ್ಯಕತೆಗಳಿಗೆ ತಿಂಗಳು ತಿಂಗಳು ವ್ಯವಸ್ಥಿತವಾಗಿ ಠೇವಣಿಗಳನ್ನು ಒಂದು ಅವಧಿಗೆ ಜಮಾ ಮಾಡುತ್ತಾರೆ. (ಭವಿಷ್ಯದ ಅವಶ್ಯಕತೆಗಳಾದ ಮಕ್ಕಳ ವಿವಾಹ, ಬೆಲೆ ಬಾಳುವ ವಸ್ತುಗಳ ಖರೀದಿ, ನೆಲ, ಕಾರು ಮುಂತಾದುವನ್ನು ಕೊಳ್ಳಲು) ಅವಧಿ ಮುಗಿದ ನಂತರ ಠೇವಣಿ ಮಾಡಿದ ಹಣದ ಜೊತೆಗೆ ಬಡ್ಡಿಯನ್ನು ಸೇರಿಸಿ ಹಣವನ್ನು ಬ್ಯಾಂಕು ಹಿಂದಿರುಗಿಸುತ್ತದೆ.

4) **ನಿಶ್ಚಿತ ಠೇವಣಿ ಖಾತೆ : (Term Deposit Account)** ಈ ಖಾತೆಯಲ್ಲಿ ಠೇವಣಿಯನ್ನು ಒಂದು ನಿಗಧಿತ ಅವಧಿಗೆ ಇಡಲಾಗುತ್ತದೆ. ಠೇವಣಿ ಹಣವನ್ನು ನಿಶ್ಚಿತ ಅವಧಿ ಮುಗಿದ ನಂತರ ಠೇವಣಿದಾರರಿಗೆ ಪಾವತಿ ಮಾಡಲಾಗುತ್ತದೆ. (ನಿಶ್ಚಿತ ಅವಧಿ ತಿಂಗಳಾಗಿರಬಹುದು, ಆರು ತಿಂಗಳಾಗಿರಬಹುದು, ಒಂದು ವರ್ಷವಾಗಿರಬಹುದು, ಐದು ವರ್ಷಗಳಾಗಿರಬಹುದು ಅಥವಾ ಹತ್ತು ವರ್ಷಗಳಾಗಿರಬಹುದು) ಠೇವಣಿ ಹಣವನ್ನು ನಿಗದಿತ ಅವಧಿಗೆ ಮುಂಚೆ ಹಿಂದಕ್ಕೆ ಪಡೆಯಲು ಸಾಧ್ಯವಿಲ್ಲ. ಬಡ್ಡಿದರ ಅವಧಿಗನುಗುಣವಾಗಿ ಹೆಚ್ಚಾಗಿರುತ್ತದೆ.

ಚಟುವಟಿಕೆ :

ವಾರ್ಷಿಕ ಶೇ 8 ರಂತೆ 50000/– ರೂಗಳ ನಿಶ್ಚಿತ ಠೇವಣಿಗೆ ಮಾಸಿಕ ನೀಡಬೇಕಾದ ಬಡ್ಡಿಯ ಮೊತ್ತವನ್ನು ಕಂಡು ಹಿಡಿಯಿರಿ.

ಬ್ಯಾಂಕು ಖಾತೆಯನ್ನು ತೆಗೆಯುವ ವಿಧಾನ (Opening of Bank Account)

ಚಟುವಟಿಕೆ :

ಹತ್ತಿರದ ಯಾವುದಾದರೊಂದು ಬ್ಯಾಂಕಿಗೆ ಭೇಟಿ ನೀಡಿ ಅಲ್ಲಿನ ವ್ಯವಹಾರ ನಿರ್ವಹಣೆಯನ್ನು ತಿಳಿಯಿರಿ.

ಈ ದಿನಗಳಲ್ಲಿ ಬ್ಯಾಂಕುಗಳು ಮುಖ್ಯವಾದ ಹಣಕಾಸಿನ ಸಂಸ್ಥೆಗಳಾಗಿವೆ. ಬ್ಯಾಂಕುಗಳು ಸುರಕ್ಷಿತ ಪದ್ಧತಿಗಳ ಮೂಲಕ ಹಣದ ವ್ಯವಹಾರಗಳನ್ನು ನಿರ್ವಹಿಸಲು ಸಹಾಯ ಮಾಡುತ್ತವೆ. ಬ್ಯಾಂಕುಗಳ

> **ನಿಮಗಿದು ತಿಳಿದಿರಲಿ :**
>
> **ಜಂಟಿಖಾತೆ :** ಇಬ್ಬರು ಅಥವಾ ಹೆಚ್ಚಿನ ಜನರು ಒಂದೇ ಬ್ಯಾಂಕ್ ಖಾತೆ ತೆರೆದು ವ್ಯವಹರಿಸುವುದನ್ನು ಜಂಟಿಖಾತೆ ಎನ್ನುತ್ತಾರೆ.

ಸೇವೆಗಳನ್ನು ಪಡೆಯಲು ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಬ್ಯಾಂಕುಗಳಲ್ಲಿ ಖಾತೆಗಳನ್ನು ತೆಗೆಯುವುದು ಅವಶ್ಯಕ. ಬ್ಯಾಂಕುಗಳಲ್ಲಿ ಖಾತೆಗಳನ್ನು ತೆಗೆಯುವುದು ಅಷ್ಟೇನು ಕಷ್ಟಕರವಾದ ಕೆಲಸವಲ್ಲ. ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಯಲು ಏಳು ಹಂತಗಳಿವೆ. ಅವುಗಳೆಂದರೆ :

1. **ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು :** ಬ್ಯಾಂಕುಗಳಲ್ಲಿ ಅನೇಕ ರೀತಿಯ ಖಾತೆಗಳಿವೆ. ಉಳಿತಾಯ ಖಾತೆ, ಚಾಲ್ತಿಖಾತೆ, ಆವರ್ತಖಾತೆ ಮತ್ತು ನಿಶ್ಚಿತ ಅವಧಿಯ ಠೇವಣಿಖಾತೆ. ಬ್ಯಾಂಕಿನಲ್ಲಿ ಖಾತೆ ತೆರೆಯುವ ಮುನ್ನ ತಮ್ಮ ಅವಶ್ಯಕತೆಗೆ ಅನುಗುಣವಾಗಿ ಯಾವ ರೀತಿಯ ಖಾತೆ ತೆಗೆದರೆ ಉತ್ತಮವೆಂದು ನಿರ್ಧರಿಸ ಬೇಕಿದೆ.

2. **ನಿಮಗೆ ಅನುಕೂಲವಾದ ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು :** ಯಾವ ರೀತಿಯ ಖಾತೆಯನ್ನು ತೆಗೆಯ ಬೇಕೆಂದು ನಿರ್ಧರಿಸಿದ ಮೇಲೆ ನಿಮಗೆ ಸೂಕ್ತವೆನಿಸಿದ ಬ್ಯಾಂಕಿಗೆ ಹೋಗಿ ಅಲ್ಲಿನ ಅಧಿಕಾರಿಯನ್ನು ಭೇಟಿಮಾಡಿ ನಿಮ್ಮ ಇರಾದೆಯನ್ನು ತಿಳಿಸಬೇಕು.

3. **ಪ್ರಸ್ತಾವನೆ ಅರ್ಜಿ– ಖಾತೆ ತೆರೆಯುವ ಲೆಕ್ಕದ ನಮೂನೆಯನ್ನು ತುಂಬಿ :** ಈ ಪ್ರಸ್ತಾವನಾ ಅರ್ಜಿಯನ್ನು ಪೂರ್ಣವಾಗಿ ತುಂಬಿ, ಇದರಲ್ಲಿ ನಿಮ್ಮ ಹೆಸರು, ವಿಳಾಸ, ಉದ್ಯೋಗ, ವಯಸ್ಸು ಮುಂತಾದ ವಿವರಗಳಿದ್ದು ಈ ನಮೂನೆಯನ್ನು ಪೂರ್ಣವಾಗಿ ತುಂಬಬೇಕು. ಅರ್ಜಿಯ ಜೊತೆಗೆ ನಿಮ್ಮ ಎರಡು ಅಥವಾ ಮೂರು ಮಾದರಿ ಸಹಿಗಳನ್ನು ಮಾದರಿ ಸಹಿಗಳ ಕಾರ್ಡಿನಲ್ಲಿ ಮಾಡಬೇಕು. ಈ ಸಹಿಗಳನ್ನು ನೀವು ಯಾವಾಗ ಬ್ಯಾಂಕಿನ ಜೊತೆಯಲ್ಲಿ ವ್ಯವಹಾರ ಮಾಡುತ್ತೀರೋ ಆಗ ಅಲ್ಲಿ ಬದಲಾವಣೆ ಮಾಡದೆ ಮಾಡಬೇಕಾಗುತ್ತದೆ. ಇತ್ತೀಚಿನ ನಿಮ್ಮ ಎರಡು ಅಥವಾ ಮೂರು ಭಾವ ಚಿತ್ರಗಳನ್ನು ಲಗತ್ತಿಸಬೇಕಾಗುತ್ತದೆ. ಎರಡು ಅಥವಾ ಮೂರು ಜನರು ಕೂಡಿ ಒಟ್ಟಿಗೆ ಖಾತೆಯನ್ನು (Joint Account) ತೆರೆಯಬೇಕಾದರೆ ಎಲ್ಲರ ಸಹಿಗಳು, ಭಾವ ಚಿತ್ರಗಳು, ವಿವರಗಳು ಬೇಕಾಗುತ್ತದೆ.

4. **ಪರಿಚಿತರ ಉಲ್ಲೇಖನವನ್ನು ಕೊಡುವುದು:** ಬ್ಯಾಂಕಿನ ಖಾತೆಯನ್ನು ತೆಗೆಯಲು ಆ ಬ್ಯಾಂಕಿನಲ್ಲಿ ಈಗಾಗಲೇ ಖಾತೆ ಹೊಂದಿರುವವರ ಅಥವಾ ಗೌರವಾನ್ವಿತ ವ್ಯಕ್ತಿಗಳ ಪರಿಚಯವನ್ನು ಅರ್ಜಿ ನಮೂನೆಯಲ್ಲಿ ನಮೂದಿಸಿ ಅವರ ಸಹಿಗಳನ್ನು ಮಾಡಿಸಬೇಕಾಗುತ್ತದೆ. ಈ ಪರಿಚಯವು ಬ್ಯಾಂಕಿನ ರಕ್ಷಣಾದೃಷ್ಟಿಯಿಂದ ಅವಶ್ಯಕವಾಗಿರುತ್ತದೆ.

5. **ಬ್ಯಾಂಕು ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು:** ಬ್ಯಾಂಕು ಖಾತೆ ತೆಗೆಯುವ ನಮೂನೆಯನ್ನು ಎಲ್ಲ ರೀತಿಗಳಲ್ಲೂ ಭರ್ತಿ ಮಾಡಿದ ಮೇಲೆ ಅದಕ್ಕೆ ಸಂಬಂಧ ಪಟ್ಟ ಅಡಕಗಳನ್ನು ಲಗತ್ತಿಸಿ ಬ್ಯಾಂಕಿಗೆ ಸಲ್ಲಿಸಿ.

6. **ಅಧಿಕಾರಿಯ ಒಪ್ಪಿಗೆ :** ನಾವು ಸಲ್ಲಿಸಿದ ಮಾಹಿತಿಯು ಅಧಿಕಾರಿಗೆ ಎಲ್ಲ ರೀತಿಯಲ್ಲೂ ಸಮಂಜಸವಾಗಿದೆ ಎಂದು ಮನವರಿಕೆಯಾದರೆ ಖಾತೆ ತೆರೆಯಲು ಅನುಮತಿ ಕೊಡುತ್ತಾನೆ. ಅಡಕಗಳಲ್ಲಿ ಮುಖ್ಯವಾದುವು ಗುರುತಿನ ಚೀಟಿ, ಇತ್ತೀಚಿನ ವಿಳಾಸ ಗುರುತು, ಪಾನ್‌ಕಾರ್ಡ್ ಮತ್ತು ಆಧಾರ್ ಕಾರ್ಡ್ ಇತ್ಯಾದಿ.

7. **ಪ್ರಾರಂಬಿಕ ಠೇವಣಿ :** ಪ್ರಸ್ತಾವನಾ ಅರ್ಜಿಯನ್ನು ಎಲ್ಲ ರೀತಿಯಲ್ಲೂ ಪರಿಶೀಲಿಸಿದ ನಂತರ ಅಧಿಕಾರಿಯು ಪ್ರಾರಂಭಿಕ ಠೇವಣಿಯನ್ನು ಬ್ಯಾಂಕಿನಲ್ಲಿ ಕಟ್ಟಲು ಹೇಳುತ್ತಾನೆ. ಈ ಹಣ ಪಾವತಿಗೆ ಒಂದು ನಮೂನೆ ಇದ್ದು ಇದನ್ನು ಚಲನ್ ಎಂದು ಕರೆಯುತ್ತೇವೆ. ನಿಶ್ಚಿತ ಠೇವಣಿ ಖಾತೆಯಾದರೆ ಮತ್ತೊಂದು ಅರ್ಜಿಯನ್ನು ಭರ್ತಿಮಾಡಬೇಕಾಗುತ್ತದೆ. ಆವರ್ತ ಖಾತೆಗೆ ಪಾಸ್ ಪುಸ್ತಕವನ್ನು

ಕೊಡಲಾಗುತ್ತದೆ. ಉಳಿತಾಯ ಖಾತೆ ಅಥವಾ ಚಾಲ್ತಿ ಖಾತೆ ಆದಲ್ಲಿ ಹಣ ಹಿಂದಕ್ಕೆ ಪಡೆಯಲು ಅನುಕೂಲವಾಗುವಂತೆ ಚೆಕ್ ಪುಸ್ತಕವನ್ನು ಕೊಡಲಾಗುತ್ತದೆ.

ಬ್ಯಾಂಕು ಖಾತೆಯನ್ನು ತೆಗೆಯುವುದರಿಂದ ಆಗುವ ಅನುಕೂಲಗಳು :

- ಬ್ಯಾಂಕು ಖಾತೆಯು ಹಣದ ಭದ್ರತೆ ಕಾಪಾಡುತ್ತದೆ.
- ಬ್ಯಾಂಕು ಖಾತೆಯು ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.
- ಬ್ಯಾಂಕು ಖಾತೆಯು ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.
- ಬ್ಯಾಂಕು ಖಾತೆಯನ್ನು ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ.
- ಬ್ಯಾಂಕು ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯಮಾಡಿಕೊಡುತ್ತದೆ.
- ಬ್ಯಾಂಕು ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು.

ಬ್ಯಾಂಕು ವ್ಯವಹಾರಗಳು :

ಬ್ಯಾಂಕು ಈ ಕೆಳಗಿನ ಮುಖ್ಯ ವ್ಯವಹಾರಗಳನ್ನು ನಿರ್ವಹಿಸುತ್ತದೆ.

- ಉಳಿತಾಯ ಖಾತೆಗಳನ್ನು ತೆರೆಯುವುದರ ಮೂಲಕ ಗ್ರಾಹಕರಲ್ಲಿ ಉಳಿತಾಯಕ್ಕೆ ಬೆಂಬಲ ನೀಡುತ್ತದೆ.
- ಬ್ಯಾಂಕು ಉಳಿತಾಯಗಳನ್ನು ಒಟ್ಟುಗೂಡಿಸಿ ಸಾಲಗಳನ್ನು ನೀಡುತ್ತದೆ.
- ಬ್ಯಾಂಕು ಖಾತೆ ಹೊಂದಿರುವವರ ಹೆಸರಿನ ಕ್ರಾಸ್ ಮಾಡಿದ ಚೆಕ್ಕುಗಳು ಮತ್ತು ಹುಂಡಿಗಳನ್ನು ಅವರ ಖಾತೆಗೆ ಮಾತ್ರ ಜಮಾ ಮಾಡುತ್ತದೆ ಹಾಗೂ ಅವರ ಹೆಸರಿನ ಚೆಕ್ಕು ಅಥವಾ ಹುಂಡಿಗಳನ್ನು ಬೇರೆ ಬ್ಯಾಂಕುಗಳಿಂದ ವಸೂಲು ಮಾಡುತ್ತದೆ.
- ಹಣವನ್ನು ಚೆಕ್ಕಿನ ಮೂಲಕವಾಗಲಿ ಅಥವಾ ಬ್ಯಾಂಕಿನಲ್ಲಿ ನಿಗದಿತ ಹಣ ಹಿಂಪಡೆಯುವ ಚೀಟಿಯ ಮೂಲಕವಾಗಲಿ ವಾಪಸ್ಸು ಪಡೆಯಬಹುದು. ಹಣವನ್ನು ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಪಡೆಯಬೇಕಾದರೆ ಠೇವಣಿದಾರನು ಖುದ್ದಾಗಿ ಬ್ಯಾಂಕಿಗೆ ಹೋಗಿ ಹಣವನ್ನು ಹಿಂಪಡೆಯಬಹುದು. ಹಣ ಹಿಂದಕ್ಕೆ ಪಡೆಯಲು ಇತ್ತೀಚಿಗೆ ATM (Automatic Teller Machine) ನ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡುಗಳು ರೂಢಿಯಲ್ಲಿ ಬಂದಿವೆ.
- ಖಾತೆದಾರನು ಬ್ಯಾಂಕಿನ ಒಂದು ಸ್ಥಿರ ಆದೇಶದ ಮೂಲಕ ನಿಯತಕಾಲಿಕ ಸಂದಾಯಗಳನ್ನು ಮಾಡಲು ಆದೇಶಿಸಬಹುದು. ಉದಾ : ವಿಮಾ ಕಂತಿನ ಪಾವತಿ, ವರಮಾನ ತೆರಿಗೆ ಪಾವತಿ, ವಿದ್ಯುಚ್ಛಕ್ತಿ ಬಿಲ್ಲು, ದೂರವಾಣಿ ಬಿಲ್ಲು ಮುಂತಾದುವು. ಈ ಸಂದಾಯಗಳು ಖಾತೆದಾರನ ಖಾತೆಯಲ್ಲಿ ಖರ್ಚಾಗುತ್ತವೆ.
- ಖಾತೆದಾರನಿಗೆ ಗೊತ್ತುಪಡಿಸಿರುವ ದರಗಳಲ್ಲಿ ದಿನವಹಿ, ಮಾಹೆಯಾನ, ತ್ರೈಮಾಸಿಕ, ಅರ್ಧವಾರ್ಷಿಕ ಹಾಗೂ ವಾರ್ಷಿಕವಾಗಿ ಬಡ್ಡಿಯನ್ನು ಅವರ ಖಾತೆಗೆ ಜಮಾ ಮಾಡಲಾಗುತ್ತದೆ. ಸಾಮಾನ್ಯವಾಗಿ ಅರ್ಧವರ್ಷಕ್ಕೊಮ್ಮೆ ಏಪ್ರಿಲ್ ಮತ್ತು ಅಕ್ಟೋಬರ್‌ಗಳಲ್ಲಿ ಅಥವಾ ಫೆಬ್ರವರಿ ಮತ್ತು ಜುಲೈ ತಿಂಗಳುಗಳಲ್ಲಿ ಈ ಬಡ್ಡಿಯನ್ನು ಜಮಾಮಾಡಲಾಗುತ್ತದೆ.

- ಬ್ಯಾಂಕು ಖಾತೆಗಳನ್ನು ಅದೇ ಬ್ಯಾಂಕಿನ ಇತರೆ ಶಾಖೆಗಳಿಗೆ ಖಾತೆದಾರರ ಆದೇಶದಂತೆ ಶಾಖೆಗಳಿಗೆ ವರ್ಗಾಯಿಸುವ ಅವಕಾಶ ಕಲ್ಪಿಸಲಾಗಿದೆ.
- ಬ್ಯಾಂಕಿನಲ್ಲಿ ಖಾತೆಗಳನ್ನು ಅಂತ್ಯ ಮಾಡಲು ಅವಕಾಶಗಳಿವೆ. ಇದಕ್ಕೆ ಕಾರಣಸಹಿತ ವಿನಂತಿ ಮಾಡಬೇಕಾಗುತ್ತದೆ. ಈ ರೀತಿ ಅಂತ್ಯಗೊಳಿಸಲು ಪಾಸ್‌ಪುಸ್ತಕ, ಉಳಿದಿರುವ ಚೆಕ್ಕು ಹಾಳೆಗಳು, ATM, ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡು ಮುಂತಾದವುಗಳನ್ನು ಹಿಂದಿರುಗಿಸ ಬೇಕಾಗುತ್ತದೆ. ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡುಗಳನ್ನು ಎರಡು ತುಂಡುಗಳಾಗಿ ಕತ್ತರಿಸಲಾಗುತ್ತದೆ.

ಅಭ್ಯಾಸಗಳು

I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.

1. ಬ್ಯಾಂಕ್ ಎಂಬ ಪದವು ಫ್ರೆಂಚಿನ __________ ಶಬ್ದದಿಂದ ಬಂದಿದೆ.
2. ಬ್ಯಾಂಕುಗಳ ಬ್ಯಾಂಕ್ __________ ಆಗಿದೆ.
3. ರಾಷ್ಟ್ರೀಕೃತ ಬ್ಯಾಂಕಿಗೆ ಉದಾಹರಣೆ __________ .
4. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು __________ ಇಲಾಖೆಯು ನೀಡುತ್ತದೆ.
5. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ __________.
6. ಠೇವಣಿಯನ್ನು ನಿಗಧಿತ ಅವಧಿಗೆ __________ ಖಾತೆಯಲ್ಲಿ ಇಡಬಹುದಾಗಿದೆ.

II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1. ಬ್ಯಾಂಕು ಎಂದರೇನು ?
2. ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಗಮನಿಸಬಹುದಾದ ಗುಣಲಕ್ಷಣಗಳ ಪಟ್ಟಿ ಮಾಡಿ.
3. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವುವು ?
4. ಬ್ಯಾಂಕ್ ಮತ್ತು ಗ್ರಾಹಕರ ಸಂಬಂಧವನ್ನು ತಿಳಿಸಿ.
6. ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ. ಕಾರಣ ಕೊಡಿ.
7. ಬ್ಯಾಂಕ್ ಖಾತೆ ತೆರೆಯುವುದರಿಂದಾಗುವ ಅನುಕೂಲಗಳಾವುವು ?

III. ಚಟುವಟಿಕೆ :

1. ನಿಮಗೆ ತಿಳಿದಿರುವ ಬ್ಯಾಂಕ್‌ಗಳ ಹೆಸರುಗಳ ಪಟ್ಟಿ ತಯಾರಿಸಿ.
2. ಬ್ಯಾಂಕಿಗೆ ಭೇಟಿ ನೀಡಿ ನಿಶ್ಚಿತ ಠೇವಣಿ ಖಾತೆಯಲ್ಲಿ ಠೇವಣಿ ಇಡುವ ಬಗ್ಗೆ, ಬಡ್ಡಿದರ ಹಿಂಪಡೆಯುವ ಕ್ರಮದ ಬಗ್ಗೆ ಮಾಹಿತಿ ಸಂಗ್ರಹಿಸಿ.

IV. ಯೋಜನೆ :

1. ಬ್ಯಾಂಕಿನಲ್ಲಿ ಖಾತೆ ತೆರೆಯುವ ಬಗ್ಗೆ ಬ್ಯಾಂಕ್ ವ್ಯವಸ್ಥಾಪಕರೊಂದಿಗೆ ಭೇಟಿ ನೀಡಿ ಕ್ರಮವನ್ನು ತಿಳಿದು ಅವಶ್ಯಕವಿದ್ದಲ್ಲಿ ಖಾತೆ ತೆರಿಯಿರಿ.

ಅಧ್ಯಾಯ – 2

ವಿಮೆ (Insurance)

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- ವಿಮೆಯ ಅರ್ಥ
- ವಿಮೆಯ ಅವಶ್ಯಕತೆ
- ವಿಮೆಯ ತತ್ವಗಳು
- ಜೀವವಿಮೆ ಮತ್ತು ಸಾಮಾನ್ಯ ವಿಮೆ
- ವಿಮೆಯ ಪ್ರಸ್ತಾಪ
- ವಿಮಾಪಾಲಿಸಿ
- ವಿಮಾಕಂತು
- ವಿಮೆಯ ಹಕ್ಕು ಸಾಧನೆ *(Claim)*

ಪ್ರಪಂಚದಲ್ಲಿ ಕಂಡು ಬರುವ ಮನುಷ್ಯ ವರ್ಗದವರನ್ನೂ ಸೇರಿಸಿ ಎಲ್ಲ ವಸ್ತುಗಳು ಒಂದಲ್ಲ ಒಂದು ರೀತಿಯ ಅಪಾಯಗಳಿಗೊಳಗಾಗುತ್ತವೆ. ಈ ವಸ್ತುಗಳು ಮನುಷ್ಯವರ್ಗದವರನ್ನು ಸೇರಿಸಿ ಪ್ರಾಣಿವರ್ಗಗಳಾಗಿರಬಹುದು, ಯಂತ್ರಗಳಾಗಿರಬಹುದು, ಕಟ್ಟಡಗಳಾಗಿರಬಹುದು. ಒಬ್ಬ ಮನುಷ್ಯ ಅಥವಾ ಪ್ರಾಣಿ ಆಕಸ್ಮಿಕವಾಗಿ ಗಾಯಗೊಳ್ಳಬಹುದು ಅಥವಾ ಸಾಯಬಹುದು. ಮನುಷ್ಯರಿಗೆ, ಪ್ರಾಣಿಗಳಿಗೆ, ವಸ್ತುಗಳಿಗೆ ಆಗುವ ಆಕಸ್ಮಿಕಗಳಿಂದ ಹೆಚ್ಚು ನಷ್ಟ ಸಂಭವಿಸಬಹುದು. ಈ ನಷ್ಟಗಳನ್ನು ಹಾನಿ ಎನ್ನುತ್ತೇವೆ. ಈ ಹಾನಿಗಳಿಂದ ಅಥವಾ ಕೇಡುಗಳಿಂದ ಆಗುವ ನಷ್ಟಗಳನ್ನು ತುಂಬಿಕೊಡಲು ವಿಮಾಸಂಸ್ಥೆಗಳು ರೂಢಿಯಲ್ಲಿ ಬಂದಿವೆ. ಅಂದರೆ ವಿಮಾಸಂಸ್ಥೆಗಳ ಪ್ರಾಥಮಿಕ ಕರ್ತವ್ಯ ಹಾನಿಯ ನಷ್ಟವನ್ನು ತುಂಬಿಕೊಡುವುದೇ ಆಗಿದೆ. ವಿಮಾ ಪಾಲಿಸಿಯನ್ನು ಪಡೆದು ವಿಮಾ ಕಂತುಗಳನ್ನು ಕಟ್ಟಿ ಅವುಗಳ ವಿನಿಮಯ ಮಾಡಿಕೊಳ್ಳುವುದ ಮೂಲಕ ಗಂಡಾಂತರಗಳನ್ನು ಬಗೆಹರಿಸಿಕೊಳ್ಳುವುದೇ ಆಗಿದೆ.

ವಿಮೆ ಎಂದರೇನು?

ಒಂದು ನಿರ್ಧಿಷ್ಟ ಹಣ ಮೌಲ್ಯದ ಕಂತನ್ನು ಪಾವತಿಸಿ ಒಬ್ಬ ಮನುಷ್ಯನು ತನಗಾಗಲೀ ಅಥವಾ ತನ್ನ ವಸ್ತುಗಳಿಗಾಗಲಿ ಒಳಗಾಗುವ ಕೆಲವು ಅಪಾಯಗಳಿಂದ ಅಥವಾ ಹಾನಿಗಳಿಂದ ರಕ್ಷಿಸಿಕೊಳ್ಳಲು ಒಂದು ಸಂಸ್ಥೆಯೊಡನೆ ಮಾಡಿಕೊಳ್ಳುವ ಒಪ್ಪಂದವಾಗಿದೆ. ಈ ಸಂಸ್ಥೆಯನ್ನು ವಿಮಾ ಸಂಸ್ಥೆ ಎನ್ನುತ್ತೇವೆ. ನಷ್ಟ ಪರಿಹಾರವನ್ನು ಕೊಡಲು ಒಪ್ಪುವವನನ್ನು ವಿಮಾಕರ್ತ (Insurer) ಎನ್ನುತ್ತೇವೆ. ನಷ್ಟ ಪರಿಹಾರ ಪಡೆಯುವವನನ್ನು ವಿಮದಾರ (Insured) ಎನ್ನುತ್ತೇವೆ.

ವಿಮಾಕರ್ತನು ವಿಮಾದಾರನಿಗಾಗಲಿ ಅಥವಾ ಅವನಿಂದ ನಾಮ ನಿರ್ದೇಶಿಸಿರುವ ವ್ಯಕ್ತಿಗಾಗಲಿ ವಿಮೆ ಮಾಡಿರುವ ಮೊತ್ತವನ್ನು ಹಕ್ಕಿನ ಮೂಲಕ ಕೊಡಬೇಕಾಗುತ್ತದೆ. ವಿಮಾ ಸಂಸ್ಥೆಯು ವಿಮಾ ಪಾಲಿಸಿಯ ಮೊತ್ತವನ್ನು ಅನಿರೀಕ್ಷಿತ ಸಂದರ್ಭಗಳಲ್ಲಿ ನಷ್ಟ ಭರ್ತಿ ಮಾಡಿಕೊಡಬೇಕಾಗುತ್ತದೆ. ಜೀವ ವಿಮೆಯು ಮನುಷ್ಯನ ಜೀವಕ್ಕೆ ಸಂಬಂಧಪಟ್ಟಿರುವುದಾಗಿರುತ್ತದೆ (ಮರಣ, ಅಶಕ್ತತೆ, ಅಪಘಾತ ಅಥವಾ ನಿವೃತ್ತಿ ಹೊಂದುವುದು). ಸಂಕ್ಷಿಪ್ತವಾಗಿ ಹೇಳುವುದಾದರೆ ವಿಮೆಯು ವಿಮಾ ಸಂಸ್ಥೆ ಮತ್ತು ವಿಮಾದಾರನ ಮಧ್ಯೆ ಏರ್ಪಡುವ ಒಂದು ಒಪ್ಪಂದವಾಗಿರುತ್ತದೆ.

ವಿಮೆಯ ಪ್ರಾಮುಖ್ಯತೆ :

- ವಿಮೆಯು ಅಪಾಯ, ಹಾನಿ ಅಥವಾ ಮರಣ ಸಂಭವನೀಯತೆಯನ್ನು ರಕ್ಷಿಸುತ್ತದೆ.
- ವಿಮೆಯು ಕಡ್ಡಾಯ ಉಳಿತಾಯವನ್ನು ಪ್ರೋತ್ಸಾಹಿಸುತ್ತದೆ.
- ವಿಮೆಯು ವಿಮಾದಾರನ ಅಭೀಷ್ಟತೆಯನ್ನು ಈಡೇರಿಸಲು ಸಹಾಯ ಮಾಡುತ್ತದೆ.
- ವಿಮೆಯು ಜೀವ ಮತ್ತು ವಸ್ತು ನಷ್ಟಗಳನ್ನು ಭರಿಸುವುದರಿಂದ ವಿಮಾದಾರನು ಶಾಂತವಾಗಿರಲು ಸಾಧ್ಯವಾಗುತ್ತದೆ.
- ವಿಮೆಯು ಜೀವ ನಷ್ಟದ ನಿವಾರಣೆಗೆ ಸಹಾಯಮಾಡುತ್ತದೆ.
- ವಿಮೆಯು ಸಾಮಾಜಿಕ ಒಳತಿಗಾಗಿ ಸಹಾಯಮಾಡುತ್ತದೆ.
- ವಿಮೆಯು ಹಣದ ಠೇವಣಿಗಳನ್ನು ಪ್ರೋತ್ಸಾಹಿಸುತ್ತದೆ.
- ವಿಮೆಯು ಋಣ ಸಂದಾಯಗಳಿಗೆ ಅನುವು ಮಾಡಿಕೊಡುತ್ತದೆ.
- ವಿಮೆಯು ಸಾಲಗಳನ್ನು ಕೊಡುತ್ತದೆ ಮತ್ತು ತೆರಿಗೆಗಳ ವಿನಾಯತಿಗೆ ಸಹಾಯ ಮಾಡುತ್ತದೆ.

ಜೀವ ವಿಮೆ ಏಕೆ ಬೇಕು?

- ಒಬ್ಬ ಮನುಷ್ಯನಿಗೆ ಏನಾದರು ವಿಪತ್ತು ಅಥವಾ ಅನಾಹುತ ಸಂಭವಿಸಿದಲ್ಲಿ ಆ ಮನುಷ್ಯನ ಕುಟುಂಬಕ್ಕೆ ತಕ್ಷಣಕ್ಕೆ ಬೇಕಾದ ಹಣದ ಸಂರಕ್ಷಣೆಗಾಗಿ.
- ಮಕ್ಕಳ ವಿದ್ಯಾಭ್ಯಾಸ ಅಥವಾ ಇತರೆ ಅವಶ್ಯಕತೆಗಳಿಗಾಗಿ.
- ನಿವೃತ್ತಿ ಹೊಂದಿದ ಮೇಲೆ ಒಂದು ನಿರಂತರ ಆದಾಯದ ಮೂಲಕ್ಕಾಗಿ ಅಥವಾ ಉಳಿತಾಯದ ಯೋಜನೆಗಾಗಿ.
- ಏನಾದರೂ ಅಪಘಾತ ಅಥವಾ ಗಂಬೀರ ಖಾಯಿಲೆಯಿಂದಾಗಿ ಆದಾಯ ಕುಂಠಿತಗೊಂಡಾಗ ಬೇಕಾಗುವ ಹಣದ ಭರವಸೆಗಾಗಿ.
- ಜೀವನ ಶೈಲಿಯ ಬದಲಾವಣೆಗಳಿಗೆ ಅನುಗುಣವಾಗಿ ಅಥವಾ ಇತರೆ ಏನಾದರೂ ಹಣದ ಅನಿಶ್ಚಿತತೆಯ ಸಂಭವಗಳಿಗಾಗಿ ವಿಮೆಯು ಬೇಕಾಗುತ್ತದೆ.

ವಿಮೆಯಲ್ಲಿ ಉಪಯೋಗಿಸುವ ಪದಗಳು :

ವಿಮಾ ಪಾಲಿಸಿ : ಇದು ವಿಮಾಕರ್ತ ಮತ್ತು ವಿಮಾದಾರನ ನಡುವೆ ಏರ್ಪಡುವ ಒಂದು ಬರವಣಿಗೆಯ ಮೂಲಕದ ಕರಾರು. ಇದರಲ್ಲಿ ಎಲ್ಲಾ ಕರಾರುಗಳು ಅಂದರೆ ಹಕ್ಕುಸಾಧನೆ, ಅವಧಿ, ನಾಮ ನಿರ್ದೇಶನ ವಿಮೆಯ ಅವಧಿ ಮುಗಿದ ನಂತರ ಕೊಡಬೇಕಾಗುವ ಹಣ, ವಿಮಾಕಂತು ಮುಂತಾದುವೆಲ್ಲವನ್ನು ತೋರಿಸಿರುತ್ತಾರೆ. ಇದನ್ನು ಜೀವ ವಿಮೆಗಾದರೆ ಜೀವ ವಿಮಾಬಾಂಡು ಎಂದೂ ಕರೆಯುತ್ತಾರೆ.

ಹಕ್ಕುಸಾಧನೆ (Claim) : ಇದು ವಿಮಾದಾರನಾಗಲೀ, ಅವನ ನಾಮನಿರ್ದೇಶಕನಾಗಲಿ ಅಥವಾ ನ್ಯಾಯಬದ್ಧ ಹಕ್ಕುದಾರನಾಗಲೀ ವಿಮಾಕರ್ತನಿಗೆ ಅವಧಿ ಮುಗಿದ ನಂತರ ಅಥವಾ ವಿಮಾ ಪಾಲಿಸಿಯ ರೀತ್ಯಾ ಅಪಘಾತ ಅಥವಾ ಹಾನಿ ಸಂಭವಿದಾಗ ವಿಮಾ ಸಂಸ್ಥೆಗೆ ವಿಮೆಯ ಹಣವನ್ನು ಪಾವತಿಸಲು ಕೇಳಿಕೊಳ್ಳುವ ಸಾಧನ.

ವಿಮಾವಂತಿಗೆ (Premium): ಜೀವ ವಿಮೆಯ ರಕ್ಷಣೆಗಾಗಿ ವಿಮಾದಾರನು ನಿರ್ದಿಷ್ಟ ಅವಧಿಯವರೆಗೂ ಜೀವವಿಮಾ ಸಂಸ್ಥೆಗೆ ಅವಧಿಗನುಗುಣವಾಗಿ ಪಾವತಿಸಬೇಕಾದ ವಂತಿಗೆಯಾಗಿದೆ. ಇದು ವಿಮಾ ಹಣಕ್ಕೆ ವಿಮಾದಾರನಿಗೂ ವಿಮಾಸಂಸ್ಥೆಗೂ ಮಧ್ಯ ನಿರ್ಧರಿಸಿರುವ ವಿನಿಮಯದ ಹಣವಾಗಿರುತ್ತದೆ.

ಜೀವವಿಮೆ ಮತ್ತು ಸಾಮಾನ್ಯ ವಿಮೆ ನಡುವೆ ಇರುವ ವ್ಯತ್ಯಾಸಗಳು :

ಜೀವವಿಮೆ	ಸಾಮಾನ್ಯವಿಮೆ
• ಜೀವವಿಮೆಯು ಒಬ್ಬ ಮನುಷ್ಯನ ಜೀವವನ್ನು ತುಂಬಿಕೊಡುವ ವಿಮೆಯಾಗಿದೆ.	• ಸಾಮಾನ್ಯ ವಿಮೆಯು ಜೀವವಿಲ್ಲದ ವಸ್ತುಗಳ ವಿಮೆಯಾಗಿದೆ.
• ಜೀವವಿಮೆಯು ವಿಮಾದಾರನಿಗಾಗಲೀ ಅಥವಾ ಅವನಿಂದ ನಿಯೋಜಿಸಲ್ಪಟ್ಟ ವಾರಸುದಾರರಿಗೆ ವಿಮಾ ಮೊತ್ತವನ್ನು ಒಂದು ಘಟನೆಯ ನಂತರ ಅಥವಾ ಮರಣ ಹೊಂದಿದ ನಂತರವಾಗಲಿ ನಾಮನಿರ್ದೇಶಕರಿಗೆ ರಕ್ಷಣೆಗಾಗಿ ನಿಯಮಿತವಾಗಿರುತ್ತದೆ.	• ಸಾಮಾನ್ಯ ವಿಮೆಯು ಯಾವುದಾದರೂ ವಸ್ತುಗಳ ಮೇಲೆ ವಿಮೆಮಾಡಿದ್ದು ಆ ವಸ್ತುಗಳು ನಾಶಹೊಂದಿದಲ್ಲಿ ಅದರ ನಷ್ಟಪರಿಹಾರವನ್ನು ವಿಮಾ ಕರ್ತನು ವಿಮಾದಾರನಿಗೆ ಕೊಡಲು ಒಪ್ಪಿರುತ್ತಾನೆ.
• ಜೀವವಿಮೆಯು ಅಜೀವ ವಿಮೆಪಾಲಿಸಿ ಎಂಡೋಮೆಂಟ್ ವಿಮೆ, ಅವಧಿ ವಿಮಾ ಪಾಲಿಸಿ, ವರ್ಷಾಶನ ಪಾಲಿಸಿ, ಆರೋಗ್ಯ ಪಾಲಿಸಿ ಮುಂತಾದವುಗಳಿಂದ ಕೂಡಿರುತ್ತದೆ.	• ಸಾಮಾನ್ಯ ವಿಮೆಯು ವಾಹನ ವಿಮೆ, ಬೆಂಕಿ ಅಪಘಾತ ವಿಮೆ, ಮನೆಯ ಮೇಲಿನ ವಿಮೆ, ಮುಂತಾದವುಗಳಿಂದ ಕೂಡಿರುತ್ತದೆ.
• ಜೀವವಿಮೆಯಲ್ಲಿ ಮರಣದ ವೇಳೆ ಅನಿಶ್ಚಿತವಾದರೂ ನಷ್ಟಪರಿಹಾರ ನಿಶ್ಚಿತವೆಂದು ಕರಾರಾಗುತ್ತದೆ. ಘಟನೆಯಾದಾಗವೆಂದು ಕರಾರರಾಗುತ್ತದೆ.	• ಸಾಮಾನ್ಯ ವಿಮೆಯಲ್ಲಿ ವಿಮೆಯ ಹಣವು ಅನಿಶ್ಚಿತ ಘಟನೆಯಾದಾಗ ಮಾತ್ರ ಸಾಧ್ಯವಾಗುತ್ತದೆ.
• ಜೀವವಿಮೆಯು ಸಾಮಾನ್ಯವಾಗಿ ದೀರ್ಘ ಕಾಲದಿಂದ ಕೂಡಿರುತ್ತದೆ.	• ಸಾಮಾನ್ಯ ವಿಮೆಯು ಅಲ್ಪ ಕಾಲಿಕವಾದುದು.
• ಜೀವವಿಮಾ ಕರಾರಿನಲ್ಲಿ ವಿಮಾರ್ಹ ಆಸಕ್ತಿ ಪಾಲಿಸಿ ತೆಗೆದುಕೊಂಡಾಗ ಸೇರಿರಲೇಬೇಕು.	• ವಿಮಾರ್ಹ ಆಸಕ್ತಿ ವಿಮತೆಗೆದು–ಕೊಂಡಾಗ ಮತ್ತು ನಷ್ಟ ಆದಾಗ ಇರುತ್ತದೆ.
• ಜೀವವಿಮೆಯಲ್ಲಿ ವಿಮಾಕಂತು ಮಾಸಿಕ, ಅರ್ಧ ವಾರ್ಷಿಕ ಅಥವಾ ವಾರ್ಷಿಕವಾಗಿ ಅವಧಿ ಮುಗಿಯುವ ತನಕ ಪಾವತಿ ಆಗುತ್ತದೆ.	• ಸಾಮಾನ್ಯವಿಮೆಯಲ್ಲಿ ವಿಮಾಕಂತು ಪಾಲಿಸಿತೆಗೆದುಕೊಂಡ ತಕ್ಷಣ ಒಮ್ಮೆಗೇನೇ ಪಾವತಿಸಬೇಕಾಗುತ್ತದೆ.
• ಜೀವವಿಮೆಯಲ್ಲಿ ನಷ್ಟ ಪರಿಹಾರ ತತ್ವ ಸೇರಿರುವುದಿಲ್ಲ.	• ಸಾಮಾನ್ಯ ವಿಮೆಯಲ್ಲಿ ನಷ್ಟ ಪರಿಹಾರ ತತ್ವ ಸೇರಿರುತ್ತದೆ.

ವಿಮೆಯ ತತ್ವಗಳು (Principles of Insurance) : ಪ್ರತಿಯೊಂದು ವಿಮೆಯ ಕರಾರು ವಿಮಾದಾರನಿಗೆ ಮುಂಬರುವ ಅನಿರೀಕ್ಷಿತ ಘಟನೆಗಳಿಗೆ ಹಣಕಾಸಿನ ರಕ್ಷಣೆಯಿಂದ ಕೂಡಿರುತ್ತದೆ. ವಿಮಾಕರ್ತನು ಈ ಹಣಕಾಸನ್ನು ತುಂಬಿಕೊಡುವ ತನ್ನ ಕರ್ತವ್ಯವನ್ನು ಎಂದೂ ಮರೆಯಬಾರದು. ವಿಮಾಕರ್ತನು ವಿಮೆಯನ್ನು ಪಾಲಿಸಲು ಕೆಳಗಿನ ತತ್ವಗಳನ್ನು ಪಾಲಿಸಬೇಕು.

- ಅತ್ಯಧಿಕ ವಿಶ್ವಾಸಾರ್ಹತೆಯ ತತ್ವ.
- ವಿಮಾರ್ಹ ಹಿತಾಸಕ್ತಿ
- ನಷ್ಟ ಪರಿಹಾರ ತತ್ವ
- ಕೊಡುಗೆಯ ತತ್ವ
- ಸಮಾನ ಅನುಭೋಗದ ತತ್ವ
- ಕನಿಷ್ಟ ನಷ್ಟಶಮನ ತತ್ವ.
- ನಿಕಿಟಕಾರಣ ತತ್ವ

ಅತ್ಯಧಿಕ ವಿಶ್ವಾಸಾರ್ಹತೆಯ ತತ್ವ : ಈ ತತ್ವವು ಮೂಲಭೂತ ಮತ್ತು ಪ್ರಾಥಮಿಕ ತತ್ವವಾಗಿರುತ್ತದೆ. ಇದರ ಪ್ರಕಾರ ವಿಮೆಯ ಕರಾರಿಗೆ ವಿಮಾಕರ್ತ ಮತ್ತು ವಿಮಾದಾರ ಇಬ್ಬರೂ ಸಹಿಹಾಕಿರಬೇಕು ಮತ್ತು ಒಬ್ಬರಲ್ಲೊಬ್ಬರಿಗೆ ವಿಶ್ವಾಸಾರ್ಹತೆಯಿರಬೇಕು.

ವಿಮಾರ್ಹ ಹಿತಾಸಕ್ತಿ : ಇದರ ಪ್ರಕಾರ ವಿಮಾದಾರನಿಗೆ ವಿಮೆ ಮಾಡುತ್ತಿರುವ ವಸ್ತುವಿನ ಮೇಲೆ ವಿಮಾರ್ಹ ಹಿತಾಸಕ್ತಿ ಇರಬೇಕಾಗುತ್ತದೆ.

ನಷ್ಟ ಪರಿಹಾರ ತತ್ವ : ನಷ್ಟ ಪರಿಹಾರ ಅಂದರೆ ರಕ್ಷಣೆ, ಪೋಷಣೆ ಮತ್ತು ಪರಿಹಾರಗಳನ್ನು ಹಾನಿ ಅಥವಾ ನಷ್ಟವನ್ನು ಭವಿಷ್ಯತ್ ಕಾಲದಲ್ಲಿ ಕೊಡುವುದೇ ಆಗಿದೆ. ಇದರ ಪ್ರಕಾರ ವಿಮಾ ಒಪ್ಪಂದವು ಅಸಂಭವನೀಯ ಹಣಕಾಸಿನ ನಷ್ಟ ಆದಾಗ ರಕ್ಷಣೆ ಕೊಡುವುದೇ ಆಗಿದೆ.

ಕೊಡುಗೆಯ ತತ್ವ : ಈ ತತ್ವವು ವಿಮಾಕರಾರಿನ ಇಬ್ಬರು ವ್ಯಕ್ತಿಗಳಿಗೂ ಅನ್ವಯವಾಗುತ್ತದೆ. ವಿಮಾದಾರನು ವಾಸ್ತವ ನಷ್ಟಕ್ಕಿಂತ ಹೆಚ್ಚು ಪರಿಹಾರ ಪಡೆಯಲು ಸಾಧ್ಯವಿಲ್ಲ ಹಾಗೂ ವಿಮಾಕರ್ತ ಈ ನಷ್ಟವನ್ನು ಕಟ್ಟಿಕೊಡಲೇಬೇಕಾಗುತ್ತದೆ. (ಈ ತತ್ವವು ಸಾಮಾನ್ಯವಿಮೆಗೆ ಅನ್ವಯವಾಗುತ್ತದೆ)

ಸಮಾನ ಅನುಭೋಗದ ತತ್ವ : ಈ ತತ್ವದಂತೆ ವಿಮೆಗೊಳಿಸಲಾದ ಸ್ವತ್ತು ನಾಶಗೊಂಡಾಗ ವಿಮೆಮಾಡಿದವನ ನಷ್ಟವನ್ನು ವಿಮಾಕರ್ತ ಪೂರ್ಣವಾಗಿ ಸಲ್ಲಿಸುವಂತೆ ಮತ್ತು ವಿಮಾದಾರ ಪೂರ್ಣವಾಗಿ ಪಡೆಯುವ ಎಲ್ಲ ಹಕ್ಕುಗಳನ್ನು ಹೊಂದಿರುತ್ತದೆ.

ಕನಿಷ್ಟ ನಷ್ಟಶಮನ ತತ್ವ : ಈ ತತ್ವದ ಪ್ರಕಾರ ವಿಮಾದಾರನು ಯಾವಾಗಲೂ ವಿಮ ಮಾಡಿಸುವ ಸ್ವತ್ತನ್ನು ಹಾನಿಗಳಿಂದಾಗುವ ನಷ್ಟವನ್ನು ಕಡಿಮೆ ಮಾಡುವಂತಿರಬೇಕು.

ನಿಕಟ ಕಾರಣ ತತ್ವ : ಈ ತತ್ವದ ಪ್ರಕಾರ ವಿಮಾದಾರನಿಗೆ ಯಾವ ವಸ್ತುಗಳ ಮೇಲೆ ನಷ್ಟದ ವಿರುದ್ಧ ವಿಮೆ ಮಾಡಲಾಗಿಯೋ ಆ ನಷ್ಟವನ್ನು ಮಾತ್ರ ವಿಮಾಕರ್ತನು ಕಟ್ಟಿಕೊಡಬೇಕಾಗುತ್ತದೆ.

ವಿಮಾಪಾಲಿಸಿಯ ಪ್ರಕಾರಗಳು : (Kinds of insurance policies)

- ಕಾಲಮಿತಿವಿಮೆ
- ಜೀವಮಾನ ದತ್ತಿ ವಿಮಾ ಪಾಲಿಸಿ
- ಹಣ ಮರು ಪಾವತಿ ವಿಮೆ
- ಮಕ್ಕಳ ಭವಿಷ್ಯ ವಿಮೆ
- ವಾರ್ಷಿಕ (ನಿವೃತ್ತಿ) ಮರುಪಾವತಿ ಪಾಲಿಸಿ
- ಷೇರುಗಳ ಮೌಲ್ಯಧಾರಿತ ವಿಮಾ ಪಾಲಿಸಿ

ವಿಮಾ ಸಂಸ್ಥೆಗಳಿಂದಾಗುವ ಅನುಕೂಲಗಳು

ಚಟುವಟಿಕೆ :

ವಿಮಾ ಏಜೆಂಟುದಾರರನ್ನು ಶಾಲೆಗೆ ಆಹ್ವಾನಿಸಿ ವಿಮಾಪಾಲಿಸಿಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಿರಿ.

- ಅನೇಕರಿಗೆ ಯುಕ್ತ ಅಥವಾ ವಿವೇಚನೆಯ ಲಾಭಗಳಿಕೆ ಆಗುತ್ತದೆ.
- ಜನರಿಗೆ ರಕ್ಷಣಾ ಮನೋಭಾವ ಉಂಟಾಗುತ್ತದೆ.
- ಅನೇಕರಿಗೆ ಉದ್ಯೋಗಾವಕಾಶ ದೊರೆಯುತ್ತದೆ.
- ಆಸ್ತಿ ಅಥವಾ ಸ್ವತ್ತಿನ ಸುರಕ್ಷತೆ ಉಂಟಾಗುತ್ತದೆ.
- ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುತ್ತದೆ.
- ಐಶ್ವರ್ಯವಂತರಿಗೂ ಬಡವರಿಗೂ ತಾರತಮ್ಯ ಇರುವುದಿಲ್ಲ.
- ಸಂಶೋಧನಾಕಾರ್ಯಗಳಿಗೆ ಸಹಾಯ ಮಾಡುತ್ತವೆ.
- ನಷ್ಟಕ್ಕೆ ಈಡಾಗುವುದನ್ನು ತಪ್ಪಿಸುತ್ತದೆ.
- ಆರ್ಥಿಕ ಬೆಳವಣಿಗೆಗೆ ಉತ್ತೇಜನ ಕೊಡುತ್ತದೆ.
- ರಕ್ಷಣೆಯ ಭರವಸೆ ಕೊಡುತ್ತದೆ.
- ವ್ಯಾಪಾರ ಪೈಪೋಟಿಯನ್ನು ಉತ್ತೇಜಿಸುತ್ತದೆ.
- ಅಂತರ ರಾಷ್ಟ್ರೀಯ ವ್ಯಾಪಾರವನ್ನು ಪ್ರೋತ್ಸಾಹಿಸುತ್ತದೆ.

ವಿಮಾ ಪಾಲಿಸಿಯನ್ನು ತೆಗೆದುಕೊಳ್ಳಲು ಅನುಸರಿಸಬೇಕಾದ ವಿಧಾನ

- ಯಾವ ವಿಮಾಸಂಸ್ಥೆಯಿಂದ ವಿಮಾಪಾಲಿಸಿ ಪಡೆಯಬೇಕೆಂದಿರುವಿರೋ ಅದನ್ನು ಗುರ್ತಿಸಿ.
- ನೀವು ತೆಗೆದುಕೊಳ್ಳಲು ಇಷ್ಟಪಡುವ ವಿಮೆಯ ವೆಚ್ಚ ಮತ್ತು ವಂತಿಗೆಗಳನ್ನು ವಯಸ್ಸಿಗನುಗುಣವಾಗಿ ತಿಳಿದುಕೊಳ್ಳಿ.
- ಅರ್ಜಿ ನಮೂನೆಯನ್ನು ಪಡೆದುಕೊಳ್ಳಿ. ಇದನ್ನು ಪ್ರಪೋಸಲ್ ಫಾರಂ ಎನ್ನುತ್ತಾರೆ.
- ಪ್ರಪೋಸಲ್ ಫಾರಂನ್ನು ಪೂರ್ಣವಾಗಿ ಭರ್ತಿ ಮಾಡಿ, ಈ ಅರ್ಜಿ ನಮೂನೆಯಲ್ಲಿ ಮೂಲಭೂತ ವಿವರಗಳಾದ ವಯಸ್ಸು, ವಿಳಾಸ, ನಾಮ ನಿರ್ದೇಶನ, ವಿಮೆಯ ಅವಧಿ, ಯಾವ ರೀತಿಯ ವಿಮೆ, ಉದ್ಯೋಗದಾತನ ವಿವರಗಳು, ವೈಯುಕ್ತಿಕ ವಿವರಗಳಾದ ತೂಕ, ಎತ್ತರ, ಜನ್ಮ ದಿನಾಂಕ, ಆದಾಯದ ವಿವರ, ಕುಟುಂಬದ ಸದಸ್ಯರ ವಿವರ ಮುಂತಾದುವೆಲ್ಲ ಸೇರಿರುತ್ತದೆ.
- ವಿವರಗಳನ್ನೆಲ್ಲ ಕರಾರುವಾಕ್ಕಾಗಿ ಭರ್ತಿಮಾಡಿ, ಇದಕ್ಕೆ ವಿಮಾ ಸಂಸ್ಥೆಯ ಅಧಿಕಾರಿಗಳಿಂದಾಗಲೀ ಅಥವಾ ಏಜೆಂಟರಿಂದಾಗಲೀ ಸಹಾಯ ಪಡೆಯಿರಿ.
- ವಿಮಾ ಕಂತಿನ ಹಣದೊಂದಿಗೆ ಪಾಲಿಸಿಯ ಜೊತೆಯಲ್ಲಿ ಲಗತ್ತಿಸಬೇಕಾದ ಪತ್ರಗಳೊಂದಿಗೆ ತಲುಪಿಸಿ.
- ವಿಮಾ ಸಂಸ್ಥೆ ನಿಮ್ಮ ಅರ್ಜಿ ನಮೂನೆಯಲ್ಲಿ ನೀವು ಕೊಟ್ಟಿರುವ ವಿವರಗಳನ್ನೆಲ್ಲ ಪರಾಮರ್ಶಿಸಿ ಕೆಲವು ದಿನಗಳಲ್ಲಿ ನಿಮಗೆ ವಿಮಾ ಬಾಂಡನ್ನು ಕಳುಹಿಸಲಾಗುತ್ತದೆ.
- ವಿಮಾ ಬಾಂಡು ಬಂದ ನಂತರ ನಿಮ್ಮ ವಿಮಾ ಪಾಲಿಸಿ ಅಂಗೀಕಾರವಾಗಿದೆಯೆಂದು ತಿಳಿದು, ಈ ಬಾಂಡನ್ನು ಸರಕ್ಷಿತವಾಗಿಡಿ.

ಅಭ್ಯಾಸಗಳು

I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಭರ್ತಿ ಮಾಡಿ.

1. ನಷ್ಟ ಪರಿಹಾರವನ್ನು ಕೊಡಲು ಒಪ್ಪುವವನನ್ನು __________ ಎನ್ನುತ್ತೇವೆ.
2. ನಷ್ಟ ಪರಿಹಾರವನ್ನು ಪಡೆಯುವವನನ್ನು __________ ಎನ್ನುತ್ತೇವೆ.
3. ಮನುಷ್ಯನ ಜೀವವನ್ನು ತುಂಬಿಕೊಡುವ ವಿಮೆ __________ ಆಗಿದೆ.
4. ವಾಹನ ವಿಮೆಯು __________ ವಿಮೆ ಆಗಿರುತ್ತದೆ.

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1. ವಿಮೆ ಎಂದರೇನು ?
2. ವಿಮೆಯ ಪ್ರಾಮುಖ್ಯತೆಯನ್ನು ವಿವರಿಸಿ.
3. ವಿಮಾಪಾಲಿಸಿಯು ಹೊಂದಿರುವ ಅಂಶಗಳನ್ನು ಪಟ್ಟಿ ಮಾಡಿ.
4. ಜೀವ ವಿಮೆಯ ಅವಶ್ಯಕತೆಯನ್ನು ವಿಶ್ಲೇಷಿಸಿ.
5. ಜೀವ ವಿಮೆ ಮತ್ತು ಸಾಮಾನ್ಯ ವಿಮೆಯ ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಿ.
6. ವಿಮಾ ಕರ್ತನು ಅನುಸರಿಸಬೇಕಾದ ತತ್ವಗಳಾವುವು ?
7. ವಿಮಾ ಸಂಸ್ಥೆಗಳಿಂದಾಗುವ ಪ್ರಯೋಜನಗಳಾವುವು ?
8. ವಿಮಾ ಪಾಲಿಸಿ ಪಡೆಯುವಾಗ ಅನುಸರಿಸಬೇಕಾದ ವಿಧಾನಗಳಾವುವು ?

III. ಚಟುವಟಿಕೆ :

1. ಪ್ರಸ್ತುತ ಜಾರಿಯಲ್ಲಿರುವ ಯಾವುದಾದರೊಂದು ವಿಮಾ ಸಂಸ್ಥೆಗೆ ಭೇಟಿ ನೀಡಿ ವಿಮೆ ಪಡೆಯುವ ಕ್ರಮವನ್ನು ತಿಳಿಯಿರಿ.
2. ಜೀವವಿಮೆಯಲ್ಲಿರುವ ವಿವಿಧ ಪಾಲಸಿಗಳ ಹೆಸರುಗಳನ್ನು ಸಂಗ್ರಹಿಸಿ.

IV. ಯೋಜನೆ :

1. ವಿಮಾ ಏಜೆಂಟರನ್ನು ಭೇಟಿ ಮಾಡಿ ಯಾವುದಾದರೊಂದು ಪಾಲಿಸಿಗೆ ಸಂಬಂಧಿಸಿದಂತೆ ಮಾಸಿಕ ಪಾವತಿಸಬೇಕಾದ ಕಂತು ಹಾಗೂ ಅಂತಿಮವಾಗಿ ಬರುವ ಮೊತ್ತದ ಲೆಕ್ಕಾಚಾರವನ್ನು ನಿರ್ವಹಿಸಿ.

ಅಧ್ಯಾಯ – 3

ಉದ್ಯಮಗಾರಿಕೆ (Entrepreneurship)

ಈ ಅಧ್ಯಾಯದಲ್ಲಿ ಈ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- ಉದ್ಯಮಗಾರಿಕೆಯ ಅರ್ಥ
- ಉದ್ಯಮಗಾರಿಕೆಯ ಪಾತ್ರ ಮತ್ತು ಪ್ರಾಮುಖ್ಯತೆ.
- ಸ್ವಯಂ ಉದ್ಯೋಗ ಅವಕಾಶಗಳು.
- ಸ್ವಯಂ ಉದ್ಯೋಗದ ವ್ಯವಸ್ಥೆ.
- ಕೆಲವು ಪ್ರಮುಖ ಉದ್ದಿಮೆದಾರರು

ಇಂದಿನ ಆರ್ಥಿಕ ಮಾರುಕಟ್ಟೆಯ ಮಂಚೂಣಿಯಲ್ಲಿ ಉದ್ಯಮಗಾರಿಕೆ ಪ್ರಮುಖಪಾತ್ರ ವಹಿಸುತ್ತದೆ. ಇದು ಪ್ರಮುಖ ಆರ್ಥಿಕ ಚಟುವಟಿಕೆಗಳಾದ ಭೂಮಿ, ದುಡಿಮೆ, ಬಂಡವಾಳ ಮತ್ತು ಸಂಘಟನೆಗಳಲ್ಲಿ ಒಂದಾಗಿದೆ. ಒಂದು ದೇಶದ ವ್ಯಾಪಾರ ಪರಿಸ್ಥಿತಿ ಮತ್ತು ಕೈಗಾರಿಕಾ ಕ್ಷೇತ್ರದ ಬದಲಾವಣೆಗಳಲ್ಲಿ ಪ್ರಭಲವಾದ ಅಂಶವಾಗಿದೆ.

ಉದ್ಯಮಿಯ ಅರ್ಥ :

ಉದ್ಯಮಿ, ಎಂಬ ಪದವು ಫ್ರೆಂಚ್ ಪದ "ಎಂಟ್ರ ಪ್ರೆಂಡೆ"ಯಿಂದ ಬಂದಿದೆ. ಅಂದರೆ ಒಂದು ಚಟುವಟಿಕೆಯನ್ನು ಕೈಗೆತ್ತಿಕೊಳ್ಳುವವ ಎಂದಾಗಿದೆ. ಉದ್ಯಮಿಯು ಹೊಸ ಕಲ್ಪನೆಯನ್ನು ವ್ಯವಹಾರದಲ್ಲಿ ರೂಢಿಗೆ ತರುವವನಾಗಿದ್ದು, ಇವನಲ್ಲಿ ವ್ಯವಹಾರ ನಿರ್ವಹಿಸಲು ಆಡಳಿತ ನಿರ್ವಹಣೆಯ ಕೌಶಲ್ಯ ಮತ್ತು ತಂಡವನ್ನು ನಿರ್ಮಿಸುವ ಸಾಮರ್ಥ್ಯ ಮತ್ತು ಮುಂದಾಳತ್ವದ ಗುಣಗಳು ಇರುತ್ತವೆ. (ಉದ್ಯಮಿಯನ್ನು ಉದ್ಯಮ ಶೀಲ ಅಥವಾ ಉದ್ದಿಮೆಗಾರ ಎಂದೂ ಕರೆಯುತ್ತಾರೆ).

ಉದ್ಯಮಿಯು ಯಾವುದಾದರೂ ಒಂದು ಪ್ರತಿಫಲ ಕೊಡುವ ಉದ್ದಿಮೆಯನ್ನು ಸ್ಥಾಪಿಸುವ ಅವಕಾಶಕ್ಕೆ ಕೈ ಹಾಕುತ್ತಾನೆ. ವ್ಯವಹಾರದ ವಿಧಾನದಲ್ಲಿ ಯಾವುದನ್ನು ಹೇಗೆ ಮತ್ತು ಎಷ್ಟು ಉತ್ತಮ ಎಂಬುದನ್ನು ಗಣನೆಗೆ ತೆಗೆದುಕೊಂಡು ಒಂದು ಉದ್ಯಮವನ್ನು ಪ್ರಾರಂಭಿಸುತ್ತಾನೆ ಹಾಗೂ ಪ್ರತಿಸ್ಪಂದನೆ ನಿರ್ಣಯಿಸುತ್ತಾನೆ. ಉದ್ಯಮಿಗಳು ಹೊಸ ವಸ್ತುಗಳ ಬಗ್ಗೆ ಊಹೆಮಾಡಿಕೊಂಡು ಅವುಗಳ ಮಾರುಕಟ್ಟೆ ಮತ್ತು ತಾಂತ್ರಿಕತೆಗಳ ಮತ್ತು ಬದಲಾವಣೆಗಳ ಬಗ್ಗೆ ಕಲ್ಪನೆ ಮಾಡಿಕೊಳ್ಳುತ್ತಾರೆ. ಒಟ್ಟಾರೆ ಹೇಳುವುದಾದರೆ ಉದ್ಯಮಿಯು ಅವಕಾಶಗಳನ್ನು ಅವಲೋಕಿಸಿ ಆ ಅವಕಾಶಗಳನ್ನು ಸ್ವಪ್ರಯೋಜನಗಳಿಗಾಗಿ ಉಪಯೋಗಿಸಿಕೊಂಡು ಅವುಗಳನ್ನು ಸದಾವಕಾಶಗಳಿಂದ ಕ್ರಮವಾಗಿ ಸಂಘಟನೆ ಮಾಡುತ್ತಾನೆ. ಗಣಕಯಂತ್ರಗಳು, ಮೊಬೈಲ್ ದೂರವಾಣಿಗಳು, ಬಟ್ಟೆ ಒಗೆಯುವ ಯಂತ್ರಗಳು. ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡುಗಳು, ಕೊರಿಯರ್ ಸೇವೆ ಮತ್ತು ತತ್‌ಕ್ಷಣದಲ್ಲಿ ತಯಾರಿಸಬಹುದಾದ ಆಹಾರ ಪದಾರ್ಥಗಳು ಉದ್ಯಮಿಗಳ ಕಲ್ಪನೆಗಳಲ್ಲಿ ರೂಢಿಗೆ ಬಂದಿರುವುದಕ್ಕೆ ಉದಾಹರಣೆಗಳಾಗಿವೆ.

ಉದ್ಯಮಗಾರಿಕೆ (Entrepreneurship) :

ಒಬ್ಬ ಉದ್ಯಮಿಯು ತನ್ನ ಉದ್ದಿಮೆಯನ್ನು ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು ಉದ್ಯಮಗಾರಿಕೆ ಎನ್ನುತ್ತೇವೆ. (ಉದ್ಯಮ ಶೀಲತೆ ಎಂದೂ ಕರೆಯುವುದು ರೂಢಿಯಲ್ಲಿದೆ) ಉದ್ಯಮಗಾರಿಕೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ. ಇದು ಏನೂ ಇಲ್ಲದುದನ್ನು ಏನಾದರೊಂದಾಗಿ ಸೃಜಿಸುವ ಸಾಮರ್ಥ್ಯವಾಗಿದೆ. ಇದು ಬೇರೆಯವರಿಂದ ಕಷ್ಟಸಾಧ್ಯವಾದ ಗೊಂದಲಮಯ, ವಿರೋಧಾತ್ಮಕ ಮತ್ತು

ಅಸ್ತವ್ಯಸ್ತತೆಯಿಂದ ಕೂಡಿದ ಒಂದು ಅವಕಾಶವನ್ನು ಗುರ್ತಿಸಿ ಅದನ್ನು ಕಾರ್ಯರೂಪಕ್ಕೆ ತರುವುದೇ ಆಗಿದೆ. ಉದ್ಯಮಗಾರಿಕೆಯು ಅವಕಾಶಗಳನ್ನು ಅನ್ವೇಷಿಸಿ ಅಥವಾ ಹುಡುಕಿ, ನಷ್ಟಗಳನ್ನು ಲೆಕ್ಕಾಚಾರ ಹಾಕಿ ಅದರಿಂದ ಲಾಭಪಡೆಯಲು ಒಂದು ಸಾಹಸಕಾರ್ಯವನ್ನು ಸ್ಥಾಪಿಸುವುದೇ ಆಗಿದೆ. ಉದ್ಯಮಗಾರಿಕೆ ಒಂದು ಕಾರ್ಯವಿಧಾನವಾಗಿದೆ. ಇದು ಕೆಲವು ಅಪರೂಪದ ಸಂಘಟನೆಗಳ ಸಂಯೋಜನೆಯಲ್ಲಿ ಉದ್ದೇಶ ಹೊಂದಿರುವ ಮತ್ತು ಸಂಘಟಿತವಾದ ಬದಲಾವಣೆಗಳಿಗಾಗಿ ಒಂದು ಅನ್ವೇಷಣೆಯನ್ನು ಕ್ರಮಬದ್ಧವಾದ ಪರಿಸರದಲ್ಲಿ ವಿಶ್ಲೇಷಿಸುವ ಕಾರ್ಯವಾಗಿದೆ. ಇದು ಒಂದು ತತ್ವಜ್ಞಾನವಾಗಿದೆ. ಇದು ಒಬ್ಬ ಮನುಷ್ಯನು ಯೋಜಿಸುವ ಮತ್ತು ಪ್ರವೃತ್ತಿಸುವ ಕಾರ್ಯವಾಗಿದ್ದು, ವ್ಯಾಪಾರ ಸಂಸ್ಥೆಯಾಲ್ಲಾಗಲಿ, ಸರ್ಕಾರದಲ್ಲಾಗಲಿ, ವಿದ್ಯಾಭ್ಯಾಸ ಕ್ಷೇತ್ರದಲ್ಲಾಗಲಿ ವಿಜ್ಞಾನ ಮತ್ತು ತಾಂತ್ರಿಕತೆಯಲ್ಲಾಗಲಿ, ಬಡತನ ನಿವಾರಣೆಯಲ್ಲಾಗಲೀ ಅಥವಾ ಯಾವುದೇ ಇತರೆ ಕೆಲಸಗಳಲ್ಲಾಗಲಿ ಕಂಡು ಬರುತ್ತದೆ.

ಉದ್ಯಮಗಾರಿಕೆಯ ಗುಣಲಕ್ಷಣಗಳು :

- ಸೃಜನಾತ್ಮಕ
- ಕ್ರಿಯಾತ್ಮಕ
- ಗುಂಪುಕಟ್ಟುವುದು.
- ಸಮಸ್ಯೆಯ ಪರಿಹಾರ
- ನಷ್ಟಭರಿತಕ್ಕೆ ಸಿದ್ಧ
- ವಚನಬದ್ಧತೆ.
- ಹೊಸ ಪದ್ಧತಿಯನ್ನು ರೂಢಿಸಿತರುವುದು.
- ನಾಯಕತ್ವ
- ಪ್ರಚೋದನೆಯ ಸಾಧನೆ
- ಗುರಿಮುಟ್ಟುವಿಕೆ
- ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು.

ಉದ್ಯಮಿಯ ಕಾರ್ಯಗಳು (Functions of an entrepreneur) :

ಉದ್ಯಮಿಯು ಅವಕಾಶಗಳನ್ನು ಅವಲೋಕಿಸಿ, ಯೋಜನೆ ಮಾಡಿ, ಸಂಪನ್ಮೂಲಗಳನ್ನು ಸಂಘಟಿಸಿ, ಉತ್ಪಾದನೆ, ಮಾರುಕಟ್ಟೆ ಮತ್ತು ಇತರೆ ಅಧಿಕಾರಿಗಳ ಜೊತೆ ಸಂಪರ್ಕ ಇಟ್ಟುಕೊಳ್ಳಬೇಕಾಗುತ್ತದೆ. ಅತ್ಯಂತ ಮುಖ್ಯವಾಗಿ ಮಾರ್ಪಾಡುಗಳನ್ನು ಮಾಡಿ ನಷ್ಟಗಳಾದಾಗ ಎದುರಿಸಬೇಕಾಗುತ್ತದೆ. ಉದ್ಯಮಿಯ ಮುಖ್ಯಕಾರ್ಯಗಳಾವುವೆಂದರೆ :

- ಉದ್ಯಮಿಯು ವ್ಯಾಪಾರ ಚಟುವಟಿಕೆಗಳನ್ನು ಅನೇಕ ಯೋಜನೆಗಳ ಮೂಲಕ ಪ್ರಾರಂಭಿಸುತ್ತಾನೆ.
- ಉದ್ಯಮಿಯು ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ.
- ಉದ್ಯಮಗಾರನು ಉತ್ಪಾದಿಸುವ ವಸ್ತುಗಳ ಬಗ್ಗೆ, ತಾಂತ್ರಿಕತೆ ಬಗ್ಗೆ, ಮಾರುಕಟ್ಟೆ ಮತ್ತು ಉದ್ಯೋಗ ಮುಂತಾದವುಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ.
- ಉದ್ಯಮಿಯು ಎಲ್ಲ ಅಂಶಗಳನ್ನು ಸಮಂಜಸವಾಗಿ ಸಂಯೋಜಿಸುತ್ತಾನೆ.
- ಉದ್ಯಮಿಯು ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
- ಉದ್ಯಮಿಯು ತನ್ನ ಉದ್ಯಮದ ಹಣಕಾಸಿನ ಆಯವ್ಯಯವನ್ನು ನಿಭಾಯಿಸುತ್ತಾನೆ.
- ಉದ್ಯಮಿಯು ಕಷ್ಟನಷ್ಟಗಳನ್ನು ಮತ್ತು ಅನಿಶ್ಚಿತೆಗಳನ್ನು ಎದುರಿಸುತ್ತಾನೆ.
- ಉದ್ಯಮಿಯು ವ್ಯಾಪಾರದ ಮಾರ್ಗಗಳನ್ನು ತಿಳಿಸಿ ಅದು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳ್ಳುವಂತೆ ಮಾರ್ಗದರ್ಶನ ನೀಡುತ್ತಾನೆ.

ಉದ್ಯಮಿಯ ಪಾತ್ರ ಮತ್ತು ಪ್ರಾಮುಖ್ಯತೆ :

ಉದ್ಯಮಿಯ ಪಾತ್ರ : ಉದ್ಯಮಿಗಳು ವ್ಯಾಪಾರದ ಧುರೀಣರಾಗಿದ್ದು ವಿವಿಧ ಅನಿಸಿಕೆಗಳನ್ನು ಗಮನಿಸಿ ಅವುಗಳನ್ನು ಕಾರ್ಯ ರೂಪಕ್ಕೆ ತಂದು ಆರ್ಥಿಕಪ್ರಗತಿ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳುತ್ತಾರೆ. ಭಾರತದ ಆರ್ಥಿಕ ಪ್ರಗತಿಯಲ್ಲಿ ಉದ್ಯಮಿಗಳ ಪಾತ್ರ ಬಹುಮುಖ್ಯವಾಗಿದೆ. ಇವರು ಕೈಗಾರಿಕಾ ಕ್ಷೇತ್ರದ ಪರಿವರ್ತನೆಯೇ ಅಲ್ಲದೆ ವ್ಯವಸಾಯ ಮತ್ತು ಸೇವಾಕ್ಷೇತ್ರಗಳ ಅಭಿವೃದ್ಧಿಯಲ್ಲೂ ಮುಖ್ಯ ಪಾತ್ರ ವಹಿಸುತ್ತಾರೆ. ಉದ್ಯಮಿಗಳು ಆರ್ಥಿಕ ಕ್ಷೇತ್ರದ ಅಭಿವೃದ್ಧಿಗೆ ಈ ಕೆಳಗಿನಂತೆ ಪಾತ್ರವಹಿಸುತ್ತಾರೆ.

1) ಉದ್ಯಮಿಗಳು ಜನರ ಅನುಪಯುಕ್ತ ಉಳಿತಾಯಗಳನ್ನು ಬಂಡವಾಳ ರೂಪದಲ್ಲಿ ನಿರ್ಮಾಣಮಾಡುತ್ತಾರೆ. ಅವರು ಸಂಪನ್ಮೂಲಗಳನ್ನು ಉದ್ದಿಮೆಗಳನ್ನು ಪ್ರಾರಂಭಿಸಲು ಉಪಯೋಗಿಸುತ್ತಾರೆ.

2) ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸುವುದರ ಮೂಲಕ ಉದ್ಯಮಿಗಳು ಕುಶಲಕರ್ಮಿಗಳಿಗೆ, ತಾಂತ್ರಿಕ ಯೋಗ್ಯತೆ ಉಳ್ಳವರಿಗೆ ಮತ್ತು ಕಸಬುದಾರರಿಗೆ ಅಧಿಕ ಪ್ರಮಾಣದ ಉದ್ಯೋಗಗಳನ್ನು ಒದಗಿಸುತ್ತಾರೆ.

3) ಉದ್ಯಮಿಗಳು ಒಂದು ದೇಶದ ನಿವ್ವಳದೇಶಿಯ ಉತ್ಪನ್ನ **(GDP)** ಮತ್ತು ಜನರ ತಲಾವರಮಾನ ಹೆಚ್ಚಿಸುತ್ತಾರೆ.

4) ಉದ್ಯಮಿಗಳು ಬಂಡವಾಳ ಮತ್ತು ಕೌಶಲ್ಯವನ್ನು ಪ್ರಯೋಜನಕಾರಿಯಾಗಿ ಒಟ್ಟುಗೂಡಿಸಿ ಹೊಸವಸ್ತುಗಳನ್ನು ಮತ್ತು ಸೇವೆಗಳನ್ನು ರೂಢಿಸಿ ತಂದು ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.

5) ಉದ್ಯಮಿಗಳು ಉತ್ತಮ ವಸ್ತುಗಳನ್ನು ಕಡಿಮೆದರದಲ್ಲಿ ಜನರಿಗೆ ಒದಗಿಸಿ ಅವರ ಜೀವನಮಟ್ಟ ಉತ್ತಮಗೊಳ್ಳಲು ಶ್ರಮಿಸುತ್ತಾರೆ.

6) ಉದ್ಯಮಿಗಳು ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ. ಅವರು ಪ್ರಾಂತೀಯ ತಾರತಮ್ಯಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದರ ಮೂಲಕ ನಿವಾರಿಸುತ್ತಾರೆ.

7) ಉದ್ಯಮಿಗಳು ಆದಾಯ ಮತ್ತು ಸಂಪತ್ತು ಒಂದು ಪ್ರದೇಶದಲ್ಲಿ ಕೇಂದ್ರೀಕೃತವಾಗುವುದನ್ನು ಕಡಿಮೆ ಮಾಡಿ ಸಮಾಜದ ಏಳಿಗೆಗೆ ಸಹಾಯ ಮಾಡುತ್ತಾರೆ.

8) ಉದ್ಯಮಿಗಳು ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.

9) ಉದ್ಯಮಿಗಳು ಹೊಸ ಬದಲಾವಣೆಗಳನ್ನು ರೂಢಿಗೆ ತಂದು ತಾಂತ್ರಿಕತೆಯನ್ನು ಬದಲಾಯಿಸಿ ಹೆಚ್ಚು ಲಾಭದಾಯಕವಾಗಲು ಶ್ರಮಿಸುತ್ತಾರೆ.

ಉದ್ಯಮಿಗಳ ಪ್ರಾಮುಖ್ಯತೆ :

ಉದ್ಯಮಿಗಳು ಮಾರುಕಟ್ಟೆಯ ಆರ್ಥಿಕ ಸ್ಥಿತಿಯಲ್ಲಿ ಕೇಂದ್ರ ಸ್ಥಾನವನ್ನು ಅಲಂಕರಿಸಿದ್ದಾರೆ. ಈ ಉದ್ಯಮಿಗಳಲ್ಲಿ ಆರ್ಥಿಕತೆಯ ಯಂತ್ರದಲ್ಲಿ ವಿದ್ಯುತ್ತನ್ನು ಸಂಚರಿಸಲು ಸಹಕಾರಿಯಾಗುವ ಅಗ್ನಿಬಿರಟೆ **(spark plug)**ಯಂತೆ ಆರ್ಥಿಕ ಚಟುವಟಿಕೆಗಳಿಗೆ ಚೇತನ ಕೊಡುವ ಸಾಧಕರಾಗಿದ್ದಾರೆ.

ಒಂದು ದೇಶದ ಆರ್ಥಿಕ ಯಶಸ್ಸು ವಿಶ್ವದಾದ್ಯಂತ ಹಬ್ಬಲು ಉದ್ಯಮಗಳನ್ನು ಉತ್ತೇಜಿಸಿ ಅವುಗಳಿಗೆ ಸರಿಯಾದ ಬಹುಮಾನಕೊಡಬೇಕಾದುದು ಅಗತ್ಯವಾಗಿದೆ. ಏಕೆಂದರೆ ಉದ್ಯಮಿಗಳು ಮತ್ತು ಅವರ ಚಟುವಟಿಕೆಗಳು ದೇಶದ ಯಶಸ್ಸು, ಅಭಿವೃದ್ಧಿ, ಬೆಳವಣಿಗೆ ಮತ್ತು ಸಮಯೋಚಿತ ವಿಮರ್ಶಾತ್ಮಕ ನಿರ್ಣಯಗಳಾಗಿರುತ್ತವೆ. ಜಗತ್ತಿನ ಅತಿ ಕ್ರಿಯಾತ್ಮಕ ಅಥವ ಚಲನಾತ್ಮಕ ಸಮಾಜಗಳು ಅತಿ ಹೆಚ್ಚು ಉದ್ಯಮಿಗಳಿಂದ ಕೂಡಿರುವುದಾಗಿವೆ ಹಾಗೂ ಆರ್ಥಿಕ ಮತ್ತು ಕಾನೂನಿನ ರಚನೆಗಳು ಉದ್ಯಮಿಗಳನ್ನು ಇನ್ನೂ ಗಣನೀಯ ಚಟುವಟಿಕೆಗಳನ್ನು ಕೈಗೊಳ್ಳಲು ಉತ್ತೇಜಿಸುತ್ತದೆ. ಉದ್ಯಮಿಗಳು ಜನರ ಪ್ರಯೋಜನಕಾರಿಯಲ್ಲಿರದ ಉಳಿತಾಯಗಳಿಂದ ಬಂಡವಾಳವನ್ನು ಬೆಳೆಸುತ್ತಾರೆ. ಅವರು ತಮ್ಮದೇ ಆದ ಮತ್ತು ಎರವಲು ಪಡೆದ ಸಂಪನ್ಮೂಲಗಳ ಮೂಲಕ ಉದ್ಯಮವನ್ನು ಸ್ಥಾಪಿಸುತ್ತಾರೆ. ಈ ರೀತಿಯ ಉದ್ಯಮಗಳು ಒಂದು ದೇಶದ ಮೌಲ್ಯಾಧಾರಿತ ಸಂಪತ್ತನ್ನು ಸೃಜಿಸುತ್ತವೆ. ಆರ್ಥಿಕ ಮತ್ತು ಕೈಗಾರಿಕಾಭಿವೃದ್ಧಿಗೆ ಬೇಕಾದ ಹೊಸ ವಸ್ತುಗಳನ್ನು ಮತ್ತು ಸೇವೆಗಳನ್ನು ಮಾರಾಟಕ್ಕೆ ಸಹಾಯ ಮಾಡುತ್ತಾರೆ.

ಉದ್ಯಮಿಗಳ ಸಾಮರ್ಥ್ಯ ಮತ್ತು ಪ್ರಚೋದನೆ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಉದ್ಯಮಿಯು ತನ್ನ ಉದ್ಯಮದ ನಷ್ಟಭರಿಕೆಯನ್ನು ಹೊರುತ್ತಾನೆ. ಲಾಭವನ್ನು ಹುಡುಕುತ್ತಾ ಹೋಗುತ್ತಾನೆ. ಅವಕಾಶಗಳನ್ನು ಹುಡುಕುತ್ತಾನೆ. ಲಾಭಗಳಿಸಿ ಇನ್ನು ತೃಪ್ತಿಕಾಣದ ಅಗತ್ಯಗಳನ್ನು ಪೂರೈಸಲು ಶ್ರಮಿಸುತ್ತಾನೆ.

ಉದ್ಯಮಿಗಳಿಗೆ ಸ್ವಂತ ಉದ್ಯೋಗ ಅವಕಾಶಗಳು :

ಸ್ವಂತ ಉದ್ಯೋಗಿಗಳು ಅಥವಾ ಸ್ವಉದ್ಯೋಗದಾರರು ದೇಶದ ಬೆನ್ನೆಲುಬಾಗಿದ್ದಾರೆ. ಒಂದು ರಸ್ತೆಯ ಮೂಲೆಯಲ್ಲಿನ ಚಹಾ ಅಂಗಡಿಯಿಂದ ಹಿಡಿದು, ಮಾಮ್ ಅಂಡ್ ಪಾಪ್ ಕಿರಾಣಿ ಅಂಗಡಿ, ಗುಜರಿವ್ಯಾಪಾರಿ, ಅಂತರ್ಜಾಲದ ಸೈಬರ್ ಅಂಗಡಿಗಳು ಮುಂತಾದುವೆಲ್ಲ ಸ್ವಉದ್ಯೋಗ ಸಂಸ್ಥೆಗಳಾಗಿವೆ. ಈ ಉದ್ದಿಮೆಗಳಿಗೆ ಉತ್ತೇಜನ ಬೇಕಾಗಿದೆ. ಇದರಿಂದಾಗಿ ಜಾಗತೀಕರಣ ಆರ್ಥಿಕ ವ್ಯವಸ್ಥೆಯೊಂದಿಗೆ ಪೈಪೋಟಿ ನಡೆಸಲು ಸಾಧ್ಯವಾಗುತ್ತದೆ. ಭಾರತ ಸರ್ಕಾರವು ಖಾಸಗಿ ರಂಗದ ಉದ್ಯಮಗಳಿಗೆ ಹೆಚ್ಚು ಪ್ರೋತ್ಸಾಹ ನೀಡಿ ಅವುಗಳಿಗೆ ಬೇಕಾದ ಸಾಮಾಜಿಕ, ಆರ್ಥಿಕ ವ್ಯವಸ್ಥೆ ಮತ್ತು ಪರಿಸರದ ಹೊಸಪದ್ಧತಿಯನ್ನು ಉತ್ತೇಜಿಸುತ್ತಿದೆ. ಒಬ್ಬ ಮನುಷ್ಯನು ಸ್ವಉದ್ಯಮದಿಂದ ಉದ್ಯಮಶೀಲನಾಗಲು ಅನೇಕ ಸೇವಾಸಂಸ್ಥೆಗಳನ್ನು ಕೇಂದ್ರಸರ್ಕಾರದ ಅತಿ ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ವ್ಯವಹಾರ ಸಂಸ್ಥೆಗಳ, ಮಂತ್ರಿಮಂಡಲ ಈ ಬದಲಾವಣೆಗೆ ಶ್ರಮಿಸುತ್ತದೆ. ಬಹಳಷ್ಟು ಹೊಸ ವ್ಯವಹಾರಸಂಸ್ಥೆಗಳು ಕಡಿಮೆ ಬಂಡವಾಳದಿಂದ ಪರಮಾವಧಿಯ ಪಥಕ್ರಮಣಗೊಳ್ಳಲು ಸಾಧ್ಯವಾಗಿದೆ.

ಯಾರೇ ಒಬ್ಬ ಮನುಷ್ಯನಾಗಲಿ ಸ್ವಉದ್ಯೋಗ ಉದ್ದಿಮೆಯನ್ನು ಸ್ಥಾಪಿಸಲು ಇಷ್ಟಪಟ್ಟಲ್ಲಿ ಈ ಕೆಳಗಿನ ಯಾವುದಾದರು ವ್ಯವಹಾರ ಸಂಸ್ಥೆಗಳನ್ನು ಆರಿಸಿಕೊಂಡು ಸ್ಥಾಪಿಸಿಲು ಅನುಕೂಲತೆಗಳಿವೆ. ಅವುಗಳಲ್ಲಿ ಮುಖ್ಯವಾದುವೆಂದರೆ :

1. ಜಾಹಿರಾತು ಸೇವಾಸಂಸ್ಥೆಗಳು
2. ಮಾರುಕಟ್ಟೆ ಸಲಹಾ ಸಂಸ್ಥೆ
3. ಕೈಗಾರಿಕಾ ಸಲಹಾ ಸಂಸ್ಥೆ
4. ವಸ್ತುಗಳನ್ನು ಬಾಡಿಗೆಗೆ ಮತ್ತು ಗುತ್ತಿಗೆಗೆ ನೀಡುವ ಸಂಸ್ಥೆಗಳು
5. ಛಾಯಾಪ್ರತಿ ತೆಗೆಯುವ ಕೇಂದ್ರಗಳು **(Photo copying center)**
6. ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳು

7. ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು
8. ಅಂತರ್ಜಾಲ ಮತ್ತು ಸಂಹವನ ಅಂಗಡಿಗಳು
9. ದೂರದರ್ಶನ ಜಾಲ ಬಂದದ ಸೇವಾಕ್ಷೇತ್ರಗಳು
10. ಕ್ರೆಚ್ ಮತ್ತು ಬ್ಯೂಟಿಪಾರ್ಲರ್‌ಗಳು

ಸ್ವಯಂ ಉದ್ಯೋಗಕ್ಕಾಗಿ ಯೋಜನೆಗಳು : ಯಾವುದೇ ಉದ್ಯಮ ಪ್ರಾರಂಭಿಸಲು ಹಣಕಾಸಿನ ಅವಶ್ಯಕತೆ ಮುಖ್ಯವಾಗಿದೆ. ಸಾಕಷ್ಟು ಬಂಡವಾಳ ಇಲ್ಲದೇ ಹೋದಲ್ಲಿ ಯಾವುದೇ ಉದ್ಯಮ ಸ್ಥಾಪಿಸಲು ಮತ್ತು ಅಭಿವೃದ್ಧಿಪಡಿಸಲು ಸಾಧ್ಯವಿಲ್ಲ. ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಉದ್ದಿಮೆಗಳ ಸ್ಥಾಪನೆ ಅಭಿವೃದ್ಧಿ ಮತ್ತು ಅವುಗಳನ್ನು ಕಾಲಕ್ಕೆ ತಕ್ಕಂತೆ ಮಾರ್ಪಡಿಸಲು ಅನೇಕ ಹಣಕಾಸಿನ ಸಂಸ್ಥೆಗಳನ್ನು ಸ್ಥಾಪಿಸಿವೆ. ಈ ಸಂಸ್ಥೆಗಳು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೂ ಕೂಡ ಸಾಲರೂಪದಲ್ಲಿ ಹಣ ಸಹಾಯ ಮಾಡುತ್ತದೆ. ಈ ಸಂಸ್ಥೆಗಳಲ್ಲಿ ಮುಖ್ಯವಾದುವೆಂದರೆ :

1. ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು (IDBI)
2. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು (NABARD)
3. ಆಮದು ಮತ್ತು ರಫ್ತು ಬ್ಯಾಂಕು (EXIM BAND)
4. ಭಾರತೀಯ ಸಣ್ಣಕೈಗಾರಿಕಾ ಅಭಿವೃದ್ಧಿ ಬ್ಯಾಂಕು (SIDBI)
5. ಭಾರತೀಯ ಕೈಗಾರಿಕಾ ಹಣಕಾಸು ನಿಗಮ (IFCI)
6. ಭಾರತೀಯ ಕೈಗಾರಿಕೆಗೆ ಹಣಕಾಸಿನ ಹೂಡಿಕೆ ಮತ್ತು ಸಾಲದ ನಿಗಮ (ICICI)
7. ಭಾರತೀಯ ಕೈಗಾರಿಕಾ ಮರು ನಿರ್ಮಾಣ ಬ್ಯಾಂಕು
8. ಭಾರತೀಯ ವಾಣಿಜ್ಯ ಮತ್ತು ಇತರೆ ಬ್ಯಾಂಕುಗಳು
9. ರಾಜ್ಯ ಹಣಕಾಸು ನಿಗಮಗಳು (SFC)
10. ಭಾರತೀಯ ಜೀವ ವಿಮಾ ನಿಗಮ (LIC)
11. ಯೂನಿಟ್ ಟ್ರಸ್ಟ್ ಆಫ್ ಇಂಡಿಯ (UTI)

ಉದ್ಯಮಿಗಳ ಪ್ರವರ್ತಕ (Promotional) ಸಂಸ್ಥೆಗಳು :

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅವುಗಳ ಮಟ್ಟದಲ್ಲಿ ಉದ್ಯಮಿಗಳನ್ನು ಬೆಂಬಲಿಸಲು, ಬೆಳೆಸಲು ಮತ್ತು ಅಭಿವೃದ್ಧಿಪಡಿಸಲು ಅನೇಕ ಕಾರ್ಯಗಳನ್ನು ಕೈಗೊಂಡಿವೆ. ಸರ್ಕಾರವು ಉದ್ಯಮಗಳನ್ನು ಸ್ಥಾಪಿಸಲು ಅನೇಕ ಸಂಸ್ಥೆಗಳನ್ನು ಮತ್ತು ಕಾರ್ಯಕರ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ಈ ಸಂಸ್ಥೆಗಳು ಉದ್ದಿಮೆಗಳನ್ನು ಹುಟ್ಟುಹಾಕಲು ಮತ್ತು ಸ್ಥಾಪಿಸಲು ಸಹಾಯಮಾಡುತ್ತವೆ. ಅದರಲ್ಲೂ ಸಣ್ಣ ಪ್ರಮಾಣದ, ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು ಸ್ಥಾಪಿಸಲು ಉದ್ಯಮಿಗಳಿಗೆ ಬೇಕಾದ ಹಣಕಾಸು, ತರಬೇತಿ, ಮಾರುಕಟ್ಟೆ ಮುಂತಾದವುಗಳಿಗೆ ನೆರವು ನೀಡುತ್ತದೆ. ಅವುಗಳಲ್ಲಿ ಮುಖ್ಯವಾದುವೆಂದರೆ :

1) ಜಿಲ್ಲಾ ಕೈಗಾರಿಕೆ ಕೇಂದ್ರಗಳು
2) ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ

3) ರಾಷ್ಟ್ರೀಯ ಸಣ್ಣ ಕೈಗಾರಿಗೆಗಳ ನಿಗಮ ನಿಯಮಿತ

4) ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆ

5) ಸಣ್ಣ ಪ್ರಮಾಣದ ಕೈಗಾರಿಕಾ ಸೇವಾ ಸಂಸ್ಥೆ

6) ಕೈಗಾರಿಕಾ ಪ್ರದೇಶಗಳು

7) ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ

8) ತಾಂತ್ರಿಕ ಸಲಹಾ ಸಂಸ್ಥೆಗಳು

1) ಜಿಲ್ಲಾ ಕೈಗಾರಿಕಾ ಕೇಂದ್ರಗಳು :

ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತ ಮತ್ತು ಸಮಗ್ರತೆಯನ್ನು ಕೇಂದ್ರೀಕರಿಸಲು ಈ ಸಂಸ್ಥೆಯನ್ನು ಸರ್ಕಾರವು 1978 ರಲ್ಲಿ ಸ್ಥಾಪಿಸಿತು. ಈ ಕೇಂದ್ರಗಳು ಸರ್ಕಾರದ ವಿವಿಧ ಇಲಾಖೆಗಳೊಡನೆ ಸಂಯೋಜಕರಾಗಿ ಕೆಲಸ ಮಾಡುತ್ತವೆ ಮತ್ತು ಸೇವೆಗಳನ್ನು ಒದಗಿಸುವ ಕೇಂದ್ರಗಳಾಗಿವೆ. ಈ ಕೇಂದ್ರಗಳು ಏಕಗವಾಕ್ಷ ರೀತಿಯಲ್ಲಿ ಪರಸ್ಪರ ಕಾರಬಾರಿ ಸೇವೆಯನ್ನು ಹೊಸದಾಗಿ ಉದ್ಯಮವನ್ನು ಪ್ರಾರಂಭಿಸುವವರಿಗೆ ಜಿಲ್ಲಾಮಟ್ಟದಲ್ಲಿ ಈ ಕೆಳಗಿನ ಸೇವೆಗಳನ್ನು ಒದಗಿಸುತ್ತವೆ.

1) ಉದ್ದಿಮೆಯನ್ನು ಸ್ಥಾಪಿಸಲು ಮೊದಲು ಸಿದ್ಧಿಪಡಿಸಬೇಕಾದ ಯೋಜನಾವರದಿ.

2) ಯಂತ್ರಗಳು ಮತ್ತು ಸಾಧನ ಸಲಕರಣೆಗಳ ಬಗ್ಗೆ ಮಾಹಿತಿ.

3) ಹೊಸದಾಗಿ ಕೈಗಾರಿಕಾ ಪ್ರದೇಶಗಳ ರಚನೆ.

4) ವಿಶೇಷ ರೀತಿಯ ಯೋಜನಾ ವರದಿಗಳನ್ನು ಅಂಗೀಕರಿಸುವುದು.

5) ಉದ್ದಿಮೆ ಅಭಿವೃದ್ಧಿ ಕಾರ್ಯಕ್ರಮದೆಡೆ ತರಬೇತಿ.

6) ಕಚ್ಚಾಪದಾರ್ಥಗಳ ಹಂಚಿಕೆ.

7) ಸ್ವಯಂ ಉದ್ಯೋಗದಡಿಯಲ್ಲಿನ ವ್ಯವಸ್ಥೆಯಲ್ಲಿ ಹಣಕಾಸಿನ ನೆರವು.

8) ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಯಮದ ಮೂಲಕ ಸಾಧನ ಸಲಕರಣೆಗಳನ್ನು ಗುತ್ತಿಗೆ ಮೂಲಕ ವ್ಯವಸ್ಥೆಮಾಡುವುದು.

9) ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾರುಕಟ್ಟೆ ಸಹಾಯ.

10) ಸರ್ಕಾರದ ಅಧೀನ ಕೈಗಾರಿಕೆಗಳ ಜೊತೆಗೂಡಿ ಸಹಾಯಕ ಸಂಸ್ಥೆಗಳಿಗೆ ನೆರವು ನೀಡುವುದು.

11) ವಸ್ತು ಪ್ರದರ್ಶನಗಳಲ್ಲಿ, ವ್ಯಾಪಾರಿ ಜಾತ್ರೆಗಳಲ್ಲಿ ಮತ್ತು ಕೊಳ್ಳುವವರು ಮತ್ತು ಮಾರುವವರು ಸಂಧಿಸುವ ಭೇಟಿಗಳಲ್ಲಿ ಮಾರುಕಟ್ಟೆ ವ್ಯವಸ್ಥೆ ಮಾಡುವುದು.

12) ಸಣ್ಣ ಕೈಗಾರಿಕೆಗಳ ನೋಂದಣಿ ವ್ಯವಸ್ಥೆಯಲ್ಲಿ, ಬ್ಯಾಂಕು ಸಾಲಗಳಲ್ಲಿ ಮತ್ತು ಉತ್ಪಾದಿತ ವಸ್ತುಗಳ ಮಾರುಕಟ್ಟೆ ಸಮಸ್ಯೆಗಳ ಕಡೆ ಗಮನಹರಿಸುವುದು.

13) ಉದ್ದಿಮೆಯನ್ನು ಆಧುನಿಕರಿಸುವಲ್ಲಿ ಸಹಾಯ ಮಾಡುವುದು.

14) ವಸ್ತುಗಳನ್ನು ರಫ್ತು ಮಾಡಲು ಸಹಾಯ ಮಾಡುವುದು.

15) ಅತಂತ್ರಗೊಳ್ಳುತ್ತಿರುವ ಉದ್ದಿಮೆಗಳಿಗೆ ಸಹಾಯ ಮಾಡುವುದು.

16) ಬದಲಾವಣೆ ಅಥವಾ ಮಾರ್ಪಾಡು ಮಾಡಿರುವ ವಸ್ತುಗಳಿಗೆ ಉತ್ತೇಜನ ಕೊಟ್ಟು ರಾಷ್ಟ್ರೀಯಮಟ್ಟದಲ್ಲಿ ಪ್ರಶಸ್ತಿಗಳನ್ನು ಕೊಡಲು ಪ್ರಯತ್ನಿಸುವುದು.

17) ಸಾಂಪ್ರದಾಯಿಕವಲ್ಲದ ಶಕ್ತಿಸಾಧನಗಳನ್ನು ಉಪಯೋಗಿಸಿ ವಸ್ತುಗಳ ತಯಾರಿಕೆಗೆ ಉತ್ತೇಜನ ಕೊಡುವುದು.

18) ಪ್ರಮಾಣಬದ್ಧ ವಸ್ತುಗಳ ತಯಾರಿಕೆಯಲ್ಲಿ ಸಹಾಯಮಾಡುವುದು.


19) ಕುಶಲಕೈಗಾರಿಕಾ ವಸ್ತುಗಳ ತಯಾರಿಕೆಯಲ್ಲಿ ಮಾದರಿ ವಸ್ತುಗಳ ತಯಾರಿಕೆಗೆ ಸಹಾಯಮಾಡುವುದು.

ಪ್ರಮುಖ ಉದ್ದಿಮೆದಾರರು :

ಭಾರತದ ಅತ್ಯಂತ ಪ್ರಖ್ಯಾತ ಉದ್ಯಮಿಗಳು ಒಂದೇರೀತಿಯ ಉದ್ಯಮಗಾರಿಕೆಯ ಚೈತನ್ಯಹೊಂದಿದ್ದಾರೆ. ಇವರು ತಮ್ಮ ವಂಶಪಾರಂಪರ್ಯದಿಂದ ಐಶ್ವರ್ಯವನ್ನು ಗಳಿಸಿದವರಲ್ಲಿ ಅಥವಾ ಲಕ್ಷಾಂತರ ಡಾಲರುಗಳ ಕ್ರೀಡಾ ಕರಾರುಗಳಿಗೆ ಸಹಿ ಹಾಕಿದವರಲ್ಲಿ ಇವರೆಲ್ಲರು ತಮ್ಮ ದೇಶದ ಉತ್ಪಾದನೆಯ ಬಗ್ಗೆ ಕನಸು ಕಂಡು ಯಶಸ್ವಿಯಾಗಿದ್ದಾರೆ. ಇವರು ತಮ್ಮ ಶ್ರಮ, ಸಾಧನೆ ಮತ್ತು ಸಮರ್ಪಣೆಯಿಂದ ಲಕ್ಷಾಂತರ ರೂಗಳನ್ನು ಗಳಿಸಿದ್ದಾರೆ. ಕೆಲವು ಯಶಸ್ವಿ ಉದ್ದಿಮೆಗಾರರ ಸಂಕ್ಷಿಪ್ತ ವ್ಯಕ್ತಿ ಚಿತ್ರ ಮುಂದೆ ಕೊಡಲಾಗಿದೆ.




ಡಾ. ಪ್ರತಾಪರೆಡ್ಡಿ : ಇವರು ಭಾರತದಲ್ಲಿ ಆರೋಗ್ಯಕ್ಷೇತ್ರದಲ್ಲಿ ವೈದ್ಯಶಾಲೆಗಳ ಸಂಕೀರ್ಣವನ್ನು ಅಭಿವೃದ್ಧಿ ಪಡಿಸಿದವರಲ್ಲಿ ಮೊದಲಿಗರಾಗಿದ್ದಾರೆ. ಇವರು ಹುಟ್ಟುಹಾಕಿದ **"ಅಪೋಲೋ"** ವೈದ್ಯಶಾಲೆಗಳ ಗುಂಪು ಸುಮಾರು 750 ಆಧುನಿಕ ರೀತಿಯ ದವಾಖಾನೆಗಳನ್ನು ಹೊಂದಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ ಇವರಿಗೆ ಆಸ್ಪತ್ರೆಗಳನ್ನು ಪ್ರಾರಂಭಿಸಲು ಪ್ರೇರಣೆಕೊಟ್ಟದ್ದು, ಒಬ್ಬ ರೋಗಿಯು ತನ್ನ ತೆರೆದ ಹೃದಯ ಶಸ್ತ್ರ ಚಿಕಿತ್ಸೆಗಾಗಿ ಅಮೆರಿಕದ ಟೆಕ್ಸಾಸ್‌ಗೆ ಹೋಗಲು ಸಾಧ್ಯವಾಗದೆ ಹೋಗಿ ಮರಣ ಹೊಂದಿದ್ದೆ ಆಗಿದೆ. ಇವರ ವೈದ್ಯಕೀಯ ಕ್ಷೇತ್ರದ ಸಾಧನೆ ಭಾರತದ ಸಾಮಾನ್ಯ ಜನರಿಗೂ ದೊರಕುವಂತಹುದೇ ಆಗಿದೆ.




ನರೇಶ್ ಗೋಯಲ್ : ಇವರು ಜೆಟ್ ವಾಯುಮಾರ್ಗಗಳನ್ನು ಹುಟ್ಟುಹಾಕಿದವರು ಮತ್ತು ಅದರ ಅಧ್ಯಕ್ಷರಾಗಿದ್ದಾರೆ. ಈ ವಾಯುಮಾರ್ಗವು ಭಾರತದ ಅತಿದೊಡ್ಡ ಆಂತರಿಕ ವಾಯುಮಾರ್ಗವಾಗಿದೆ. ವಿಶ್ವವಿದ್ಯಾಲಯದ ಪದವಿ ಪಡೆದ ನಂತರ ಸಂಚಾರ ಉದ್ದಿಮೆಯಲ್ಲಿ ಕೆಲಸ ಮಾಡಿದರು. 1974 ರ ವೇಳೆಗೆ ಗೋಯಲ್‌ರವರು ಜೆಟ್ ವಾಯುಮಾರ್ಗವನ್ನು ವಿದೇಶಿ ವಿಮಾನಮಾರ್ಗಗಳ ಮಾರಾಟ ಮತ್ತು ಮಾರುಕಟ್ಟೆಯನ್ನು ನೋಡಿಕೊಳ್ಳಲು ಪ್ರಾರಂಭಿಸಿದರು. ಗೋಯಲ್‌ರವರು ಭಾರತದ ಸರ್ಕಾರದ 1917 ರ ತೆರೆದ ಅಂತರಿಕ್ಷ ನೀತಿಯ ಸದವಕಾಶವನ್ನು ಉಪಯೋಗಿಸಿಕೊಂಡು ಜೆಟ್ ವಾಯುಮಾರ್ಗವನ್ನು ಆಂತರಿಕ ಸಂಚಾರಕ್ಕಾಗಿ ಭಾರತದಲ್ಲಿ ನಿಶ್ಚಿತ ವೇಳೆಗಳಲ್ಲಿ ಓಡಾಡಲು ಪ್ರಾರಂಭಿಸಿದರು.



ನಾರಾಯಣ ಮೂರ್ತಿ : 1999 ರಲ್ಲಿ ಭಾರತದಲ್ಲಿ ಇನ್‌ಫೋಸಿಸ್ ತಂತ್ರಜ್ಞಾನ ನಿಗಮವನ್ನು ಪ್ರಾರಂಭಿಸಿದವರಲ್ಲಿ ಒಬ್ಬರಾಗಿದ್ದಾರೆ. NASDAQ (National Association of Securities Dealers Automated Quatations) ನಲ್ಲಿ ನೋಂದಾಯಿತಗೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನದ ಸಂಸ್ಥೆಯು ಇನ್‌ಫೋಸಿಸ್ ಆಗಿದೆ. 2006 ರ ವೇಳೆಗೆ ಈ ಸಂಸ್ಥೆಯು 50000ಕ್ಕೂ ಮಿಗಿಲಾದ ಕೆಲಸಗಾರರನ್ನು ನೇಮಿಸಿಕೊಂಡು ಎರಡು ಬಿಲಿಯನ್ ಡಾಲರ್‌ಗಳಿಗಿಂತ ಮಿಗಿಲಾದ ವ್ಯಾಪಾರ ವಹಿವಾಟನ್ನು ನಡೆಸುತ್ತಿದೆ. ಮೂರ್ತಿಯವರ ಪ್ರಾಮಾಣಿಕತೆ, ಸತ್ಯಸಂದತೆ, ತೆರೆದವಹಿವಾಟು ಮತ್ತು ನೀತಿಪೂರ್ಣ ಸಮಗ್ರತೆಯಂತಹ ಅಂಶಗಳು ಅವರ ವಹಿವಾಟುಗಳ ಸಮಗ್ರ ಯಶಸ್ಸಿಗೆ ಕಾರಣಗಳಾಗಿವೆ.



ವರ್ಗಿಸ್ ಕುರಿಯನ್ : ಇವರು ಹೆಸರಾಂತ ಪ್ರಖ್ಯಾತ ಉದ್ಯಮ ಶೀಲರು. **"ಬಿಳಿಕ್ರಾಂತಿಯ ಪಿತಾ ಮಹಾ"** ಎನಿಸಿದ್ದಾರೆ. ಲಕ್ಷಾಂತರ ಲೀಟರ್ ಹಾಲಿನ ಉತ್ಪಾದನೆಯ ಕಲ್ಪನೆ ಹಾಲಿನ ಹೊಳೆ ಹರಿಸುವುದರ ಮೂಲಕ ಬೇಸಾಯದ ಅಭಿವೃದ್ಧಿಯ ಅತ್ಯಂತ ಹಿರಿಯ ವ್ಯಕ್ತಿಗಳಾಗಿದ್ದಾರೆ. ಅಮುಲ್ ಹಾಲು ಮತ್ತು ಹಾಲಿನ ಉತ್ಪನ್ನಗಳ ತಯಾರಿಕೆ ಇವರ ಸಾಧನೆಯಾಗಿದ್ದು ಗುಜರಾತಿನ ಕೈರಾ ಜಿಲ್ಲೆಯ ಆನಂದ್ ಹೈನುಗಾರಿಕೆಯನ್ನು ಸಣ್ಣ ಪ್ರಮಾಣದಲ್ಲಿ ಪ್ರಾರಂಭಿಸಿ ಬೃಹತ್ತಾಗಿ ಭಾರತದಲ್ಲೇ ಅತ್ಯಂತ ದೊಡ್ಡ ಹೈನುಗಾರಿಕೆಯಾಗಿ ಅಭಿವೃದ್ಧಿ ಸಾಧಿಸಿದರು.



ಧೀರುಭಾಯಿ ಅಂಬಾನಿ : ಇವರು ಭಾರತದ ಅತ್ಯಂತ ಸಾಹಸಿ ಉದ್ಯಮಶೀಲರು. ಇವರು ಭಾರತದ ಸಮ್ಮೇಳನ ಸಂಸ್ಥೆಯನ್ನು ಹುಟ್ಟುಹಾಕಿದವರಲ್ಲಿ ಅತ್ಯಂತ ಪ್ರಮುಖರೆಂದು ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಧೀರೂಭಾಯಿ ಅಂಬಾನಿಯವರ ತಂದೆ ಶಾಲಾ ಉಪಾಧ್ಯಾಯರಾಗಿದ್ದರು. ಇವರು ಮೌಂಟ್‌ಗಿರ್‌ನಾರ್ ಎಂಬಲ್ಲಿ ವಾರಾಂತ್ಯದಲ್ಲಿ ಭಜನೆಗಳ ಪುಸ್ತಕಗಳನ್ನು ಯಾತ್ರಾರ್ಥಿಗಳಿಗೆ ಮಾರುವುದರ ಮೂಲಕ ಉದ್ಯಮವನ್ನು ಪ್ರಾರಂಭಿಸಿದರು. ತಮ್ಮ ಮೆಟ್ರಿಕ್ಯುಲೇಷನ್ ಪರೀಕ್ಷೆಯ ನಂತರ ಹದಿನಾರನೆಯ ವಯಸ್ಸಿನಲ್ಲಿ ಆಫ್ರಿಕಾದ ಆಡೆನ್ ಪಟ್ಟಣಕ್ಕೆ ಹೋದರು. ಅಲ್ಲಿ ಪೆಟ್ರೋಲ್ ಬಂಕ್ ಒಂದರ ಸೇವೆಗೆ ಸೇರಿ ನಂತರ ತೈಲಕಂಪನಿ ಯೊಂದರಲ್ಲಿ ಗುಮಾಸ್ತರಾದರು. 1958 ರಲ್ಲಿ ಭಾರತಕ್ಕೆ ಐವತ್ತು ಸಾವಿರ ರೂಪಾಯಿಗಳಿಂದ ಹಿಂದಿರುಗಿ ಬಂದರು ಮತ್ತು ಬಟ್ಟೆ ವ್ಯಾಪಾರದ ಕಂಪನಿಯೊಂದನ್ನು ಪ್ರಾರಂಭಿಸಿದರು. ಇಂದು ಇವರು ಸ್ಥಾಪಿಸಿರುವ 'ರಿಲಯನ್ಸ್' ಸಂಸ್ಥೆ ಪ್ರಪಂಚದಲ್ಲೇ ಮುಖ್ಯ ಉದ್ಯಮಗಳಲ್ಲೊಂದಾಗಿದೆ.



ಅಜೀಮ್ ಪ್ರೇಮ್‌ಜಿ : ಇವರು ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಈ ಸಂಸ್ಥೆಯು ಸಾಫ್ಟ್‌ವೇರ್ ದಿಸೆಯಲ್ಲಿ ಭಾರತದಲ್ಲೇ ಅತ್ಯಂತ ದೊಡ್ಡ ಸಂಸ್ಥೆಯಾಗಿದೆ. ಅವರ ತಂದೆಯ ಮರಣದ ಕಾರಣದಿಂದಾಗಿ

ವಿದ್ಯಾರ್ಥಿಯಾಗಿದ್ದ ಇವರು ಮನೆಗೆ ಹಿಂದಿರುಗಿದರು. ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಒಬ್ಬ ಷೇರುದಾರರು ಅಜೀಮ್ ಪ್ರೇಮ್‌ಜಿಯವರನ್ನು ತಮ್ಮ ಭಾಗದ ಷೇರುಗಳನ್ನು ಮಾರುವಂತೆ ಆದೇಶಮಾಡಿದರು. ಇದು ಇವರು ತಮ್ಮ ಸಂಸ್ಥೆಯನ್ನು ಪ್ರಚೋದಿಸಿತು. ಈಗ ವಿಪ್ರೋತಾಂತ್ರಿಕ ಸಂಸ್ಥೆಯು ಸಂಶೋಧನೆ ಮತ್ತು ಅಭಿವೃದ್ಧಿ (R&D) ಸೇವೆಯಲ್ಲಿ ಅತ್ಯಂತ ದೊಡ್ಡ ಸ್ವಾಯತ್ತ ಸಂಸ್ಥೆಯಾಗಿದೆ.



ಏಕ್ತಾಕಪೂರ್ : ಭಾರತದ ದೂರದರ್ಶನ ಕ್ಷೇತ್ರದಲ್ಲಿ "ಅಧಿಪತ್ಯ ಸಾಧಿಸಿದ ರಾಣಿ"ಯೆಂದೇ ಹೆಸರು ಮಾಡಿದ್ದಾರೆ. ಇವರು ಬಾಲಾಜಿ ದೂರದರ್ಶನ ಚಿತ್ರಗಳನ್ನು ಹುಟ್ಟುಹಾಕಿದವರಾಗಿದ್ದು 2001ರಲ್ಲಿ ಇವರಿಗೆ ವರ್ಷದ ಶ್ರೇಷ್ಠ ಉದ್ಯಮಿಯ ಪ್ರಶಸ್ತಿಯನ್ನು (Erust young) ಸಂಸ್ಥೆ ನೀಡಿ ಗೌರವಿಸಿದೆ. ಇವರು ತಮ್ಮ 19ನೇ ವರ್ಷಕ್ಕೆ ದೂರದರ್ಶನ ಅನುಕ್ರಮ ಪ್ರಸಾರದ ರೂವಾರಿಯಾದರು.



ಕಿರಣ್ ಮುಜಮ್‌ದಾರ್ ಷಾ : ಇವರು 'ಬಯೋಕಾನ್' ನಿಗಮದ ಅಧ್ಯಕ್ಷರು ಹಾಗೂ ಆಡಳಿತ ನಿರ್ದೇಶಕರಾಗಿದ್ದಾರೆ. ಈ ನಿಗಮವು ಭಾರತದಲ್ಲಿ ಜೀವವಿಜ್ಞಾನ ತಂತ್ರಜ್ಞಾನದ ಅತಿ ದೊಡ್ಡ ಸಂಸ್ಥೆಯಾಗಿದ್ದು 1978ರಲ್ಲಿ ಒಂದು ಸಣ್ಣ ಬಾಡಿಗೆಯ ಮೋಟಾರು ನಿಲ್ಲಿಸುವ ಜಾಗದಲ್ಲಿ ಪ್ರಾರಂಭವಾಯಿತು. ಹಲವಾರು ಸಮಸ್ಯೆಗಳನ್ನು ಹಾಗೂ ಘಟನೆಗಳನ್ನು ಎದುರಿಸ ಬೇಕಾಯಿತು. ಏಕೆಂದರೆ ಈ ತಂತ್ರಜ್ಞಾನವು ಹೊಸದಾಗಿದ್ದು ಒಬ್ಬ ಮಹಿಳಾ ಉದ್ಯಮಿಯು ಈ ಉದ್ಯಮಕ್ಕೆ ಕೈಹಾಕಿರುವುದು ವಿರಳವಾಗಿತ್ತು. ಕಿರಣ್ ಷಾ ಅವರು ಎಲ್ಲವನ್ನು ಎದುರಿಸಿ ಜೀವವಿಜ್ಞಾನ ತಂತ್ರಜ್ಞಾನವು ಯಶಸ್ಸನ್ನು ಪಡೆಯಲು ಸಾಧ್ಯ ಪಡಿಸಿದರು.

ಅಭ್ಯಾಸಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ಉದ್ಯಮಿ ಎಂಬ ಪದವು ಫ್ರೆಂಚ್ ಪದ __________ ನಿಂದ ಬಂದಿದೆ.
2. ಉದ್ಯಮಿಯು ಉದ್ದಿಮೆ ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು __________ ಎನ್ನುತ್ತೇವೆ.
3. ಜಿಲ್ಲಾ ಕೈಗಾರಿಕಾ ಕೇಂದ್ರವನ್ನು __________ ರಲ್ಲಿ ಸ್ಥಾಪಿಸಿತು.
4. ಅಪೋಲೋ ಆಸ್ಪತ್ರೆಯ ರೂವಾರಿಗಳು __________
5. ವಿಪ್ರೋ ಸಂಸ್ಥೆಯ ಅಧ್ಯಕ್ಷರು __________ .

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1. ಉದ್ಯಮಿ ಎಂದರೇನು ?
2. ಉದ್ಯಮಗಾರಿಕೆಯು ಸಾಹಸ ಕಾರ್ಯವಾಗಿದೆ. ಹೇಗೆ ?
3. ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು ?
4. ಉದ್ಯಮಿಯ ಪ್ರಾಮುಖ್ಯತೆಯನ್ನು ವಿವರಿಸಿ.
5. ಉದ್ಯಮಗಳ ಅಭಿವೃದ್ಧಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಪಾತ್ರವನ್ನು ವಿವರಿಸಿ.

III. ಚಟುವಟಿಕೆ :

1. ಹತ್ತಿರದ ಉದ್ಯಮ ಕೇಂದ್ರಕ್ಕೆ ಭೇಟಿ ನೀಡಿ ಉದ್ಯಮ ಸಂಸ್ಥೆಯಲ್ಲಿರುವ ಕಾರ್ಮಿಕರ ವಿವರವನ್ನು ಪಡೆಯಿರಿ.
2. ಅಂತರ್ಜಾಲದ ನೆರವಿನಿಂದ ವಿವಿಧ ಉದ್ಯಮ ಸಂಸ್ಥೆಗಳ ಪಟ್ಟಿ ತಯಾರಿಸಿ.
3. ಭಾರತದಲ್ಲಿರುವ ಪ್ರಖ್ಯಾತ ಉದ್ದಿಮೆದಾರರ ಭಾವಚಿತ್ರಗಳನ್ನು ಸಂಗ್ರಹಿಸಿ.

IV. ಯೋಜನೆ :

1. ನಿಮಗೆ ಹತ್ತಿರವಾಗಿರುವ ಉದ್ಯಮದಾರರೊಂದಿಗೆ ಸಂದರ್ಶನ ನಡೆಸಿ ಉದ್ಯಮವನ್ನು ಕಟ್ಟಿದ ವಿವರ ಪಡೆದು ವರದಿ ಸಿದ್ಧಪಡಿಸಿ.

ಅಧ್ಯಾಯ – 4

ವ್ಯವಹಾರದ ಜಾಗತೀಕರಣ

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಜಾಗತೀಕರಣದ ಅರ್ಥ.*
- *ಜಾಗತೀಕರಣದ ಮುಖ್ಯ ಲಕ್ಷಣಗಳು.*
- *ಜಾಗತೀಕರಣದ ಅನಾನುಕೂಲಗಳು.*
- *ಜಾಗತೀಕರಣದಲ್ಲಿ ಅಡಕವಾಗಿರುವ ಅಂಶಗಳು.*
- *ಜಾಗತೀಕರಣದ ಅನುಕೂಲತೆಗಳು.*
- *ಅಂತರರಾಷ್ಟ್ರೀಯ ವ್ಯಾಪಾರ ಕರಾರುಗಳು.*

ಜಾಗತೀಕರಣವು ವ್ಯವಹಾರ ಕ್ಷೇತ್ರಕ್ಕೆ ಹೊಸತೇನಲ್ಲ. 1870 ರಿಂದ 1913 ರ ತನಕ ಜಾಗತೀಕರಣವು ವ್ಯವಹಾರ ಕ್ಷೇತ್ರದಲ್ಲಿ ಒಂದು ಪಾತ್ರವಹಿಸಿತ್ತು. ಆದರೆ 1980 ಜಾಗತೀಕರಣವು ತೀವ್ರಗತಿಯಲ್ಲಿ ಪ್ರಗತಿ ಸಾಧಿಸಿದ್ದು ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಸುಧಾರಣೆಗಳಲ್ಲಿ ಬೆಳಕು ತಂದಿದೆ. ಇತ್ತೀಚಿಗೆ ವಿಶ್ವದಲ್ಲಿ ಉಂಟಾಗಿರುವ ತಾಂತ್ರಿಕ ಮತ್ತು ಸಂಪರ್ಕ ಸಾಧನೆಗಳು ಮತ್ತು ಅಂತರ್ಜಾಲ ಸಂವಹನಗಳಿಂದಾಗಿ ದೊಡ್ಡ ವ್ಯವಹಾರ ಘಟಕಗಳ ಜಾಗತಿಕ ಘಟಕಗಳಾಗಿವೆ. ಅಂದರೆ ಇವುಗಳ ಚಟುವಟಿಕೆಗಳು ಅವುಗಳ ಸ್ಥಾಪನಾ ಸ್ಥಳಕ್ಕೆ ಮಾತ್ರ ಸೀಮಿತವಾಗಿರದೆ ವಿಶ್ವದಾದ್ಯಂತ ವಿಸ್ತರಿಸಲ್ಪಟ್ಟಿವೆ. ಇದರಿಂದಾಗಿ ಪ್ರಪಂಚದ ದೇಶಗಳ ಮಧ್ಯೆ ನಿಕಟ ಸಂಬಂಧ ಮತ್ತು ಪರಸ್ಪರ ಅನ್ಯೋನ್ಯತೆ ಉಂಟಾಗಿ ವ್ಯವಹಾರ ಮತ್ತು ಮಾರುಕಟ್ಟೆಯು ವಿಶ್ವವ್ಯಾಪಿಯಾಗಿದೆ.

ಜಾಗತೀಕರಣದ ಅರ್ಥ : ಅಂತರರಾಷ್ಟ್ರೀಯ ಹಣಕಾಸು ನಿಧಿಯು (IMF) ಜಾಗತೀಕರಣವನ್ನು ಈ ರೀತಿಯಾಗಿ ವ್ಯಾಖ್ಯಾನಿಸುತ್ತದೆ. " ಸರಕು ಮತ್ತು ಸೇವೆಗಳು ಹಾಗೂ ಅಂತರರಾಷ್ಟ್ರೀಯ ಬಂಡವಾಳದ ಹರಿವು, ತೀವ್ರ ಮತ್ತು ವ್ಯಾಪಕವಾದ ತಾಂತ್ರಿಕತೆಯ ಪ್ರಸರಣಗಳ ಮೂಲಕ ವಿಶ್ವದಾದ್ಯಂತ ಹೆಚ್ಚಿನ ಪ್ರಮಾಣದ ವೈವಿಧ್ಯತೆಯ ಗಡಿಯಾಚೆಗಿನ ವ್ಯವಹಾರಗಳಿಂದಾಗಿ ಹೆಚ್ಚುತ್ತಿರುವ ದೇಶಗಳ ಅಂತರ ಸ್ವಾವಲಂಬನೆ"

(**IMF-**has defined Globalisation as "The growing economic inter dependence of countries through increasing volume and variety of cross-border transactions in goods and services and international capital flows and also through the rapid and wide spread deffusion of Technology".)

ಈ ವ್ಯಾಖ್ಯೆಯಿಂದ ಸ್ಪಷ್ಟವಾಗುವುದೇನೆಂದರೆ –

- ಜಾಗತೀಕರಣವು ಸರಕು ಮತ್ತು ಸೇವೆಗಳ ಹೆಚ್ಚುತ್ತಿರುವ ಗಡಿಯಾಚಿನ ಚಲನೆ.
- ಬಂಡವಾಳದ, ತಾಂತ್ರಿಕತೆಯ ಮತ್ತು ಮಾಹಿತಿಯ ಅಂತರರಾಷ್ಟ್ರೀಯ ಹರಿವು.
- ಇಡೀ ವಿಶ್ವವನ್ನೇ ಒಂದು ಮಾರುಕಟ್ಟೆಯಾಗಿಸಿಕೊಂಡು ಕಚ್ಚಾ ವಸ್ತುಗಳು ಮತ್ತು ಇತರ ಸಂಪನ್ಮೂಲಗಳನ್ನು ವಿಶ್ವದ ಅಗ್ಗವಾದ ಮಾರುಕಟ್ಟೆಯಿಂದ ಪಡೆಯುವುದು.
- ವಿಶ್ವದ ಯಾವುದೇ ಪ್ರದೇಶದಲ್ಲಿ ಕಡಿಮೆ ವೆಚ್ಚದಲ್ಲಿ ಸರಕುಗಳನ್ನು ಉತ್ಪಾದಿಸುವುದು.

ಜಾಗತೀಕರಣದಲ್ಲಿ ಅಡಕವಾಗಿರುವ ಅಂಶಗಳು

- ಜಾಗತೀಕರಣವು ವಿಶ್ವದಾದ್ಯಂತ ಆಧುನಿಕ ಸಂಪರ್ಕಜಾಲ, ಸಂಚಾರ ಸೌಲಭ್ಯಗಳು, ಕಾನೂನಿನ ಮೂಲಭೂತ ಸ್ಥಿರತೆ ಹಾಗೂ ಪ್ರಜ್ಞಾಪೂರ್ವಕ ಆರ್ಥಿಕ, ತಾಂತ್ರಿಕ, ರಾಜಕೀಯ ಹಾಗೂ ಸಂಸ್ಕೃತಿಗಳಲ್ಲಿ ವಿನಿಮಯವನ್ನು ತೋರಿಸುವುದು.
- ರಾಜಕೀಯ ಅರಿಕೆಗಳಿಂದ ಗಡಿಭಾಗಗಳ ಸಂಬಂಧಗಳ ಮೂಲಕ ಅಂತರರಾಷ್ಟ್ರೀಯ ಬಂಡವಾಳ ಮತ್ತು ವ್ಯಾಪಾರವನ್ನು ಪ್ರೋತ್ಸಾಹಿಸುವುದು.
- ಆಮದು ಮತ್ತು ರಫ್ತುಗಳ ಸುಂಕಗಳನ್ನು ನಿರ್ಮೂಲನ ಮಾಡಿ ಮುಕ್ತ ವಲಯಗಳನ್ನು ಸೃಷ್ಟಿಸುವುದು.
- ಸಾರಿಗೆ ವೆಚ್ಚವನ್ನು ಸಮುದ್ರಯಾನದಲ್ಲಿ ಕಂಟೈನರ್ ಸೇವೆಗೆ ಅಳವಡಿಕೆಯಿಂದ ಕಡಿಮೆ ಮಾಡುವುದು.
- ಬಂಡವಾಳ ಹತೋಟಿಯನ್ನು ಕಡಿಮೆಗೊಳಿಸುವುದು ಅಥವಾ ನಿರ್ಮೂಲ ಮಾಡುವುದು.
- ವಿಶ್ವವ್ಯಾಪಿ ಸಂಸ್ಥೆಗಳಿಗೆ ಪ್ರೋತ್ಸಾಹ ದನ (Subsidies) ಸೃಷ್ಟಿಸುವುದು.
- ಅನೇಕ ದೇಶಗಳ ನಡುವೆ ಬೌದ್ಧಿಕ ಆಸ್ತಿ ಸಂಬಂಧ ಕಾಯಿದೆಗಳು ನಿರ್ಬಂಧಗಳಿಲ್ಲದೆ ಸಾಮರಸ್ಯ ಉಂಟುಮಾಡುವುದು.

  (ಉದಾ: ಚೀನಾದ ಕೆಲವು ಸಾಮ್ಯ ಪಡೆದಿರುವ (Patent) ವಸ್ತುಗಳು ಅಮೆರಿಕದ ಕೆಲವು ಪ್ರಮುಖ ಅಂಗಡಿಗಳಲ್ಲಿ ದೊರೆಯುತ್ತದೆ.)

ಜಾಗತೀಕರಣದ ಮುಖ್ಯ ಲಕ್ಷಣಗಳು :

- ಜಾಗತೀಕರಣದವು ವಿಶ್ವದ ಆರ್ಥಿಕತೆಯ ಏಳಿಗೆಗಿಂತ ತೀವ್ರವಾಗಿ ಅಂತರರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುತ್ತದೆ.
- ಅಂತರರಾಷ್ಟ್ರೀಯ ಬಂಡವಾಳವನ್ನು ವೃದ್ಧಿಸಿ ಬಂಡವಾಳದ ಹರಿವನ್ನು ಮತ್ತು ಬಂಡವಾಳದ ನೇರ ಹೂಡಿಕೆಯನ್ನು ಹೆಚ್ಚಿಸುತ್ತದೆ.
- ಅಂತರರಾಷ್ಟ್ರೀಯ ವ್ಯಾಪಾರ ಕರಾರುಗಳನ್ನು ಸೃಷ್ಟಿಸುತ್ತದೆ. ಇದರಿಂದಾಗಿಯೇ ವಿಶ್ವವ್ಯಾಪಾರ ಸಂಸ್ಥೆ ಪ್ರಾರಂಭವಾದುದು.
- ವಿಶ್ವ ಹಣಕಾಸಿನ ನೀತಿಯನ್ನು ಅಭಿವೃದ್ಧಿ ಪಡಿಸುತ್ತದೆ.
- ಅಂತರರಾಷ್ಟ್ರೀಯ ಸಂಸ್ಥೆಗಳಾದ ವಿಶ್ವವ್ಯಾಪಾರ ಸಂಘಟನೆ (WTO) ಮತ್ತು ಅಂತರರಾಷ್ಟ್ರೀಯ ಹಣಕಾಸುನಿಧಿ(IMF) ಗಳ ಪಾತ್ರ ಹೆಚ್ಚಿಸುತ್ತದೆ.
- ಕೆಲವು ಆರ್ಥಿಕ ವ್ಯವಹಾರ ಪದ್ಧತಿಗಳಾದ ಹೊರನೆರವು (Out source) ಮುಂತಾದುವುಗಳನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಮೂಲಕ ಹೆಚ್ಚಿಸುತ್ತದೆ.
- ಅಂತರರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯಗಳನ್ನು ಹೆಚ್ಚು ಮಾಡುತ್ತದೆ.

- ವಿವಿಧ ಸಾಂಸ್ಕೃತಿಕ ಪದ್ಧತಿಗಳನ್ನು ಹರಡಲು ಸಹಾಯ ಮಾಡುತ್ತದೆ.
- ಅಂತರರಾಷ್ಟ್ರೀಯ ಸಂಚಾರ ಮತ್ತು ಪರ್ಯಟನೆಗಳಿಗೆ ಅವಕಾಶಗಳನ್ನು ಒದಗಿಸುತ್ತದೆ.
- ದೇಶಗಳ ನಡುವೆ ವಲಸೆ ಹೋಗುವುದನ್ನು ಹೆಚ್ಚಿಸುತ್ತದೆ. ಇದು ಕಾನೂನು ಬಾಹಿರ ವಲಸೆಗಳಿಗೂ ಅವಕಾಶ ಕಲ್ಪಿಸುತ್ತದೆ.
- ಸ್ಥಳೀಯ ಆಹಾರ ಪದಾರ್ಥಗಳು ಬೇರೆ ದೇಶಗಳಿಗೂ ಹಬ್ಬಲು ಸಾಧ್ಯವಾಗುತ್ತದೆ.
- ವಿಶ್ವವ್ಯಾಪಿ ಸಂವಹನ ಸಂದೇಶ, ಅಂತರ್ಜಾಲ ಮತ್ತು ಸಂಪರ್ಕ ಸಾಧನೆಗಳು ತಮ್ಮ ಮೂಲಭೂತ ಸಾಧನೆಗಳೊಂದಿಗೆ ಗಡಿಗಳನ್ನು (Border) ದಾಟಿಹೋಗಲು ಸಹಾಯ ಮಾಡುತ್ತದೆ.
- ಮಾಹಿತಿಗಳ ವಿನಿಮಯ (Exchange of Data) ತಾಂತ್ರಿಕತೆ, ಸೆಲ್‌ಫೋನುಗಳು ಅಂತರರಾಷ್ಟ್ರೀಯ ದೂರ ಸಂಪರ್ಕ ಕ್ಷಿಪಣಿಗಳು ರೂಢಿಗೆ ಬರುತ್ತವೆ.

ಜಾಗತೀಕರಣದ ಅನುಕೂಲತೆಗಳು : (ಸಕಾರಾತ್ಮಕ ಪರಿಣಾಮಗಳು) (Positive Impacts of Globalisation.)

- ಜಾಗತೀಕರಣದವು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಿ. ಹೆಚ್ಚಿನ ಸರಕು ಮತ್ತು ಸೇವೆಗಳು ವಿಶಾಲವಾಗಿ ಉತ್ಪಾದನೆಯಾಗಲು ಸಹಾಯ ಮಾಡುತ್ತದೆ.
- ಜಾಗತೀಕರಣವು ಜನರ ಜೀವನ ಮಟ್ಟ ಹೆಚ್ಚಿಸಲು ಸಹಾಯ ಮಾಡುತ್ತದೆ.
- ಜಾಗತೀಕರಣದಿಂದಾಗಿ ಪ್ರಪಂಚದಾದ್ಯಂತ ಒಂದೇ ರೀತಿಯ ವಸ್ತುಗಳು ದೊರಕಲು ಸಾಧ್ಯವಾಗುತ್ತದೆ.
- ಜಾಗತೀಕರಣವು ದೇಶದ ರಾಷ್ಟ್ರೀಯ ಉತ್ಪನ್ನವನ್ನು (Gross Domestic Product) ಹೆಚ್ಚಿಸುತ್ತದೆ.
- ಜಾಗತೀಕರಣವು ಒಂದು ದೇಶದ ಜನರ ವರಮಾನವನ್ನು ಹೆಚ್ಚಿಸುತ್ತದೆ.
- ಬೇರೆ ಬೇರೆ ದೇಶಗಳ ವಸ್ತುಗಳು ಮಾರುಕಟ್ಟೆಯಲ್ಲಿ ದೊರಕುವುದರಿಂದ ಜನರಿಗೆ ವಸ್ತುಗಳ ಆಯ್ಕೆಯಲ್ಲಿ ವಿಶಾಲತೆ ಕಂಡುಬರುತ್ತದೆ.
- ಸ್ಥಳೀಯ ವ್ಯಾಪಾರ ಸಂಸ್ಥೆಗಳ ಮಧ್ಯೆ ಪೈಪೋಟಿ ಉಂಟಾಗಿ ಸರಕುಗಳ ಬೆಲೆಗಳು ಕಡಿಮೆ ಇರುತ್ತದೆ.
- ಜಾಗತೀಕರಣವು ಸರಕುಗಳ ಉತ್ಪಾದನೆಯಲ್ಲಿ ಪಾವಿಣ್ಯತೆಯನ್ನು ಸೃಷ್ಟಿಸಿ ವಿವಿಧ ದೇಶಗಳ ವಿವಿಧ ರೀತಿಯ ವಸ್ತುಗಳ ತಯಾರಿಕೆಯನ್ನು ಮಾಡುತ್ತಾರೆ. ಈ ವಸ್ತುಗಳು ಉತ್ತಮ ಗುಣಮಟ್ಟದಿಂದ ಕೂಡಿರುತ್ತವೆ.
- ಪ್ರಪಂಚದ ದೇಶಗಳ ನಡುವೆ ಆರ್ಥಿಕ ಅವಲಂಬನೆ ಉಂಟಾಗಿ ದೇಶಗಳ ನಡುವೆ ಸಾಮಾಜಿಕ ಹಾಗೂ ರಾಜಕೀಯ ಸಾಮರಸ್ಯ ಉಂಟಾಗಲು ಸಾಧ್ಯವಾಗುತ್ತದೆ.

ಜಾಗತೀಕರಣದ ನಕಾರಾತ್ಮಕ ಪರಿಣಾಮಗಳು (Negative Effects of Globalisation)

ಜಾಗತೀಕರಣವು ಪ್ರಪಂಚದಲ್ಲಿ ಕೆಲವು ಹೊಸ ಆಯಾಮಗಳನ್ನು ತಂದಿದ್ದರೂ ಹಾಗೂ ಜನರು ಹೆಚ್ಚಾಗಿ ವೃತ್ತಿಗಳಲ್ಲಿ ಒಬ್ಬರೊಡನೊಬ್ಬರು ಒಟ್ಟಿಗೆ ಕೂಡಿದ್ದರೂ ಕೆಲವು ಆಕ್ಷೇಪಣೆಗಳನ್ನು ಹಾಗೂ ನಕಾರಾತ್ಮಕ ಪರಿಣಾಮಗಳನ್ನು ಹೊಸತಿರುವಿನಲ್ಲಿ ಎದುರಿಸಬೇಕಾಗುತ್ತದೆ ಹಾಗೂ ಒಪ್ಪಿಕೊಳ್ಳಬೇಕಾಗುತ್ತದೆ. ಜಾಗತೀಕರಣದ ಕೆಲವು ನಕಾರಾತ್ಮಕ ಪರಿಣಾಮಗಳೆಂದರೆ:

- ವೆಚ್ಚಗಳನ್ನು ಕಡಿಮೆ ಮಾಡುವ ದಿಸೆಯಲ್ಲಿ ಅಭಿವೃದ್ಧಿ ಹೊಂದಿರುವ ದೇಶಗಳು ತಮ್ಮ ಉತ್ಪಾದನೆಗಳನ್ನು ಹೊರಮೂಲಗಳಿಂದ ರೂಢಿಗೆ ತಂದು ನೌಕರ ಶಾಹಿ ಕೆಲಸಗಳನ್ನು ಉತ್ತೇಜಿಸುತ್ತದೆ. ಇದರಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಗುಲಾಮಿತನ ಹಾಗೂ ಬಾಲಕಾರ್ಮಿಕ ಪದ್ಧತಿಗಳು ಉಂಟಾಗುವ ಸಾಧ್ಯತೆ ಇದೆ.
- ಜಾಗತೀಕರಣದಿಂದ ವಿಶ್ವ ಮಾರುಕಟ್ಟೆಯಲ್ಲಿ ತೀವ್ರವಾದ ಪೈಪೋಟಿ ಉಂಟಾಗಿ ಅನೇಕ ನೀತಿಬಾಹಿರ ಪದ್ಧತಿಗಳು ವ್ಯವಹಾರ ವಹಿವಾಟುಗಳಲ್ಲಿ ರೂಡಿಗೆ ಬರುವ ಸಾಧ್ಯತೆ ಇದೆ.
- ಜಾಗತೀಕರಣವು ಭಯೋತ್ಪಾದನೆ ಮತ್ತು ಪಾತಕಿಗಳಿಗೆ ಸಹಾಯವಾಗುತ್ತದೆ. ಜಾಗತೀಕರಣವು ಗಡಿಗಳಿಂದಾಚೆಗೆ ಮಾನವ, ವಸ್ತುಗಳು, ಆಹಾರ, ನಿಧಿಗಳು ಮುಂತಾದುವು ಮುಕ್ತವಾಗಿ ಸಂಚಾರವಾಗಲು ಉತ್ತೇಜಿಸುತ್ತದೆ.
- ಜಾಗತೀಕರಣದಿಂದಾಗಿ ಪಟ್ಟಣಗಳು ಅಭಿವೃದ್ಧಿ ಹೊಂದಿ ಕಸದ ತೊಟ್ಟಿಗಳಾಗಿ ಮಾರ್ಪಾಡಾಗುವ ಸಾಧ್ಯತೆ ಉಂಟಾಗಿದೆ. ಕೈಗಾರಿಕಾ ತ್ಯಾಜ್ಯಗಳು ಶೇಖರಣೆ ಹೊಂದಿ ಮಾಲಿನ್ಯವು ಆಕಾಶದೆತ್ತರಕ್ಕೆ ಬೆಳೆಯುತ್ತದೆ.
- ಶ್ರೀಘ್ರ ಆಹಾರ ಸರಪಳಿಗಳು (Fast food chains) ಹೆಚ್ಚಾಗಿ ಹರಡುತ್ತವೆ ಉದಾ : K.F.C. McDonald etc. ಇದರಿಂದಾಗಿ ಪ್ರಯೋಜನಕಾರಿಯಲ್ಲದ ಆಹಾರ (Junk food) ಸೇವನೆ ಜಾಸ್ತಿಯಾಗುತ್ತದೆ ಹಾಗೂ ಜನರ ಆರೋಗ್ಯದ ಅವನತಿ ಉಂಟಾಗಿ ಅನೇಕ ರೋಗ ರುಜಿನಗಳಿಗೆ ಎಡೆಮಾಡಿಕೊಡುತ್ತದೆ. ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ.
- ಮತ್ತೊಂದು ಅಪಾಯಕಾರಿ ಪರಿಣಾಮವೆಂದರೆ ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಾರೆ. ಬಡವರು ಒಂದು ಊಟಕ್ಕೂ ಶ್ರಮಪಡಬೇಕಾಗುತ್ತದೆ.
- ಅನೇಕ ಮಾರಣಾಂತಿಕ ವೈರಾಣುಗಳಿಂದ ಹಬ್ಬುವ (Aids, Cancer) ರೋಗಗಳು ವಿಶ್ವದಾದ್ಯಂತ ಹಬ್ಬುತ್ತವೆ.
- ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗುತ್ತದೆ.
- ಕೈಗಾರಿಕೆಗಳಿಗೆ ಬೇಕಾದ ಕಚ್ಚಾಪದಾರ್ಥಗಳನ್ನು ನೈಸರ್ಗಿಕ ಸಂಪನ್ಮೂಲಗಳಿಂದ ಪಡೆಯುವುದರಿಂದ ಭೂಖಂಡದಲ್ಲಿ ಮಾಲಿನ್ಯವು ಹೆಚ್ಚಾಗಿ ನಾವು ಉಸಿರಾಡುವ ವಾಯು ಕೂಡ ಮಾಲಿನ್ಯದಿಂದ ಕೂಡಿ ಬದುಕುಳಿಯಲು ಕಷ್ಟಸಾಧ್ಯವಾಗುತ್ತದೆ.

- ಅಗ್ಗ ವಸ್ತುಗಳ ಆಮದಿನಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಉತ್ಪಾದನೆಯು ಕಡಿಮೆಯಾಗಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತದೆ.
- ಹೆಚ್ಚುತ್ತಿರುವ ಪೈಪೋಟಿಯಿಂದಾಗಿ ಅಭಿವೃದ್ಧಿ ಹೊಂದಿರುತ್ತಿರುವ ರಾಷ್ಟ್ರಗಳಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಧ್ಯವಾಗುವುದಿಲ್ಲ ಹಾಗೂ ಹೆಚ್ಚು ಹೆಚ್ಚು ವಸ್ತುಗಳನ್ನು ಅಭಿವೃದ್ಧಿ ಹೊಂದಿರುವ ದೇಶಗಳು ತಂದು ತುಂಬಿ ವಸ್ತುಗಳ ಬೆಲೆ ಕಡಿಮೆಯಾಗಿ ಸ್ಥಳೀಯ ವಸ್ತುಗಳಿಗೆ ಮಾರುಕಟ್ಟೆಯೇ ಇಲ್ಲದೇ ಹೋಗುತ್ತದೆ.

ವಿಶ್ವ ವ್ಯಾಪಾರ ಸಂಘಟನೆ (World Trade Organisation W.T.O)

ವಿಶ್ವ ವಾಪಾರ ಸಂಘಟನೆಯು ಜಗತ್ತಿನ ಒಂದು ಶಾಶ್ವತ ಸಂಘಟನೆಯಾಗಿದ್ದು ವಿಶ್ವದ ವ್ಯಾಪಾರ ವ್ಯವಹಾರಗಳಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತದೆ. ಇದು 1995 ರ ಜನವರಿ 1 ರಂದು ಅಸ್ಥಿತ್ವಕ್ಕೆ ಬಂದಿತು. ಇಂದು 149 ದೇಶಗಳು ಈ ಸಂಘಟನೆಯ ಸದಸ್ಯ ರಾಷ್ಟ್ರಗಳಾಗಿವೆ. ಇದರ ಕೇಂದ್ರ ಕಚೇರಿ ಸ್ವಿಟ್ಜರ್‌ಲ್ಯಾಂಡಿನ ಜಿನೇವಾದಲ್ಲಿದೆ. ಇದು ಪ್ರತಿ ಎರಡು ವರ್ಷಕ್ಕೊಮ್ಮೆ ಸಮ್ಮೇಳನ ನಡೆಸುತ್ತದೆ.

ವಿಶ್ವ ವ್ಯಾಪಾರ ಸಂಘಟನೆಯ ಉದ್ದೇಶಗಳು :

- ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ವಿಶ್ವದಾದ್ಯಂತ ಜಾರಿಗೆ ತರುವುದು.
- ಬಹುಪಕ್ಷೀಯ ವ್ಯಾಪಾರ ವ್ಯವಹಾರಗಳ ನಡುವೆ ಮಧ್ಯವರ್ತಿಯಾಗಿ ಕೆಲಸಮಾಡುವುದು.
- ವಿಶ್ವದಾದ್ಯಂತ ಮುಕ್ತ ಹಾಗೂ ಸ್ವತಂತ್ರ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಒತ್ತು ನೀಡುವುದು.
- ವಿವಿಧ ದೇಶಗಳ ನಡುವೆ ಉದ್ಭವಿಸುವ ವ್ಯಾಪಾರ ಸಂಬಂಧಿ ಭಿನ್ನಭಿಪ್ರಾಯಗಳನ್ನು ಬಗೆಹರಿಸುವುದು.
- ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆಗಳನ್ನು ಕಡಿಮೆ ಮಾಡುವುದು.
- ವಿಶ್ವದ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಉತ್ಪಾದನೆ ಮತ್ತು ವ್ಯಾಪಾರ ವಿಸ್ತರಣೆ ಹಾಗೂ ಸೇವಾಕ್ಷೇತ್ರಗಳನ್ನು ದಕ್ಷಗೊಳಿಸುವುದು.
- ಅಂತರರಾಷ್ಟ್ರೀಯ ವ್ಯಾಪಾರವನ್ನು ಕಾನೂನಿನ ಚೌಕಟ್ಟಿಗೊಳಪಡಿಸುವುದು.
- ಅಂತರರಾಷ್ಟ್ರೀಯ ವ್ಯಾಪಾರದಿಂದ ಹಿಂದುಳಿದ ರಾಷ್ಟ್ರಗಳು ಹೆಚ್ಚು ಪ್ರಯೋಜನ ಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡುವುದು.

ವಿಶ್ವ ವ್ಯಾಪಾರ ಸಂಘಟನೆಯ ಇತರ ಗುರಿಗಳು :

- ಜೀವನ ವೆಚ್ಚವನ್ನು ಕಡಿಮೆಮಾಡಿ ಸದಸ್ಯರಾಷ್ಟ್ರಗಳ ಜನರ ಜೀವನಮಟ್ಟ ಹೆಚ್ಚಿಸುವುದು.
- ಸದಸ್ಯರಾಷ್ಟ್ರಗಳ ನಡುವೆ ಉದ್ಭವಿಸುವ ವ್ಯಾಪಾರ ವ್ಯಾಜ್ಯಗಳನ್ನು ಬಗೆಹರಿಸುವುದು.

- ಸದಸ್ಯರಾಷ್ಟ್ರಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸಿ ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವುದು.
- ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ವೆಚ್ಚಗಳನ್ನು ಕಡಿಮೆಮಾಡುವುದು.
- ಸದಸ್ಯರಾಷ್ಟ್ರಗಳಲ್ಲಿ ಉತ್ತಮ ಸರ್ಕಾರ ರಚಿಸಲು ಸಹಾಯಮಾಡುವುದು.
- ಸದಸ್ಯರಾಷ್ಟ್ರಗಳಲ್ಲಿ ಶಾಂತಿ, ಸ್ಥಿರತೆ ಅಥವಾ ದೃಢತೆ ಕಾಪಾಡಲು ಸಹಕರಿಸುವುದು.

ಅಭ್ಯಾಸಗಳು

I. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.

1. ಜಾಗತೀಕರಣ ಎಂದರೇನು? ವಿವರಿಸಿ.
2. ಜಾಗತೀಕರಣವು ವಿಶ್ವದಲ್ಲಿ ಆರ್ಥಿಕ ಚಲನೆಗೆ ಹೇಗೆ ಸಹಕಾರಿಯಾಗಿದೆ ?
3. ಜಾಗತೀಕರಣದಿಂದಾಗುವ ಅನುಕೂಲಗಳಾವುವು?
4. ಜಾಗತೀಕರಣದಲ್ಲಿ ಗುರುತಿಸಬಹುದಾದ ಲಕ್ಷಣಗಳನ್ನು ಪಟ್ಟಿಮಾಡಿ.
5. ಜಾಗತೀಕರಣದಿಂದ ಉಂಟಾಗುವ ನಕರಾತ್ಮಕ ಪರಿಣಾಮಗಳನ್ನು ಉದಾಹರಣೆಯೊಂದಿಗೆ ವಿವರಿಸಿ.
6. ವಿಶ್ವವ್ಯಾಪಾರ ಸಂಘಟನೆಯ ಉದ್ದೇಶಗಳು ಯಾವುವು?

II. ಚಟುವಟಿಕೆ

1. ಜಾಗತೀಕರಣದಿಂದ ಅಸ್ತಿತ್ವಕ್ಕೆ ಬಂದಿರುವ ಸಂಸ್ಥೆಗಳ ಹೆಸರುಗಳನ್ನು ಪಟ್ಟಿಮಾಡಿ.
2. ಜಾಗತೀಕರಣದಿಂದ ಸರಬರಾಜಾಗುತ್ತಿರುವ ವಿಶೇಷ ಸರಕುಗಳ ವಿವರ ಸಂಗ್ರಹಿಸಿ.
3. ಜಾಗತೀಕರಣದಿಂದ ಪ್ರಾರಂಭವಾಗಿರುವ ಒಂದು ವಾಣಿಜ್ಯ ಸಂಸ್ಥೆಗೆ ಮತ್ತು ಪಾರಂಪರಿಕವಾಗಿ ನಮ್ಮಲ್ಲಿರುವ ವಾಣಿಜ್ಯ ಸಂಸ್ಥೆಗೆ ಭೇಟಿ ನೀಡಿ ವ್ಯತ್ಯಾಸಗಳನ್ನು ಗುರುತಿಸಿ ಪಟ್ಟಿ ಮಾಡಿ.

III. ಯೋಜನೆ

ಜಾಗತೀಕರಣದಿಂದಾಗುವ ಪ್ರಭಾವಗಳ ಬಗ್ಗೆ ಅಂತರ್ಜಾಲದ ನೆರವಿನಲ್ಲಿ ಚಿತ್ರ ಸಹಿತ ಮಾಹಿತಿ ಸಂಗ್ರಹಿಸಿ ವರದಿ ಸಿದ್ಧಪಡಿಸಿ.

ಚರ್ಚಿಸಿ : "ಜಾಗತೀಕರಣದಿಂದ ಆಹಾರ ಪದ್ಧತಿಯು ಬದಲಾಗಿದೆ"